ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಕೆ.ಪಿ.ಸುರೇಶ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

426

ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಕೆ.ಸಿ.ಸುರೇಶ

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

ಪ್ರಮಾಣ ಪತ್ರ

ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

ಸುರೇಶ ಕೆ.ಸಿ.
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೨-೯-೧೧

ದೃಢೀಕರಣ ಪತ್ರ

ಶ್ರೀ ಸುರೇಶ ಕೆ.ಸಿ. ಅವರು ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಪ್ರೌಢಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೫/೮/೧೧

ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ

ಪರಿವಿಡಿ

ರಾಮನಗರ ಜಿಲ್ಲೆ



ಕೃಪೆ. ಪ್ರೊ.ಎಂ.ಶಿವನಂಜಯ್ಯ.

ಸಂಕೇತಾಕ್ಷರಗಳು

೧. ಎ.ಕ-ಎಪಿಗ್ರಾಫಿಯಾ ಕರ್ನಾಟಕ

೨. ಕ-ಕನಕಪುರ ತಾಲ್ಲೂಕು

೩. ಕ.ಇ.ನಿ-ಕನ್ನಡ ಇಂಗ್ಲೀಷ್ ನಿಘಂಟು

೪. ಕ.ಕ.ಇ-ಕನ್ನಡ ಕನ್ನಡ ಇಂಗ್ಲಿಷ್ ನಿಘಂಟು

೫. ಕ.ನಿ-ಕನ್ನಡ ನಿಘಂಟು

೬. ಕ.ರ.ಕೋ-ಕನ್ನಡ ರತ್ನಕೋಶ

೭. ಕಿ.ನಿ-ಕಿಟೆಲ್ ನಿಘಂಟು

೮. ಚ-ಚನ್ನಪಟ್ಟಣ ತಾಲ್ಲೂಕು

೯. ಮಾ-ಮಾಗಡಿ ತಾಲ್ಲೂಕು

೧೦. ರಾ-ರಾಮನಗರ ತಾಲ್ಲೂಕು

೧೧. ಶಾ.ಸಂ-ಶಾಸನ ಸಂಖ್ಯೆ

೧೨. ಸಿ.ಅ-ಸಿರಿಗನ್ನಡ ಅರ್ಥಕೋಶ

೧೩. ಸಂ-ಸಂಪುಟ

೧೪. DED-Dravidian Etymological Dictionary

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ನಮ್ಮ ವೈಯಕ್ತಿಕವಾದ ಆಸ್ತಿಗೆ ಅನ್ಯರಿಂದ ಅಥವಾ ಇನ್ನಿತರ ಶಕ್ತಿಗಳಿಂದ ಧಕ್ಕೆಯಾದರೆ ಅದನ್ನು ತಕ್ಷಣವೇ ತೀವ್ರವಾಗಿ ಪ್ರತಿರೋಧಿಸುತ್ತೇವೆ. ಅದೇ ಸಾರ್ವಜನಿಕ ಆಸ್ತಿಯಾದರೆ ಅದು ನಮಗೆ ಸಂಬಂಧಿಸಿದ್ದಲ್ಲ ಎಂಬ ಉದಾಸೀನತೆ; ಉತ್ಪ್ರೇಕ್ಷೆ ತೋರಿಸುವುದು ನಮ್ಮ ಜನರ ದೌರ್ಬಲ್ಯವಾಗಿದೆ.

ದೇಶ, ಧರ್ಮ, ಜಾತಿ, ಭಾಷೆ, ಬಣ್ಣ ಯಾವುದೇ ಇದ್ದರೂ ಇಬ್ಬರು ಅಪರಿಚಿತರ ನಡುವೆ ಮಾತುಕತೆ ಪ್ರಾರಂಭವಾಗುವುದೇ ನಿಮ್ಮ ಹೆಸರೇನು? ಎಂದು ಕೇಳುವ ಮೂಲಕ; ಈ ಪ್ರಶ್ನೆಗೆ ಉತ್ತರ ಸಿಕ್ಕಿದ ಕೂಡಲೇ ನಂತರದ ಪ್ರಶ್ನೆ ನಿಮ್ಮ ಊರು ಯಾವುದು? ಎಂದು. ಹೀಗೆ ಪರಸ್ಪರರ ನಡುವೆ ಪ್ರಶ್ನೆಗೆ ಉತ್ತರ ಸಿಕ್ಕಿದ ಕೂಡಲೇ ನಂತರ ಮಿಕ್ಕೆಲ್ಲ ಸಾಮಾಜಿಕ ವ್ಯವಹಾರದ ಮಾತುಕತೆಗಳು ಜರುಗುತ್ತವೆ.

ಈ ಎರಡು ಸಂಗತಿಗಳನ್ನು ಪ್ರಸ್ತಾಪಿಸಲು ಕಾರಣವಿಷ್ಟೇ. ವ್ಯಕ್ತಿನಾಮ, ಕುಟುಂಬನಾಮ, ಗ್ರಾಮನಾಮಗಳಲ್ಲಿ ಅತ್ಯಧಿಕವಾಗಿ ರೂಪಾಂತರ ನಾಮಾಂತರ ಕ್ರಿಯೆಗೆ ಒಳಗಾಗಿರುವುದು ಮಾತ್ರ ಗ್ರಾಮನಾಮ ಅಥವಾ ಸ್ಥಳನಾಮವಾಗಿದೆ. ಸ್ಥಳನಾಮಗಳು ನಮ್ಮ ವೈಯಕ್ತಿಕವಾದ ಆಸ್ತಿಯಾಗಿರದೆ, ಸಮಷ್ಟಿಯ ಆಸ್ತಿಯಾಗಿದೆ. ಉಳಿದ ನಾಮಗಳಿಗಿಂತಲೂ ಗ್ರಾಮನಾಮ; ಸ್ಥಳನಾಮ ಜನರ ಬಾಯಲ್ಲಿ ಹೆಚ್ಚು ವ್ಯವಹರಿಸುವುದರಿಂದ ಈ ಅಧಿಕವಾದ ವ್ಯತ್ಯಾಸಕ್ಕೆ ಮುಖ್ಯ ಕಾರಣವಾಗಿದೆ. ಹೀಗೆ ಸ್ಥಳನಾಮಗಳು ರೂಪದೃಷ್ಟಿಯಿಂದ ಅಧಿಕ ವ್ಯತ್ಯಾಸಕ್ಕೆ ಗುರಿಯಾಗಿ ತನ್ನ ನಿಜ ಅರ್ಥವನ್ನು ಕಳೆದುಕೊಂಡಿರುವುದರಿಂದ ಸಹಜವಾಗಿಯೇ ಕಳೆದುಕೊಂಡ ನಿಜಅರ್ಥವನ್ನು ಹುಡುಕುವ ಕುತೂಹಲ ಕೆರಳುವುದು ಸಹಜವಾಗಿದೆ. ಅಲ್ಲದೆ ಹೆಸರುಗಳು ಬಹುಪಾಲು ಅರ್ಥಗರ್ಭಿತವಾದವುಗಳು. ಹೆಸರು ವ್ಯಕ್ತಿಯದಾಗಿರಬಹುದು, ಊರಿನದಾಗಿರಬಹುದು ಅದು ಮನುಷ್ಯನ ಜೀವನದ ಪಯಣದಲ್ಲಿ ವ್ಯವಹಾರದಲ್ಲಿ ವಹಿಸುವ ಪಾತ್ರ ಮಾತ್ರ ಮಹತ್ತರವಾದುದ್ದಾಗಿದೆ. ಹೆಸರುಗಳು ಜೀವನದ ಅವಿಭಾಜ್ಯ ಅಂಗಗಳಾಗಿವೆ ಎಂಬುದರಲ್ಲಿ ಸಂಶಯವೇ ಇಲ್ಲ.

ಮನುಷ್ಯ ಸಮಾಜ ಜೀವಿ. ದೈನಂದಿನ ಸಾಮಾಜಿಕ ಚಟುವಟಿಕೆಗಳಲ್ಲಿ ಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಆತನಿಗೆ ವ್ಯಕ್ತಿ ಮತ್ತು ವಸ್ತುಗಳ ಸಂಪರ್ಕ ಅನಿವಾರ್ಯ. ಅಲ್ಲದೇ ತನ್ನ ದಿನ

ನಿತ್ಯದ ವ್ಯವಹಾರ ಸುಗಮವಾಗಿ ಸಾಗಬೇಕಾದರೆ ತನ್ನ ಸುತ್ತಲಿನ ಪ್ರಪಂಚದಲ್ಲಿ ಗುರುತಿಸಿಕೊಳ್ಳುವ ಪ್ರಕ್ರಿಯೆ ಬಹುಮುಖ್ಯವಾದದ್ದು. ಸಮಾಜದಲ್ಲಿ ವ್ಯಕ್ತಿಯು ತನ್ನನ್ನು ಈ ಸಮಾಜದಲ್ಲಿ ಗುರುತಿಸಿಕೊಳ್ಳಲಿಕ್ಕೆ ಹೆಸರು ಅತಿ ಅವಶ್ಯಕವಾಗಿ ಬೇಕೆ ಬೇಕು. ಆಕಸ್ಮಾತ್ ವ್ಯಕ್ತಿಗಳಿಗೆ ಆಗಲಿ; ಸ್ಥಳಗಳಿಗೇ ಆಗಲಿ ಹೆಸರೇ ಇಲ್ಲದಂತಾಗಿದ್ದರೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಇದು ಮನುಷ್ಯನ ನಾಗರಿಕತೆಯ ವಿಕಾಸಕ್ರಮಕ್ಕೆ ವಿರುದ್ಧ ವಾದ ಪ್ರಕ್ರಿಯೆಯಾಗುತ್ತಿತ್ತು. ಮನುಷ್ಯನ ಆಲೋಚನಾ ಕ್ರಮಗಳು ಬೆಳವಣಿಗೆ ಹೊಂದಲು ಮೊದಲು ಮಾಡಿದ್ದೇ ತನ್ನ ಪರಿಸರದಲ್ಲಿ ತನ್ನನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ತನಗೊಂದು ಹೆಸರಿಟ್ಟುಕೊಂಡಿದ್ದು. ಅದೇ ರೀತಿ; ಒಂದು ಸ್ಥಳದಿಂದ ಮತ್ತೊಂದು ಸ್ಥಳದ ವ್ಯತ್ಯಾಸವನ್ನು ಗುರುತಿಸಲು, ತಿಳಿಯಲು ಅನುಕೂಲ ವಾಗುವಂತೆ ಒಂದೊಂದು ಸ್ಥಳಕ್ಕೂ ಹೆಸರಿಟ್ಟಿರುವುದು ಮಾನವನ ವಿಕಾಸ ಕ್ರಮದಲ್ಲಿ ಮುಖ್ಯವೆಂದೇ ಭಾವಿಸಬಹುದು. ತಾನು ಸ್ಥಳಕ್ಕೆ ಇಟ್ಟ ಹೆಸರಿಗೊಂದು ಕಾರ್ಯಕಾರಣ ಸಂಬಂಧವಿರುತ್ತಿತ್ತು; ಅರ್ಥವಿರುತ್ತಿತ್ತು. ಹಿನ್ನೆಲೆಯಿರದ, ಕಾರಣವಿರದ ಸ್ಥಳನಾಮಗಳನ್ನು ನಾವು ಊಹಿಸಲೂ ಸಾಧ್ಯವಿಲ್ಲ.

ವ್ಯಕ್ತಿಗೊಂದು ಹೆಸರು ಅನಿವಾರ್ಯ ಹೇಗೋ ಹಾಗೆಯೇ ಆತ ನೆಲೆಸಿದ ಸ್ಥಳಕ್ಕೂ ಒಂದು ಹೆಸರು ಅನಿವಾರ್ಯ. ತಾನು ನೆಲೆಸಿದ ನೆಲೆಗೊಂದು ಹೆಸರನ್ನಿಡುವ ಪದ್ಧತಿ ಅಥವಾ ಪ್ರಕ್ರಿಯೆ ಇಂದು ನಿನ್ನೆಯದ್ದಲ್ಲ. ಅದು ಮನುಷ್ಯನಷ್ಟೇ ಪ್ರಾಚೀನವಾದದ್ದು. ತನ್ನ ಸಮುದಾಯದಲ್ಲೇ ಮನುಷ್ಯ ತನ್ನನ್ನು ತಾನು ಗುರುತಿಸಿಕೊಳ್ಳಲೋಸುಗ ಹೆಸರಿನ್ನಿಟ್ಟುಕೊಳ್ಳುವಂತೆ; ತಾನು ವಾಸಿಸುವ ಜಾಗಕ್ಕೂ ಹೆಸರಿಟ್ಟು ತನ್ನ ಸುತ್ತಮುತ್ತಲಿನ ನಿಸರ್ಗವೇ ಆತನಿಗೆ ಆಧಾರವಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಪ್ರಾಚೀನ ಸ್ಥಳನಾಮಗಳು ನಿಸರ್ಗವಾಚಿ ಹೆಸರುಗಳನ್ನೇ ಒಳಗೊಂಡಿರುವುದು ವಿಶೇಷವಾಗಿದೆ.

ಹೆಸರಿನಲ್ಲೇನಿದೆ? ಎಂಬ ಸಹಜವಾದ ರೂಢಿಯ ಮಾತಿದೆ. ಹೆಸರಿನ ಮೂಲವನ್ನು ಕೆದಕುತ್ತ ಹೋದಂತೆ ಅದರ ವಿಶ್ವರೂಪದರ್ಶನವಾಗದೇ ಇರದು. "ಪ್ರಾಚೀನ ಕಾಲದಲ್ಲಿ ಸಾಮೂಹಿಕವಾಗಿ ಹುಟ್ಟಿಕೊಂಡಿರುವ ಸ್ಥಳನಾಮಗಳು ಕೇವಲ ಹೆಸರುಗಳಾಗಿ ಉಳಿದಿಲ್ಲ; ಮಾನವ ಸಂಸ್ಕೃತಿಯ ಕುರುಹುಗಳಾಗಿ ಉಳಿದಿವೆ, ಬೆಳೆದಿವೆ. ಸ್ಥಳನಾಮಗಳು ಆಯಾ ಜನಾಂಗದ ಮಂತ್ರಗಳೂ ಹೌದು; ಮಾಂತ್ರಿಕ ಶಕ್ತಿಗಳೂ ಹೌದು"[೧] ಸ್ಥಳನಾಮಗಳು ಮಾನವನ ಹುಟ್ಟು, ಬೆಳವಣಿಗೆ, ಸಂಸ್ಕೃತಿ, ನಾಗರಿಕತೆಯ ದೃಷ್ಟಿ ಮತ್ತು ಜೀವಂತ ಪಳೆಯುಳಿಕೆಗಳಾಗಿವೆ.

ಇತಿಹಾಸ ಪೂರ್ವಕಾಲದಲ್ಲಿ ಮಾನವ ಅಲೆಮಾರಿಯಾಗಿದ್ದ. ಆಹಾರವನ್ನು ಸಂಪಾದಿಸುವುದೇ ಅವನ ದೈನಂದಿನ ಕಾರ್ಯವಾಗಿತ್ತು. ತನ್ನ ಮತ್ತು ತನ್ನ ಕುಟುಂಬದ ಆಹಾರಕ್ಕಾಗಿ ಸಂಚಾರ ಮಾಡಬೇಕಾದ ಅನಿವಾರ್ಯತೆ ಆತನಿಗಿತ್ತು. ಹಣ್ಣು-ಹಂಪಲು-ಗೆಡ್ಡೆ-ಗೆಣಸು-ಪ್ರಾಣಿ-ಪಕ್ಷಿಗಳು ಸಮೃದ್ಧವಾಗಿ ದೊರಕುತ್ತಿದ್ದ ಸ್ಥಳಗಳಲ್ಲಿ ನಿಂತು ನಂತರ ಅವುಗಳ ವಿರಳತೆ ಹಾಗೂ ಅಲಭ್ಯದ ಸಂದರ್ಭದಲ್ಲಿ ಮತ್ತೊಂದು ನೆಲೆಗೆ ಪ್ರಯಾಣ ಬೆಳೆಸುವುದು ಸಾಮಾನ್ಯವಾಗಿತ್ತು. ಇಂಥ ಸಂದರ್ಭದಲ್ಲಿ ಆತನಿಗೆ ನಿರ್ದಿಷ್ಟವಾದ ನೆಲೆ ಇರಲಿಲ್ಲ. "ಅವರ ತಾತ್ಪೂರ್ತಿಕ ನೆಲೆಗಳನ್ನು ಸಂಚಾರಿಗ್ರಾಮಗಳೆಂದು ಕರೆಯಬಹುದು"[೨] ಕಾಲಕಳೆದಂತೆ ತನ್ನ ಅಲೆಮಾರಿ

ಜೀವನಕ್ಕೆ ತಿಲಾಂಜಲಿ ಹೇಳಿ; ಒಂದೆಡೆ ನೆಲೆ ನಿಂತು ಕೃಷಿಯನ್ನು ಕಲಿತು ತಾನು ಬದುಕಲು ಸಾಧ್ಯ ಎಂಬುದು ಯಾವಾಗ ಮನವರಿಕೆಯಾಯಿತೋ ಆಗ ಹಟ್ಟಿ, ಊರು, ಗ್ರಾಮ, ಕೊಪ್ಪಲುಗಳ ಉಗಮವಾಯಿತು ಎನ್ನಬಹುದು. ತಾನು ನೆಲೆಗೊಂಡ ಸ್ಥಳದ ಅವಿನಾಭಾವ ಸಂಬಂಧದ ಹಿನ್ನೆಲೆಯಲ್ಲಿ ಆ ಸ್ಥಳಕ್ಕೆ ಒಂದು ಹೆಸರಿಟ್ಟನು. ಹೀಗೆ ಹೆಸರಿಡುವಾಗ ತನ್ನ ಸುತ್ತಮುತ್ತಲಿನ ನೋಟಕ್ಕೆ ನಿಲುಕುವ ಪ್ರಾಕೃತಿಕ ವಸ್ತುಗಳಾದ ಮರ-ಗಿಡ, ಬಳ್ಳಿ-ಹೂ, ಪಶು-ಪಕ್ಷಿ, ನದಿ-ಹೊಳೆ, ಬೆಟ್ಟ-ಗುಡ್ಡ ಈ ಮೊದಲಾದ ಅಂಶಗಳೇ ಮೊದಲಿಗೆ ಊರಿನ ಹೆಸರಿನಲ್ಲಿ ಅಡಕಗೊಂಡಿರುವುದು ಸ್ಥಳನಾಮ ಅಧ್ಯಯನದಿಂದ ತಿಳಿದುಬಂದಿದೆ. ಹಾಗಾಗಿಯೇ ಪ್ರಾಚೀನತಮ ಬಹುತೇಕ ಸ್ಥಳನಾಮಗಳು ಪ್ರಾಕೃತಿಕ ವಾಚಕಗಳಾಗಿರುವುದು ತಿಳಿದು ಬರುತ್ತದೆ. ಇದರಿಂದ ಮಾನವ ಮತ್ತು ಪ್ರಕೃತಿ ನಡುವಿನ ಅನಾದಿ ಕಾಲದ ಅವಿನಾಭಾವ ಸಂಬಂಧದ ಕುರುಹುಗಳು; ನಿಸರ್ಗ ಪ್ರಜ್ಞೆಯ ಅಂಶಗಳು ಸ್ಥಳನಾಮಗಳಲ್ಲಿ ಗೋಚರಿಸುತ್ತವೆ.

ನಿಸರ್ಗ ನಿಷ್ಠತೆಯಿಂದ ಜನಾಂಗ ನಿಷ್ಠತೆಗೆ ಒಳಗಾದ ಮನುಷ್ಯ ಎರಡನೇ ಹಂತದಲ್ಲಿ ಸಮುದಾಯ ನಿಷ್ಠತೆಗೆ ಒಳಗಾದನು. ತನ್ನ ಜನಾಂಗವೇ ಶ್ರೇಷ್ಠವೆಂಬ ವಿಚಾರ ಇಲ್ಲವೇ ಸಮುದಾಯದ ಅಭಿಮಾನ ತನ್ನ ನೆಲೆಗೆ ಹೆಸರಿಡಲು ಪ್ರೇರಣೆ ನೀಡಿರುವುದರಲ್ಲಿ ಅನುಮಾನವಿಲ್ಲ. ಕಾಲಾನಂತರದಲ್ಲಿ ವ್ಯಕ್ತಿ ನಿಷ್ಠತೆಯ ಅಂಚನ್ನು ತಲುಪಿ ಗತಿಸಿಹೋದ ತನ್ನ ಹಿರಿಯರ ಪರೋಕ್ಷ ವಿನಯ ಹಾಗೂ ನೆನಪಿಗಾಗಿ ಅವರ ಹೆಸರನ್ನು; ನಂತರದಲ್ಲಿ ಜೀವಂತರಾದ, ತನಗೆ ಪ್ರೀತಿಗೆ ಪಾತ್ರರಾದವರ ಇಲ್ಲವೇ ಸ್ವಾರ್ಥ ಮನಸ್ಥಿತಿಯಿಂದ ತನ್ನ ಹೆಸರನ್ನೇ ಗ್ರಾಮಗಳಿಗೆ ಇಡತೊಡಗಿದ. ಈ ಮೂರು ಕಾಲಘಟ್ಟದಲ್ಲಿ ಒಂದು ಹೆಸರಿಡುವ ಕ್ರಮದಲ್ಲಿ ಅನೇಕ ಬಗೆಯ ಸಾಂಸ್ಕೃತಿಕವಾದ ಬದಲಾವಣೆಗಳು ಉಂಟಾದವು. ಈ ಎಲ್ಲ ಬಗೆಯ ಸಾಂಸ್ಕೃತಿಕವಾದ ವಿವರಗಳನ್ನೂ ಸ್ಥಳನಾಮಗಳಲ್ಲಿ ಕಾಣಲು ಸಾಧ್ಯ. ಸ್ಥಳನಾಮಗಳ ವಿಕಾಸದ ಅಧ್ಯಯನವೆಂದರೆ ಮಾನವ ಜನಾಂಗದ ವಿಕಾಸದ, ಸಾಂಸ್ಕೃತಿಕ ವಿಕಸನದ ಹೆಜ್ಜೆ ಗುರುತುಗಳನ್ನು ಗುರುತಿಸುವಷ್ಟರ ಮಟ್ಟಿಗೆ ಸ್ಥಳನಾಮ ವಿಜ್ಞಾನ ಬೆಳೆದಿದೆ.

೧.೧. ಉದ್ದೇಶ

ಮಾನವನ ಪ್ರಪಂಚದಲ್ಲಿ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಈ ಭಾಷೆಯಿಂದಲೆ ಇನ್ನಿತರ ಪ್ರಾಣಿ ಪ್ರಪಂಚದಿಂದ ತನ್ನನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದಾನೆ. ಮಾನವ ನಿರ್ಮಿತ ಕೋಟೆ, ಕೊತ್ತಲುಗಳು, ದೇವಾಲಯಗಳು, ಶಿಲ್ಪಕಲೆ, ದಾಖಲೆಗಳು, ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಹೇಳ ಹೆಸರಿಲ್ಲದಂತೆ ನಾಮಾವ ಶೇಷವಾಗಬಹುದು. ಆದರೆ ನಾವು ಬಳಸುವ ಭಾಷೆ ಗತಕಾಲ ಮತ್ತು ವರ್ತಮಾನದ ಚಲನಶೀಲತೆಯ ಅಂಗವಾಗಿದೆ. ಹೆಚ್ಚೆಂದರೆ ಅಂದಿನ ಪರಿಸರಕ್ಕೆ ಹೊಂದಿಕೊಂಡು ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾಗ ಬಹುದಲ್ಲದೇ ಅಮೂಲಾಗ್ರವಾಗಿ ಗತಕಾಲದ ಘಟನೆಗಳು ಸ್ಥಳನಾಮಗಳ ಮೂಲಕ ಭಾಷೆಯಲ್ಲಿ ರೂಢಿಯಲ್ಲಿದ್ದು; ಈಗ ರೂಢಿಯಲ್ಲಿ ಬಿಟ್ಟು ಹೋಗಿರುವ ಪದಗಳು, ಭಾಷಾಬಳಕೆ ಇವು ಸ್ಥಳನಾಮಗಳ ಮೂಲಕ ವ್ಯಕ್ತವಾಗುತ್ತವೆ. ಜೊತೆಗೆ ಉಪಭಾಷೆಗಳನ್ನು ಗುರುತಿಸುವಲ್ಲಿ ಭಾಷಾ ಶಾಸ್ತ್ರಜ್ಞರಿಗೆ ಬಹಳಮುಖ್ಯ

ಸಾಮಾಗ್ರಿಯನ್ನು ಒದಗಿಸುತ್ತವೆ. ಇದರಿಂದ ಭಾಷಿಕ ದೃಷ್ಟಿಯಿಂದ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅವಶ್ಯಕ ಮತ್ತು ಅನಿವಾರ್ಯವಾದರೂ; ಸ್ಥಳನಾಮಗಳು ಒದಗಿಸುವ ಸಾಂಸ್ಕೃತಿಕ ವಿವರಗಳು ಅತ್ಯಂತ ಮಹತ್ವಪೂರ್ಣವಾದವುಗಳಾಗಿರುತ್ತವೆ.

ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯಕವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳು ಅನೇಕ ಮಾಹಿತಿಯನ್ನು ಒದಗಿಸುತ್ತವೆ. ಆದ್ದರಿಂದ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಸ್ಥಳನಾಮಗಳಿಗೆ ಕೊಡಬೇಕಾಗಿದೆ. "ನಮ್ಮ ಪೂರ್ವಿಕರ ವಿದ್ಯಾ ಸಂಪನ್ನತೆ, ಸೌಂದರ್ಯಪ್ರಜ್ಞೆ, ಧಾರ್ಮಿಕ ದೃಷ್ಟಿ, ಮೂಢನಂಬಿಕೆಗಳು, ಆಳರಸರ ಅಥವಾ ಹಾಗೂ ಮೂಲ ನಿವಾಸಿಗಳ ಬಗೆಗೆ ಮಹತ್ವದ ವಿಚಾರಗಳು, ಅಂದಿನ ಜನರ ವೃತ್ತಿ, ನೈಸರ್ಗಿಕ ಸಂಪತ್ತು, ಭಾಷಾ ಚರಿತ್ರೆ, ಮಾನವಶಾಸ್ತ್ರ ಮುಂತಾದ ಅನೇಕ ವಿಷಯಗಳನ್ನು ಗರ್ಭದಲ್ಲಿಡಗಿಸಿಕೊಂಡಿರುವ ಅನುಲ್ಲೇಖಿತ ಗ್ರಂಥಗಳಾಗಿವೆ. ಈ ಸ್ಥಳನಾಮಗಳು"[3] ಹಾಗಾಗಿ ಸ್ಥಳನಾಮ ಹೆಚ್ಚಾಗಿ ಭಾಷೆಗೆ ಸಂಬಂಧಪಟ್ಟ ವಿಷಯವಾದರೂ ಪ್ರಾಚೀನ ಕಾಲದ ಜನ ಜೀವನ, ಕಟ್ಟುಪಾಡು, ಸಂಸ್ಕೃತಿಯನ್ನು ತಿಳಿಸುತ್ತವೆ. ಮನುಕುಲದ ಪುರಾತನ ಇತಿಹಾಸ ಮೊದಲಾದವುಗಳ ಅರಿವಿನ ಆಕರಗಳಾಗಿವೆ ಹಾಗೂ ಮಾನವ ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಗಿವೆ. ವಿಜ್ಞಾನದ ಇತರ ಶಾಖೆಗಳಂತೆ ಸ್ಥಳನಾಮ ವಿಜ್ಞಾನವೂ ಮನುಕುಲಕ್ಕೆ ಉಪಯುಕ್ತವಾಗಿದೆ. ಸ್ಥಳನಾಮಗಳ ಶಾಸ್ತ್ರೀಯ ಅಧ್ಯಯನದಿಂದ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ ಹಾಗೂ ಜಾನಪದೀಯ ವಿಷಯಗಳು ತಿಳಿದು ಬರುತ್ತವೆ. ಆದುದ್ದರಿಂದ ಭಾಷಾಶಾಸ್ತ್ರದ ದೃಷ್ಟಿಯಿಂದ ಮಾತ್ರವಲ್ಲದೇ ಎಲ್ಲಾ ದೃಷ್ಟಿಯಿಂದಲೂ ತುಂಬಾ ಅವಶ್ಯಕತೆ ಇದೆ. ಸ್ಥಳನಾಮಗಳ ಉಗಮಕ್ಕೆ ಪ್ರಾಕೃತಿಕ ಕಾರಣ, ಜನಾಂಗಕ ಕಾರಣ, ಪೌರಾಣಿಕ, ಐತಿಹ್ಯಾತ್ಮಕ, ಕಸುಬು ಮತ್ತು ವ್ಯಕ್ತಿಗತ ಕಾರಣಗಳು ಮುಖ್ಯವಾಗಿವೆ. ಆದ್ದರಿಂದ ಸ್ಥಳನಾಮಗಳನ್ನು ಕೇವಲ ಭಾಷಾ ಹಿನ್ನೆಲೆಯಲ್ಲಿ ಸಂಶೋಧನೆಗೆ ಒಳಪಡಿಸದೇ ಸಮಾಜ ವಿಜ್ಞಾನ, ಸಸ್ಯವಿಜ್ಞಾನ, ಜಲ ವಿಜ್ಞಾನ, ಶಿಲಾವಿಜ್ಞಾನ, ಪುರಾತತ್ವಶಾಸ್ತ್ರ, ಇತಿಹಾಸ, ಮನಃಶಾಸ್ತ್ರ, ಮಾನವಶಾಸ್ತ್ರ, ಭೂಗೋಳಶಾಸ್ತ್ರ, ಶಾಸನಶಾಸ್ತ್ರ ಮತ್ತು ಜಾನಪದ ವಿಜ್ಞಾನ ಮೊದಲಾದ ಅನ್ಯ ಜ್ಞಾನ ಶಿಸ್ತುಗಳನ್ನಿಟ್ಟುಕೊಂಡು ಅಂತರ್‌ಶಿಸ್ತೀಯ ಅಧ್ಯಯನ ನಡೆಸಿದಾಗ ಸ್ಥಳನಾಮ ಅಧ್ಯಯನ ಪರಿಪೂರ್ಣತೆಯನ್ನು; ನಿಖರತೆಯನ್ನು ಪಡೆದುಕೊಳ್ಳಬಲ್ಲದು. ಈ ಹಿನ್ನೆಲೆಯಲ್ಲಿಯೇ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು ಅಧ್ಯಯನ ಮಾಡಲಾಗಿದೆ. ಇದರಿಂದ ಜಿಲ್ಲೆಯ ಜನಾಂಗದ ಅಭಿರುಚಿ, ಅನುಭವ, ಸೃಜನಶೀಲ ಶಕ್ತಿಯನ್ನು ಅರಿಯಬಹುದು. ಜೊತೆಗೆ ಸಾಂಸ್ಕೃತಿಕ ಸಂವಹನವನ್ನು ಗುರುತಿಸಬಹುದಾಗಿದೆ.

ಸ್ಥಳನಾಮಗಳಿರುವ ಈ ಸಾಂಸ್ಕೃತಿಕ ಮಹತ್ವವನ್ನು ಮನಗಂಡು ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನವನ್ನು ಕೈಗೊಳ್ಳಲು ಸಾಧ್ಯವಾಯಿತು. ಸ್ಥಳನಾಮಗಳ ಶಾಸ್ತ್ರೀಯವಾದ, ಆಳವಾದ ಅಧ್ಯಯನದ ಮೂಲಕ ಈ ಜಿಲ್ಲೆಯ ಭೌಗೋಳಿಕ, ಸಾಂಸ್ಕೃತಿಕ, ಚಾರಿತ್ರಿಕ, ಸಾಮಾಜಿಕ, ಭಾಷಿಕ ಹಾಗೂ ಜಾನಪದವನ್ನು

ಪರಿಶೀಲಿಸುವುದರಿಂದ ಜಿಲ್ಲೆಯ ಸಾಹಿತ್ಯ, ಭಾಷೆ, ಸಂಸ್ಕೃತಿ, ವಿಜ್ಞಾನ, ಭೂಗೋಳ, ಜೀವ ವಿಜ್ಞಾನದ ವಿವರಗಳನ್ನು ಸಮೃದ್ಧವಾಗಿ ತಿಳಿಯಬಹುದು. ಐತಿಹಾಸಿಕ ಪರಂಪರೆಯ ವಿವರಗಳನ್ನು ಅರಿಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯಲ್ಲಿ ಕಳೆದ ೩೦ ವರ್ಷಗಳಿಂದಲೂ ನೆಲೆಸಿದ್ದೇನೆ. ಜಿಲ್ಲೆಯ ಬಹುತೇಕ ಸ್ಥಳಗಳನ್ನು ಬಲ್ಲವನಾಗಿದ್ದೇನೆ. ಅವುಗಳ ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಸರದ ಪರಿಚಯವಿದೆ. ಈ ದತ್ತ ಅನುಭವದ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಬೇಕು ಎನ್ನುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಡಿ.ಕೆ.ನಟರಾಜ್ ಅವರು ಅವಿಭಜಿತ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ' ಎಂಬ ನಿಬಂಧದಲ್ಲಿ ಅಧ್ಯಯನ ನಡೆಸಿದ್ದಾರೆ. ಅದು ವರ್ಣನಾತ್ಮಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಅಲ್ಲದೇ ಸುಮಾರು ೮ ತಾಲೂಕುಗಳನ್ನು ಒಳಗೊಂಡ ಅಧ್ಯಯನವಾಗಿದ್ದು ಅವರೇ ಪ್ರಸ್ತುತ ಪಡಿಸಿರುವಂತೆ ಸುಮಾರು ೩೦೦ ಸ್ಥಳಗಳನ್ನು ಅಧ್ಯಯನ ವ್ಯಾಪ್ತಿಗೆ, ವಿಶ್ಲೇಷಣೆಗೆ ಬಳಸಿಕೊಂಡಿದ್ದಾರೆ. ಅವರ ಅಧ್ಯಯನ ಭೌಗೋಳಿಕ ವಿಸ್ತೃತತೆಯಿಂದ ಸಮಗ್ರವಾಗಿ ನಡೆಸದಿರುವ ಸಂಭವವಿರುವುದರಿಂದ ಹೊಸದಾಗಿ ರಚನೆಯಾದ ಈ ಜಿಲ್ಲೆಯ ಸ್ಥಳನಾಮಗಳನ್ನು ಶಾಸ್ತ್ರೀಯವಾದ ಚೌಕಟ್ಟಿನಲ್ಲಿ ಅಧ್ಯಯನ ನಡೆಸಬೇಕಾಗಿದೆ. ಸಾಂದರ್ಭಿಕವಾಗಿ ಚಿಕ್ಕಚಿಕ್ಕ ಲೇಖನಗಳು ಸ್ಮರಣ ಸಂಚಿಕೆಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಿದ್ದರೂ ಸ್ಥಳಪುರಾಣ ಇಲ್ಲವೇ ಐತಿಹ್ಯಗಳೇ ಹೆಚ್ಚಿರುವ ಸಂಭವವಿರುವುದರಿಂದ ಭಾಷಾಶಾಸ್ತ್ರೀಯವಾದ, ಶಾಸನಶಾಸ್ತ್ರೀಯ, ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ, ಚಾರಿತ್ರಿಕ ಅಂಶಗಳಿಂದ ಕೂಡಿದ ವೈಜ್ಞಾನಿಕ ವಿಶ್ಲೇಷಣೆ ನಡೆದಿಲ್ಲ. ಆ ಕಾರಣದಿಂದ ಪ್ರಸ್ತುತ ಅಧ್ಯಯನ ಅವಶ್ಯಕವೆನಿಸಿದೆ.

ಸ್ಥಳನಾಮಗಳನ್ನು ಜಿಲ್ಲಾ ಅಥವಾ ತಾಲ್ಲೂಕುವಾರು ಘಟಕಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡುವುದರಿಂದ ನಮ್ಮ ಪರಿಶೀಲನೆ ಕರಾರುವಕ್ಕಾಗಿರುತ್ತದೆ ಎಂಬ ದೃಷ್ಟಿಕೋನದಿಂದ ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಎಂಬ ಶೀರ್ಷಿಕೆಯ ಈ ನಿಬಂಧದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಸ್ಥಳನಾಮ ಅಧ್ಯಯನದ ಮಹತ್ವ, ವ್ಯಾಪ್ತಿ ಹಾಗೂ ಅಧ್ಯಯನದಲ್ಲಿ ಅಳವಡಿಸಿಕೊಂಡ ವಿಧಾನಗಳನ್ನು ವಿವರಿಸಲಾಗಿದೆ. ಆದಿಮಾನವ ಅಲೆಮಾರಿ ಜೀವನಕ್ಕೆ ತಿಲಾಂಜಲಿ ಹೇಳಿ, ಒಂದೆಡೆ ನಿಂತು ಬದುಕುವ ಕಲೆಯ ಜೊತೆಗೆ ತಾನು ನೆಲೆವೂರಿದ ಸ್ಥಳಕ್ಕೆ ಹೆಸರಿಟ್ಟ ಪರಿಯನ್ನು ಸ್ಪಷ್ಟಪಡಿಸಲಾಗಿದೆ. ಕಾಲಾನಂತರದಲ್ಲಿ ವ್ಯವಹಾರಿಕ ಉದ್ದೇಶಗಳಿಗಾಗಿ ಸ್ಥಳನಾಮಗಳು ವಿಕಾಸಗೊಂಡ ಬಗೆಯನ್ನು ವಿವರಿಸಲಾಗಿದೆ. ಸಾಂಸ್ಕೃತಿಕ ವೈಶಿಷ್ಟತೆಯಿಂದ ಕೂಡಿರುವ ರಾಮನಗರ ಜಿಲ್ಲೆಯ ಸ್ಥಳನಾಮಗಳ ಬಗೆಗಿನ ಅಧ್ಯಯನಕ್ಕೆ ಅನ್ಯಜ್ಞಾನ ಶಿಸ್ತುಗಳ ಮಹತ್ವವೇನು ಎಂಬುದನ್ನು ಮೊದಲನೆ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಸ್ಥಳನಾಮ ಅಧ್ಯಯನದ ಇತಿಹಾಸವನ್ನು ಗಮನಿಸಲಾಗಿದೆ. ಸ್ಥಳನಾಮ ಸಂಶೋಧಕನಾದವನು ಈ ಕ್ಷೇತ್ರದಲ್ಲಾಗಿರುವ ಕೃಷಿಯನ್ನು ಅರಿಯುವುದು ಅತಿ ಅವಶ್ಯಕ. ಆದ್ದರಿಂದ ಸ್ಥಳನಾಮ ಅಧ್ಯಯನ ಶಾಸ್ತ್ರವು ಮೊದಲಿಗೆ ಪಾಶ್ಚಾತ್ಯರು ಜ್ಞಾನ ಶಿಸ್ತಾಗಿ ಬೆಳೆಸಿ, ಸ್ಥಳನಾಮಾಧ್ಯಯನದ ಮೇಲಿನ ಕಾಳಜಿ. ಕಳಕಳಿಯನ್ನು ತಿಳಿಯುವುದಲ್ಲದೇ ದೇಶದ ವಿವಿಧ ಭಾಗಗಳಲ್ಲಾಗಿರುವ ಅಧ್ಯಯನದ ವಿವರಗಳನ್ನು ಹಾಗೂ ಕರ್ನಾಟಕದ ನೆಲದಲ್ಲಿ ಆಗಿರುವ ಅಧ್ಯಯನದ ವಿವರಗಳನ್ನು, ಸ್ಥಳನಾಮ ವಿದ್ವಾಂಸರ ಕೊಡುಗೆಗಳನ್ನು ಕಾಲಾನುಕ್ರಮದಲ್ಲಿ ಗ್ರಹಿಸಿ ಸ್ಥಳನಾಮ ಅಧ್ಯಯನದ ಚರಿತ್ರೆಯನ್ನು ರೂಪಿಸಲಾಗಿದೆ. ಅಲ್ಲದೇ ಸ್ಥಳನಾಮ ಅಧ್ಯಯನ ಕ್ಷೇತ್ರದ ಸಂಶೋಧನೆ ಮಾಡಿದ ಮಹನೀಯರ ಹಾಗೂ ಅವರ ಕೊಡುಗೆಗಳನ್ನು ಗಮನಿಸಲಾಗಿದೆ.

ಸ್ಥಳನಾಮಗಳ ಅಧ್ಯಯನವನ್ನು ಮಾಡಿದ ಬಹುತೇಕ ವಿದ್ವಾಂಸರು ಸ್ಥಳನಾಮಗಳನ್ನು ಹಲವಾರು ವರ್ಗಗಳಾಗಿ ಗುರುತಿಸಿ, ಅಧ್ಯಯನ ಸುಗಮಗೊಳಿಸಲು ಪ್ರಯತ್ನಿಸಿದ್ದಾರೆ. ಈ ಪ್ರಚಲಿತವಾದ ವರ್ಗೀಕರಣವು ಜಗತ್ತಿನ ಯಾವುದೇ ಭಾಗದ, ಭಾಷೆಯ, ಪ್ರದೇಶಕ್ಕೆ ಅನ್ವಯಿಸುವಂತಿದ್ದು ಸಾರ್ವಕಾಲಿಕ ಮಾನ್ಯತೆಯನ್ನು ಪಡೆದಿರುವುದನ್ನು ಹೇಳಿದ್ದಾರೆ. ರಾಮನಗರ ಜಿಲ್ಲೆಯ ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಲಾಗಿದೆ. ಇದರಲ್ಲಿ ಏಕ ಘಟಕಾಧಾರಿತ, ದ್ವಿಘಟಕಧಾರಿತ ಮತ್ತು ಬಹುಘಟಕಾಧಾರಿತ ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಲಾದರೂ ಇವು ಸಾಮಾನ್ಯವಾಗಿ ಎಲ್ಲ ಪ್ರದೇಶದ ಸ್ಥಳನಾಮಗಳಲ್ಲಿ ಕಾಣಲು ಸಾಧ್ಯ. ಅಲ್ಲದೇ ಜಿಲ್ಲೆಯ ಒಟ್ಟು ಸ್ಥಳನಾಮಗಳನ್ನು ನಿರ್ದಿಷ್ಟಕ್ಕನುಗುಣವಾಗಿ, ವಾರ್ಗಿಕಕ್ಕನುಗುಣ ವಾಗಿ ಮತ್ತು ಸಂಕೀರ್ಣ ಸ್ಥಳನಾಮಗಳೆಂದು ಮೂರು ರೀತಿಯ ವರ್ಗೀಕರಣವನ್ನು ಅಧ್ಯಾಯ ಮೂರರಲ್ಲಿ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜಿಲ್ಲೆಯಲ್ಲಿ ಸಿಗುವ ಶಾಸನೋಕ್ತ ಸ್ಥಳನಾಮಗಳು ಹಾಗೂ ಅವುಗಳಲ್ಲಿರುವ ಭಾಷಾ ವೈಜ್ಞಾನಿಕ ಪರಿಶೀಲನೆಯನ್ನು ನಡೆಸಲಾಗಿದೆ. ಈ ಪರಿಶೀಲನೆಯಿಂದ ಉಂಟಾದ ಭಾಷೆಯ ಪ್ರಮುಖ ಅಂಶಗಳನ್ನು ಹೇಳಲಾಗುವುದು. ಶಾಸನೋಕ್ತ ಹಾಗೂ ಪ್ರಸ್ತುತ ಸ್ಥಳನಾಮಗಳಲ್ಲಿರುವ ವಾರ್ಗಿಕ ಆವರ್ತನ ಪಟ್ಟಿಯನ್ನು ಕೊಡಲಾಗುವುದು.

ರಾಮನಗರ ಜಿಲ್ಲೆಯನ್ನು ಕದಂಬ, ಗಂಗ, ಚೋಳ, ಹೊಯ್ಸಳ, ವಿಜಯನಗರದ ಅರಸರು ಹಾಗೂ ಹಲವಾರು ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಜಿಲ್ಲೆಯ ಇತಿಹಾಸ ಹಾಗೂ ಆಳರಸರ ಕಾಲದಲ್ಲಿ ಸ್ಥಳನಾಮಗಳ ಪ್ರತಿನಾಮಕರಣ, ಪ್ರಾದೇಶಿಕ ವಿಭಾಗಗಳು ಮತ್ತು ಸ್ಥಳನಾಮಗಳೆಲ್ಲವನ್ನು ಚರಿತ್ರೆ ಮತ್ತು ಸ್ಥಳನಾಮಗಳೆಂಬ ಅಧ್ಯಾಯ ಐದರಲ್ಲಿ ಗಮನಿಸಲಾಗಿದೆ.

ಅಧ್ಯಾಯ ಆರರಲ್ಲಿ ಸ್ಥಳನಾಮಗಳ ಸಾಮಾಜಿಕ ಅಧ್ಯಯನ ನಡೆಸಲಾಗಿ, ಸ್ಥಳನಾಮಗಳ ಮೇಲೆ ಜಿಲ್ಲೆಯಲ್ಲಿರುವ ವಿವಿಧ ಧರ್ಮಗಳು, ಸಮುದಾಯಗಳು, ವೃತ್ತಿಗಳು ಹಾಗೂ ವ್ಯಕ್ತಿಗಳ ಪರಿಣಾಮವಾಗಿ ಸ್ಥಳನಾಮಗಳು ನಿಷ್ಪನ್ನವಾಗಿರುವುದನ್ನು ಗಮನಿಸಲಾಗಿದೆ.

ಜಾನಪದ ಅಂಶಗಳಾದ ಪುರಾಣ, ಐತಿಹ್ಯ, ಕಥೆ, ಗೀತೆ, ಕಥನಗೀತೆ, ಗಾದೆ ಮತ್ತು ಒಗಟುಗಳು ಸ್ಥಳನಾಮಗಳ ಮೇಲೆ ಪರಿಣಾಮ ಹೇಗೆ ಬೀರಿವೆ. ಹಾಗೂ ಸ್ಥಳನಾಮಗಳ ನಾಮಕರಣ ಪ್ರಕ್ರಿಯೆಯಲ್ಲಿ ಜನಪದರ ಒಲವು-ನಿಲುವುಗಳೇನು ಎಂಬ ಸಾಂಸ್ಕೃತಿಕ ಅಂಶಗಳನ್ನು ಗಮನಿಸಲಾಗಿದೆ ಅಧ್ಯಾಯ ಏಳರಲ್ಲಿ.

ಎಂಟನೇ ಅಧ್ಯಾಯದಲ್ಲಿ ಸಮಾರೋಪ ಭಾಗದಲ್ಲಿ ನಿಬಂಧದ ಶೀರ್ಷಿಕೆಯ ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳು, ಫಲಿತಗಳು, ಅಧ್ಯಯನದ ಸಫಲತೆ ಮತ್ತು ಮಿತಿಗಳು ಹಾಗೂ ಮುಂದಿನ ಅಧ್ಯಯನಗಳ ಸಾಧ್ಯತೆಯನ್ನು ಸೂಚಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ, ಅನುಬಂಧಗಳನ್ನು ನೀಡಲಾಗಿದ್ದು; ಇಡೀ ಜಿಲ್ಲೆಯ ಸ್ಥಳನಾಮಗಳನ್ನು ತಾಲೂಕುವಾರು ಅಕಾರಾದಿಯಾಗಿ ನೀಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಸಿದ್ಧಪಡಿಸಿದ ಪ್ರಶ್ನಾವಳಿರೂಪ, ಕ್ಷೇತ್ರಕಾರ್ಯದಲ್ಲಿ ಭೇಟಿಮಾಡಿದ ವಕ್ತೃಗಳವಿವರ, ಅಧ್ಯಯನಕ್ಕಾಗಿ ಆಧಾರವಾದ ಗ್ರಂಥಸೂಚಿ, ನಿಯತಕಾಲಿಕಗಳ ಪಟ್ಟಿ, ವಿವಿಧ ನಿಘಂಟುಗಳು ಹಾಗೂ ಎಫಿಗ್ರಾಫಿಯಾ ಆಫ್ ಕರ್ನಾಟಕ ಸಂಪುಟಗಳ ವಿವರಗಳನ್ನು ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ. ಹೀಗೆ ಒಟ್ಟಂದದ ರೂಪದಲ್ಲಿ ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ನಿಬಂಧವನ್ನು ಸಿದ್ಧಪಡಿಸಲಾಗಿದೆ.

೧.೨. ವ್ಯಾಪ್ತಿ

ಪ್ರಸ್ತುತ **'ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ'** ಎಂಬ ನಿಬಂಧವು ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳ ಎಲ್ಲಾ ವಸತಿ ಹಾಗೂ ಕೆಲವು ನಿರ್ವಸಿತ ಸ್ಥಳಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ರಾಮನಗರ ಜಿಲ್ಲೆಯು ೨೩.೦೮.೨೦೦೭ರಂದು ಹೊಸದಾಗಿ ಅಸ್ತಿತ್ವಕ್ಕೆ ಬಂದ ಜಿಲ್ಲೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದ್ದ ಕನಕಪುರ, ಚನ್ನಪಟ್ಟಣ, ಮಾಗಡಿ, ರಾಮನಗರ ಈ ನಾಲ್ಕು ತಾಲ್ಲೂಕುಗಳು ಸೇರಿ ಆದ ಹೊಸ ಜಿಲ್ಲೆಯಾಗಿದೆ. ಈ ಜಿಲ್ಲೆಯ ಉತ್ತರಕ್ಕೆ ಶಿವಗಂಗೆ ಬೆಟ್ಟದ ಬುಡದಿಂದ ದಕ್ಷಿಣಕ್ಕೆ ಕಾವೇರಿ ನದಿಯ ಮೇಕೆದಾಟುವಿನವರೆಗೂ, ಪಶ್ಚಿಮಕ್ಕೆ ಮಂಡ್ಯ, ತುಮಕೂರು ಜಿಲ್ಲೆಯ ಗಡಿಯಿಂದ ಪೂರ್ವಕ್ಕೆ ಬೆಂಗಳೂರು ಜಿಲ್ಲೆ ಮತ್ತು ತಮಿಳುನಾಡಿನ ಗಡಿಯವರೆಗೂ ವಿಸ್ತರಿಸಿರುವ ಜಿಲ್ಲೆಯ ಒಟ್ಟು ವಿಸ್ತೀರ್ಣ ೩೫೭೬.೫೮ ಕಿ.ಮೀ.ಗಳು. ೧೮ ಹೋಬಳಿಗಳಿದ್ದು; ಕನಕಪುರದಲ್ಲಿ ೪೯೬, ಚನ್ನಪಟ್ಟಣದಲ್ಲಿ ೧೫೪, ಮಾಗಡಿಯಲ್ಲಿ ೩೫೦, ರಾಮನಗರದಲ್ಲಿ ೧೪೩ ಗ್ರಾಮಗಳಿವೆ. ರಾಮನಗರ ಜಿಲ್ಲೆಯು ಬಯಲು ಸೀಮೆಯಲ್ಲಿದ್ದರೂ ಬೆಟ್ಟ, ಗುಡ್ಡ, ಹಳ್ಳ, ತೊರೆ, ಕಾಡು, ಕೆರೆ, ಕಟ್ಟೆಗಳನ್ನು ಹೊಂದಿದ ನಿಸರ್ಗ ಸುಂದರವಾದ ಪ್ರದೇಶ. ರಾಮಗಿರಿಪರ್ವತ, ಸಾವನದುರ್ಗ, ಕಬ್ಬಾಳುದುರ್ಗ, ಹೊಸದುರ್ಗ, ಮುನೇಶ್ವರನ ಬೆಟ್ಟ, ಚುಳಕನಗಿರಿ ಮೊದಲಾದ ಬೆಟ್ಟಗುಡ್ಡಗಳನ್ನು; ಕಣ್ವ, ಅರ್ಕಾವತಿ, ಶಿಂಷಾ, ಸುವರ್ಣಮುಖಿ, ವೃಷಭಾವತಿ ಮೊದಲಾದ ಚಿಕ್ಕ ನದಿಗಳಾಗಿವೆ. ಇವುಗಳ ಜೊತೆಗೆ ಕೆರೆ, ಕುಂಟೆ, ಬಾವಿಗಳು ನೀರಿನ ಸೆಲೆಗಳಾಗಿವೆ. ಭೂಮಿಯ ಹೆಚ್ಚುಭಾಗ ಕೆಂಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಯೋಗ್ಯವಾಗಿದ್ದರೂ ಮಳೆಯನ್ನು ಆಶ್ರಯಿಸಿದೆ.

ಈ ಜಿಲ್ಲೆಯು ಶಿಲಾಯುಗ ಕಾಲಕ್ಕೆ ಮಾನವನ ನೆಲೆಯಾಗಿದ್ದು; ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಚೋಳ, ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಆಡಳಿತಕ್ಕೆ ಒಳಪಟ್ಟಿತ್ತು. ಹಲವಾರು ಪಾಳೆಯಗಾರರು, ನಾಡ ಪ್ರಭುಗಳು, ಪ್ರಭುಗಾವುಂಡರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ. ಕಬ್ಬಾಳುದುರ್ಗ, ಸಾವನದುರ್ಗ, ಮಾಗಡಿ, ರಾಮಗಿರಿ ಪರ್ವತಗಳ ಮೇಲೆ ಭದ್ರವಾದ ಕಲ್ಲಿನ ಕೋಟೆಗಳಿವೆ.

ಪ್ರಾಚೀನ ಕಾಲದಿಂದಲೂ ಬೌದ್ಧ, ಜೈನ, ವೈಷ್ಣವ, ಶೈವ ಮತೀಯರ ನೆಲೆ ಇದಾಗಿತ್ತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮೊದಲಾದ ಧರ್ಮೀಯರು ತಮ್ಮದೇ ಆದ ರೂಢಿ, ಸಂಪ್ರದಾಯ, ಆಚರಣೆಗಳಡಿಯಲ್ಲಿ ಸಾಮರಸ್ಯದ ಬದುಕನ್ನು ರೂಪಿಸಿಕೊಂಡಿದ್ದಾರೆ. ವಿವಿಧ ಸಮುದಾಯದವರು ತಮ್ಮದೇ ಆದ ವೃತ್ತಿಗಳನ್ನು ಅನುಸರಿಸಿಕೊಂಡು ಬಂದಿದ್ದರೂ ಒಕ್ಕಲಿಗ ಸಮುದಾಯದವರೇ ಗರಿಷ್ಠ ಪ್ರಮಾಣದಲ್ಲಿದ್ದಾರೆ. ಪ್ರತಿಯೊಂದು ಸಮುದಾಯದವರ ಆಚಾರ-ವಿಚಾರ, ಆಚರಣೆಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು.

ಜಿಲ್ಲೆಯಲ್ಲಿ ಕನ್ನಡ ಭಾಷೆಯು ಪ್ರಮುಖವಾಗಿದ್ದು; ಅಲ್ಪ ಪ್ರಮಾಣದಲ್ಲಿ ತೆಲುಗು, ಉರ್ದು, ಹಿಂದಿ, ಇಂಗ್ಲೀಷ್ ಭಾಷೆಯನ್ನಾಡುತ್ತಾರೆ. ವ್ಯವಹಾರ ಮತ್ತು ಮನೆಯಲ್ಲಿ ಕನ್ನಡ ಭಾಷೆಯನ್ನಾಡುತ್ತಾರೆ. ಕನಕಪುರ ತಾಲೂಕಿನ ಗಡಿಭಾಗದಲ್ಲಿ ತಮಿಳು ಭಾಷೆಯನ್ನು ಗುರುತಿಸಬಹುದು.

ಈ ಜಿಲ್ಲೆಯಲ್ಲಿ ಸೋಬಾನೆಪದ, ದಾಸರಪದ, ಕಂಸಾಳೆಪದ ಮುಂತಾದ ಗೀತ ಪ್ರಕಾರ ಪಟದ ಕುಣಿತ, ಪೂಜಾ ಕುಣಿತ, ಹುಲಿವೇಷ ಮೊದಲಾದ ಜನಪದ ಕಲೆಯ ಪ್ರಕಾರಗಳಿವೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಭೌಗೋಳಿಕ ಪರಿಸರ, ಇತಿಹಾಸ, ಸಾಮಾಜಿಕ, ಸಾಂಸ್ಕೃತಿಕ, ಜನರ ಜೀವನ ವಿಧಾನ ಹಾಗೂ ಭಾಷಿಕ ಅಂಶಗಳನ್ನು ಒಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧.೩. ವಿಧಾನ

ರಾಮನಗರ ಜಿಲ್ಲೆಯ ಸ್ಥಳನಾಮಗಳ ಕುರಿತ ಈ ಅಧ್ಯಯನವು ಕ್ಷೇತ್ರಕಾರ್ಯ ಮತ್ತು ಪ್ರಸ್ತುತ ಕ್ಷೇತ್ರಕ್ಕೆ ಸಂಬಂಧಪಟ್ಟ ಉಪಲಬ್ಧ ಗ್ರಂಥಗಳಿಂದ ರೂಪುಗೊಂಡಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪ್ರಶ್ನಾವಳಿಯ ಮೂಲಕ ಸ್ಥಳನಾಮಗಳ ಬಗ್ಗೆ ಇರುವ ಐತಿಹ್ಯ, ಪುರಾಣ, ಕತೆ, ಗಾದೆ, ಒಗಟು, ಗೀತೆ, ಹೇಳಿಕೆಗಳನ್ನು ಸಂಗ್ರಹಿಸಲಾಗಿದೆ. ಊರಿನ ಭೌಗೋಳಿಕ ಪ್ರಾಕೃತಿಕ ಅಂಶಗಳಾದ ಬೆಟ್ಟ -ಗುಡ್ಡ, ಹೊಳೆ, ಕೆರೆ-ಕಟ್ಟೆ ಹಾಗೂ ಮಣ್ಣಿನ ಬಣ್ಣ, ಎತ್ತರ, ತಗ್ಗು-ಮೊದಲಾದ ಪ್ರಾಕೃತಿಕ ಚಹರೆಗಳನ್ನು ಸಹ ಕೇಳಿ, ತಿಳಿದು; ಕೆಲವೊಂದು ಸ್ಥಳಗಳನ್ನು ವೀಕ್ಷಿಸಲಾಗಿದೆ.

ಸ್ಥಳನಾಮಗಳಿಗೆ ಸಂಬಂಧಪಟ್ಟಂತೆ ಊರಿನ ಅಧಿದೇವತೆ, ಹಬ್ಬ, ಜಾತ್ರೆ ಹಾಗೂ ಇನ್ನಿತರವಾದ ಧಾರ್ಮಿಕ ಆಚರಣೆಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಸಂದರ್ಶಿಸಿದ ಸ್ಥಳದ ಚರಿತ್ರೆ, ಸಾಮಾಜಿಕ ಜೀವನವಿಧಾನ, ದೇವಾಲಯಗಳು, ಶಾಸನಗಳು, ಆರ್ಥಿಕ ಸಂಪನ್ಮೂಲ, ಮುಖ್ಯಬೆಳೆ, ಆಹಾರ ಪದ್ಧತಿ, ಮಾತೃಭಾಷೆ ಹಾಗೂ ಊರಿನ ವಿಶಿಷ್ಟವಾದ ಸಂಸ್ಕೃತಿಯ ವಿವರಗಳನ್ನು ಗಮನಿಸಲಾಗಿದೆ. ಮಾಹಿತಿ ಸಂಗ್ರಹಣೆಯ ಸಂದರ್ಭದಲ್ಲಿ ವಿವಿಧ ಜಾತಿ, ವೃತ್ತಿಗಳಿಗೆ ಸಂಬಂಧಿಸಿದ ಪುರುಷ ಮಹಿಳೆಯರೆಂಬ ಲಿಂಗ ಹಾಗೂ ವಯೋ ತಾರತಮ್ಯವಿಲ್ಲದೇ ವ್ಯಕ್ತಿಗಳಿಂದ ಪೂರಕ ಮಾಹಿತಿಯನ್ನು ಪಡೆಯಲಾಗಿದೆ.

ಅಧ್ಯಯನಕ್ಕೆ ಅವಶ್ಯಕವಾದ ಜಿಲ್ಲೆಯ ಮಾದರಿ ಸ್ಥಳನಾಮಗಳ ಪಟ್ಟಿಯನ್ನು ಸಿದ್ಧಪಡಿಸಲು ಕರ್ನಾಟಕ ಸರಕಾರದ ಅಧಿಕೃತ ಪ್ರಕಟಣೆಯಾದ ಕರ್ನಾಟಕ ಗ್ರಾಮ ಸೂಚಿಯ ೧೯೮೫ರ ಆವೃತ್ತಿಯನ್ನು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ೨೦೦೧ರ ಜನಗಣತಿ ಕೈಪಿಡಿಯನ್ನು ಬಳಸಿಕೊಳ್ಳಲಾಗಿದೆ. ಈ ಎರಡೂ ಪ್ರಕಟಣೆಗಳಲ್ಲಿ ಗ್ರಾಮನಾಮಗಳ ಕೆಲವು ದೋಷಗಳಿದ್ದು, ಅವುಗಳನ್ನು ಗುರುತಿಸಿ ಸಂಬಂಧಪಟ್ಟ, ಅಧಿಕೃತ ವ್ಯಕ್ತಿಗಳಿಂದ ಮಾಹಿತಿಯನ್ನು ಪಡೆದು ಅವುಗಳನ್ನು ಸರಿಪಡಿಸಿಕೊಂಡು ಅಕಾರಾದಿಯಾಗಿ ಗ್ರಾಮನಾಮಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಕೆಲವೊಂದು ಗ್ರಾಮಗಳ ಹೆಸರು ಒಂದೇ ರೂಪದಲ್ಲಿರುವುದರಿಂದ ತಾಲೂಕಿನಲ್ಲಿ ಅಥವಾ ಹೋಬಳಿಯಲ್ಲಿ ಪುನರಾವೃತ್ತಿಯಾಗುವುದು. ಇದನ್ನು ತಪ್ಪಿಸಲು ಹಾಗೂ ಸ್ಥಳದ ನಿಖರತೆಗಾಗಿ ಜಿಲ್ಲೆಯ ಜನಗಣತಿ ಕೈಪಿಡಿಯಲ್ಲಿನ ಸ್ಥಳದ 'Permanent Location code Number'ನ್ನು ಸಾಧ್ಯವಾದಷ್ಟು ಕಡೆ ಬಳಸಲಾಗಿದೆ.

ಅಡಿ ಟಿಪ್ಪಣಿಗಳು

೧. ಪ್ರೊ.ಡಿ.ಲಿಂಗಯ್ಯ, ಡಾ.ಚಕ್ಕರೆ ಶಿವಶಂಕರ್ (ಸಂ), ಸ್ಥಳನಾಮಗಳ ಅಧ್ಯಯನ, ಪುಟ.೧, ೨೦೦೮.

೨. ಡಾ.ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೪೯, ೧೯೯೫

೩. ವಿ.ಗೋಪಾಲಕೃಷ್ಣ, ಸ್ಥಳನಾಮ ಅಧ್ಯಯನಗಳು, ಪುಟ.೧, ೧೯೮೭

ಅಧ್ಯಾಯ - ೨

ಸ್ಥಳನಾಮ ವಿಜ್ಞಾನದ ಚರಿತ್ರೆ

೨.೧. ಪಾಶ್ಚಾತ್ಯ ಸ್ಥಳನಾಮಾಧ್ಯಯನದ ಚರಿತ್ರೆ

೨.೨. ಭಾರತೀಯ ಸ್ಥಳನಾಮಾಧ್ಯಯನದ ಚರಿತ್ರೆ

೨.೩. ಕನ್ನಡ ಸ್ಥಳನಾಮಾಧ್ಯಯನದ ಚರಿತ್ರೆ

ಅಧ್ಯಾಯ ೨

ಸ್ಥಳನಾಮ ವಿಜ್ಞಾನದ ಚರಿತ್ರೆ

ಸ್ಥಳನಾಮ ವಿಜ್ಞಾನ ಎಂಬುದು ತನ್ನ ನಿಜಾರ್ಥದಲ್ಲಿ ಜನವಾಸ್ತವ್ಯವಿರುವ ಸ್ಥಳಗಳನ್ನಷ್ಟೇ ಅಲ್ಲದೆ ನಿರ್ವಸಿತ ಸ್ಥಳಗಳ, ಹೆಸರಿನ ಅಧ್ಯಯನವನ್ನು ಒಳಗೊಂಡಿದೆ. ಸ್ಥಳಗಳು, ಕ್ಷೇತ್ರಗಳು, ವಸಾಹತುಗಳು ಮುಂತಾದವುಗಳ ಹೆಸರಿಗೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ವಿವರಗಳನ್ನು ಒಳಗೊಳ್ಳುವ ಈ ಅಧ್ಯಯನಕ್ಕೆ 'ಸ್ಥಳನಾಮ ವಿಜ್ಞಾನ' ಎಂದು ಕರೆಯಲಾಗಿದೆ.[೧] ವಿಜ್ಞಾನದ ಯಾವುದೇ ಶಾಖೆಯಾಗಿರಲಿ ಅದಕ್ಕೆ ತನ್ನದೇ ಆದ ಇತಿಹಾಸವಿರುತ್ತದೆ. ಅದರಂತೆ ಸ್ಥಳನಾಮ ವಿಜ್ಞಾನಕ್ಕೂ ಅದರದೇ ಆದ ಚರಿತ್ರೆಯುಂಟು. ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ಪೌರ್ವಾತ್ಯರಲ್ಲಿ ಮುಖ್ಯವಾಗಿ ಕನ್ನಡ ಹಾಗೂ ಭಾರತದ ಇನ್ನಿತರ ಭಾಷೆಗಳಲ್ಲಿ ಆದ ಸ್ಥಳನಾಮಗಳ ಅಧ್ಯಯನ ನಡೆದುಬಂದ ಇತಿಹಾಸವನ್ನು ಕಟ್ಟಿಕೊಡುವುದು ಈ ಅಧ್ಯಾಯದ ಮುಖ್ಯ ಆಶಯವಾಗಿದೆ.

೨.೧. ಪಾಶ್ಚಾತ್ಯ ಸ್ಥಳನಾಮಾಧ್ಯಯನ ಚರಿತ್ರೆ

ಪಾಶ್ಚಿಮಾತ್ಯರಲ್ಲಿ ಸ್ಥಳನಾಮ ಅಧ್ಯಯನ ಪ್ರಾರಂಭವಾದುದು ಸುಮಾರು ಎರಡುನೂರು ವರ್ಷಗಳ ಹಿಂದೆ. ಸ್ಥಳನಾಮಗಳಲ್ಲಿರುವ ಸಾಂಸ್ಕೃತಿಕ ಸಂಗತಿಗಳನ್ನು ಮನಗಂಡು ಅವುಗಳ ಅಧ್ಯಯನದ ಅಗತ್ಯತೆಯನ್ನು, ಮಹತ್ವವನ್ನು ಅರಿತು ಅಧ್ಯಯನದಲ್ಲಿ ತೊಡಗಿದರು. ಆದರೆ ಅದೊಂದು ಶಾಸ್ತ್ರವಾಗಿ, ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಟ್ಟಿದ್ದು ಮಾತ್ರ ಒಂದು ಶತಮಾನದ ಹಿಂದೆಯಷ್ಟೆ. ಯುರೋಪಿನ ರಾಷ್ಟ್ರಗಳಾದ ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ್, ನಾರ್ವೆಗಳಲ್ಲಿ ಸ್ಥಳನಾಮಗಳ ಅಧ್ಯಯನಗಳು ಗಣನೀಯವಾಗಿ ನಡೆದವು. ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಆಗಿರುವ ಕಾರ್ಯವನ್ನು ಗಮನಿಸಿದರೆ ವಿಸ್ಮಯವಾಗದೇ ಇರದು.

ಸ್ಥಳನಾಮಗಳ ಉಲ್ಲೇಖಗಳು ಸಾಹಿತ್ಯ ಗ್ರಂಥಗಳಲ್ಲಿ ಲಭ್ಯವಾದರೂ, ಸರ್ಕಾರಿ ಕಡತ ಹಾಗೂ ದಾಖಲೆಗಳಲ್ಲಿ ಅವುಗಳ ಪಟ್ಟಿ ಪ್ರಕಟಗೊಂಡರೂ ಅವುಗಳ ಉಪಯುಕ್ತತೆಯನ್ನು ಕಂಡುಕೊಂಡಿರಲಿಲ್ಲ. ಸ್ಥಳನಾಮಗಳ ಅಧ್ಯಯನ ಅರ್ಥಗರ್ಭಿತವಾದವುಗಳು, ಅರ್ಥರಹಿತವಾದ ಸ್ಥಳನಾಮಗಳು ಇಲ್ಲ ಎನ್ನುವುದಾಗಲೀ, ಅವುಗಳ ಪ್ರಾಚೀನ ರೂಪಗಳನ್ನು ಪರಿಶೀಲಿಸುವುದರಿಂದ ಖಚಿತ ಅರ್ಥವನ್ನು ಪಡೆಯ ಬಹುದೆಂದು ಮೊತ್ತ ಮೊದಲಿಗೆ ತೋರಿಸಿಕೊಟ್ಟ ಕೀರ್ತಿ ಜರ್ಮನಿಯ ಗಾಟ್ ಫ್ರೀಡ್‌ವಿಲ್ ಹೆಲ್ಮ್

ಲೀಬ್ನಿಜ್ (೧೭೬೮) ಎಂಬ ವಿದ್ವಾಂಸನಿಗೆ ಸಲ್ಲುತ್ತದೆ. ಆದ್ದರಿಂದ ಆತನನ್ನು 'ಸ್ಥಳನಾಮ ಶಾಸ್ತ್ರದ ಪಿತಾಮಹ'ನೆಂದು ಕರೆಯಲಾಗಿದೆ.

ಸ್ಥಳನಾಮಾರ್ಥ ವಿವರಣೆಯು ಕ್ರಮಬದ್ಧತೆಯಿಲ್ಲದೇ, ಅವೈಜ್ಞಾನಿಕತೆಯಿಂದ ಕೂಡಿದ್ದವುಗಳಾಗಿದ್ದವು. ಸ್ಥಳನಾಮಗಳ ವ್ಯವಸ್ಥಿತವಾದ ಅಧ್ಯಯನ ೧೮೪೦ರ ನಂತರವಾಯಿತು. ಇಂತಹ ಸಮಯದಲ್ಲಿ ಸ್ಥಳನಾಮ ವಿಜ್ಞಾನದ ವಿಕಾಸಕ್ಕೆ ಭದ್ರ ಬುನಾದಿ ಹಾಕಿದವನು ಇಂಗ್ಲೆಂಡಿನ ಸ್ಕೀಟ್ ಮಹಾಶಯ. ಅದೇ ರೀತಿ ಜರ್ಮನಿಯಲ್ಲಿ ಫಾರ್ ಸ್ಟೀಮನ್, ಫ್ರಾನ್ಸಿನಲ್ಲಿ ಲಾಂಗ್ನನ್, ನಾರ್ವೆಯಲ್ಲಿ ರೈ ಮತ್ತು ಸ್ವೀಡನ್ನಿನಲ್ಲಿ ನೋರಿನ್ ಮತ್ತು ಐಸಾಕ್‌ಟೇಲರ್ ಬಹಳ ಸೇವೆ ಸಲ್ಲಿಸಿ ಈ ಕ್ಷೇತ್ರದ ಪ್ರಗತಿಗೆ ಕಾರಣೀಭೂತರಾದರು. ಸ್ಥಳನಾಮ ಸಂಶೋಧನೆಯಿಂದ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ, ಭೌಗೋಳಿಕ ಪರಿಸ್ಥಿತಿ ಸನ್ನಿವೇಶ, ವಿವರಣೆಗೂ ಬಹುಮುಖ್ಯ ಗಮನ ನೀಡತಕ್ಕದೆಂದು ಅವರು ಸ್ಪಷ್ಟಪಡಿಸಿದರು. ಸ್ಥಳನಾಮಗಳ ಅಧ್ಯಯನದಿಂದ ಸಾಂಸ್ಕೃತಿಕ ಲಾಭಗಳ ಜೊತೆಗೆ, ಹಲವಾರು ಜ್ಞಾನ ಶಾಖೆಗಳಿಗೆ ಪ್ರಯೋಜನವಾಗುತ್ತದೆ ಎಂದು ಸೂಚಿಸಿದರು. ಈ ಅವಧಿಯಲ್ಲಿ ಕಾಣಿಸಿಕೊಂಡ ಚೊಚ್ಚಲ ಕೊಡುಗೆಯಾಗಿ ಫಾರ್‌ಸ್ಟೀಮನ್‌ನ "AH deutches Nemen buch" ಮತ್ತು ಐಸಾಕ್ ಟೇಲರ್‌ನ "Words and Places" ಉಲ್ಲೇಖನೀಯ ಕೃತಿಗಳಾಗಿವೆ.

೧೯ನೇ ಶತಮಾನದ ಪೂರ್ವದಲ್ಲಿದ್ದ ಜಾನ್.ಹೆಕ್‌ವೆಲ್ಡರ್ ಮತ್ತು ಹೆನ್ರಿ ಆರ್ ಸ್ಕೂಲ್ ರ್‍ಯಾಫ್ಟ್ ಇವರು ಆದಿವಾಸಿಗಳ ಸ್ಥಳನಾಮಗಳನ್ನು ಕುರಿತು ವಿಶ್ಲೇಷಣೆ ನಡೆಸಿದರು. ೧೮೬೨ರಲ್ಲಿ ಪ್ರಕಟಗೊಂಡು "ನಾಗರಿಕತೆಯ ಪ್ರಗತಿಯಲ್ಲಿ ನಾನಾ ನಾಮಗಳ ಪಾತ್ರ" ಎಂಬ ಲೇಖನದಲ್ಲಿ ಫ್ರಾನ್ಸಿನ ಇ.ಸಾಲ್ವರ್ತೆ ಅವರು ಇತಿಹಾಸ, ಭೂಗೋಳ ಮತ್ತು ಭಾಷೆಗಳ ಅಧ್ಯಯನದಲ್ಲಿ ಸ್ಥಳನಾಮಗಳ ಪಾತ್ರ ಮಹತ್ತರವಾದದ್ದು ಎಂದು ಸ್ಪಷ್ಟಪಡಿಸಿದರು.

ಕ್ರಿ.ಶ.೧೮೭೧-೧೮೮೫ರ ಅವಧಿಯನ್ನು ಜೆ.ಜೆ.ಎಗ್ಲಿ ಎಂಬ ವಿದ್ವಾಂಸ "ಸ್ಥಳನಾಮ ಶಾಸ್ತ್ರದ ಗತಿಶೀಲ ಬೆಳವಣಿಗೆಯ ಕಾಲ" ಎಂದು ಕರೆದಿದ್ದಾನೆ. ಇಂಗ್ಲೆಂಡಿನ ಸ್ಥಳನಾಮ ಅಧ್ಯಯನ ಕ್ಷೇತ್ರದಲ್ಲಿ ಇವರು ಗಣನೀಯ ಸೇವೆ ಸಲ್ಲಿಸಿದ್ದರಿಂದ "ಇಂಗ್ಲೀಷ್ ಸ್ಥಳನಾಮ ಶಾಸ್ತ್ರದ ಮೂಲ ಪುರುಷ"ನೆಂದು ಕರೆಯಲಾಗಿದೆ. ಈತನು ಸ್ಥಳನಾಮಗಳನ್ನು ಪ್ರಾಕೃತಿಕ ಸ್ಥಳನಾಮಗಳು ಮತ್ತು ಸಾಂಸ್ಕೃತಿಕ ಸ್ಥಳನಾಮಗಳೆಂದು ಎರಡು ರೀತಿಯ ವರ್ಗೀಕರಣವನ್ನು ಮಾಡಿದ್ದಾನೆ.

ಯುರೋಪಿನ ವಿದ್ವಾಂಸರಿಗೆ ಸಂಸ್ಕೃತ ಭಾಷೆಯ ಪರಿಚಯದಿಂದಾಗಿ ಭಾಷೆ ಭಾಷೆಗಳ ನಡುವೆ ತೌಲನಿಕ ಅಧ್ಯಯನ ನಡೆಸಿದ ನಂತರ ಸ್ಥಳನಾಮ ಅಧ್ಯಯನಕ್ಕೆ ಪುರಸ್ಕಾರ ದೊರೆಯಿತು. ಅಲ್ಲದೆ ವೈಜ್ಞಾನಿಕ ಸಂಶೋಧನೆಯು ಆರಂಭವಾಯಿತೆನ್ನಬಹುದು. ವಾರನ್ ಅಪ್‌ಹ್ಯಾಮ್, ಲೂಯಿಸ್ ಪೌಂಡ್ ಮೊದಲಾದವರ ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳಿಂದ ಆರಂಭವಾದ ಈ ಮಹಾಕಾರ್ಯ ದೇಶದ ಉದ್ದಗಲಕ್ಕೂ ವ್ಯಾಪಿಸಿ ವಿಶ್ವವಿದ್ಯಾಲಯಗಳ ವಿದ್ವಾಂಸರಷ್ಟೇ ಅಲ್ಲ ಸಂಶೋಧನಾಸಕ್ತಿಯುಳ್ಳ ಹವ್ಯಾಸಿಗಳನ್ನು ಸೆಳೆಯಲು ಕಾರಣವಾಯಿತು.

ಇಂಗ್ಲೆಂಡಿನಲ್ಲಿ ೮ನೇ ಶತಮಾನದಲ್ಲಿ ಜೀವಿಸಿದ್ದ ಬೀಡೆ (Bede) ತನ್ನ ಧಾರ್ಮಿಕ ಇತಿಹಾಸ ಗ್ರಂಥದಲ್ಲಿ ಕೆಲವು ಸ್ಥಳನಾಮಗಳ ವಿವರಣೆಯನ್ನು ಲ್ಯಾಟಿನ್ ಭಾಷೆಯಲ್ಲಿ ಕೊಡುತ್ತಾನೆ. (Selsey) ಸೀಲ್ ದ್ವೀಪವೆಂಬುದು ಅವನ ಅಭಿಪ್ರಾಯವಾಗಿತ್ತು. ೧೦ನೇ ಶತಮಾನದ ಅಸರ್ (Asser) ತಾನು ರಚಿಸಿದ 'ಆಲ್‌ಫ್ರೆಡ್' ದೊರೆಯ ಜೀವನ ಚರಿತ್ರೆಯಲ್ಲಿ ಕೆಲವು ಸ್ಥಳನಾಮ ನಿಷ್ಪತ್ತಿಗಳನ್ನು ವಿವರಿಸುತ್ತಾ 'Sheppey' ಎನ್ನುವುದು ಕುರಿಗಳ ದ್ವೀಪವೆಂದು ಲ್ಯಾಟೀನ್ ಭಾಷೆಯ ಮೂಲಕ ವಿವರಿಸುತ್ತಾನೆ. ೧೨ನೇ ಶತಮಾನದ ಇತಿಹಾಸಕಾರನಾದ ಹಂಟಿಂಗ್, ಡನ್ನಿನ 'ಹೆನ್ರಿ' ಮತ್ತು 'ಮಾಲ್ಮೆಸ್ ಬರಿಯ ವಿಲಿಯಂ' ಮುಂತಾದವರು ಸ್ಥಳನಾಮಗಳ ಬಗ್ಗೆ ಆಸಕ್ತಿಯನ್ನು ತೋರಿಸುತ್ತಾರೆ. ಹೆನ್ರಿಯ 'ಹಂಟಿಂಗ್‌ಡನ್' ಎಂಬ ನಿಷ್ಪತ್ತಿ ಕುರಿತಂತೆ 'ಬೇಟೆಗಾರರ ಬೆಟ್ಟ'ವೆಂದು ತಿಳಿಸುತ್ತಾನೆ.

ಎಗ್ಲಿಯ ನಂತರ; ಸ್ಥಳನಾಮಾಧ್ಯಯನದ ಪ್ರಯತ್ನಗಳು ನಿರಂತರವಾಗಿ ವ್ಯಾಪಕವಾಗಿ ನಡೆದವು. ಅದರಲ್ಲೂ ಯುರೋಪಿನಲ್ಲಿ ವಿದ್ವಾಂಸರಿಂದ ಸ್ವತಂತ್ರವಾಗಿ, ಇಲ್ಲವೇ ಸ್ಥಳನಾಮಗಳಲ್ಲಿನ ಭೌಗೋಳಿಕ ಹೆಸರುಗಳನ್ನು ವ್ಯವಸ್ಥೀಕರಿಸಲು, ಪ್ರಾಮಾಣೀಕರಿಸಲು ಸರ್ಕಾರದಿಂದ. ಸ್ಥಳನಾಮ ಶಾಸ್ತ್ರದ ಸಂಸ್ಥೆಗಳು ಸ್ಥಾಪಿತವಾದವು. ಈ ಹಿನ್ನೆಲೆಯಲ್ಲಿಯೇ ಇಂಗ್ಲೆಂಡಿನಲ್ಲಿ ೧೯೨೧ರಲ್ಲಿ 'ಆಂಗ್ಲ ಸ್ಥಳನಾಮ ಸಂಶೋಧನಾ ಮಂಡಳಿ' ಸ್ಥಾಪಿತವಾಯಿತು. ಇದೊಂದು ಸ್ಥಳನಾಮ ವಿಜ್ಞಾನದ ಮೈಲಿಗಲ್ಲು ಎನ್ನಬಹುದು. ಪುರಾತತ್ವ ತಜ್ಞರ, ಭಾಷಾ ವಿಜ್ಞಾನಿಗಳ ಇತಿಹಾಸಕಾರರ ಜೊತೆಗೆ ಇತರ ಪರಿಣಿತರ ನೆರವು ಪಡೆದು ಸ್ಥಳನಾಮ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪ ಕೊಡುವಲ್ಲಿ ಯಶಸ್ವಿಯಾಯಿತು. ಅಲ್ಲದೆ ಎಲ್ಲ ಜಿಲ್ಲೆಗಳ ಸ್ಥಳನಾಮಗಳನ್ನು ಸಂಗ್ರಹಿಸಿ ವಿವಿಧ ಕೋನಗಳಿಂದ, ಆಳವಾಗಿ ಅಧ್ಯಯನ ನಡೆಸಿ ವರ್ಗೀಕರಣ ತತ್ವಗಳನ್ನು ರೂಪಿಸಿ, ತಂತ್ರವಿಧಾನಗಳಿಗೆ ಮೂರ್ತತ್ವ ಕಲ್ಪಿಸುವುದರಲ್ಲಿ ಸಹಾಯಕವಾಯಿತು. ಹಾಗೂ ಸಮುದಾಯಗಳ ಸಾಂಸ್ಕೃತಿಕ ಇತಿಹಾಸವನ್ನು ರಚಿಸುವಲ್ಲಿ ಸ್ಥಳನಾಮ ವಿಜ್ಞಾನ ಅತಿಮುಖ್ಯ ಎಂಬುದನ್ನು ತೋರಿಸಿಕೊಟ್ಟಿತು. ಜಗತ್ತಿನ ವಿವಿಧ ದೇಶಗಳ ಸ್ಥಳನಾಮ ತಜ್ಞರು, ಪರಿಣಿತರಿಗೆ ಪ್ರಚೋದನೆ ನೀಡುವಲ್ಲಿ ಯಶಸ್ವಿಯಾಯಿತು.

ಭಾಷಾ ವಿಜ್ಞಾನದ ಸಾಮಾಗ್ರಿಯನ್ನು ಹಾಗೂ ಐತಿಹಾಸಿಕ ವಿಧಾನವನ್ನು ಬಳಸಿಕೊಂಡು ಇ.ಎಕ್ವಾಲ್ ಸಿದ್ಧಪಡಿಸಿದ "The concise oxford Dictionary of English place names" ಎಂಬ ನಿಘಂಟುವಿನಲ್ಲಿ ಮಾನವನ ವಸತಿ ಸ್ಥಳಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ಥಳನಾಮಗಳನ್ನು ಮೂರು ವಿಧಗಳನ್ನಾಗಿ ವರ್ಗೀಕರಿಸುತ್ತಾನೆ. ಈ ನಿಘಂಟು ಸ್ಥಳನಾಮ ವಿದ್ವಾಂಸರಿಗೆ ಮಾದರಿಯಾಗಿ ಪರಿಣಮಿಸಿತು.

ಎಫ್.ಎಂ.ಸ್ಟೆಂಟಾನ್, ಎ.ಎಚ್.ಸ್ಮಿತ್ ಮತ್ತು ಪಿ.ಎಚ್.ರೀನಿ ಈ ಸ್ಥಳನಾಮ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದವರಲ್ಲಿ ಪ್ರಮುಖರಾಗಿದ್ದು; ಜಗತ್ತಿನಲ್ಲಿ ಸ್ಥಳನಾಮಾಧ್ಯಯನ ಪ್ರಸ್ತುತತೆಯನ್ನು ಸಾರಿದವರಾಗಿದ್ದಾರೆ.

೧೯೨೪ರಲ್ಲಿ ಲಿಲಿಯನ್ ಲಿಂಡರ್ ಫಿಟ್ಜ್ ಪ್ಯಾಟ್ರಿಕ್ ಎಂಬುವರು ಡಾಕ್ಟರೇಟ್ ಪದವಿಗಾಗಿ ನೆಬ್ರಾಸ್ಕಾ ಸ್ಥಳನಾಮಗಳ ಬಗ್ಗೆ ಸಂಶೋಧನೆ ಕೈಗೊಂಡು ಮಹಾನಿಬಂಧವನ್ನು ಸಿದ್ಧಪಡಿಸಿ ಡಾಕ್ಟರೇಟ್

[illegible]

ಪದವಿ ಪಡೆದರು. ಇವರು ಸ್ಥಳನಾಮದಲ್ಲಿ ಪ್ರಪ್ರಥಮ ಡಾಕ್ಟರೇಟ್ ಪದವಿ ಪಡೆದ ಮಹಾನೀಯ. ಆನಂತರ ಅಲೆನ್‌ವಾಕರ್ ರೀಡ್ ಅವರು ಅಯೋಲಾ ಸ್ಥಳನಾಮಗಳ ಕುರಿತು, ರಾಬರ್ಟ್ ಎಲ್.ರ್‍ಯಾಮ್ಸೇ, ಮಿಸ್ಸೌರಿ ಸ್ಥಳನಾಮಗಳನ್ನು ಕುರಿತು ಸಂಶೋಧನೆ ನಡೆಸಿ ನಿಬಂಧಗಳನ್ನು ರಚಿಸಿದರು.

ಅಮೇರಿಕೆಯ ಸ್ಥಳನಾಮ ಪರಿವೀಕ್ಷಣೆಗಾಗಿ ೧೯೩೪ರಲ್ಲಿ ಹ್ಯಾರಿ ಮೋರ್ಗನ್ ಅಯರ್ಸ್ ಅವರ ನೇತೃತ್ವದಲ್ಲಿ 'ಅಮೇರಿಕಾ ಸ್ಥಳನಾಮ ಸಂಸ್ಥೆ'ಯನ್ನು ಹುಟ್ಟುಹಾಕುವ ಪ್ರಯತ್ನಕ್ಕೆ ದ್ವಿತೀಯ ಮಹಾಯುದ್ಧ ಕಾರಣವಾಗಿ ಅಡಚಣೆಯನ್ನುಂಟು ಮಾಡಿತು. ನಂತರ ೧೯೫೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮಾರನೇ ವರ್ಷ ಅಂದರೆ ೧೯೫೩ರಲ್ಲಿ 'ನಾಮಗಳು (Names)' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸಿತು. ಆ ಸಂಸ್ಥೆಯ ಧ್ಯೇಯೋದ್ದೇಶಗಳು ಇಂದಿನ ಯಾವುದೇ ಸ್ಥಳನಾಮ ಸಂಸ್ಥೆಗಳಿಗೆ ಆದರ್ಶಪ್ರಾಯವೆನಿಸಿವೆ.

೧. ಮನುಕುಲದ ಸಕಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಾಮಗಳ ಪ್ರಾಮುಖ್ಯತೆಯನ್ನು ಅಮೇರಿಕೆಯರ ಗಮನಕ್ಕೆ ತರುವುದು ಮಾತ್ರವಲ್ಲ, ಅವುಗಳ ಬಗ್ಗೆ ಅವರ ಆಸಕ್ತಿಯನ್ನು ಕೆರಳಿಸುವುದು.

೨. ನಾಮಗಳ ನಿಷ್ಪತ್ತಿ, ಉಚ್ಚಾರಣೆ ಮತ್ತು ತಿದ್ದುಪಡಿಗಳ ಬಗ್ಗೆ ಸರ್ಕಾರಿ ಕಚೇರಿಗಳಿಗೆ ಹಾಗೂ ಸಾರ್ವಜನಿಕ ಸಂಸ್ಥೆಗಳಿಗೆ ಸಲಹೆ ನೀಡುವುದು.

೩. ಎಲ್ಲ ಬಗೆಯ ಹೆಸರುಗಳ ಮೂಲ, ವಿಕಾಸ, ನಿಷ್ಪತ್ತಿ, ಅರ್ಥ ಮತ್ತು ಪ್ರಯೋಗಗಳನ್ನು ಕುರಿತು ಸಂಶೋಧನೆ ನಡೆಸಿ, ಫಲಿತಾಂಶಗಳನ್ನು ಪ್ರಕಟಿಸುವುದು.

೪. ಸ್ಥಳನಾಮಗಳಿಗೆ ಮೀಸಲಾದ ಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಮುದ್ರಿಸುವುದಲ್ಲದೆ, ಎಲ್ಲ ಹೆಸರುಗಳ ನಿಘಂಟುಗಳನ್ನು ತಯಾರಿಸುವುದು. ಅಂಥ ಪ್ರಕಟಣೆಗಳಿಗೆ ಸಹಾಯ, ಪ್ರೋತ್ಸಾಹ ಒದಗಿಸುವುದು.

ಈ ಸಂಸ್ಥೆಯು ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸಕಲ ಸ್ಥಳನಾಮಗಳ ಸರ್ವೇಕ್ಷಣೆ ನಡೆಸಿ, ವೈವಿಧ್ಯಮಯವೂ ಬಹೂಪಯುಕ್ತವೂ ಆದ ಸಾಮಾಗ್ರಿಯನ್ನು ಅಪಾರ ಪ್ರಮಾಣದಲ್ಲಿ ಸಂಗ್ರಹಿಸಿ ರಾಷ್ಟ್ರೀಯ ಸ್ಥಳನಾಮ ಕೇಂದ್ರದಲ್ಲಿ ರಕ್ಷಿಸಿಡಲಾಗಿದೆ. ಪ್ರತಿಯೊಂದು ಹೆಸರಿನ ಪೂರ್ವಚರಿತ್ರೆ, ಅವುಗಳ ಆಧುನಿಕ ರೂಪಗಳು, ಅವುಗಳ ಉಚ್ಚಾರಣಾ ಕ್ರಮ ಇವೇ ಮೊದಲಾದ ಹಲವಾರು ಮಾಹಿತಿಗಳು ಅಲ್ಲಿ ದೊರೆಯುತ್ತವೆ. ಅವುಗಳ ವಿಶ್ಲೇಷಣೆಗೆ ಆಧುನಿಕ ಸಲಕರಣೆಗಳಾದ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿಕೊಳ್ಳುವುದರಿಂದ ಸ್ಥಳನಾಮ ಅಧ್ಯಯನವನ್ನು ಒಂದು ಪರಿಪೂರ್ಣ ವಿಜ್ಞಾನವಾಗಿ ಬೆಳೆಸಿದ ಕೀರ್ತಿಗೆ ಅಮೇರಿಕಾ ಸ್ಥಳನಾಮ ಸಂಸ್ಥೆ ಭಾಜನವಾಗಿದೆ.

ಎ.ಎಚ್.ಸ್ಮಿತ್, ಇಕ್ಬಾಲ್, ಗಾರ್ಡಿನರ್ ಅಟ್ಲಿ ಸ್ಟ್ಯೂಟನ್, ಡೌಜತ್, ಅಡಾಲ್ಫ್ ಬ್ಯಾಚ್‌ನಂತಹ ವಿದ್ವಾಂಸರು ಸ್ಥಳನಾಮಶಾಸ್ತ್ರಕ್ಕೆ ಹೊಸಹೊಸ ಆಯಾಮಗಳನ್ನು ಕೊಟ್ಟರು.

ಸ್ಥಳನಾಮ ಸಂಶೋಧನೆಗೆ ಮತ್ತು ಅದರ ವೈಜ್ಞಾನಿಕ ಪ್ರಗತಿ ಮೊಟ್ಟಮೊದಲಿಗೆ ಚಾಲನೆ ದೊರೆತದ್ದು ಯುರೋಪ್ ಮತ್ತು ಅಮೇರಿಕಾಗಳಲ್ಲಿ ಎಂಬುದು ಸ್ಪಷ್ಟ. ಪ್ರಾಚೀನ ಇತಿಹಾಸದ ಪುನರ್ನಿರ್ಮಾಣವನ್ನು

ದೃಷ್ಟಿಯಲ್ಲಿಟ್ಟುಕೊಂಡು ಯುರೋಪಿನ ತಜ್ಞರು ಸಂಶೋಧನೆ ನಡೆಸಿದರು. ಅದಕ್ಕೆ ಹಳೆಯ ದಾಖಲೆಗಳು ಪೂರ್ಣವಾಗಿ ದೊರೆಯದಿದ್ದುದ್ದರಿಂದ ಅವರು ಭೂಗೋಳ-ಜನಾಂಗ-ವಿಜ್ಞಾನಗಳ ಆಧಾರದ ಮೇಲೆ ಸ್ಥಳನಾಮಗಳ ವ್ಯುತ್ಪತ್ತಿಯನ್ನು ಸಾಧಿಸಲು ಪ್ರಯತ್ನಿಸಿದರೆ; ಅಮೇರಿಕೆಯ ಇತಿಹಾಸ ಅರ್ವಾಚೀನವಾದುದ್ದರಿಂದ ಇತ್ತೀಚಿನ ಚಾರಿತ್ರಿಕ ದಾಖಲೆಗಳನ್ನು ಇಟ್ಟುಕೊಂಡು ಚಾರಿತ್ರಿಕ ವಿಧಾನದಲ್ಲಿ ಅಧ್ಯಯನ ಕೈಗೊಂಡರು.

ಸ್ಥಳನಾಮ ವಿಜ್ಞಾನಿಗಳ ಬೌದ್ಧಿಕ ಜಾಗೃತಿಗಾಗಿ ಹಾಗೂ ಅವರುಗಳೊಡನೆ ಅಭಿಪ್ರಾಯ ವಿನಿಮಯಕ್ಕೆ ಅವಕಾಶ ಒದಗಿಸಿಕೊಡುವುದಕ್ಕಾಗಿ ಬೆಲ್ಜಿಯಂನ ಲೂವೈನಿನಲ್ಲಿ ೧೯೪೯ರಲ್ಲಿ, ಯುನೆಸ್ಕೋ ಅಂಗ ಸಂಸ್ಥೆಯಾದ ಅಂತರ ರಾಷ್ಟ್ರೀಯ ಸ್ಥಳನಾಮ ವಿಜ್ಞಾನಿಗಳ ಸಮಿತಿಯನ್ನು ರಚಿಸಿ ಆ ಮೂಲಕ ಸ್ಥಳನಾಮ ಶಾಸ್ತ್ರದ ಪ್ರಗತಿಗಾಗಿ ಶ್ರಮಿಸುತ್ತಿದೆ.

೨.೨. ಭಾರತೀಯ ಸ್ಥಳನಾಮಾಧ್ಯಯನ ಚರಿತ್ರೆ

ಪ್ರಾಚೀನ ಭಾರತೀಯರಿಗೆ ಶಾಸ್ತ್ರೀಯವಾದ ಸ್ಥಳನಾಮ ಅಧ್ಯಯನದ ವಿಧಾನ ತಿಳಿದಿರಲಿಲ್ಲವೆಂದರೂ ಅವರಿಗೆ ಸ್ಥಳನಾಮಗಳ ಮಹತ್ವ ತಿಳಿದಿರಲಿಲ್ಲ ಎಂದು ಅರ್ಥವಲ್ಲ. ಅದಕ್ಕೆ ನಿದರ್ಶನವೆಂದರೆ ನಮ್ಮ ಜನಪದರು; ತಾವು ಬದುಕಿ ಬಾಳುತ್ತಿರುವ ನೆಲೆಗೆ ಒಂದು ಮಹತ್ವವನ್ನು ದೊರಕಿಸಿಕೊಡಬೇಕೆಂಬ ಹಂಬಲ ಜನಪದರಲ್ಲಿ ಇತ್ತು ಎಂಬುದಕ್ಕೆ ಪ್ರತಿಯೊಂದು ನೆಲೆಗೂ ಒಂದಲ್ಲ ಒಂದು ಸ್ಥಳಪುರಾಣವೋ, ಐತಿಹ್ಯವೋ ಇರುವುದು ಸಾಕ್ಷಿ. ಆ ಸ್ಥಳಪುರಾಣಗಳೋ ರಾಮಾಯಣ, ಮಹಾಭಾರತ, ಪುರಾಣ ವ್ಯಕ್ತಿಗಳೊಂದಿಗೆ, ಕತೆಯೊಂದಿಗೆ ತಳಕು ಹಾಕಿಕೊಂಡಿರುವುದು. ಐತಿಹ್ಯಗಳೋ ತನ್ನ ಹಿಂದಿನ ಪರಿಸರ ಐತಿಹಾಸಿಕ ಪುರುಷನೋ, ವೀರನೊಂದಿಗೆ ತಳಕು ಹಾಕಿಕೊಂಡಿರುವುದನ್ನು ಗಮನಿಸಿದರೆ ತಮ್ಮ ನೆಲೆಗೆ ಒಂದು ಮಹತ್ವ ಕೊಡುವುದೇ ಈ ಪೌರಾಣಿಕ ಮತ್ತು ಐತಿಹ್ಯಗಳ ಸೃಷ್ಟಿಗೆ ಕಾರಣ ಆಗಿದೆ. ಇನ್ನು ಬೃಹಸ್ಪತಿ 'ನಾಮಾಖಿಲಸ್ಯ ವ್ಯವಹಾರ ಹೇತು' ಎಂಬ ಹೇಳಿಕೆ ಕೊಡುತ್ತಾನೆ. ಎಲ್ಲ ವ್ಯವಹಾರಗಳಿಗೂ ಹೆಸರು ಮೂಲ ಕಾರಣವಾಗುತ್ತದೆ ಎಂಬುದು ಮೇಲಿನ ಹೇಳಿಕೆಯ ಅರ್ಥ. ಈ ಹೇಳಿಕೆಯ ಹಿನ್ನೆಲೆಯಲ್ಲಿ ನಾಮದ ಬಲದ ಅರಿವು ಅವನಿಗಿತ್ತು ಎಂಬುದು ವೇದ್ಯವಾಗುತ್ತದೆ.

ಋಗ್ವೇದದಲ್ಲಿ ಬರುವ 'ರಾಷ್ಟ್ರ' ಎಂಬ ಪದ ಸ್ಥಳನಾಮದ ವಿಚಾರದಲ್ಲಿ ಬಹುಮುಖ್ಯವಾದದ್ದು. ರಾಷ್ಟ್ರ ಪದಕ್ಕೆ ಸಮಾನಾರ್ಥವಾಗಿ 'ಜನಪದ' ಮತ್ತು 'ವಿಷಯ' ಎಂಬ ಪದಗಳ ಬಳಕೆಯಾಗುತ್ತಿದ್ದವು. ಬ್ರಾಹ್ಮಣಕಗಳು ರಚನೆಯಾದ ಕಾಲದಲ್ಲಿ 'ಗ್ರಾಮ' ಎಂಬ ಪದ ಬಳಕೆಯ ಅರ್ಥವೆಂದರೆ ಒಂದೆಡೆ ನೆಲೆನಿಂತ ಜನ ಸಮುದಾಯ ಎನ್ನುತ್ತಿದ್ದರು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಜನಪದವೆಂದರೆ ಒಂದು ನಿರ್ದಿಷ್ಟ ಮಂಡಲಿಗಳ ಅಧೀನ ಪ್ರದೇಶ ಎಂಬುದು ಅವನ ಅಭಿಪ್ರಾಯವಾಗಿತ್ತು.

"ಸಂಸ್ಕೃತದ ಯಾಸ್ಕ, ಪಾಣಿನಿ ಮುಂತಾದ ಮಹಾವಿದ್ವಾಂಸರು ಭಾಷೆಯ ಪ್ರತಿಯೊಂದು ಪದಕ್ಕೂ ನಿರುಕ್ತ ಹೇಳುವ ಸಂಕಲ್ಪ ಹೊಂದಿದ್ದರಷ್ಟೇ. ಅವರು ಭೌಗೋಳಿಕ ನಾಮಗಳಿಗೂ ಅರ್ಥ ಹೇಳುವ ಪರಿಪಾಟವಿಟ್ಟುಕೊಂಡಿದ್ದರು. ಪಾಣಿನಿಯಂತು ಅನೇಕ ಸ್ಥಳನಾಮಗಳಿಗೆ ನಿರುಕ್ತ ಹೇಳಿದ್ದುಂಟು. ಅವನ

ಕಾಲದಲ್ಲಿ ಕಾಡು, ಪೊದೆ, ಕಣಿವೆ, ನದಿಬೆಟ್ಟ, ಬಂಡೆ ಮೊದಲಾದ ನೈಸರ್ಗಿಕ ಕೋಟೆಗಳೇ ಗ್ರಾಮಗಳ ಮೇರೆಗಳಾಗಿದ್ದವು. ರೈತರ ಮನೆಗಳ ಚಾವಣಿಗಳಿಗೆ ಹುಲ್ಲುಗರಿ ವಡಿಕೆಗಳನ್ನು ಬಳಸಲಾಗುತ್ತಿತ್ತು. ಒಂದೊಂದು ವೃತ್ತಿಯ ಜನ ಒಂದೊಂದು ಕಡೆ ನೆಲೆಸುತ್ತಿದ್ದರು. ಊರುಗಳ ಹೆಸರು ಆಕಸ್ಮಿಕವಲ್ಲ; ಸಾಮಾಜಿಕ, ಚಾರಿತ್ರಿಕ ಸ್ಥಿಗತಿಗಳ ಪರಿಣಾಮವಾಗಿ ಉದ್ಭವಗೊಂಡ ಅರ್ಥಘಟಕಗಳೆಂಬುದು ಪಾಣಿನಿಯ ಅಭಿಪ್ರಾಯವಾಗಿತ್ತು"[೨] ಹೀಗೆ ಸ್ಥಳ ಪುರಾಣಗಳೇನೋ ಹುಟ್ಟಿಕೊಂಡಿವೆ. ಇವು ಆ ಸ್ಥಳಗಳನ್ನು ವೈಭವೀಕರಿಸುವ ಕಟ್ಟುಕತೆಗಳಾಗಿ, ದಂತಕಥೆಗಳಾಗಿವೆ. ಇಲ್ಲವೇ ಸ್ಥಳನಾಮಗಳನ್ನು ದೇಶೀಯತೆಯಿಂದ ಬಿಡಿಸಿ ಸಂಸ್ಕೃತೀಕರಣಗೊಳಿಸಿ ಅವುಗಳಿಗೆ ಯಾವುದೋ ದೇವತೆ ಇಲ್ಲವೇ ಋಷಿಯ ಮೂಲಕ್ಕೆ ಅಂಟಿಸಿ ಬಿಡುವ ತಪ್ಪು ವಿವರಣೆಗಳಾಗಿವೆ. ಆದುದ್ದರಿಂದ ಸ್ಥಳನಾಮಗಳು ಇಂದು ವಿಫುಲ ಸಂಖ್ಯೆಯಲ್ಲಿದ್ದರೂ ಸ್ಥಳಪುರಾಣಗಳಾಗಿ ಶಾಸ್ತ್ರಜ್ಞನಿಗೆ ಸಿಗುತ್ತಿದ್ದರೂ ನಿರಾಸೆ ಹುಟ್ಟಿಸುತ್ತಿವೆ.

ನಮ್ಮ ದೇಶದಲ್ಲಿ ಸ್ಥಳನಾಮಶಾಸ್ತ್ರದ ಅಧ್ಯಯನ ಪ್ರಾರಂಭವಾದದ್ದು ಇತ್ತೀಚಿಗೆ. ಎಲ್ಲ ಆಧುನಿಕ ಶಾಸ್ತ್ರಗಳೆಲ್ಲವೂ ಪಶ್ಚಿಮದ ಪ್ರಭಾವದಿಂದಲೇ ಆರಂಭಗೊಂಡಂತೆ, ಇದೂ ಕೂಡ ಎಂದರೆ ತಪ್ಪಾಗಲಾರದು. ಭಾರತೀಯ ಸ್ಥಳನಾಮಗಳನ್ನು ಕುರಿತಂತೆ ಅಧ್ಯಯನ ನಡೆಸಿದವರಲ್ಲಿ ವಿದೇಶಿ ವಿದ್ವಾಂಸರು ಮೊದಲಿಗರು. ಇವರಲ್ಲಿ ಪ್ರಮುಖರಾದವರೆಂದರೆ ಎಚ್.ಬ್ಲಾಕ್‌ಮನ್. ಕರ್ನಲ್ ಆರ್.ಬಿ.ಬ್ರಾನ್‌ಫಿಲ್, ಆರ್.ಎಸ್. ಫ್ಲೇಟ್, ಜೆ.ಎಫ್.ಫ್ಲೀಟ್ ಮೊದಲಾದವರು.

ದೇಶೀಯ ವಿದ್ವಾಂಸರೂ, ಪೂನಾ ದಕ್ಕನ್ ಕಾಲೇಜಿನ ಪುರಾತತ್ವ ಇಲಾಖೆಯ ಅಧ್ಯಕ್ಷರೂ ಆದ ಹೆಚ್.ಡಿ. ಸಂಕಾಲಿಯಾ ಅವರು ಸ್ಥಳನಾಮ ಅಧ್ಯಯನಕ್ಕೆ ಭದ್ರ ಬುನಾದಿಯನ್ನು ಹಾಕಿದರು. ಸ್ಥಳನಾಮಗಳ ಪೂರ್ವಪರ ಪ್ರತ್ಯಯಗಳನ್ನು ಕೂಲಂಕುಷ ಅಧ್ಯಯನ ಮಾಡಿ ಧಾರ್ಮಿಕ, ಭೌಗೋಳಿಕ, ಸಾಂಸ್ಕೃತಿಕ ಮತ್ತು ಭಾಷಿಕ ಅಂಶಗಳ ಮೂಲಕ ವಿವರಣೆ ಸಾಧ್ಯವೆಂಬುದನ್ನು ತೋರಿಸಿ ಕೊಟ್ಟರು. ಸಂಕಾಲಿಯಾ ಅವರಿಗಿಂತಲೂ ಮೊದಲೇ ಭಾರತದಲ್ಲಿ ಸ್ಥಳನಾಮಗಳ ಅಧ್ಯಯನಗಳ ಕೆಲಸವು ನಡೆದಿದೆ. ಅವುಗಳ ವಿವರ ಇಂತಿದೆ.

ಸಂಸ್ಕೃತದಲ್ಲಿ ಅಪ್ಪಯ್ಯದೀಕ್ಷಿತರು ತಮ್ಮ 'ನಾಮಸಂಗ್ರಹಮಾಲಾ'ದಲ್ಲಿ ಗ್ರಾಮಗಳಲ್ಲಿ ದೊರೆಯುವ ಸ್ಥಳಪುರಾಣಗಳನ್ನು ಸಂಗ್ರಹಿಸಿ, ಅನೇಕ ಹೆಸರುಗಳ ವಿವರಣೆಯನ್ನು ನೀಡಿದ್ದಾರೆ. ೧೮೭೩ರಲ್ಲಿ ಎಚ್.ಬಾಲಲೋಚನ ಅವರ 'Contribution of place names to the geography and history of Bengal' ಎಂಬ ಲೇಖನದಲ್ಲಿ ಸ್ಥಳಮಾಧ್ಯಯನದ ಸಾಧ್ಯತೆಗಳನ್ನು ಚರ್ಚಿಸಿದ್ದಾರೆ. ೧೮೭೨ರಲ್ಲಿ ಡಾ.ಗುಂಡರ್ಟ್‌ರು 'ಮಲೆಯಾಳಂ ಶಬ್ದ ಕೋಶ'ದಲ್ಲಿ ಕೇರಳದ ಹಲವು ಸ್ಥಳನಾಮಗಳ ಕುರಿತು ಪ್ರಸ್ತಾಪಿಸಿದ್ದಾರೆ. ೧೮೩೪ರಲ್ಲಿ 'Dictionary in English and Bengali' ಎಂಬ ಸ್ಥಳನಾಮ ಕೋಶವನ್ನು ರಾಮ್ ಕೋಮಲ್ ಸೇನ್ ಸಿದ್ಧಪಡಿಸಿದ್ದಾರೆ.

೧೮೮೫ರಲ್ಲಿ ಪ್ರಕಟವಾದ 'ಮದ್ರಾಸಿನ ಆಡಳಿತಕೋಶ'ದಲ್ಲಿ ಕೆಲವು ಸ್ಥಳನಾಮಗಳ ವ್ಯುತ್ಪತ್ತಿಯನ್ನು ನಿರೂಪಿಸಿ, ಸ್ಥಳನಾಮಗಳ ಉತ್ತರಾಂಶಗಳ ಬಗ್ಗೆ ವಿಚಾರ ಮಾಡಲಾಗಿದೆ. ೧೯೦೨ರಲ್ಲಿ ಕೆ.ಪಿ.ಪದ್ಮನಾಭ ಮೆನನ್ ಅವರು ಮಲಬಾರ್ ಸ್ಥಳನಾಮಗಳನ್ನು ಕುರಿತ ಲೇಖನದಲ್ಲಿ ಪ್ರಚಲಿತ ದಂತಕಥೆ, ಸಂಪ್ರದಾಯಗಳ ಆಧಾರದಡಿಯಲ್ಲಿ ಸ್ಥಳನಾಮಗಳನ್ನು ವಿವರಿಸಿದ್ದಾರೆ. ವೈಜ್ಞಾನಿಕವಾದ ಮಾದರಿಯನ್ನು ಅನುಸರಿಸದೇ ಇರುವುದನ್ನು ಕಾಣಬಹುದು.

ರೆವರೆಂಟ್ ಫೆರಾರ್ಡ್ ಹಾನ್‌ರವರು ೧೯೦೩ರಲ್ಲಿ "Dravidian and Kolorian place names" ಎಂಬ ಲೇಖನ ಮಹತ್ವಪೂರ್ಣವಾದದ್ದು. ತಮಿಳುನಾಡಿನ ಎಸ್.ಜ್ಞಾನಪ್ರಕಾಶ್ ೧೯೧೬ರಲ್ಲಿ ಶ್ರೀಲಂಕಾದಲ್ಲಿ ತಮಿಳು ಭಾಷಿಕರು ನೆಲೆಸಿರುವ ನೆಲೆಗಳ ಮೇಲೆ ಬಂದ ಲೇಖನ "Sinhalese Place names in jaffna Peninsulla" ಹಾಗೂ ೧೯೧೭ರಲ್ಲಿ ಬಿ.ಹಾರ್ಸ್‌ಬರ್ಗ್‌ರವರ "Place names in Juffna" ಪ್ರಮುಖವಾದವು.

"The origin and development of Bangali Language" ಕೃತಿಯಲ್ಲಿ ಐದುಭಾಗಗಳಾಗಿ ಸ್ಥಳನಾಮಗಳನ್ನು ವರ್ಗೀಕರಿಸಿ, ಭಾರತದಲ್ಲಿ ಸ್ಥಳನಾಮಗಳ ಅಧ್ಯಯನದ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. (೧೯೨೬). ೧೯೩೧ರಲ್ಲಿ ಹಿರಾಲಾಲ್ 'Indian Antiquary"ಯಲ್ಲಿ ಸ್ಥಳನಾಮಗಳನ್ನು ಮೂರು ರೀತಿಯ ವರ್ಗೀಕರಣ ಮಾಡಿದ್ದಾರೆ. ಹಾಗೂ ವಿ.ರಾಮವಿಶರೋಡಿಯವರು "Journal of Madras Geographical Association" ಲೇಖನದಲ್ಲಿ ಸ್ಥಳನಾಮಗಳನ್ನು ತುಂಬಾ ವಿವರವಾಗಿ ಚರ್ಚಿಸಿದ್ದಾರೆ.

ತೆಲುಗುಭಾಷೆಯಲ್ಲಿ ಸ್ಥಳನಾಮ ಅಧ್ಯಯನ ಕಾರ್ಯ ಕೈಗೊಂಡವರಲ್ಲಿ ಡಾ.ಚಿಲಕೂರಿ ನಾರಾಯಣ ರಾವ್ ಒಬ್ಬರು. ಇವರು ೧೯೩೫ರಲ್ಲಿ 'A study of place names of Ananthapuram District" ಲೇಖನದಲ್ಲಿ ಸ್ಥಳನಾಮಗಳಿಂದ ಶಬ್ದ ವ್ಯುತ್ಪತ್ತಿ ನಿರ್ಣಯಿಸುವಲ್ಲಿ, ಭೌಗೋಳಿಕ ಲಕ್ಷಣ ತಿಳಿಸುವಲ್ಲಿ ನಾಗರೀಕತೆಯ ಇತಿಹಾಸದ ವ್ಯಾಪ್ತಿಯನ್ನು ತಿಳಿಸುವಲ್ಲಿ ಸಹಾಯಕ ಎಂದು ಗ್ರಾಮನಾಮ ಪರಿಶೋಧನೆಯ ಮಹತ್ವವನ್ನು ತಿಳಿಸಿಕೊಟ್ಟರು. ಹಾಗೂ ದ್ರಾವಿಡ ಭಾಷೆಗಳ ಮೇಲಾಗಿರುವ ಸಂಸ್ಕೃತದ ಪ್ರಭಾವ ಗುರುತಿಸಿದರು. ಸ್ಥಳನಾಮಗಳನ್ನು ಹತ್ತೊಂಬತ್ತು ಬಗೆಯಾಗಿ ವರ್ಗೀಕರಿಸಿ, ಐತಿಹಾಸಿಕ ಮತ್ತು ಭಾಷಾ ವೈಜ್ಞಾನಿಕ ವಿಧಾನಗಳಿಂದ ಸ್ಥಳನಾಮಗಳ ಅಧ್ಯಯನ ಮಾಡಬೇಕೆನ್ನುತ್ತಾರೆ.

ರಾವ್‌ಬಹದ್ದೂರ್ ರಾಮಚಂದ್ರ ಚೆಟ್ಟಿಯಾರ್ ಅವರು "Place names of selam district' ಎಂಬ ಲೇಖನದಲ್ಲಿ ಸ್ಥಳನಾಮಗಳನ್ನು ೬ ರೀತಿಯಲ್ಲಿ ವರ್ಗೀಕರಿಸಿದ್ದಾರೆ. ೧೯೩೬ರಲ್ಲಿ The original name of Mahabalipuram ಹಾಗೂ ೧೯೩೮ರಲ್ಲಿ Place names if south Canara District ಮತ್ತು ೧೯೪೯ರಲ್ಲಿ Place names is Tamil nadu ಎಂಬ ವಿಚಾರ ಪೂರ್ಣವಾದ ಲೇಖನಗಳನ್ನು ಬರೆದಿದ್ದಾರೆ. ಇವರು ಮುಖ್ಯವಾಗಿ ಭೌಗೋಳಿಕ ಅಂಶಗಳಿಗೆ ಕೇಂದ್ರೀಕರಿಸಿಕೊಂಡು ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಭೌಗೋಳಿಕ ಅಂಶಗಳ ನಂತರ ಐತಿಹಾಸಿಕ ಆಧಾರಗಳಿಂದ ಸ್ಥಳನಾಮಗಳನ್ನು ಅಧ್ಯಯನ ಮಾಡಬೇಕೆನ್ನುತ್ತಾರೆ.

೧೯೩೭ರಲ್ಲಿ ಆಂಧ್ರಪ್ರದೇಶದ ಚಿಲಕೂರಿ ನಾರಾಯಣರಾಯರು 'ಆಂಧ್ರ ಭಾಷಾ ಚರಿತ್ರೆ'ಯಲ್ಲಿ ಸ್ಥಳನಾಮ ಅಧ್ಯಯನ ಕಾರ್ಯದ ಸಮಸ್ಯೆಗಳು ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ಕೆ.ಅಚ್ಯುತ ಮೆನನ್ ಅವರು ೧೯೪೩ರಲ್ಲಿ 'ಕೊಚ್ಚಿಯಲೆ ಸ್ಥೂಲ್ ನಾಮ್‌ಗಳ್' ಎಂಬ ಗ್ರಂಥವನ್ನು ಪ್ರಕಟಿಸಿದರು. ಕಾಳಿದಾಸನ ರಘುವಂಶವನ್ನು ಆಧಾರವಾಗಿಟ್ಟುಕೊಂಡು ರಘು ಮಹಾರಾಜನು ದಿಗ್ವಿಜಯ ಕೈಗೊಂಡ ಸ್ಥಳಗಳ ಆಧಾರದ ಮೇಲೆ ಪ್ರಾಚೀನ ಭಾರತದ ಗಡಿರೇಖೆಗಳನ್ನು ಗುರುತಿಸುವ ಪ್ರಯತ್ನ ಮಾಡಿ; ಇಂದಿನ ಬಲೂಚಿಸ್ಥಾನ ಮತ್ತು ಅಫ್ಘಾನಿಸ್ಥಾನ ಪ್ರಾಚೀನ ಭಾರತದ ಭಾಗವಾಗಿದ್ದವು ಎಂದು ಸ್ಪಷ್ಟಪಡಿಸಿದ್ದಾರೆ.

೧೯೪೪ರಲ್ಲಿ ಟಿ.ಲಕ್ಷ್ಮಣಪಿಳ್ಳೆ ಮತ್ತು ೧೯೫೭ರಲ್ಲಿ ಟಿ.ಕೆ.ಜೋಸೆಫ್ ಅವರುಗಳು ಕೇರಳ ಸ್ಥಳನಾಮದಲ್ಲಿ ಭೌಗೋಳಿಕತೆಯ ಅವಶ್ಯಕತೆ ಮತ್ತು ತೌಲನಿಕ ಅಧ್ಯಯನದ ಅವಶ್ಯಕತೆ ಎಂಬ ಲೇಖನಗಳನ್ನು ಪ್ರಕಟಿಸಿದರು. ಪ್ರೊ.ಎಲಂಕುಲಂ ಕುಂಜನ್‌ಪಿಳ್ಳೈ, ಪ್ರೊ.ತಿರನಲ್ಲೂರ್ ಕರುಣಾಕರ್ ಹಾಗೂ ಇತರೆ ವಿದ್ವಾಂಸರು ಕೇರಳದ ಇತಿಹಾಸದ ಪುನರ್ ರಚನೆಯಲ್ಲಿ ಸ್ಥಳ ನಿರ್ಮಾಣದ ಮಹತ್ವವನ್ನು ಕುರಿತು ಲೇಖನಗಳನ್ನು ಬರೆದರು. ವಿ.ವಿ.ಕೆ.ವಲತ್ ಅವರು, ೧೯೯೧ ಹಾಗೂ ೧೯೭೪ರಲ್ಲಿ ಕೇರಳ ಸ್ಥಳನಾಮ ಕುರಿತು ಎಂದು ಅತ್ಯುತ್ತಮ ಗ್ರಂಥಗಳನ್ನು ಪ್ರಕಟಿಸಿದರು. ಟಿ.ಬಾಲಕೃಷ್ಣನ್ ನಾಯಕ್, ಎನ್.ವಿ.ಕೃಷ್ಣ ವಾರಿಯರ್, ಎನ್.ಆರ್.ಗೋಪಿನಾಥ್ ಪಿಳ್ಳೈ, ಎಂ.ಆರ್.ರಾಘವ ವಾರಿಯರ್, ಎಂ.ಜಿ.ಎನ್.ನಾರಾಯ ಣನ್, ಕೇಶ್ವನ್, ಡಾ.ಪುದುಚೇರಿ ರಾಮಚಂದ್ರನ್ ಮೊದಲಾದವರು ಸ್ಥಳನಾಮ ಕುರಿತು ಅತ್ಯುತ್ತಮ ಬರಹಗಳನ್ನು ಬರೆದಿದುದ್ದರಿಂದ ೭೦ರ ದಶಕದ ಕೇರಳದಲ್ಲಿ ಸ್ಥಳನಾಮ ಸಂಶೋಧನೆ ಒಂದು ಹೊಸ ಶಾಖೆಯಾಗಿ ಸಂಶೋಧನಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿತು. ಅದೇ ರೀತಿ ಡಾ.ಕೆ.ಎಂ.ಜಾರ್ಜ್ "Place name of southern India and A Generic approach to toponymy ಲೇಖನಗಳು ಈ ಕ್ಷೇತ್ರಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಳಾಗಿವೆ.

ನೆರೆಯ ಆಂಧ್ರಪ್ರದೇಶದಲ್ಲೂ ಕೂಡ ಸ್ಥಳನಾಮ ಕುರಿತು ಅಧ್ಯಯನ ಸಂಗೋಪಸಾಂಗವಾಗಿ ನಡೆದವು. ಎಂ.ಸೋಮಯಾಜಲು ೧೯೪೫ರಲ್ಲಿ 'ಜನ ಪದಮುಲು', ೧೯೫೭ರಲ್ಲಿ ಶ್ರೀಮತಿ ಎಸ್.ಕೃಷ್ಣಕುಮಾರಿ 'ತೆಲುಗು ಊರ್ಲು ಪೇರ್ಲು', ೧೯೯೧ರಲ್ಲಿ ಟಿ.ಡೋಣಪ್ಪ 'ಪಚ್ಚಣಾರು ಪೇರ್ಲು' ಹಾಗೂ 'ಪೂರ್ವೋತ್ತರಲು' ಲೇಖನಗಳ ಮೂಲಕ ಸ್ಥಳನಾಮ ಅಧ್ಯಯನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಕ್ಷೇತ್ರ ವಿಸ್ತರಿಸಲು ಕಾರಣೀಭೂತರಾಗಿದ್ದಾರೆ.

೧೯೭೧ರಲ್ಲಿ ಡಾ.ಬಿ.ರಾಧಾಕೃಷ್ಣಮೂರ್ತಿ, 'Early Telugu inscription' ಲೇಖನ ಪ್ರಕಟಿಸಿ ಅದರಲ್ಲಿ ತೆಲುಗು ಸ್ಥಳನಾಮಗಳ ಮೂಲ ನಿಷ್ಪತ್ತಿ ಕುರಿತು ಚರ್ಚಿಸಿದ್ದಾರೆ. ಇವರ ಪಿಎಚ್.ಡಿ. ಮಹಾಪ್ರಬಂಧವಾದ "A Historical and camparative grammer of early telugu Inscription" (1964) ನಲ್ಲಿ ಐತಿಹಾಸಿಕ ಸ್ಥಳನಾಮಗಳ ಬಗ್ಗೆ ಹೆಚ್ಚು ಒತ್ತುನೀಡಿ ಚರ್ಚಿಸಿದ್ದಾರೆ.

ಭಾಷಾಶಾಸ್ತ್ರದ ದೃಷ್ಟಿಯಿಂದ ತಮಿಳು ಸ್ಥಳನಾಮಗಳ ಕ್ಷೇತ್ರದಲ್ಲಿ ಗುರುತಿಸಿಕೊಂಡ ವಿದ್ವಾಂಸರಲ್ಲಿ ಆರ್.ಪಿ.ಸೇತುಪಿಳ್ಳೆಯವರಿಗೆ ಅಗ್ರಸ್ಥಾನ ಸಲ್ಲುತ್ತದೆ. "Tomil Kamurum Perum" ಹಾಗೂ "ಸಂಗಂ ಸಾಹಿತ್ಯದ ಕವಿಗಳು ಮತ್ತು ಸ್ಥಳಗಳು" ಎಂಬ ಲೇಖನ ಬಹುಮುಖ್ಯವಾದವು. ೧೯೫೬ರಲ್ಲಿ ಸ್ಥಳನಾಮ ಕುರಿತಾದ ಅವರ ಮಹಾಗ್ರಂಥ 'ತಮಿಟಗಂ ಊರುಂ ಪೇರುಂ' ಅಚ್ಚಾಯಿತು. ಉತ್ತರಾಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ಥಳನಾಮಗಳನ್ನು ಹನ್ನೊಂದು ವಿಧವಾಗಿ ವರ್ಗೀಕರಿಸಿದ್ದಾರೆ. ಕನ್ನಡ, ತೆಲುಗು, ಮಲಯಾಳಂ, ತುಳು ಮೊದಲಾದ ದ್ರಾವಿಡ ಭಾಷಾ ವೃಂದದ ಸ್ಥಳನಾಮಗಳನ್ನು ಗಮನದಲ್ಲಿಟ್ಟುಕೊಂಡು ತೌಲನಿಕ ಅಧ್ಯಯನ ನಡೆಸಿದ್ದಾರೆ. ಇವರ ಮಾರ್ಗದರ್ಶನದಲ್ಲಿಯೇ "History place of Ancient Tamilnadu" ಎಂಬ ಮಹಾನಿಬಂಧಕ್ಕೆ ಟಿ.ಎ.ಚೊಕ್ಕಲಿಂಗಂ ಎಂಲಿಟ್ ಪದವಿ ಗಳಿಸಿದರೆ; ಡಾ.ಎಸ್.ವಿ.ಐ.ಸುಬ್ರಮಣ್ಯಂ ಅವರ ಮಾರ್ಗದರ್ಶನದಲ್ಲಿ ಡಾ.ಎಸ್.ಜ್ಞಾನಿ ಮುತ್ತು ೧೯೭೨ರಲ್ಲಿ Place names of Kenyakumari District ವಿಷಯದಡಿಯಲ್ಲಿ ಕೇರಳ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದುಕೊಂಡರು.

ಇದರಲ್ಲಿ ತಿರುವಾಂಕೂರು ಜಿಲ್ಲೆಯ ಸುಮಾರು-೧೨೦೦ ಸ್ಥಳನಾಮಗಳನ್ನು ಕನ್ಯಾಕುಮಾರಿ ಜಿಲ್ಲೆಯ ಸ್ಥಳನಾಮಗಳೊಡನೆ ಹೋಲಿಸಿ ಸಾಮ್ಯ ವೈಷಮ್ಯಗಳನ್ನು ಗುರುತಿಸಿ, ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸಿ ಕೊಟ್ಟಿದ್ದಾರೆ. ಇವರು ಸ್ಥಳನಾಮಗಳನ್ನು ಮೂರು ಬಗೆಯಲ್ಲಿ ವರ್ಗೀಕರಿಸಿದ್ದಾರೆ.

ಡಾ. ಸುಬ್ಬುರಾಯಲು ಅವರು 'Political geography of the Chola Country' (1973) ಮಹಾ ನಿಬಂಧಕ್ಕೆ ಪಿಎಚ್.ಡಿ. ಪಡೆದರು. ಇದರಲ್ಲಿ ಕ್ರಿ.ಶ.೮೦೦ ರಿಂದ ೧೩೦೦ರ ವರೆಗಿನ ಶಾಸನೋಕ್ತ ಸ್ಥಳನಾಮ ಘಟಕಗಳ ಅಧ್ಯಯನವನ್ನು ಗಮನಿಸಬಹುದು. ಇದೇ ರೀತಿಯಲ್ಲಿ ಕೆ.ಎಲ್.ವೈದ್ಯನಾಥನ್ ಅವರು "The Ancient geography of the Konga Country" ನಿಬಂಧ ಗಮನಾರ್ಹವಾದುದಾಗಿದೆ.

ಅಷ್ಟೇ ಅಲ್ಲದೆ ತಮಿಳುನಾಡಿನ ವಿದ್ವಾಂಸರಾದ ಎಂ.ಭಾಸ್ಕರ್ ತೊಂಡೈಮನ್, ಎಸ್.ಸುಬ್ಬಯ್ಯ, ಡಾ.ಎಸ್.ಸುಬ್ಬುರೆಡ್ಡಿಯಾರ್, ಎ.ರಾಜೇಂದ್ರನ್ ಅವರು ತಮಿಳುನಾಡಿನ ಪುಣ್ಯಕ್ಷೇತ್ರಗಳ, ಐತಿಹಾಸಿಕ ಮತ್ತು ಧಾರ್ಮಿಕ ಸ್ಥಳಗಳ ಮಹತ್ವವನ್ನು ಗುರುತಿಸುವ ಕಾರ್ಯ ಮಾಡಿದ್ದಾರೆ.

ಕೇರಳ ವಿಶ್ವವಿದ್ಯಾಲಯದ ತಮಿಳು ವಿಭಾಗದ ಅಧ್ಯಾಪಕರಾದ ಕೆ.ನಚ್ಚಿಮುತ್ತು ಅವರು ಕೊಯಮತ್ತೂರು ಜಿಲ್ಲೆಯ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ೧೯೭೧ರಲ್ಲಿ 'ಪಾಳೆಯಂ' ಎಂಬ ದ್ವಿತೀಯಾಂಶದ ನಿಷ್ಪತ್ತಿಯ ಬಗೆಗೆ ಒಂದು ಪ್ರೌಢ ನಿಬಂಧವನ್ನು ಪ್ರಕಟಿಸಿದ್ದಾರೆ. ಹಾಗೂ "Methodology is place names studies ಗ್ರಂಥವನ್ನು ಹೊರ ತಂದಿದ್ದಾರೆ.

೧೯೭೬ರಲ್ಲಿ ಕೇತು ವಿಶ್ವನಾಥರೆಡ್ಡಿಯವರು ಪ್ರಕಟಿಸಿರುವ ಕಡಪ ಜಿಲ್ಲೆಯ ಸ್ಥಳನಾಮ ಕುರಿತ ಮಹಾನಿಬಂಧವು, ಭಾರತೀಯ ಸ್ಥಳನಾಮ ಸಂಶೋಧಕರಿಗೆ ಕ್ಷೇತ್ರಕಾರ್ಯ, ನಾಮ ಸಂಗ್ರಹ, ವಿಶ್ಲೇಷಣೆ, ಕೋಶ ಸಿದ್ಧತೆ ಮೊದಲಾದವುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಕೊಡುವ ಅತ್ಯುತ್ತಮ ಗ್ರಂಥವಾಗಿದೆ.

ಸ್ಥಳನಾಮ ತಜ್ಞರ ಆಸಕ್ತಿಯನ್ನು ಕೆರಳಿಸಿ, ಸಂಶೋಧನಾಧ್ಯಯನಗಳಿಗೆ ಸರ್ವ ರೀತಿಯಿಂದಲೂ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ೧೯೭೮ರಲ್ಲಿ ಮೈಸೂರಿನಲ್ಲಿ 'ಭಾರತೀಯ ಸ್ಥಳನಾಮ ಸಂಸ್ಥೆ'ಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆ ಭೌಗೋಳಿಕ ಹಿನ್ನೆಲೆಯಲ್ಲಿ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಸ್ಥಳನಾಮ ಕುರಿತ ಅನೇಕ ಲೇಖನಗಳನ್ನು 'Studies in Indian place Names' ಎಂಬ ತನ್ನ ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇದೇ ಹೆಸರಿನ ಹದಿನಾಲ್ಕು ಸಂಪುಟಗಳನ್ನು ಹೊರತಂದಿದ್ದು ಸ್ಥಳನಾಮ ಸಂಶೋಧಕರಿಗೆ ಆಕರ ಗ್ರಂಥಗಳಾಗಿ ಸಂಪನ್ಮೂಲವನ್ನು ಕೊಡುತ್ತಿವೆ. ಜೊತೆಗೆ ವಾರ್ಷಿಕ ಅಧಿವೇಶನ ನಡೆಸಿ, ಅಲ್ಲಿ ಸ್ಥಳನಾಮ ಗೋಷ್ಠಿಗಳನ್ನು ಏರ್ಪಡಿಸುತ್ತಿದೆ. ಇದುವರೆಗೂ ಹದಿನೆಂಟು ರಾಷ್ಟ್ರೀಯ ಸಮ್ಮೇಳನಗಳನ್ನು (೧೯೯೯) ನಡೆಸಿದೆ.

೧೯೮೭ರಲ್ಲಿ ಪಿ.ರಾಮಚಂದ್ರನ್ ಮತ್ತು ಡಾ.ಕೆ.ನಾಚಿಮುತ್ತು ಅವರು "Perspectives is Indian Place names" ಎಂಬ ಕೃತಿಯನ್ನು ಪ್ರಕಟಿಸಿ ಭಾರತದಲ್ಲಿ ಸದ್ಯ ನಡೆಯುತ್ತಿರುವ ಸ್ಥಳನಾಮಾಧ್ಯಯನಗಳ ಸಮಗ್ರ ಆಲೋಚನೆ ಮತ್ತು ಸಂಶೋಧನಾ ವಿಧಾನಗಳನ್ನು ತಿಳಿಸಿಕೊಟ್ಟಿದ್ದಾರೆ.

೨.೩. ಕನ್ನಡ ಸ್ಥಳನಾಮಾಧ್ಯಯನದ ಚರಿತ್ರೆ

ಭಾರತದಲ್ಲಿ ಸ್ಥಳನಾಮ ಅಧ್ಯಯನವು ಒಂದು ಹೊಸದಾದ ಜ್ಞಾನಶಾಖೆಯಾಗಿ ಐದಾರು ದಶಕಗಳಿಂದಲೂ ಅಧ್ಯಯನಕ್ಕೆ ಒಳಪಡುತ್ತಲಿದೆ. ಅದರಂತೆಯೇ ಕರ್ನಾಟಕದ ಸ್ಥಳನಾಮ ಅಧ್ಯಯನಕ್ಕೂ ಐದಾರು ದಶಕಗಳ ಇತಿಹಾಸವಿರುವುದುಂಟು. ಇದಕ್ಕಿಂತ ಮೊದಲು; ಸ್ಥಳನಾಮಗಳು ಅಧ್ಯಯನಕ್ಕೆ ಯೋಗ್ಯವಾದ ವಸ್ತುವಲ್ಲ ಎಂಬ ಶಂಕೆ ಮೂಡಿರಬಹುದು. ನಂತರದಲ್ಲಿ ಪಾಶ್ಚಿಮಾತ್ಯರ ಪ್ರೇರಣೆಗೆ ಒಳಗಾಗಿ ಇದನ್ನು ಸಹ ಉಳಿದ ಜ್ಞಾನ ಶಿಸ್ತುಗಳಂತೆ ಅಧ್ಯಯನ ಮಾಡಲು ತೊಡಗಿದರು. ಇದರಿಂದ ಕನ್ನಡದಲ್ಲಿ ಸ್ಥಳನಾಮಗಳ ಬಗೆಗೆ ಆರಂಭದಲ್ಲಿ ಶಾಸ್ತ್ರೀಯವಾದ ಅಧ್ಯಯನ ನಡೆಯಲಿಲ್ಲವಾದರೂ ಆರಂಭಿಕರ ಕಾರ್ಯವನ್ನು ಮೆಚ್ಚಲೇಬೇಕಾದುದು ಅವಶ್ಯಕ. ಈ ಹಿನ್ನೆಲೆಯಿಂದ ನೋಡಿದಾಗ ಕರ್ನಲ್ ಮೆಕೆಂಝಿ ಕರ್ನಾಟಕದ ಭೂ ಪರಿವೀಕ್ಷಣೆಯನ್ನು ಟಿಪ್ಪುವಿನ ಮರಣದ ನಂತರ ಅಂದರೆ ಕ್ರಿ.ಶ.೧೭೯೯ರಿಂದ ೧೮೧೧ರ ವರೆಗೆ ಕರ್ನಾಟಕದ ಭೂ ಪರಿವೀಕ್ಷಣೆ ಕಾರ್ಯವನ್ನು ಕೈಗೊಂಡು ಸುಮಾರು ೪೨,೦೦೦ ಮೈಲು ಸುತ್ತಾಡಿ ಬರೆಯಿಸಿದ. ಗ್ರಾಮಗಳ ಕೈಫಿಯತ್ತುಗಳು ಬಹುಮುಖ್ಯವಾದುವು. ಇದರಲ್ಲಿ ಸ್ಥಳಪುರಾಣ, ಐತಿಹ್ಯಗಳು ಮತ್ತು ಸ್ಥಳದ ಮಹತ್ವವನ್ನು ಹೇಳುವ ದಾಖಲೆಗಳಾಗಿವೆ.

ರೆ.ಫ.ಕಿಟೆಲ್ ಅವರು ತಮ್ಮ ಕನ್ನಡ-ಇಂಗ್ಲೀಷ್ ನಿಘಂಟುವಿನಲ್ಲಿ ಕೆಲವು ಊರುಗಳನ್ನು ಗುರುತಿಸುತ್ತಾರೆಯೇ ಹೊರತು ನಿಷ್ಪತ್ತಿಯ ವಿಚಾರದಲ್ಲಿ ತಟಸ್ಥರಾಗಿದ್ದಾರೆ. ಮೈಸೂರು ಸರ್ಕಾರದ ಹಯವದನರಾಯರು ಮೈಸೂರು ಗೆಝೆಟಿಯರ್‌ನಲ್ಲಿ ಕೆಲವು ನಾಮಗಳ ಕುರಿತು ವಿಶ್ಲೇಷಣೆ ಸಮರ್ಪಕವಲ್ಲದಿದ್ದರೂ, ಸ್ಥಳನಾಮ ಅಧ್ಯಯನಕಾರರಿಗೆ ಕೈಮರವಾಗಿ ಪರಿಣಮಿಸಿರುವುದು ನಿಜ. ಅದೇ ರೀತಿ ಮಾಸ್ತಿ, ದೇಜಗೌ, ಆರ್.ಸಿ.ಹಿರೇಮಠ ಮೊದಲಾದವರು ಸ್ಥಳನಾಮ ಕುರಿತಾದ ಲೇಖನಗಳನ್ನು ಬರೆಯುವ ಮೂಲಕ ಸ್ಥಳನಾಮ ಅಧ್ಯಯನಕಾರರಿಗೆ ಪ್ರೇರಣೆ ನೀಡುವಲ್ಲಿ ಸಹಕಾರಿಯಾಗಿದ್ದಾರೆ.

ಸ್ಥಳನಾಮಗಳ ಮೇಲೆ ಅತ್ಯಂತ ಮಹತ್ವದ ಕೆಲಸ ಮಾಡಿದ ಶಂ.ಬಾ.ಜೋಷಿಯವರು ಸ್ಥಳನಾಮಗಳ ಮೂಲಕ ಕನ್ನಡ ಸಂಸ್ಕೃತಿಯನ್ನು ತೋರಿಸಿಕೊಟ್ಟವರಾಗಿದ್ದಾರೆ. ೧೯೪೭ರಲ್ಲಿ ಅವರ "ಕಂನಾಡ ಕತೆ" ಹೊರಬಿದ್ದಾಗ; ಕನ್ನಡ ಸ್ಥಳನಾಮ ಕ್ಷೇತ್ರದ ಅಪೂರ್ವವಾದ ಕೃತಿ ಎನಿಸಿಕೊಂಡಿತು. ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಾಡಿನ ರೂಢಿ, ಸಂಪ್ರದಾಯ, ಮಾನವ ಸಮಾಜದ ವಿಕಾಸದ ನೆಲೆಗಳನ್ನು ಹುಡುಕಲು ಸ್ಥಳನಾಮಗಳ ಬಳಕೆ ಅತ್ಯಂತ ಅಮೂಲ್ಯ ಎಂಬುದನ್ನು ತೋರಿಸಿಕೊಟ್ಟರು. ಕನ್ನಡ ಸಂಸ್ಕೃತಿಯ ಎಲ್ಲೆಯನ್ನು ಹುಡುಕುತ್ತಾ ಹೊರಟು ಇತಿಹಾಸ, ಪುರಾಣ, ಜನಪದ ಐತಿಹ್ಯ, ಧರ್ಮ ಹಾಗೂ ಜನಾಂಗದ ಮೂಲಕ ಸ್ಥಳಗಳನ್ನು ಗುರುತಿಸುವ ಶಂಬಾರವರ ಸಂಶೋಧನಾ ಕಾರ್ಯ ಶ್ಲಾಘನೀಯವಾದದ್ದು. ಕನ್ನಡ ಸಂಸ್ಕೃತಿಯ ಬೇರುಗಳು ಉತ್ತರಭಾರತದಲ್ಲಿಯೂ ಹರಡಿವೆ ಎಂಬುದನ್ನು ಪ್ರಮಾಣೀಕರಿಸಲು ನಾಮಗಳನ್ನು ಬಳಸಿಕೊಂಡಿರುವುದು ಸ್ಥಳನಾಮಶಾಸ್ತ್ರದ ಮಹತ್ವವನ್ನು ಒತ್ತಿ ಹೇಳಿದಂತಾಗಿದೆ. ಸ್ಥಳನಾಮ ಅಧ್ಯಯನ ನಡೆಯದೇ ಇದ್ದ ಕಾಲದಲ್ಲಿ ಇಂಥ ಒಂದು ಪ್ರಯತ್ನ ಮೈಲಿಗಲ್ಲೇ ಸರಿ. ಕನ್ನಡ ನಾಡಿನಲ್ಲಿ ಸ್ಥಳನಾಮಾಧ್ಯಯನಕ್ಕೆ ಅಡಿಗಲ್ಲನ್ನು ಹಾಕಿದವರು ಶಂಬಾರವರು.

೧೯೭೫ರಲ್ಲಿ ಸೇಡಿಯಾಪು ಕೃಷ್ಣಭಟ್ಟರ 'ಕೆಲವು ದೇಶನಾಮಗಳು' ಸ್ಥಳನಾಮಾಧ್ಯಯನದ ಮತ್ತೊಂದು ಮೈಲಿಗಲ್ಲು. ಈ ಗ್ರಂಥದಲ್ಲಿ ಎರಡು ಭಾಗಗಳಿದ್ದು ಒಂದು; ತುಳು ಶಬ್ದಾರ್ಥ ಮತ್ತು ಚೇರ, ಕೊಂಕಣ ಹಾಗೂ ಎರಡೆಯದು; ಪಾಂಡಿ ಮತ್ತು ಪಾಂಡ್ಯ ಶಬ್ದಗಳ ವಿಚಾರಗಳಿವೆ. 'ಕೊಂಗು', 'ಕೇರಿ'ಗಳು ಮಳೆ ಹೆಚ್ಚಾಗಿ ಬೀಳುವ ಪ್ರದೇಶವೆಂದೂ, ತುಳುವಿನ 'ಳ' ಱಟದಿಂದ ಬಂದುದಲ್ಲ. ಸಂಸ್ಕೃತದ 'ಲ' ಮಾರ್ಪಟ್ಟು ಆದದ್ದೂ ಅಲ್ಲ. 'ಕುಳ' ಎಂದು ತೋರಿಸಿಕೊಟ್ಟಿದ್ದಾರೆ. ಪಾಂಡಿಗೆ ಪಾಂಡ್ಯವೇ ಮೂಲವೆಂದು ಅದಕ್ಕೆ ದೊಡ್ಡ ದೋಣಿ, ಸರಕು ಹೊರುವಂಥದ್ದು. ಸಮುದ್ರ ಸಂಚಾರಮಾಡಿ ಪದಾರ್ಥಗಳನ್ನು ನಾಡುನಾಡುಗಳಿಗೆ ಒಯ್ಯುವ ಸಾಧನವೆಂದು ಅರ್ಥೈಸಿದ್ದಾರೆ. ಹೀಗೆ ತುಳುವಿನಲ್ಲಿ ಹೆಚ್ಚು ಶುದ್ಧವಾಗಿರುವ ಶಬ್ದದ ರೂಪ ಮತ್ತು ಅರ್ಥ ನಿಷ್ಪತ್ತಿಯನ್ನು ಹಲವಾರು ದೃಷ್ಟಾಂತಗಳ ಮೂಲಕ ಸಾಧಿಸಿ ಸ್ಥಳನಾಮ ಅಧ್ಯಯನದಲ್ಲಿ ಪದನಿಷ್ಪತ್ತಿಗೆ ಹೆಚ್ಚು ಗಮನ ನೀಡಬೇಕೆಂದು ತೋರಿಸಿಕೊಟ್ಟಿದ್ದಾರೆ.

ಡಾ.ಬಿ.ವಿ.ಶಿರೂರು ಅವರು ತಮ್ಮ ಪಿಎಚ್.ಡಿ. ಗ್ರಂಥದಲ್ಲಿ (೧೯೭೬) ಶ್ರವಣಬೆಳ್ಗೊಳದ ನಾಮ ವಿವೇಚನೆ ಎಂಬ ಅಧ್ಯಾಯದಲ್ಲಿ, ಶಾಸನ, ಐತಿಹ್ಯ, ಸಂಸ್ಕೃತೀಕರಣದ ಮೂಲಕ ಶ್ರವಣಬೆಳ್ಗೊಳಕ್ಕೆ ಇರುವ ಹೆಸರುಗಳನ್ನು ವಿಶ್ಲೇಷಿಸುವ ಕಾರ್ಯ ಕೈಗೊಂಡು ಸ್ಥಳನಾಮಾಧ್ಯಯನ ಕೇವಲ ಭಾಷಾಧ್ಯಯನದ ಮೂಲಕ ಪರಿಶೀಲಿಸದೆ ಆಯಾ ಕಾಲಮಾನದ ಶಾಸನ ಮತ್ತು ಜನಪದ ಐತಿಹ್ಯಗಳ ಮೂಲಕ ಅಧ್ಯಯನ ಯೋಗ್ಯ ಎಂಬುದನ್ನು ತಿಳಿಸಿದರು.

ಹುಲ್ಲೂರು ಶ್ರೀನಿವಾಸ ಜೋಯಿಸರು ತಮ್ಮ ಐತಿಹಾಸಿಕ ಲೇಖನಗಳಲ್ಲಿ ಇತಿಹಾಸ ಪ್ರಸಿದ್ಧ ಘಟನೆಗಳಿಗೆ ಕಾರಣವಾದ ಸಂಗತಿಗಳನ್ನು ಶೋಧಿಸುವಾಗ, ಉಚ್ಚಂಗಿ, ಮಧುರಾಪುರಿ, ರಾಮಗಿರಿ, ಬಳ್ಳಾರಿ, ಮಂತ್ರಾಲಯ, ಆದವಾನಿ, ಆಲೂರು, ಉಜ್ಜಯಿನಿ, ಇಂಗಳದಾಳು ಮೊದಲಾದ ಊರುಗಳ ಚರಿತ್ರೆಯನ್ನು

ಹೇಳುವುದರ ಜೊತೆಗೆ ಆ ಸ್ಥಳಗಳಿಗಿರುವ ಕಥೆ, ಭೌಗೋಳಿಕ ವಿವರಗಳನ್ನು, ಐತಿಹ್ಯಗಳನ್ನು ಕೊಡುತ್ತಾರೆ. 'ಕನ್ನಡ ನಾಡಿನ ಊರುಗಳು' ಎಂಬ ಲೇಖನದಲ್ಲಿ ಕುಂತಲ ನಾಡಿನ ಎಲ್ಲೆಯನ್ನು, ಭೌಗೋಳಿಕ ವಿಸ್ತಾರವನ್ನು ಗುರುತಿಸುವುದರ ಜೊತೆಗೆ ಹಂಪೆ, ಶೆಟ್ಟಿಯ ಕೆರೆ, ಅನಂತಪುರ, ನಗರ, ಸಂತೆ ಬೆನ್ನೂರು ಮೊದಲಾದ ಚಾರಿತ್ರಿಕ ಸ್ಥಳಗಳ ನಿಷ್ಪತ್ತಿಗೆ ಶಾಸನೋಕ್ತ ಸ್ಥಳನಾಮಗಳ ಆಧಾರಗಳನ್ನು ಕೊಡುತ್ತಾರೆ. ಈ ಎಲ್ಲ ಲೇಖನಗಳು ೧೯೭೬ರಲ್ಲಿ ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ ಅವರ ಸಂಪಾದಕತ್ವದಲ್ಲಿ ಕೃತಿಯಾಗಿ ಹೊರಬಂದಿದೆ.

೧೯೭೮ರಲ್ಲಿ ಡಿ.ವಿ.ಗುಂಡಪ್ಪನವರು 'ಕನ್ನಡ ಐತಿಹ್ಯಗಳು' ಎಂಬ ಕೃತಿಯಲ್ಲಿ ದೇವರು, ಬೆಟ್ಟ, ಕಲ್ಲುಗಳು, ಪ್ರಮುಖ ಸ್ಥಳ, ವ್ಯಕ್ತಿ, ಕೆರೆ, ಹೊಳೆಗಳ ಬಗೆಗಿರುವ ಐತಿಹ್ಯಗಳನ್ನು ಪ್ರಸ್ತಾಪಿಸುತ್ತಾ ಸ್ಥಳನಾಮಗಳ ಬಗ್ಗೆ ಇರುವ ಜನಪದರ ನಿರೂಪಿತ ಐತಿಹ್ಯಗಳನ್ನು ವಿವರಿಸಿ ಗುತ್ತಲು, ಮೊಳೂರು, ದಶವಾರು, ಕೆರೆಗೋಡು, ಗೆಜ್ಜಲಗೆರೆ, ಹನಕೆರೆ, ಕಚ್ಚಿಗೆರೆ, ತುಂಕೆರೆ, ಕುರಿಕೆಂಪನದೊಡ್ಡಿ, ಮಳವಳ್ಳಿ ಮುಂತಾದ ಊರುಗಳ ಐತಿಹ್ಯಗಳನ್ನು ಸಂಗ್ರಹಿಸಿ ವಿವರಿಸಿದ್ದಾರೆ. ಸ್ಥಳನಾಮ ಐತಿಹ್ಯಗಳನ್ನು ಅಧ್ಯಯನ ಮಾಡಲು ಯೋಗ್ಯವಾದ ಕೃತಿ ಇದಾಗಿದೆ.

ಕನ್ನಡದಲ್ಲಿ ಸ್ಥಳನಾಮಾಧ್ಯಯನಕ್ಕೆ ಸಂಬಂಧಿಸಿದಂತೆ ಮೊದಲ ಶಾಸ್ತ್ರೀಯ ಸಂಶೋಧನಾ ಗ್ರಂಥವೆಂದರೆ 'ತುಳುನಾಡಿನ ಸ್ಥಳನಾಮಗಳು', ಕನ್ನಡದಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡಿ ಮೊದಲು ಪಿಎಚ್.ಡಿ. ಪದವಿಯನ್ನು ಪಡೆದವರು ಡಾ.ಕೆಮ್ಮೂರು ರಘುಪತಿಭಟ್ಟ ಅವರು. ಇವರ ಕಾವ್ಯನಾಮ 'ಆರ್ಕೆ ಮಣಿಪಾಲ' ಎಂದು. ಇವರ 'ತುಳುನಾಡಿನ ಸ್ಥಳನಾಮಗಳು' (೧೯೭೯) ಸಂಶೋಧನಾ ಕೃತಿಯು ತುಳುನಾಡಿಗೆ ಸಂಬಂಧಪಟ್ಟಂತೆ ಸ್ಥಳನಾಮಾಧ್ಯಯನವಾದರೂ ಸಾರ್ವತ್ರಿಕ ಎನ್ನಬಹುದಾದ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಸ್ಥಳನಾಮಗಳ ವಾರ್ಗಿಕ ಮತ್ತು ನಿರ್ದಿಷ್ಟಗಳಿಗೆ ಸಂಬಂಧಿಸಿದಂತೆ ಎರಡು ರೀತಿಯ ವರ್ಗೀಕರಣವನ್ನು ಮಾಡಿದ್ದಾರೆ. ಜೊತೆಗೆ ತುಳುನಾಡಿನ ಒಟ್ಟು ಸ್ಥಳನಾಮ ಘಟಕಗಳನ್ನು ಪಟ್ಟಿ ಮಾಡಿದ್ದಾರೆ. ಜಲವಾಚಿ ಮತ್ತು ಭೂಸ್ಥಿತಿ ವಾಚಕ ಸ್ಥಳನಾಮಗಳನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಚರ್ಚಿಸಿರುವುದು ಅವರ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ. ಶಿಲಾವಾಚಿ, ಸಸ್ಯವಾಚಿ, ಕ್ಷೇತ್ರವಾಚಕ, ದಿಗ್ವಾಚಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಸ್ಥಳನಾಮಗಳ ಬಗ್ಗೆ ಅಧ್ಯಯನ ಕೈಗೊಂಡು, ಭಾಷಾವೈಜ್ಞಾನಿಕ ಪರಿಶೀಲನೆಯಲ್ಲಿ ಸ್ವರಾಂತ, ವ್ಯಂಜನಾಂತ, ಸೌಲಭ್ಯಕಾಂಕ್ಷೆ ಮತ್ತು ಧ್ವನಿವ್ಯತ್ಯಾಸದ ಬಗ್ಗೆ ಚರ್ಚಿಸಿ, ಸ್ಥಳನಾಮಗಳಿಂದಾಗುವ ಪ್ರಯೋಜನಗಳ ಬಗ್ಗೆ ವಿವರಿಸಿದ್ದಾರೆ. ಇವರ ಮತ್ತೊಂದು ಗ್ರಂಥವಾದ 'ಹೆಸರಿನಲ್ಲೇನಿದೆ'? ೧೯೮೯ರಲ್ಲಿ ಪ್ರಕಟಗೊಂಡಿದೆ. ಇದೂ ಕೂಡ ತುಳುನಾಡಿನ ಸ್ಥಳನಾಮಗಳು ಅವರ ಸಂಶೋಧನಾ ಪ್ರಬಂಧದ ಮುಂದುವರೆದ ಭಾಗ. ಇಲ್ಲಿ ಸ್ಥಳನಾಮ-ವ್ಯಕ್ತಿನಾಮಗಳಿಗೆ ಸಂಬಂಧಿಸಿದ ವಿಚಾರಗಳಿವೆ. ವರ್ಣನಾತ್ಮಕ ಮಾದರಿಯ ಭಾಷಾ ವೈಜ್ಞಾನಿಕ ಪರಿಶೀಲನೆಯು ಹೆಚ್ಚು ಕರಾರುವಕ್ಕಾಗಿ ಮೂಡಿಬಂದಿದೆ. ಸಂಸ್ಕೃತಿಯ, ಚರಿತ್ರೆಯ ಆಕರಗಳಾಗಿರುವ ಸ್ಥಳನಾಮಗಳು; ಅವುಗಳ ರೂಪವನ್ನು ನಿರ್ಧರಿಸುವಾಗ ಸಂಶೋಧಕರು ವಹಿಸಬೇಕಾದ ಜಾಗರೂಕತೆಯನ್ನು ಮತ್ತು ಸಂಸ್ಕೃತೀಕರಣಕ್ಕೆ ಒಳಗಾಗುವಾಗ ರಾಜಕೀಯದಂತಹ ಕೈವಾಡ

ತಪ್ಪಿಸಿ ಮೂಲನಿಷ್ಪತ್ತಿಯನ್ನು ಕಾಪಾಡುವುದರಲ್ಲಿ ಅಧ್ಯಯನಕಾರರು ವಹಿಸಬೇಕಾದ ಪಾತ್ರವನ್ನು ಒತ್ತಿ ಹೇಳಿದ್ದಾರೆ. ಹೀಗೆ ಡಾ.ಕೆಮ್ತೂರು ರಘುಪತಿಭಟ್ಟ ಅವರ ಹೆಸರು ಕನ್ನಡ ಸ್ಥಳನಾಮ ವಿಜ್ಞಾನದಲ್ಲಿ ಅಚ್ಚಳಿಯದ ಹೆಸರಾಗಿದೆ. ಇವರ ಒಂದೊಂದು ಗ್ರಂಥವೂ ಕೂಡ ಸ್ಥಳನಾಮ ಅಧ್ಯಯನಕಾರರಿಗೆ ಬಹುಮುಖ್ಯ ಆಕರ ಗ್ರಂಥಗಳಾಗಿ ಪರಿಣಮಿಸಿವೆ.

೧೯೮೧ರಲ್ಲಿ ಪ್ರಕಟಗೊಂಡ ಡಾ.ಎಂ.ಎಂ.ಚಿದಾನಂದಮೂರ್ತಿಯವರ 'ವಾಗಾರ್ಥ' ಸ್ಥಳನಾಮ ಅಧ್ಯಯನಕ್ಕೆ ಮಹತ್ತರವಾದ ಕೃತಿ. ಕರ್ನಾಟಕದ ಸ್ಥಳನಾಮಗಳು ಎಂಬ ಲೇಖನದಲ್ಲಿ ಅಧ್ಯಯನದ ಇತಿಹಾಸ, ವಾರ್ಗಿಕ ಮತ್ತು ನಿರ್ದಿಷ್ಟಗಳನ್ನು ವೈಜ್ಞಾನಿಕವಾಗಿ ವರ್ಗೀಕರಣ ಮಾಡಿದ್ದಾರೆ. ಸ್ಥಳನಾಮಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಭಾಷಿಕ ಮಹತ್ವದ ಬಗ್ಗೆ ಹೇಳಿದ್ದಾರೆ. ಪುರ>ವರ>ವಾರವಾಗಿ ಬಂದಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಊರ ಹೆಸರುಗಳ ಸೂಚಕಾಂಶಗಳಾದ ಬ್ರಾಹ್ಮಣ, ಅಗ್ರಹಾರ, ಮಂಗಲ, ಆಲ, ಬೊಮ್ಮ, ಶ್ರೋತ್ರೀಯ, ಮಹಾಜನ, ಹಾರೋ ಮುಂತಾದ ಪದಗಳು ಪದಾದಿ ಮತ್ತು ಪದಾಂತ್ಯದಲ್ಲಿದ್ದರೆ ಅವು ಬ್ರಾಹ್ಮಣರಿಗೆ ದಾನವಾಗಿ ನೀಡಿದ ಊರುಗಳು ಎಂಬುದಾಗಿ ಪ್ರತಿಪಾದಿಸಿದ್ದಾರೆ. ಅಲ್ಲದೆ 'ಚಿತ್ರದುರ್ಗ-ಮುಕ್ತಾಯಕ್ಕ-ಎರಡು ಹೆಸರುಗಳು "ಬನವಾಸಿ ಸ್ಥಳನಾಮ, ವಿವೇಚನೆ, ಶ್ರವಣ ಬೆಳಗೊಳಕ್ಕೆ ಮೂಲ, ಹಳೆಯ ಬೆಳ್ಗೊಳ, 'ತಮ್ಮ ಕೊನೆಯಲ್ಲಿರುವ ಹೆಸರುಗಳು' ಮೊದಲಾದ ಸಂಶೋಧನಾ ಲೇಖನಗಳು ನಾಡಿನ ಹಲವಾರು ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವೆಲ್ಲವೂ ಕೂಡ ಸ್ಥಳನಾಮ ಅಧ್ಯಯನದ ಮಹತ್ವದ ಲೇಖನಗಳಾಗಿವೆ. ಸ್ಥಳನಾಮ ವಿಜ್ಞಾನವು ಕನ್ನಡದಲ್ಲಿ ಮಹತ್ವಪೂರ್ಣವಾಗಿ ಬೆಳೆಯಲು ಚಿದಾನಂದ ಮೂರ್ತಿಯವರಂಥ ಸಂಶೋಧಕರೂ ಕಾರಣೀಭೂತರಾಗಿದ್ದಾರೆ.

ಕರ್ನಾಟಕ ಸರ್ಕಾರವು ೧೯೮೫ರಲ್ಲಿ ನಾಡಿನ ಪ್ರಸಿದ್ಧ ಸಂಶೋಧಕರಾದ ಡಾ.ಶ್ರೀನಿವಾಸ ರಿತ್ತಿಯವರ ಸಂಪಾದಕತ್ವದಲ್ಲಿ ಹೊರತಂದ 'ಕರ್ನಾಟಕ ಗ್ರಾಮ ಸೂಚಿ'ಯು ಕೂಡ ಕನ್ನಡ ಸ್ಥಳನಾಮಾಧ್ಯಯನಕ್ಕೆ ಅಮೂಲ್ಯ ಕೊಡುಗೆಯಾಗಿದೆ. ಇದರಲ್ಲಿ ಕರ್ನಾಟಕ ರಾಜ್ಯದ ಜಿಲ್ಲಾ ಮತ್ತು ತಾಲೂಕುವಾರು ಗ್ರಾಮಗಳ ಪಟ್ಟಿಯನ್ನು ವರ್ಣಾನುಕ್ರಮದಲ್ಲಿ ಬಂದಿದೆ. ಸ್ಥಳನಾಮಗಳನ್ನು ಜಿಲ್ಲಾವಾರು ಅಥವಾ ತಾಲೂಕುವಾರು ತೆಗೆದುಕೊಂಡು ಅಧ್ಯಯನ ಮಾಡುವ ಸಂಶೋಧಕರಿಗೆ ಇಡೀ ಜಿಲ್ಲೆಯ, ತಾಲೂಕಿನ ಒಟ್ಟು ಗ್ರಾಮಗಳು ಒಂದೆಡೆ ದೊರೆಯುವುದರಿಂದ ಸ್ಥಳನಾಮ ಶೇಖರಣೆಯ ಸಮಸ್ಯೆ ಉದ್ಭವಿಸುವುದಿಲ್ಲ.

ಆದರೆ ಇದರಲ್ಲಿ ಪ್ರಾಚೀನ ಮತ್ತು ನಿರ್ವಸಿತ (ಬೇಚರಾಕ್) ಗ್ರಾಮಗಳನ್ನು ಸೇರಿಸಿಲ್ಲ. ೧೯೮೫ರ ನಂತರದಲ್ಲಿ ನಿರ್ಮಾಣಗೊಂಡ ಊರುಗಳ ಹೆಸರುಗಳು ಇಲ್ಲದಿರುವುದನ್ನು ಬಿಟ್ಟರೆ ಇದೊಂದು ಅತ್ಯುತ್ತಮವಾದ ಗ್ರಂಥವೆನ್ನುವುದರಲ್ಲಿ ಎರಡು ಮಾತಿಲ್ಲ.

೧೯೮೬ರಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿರುವ 'ಕರ್ನಾಟಕ ಗೆಝೆಟಿಯರ್'ನಲ್ಲಿ ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ವಿವರಣೆಯನ್ನು ಒಳಗೊಂಡಿದೆ. ರಾಜಕೀಯ, ಭೌಗೋಳಿಕ, ಪರಿಸರ, ಉದ್ದಿಮೆ,

ನೀರಾವರಿ ಯೋಜನೆಗಳಿಂದ ಖ್ಯಾತಿಯನ್ನು ಪಡೆದಿರುವ ಮತ್ತು ಪ್ರಾಚೀನ ಸ್ಥಳನಾಮಗಳು ಹಾಗೂ ಐತಿಹಾಸಿಕ ಸ್ಥಳಗಳ ಬಗ್ಗೆ ಮಾಹಿತಿಯ ಜೊತೆಗೆ ಕೆಲವು ಸ್ಥಳನಾಮಗಳ ನಿಷ್ಪತ್ತಿಯನ್ನು ಸಹ ಒಳಗೊಂಡಿರುವ ಕೃತಿಯಾಗಿದೆ.

ಕನ್ನಡ ಸ್ಥಳನಾಮ ಅಧ್ಯಯನ ಕ್ಷೇತ್ರದಲ್ಲಿ ಚಿರಪರಿಚಿತವಾಗಿರುವ ಮತ್ತೊಂದು ಹೆಸರು ವಿ.ಗೋಪಾಲಕೃಷ್ಣ ಇವರು ೧೯೮೭ರಲ್ಲಿ 'ಸ್ಥಳನಾಮ ಅಧ್ಯಯನಗಳು' ಎಂಬ ಕೃತಿಯಲ್ಲಿ ಕೋಲಾರ ಜಿಲ್ಲೆಯ ಸ್ಥಳನಾಮಗಳ ಮೇಲೆ ತೆಲುಗಿನ ಪ್ರಭಾವವನ್ನು ಗುರುತಿಸುತ್ತಾರೆ. ಸ್ಥಳನಾಮಗಳ ಮೇಲೆ ಜನಪದ ಐತಿಹ್ಯ, ಜಲಸೂಚಿ ಅಂಶಗಳು ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಚರ್ಚಿಸುತ್ತಾರೆ. ಸ್ಥಳನಾಮ ಅಧ್ಯಯನದ ಸಮಸ್ಯೆಗಳು ಮತ್ತು ನಿವಾರಣಾಕ್ರಮಗಳನ್ನು ಸೂಚಿಸಿದ್ದಾರೆ. ಸ್ಥಳನಾಮಗಳು ದೊರೆಯಬಹುದಾದ ಮುಖ್ಯ ಆಕರಗಳ ಮಾಹಿತಿಯನ್ನು ಸ್ಥಳನಾಮಾಧ್ಯಯನಕಾರರಿಗೆ ಕೊಡುವ ಆಕರ ಗ್ರಂಥವಾಗಿದೆ. ಶ್ರೀಯುತರು ಸ್ಥಳನಾಮಗಳಲ್ಲಿಯೇ ೧೯೮೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ 'ಕೋಲಾರ ಜಿಲ್ಲೆಯ ಸ್ಥಳನಾಮಗಳು ಸಾಮಾಜಿಕ, ಭಾಷಾಶಾಸ್ತ್ರೀಯ ಅಧ್ಯಯನ' ಎಂಬ ಸಂಶೋಧನಾ ಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇದು ಮುಖ್ಯವಾಗಿ ಕೋಲಾರ ಜಿಲ್ಲೆಯ ಸ್ಥಳನಾಮಗಳ ವರ್ಣನಾತ್ಮಕ ವ್ಯಾಕರಣ ಗ್ರಂಥವಾಗಿದೆ. ವರ್ಣ ಸಮಾಮ್ನಾಯ, ಆಕೃತಿಮಾಗಳ ರಚನೆಯ ಪರಿಶೀಲನೆ, ಸಂಧಿ, ಅರ್ಥ ಪರಿಶೀಲನೆಯ ಜೊತೆಗೆ ನೈಸರ್ಗಿಕ, ಸಾಂಸ್ಕೃತಿಕ, ಚಾರಿತ್ರಿಕ ವಿಷಯಗಳೊಂದಿಗೆ ಸ್ಥಳನಾಮಗಳ ಅಧ್ಯಯನ ಮಾಡಿದ್ದಾರೆ. ಜಿಲ್ಲೆಯ ಸ್ಥಳನಾಮಗಳ ನಿಘಂಟುವನ್ನೂ ಸಹ ಕೊಟ್ಟಿದ್ದಾರೆ. ವರ್ಣನಾತ್ಮಕ ವಿಶ್ಲೇಷಣೆಯನ್ನು ಮಾಡುವ ಸಂಶೋಧಕರಿಗೆ ಇದೊಂದು ಉತ್ತಮ ಸಹಾಯಕ ಗ್ರಂಥವಾಗಬಲ್ಲದು.

ಕನ್ನಡ ನಾಮವಿಜ್ಞಾನ ಕ್ಷೇತ್ರದಲ್ಲಿ ವೈಜ್ಞಾನಿಕವಾಗಿ ಮೂಡಿಬಂದಿರುವ ಕೃತಿ ಎಂದರೆ ಡಾ.ಎಂ.ಎಂ.ಕಲಬುರ್ಗಿಯವರ 'ಕನ್ನಡ ನಾಮ ವಿಜ್ಞಾನ' (೧೯೮೯)ದಲ್ಲಿ ಶಾಸನಗಳ, ಕೈಫಿಯತ್ತುಗಳ, ಸ್ಥಳಪುರಾಣಗಳ, ಭೌಗೋಳಿಕ ಪರಿಸರ, ಜನಪದದ ಪರಂಪರೆ ಹೀಗೆ ಬಹುಶಾಸ್ತ್ರೀಯ ಅಧ್ಯಯನದ ಸಾಧ್ಯತೆಗಳನ್ನು ತಿಳಿಯಪಡಿಸಿದ್ದಾರೆ. ಗ್ರಾಮಗಳ ಸೃಷ್ಟಿಯ ಅಲೆಮಾರಿ ಮಾನವನಿಂದ ಪ್ರಾರಂಭವಾಗಿ ಅವುಗಳಿಗೆ ಮೂಲತಃ ನಿಸರ್ಗವಾಚಕಗಳೇ ಅಂಟಿಕೊಂಡು ನಂತರದಲ್ಲಿ ಜನಾಂಗವಾಚಿ, ವ್ಯಕ್ತಿವಾಚಿಯಾಗಿ ಹೆಸರನ್ನಿಡುವ ಪದ್ಧತಿಯು ಆರಂಭವಾಯಿತು ಎನ್ನುವ ಮಾತು ಸಮಂಜಸವಾದದ್ದು. ಸ್ಥಳನಾಮ ಅಧ್ಯಯನಕ್ಕೆ ಒಂದು ವೈಜ್ಞಾನಿಕವಾದ ರೂಪು ರೇಷೆಯನ್ನು ಒದಗಿಸಿದವರು ಎಂ.ಎಂ.ಕಲಬುರ್ಗಿಯವರು. ನಾಮಗಳ ರಾಚನಿಕ ಸ್ವರೂಪದಲ್ಲಿ ನಾಮದ ಅರ್ಥಸ್ವರೂಪ ವಾರ್ಗಿಕಗಳ ಅರ್ಥ ಸ್ವರೂಪ, ಅವುಗಳ ವೈಜ್ಞಾನಿಕ ವರ್ಗೀಕರಣದ ಜೊತೆಗೆ ನಾಮ ವ್ಯತ್ಯಾಸ, ಭಾಷಾಂತರ, ರೂಪಾಂತರ, ಸಂಸ್ಕೃತೀಕರಣ ಮೊದಲಾದ ವಿಷಯಗಳ ಬಗ್ಗೆ ವಿಸ್ತೃತವಾದ ಚರ್ಚೆ ಮಾಡಿದ್ದಾರೆ.

'ಊರ ಹೆಸರುಗಳ ಕೊನೆಯ ವರ-ವಾರ' ಒರೆಗಲ್ಲು-ಕೇಸಿ-ಕೇರಿ-ಕೆ-ಗೆ-ಕಿ-ಗಿ ಎಂಬ ಸ್ಥಳನಾಮ ಕುರಿತಾದ ಮಹತ್ವದ ಲೇಖನಗಳನ್ನು ಬರೆದಿದ್ದಾರೆ. ಇವು ಸ್ಥಳನಾಮ ನಿಷ್ಪತ್ತಿ ಕಾರ್ಯಕ್ಕೆ ಮಹತ್ತರವಾದ ಲೇಖನಗಳಾಗಿವೆ.

೧೯೯೦ರಲ್ಲಿ ದೇ.ಜವರೇಗೌಡರ ‘ಸ್ಥಳನಾಮ ವ್ಯಾಸಂಗ’ ಮಹತ್ವಪೂರ್ಣ ಕೃತಿಯಾಗಿದೆ. ಇದರಲ್ಲಿ ಸ್ಥಳನಾಮ ಉಗಮ, ವ್ಯಾಪ್ತಿ ಮತ್ತು ಪ್ರಭಾವದ ಬಗ್ಗೆ, ಸಂಶೋಧನಾ ವಿಧಿ ವಿಧಾನಗಳು, ಕ್ಷೇತ್ರಕಾರ್ಯ ಕೈಗೊಳ್ಳಬೇಕಾದ ಅವಶ್ಯಕತೆ ಹಾಗೂ ಸ್ಥಳನಾಮಗಳನ್ನು ಹಲವು ಬಗೆಯಾಗಿ ವರ್ಗೀಕರಿಸಿ ಪ್ರತಿಯೊಂದಕ್ಕೂ ಉದಾಹರಣೆ ಕೊಟ್ಟಿದ್ದಾರೆ. ಕೇವಲ ಭಾಷಾ ಹಿನ್ನಲೆಯಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡದೇ ಜಾನಪದೀಯ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಅಧ್ಯಯನ ಮಾಡಿದ್ದೇ ಆದಲ್ಲಿ ಇನ್ನು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂಬುದನ್ನು ತಿಳಿಯಪಡಿಸಿದ್ದಾರೆ. ಸ್ಥಳನಾಮ ಸಂಶೋಧಕರಿಗೆ ಸ್ಥಳನಾಮಗಳ ಸಂಗ್ರಹ ಮೂಲ ಮತ್ತು ಪ್ರಶ್ನಾವಳಿಯ ವಿಧಾನಗಳನ್ನು ಹೇಳಿದೆ. ಸ್ಥಳನಾಮ ಶೋಧಕರಿಗೆ ಇದೊಂದು ಮಾರ್ಗದರ್ಶನ ನೀಡುವ ಉತ್ತಮ ಕೃತಿಯಾಗಿದೆ.

ಭಂಡೆ ವೈಜನಾಥರು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ೧೯೯೦ರಲ್ಲಿ ‘ಬೀದರ್ ಜಿಲ್ಲೆಯ ಸ್ಥಳನಾಮಗಳು’ ಎಂಬ ಸಂಶೋಧನಾ ಪ್ರಬಂಧವನ್ನು ಸಲ್ಲಿಸಿದರು. ಇದು ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ ಭಾಷಾಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಅಧ್ಯಯನ ಕೈಗೊಂಡಿದ್ದು ಜಾನಪದೀಯ ಹಿನ್ನೆಲೆಯಲ್ಲಿಯೂ ಲಕ್ಷಿಸಲಾಗಿದೆ. ‘ಕೃತಿಯು ಯಾವುದೋ ಒಂದು ಭಾಷಿಕ ಸಿದ್ಧಾಂತದ ಅಧ್ಯಯನದಂತಿದ್ದು ಸಂಪೂರ್ಣ ವರ್ಣನಾತ್ಮಕ ಮಾದರಿಯನ್ನು ಅನುಸರಿಸಿದೆ. ಜೊತೆಗೆ ಸ್ಥಳನಾಮ ನಿಷ್ಪತ್ತಿಯ ಕಡೆಗೆ ಗಮನಹರಿಸಿಲ್ಲ. ಐದುನೂರು ಪುಟಕ್ಕೂ ಮೀರಿ ವ್ಯಾಪಿಸಿದ ಈ ನಿಬಂಧ ಸ್ಥಳನಾಮಾಧ್ಯಯನಕ್ಕೆ ನೇರವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಮಾದರಿಯಾಗಬಹುದಾದ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತದೆ’[೩]

ಡಾ.ಎಂ.ಬೈರೇಗೌಡರು ೧೯೯೧ರಲ್ಲಿ ‘ಸ್ಥಳನಾಮ ಐತಿಹ್ಯಗಳು’ ಎಂಬ ಲೇಖನದಲ್ಲಿ ಆನೇಕಲ್ಲು, ಕನಕಪುರ, ರಾಮನಗರ ತಾಲೂಕುಗಳಲ್ಲಿರುವ ಕೆಲವು ಸ್ಥಳನಾಮಗಳನ್ನು ಹಾಗೂ ಬೂದೊಟ್ಟೆ ಮುನೇಶ್ವರ, ತಣಿಗೆ ಸೊಣೆ, ಬಟ್ಟಲು ಗುಂಡೇಶ್ವರ, ಕೊಂಬಿನಕಲ್ಲು ಮೊದಲಾದ ನಿರ್ವಸಿತ (ಬೇಚರಾಕ್) ಸ್ಥಳನಾಮ ಗಳಲ್ಲಿರುವ ಐತಿಹ್ಯ, ಸ್ಥಳಪುರಾಣ, ಜನಪದ ನಿರುಕ್ತಿಗಳನ್ನು ಹೇಳಿದ್ದಾರೆ.

೧೯೯೪ರಲ್ಲಿ ಬೇ.ಗೋ.ರಮೇಶ ಅವರು ‘ಜನಪ್ರಿಯ ೩೦೦ ಸ್ಥಳನಾಮಗಳು’ ಕೃತಿಯಲ್ಲಿ ಕರ್ನಾಟಕದ ಜಿಲ್ಲಾ ಕೇಂದ್ರಗಳ, ಸ್ಥಳಗಳ ಅಧ್ಯಯನ ಕೈಗೊಂಡಿದ್ದು ಇವಕ್ಕೆ ಆಧಾರವಾಗಿ ಐತಿಹಾಸಿಕ ಮಹತ್ವ, ಪುರಾಣ, ಜನಪದ ಐತಿಹ್ಯ, ನಿರುಕ್ತಿ ಹೀಗೆ ಹಲವು ವೈವಿಧ್ಯತೆಯಿಂದ ಕೂಡಿದ ಅಂಶಗಳನ್ನು ಇಟ್ಟುಕೊಂಡ ಕೃತಿಯಾಗಿದೆ.

ಡಾ.ಎ.ಸುಬ್ಬಣ್ಣ ರೈ ಅವರು ಮುಂಬೈ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ ‘ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು’ ಇದರಲ್ಲಿ ಐತಿಹ್ಯ, ದಂತಕತೆ, ಸ್ಥಳಪುರಾಣ, ನಡುವಿನ ಸ್ವರೂಪ ಮತ್ತು ವ್ಯತ್ಯಾಸವನ್ನು ಲೇಖಕರು ಗುರುತಿಸುತ್ತಾರೆ. ಸ್ಥಳನಾಮ ಪುರಾಣಕ್ಕೆ ಐತಿಹಾಸಿಕ, ಸಾಮಾಜಿಕ ಸಂಗತಿಗಳು ಹೊಂದಿಕೆಯಾಗುವುದಿಲ್ಲ. ಐತಿಹ್ಯಗಳಲ್ಲಿ ಜನಪದರ ದೃಷ್ಟಿಕೋನವನ್ನು ಗುರುತಿಸಬಹುದು. ಜನಪದರನ್ನು ಐತಿಹ್ಯಗಳ ಸೃಷ್ಟಿಕರ್ತರು, ಪ್ರಸಾರಕರು, ಶ್ರೋತೃಗಳೆಂದು ವಿಂಗಡಿಸಿದ್ದಾರೆ. ಸ್ಥಳನಾಮ ಐತಿಹ್ಯವನ್ನು ಕುರಿತು ಅಧ್ಯಯನ ಕೈಗೊಳ್ಳುವ ಸಂಶೋಧಕರಿಗೆ ಇದೊಂದು ಅತ್ಯುತ್ತಮ ಕೃತಿಯಾಗಬಲ್ಲದು.

ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ೧೯೯೫ರಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಜಗದೀಶ್ ಮಠದ ಅವರ 'ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ' ಇದು ಕೈಫಿಯತ್ತುಗಳಲ್ಲಿರುವ ಸ್ಥಳನಾಮ ಕುರಿತ ಮೊದಲ ಸಂಪ್ರಬಂಧವಾಗಿದೆ. ಇದರಲ್ಲಿ ವ್ಯಕ್ತಿಗತ, ಸ್ಥಳಪ್ರಧಾನ, ಘಟಕಾಪ್ರಧಾನ, ಐತಿಹ್ಯ ಪ್ರಧಾನ ಸ್ಥಳನಾಮಗಳಾಗಿ ವರ್ಗೀಕರಿಸಲಾಗಿದೆ. ಇದೇ ಕಾಲಾವಧಿಯಲ್ಲಿ ಡಾ.ವಿ.ಜಿ.ಪೂಜಾರ ಅವರ 'ಗುಲ್ಬರ್ಗಾ ತಾಲೂಕಿನ ಸ್ಥಳನಾಮಗಳು-ಭಾಷಿಕ, ಸಾಂಸ್ಕೃತಿಕ, ಅಧ್ಯಯನ' ಎಂಬ ಲೇಖನದಲ್ಲಿ ಗುಲ್ಬರ್ಗಾ ತಾಲೂಕಿನ ಸ್ಥಳನಾಮಗಳ ಮೇಲೆ ಉರ್ದುವಿನ ಪ್ರಭಾವಕ್ಕೆ ನಿಜಾಮರ ಆಡಳಿತ ಹೇಗೆ ಪ್ರಭಾವಬೀರಿದೆ ಎಂಬುದನ್ನು ಹಲವು ನಿರ್ದಿಷ್ಟಗಳಿಂದ ಗುರುತಿಸುತ್ತಾರೆ. ಭೌಗೋಳಿಕ, ಭಾಷಿಕ, ಸಾಂಸ್ಕೃತಿಕ ಮಹತ್ವಗಳನ್ನು ಸ್ಥಳನಾಮಗಳ ಮೂಲಕ ಗುರುತಿಸುವಲ್ಲಿ ಲೇಖಕರು ಸಫಲರಾಗಿದ್ದಾರೆ. ಹೈದ್ರಾಬಾದ್-ಕರ್ನಾಟಕ ಭಾಗದ ಸ್ಥಳನಾಮಾಧ್ಯಯನಕ್ಕೆ ಉತ್ತಮ ಲೇಖನವಾಗಿದೆ.

೧೯೯೫ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಬೊಮ್ಮೇಗೌಡರು ಸಲ್ಲಿಸಿದ 'ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳು' ಪ್ರಬಂಧದಲ್ಲಿ ತಾಲೂಕಿನ ಸ್ಥಳಪುರಾಣ ಹಾಗೂ ಐತಿಹ್ಯಗಳನ್ನು ಒಳಗೊಂಡಿದೆ. ಶಾಸ್ತ್ರೀಯ ಅಧ್ಯಯನ, ಸ್ಥಳ ನಿಷ್ಪತ್ತಿಗೆ ಹೆಚ್ಚು ಗಮನ ನೀಡಿಲ್ಲವಾದರೂ ನಿರ್ದಿಷ್ಟಗಳಿಗನುಗುಣವಾಗಿ ಊರುಗಳನ್ನು ವಿಂಗಡಿಸಿದ್ದಾರೆ.

ಡಾ.ವಳಗರಹಳ್ಳಿ ವಿಶ್ವನಾಥ ಅವರು ೧೯೯೬ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ 'ಸಕಲೇಶಪುರ ಪರಿಸರದ ಸ್ಥಳನಾಮಗಳು' ಇದರಲ್ಲಿ ಅವರು ಸ್ಥಳನಾಮಗಳ ಸ್ವರೂಪ, ಉಗಮ ಮತ್ತು ಇತಿಹಾಸವನ್ನು ಹೇಳಿ, ಹಲವು ಬಗೆಯಾಗಿ ವರ್ಗೀಕರಿಸಿದ್ದಾರೆ. ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಜಾನಪದೀಯ ಅಂಶಗಳು ಸ್ಥಳನಾಮಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಭಾಷಿಕ ಅಧ್ಯಯನದಲ್ಲಿ ವರ್ಣನಾತ್ಮಕ ಮಾದರಿಯನ್ನು ಅನುಸರಿಸಿದ್ದಾರೆ. ಈ ಪರಿಸರದ ಸ್ಥಳನಾಮಗಳನ್ನು ವೈಜ್ಞಾನಿಕವಾಗಿ ನಿಷ್ಪತ್ತಿಯನ್ನು ಮಾಡಿದ್ದಾರೆ. ಇವರ ಮತ್ತೊಂದು ಕೃತಿ 'ಸ್ಥಳನಾಮಗಳು' (೧೯೯೬) ಇದು ಅವರ ಸಂಶೋಧನಾ ಕೃತಿಯ ಮುಂದುವರೆದ ಭಾಗವಾಗಿದೆ. ಇವರು ೨೦೦೦ರಲ್ಲಿ ಪ್ರಕಟಿಸಿರುವ ಮತ್ತೊಂದು ಕೃತಿ 'ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ'ದಲ್ಲಿ ಗ್ರಾಮನಾಮಗಳ ಸಂಸ್ಕೃತಿಯಲ್ಲಿ ಸಾಂಸ್ಕೃತಿಕ ಅಂಶಗಳ ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ.

೧೯೯೬ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ವೀರಭದ್ರಶರ್ಮ ಅವರು 'ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು' ಗ್ರಂಥದಲ್ಲಿ ಸಲ್ಲಿಸಿದ ಗ್ರಾಮನಾಮಗಳನ್ನು ಭೌಗೋಳಿಕ, ಸಾಂಸ್ಕೃತಿಕ, ಜನಾಂಗಿಕ ಎಂದು ವರ್ಗೀಕರಿಸಿದ್ದಾರೆ. ಬೌದ್ಧ, ಜೈನ, ವೈಷ್ಣವ, ಶೈವ ಹೀಗೆ ಮತ, ಧರ್ಮಗಳ, ಪಂಥಗಳ ಹಿನ್ನೆಲೆಯಲ್ಲಿ ಸ್ಥಳನಾಮಗಳನ್ನು ಗ್ರಹಿಸುವಲ್ಲಿ ಸಫಲರಾಗಿದ್ದಾರೆ. ಬಳ್ಳಾರಿ ಪರಿಸರದ ಕನ್ನಡ ಭಾಷೆಯ ಮೇಲೆ ತೆಲುಗಿನ ಪ್ರಭಾವವನ್ನು ಗುರುತಿಸಿದ್ದಾರೆ.

ಡಾ.ಜಾಜಿ ದೇವೇಂದ್ರಪ್ಪ ಇವರು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ.ಮಹಾಪ್ರಬಂಧ 'ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು' (೨೦೦೨) ಇದು ಕರ್ನಾಟಕ-ಆಂಧ್ರ ಗಡಿನಾಡಿನ ಸ್ಥಳನಾಮಗಳ ತೌಲನಿಕ ಅಧ್ಯಯನವಾಗಿದೆ. ಕನ್ನಡ ಮತ್ತು ತೆಲುಗು ಭಾಷೆಗಳ ಸ್ಥಳನಾಮಗಳಲ್ಲಿನ ಸಾಮ್ಯತೆ, ಪ್ರಭಾವ, ಐತಿಹ್ಯ, ಗಾದೆ, ಒಗಟುಗಳು ಹಾಗೂ ದ್ವಿಭಾಷಿಕ ವಲಯದಲ್ಲಿನ ಲಕ್ಷಣಗಳನ್ನು ಒಳಗೊಂಡಿದೆ. ಭೌಗೋಳಿಕ, ಸಾಮಾಜಿಕ, ಭಾಷಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ತುಲನಾತ್ಮಕ ವಿಶ್ಲೇಷಣೆಯನ್ನು ಒಳಗೊಂಡ ಕೃತಿಯಾಗಿದೆ.

ಪ್ರೊ.ಡಿ.ಲಿಂಗಯ್ಯನವರ 'ಶ್ರೀರಂಗಪಟ್ಟಣ ತಾಲೂಕಿನ ಕೆಲವು ಸ್ಥಳನಾಮಗಳು' ಲೇಖನದಲ್ಲಿ ತಾಲೂಕಿನ ವಿವಿಧ ಹಳ್ಳಿಗಳ ಪರಿಚಯಮಾಡಿ, ವ್ಯಕ್ತಿನಾಮ, ಸಸ್ಯವಾಚಿ, ಜಾತಿವಾಚಕ, ಭೂವಾಚಕ, ಪ್ರಾಣಿವಾಚಕಗಳ ಕುರಿತು ವಿಶ್ಲೇಷಿಸಿದ್ದಾರೆ. ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ 'ಗೌರಿ ಬಿದನೂರಿನ ಸುತ್ತಿನ ಸ್ಥಳನಾಮಗಳು' ಲೇಖನದಲ್ಲಿ ಒಂದು ಊರಿನ ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಸ್ಥಳನಾಮ ಮುಖ್ಯ ಎಂದು ಪ್ರತಿಪಾದಿಸಿದ್ದಾರೆ. ಸ್ಥಳನಾಮಗಳಲ್ಲಿ ನೈಸರ್ಗಿಕ, ಸಾಮಾಜಿಕ, ಐತಿಹಾಸಿಕ ಅಂಶಗಳು, ಪುರಾಣ, ಜನಪದ ಕತೆಗಳು ಅಡಕವಾಗಿವೆ ಎಂಬುದಾಗಿ ಚರ್ಚಿಸಿದ್ದಾರೆ.

ಕೆ.ವಿ.ನಾರಾಯಣ ಅವರ ಸಂಪಾದಕತ್ವದಲ್ಲಿ ಹೊರಬಂದ 'ಸ್ಥಳನಾಮಗಳು-ಪರಿವರ್ತನೆ ಮತ್ತು ಪ್ರಭಾವ' ಎಂಬ ಕೃತಿಯಲ್ಲಿ ಸ್ಥಳನಾಮಗಳ ಮೇಲೆ ಅನ್ಯಭಾಷೆಗಳು ಬೀರಿರುವ ಪ್ರಭಾವ ಕುರಿತು ಎಂ.ಬಿ.ನೇಗಿನಹಾಳ-ಮರಾಠಿಪ್ರಭಾವ, ವಿ.ಗೋಪಾಲಕೃಷ್ಣ-ಆರ್ಯ ಸಂಸ್ಕೃತ ಪ್ರಭಾವಗಳು, ಕೆ.ಎಂ.ವೀರಭದ್ರಶರ್ಮ, ಇಸ್ಲಾಂ ಉರ್ದು ಪ್ರಭಾವಗಳು, ಎಸ್.ಎಸ್.ಅಂಗಡಿ 'ಕನ್ನಡ ದ್ರಾವಿಡ ಭಾಷಾ ಪ್ರಭಾವಗಳು ಮತ್ತು ಕರ್ನಾಟಕ ಸ್ಥಳನಾಮ ಅಧ್ಯಯನಗಳು, ಡಿ.ಪಾಂಡುರಂಗಬಾಬು, ಆಂಗ್ಲ ಆಡಳಿತ, ಇಂಗ್ಲೀಷ್ ಪ್ರಭಾವ ಎಂಬ ಲೇಖನಗಳಿಂದ ವಿವಿಧ ಕಾಲಘಟ್ಟಗಳಲ್ಲಿ ಅನ್ಯ ಭಾಷೆಯ ಸಂಪರ್ಕ ಸ್ಥಳನಾಮಗಳ ಮೇಲೆ ಉಂಟಾದ ಪರಿಣಾಮಗಳನ್ನು ಚರ್ಚಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಭಾಷಾಧ್ಯಯನ ವಿಭಾಗವು 'ಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನಗಳನ್ನು ಅಕಾರಾಧಿಯಾಗಿ ನೀಡುವ ಮಹತ್ತರವಾದ ಕಾರ್ಯವನ್ನು' 'ಕರ್ನಾಟಕ ಶಾಸನೋಕ್ತ ಸ್ಥಳನಾಮಗಳು' ಕೃತಿಯಲ್ಲಿ ಹೊರತರುವ ಕಾರ್ಯಮಾಡಿದೆ, ಇದು ಗ್ರಾಮಾಧ್ಯಯನ ಕೈಗೊಳ್ಳುವ ಸಂಶೋಧಕರಿಗೆ ಪುರಾತತ್ವ ಶಾಸ್ತ್ರಜ್ಞರಿಗೆ ಅತ್ಯುತ್ತಮ ಗ್ರಂಥವಾಗಬಲ್ಲದು.

ಸ್ಥಳನಾಮ ಕುರಿತಾದ ಪುಸ್ತಕ ಪ್ರಕಟಣೆಗಳು ಬೆರಳೆಣಿಕೆಯಷ್ಟಾದರೂ ಮೇಲ್ಕಾಣಿಸಿದ ವಿದ್ವಾಂಸರುಗಳಲ್ಲದೆ ಡಾ.ಹೆಚ್.ಎಂ.ಮಹೇಶ್ವರಯ್ಯ, ಹಂಪನಾಗರಾಜಯ್ಯ, ಕೆ.ವಿ.ರಮೇಶ, ಚನ್ನಕ್ಕ ಎಲಿಗಾರ ಮೊದಲಾದವರು ಸ್ಥಳನಾಮ ಕುರಿತು ಹಲವಾರು ಲೇಖನಗಳನ್ನು ರಚಿಸಿದ್ದಾರೆ ಡಾ.ಸಿ.ಎಂ.ವಿಶ್ವನಾಥಯ್ಯ ಮೊದಲಾದವರು ಸ್ಥಳನಾಮಗಳ ಅಧ್ಯಯನ ಕೈಗೊಂಡು ಸಂಶೋಧನಾ ನಿಬಂಧಗಳನ್ನು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಪಿಎಚ್.ಡಿ., ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧಕರಾಗಿದ್ದಾರೆ. ಅಲ್ಲದೇ

ನಾಡಿನ ಹಲವಾರು ಪತ್ರಿಕೆಗಳಲ್ಲಿ ಹಲವಾರು ಸ್ಥಳನಾಮ ಕುರಿತಾದ ಬಿಡಿಬಿಡಿ ಲೇಖನಗಳು ಪ್ರಕಟಗೊಳ್ಳುತ್ತಿವೆ. ಆ ಮೂಲಕ ಸ್ಥಳನಾಮಾಧ್ಯಯನ ಶಾಸ್ತ್ರವು ಆಸಕ್ತ ವಿದ್ವಾಂಸರ ಗಮನವನ್ನು ಸೂಜಿಗಲ್ಲಿನಂತೆ ತನ್ನೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಅಡಿ ಟಿಪ್ಪಣಿಗಳು

೧. ಅರ್ಕೆ ಮಣಿಪಾಲ, ಹೆಸರಿನಲ್ಲೇನಿದೆ? ಪು.೨೦. ೧೯೮೯

೨. ದೇ.ಜ.ಗೌ, ಸ್ಥಳನಾಮ ವ್ಯಾಸಂಗ, ಪುಟ.೩೬, ೧೯೯೦

೩. ಜಾಜಿ ದೇವೇಂದ್ರಪ್ಪ, ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಪುಟ.೨೯, ೨೦೦೪

ಅಧ್ಯಾಯ - ೩

ರಾಮನಗರ ಜಿಲ್ಲೆಯ ಸ್ಥಳನಾಮಗಳ ರಾಚನಿಕ ಸ್ವರೂಪ ಮತ್ತು ವರ್ಗೀಕರಣ

೩.೧. ಸ್ಥಳನಾಮಗಳ ಪ್ರಚಲಿತ ವರ್ಗೀಕರಣ

೩.೨. ರಾಮನಗರ ಜಿಲ್ಲೆಯ ಸ್ಥಳನಾಮಗಳ ರಾಚನಿಕ ಸ್ವರೂಪ

೩.೨.೧. ಏಕಘಟಕಾಧಾರಿತ ಸ್ಥಳನಾಮಗಳು

೩.೨.೨. ದ್ವಿಘಟಕಾಧಾರಿತ ಸ್ಥಳನಾಮಗಳು

೩.೨.೩. ಬಹುಘಟಕಧಾರಿತ ಸ್ಥಳನಾಮಗಳು

೩.೩. ರಾಮನಗರ ಜಿಲ್ಲೆಯ ಸ್ಥಳನಾಮ ವರ್ಗೀಕರಣ

೩.೩.೧. ನಿರ್ದಿಷ್ಟಕ್ಕನುಗುಣವಾಗಿ

೩.೩.೨. ವಾರ್ಗಿಕಕ್ಕನುಗುಣವಾಗಿ

೩.೩.೩. ಸಂಕೀರ್ಣ

ಅಧ್ಯಾಯ ೩

ರಾಮನಗರ ಜಿಲ್ಲೆಯ ಸ್ಥಳನಾಮಗಳ ರಾಚನಿಕ ಸ್ವರೂಪ ಮತ್ತು ವರ್ಗೀಕರಣ

ಪ್ರಪಂಚದಲ್ಲಿ ಬಣ್ಣ, ರೂಪ ಮತ್ತು ಎತ್ತರ ಹೀಗೆ ಒಬ್ಬರಂತೆ ಇನ್ನೊಬ್ಬರು ಏಳು ಜನರಿರುತ್ತಾರೆ ಎಂದು ನಂಬಬಹುದಾದರೆ, ಈ ಜಗತ್ತಿನಲ್ಲಿ ಎಷ್ಟು ಮಾನವನ ನೆಲೆಗಳಿವೆಯೋ ಅಷ್ಟು ಊರುಗಳಿರುವುದು ಸಹಜ. ಅಷ್ಟೇ ಅಲ್ಲದೇ ಅಷ್ಟೂ ಊರುಗಳಿಗೂ ವೈವಿಧ್ಯತೆಯಿಂದ ಕೂಡಿದ ಹೆಸರುಗಳಿರುವುದು ಅಷ್ಟೇ ಸತ್ಯ. ಎಷ್ಟೋ ಹೆಸರುಗಳು ಅನೇಕ ಕಾರಣಗಳಿಂದ ಪುನರಾವರ್ತನೆಯಾಗುವುದುಂಟು. ಸ್ಥಳನಾಮಗಳಲ್ಲಿ ಕಾಣಿಸಿಕೊಳ್ಳುವ ಪ್ರತಿರೂಪ (Duplication) ಸಾಮಾನ್ಯವಾಗಿ ಆಕಸ್ಮಿಕವಾದುದೇ ಹೊರತು ಉದ್ದೇಶಿತ ವಾದುದಲ್ಲ. ಎರಡು ಸ್ಥಳಗಳ ಭೂ ಸನ್ನಿವೇಶಗಳಲ್ಲಿನ ಪರಸ್ಪರ ಸಾದೃಶ್ಯವೇ ಈ ಪ್ರತಿರೂಪಕ್ಕೆ ಕಾರಣ ಹೊರತು ವಲಸೆಯಂಥ ಉದ್ದೇಶಿತ ಘಟನೆಗಳಲ್ಲ. ಒಂದು ಸ್ಥಳದಿಂದ ವಲಸೆ ಹೋದ ಒಂದು ಜನವರ್ಗ, ತಮ್ಮ ಹೊಸ ವಾಸ್ತವ್ಯದ ಜಾಗಕ್ಕೆ ತಮ್ಮ ಮೂಲ ಸ್ಥಳದ ಹೆಸರನ್ನೇ ಅಭಿಮಾನದಿಂದ ನಾಮಕರಣ ಮಾಡಬಹುದು. ಇಂಥ ಕಡೆ ಹೆಸರುಗಳಲ್ಲಿ ತಲೆದೋರುವ ಈ ಸಮರೂಪತೆಯನ್ನು 'ಅನುಕರಣೆ'(imitation) ಎಂದು ಕರೆಯಲಾಗಿದೆ. ಸ್ಥಳನಾಮದೊಳಗಣ ಈ ಪ್ರತಿರೂಪ ಹಾಗೂ ಅನುಕರಣೆಗಳು ಭೌಗೋಳಿಕವಾಗಿ ಮಾತ್ರವಲ್ಲ, ಸಮಾಜಶಾಸ್ತ್ರೀಯವಾಗಿಯೂ ಅತ್ಯಂತ ಮೌಲಿಕವಾದ ಮಾಹಿತಿಯನ್ನು.........ಕೆಲವು ನಿರ್ದಿಷ್ಟ ಭೂ ವೈಶಿಷ್ಟ್ಯಗಳು ಒಂದು ಪ್ರದೇಶಕ್ಕೆ ಸೀಮಿತವಾಗಿದ್ದಾಗ, ಅಂಥ ಸ್ಥಳಗಳ ಹೆಸರಿನಲ್ಲಿ ಅಥವಾ ಸ್ಥಳನಾಮ ಘಟಕಗಳಲ್ಲಿ ಪರಸ್ಪರ ಸಮರೂಪತೆ ಕಾಣಿಸಿಕೊಳ್ಳಬಹುದು"[1] ಎಂಬ ಆರ್ಕೆಮಣಿಪಾಲರ ಮಾತು ಗಮನಾರ್ಹವಾದುದ್ದಾದರೂ "ಅವುಗಳ (ಸ್ಥಳನಾಮಗಳ) ಉಗಮ ವಿಕಾಸಗಳ ಹಿನ್ನೆಲೆಯಲ್ಲಿ ಮಾನವ ಧರ್ಮದ ಏಕಸೂತ್ರತೆ ಹರಿಯುತ್ತಿರುವುದರಿಂದ, ಕೆಲವೇ ಕೆಲವು ತತ್ವಗಳ ಪರಿಧಿಯೊಳಗೆ ಅವನ್ನು ವರ್ಗೀಕರಣ ಮಾಡುವುದಾಗಲಿ, ಅವುಗಳ ಬೆಳಕಿನಲ್ಲಿ ಅವನ್ನು ವರ್ಗೀಕರಣ ಮಾಡುವುದಾಗಲೀ ಕಷ್ಟವಾಗಲಾರದು"[2] ಎಂಬ ದೇಜಗೌ ಅವರ ಅಭಿಪ್ರಾಯವನ್ನು ಗಮನಿಸಿದರೆ ಧರ್ಮ, ಭಾಷೆ, ಜಾತಿ, ಬಣ್ಣ ಯಾವುದೇ ಇರಲಿ ಇದೆಲ್ಲದರ ಗಡಿಯನ್ನು ಮೀರಿದ್ದು 'ಮಾನವಧರ್ಮ' ಎಂಬುದನ್ನು ಸ್ಥಳನಾಮಗಳಲ್ಲಿ ಕಂಡು ಬರುತ್ತಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದೆ. ರಾಮನಗರ ಜಿಲ್ಲೆಯ ಸ್ಥಳನಾಮಗಳ ವರ್ಗೀಕರಣವನ್ನು ಮಾಡುವುದಕ್ಕಿಂತ ಮೊದಲು ಈಗಾಗಲೇ ಸ್ಥಳನಾಮವನ್ನು ಅಧ್ಯಯನ ಮಾಡಿರುವ ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ಪೌರ್ವಾತ್ಯ ವಿದ್ವಾಂಸರು ಸ್ಥಳನಾಮ ವರ್ಗೀಕರಣ ಮಾಡಿದ್ದಾರೆ. ಈ ವರ್ಗೀಕರಣದಿಂದ ಸ್ಥಳನಾಮಗಳ

ವೈಜ್ಞಾನಿಕ ಅಧ್ಯಯನ ಕೈಗೊಳ್ಳಲು ನೆರವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸ್ಥಳನಾಮಗಳ ವರ್ಗೀಕರಣದ ಸ್ಥೂಲ ಚಿತ್ರಣವನ್ನು ತಿಳಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

೩.೧. ಸ್ಥಳನಾಮಗಳ ಪ್ರಚಲಿತ ವರ್ಗೀಕರಣ

ಸಾಮಾನ್ಯವಾಗಿ ಸ್ಥಳನಾಮಗಳು ಕೂಡುನುಡಿಗಳಾಗಿರುತ್ತವೆ. ಇವು ಎರಡು ಘಟಕಗಳಿಂದ ಕೂಡಿರುತ್ತವೆ. ಇವುಗಳಲ್ಲಿ ಪೂರ್ವಭಾಗವು ವಿಶೇಷಾಂಶವಾಗಿದ್ದು ಇದನ್ನು ಆದಿಘಟಕ ಎಂದು ಕರೆಯಲಾಗುತ್ತದೆ. ಉತ್ತರ ಭಾಗವು ಸಾಮಾನ್ಯಾಂಶವಾಗಿರುತ್ತದೆ. ಇದನ್ನು ಅಂತ್ಯಘಟಕ ಎಂತಲೂ ಕರೆಯಲಾಗುತ್ತದೆ.

ವೈವಿಧ್ಯತೆಯ ಆಗರವನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ಸ್ಥಳನಾಮ ಘಟಕಗಳು ತಜ್ಞರ ಬುದ್ಧಿ ಪ್ರತಿಭೆಗಳಿಗೆ ಈಗಲು ಸವಾಲಾಗಿರುವ ಸಂಗತಿ. ಎರಡನೆಯದಾದ ಅಂತ್ಯ ಘಟಕಗಳ ವರ್ಗೀಕರಣ ಸರಳ ಹಾಗೂ ಸುಲಭವಾದುದ್ದಾಗಿದೆ.

ಆಂಗ್ಲ ಸ್ಥಳನಾಮಗಳ ಕೋಶವನ್ನು ಸಿದ್ಧಪಡಿಸಿ ಲೋಕ ವಿಖ್ಯಾತನಾದ ಇ.ಎಕ್ವಾಲ್ ಅವರು ಮಾನವನ ವಸತಿ ಸ್ಥಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೂರು ಗುಂಪುಗಳನ್ನಾಗಿ ವರ್ಗೀಕರಿಸುತ್ತಾರೆ.

೧. ಬುಡಕಟ್ಟು ಜಾತಿಯ ಸ್ಥಳನಾಮಗಳು

೨. ವಸತಿಯನ್ನು ನಿರ್ದೇಶಿಸುವ ದ್ವಿತೀಯ ಘಟಕಗಳುಳ್ಳ ಸ್ಥಳನಾಮಗಳು

೩. ನಿಸರ್ಗವಾಚಕ ಸ್ಥಳನಾಮಗಳು

ವೈವಿಧ್ಯಪೂರ್ಣವಾದ ಸ್ಥಳನಾಮಗಳನ್ನು ಮೇಲ್ಕಾಣಿಸಿದ ವರ್ಗೀಕರಣದ ಪರಿಧಿಗೆ ತರುವುದು ಕಷ್ಟದಾಯಕ. ಆದರೂ ಸ್ಥಳನಾಮ ವರ್ಗೀಕರಣ ಇಲ್ಲದ ಸಂದರ್ಭದಲ್ಲಿ ಈ ರೀತಿಯ ವರ್ಗೀಕರಣದ ಆಲೋಚನೆ ಮೆಚ್ಚುವಂಥದ್ದು.

ಲ್ಯಾಂಬರ್ಟ್ ಮತ್ತು ಮೇರಿಯಾ ಪೈ ಇವರು ವರ್ಗೀಕರಣ ತತ್ವಗಳನ್ನು ರೂಪಿಸಿ, ಊರುಗಳ ಉಗಮದ ಕಾರಣಗಳ ವಿಸ್ತೃತವಾದ ಚರ್ಚೆಯನ್ನು ಮಾಡಿದ್ದಾರೆ. ಇವರು ಸ್ಥಳನಾಮಗಳನ್ನು ಹನ್ನೆರಡು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ಚಾರಿತ್ರಿಕ ನಾಮಗಳು

೨. ಮತೀಯ ನಾಮಗಳು

೩. ಪ್ರಾಣಿ ನಾಮಗಳು

೪. ವ್ಯಕ್ತಿ ನಾಮಗಳು

೫. ಜನಾಂಗ ನಾಮಗಳು

೬. ಪುರಾತನ ನಾಮಗಳ ಪುನರಾವರ್ತನೆ

೭. ಸಸ್ಯ ಹಾಗೂ ಲೋಹನಾಮಗಳ ಪ್ರತಿಕರಣ

೮. ಭಾವನಾಮ ಆಧಾರಿತ ಹೆಸರು

೯. ಸಾಹಿತ್ಯ ಮತ್ತು ಕಲ್ಪನಾ ಪ್ರೇರಿತ ಹೆಸರು

೧೦. ಸುಖದುಃಖ ಸೂಚಕ ನಾಮಗಳು

೧೧. ಪ್ರಮಾದಲಬ್ಧ ನಾಮಗಳು

೧೨. ಹಾಸ್ಯ ನಾಮಗಳು

ಕೆಲವು ಸಾಧ್ಯವಾದಷ್ಟು ಮಟ್ಟಿಗೆ ಪೂರ್ಣ ಪ್ರಮಾಣದ ವರ್ಗೀಕರಣವಲ್ಲದಿದ್ದರೂ ಕೂಡ ಸ್ಥಳನಾಮಗಳ ಉಗಮಗಳ ಬಗೆಗೆ ಬೆಳಕು ಚೆಲ್ಲುವಲ್ಲಿ ಸಹಕಾರಿಯಾಗಿವೆ. American Place Names ಗ್ರಂಥವನ್ನು ರಚಿಸಿದ ಸ್ಟೆನಾರ್ಡ್, ಜಾರ್ಜ್ ಆರ್.ಸ್ಟಿವರ್ಟ್ ಎಂಬ ವಿದ್ವಾಂಸನು ಸ್ಥಳನಾಮಗಳನ್ನು ಹತ್ತು ವಿಧವಾಗಿ ವಿಂಗಡಿಸಿದ್ದಾರೆ.

೧. Descriptive names

೨. Association names

೩. Possessive names

೪. Incident names

೫. Commemorative names

೬. Commendatory names

೭. Coined names

೮. Transfer and Shift names

೯. Folk Etymology

೧೦. Mistake names

ಜೆ.ಜೆ. ಎಗ್ಲಿಯು ೧. Natural Names ೨. cultural names ಎಂದು ಬಹಳ ಸಂಕ್ಷಿಪ್ತವಾಗಿ ವರ್ಗೀಕರಿಸಿದ್ದಾರೆ.

ಹೀಗೆ ಕೆಲವು ಪಾಶ್ಚಿಮಾತ್ಯ ವಿದ್ವಾಂಸರು ವರ್ಗೀಕರಣ ವಿಧಾನಗಳನ್ನು ಹೇಳಿದ್ದರೂ ಅವುಗಳಲ್ಲಿ ಸಾದೃಶ್ಯಗಳೇ ಇರುವುದು ಕಂಡು ಬರುತ್ತದೆ. ವರ್ಗಗಳ ಶೀರ್ಷಿಕೆಯ ಹೆಸರು ಬೇರೆ ಬೇರೆಯಾದರೂ ವಿವರಣೆಯಲ್ಲಿ ಏಕತಾನತೆ ಕಾಣುವುದು.

ಪಾಶ್ಚಿಮಾತ್ಯ ವಿದ್ವಾಂಸರಂತೆಯೇ ಸ್ಥಳನಾಮಗಳನ್ನು ಅಧ್ಯಯನ ಮಾಡಿದ ಭಾರತೀಯ ವಿದ್ವಾಂಸರೂ ಕೂಡ ಸ್ಥಳನಾಮ ವರ್ಗೀಕರಣವನ್ನು ಮಾಡಿದ್ದಾರೆ. ಭಾಷಾ ವಿಜ್ಞಾನದಲ್ಲಿ ಖ್ಯಾತಿಯನ್ನು ಪಡೆದಿರುವ ಎಸ್.ಕೆ.ಚಟರ್ಜಿಯವರು ಸ್ಥಳನಾಮಗಳನ್ನು ಐದು ವಿಧವಾಗಿ ವಿಂಗಡಿಸಿದ್ದಾರೆ.

೧. ಬುಡಕಟ್ಟು ಅಥವಾ ಜಾತಿಯ ಹೆಸರುಗಳಿಂದ

೨. ನೈಸರ್ಗಿಕ ಲಕ್ಷಣಗಳ ಹೆಸರುಗಳಿಂದ

೩. ಧಾರ್ಮಿಕ ಸಂಗತಿಗಳಿಂದ

೪. ವ್ಯಕ್ತಿ ಅಥವಾ ಘಟನೆಗಳ ನಾಮಗಳಿಂದ

೫. ಹಳೆಯ ಹೆಸರುಗಳ ಪುನರಾವರ್ತನೆ

ಪುರಾತತ್ವಶಾಸ್ತ್ರದ ಖ್ಯಾತ ಸಂಶೋಧಕರಾದ ಎಚ್.ಡಿ.ಸಂಕಾಲಿಯಾ ಅವರು ಸ್ಥಳನಾಮಗಳ ಕುರಿತು ವ್ಯಾಪಕವಾದ, ವಿಸ್ತೃತವಾದ ಸಂಶೋಧನೆ ನಡೆಸಿ ಸ್ಥಳನಾಮಗಳನ್ನು ಏಳು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ವ್ಯಕ್ತಿನಾಮಾಧಾರಿತ

೨. ಘಟನೆಯಾಧಾರಿತ

೩. ಸಂಪ್ರದಾಯ ಮತ್ತು ಮೌಢ್ಯಾಧಾರಿತ

೪. ಭೌಗೋಳಿಕ ಲಕ್ಷಣಾಧಾರಿತ

೫. ಹೂ, ಹಣ್ಣು, ಮರ ಬೆಳೆಯಾಧಾರಿತ

೬. ಪ್ರಾಣಿ, ಪಕ್ಷಿಯಾಧಾರಿತ

೭. ಹಳೆಯ ಹೆಸರುಗಳಿಂದ ಹುಟ್ಟುತ್ತವೆ ಎಂದು ಹೇಳಿದ್ದಾರೆ.

ಆಂಧ್ರ ಭಾಷಾ ವಿದ್ವಾಂಸರಾದ ಸಿ.ನಾರಾಯಣರಾಯರು ತಮ್ಮ "A study of place names in Ananthapuram district" ಕೃತಿಯಲ್ಲಿ ೧೯ ವರ್ಗಗಳನ್ನು ಪಟ್ಟಿಮಾಡುತ್ತಾರೆ.

ಕೇಂದ್ರ ಶಾಸನ ಇಲಾಖೆಯ ಸಂಶೋಧಕರಾದ ರಾಮಚಂದ್ರಮೂರ್ತಿಯವರು ತಮ್ಮ "A study of telugu place names" ಎಂಬ ನಿಬಂಧದಲ್ಲಿ ಒಂಭತ್ತು ವಿಧಗಳನ್ನಾಗಿ ಸ್ಥಳನಾಮಗಳನ್ನು ವರ್ಗೀಕರಿಸಿದ್ದಾರೆ.

೧. ಭೌತಿಕ ಮತ್ತು ಭೌಗೋಳಿಕ ಲಕ್ಷಣಗಳಿಂದ

೨. ಸಸ್ಯಲೋಕದ ಹೆಸರುಗಳಿಂದ

೩. ಪ್ರಾಣಿ ಜಗತ್ತಿನ ಹೆಸರುಗಳಿಂದ

೪. ಧಾರ್ಮಿಕ ಸಂಗತಿಗಳ ಹೆಸರುಗಳಿಂದ

೫. ಜನಾಂಗಿಕ ಅಭಿದಾನಗಳಿಂದ

೬. ಚಾರಿತ್ರಿಕ ವೈಶಿಷ್ಟ್ಯಗಳಿಂದ

೭. ವ್ಯಾಪಾರ ವಾಣಿಜ್ಯದ ಸಂಗತಿಗಳಿಂದ

೮. ಪ್ರಸಿದ್ಧ ನಗರಗಳ ನಾಮಗಳಿಂದ

೯. ಸಂಕೀರ್ಣ ವಿಷಯಗಳಿಂದ.

ಸಂಕೀರ್ಣ ವಿಷಯಗಳ ವರ್ಗಕ್ಕೆ ಒಂದೇ ಹೆಸರಿನ ಹಳೆಯ ಮತ್ತು ಹೊಸ ಸ್ಥಳಗಳನ್ನು ಹಾಗೂ ನಾನಾ ಗಾತ್ರಗಳುಳ್ಳ ಗ್ರಾಮಗಳನ್ನು, ಲೋಹ, ವರ್ಣ, ಆಹಾರ ಪದಾರ್ಥ ಮತ್ತು ಭಾವನಾ ಪ್ರಧಾನ ಅಭಿದಾನಗಳನ್ನು ಸೇರಿಸಿರುವುದರಿಂದ ವ್ಯಾಪ್ತಿಯ ನ್ಯೂನ್ಯತೆಗೆ ಒಳಗಾಗಿದೆ. ಕ್ಲುಪ್ತಾವಧಿಯ ಶಾಸನೋಕ್ತ ಹೆಸರುಗಳು ಈ ವರ್ಗೀಕರಣಕ್ಕೆ ಆಧಾರವಾಗಿರುವುದರಿಂದ ದೋಷ ಉಂಟಾಗಿದೆ.

ಕೆ.ಪಿ.ಪದ್ಮ ಮೆನನ್ ಇವರು "Some place names of malbar" ಲೇಖನದಲ್ಲಿ ಸ್ಥಳನಾಮಗಳನ್ನು ಹತ್ತು ವಿಧವಾಗಿ ವಿಂಗಡಿಸಿದ್ದಾರೆ.

೧. Topographical condition

೨. Artificial condition

೩. Native soil products

೪. Temple

೫. Ancient military holds

೬. Culture and religious

೭. Incidental

೮. Trade culture

೯. Profession of the people

೧೦. Accidental Phenomena

"Place names of Selam district" ಎಂಬ ಲೇಖನದಲ್ಲಿ ರಾಮಚಂದ್ರ ಚೆಟ್ಟಿಯಾರ್ ಇವರು ಸ್ಥಳನಾಮಗಳನ್ನು ಆರು ವರ್ಗಗಳಾಗಿ ವಿಂಗಡಿಸಿದ್ದಾರೆ.

೧. Hill area

೨. Water Sources

೩. Plains

೪. Civic life

೫. Agriculture

೬. Religion

ಹೀರಾಲಾಲ್ ಅವರು 'Indian Antiquary'ಯಲ್ಲಿ ಮೂರು ರೀತಿಯಾಗಿ ವಿಂಗಡಿಸಿದ್ದಾರೆ.

೧. ಮರಗಳ ಬೆಳವಣಿಗೆಗಿಂತ ಮುಂಚಿತವಾಗಿ ಇಟ್ಟ ಹೆಸರುಗಳು

೨. ಪ್ರಾಣಿ ಪಕ್ಷಿಗಳಿಂದ ಬಂದ ಹೆಸರುಗಳು

೩. ದೇವತೆಗಳಿಂದ ಬಂದ ಹೆಸರುಗಳು

ಇವರ ವರ್ಗೀಕರಣದಲ್ಲಿ ಸಾಮಾಜಿಕ, ಚಾರಿತ್ರಿಕ ಇನ್ನೂ ಮೊದಲಾದ ವೈವಿಧ್ಯತೆಯಿಂದ ಕೂಡಿರುವ ಸ್ಥಳನಾಮಗಳ ಉಗಮದ ಬಗ್ಗೆ ವಿಂಗಡಿಸಿಲ್ಲ.

ಕನ್ನಡದ ಹಿರಿಯ ಸಂಶೋಧಕ ವಿದ್ವಾಂಸರಾದ ಶಂ.ಬಾ.ಜೋಷಿಯವರು ತಮ್ಮ 'ಎಡೆಗಳು ಹೇಳುವ ಕಂನಾಡ ಕತೆ'ಯಲ್ಲಿ ಸ್ಥಳನಾಮಗಳ ವರ್ಗೀಕರಣಗಳು ಇಪ್ಪತ್ತೆರಡು ಬಗೆಯಾಗಿ ಹೇಳಿ; ಒಂದೊಂದಕ್ಕೂ ಉದಾಹರಣೆಗಳನ್ನು ಕೊಟ್ಟು ಸಮರ್ಥಿಸಿದ್ದಾರೆ. ಆ ಇಪ್ಪತ್ತೆರಡು ಬಗೆಗಳು ಇಂತಿವೆ.

೧. ಪ್ರಾಣಿಗಳಿಂದ ಬಂದವು

೨. ಗಿಡಗಂಟಿಗಳಿಂದ ಬಂದ ಹೆಸರು

೩. ದೇಹದ ಅಂಗಾಂಗಳಿಂದ

೪. ಬಳಗದವರಿಂದ

೫. ಮನೆಗಳಿಂದ

೬. ದಿನಸುಗಳಿಂದ

೭. ಬಣ್ಣಗಳಿಂದ

೮. ಹರಳುಗಳಿಂದ

೯. ಬಂಗಾರದಿಂದ

೧೦. ಅಂಕೆಗಳಿಂದ

೧೧. ಗ್ರಹಾದಿಗಳಿಂದ

೧೨. ನೆಲದಿಂದ

೧೩. ಬೇಸಾಯದಿಂದ

೧೪. ಕಾಲದಿಂದ

೧೫. ಮಳೆಮಿಂಚು ಮುಂತಾದವುಗಳಿಂದ

೧೬. ಕಾಲದಿಂದ

೧೭. ಚಿಕ್ಕ, ದೊಡ್ಡ

೧೮. ಕೂಡಿಕೆಯಿಂದ

೧೯. ದೇವತಾದಿಗಳಿಂದ

೨೦. ಜನಗಳಿಂದ

೨೧. ವ್ಯವಸಾಯ ಉದ್ಯೋಗಾದಿಗಳಿಂದ

೨೨. ವ್ಯಕ್ತಿಗಳಿಂದ

ಎ. ಪುರಾತನ ಋಷಿ

ಬಿ. ರಾಜಕೀಯ ಸಾಮಾಜಿಕ

ಸಿ. ಧಾರ್ಮಿಕ

ಈ ಪಟ್ಟಿ ಉದ್ದವಾಗಿ ಕಂಡರೂ ಅತಿವ್ಯಾಪ್ತಿ ದೋಷದಿಂದ ಮುಕ್ತವಾಗಿ ಬಹುಮಟ್ಟಿಗೆ ವೈಜ್ಞಾನಿಕವಾಗಿದೆಯೆಂದು ಹೇಳಬಹುದಾಗಿದೆ ಎಂಬುದು ದೇಜಗೌರವರ ಅಭಿಪ್ರಾಯವಾಗಿದೆ.

ದೇ.ಜವರೇಗೌಡರು ತಮ್ಮ 'ಸ್ಥಳನಾಮ ವ್ಯಾಸಂಗ' ಕೃತಿಯಲ್ಲಿ ಸ್ಥಳನಾಮಗಳನ್ನು ಹತ್ತು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ವಸತಿ ಸೂಚಿಸುವ ಘಟಕಗಳು

೨. ಬೆಟ್ಟ, ಗುಡ್ಡ, ಕಲ್ಲು ಸೂಚಕಗಳು

೩. ಜಲಸೂಚಕ ಘಟಕಗಳು

೪. ಭೌಗೋಳಿಕ ಲಕ್ಷಣ ಹೇಳುವಂಥವು

೫. ಜಾತಿ, ಕುಲಧರ್ಮ ಸೂಚಕ

೬. ವ್ಯಾಪಾರ ಕೇಂದ್ರವನ್ನು ಹೇಳುವಂಥವು

೭. ಸೈನಿಕರಿಗೆ ಸಂಬಂಧಿಸಿದಂತಹವು

೮.. ಸಸ್ಯವಾಚಿ

೯. ಪ್ರಾಣಿವಾಚಿ

೧೦. ಸಂಕೀರ್ಣ ಘಟಕಗಳು

ಈ ವರ್ಗೀಕರಣವೂ ಕೂಡ ಅಪರಿಪೂರ್ಣ ಎಂದು ಶ್ರೀಯುತ ದೇಜಗೌ ಅವರೇ ಒಪ್ಪಿಕೊಂಡಿದ್ದಾರೆ.

ಡಾ.ಎಂ.ಎಂ.ಕಲಬುರ್ಗಿಯವರು 'ಕನ್ನಡ ನಾಮವಿಜ್ಞಾನ'ದಲ್ಲಿ ಐದು ಬಗೆಯ ಸ್ಥಳನಾಮಗಳನ್ನು ವರ್ಗೀಕರಿಸಿದ್ದಾರೆ.

೧. ನಿಸರ್ಗವಾಚಿ

೨. ನಿರ್ಮಾಣವಾಚಿ

೩. ಜನಾಂಗವಾಚಿ

೪. ವ್ಯಕ್ತಿವಾಚಿ

೫. ಆದರ್ಶವಾಚಿ

ಕನ್ನಡದಲ್ಲಿ ಸ್ಥಳನಾಮಗಳ ಬಗೆಗೆ ಮೊಟ್ಟಮೊದಲ ಸಂಶೋಧನಾ ನಿಬಂಧವನ್ನು ರಚಿಸಿ ಡಾಕ್ಟರೇಟ್ ಪದವಿಯನ್ನು ಪಡೆದವರು ಡಾ.ರಘುಪತಿಭಟ್ ಕೆಮ್ತೂರ್. ಇವರ 'ತುಳು ನಾಡಿನ ಸ್ಥಳನಾಮಗಳು' ಈ ಸಂಶೋಧನಾ ನಿಬಂಧದಲ್ಲಿ ಸ್ಥಳನಾಮಗಳನ್ನು ಎರಡು ಪ್ರಧಾನ ವರ್ಗೀಕರಣಗಳನ್ನು ಮಾಡಿ ಅವುಗಳಲ್ಲಿಯೇ ಒಳ ವಿಭಾಗಗಳಾಗಿ ಈ ಕೆಳಕಂಡಂತೆ ವರ್ಗೀಕರಿಸಿದ್ದಾರೆ.

ಅ. ಪ್ರಾಕೃತಿಕ ಹೆಸರುಗಳು

೧. ಜಲವಾಚಕ

೨. ಜಲವಾಚಕ ಸಂಬಂಧಿ ವಾಚಕ

೩. ಉನ್ನತ ಭೂವಾಚಕಗಳು

೪. ನಿಮ್ನ ಭೂ ವಾಚಕಗಳು

೫. ಶಿಲಾವಾಚಕಗಳು

೬. ಕ್ಷೇತ್ರವಾಚಕಗಳು (ಗದ್ದೆ, ಹೊಲ ಮತ್ತು ಭಾಗಗಳೂ ಸೇರಿದಂತೆ)

೭. ಬೆಳೆ ತರಕಾರಿಗಳ ಹೆಸರುಗಳು

೮. ಅರಣ್ಯ, ಬನ, ಪೊದೆ

೯. ಸಸ್ಯವರ್ಗ

೧೦. ಪ್ರಾಣಿ-ಪಕ್ಷಿ ವರ್ಗ

೧೧. ದಿಕ್ಕು-ದೆಸೆಗಳು (ದಿಕ್ಕು-ದೆಸೆಗಳು, ಸ್ಥಳದ ಸನ್ನಿವೇಶ, ಮೇಲೆ-ಕೆಳಗು, ಎಡ-ಬಲ ಸೇರಿದಂತೆ)

೧೨. ವಿಲಕ್ಷಣ ಭೂ ಸ್ಥಿತಿಯಿಂದ ನಿಷ್ಪನ್ನವಾದ ಹೆಸರುಗಳು

೧೩. ಮಾರ್ಗವಾಚಕಗಳು

೧೪. ಸಾಪೇಕ್ಷ ಸ್ಥಳನಾಮಗಳು (ಕಾಲಸಂಬಂಧಿ, ಗಾತ್ರಸಂಬಂಧಿ, ಎತ್ತರ-ತಗ್ಗು, ಸಂಖ್ಯಾ ಸಂಬಂಧಿ).

೧೫. ಮಣ್ಣು (ಗುಣ, ಬಣ್ಣ, ತೇವಾಂಶ ಸೇರಿದಂತೆ)

೧೬. ಭೌತವಸ್ತು (ಗಾಳಿ, ಬೆಳಕು, ಸೂರ್ಯ, ಚಂದ್ರ, ಆಕಾಶ ಸೇರಿದಂತೆ)

೧೭. ಬಣ್ಣ

ಆ. ಸಾಂಸ್ಕೃತಿಕ ಹೆಸರುಗಳು

೧೮. ವ್ಯಕ್ತಿನಾಮಗಳು (ಅಂಕಿತ, ಗಂಡು, ಹೆಣ್ಣು ಸೇರಿದಂತೆ)

೧೯. ಕುಲನಾಮ (ಜಾತಿವಾಚಕ, ವ್ಯಕ್ತಿವಾಚಕ)

೨೦. ಸಂಬಂಧ ವಾಚಕ

೨೧. ಜನಾಂಗ ವಾಚಕ

೨೨. ದೈವವಾಚಕ

೨೩. ಪೂಜೆ, ಪೂಜಾವಿಧಿ, ಪೂಜಾ ಪರಿಕರ ಇತ್ಯಾದಿ

೨೪. ವಾಸ್ತವ್ಯ ಸೂಚಕ

೨೫. ವಸ್ತು ಸೂಚಕ

೨೬. ವ್ಯಾಪಾರ, ಉದ್ದಿಮೆ ಇತ್ಯಾದಿ

೨೭. ಹವ್ಯಾಸ-ಕಲೆ, ಮನರಂಜನೆ

೨೮. ಚಾರಿತ್ರಿಕ ಹೆಸರುಗಳು (ಮನೆತನ, ಪದವಿ, ಆಡಳಿತ, ಕಂದಾಯ)

ಈ ವರ್ಗೀಕರಣವನ್ನು ಗಮನಿಸಿದಾಗ ವಿಸ್ತೃತವಾದ, ವ್ಯಾಪಕವಾದ ಮತ್ತು ವೈಜ್ಞಾನಿಕವಾದ ರೀತಿಯ ವರ್ಗೀಕರಣ. ಇದು ತುಳುನಾಡು ಸ್ಥಳನಾಮಗಳನ್ನು ಅನುಸರಿಸಿದ ವರ್ಗೀಕರಣವಾದರೂ ಕೂಡ ತಕ್ಕ ಮಟ್ಟಿಗೆ ಕರ್ನಾಟಕ ಸ್ಥಳನಾಮಗಳ ಅಧ್ಯಯನವನ್ನಾಧರಿಸಿ ಇಟ್ಟುಕೊಳ್ಳಬಹುದು. ಸ್ಥಳನಾಮ ವಿದ್ವಾಂಸರು, ಸಂಶೋಧಕರು ಇವರ ವರ್ಗೀಕರಣ ವಿಧಾನವನ್ನು ಅನುಸರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ತೆಲುಗು-ಕನ್ನಡದ ದ್ವಿಭಾಷಿಕ ಪರಿಸರವನ್ನು ಅನುಲಕ್ಷಿಸಿ ಕೈಗೊಂಡ ಸ್ಥಳನಾಮ ಅಧ್ಯಯನದಲ್ಲಿ ಡಾ.ಜಾಜಿ ದೇವೇಂದ್ರಪ್ಪನವರ, "ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು" ಎಂಬ ನಿಬಂಧದಲ್ಲಿ ಸ್ಥಳನಾಮಗಳನ್ನು ಮುಖ್ಯವಾಗಿ ಮೂರು ವಿಧವಾಗಿ ವರ್ಗೀಕರಿಸಿಕೊಂಡು ಅವುಗಳಲ್ಲಿಯೇ ಒಳ ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅವು ಈ ಕೆಳಕಂಡಂತಿವೆ.

೧. ಪ್ರಾಕೃತಿಕ ಸ್ಥಳನಾಮಗಳು

೧. ಜಲವಾಚಿ

೨. ಶಿಲಾವಾಚಿ

೩. ಎತ್ತರದ ಭೂ ಪ್ರದೇಶ

೪. ಬಯಲು ಪ್ರದೇಶ

೫. ಸಸ್ಯ, ಗಿಡ, ಮರ ಇತ್ಯಾದಿ

೬. ಕ್ಷೇತ್ರವಾಚಕ

೭. ಲೋಹ ಸಂಪತ್ತು

೮. ವರ್ಣ

೯. ಇತರೆ

೨. ಸಾಂಸ್ಕೃತಿಕ ಸ್ಥಳನಾಮಗಳು

೧. ವ್ಯಕ್ತಿವಾಚಿ

೨. ದೈವವಾಚಿ

೩. ಪ್ರಾಣಿ, ಪಕ್ಷಿ

೪. ವೃತ್ತಿ, ಜಾತಿ

೫. ಪಟ್ಟಣ, ನಗರ, ಬೀದಿ

೩. ಸಂಕೀರ್ಣ

ಹೀಗೆ ಅನೇಕ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರೆಲ್ಲರೂ ಕೂಡ ವರ್ಗೀಕರಣದ ಮಾದರಿಗಳನ್ನು ಸೂಚಿಸಿದ್ದಾರೆ. ದೇಶದಿಂದ ದೇಶಕ್ಕೆ ರಾಜ್ಯದಿಂದ ರಾಜ್ಯಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ವಿಭಿನ್ನತೆ ಇರುವುದರಿಂದ ಇಂತಹದ್ದೇ ವರ್ಗೀಕರಣವೆಂದರೂ ಪ್ರಾದೇಶಿಕತೆಗಳಿಗನುಗುಣವಾಗಿ ಯಾವ ವಿದ್ವಾಂಸರೂ ಏಕ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ನಮ್ಮ ಕನ್ನಡ ವಿದ್ವಾಂಸರು ನೀಡಿದ ವರ್ಗೀಕರಣದಲ್ಲಿಯೇ ಅನೇಕ ರೀತಿಯ ಭಿನ್ನತೆಯನ್ನು ಕಾಣಲು ಸಾಧ್ಯವೆಂದರೆ ಇನ್ನು ಪಾಶ್ಚಿಮಾತ್ಯರ ವರ್ಗೀಕರಣದ ಮಾದರಿ ಒಪ್ಪಲು ಎಷ್ಟು ಸಮಂಜಸ. "ಮೈಸೂರು ಜಿಲ್ಲೆಯಲ್ಲಿ ಸಿಗದ, ಬೇರೆ ಜಿಲ್ಲೆಗಳಲ್ಲಿ ಸಿಗುವ ಘಟಕಗಳು ಸಾಕಷ್ಟಿವೆ. ಉದಾಹರಣೆಗೆ

ದುರ್ಗ, ಏರು, ದೊಣೆ, ಕುಂಟೆ, ವಾರ, ಕಾಲ, ಮನೆ ಇತ್ಯಾದಿ ಇಡೀ ಕರ್ನಾಟಕದ ಊರುಗಳ ದ್ವಿತೀಯ ಘಟಕಗಳನ್ನು ಅಧ್ಯಯನದ ಪರಿಧಿಯಲ್ಲಿ ತಂದು ಕೊಂಡಾಗ ಮಾತ್ರ ಈ ಭಾಗ ಪೂರ್ಣವಾಗುತ್ತದೆ"[೩] ಎಂಬ ದೇಜಗೌ ಅವರ ಮಾತು ವರ್ಗೀಕರಣಕ್ಕೆ ಇರುವ ನಮ್ಯತೆಯ (Flexibility) ಗುಣವನ್ನು ತೋರಿಸುತ್ತದೆ.

ಇಷ್ಟಾದರೂ ಕೂಡ ವರ್ಗೀಕರಣವನ್ನು ಇದೇ ಅಂತಿಮ ವರ್ಗೀಕರಣ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳಿಂದಾಗಿ ಹಾಗೂ ಅರ್ಥಬಾಹುಳ್ಯದ ವೈವಿಧ್ಯತೆಗಳಿಂದ ಎಷ್ಟೋ ಹೆಸರುಗಳು ಹೊರಗುಳಿಯುವ ಸಾಧ್ಯತೆ ಇರುವುದು. ಆದ್ದರಿಂದ ಇದಕ್ಕೆ ಒಂದು ಸಾಮಾನ್ಯ ವರ್ಗೀಕರಣದ ನಿಯಮವನ್ನು ರೂಪಿಸಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾಗಿದೆ. ಇದಕ್ಕೆ ಮೊದಲು ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ನೋಡಿದಾಗ ವರ್ಗೀಕರಣ ಮಾಡಲು ಸಹಾಯಕವಾಗಬಹುದೆಂದು ಭಾವಿಸಬಹುದು.

೩.೨. ರಾಮನಗರ ಜಿಲ್ಲೆಯ ಸ್ಥಳನಾಮಗಳ ರಾಚನಿಕ ಸ್ವರೂಪ

ಸ್ಥಳನಾಮವೆಂದರೆ ಜನವಸತಿ ಇರುವ ಗ್ರಾಮನಾಮ ಮತ್ತು ನಿರ್ವಸತಿ ಇರುವ ಬೇಚರಾಕ್ ಗ್ರಾಮಗಳು ಎಂದರೆ ತಪ್ಪಾಗಲಾರದು. ಸ್ಥಳನಾಮ ವಿಜ್ಞಾನ ಎಂಬುದು ತನ್ನ ನಿಜಾರ್ಥದಲ್ಲಿ ಜನ ವಾಸ್ತವವಿರುವ ಸ್ಥಳಗಳನ್ನಷ್ಟೇ ಅಲ್ಲದೆ ನಿರ್ವಸಿತ ಸ್ಥಳಗಳ ಹೆಸರಿನ ಅಧ್ಯಯನವನ್ನು ಒಳಗೊಂಡಿದೆ. ಸ್ಥಳಗಳು, ಕ್ಷೇತ್ರಗಳು, ನಸಾಹತುಗಳು ಮುಂತಾದವುಗಳ ಹೆಸರಿಗೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ವಿವರಗಳು ಒಳಗೊಳ್ಳುವ ಈ ಅಧ್ಯಯನಕ್ಕೆ ಸ್ಥಳನಾಮ ವಿಜ್ಞಾನ ಎಂದು ಕರೆಯಲಾಗಿದೆ."[೪] ಇದರಿಂದ ಜನವಸತಿ ಇರುವ ಗ್ರಾಮನಾಮ ಮತ್ತು ಜನರು ನೆಲಸದೆ ಇರುವ ನಿರ್ವಸಿತ ಗ್ರಾಮನಾಮಗಳು. ಒಟ್ಟಾರೆಯಾಗಿ ಸ್ಥಳನಾಮ ಮತ್ತು ಗ್ರಾಮನಾಮ ಒಂದೇ ಅರ್ಥವನ್ನು ಒಳಗೊಳ್ಳುವುದು.

ಈ ಸ್ಥಳನಾಮಗಳ ರಚನೆಯಲ್ಲಿ ಬಳಸಲ್ಪಟ್ಟಿರುವ ಶಬ್ದಗಳು ಭಾಷಿಕ ಸಾಮಾಗ್ರಿಯ ಮೂಲಘಟಕಗಳಾಗಿವೆ. ಭಾಷೆಯ ಮೂಲಘಟಕಗಳಾದ ಶಬ್ದಗಳಿಂದ ಪದ ರೂಪಗೊಳ್ಳುತ್ತದೆ. ಆ ಪದಗಳಾದರೋ ಸ್ಥಳೀಯ ಭಾಷೆಯ ಪದಗಳಿಂದಲೇ ರೂಪುಗೊಂಡಿರುತ್ತವೆ. ಸ್ಥಳನಾಮಗಳಲ್ಲಿನ ವಿಶಿಷ್ಟ ಪದ ಪ್ರಯೋಗಗಳು ಆಯಾ ಕಾಲದ ಭಾಷೆಯ ಅರ್ಥಕ್ಕನುಗುಣವಾಗಿ ಇರುತ್ತವೆಯಾದರೂ, ಭಾಷೆಯ ವ್ಯವಹಾರಿಕ ಸಾಮಾನ್ಯ ಶಬ್ದಗಳಿಗಿಂತಲೂ ಭಿನ್ನವಾಗಿರುತ್ತವೆ. ಆದ್ದರಿಂದ ಕಾಲದಿಂದ ಕಾಲಕ್ಕೆ ಅವು ತಮ್ಮ ಮೂಲಾರ್ಥವನ್ನು ಕಳೆದುಕೊಂಡು ಅರ್ಥಹೀನವಾಗಿ ಬಿಡುತ್ತವೆಯಾದರೂ ಆಯಾಯ ಸ್ಥಳವನ್ನು ಗುರುತಿಸುವ ವಿಶಿಷ್ಟ ಶಬ್ದವಾದುದರಿಂದ ಪರಂಪರಾಗತವಾಗಿ ಬಾಯಿಂದ ಬಾಯಿಗೆ ಉಳಿದು ಬಂದಿರುತ್ತವೆ. ಭಾಷಿಕ ಸಾಮಾಗ್ರಿಗಳನ್ನು ಬಳಸಿಕೊಂಡು ಸಾಮಾಜಿಕವಾದ ಅರ್ಥವನ್ನು ಪಡೆಯುವ ಶಬ್ದಗಳು ಗ್ರಾಮನಾಮಗಳಾಗಿ ಚಲಾವಣೆಗೊಳ್ಳುವವು. ಸ್ಥಳನಾಮಗಳ ರಚನೆಯಲ್ಲಿ ಸಾಮಾನ್ಯವಾಗಿ ಕೂಡುನುಡಿಗಳು ಇಲ್ಲವೇ ಸಮಸ್ತ ಪದಗಳಾಗಿರುತ್ತವೆ. ಅವುಗಳ ರಚನೆಯಲ್ಲಿ ಮೂರು ಮತ್ತು ಮೂರಕ್ಕಿಂತ ಹೆಚ್ಚು ಅಕೃತಿಮಾಗಳು ಘಟಕಗಳನ್ನಾಗಿ ನೋಡಲು ಸಾಧ್ಯವಿದೆ.

೧. ಒಂದೇ ಶಬ್ದಗಳಿರುವ ಏಕಘಟಕ

೨. ಎರಡು ಶಬ್ದಗಳನ್ನು ಹೊಂದಿರುವುದು, ದ್ವಿಘಟಕ

೩. ಮೂರು ಮತ್ತು ಅದಕ್ಕಿಂತಲೂ ಹೆಚ್ಚು ಶಬ್ದಗಳನ್ನು ಹೊಂದಿರುವ ಬಹು ಘಟಕಗಳಾಗಿವೆ.

ಬಹುಪಾಲು ಸ್ಥಳನಾಮಗಳು ನಿರ್ದಿಷ್ಟ ಮತ್ತು ವಾರ್ಗಿಕಗಳನ್ನುಸರಿಸಿ ರೂಪಗೊಂಡಿರುತ್ತವೆ. ಸ್ಥಳನಾಮಗಳಲ್ಲಿ ಕಂಡುಬರುವ ನಿರ್ದಿಷ್ಟ ಮತ್ತು ವಾರ್ಗಿಕಗಳ ಬಳಕೆಯಿಂದ ಏಕಘಟಕ, ದ್ವಿಘಟಕ, ಬಹುಘಟಕಗಳನ್ನು ಒಳಗೊಂಡಿದ್ದು ಅವುಗಳನ್ನು ಈ ಕೆಳಕಂಡಂತೆ ನೋಡಬಹುದು.

೩.೨.೧. ಏಕ ಘಟಕಾಧಾರಿತ ಸ್ಥಳನಾಮಗಳು

ರಾಮನಗರ ಜಿಲ್ಲೆಯಲ್ಲಿ ಏಕ ಘಟಕಧಾರಿತ ಸ್ಥಳನಾಮಗಳು ಹಲವಾರಿವೆ. ಆದರೆ ಇವುಗಳ ಸಂಖ್ಯೆ ತೀರ ವಿರಳ. ಪ್ರಾರಂಭದಲ್ಲಿ ಊರ್, ಪಟ್ಟಿ, ಪಾಟ್ ಮುಂತಾದ ನೆಲೆವಾಚಿಗಳಾಗಿ ರೂಢನಾಮಗಳಾಗಿದ್ದವು. ನಂತರದ ಹಂತದಲ್ಲಿ ಇವುಗಳನ್ನು ಒಳಗೊಂಡಂತೆ ಗ್ರಾಮನಾಮಗಳು ಬೆಳೆದದ್ದರಿಂದ ದ್ವಿಘಟಕಾಧಾರಿತ ಸ್ಥಳನಾಮಗಳು ಬಳಕೆಗೊಂಡಿರಬೇಕು. ಈ ಏಕ ಘಟಕಾಧಾರಿತ ಸ್ಥಳನಾಮಗಳು ನಿರ್ದಿಷ್ಟ-ವಾರ್ಗಿಕ ವ್ಯವಸ್ಥೆಯ ಸ್ಥಳನಾಮಗಳಿಗಿಂತಲೂ ಪ್ರಾಚೀನವಾದವು. ಇವು ಗ್ರಾಮ ಉದಯದೊಂದಿಗಿನ ಮೂಲ ಮತ್ತು ಸಹಜ ಹೆಸರುಗಳಾಗಿರುತ್ತವೆ. ಮನುಷ್ಯ ತನ್ನ ನಾಗರಿಕತೆಯ ಪ್ರಾಚೀನ ಹಂತಗಳಲ್ಲಿ ಪ್ರಕೃತಿಯನ್ನು ಪೂರ್ಣವಾಗಿ ನಂಬಿ ಬದುಕುತ್ತಿದ್ದನು. ತನ್ನ ಸುಖ ಸಂತೋಷಗಳಿಗೆ ಪ್ರಕೃತಿಯನ್ನೇ ಆಶ್ರಯಿಸಿದ್ದ ಆದ್ದರಿಂದ ನಿಸರ್ಗವನ್ನು ದೇವರೆಂದೆ ಬಗೆದು ಪೂಜಿಸುತ್ತಿದ್ದನು. ಮನುಷ್ಯ ಮತ್ತು ಪ್ರಕೃತಿಯೊಳಗಿನ ಸಂಬಂಧದಲ್ಲಿ ಭಿನ್ನತೆ ಇರಲಿಲ್ಲ. ತನ್ನ ನೆಲೆಗೂ ನಿಸರ್ಗದಲ್ಲಿನ ವಸ್ತುಗಳನ್ನು ಸೂಚಿಸಿ; ತನ್ನ ನೆಲೆಯನ್ನು ಹೆಸರಿಸಿದ್ದರಿಂದ ಸಾಮಾನ್ಯವಾಗಿ ಇವುಗಳು ಪ್ರಾಕೃತಿಕವಾಚಿ ಸ್ಥಳನಾಮಗಳಾಗಿರುತ್ತವೆ. ಅವುಗಳೆಂದರೆ ಹೂಳ್ಯ, ಕಲ್ಯ, ಹರ್ತಿ, ಮತ್ತ ಮುಂತಾದವು ಏಕ ಆಕೃತಿಮಾದ ಸ್ಥಳನಾಮಗಳು.

ಏಕ ಘಟಕಾಧಾರಿತ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ನಿರ್ದಿಷ್ಟ ಮಾತ್ರವಿರುವ ಘಟಕ ಸ್ವತಂತ್ರವಾಗಿ ವ್ಯವಹರಿಸುತ್ತಿರುವುದನ್ನು ಕಾಣಬಹುದಾದರೂ ಇವು ಅಪರೂಪವೆಂದೇ ಹೇಳಬಹುದು. ಉದಾ: ಹೂಳ್ಯ, ಕಲ್ಯ, ಹರ್ತಿ, ಮತ್ತ, ಅಚ್ಚಲು, ದಾಳಿಂಬ, ಬಿಡದಿ, ಪಟ್ಲು, ಮಾಕಳಿ, ಕಳಾರಿ, ಕೂಟ್ಲು ಇಂಥ ನಿರ್ದಿಷ್ಟವಾಚಿ ನಾಮಗಳು ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿ ತೀರ ವಿರಳದಲ್ಲಿ ವಿರಳವಾಗಿ ಸಿಗುತ್ತವೆ.

ಮಾಗಡಿ ತಾಲೂಕಿನಲ್ಲಿ ಕಂಡುಬರುವ ಮತ್ತೊಂದು ಗ್ರಾಮನಾಮ 'ಪುರ' ಮತ್ತು ಚನ್ನಪಟ್ಟಣ ತಾಲೂಕಿನ ಕೊಪ್ಪ. ಕೇವಲ ವಾರ್ಗಿಕವನ್ನೇ ಒಳಗೊಂಡಿರುವ ಸ್ಥಳನಾಮ ಸಿಗುವುದು ತುಂಬಾ ವಿರಳವಾಗಿದೆ. ಸಾಮಾನ್ಯವಾಗಿ ನಿರ್ದಿಷ್ಟದ ಜೊತೆಯಲ್ಲಿ ವಾರ್ಗಿಕವನ್ನೊಳಗೊಂಡ ಸ್ಥಳನಾಮ ಕಂಡುಬರುವುದು ಗಮನಾರ್ಹ. ಅಧ್ಯಯನದಲ್ಲಿ ನಿರ್ದಿಷ್ಟವೇ ಸ್ವತಂತ್ರ ಘಟಕವಾಗಿ ವ್ಯವಹರಿಸುತ್ತಿರುವ ಸ್ಥಳನಾಮಗಳು ವಿರಳವಾಗಿ ಸಿಗಬಹುದಾದರೂ ವಾರ್ಗಿಕವನ್ನೊಳಗೊಂಡ ಸ್ಥಳನಾಮ ಸಿಗುತ್ತಿರುವುದು ರಾಮನಗರ ಜಿಲ್ಲೆಯ ಸ್ಥಳನಾಮ ಅಧ್ಯಯನದ ವಿಶೇಷವಾಗಿದೆ.

೩.೨.೨. ದ್ವಿಘಟಕಾಧಾರಿತ ಸ್ಥಳನಾಮಗಳು

ಸ್ಥಳನಾಮಗಳು ಅನೇಕ ಪದ ಮತ್ತು ಪ್ರತ್ಯಯಗಳಿಂದ ಕೂಡಿದ ಒಂದು ಪದಸಮೂಹ. ಈ ಪದ ಸಮೂಹದ ರಚನೆಯಲ್ಲಿ ಒಂದು ಕ್ರಮ ಬದ್ಧತೆ ಇರುವುದು. ಕ್ರಮಬದ್ಧತೆಯಿಂದ ರಚನೆಯಾದ ಪದ ಸಮೂಹವನ್ನು ಅರ್ಥಕ್ಕನುಗುಣವಾಗಿ ಕ್ರಮವಾಗಿ ಬಿಡಿಸಿ ನೋಡುವುದರಿಂದ ಆ ಗ್ರಾಮದ ಅರ್ಥವು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗುತ್ತದೆ.

ಬಹುತೇಕ ಸ್ಥಳನಾಮಗಳು ಎರಡು ಘಟಕಗಳನ್ನು ಒಳಗೊಂಡಿರುತ್ತವೆ. ಇನ್ನು ಕೆಲವು ಸ್ಥಳನಾಮಗಳು ಎರಡಕ್ಕಿಂತ ಹೆಚ್ಚು ಘಟಕಗಳನ್ನು ಒಳಗೊಂಡಿರಬಹುದು. ಎರಡು ಘಟಕಗಳನ್ನು ಹೊಂದಿರುವ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಪೂರ್ವ ಮತ್ತು ಉತ್ತರವೆಂಬ ಘಟಕವನ್ನು ಒಳಗೊಂಡಿರುತ್ತವೆ. ಉದಾ. ಹೊಸ+ಹಳ್ಳಿ-ಹೊಸಹಳ್ಳಿ, ಗೊಲ್ಲ+ಹಳ್ಳಿ-ಗೊಲ್ಲಹಳ್ಳಿ, ಎರಡು ಘಟಕಗಳಿರುವ ಸ್ಥಳನಾಮಗಳಲ್ಲಿ ಮೊದಲನೆಯದು ನಿರ್ದಿಷ್ಟ ಸ್ಥಳವನ್ನು ಸ್ಪಷ್ಟ ಪರಿಭಾಷೆಯಲ್ಲಿ ವರ್ಣಿಸಿ, ಒಂದು ಊರನ್ನು ಮತ್ತೊಂದು ಊರಿನಿಂದ ಪ್ರತ್ಯೇಕಿಸಿ ತೋರಿಸುವ ಘಟಕವೇ ವಿಶೇಷ ಘಟಕಗಳು ಇದನ್ನು ಪೂರ್ವಘಟಕವೆಂದೂ, ನಿರ್ದಿಷ್ಟ (Spcifics)ಎಂತಲೂ ಕರೆಯಲಾಗುವುದು.

ನಿರ್ದಿಷ್ಟ+ವಾರ್ಗಿಕ-ಗ್ರಾಮನಾಮ


ತಿಪ್ಪ+ಊರು-ತಿಪ್ಪೂರು

ಚೂಡ+ಹಳ್ಳಿ-ಚೂಡಹಳ್ಳಿ

ಭೀಮ+ಸಂದ್ರ-ಭೀಮಸಂದ್ರ

ಆಲ+ಹಳ್ಳಿ-ಆಲಹಳ್ಳಿ

ಊರಿನ ಮತ್ತೊಂದು ಘಟಕವಾದ ವಾರ್ಗಿಕದಲ್ಲಿ ಬರುವ ಶಬ್ದಗಳು ಬೇರೆ ಬೇರೆ ನಿರ್ದಿಷ್ಟಗಳೊಂದಿಗೆ ಒಂದು ನಿರ್ದಿಷ್ಟ ಸ್ಥಳವನ್ನು ಸ್ಪಷ್ಟಪರಿಭಾಷೆಯಲ್ಲಿ ವರ್ಣಿಸಿದರೆ 'ಹಳ್ಳಿ' ಎಂಬ ಉತ್ತರ ಘಟಕ ವಿಶೇಷತೆಯಿಲ್ಲದೇ ಬಂದಿದೆಯಾದರೂ ಆ ಊರಿನ ಸ್ಥಿತಿಗತಿ, ಲಕ್ಷಣಗಳನ್ನು ಉತ್ತರ ಘಟಕಗಳು ಅಭಿವ್ಯಕ್ತಿಗೊಳಿಸುವುದುಂಟು. ಗ್ರಾಮನಾಮಗಳಲ್ಲಿ ವಿಶೇಷತೆಯಿಲ್ಲದೇ ವರ್ಗಗೊಳಿಸುವ ಇವುಗಳಿಗೆ ವಾರ್ಗಿಕ (Generics) ಎಂದು ಕರೆಯಲಾಗುವುದು.



ಇಲ್ಲಿ ಬಂದಿರುವ ನಿರ್ದಿಷ್ಟವು ಸ್ಥಳನಿರ್ದೇಶಕ ಪ್ರತ್ಯಯವಾಗಿ ಬಂದು, ಗ್ರಾಮಗಳ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಮಹತ್ವದ ಅಂಶವಾಗಿ ವ್ಯವಹರಿಸಲ್ಪಡುತ್ತದೆ.

ದ್ವಿಘಟಕಾಧಾರಿತ ಸ್ಥಳನಾಮಗಳಲ್ಲಿ ಮುಖ್ಯವಾಗಿ

೧. ನಿರ್ದಿಷ್ಟ-ವಾರ್ಗಿಕವಾಚಿ ನಾಮ

ವಿಶ್ವದಾದ್ಯಂತ ಸ್ಥಳನಾಮಗಳಲ್ಲಿ ನಿರ್ದಿಷ್ಟ-ವಾರ್ಗಿಕ ಘಟಕದಿಂದ ಆದ ರಚನೆಗಳೆ ಬಹುಸಂಖ್ಯೆಯಲ್ಲಿವೆ. ಇಲ್ಲಿ ನಿರ್ದಿಷ್ಟ ವಿಶೇಷಣದಂತೆ, ವಾರ್ಗಿಕ ವಿಶೇಷ್ಯದಂತೆ ವರ್ತಿಸುತ್ತದೆ. ಡಾ.ಎಂ.ಎಂ.ಕಲಬುರ್ಗಿಯವರು ಕನ್ನಡ ನಾಮ ವಿಜ್ಞಾನ ಕೃತಿಯಲ್ಲಿ ಹೇಳಿರುವಂತೆ, ನಿರ್ದಿಷ್ಟವು ಪ್ರಕೃತಿ ರೂಪ ಇಲ್ಲವೆ ಪದ ರೂಪದಲ್ಲಿರುತ್ತದೆ. ಉದಾ. ಹೇಮ+ಪುರ, ಲಕ್ಷ್ಮಿ+ಸಾಗರ.

ಕೆಲವೊಮ್ಮೆ ಪದರೂಪದ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿರಬಹುದು. ಉದಾ. ಕಲ್ಲ+ನ+ಕುಪ್ಪೆ, ಬಸವ+ನ+ಪಾಳ್ಯ ಇಲ್ಲವೇ ಪದರೂಪದ ನಿರ್ದಿಷ್ಟದಲ್ಲಿ ಪ್ರತ್ಯಯ ಅವ್ಯಕ್ತವಾಗಿರಬಹುದು ಉದಾ. ಕೋಡಿ+ಹಳ್ಳಿ, ತಾಮ+ಸಂದ್ರ.

ವ್ಯಕ್ತ ಪ್ರತ್ಯಯದಲ್ಲಿ ಏಕವಚನ ಮತ್ತು ಬಹುವಚನವನ್ನು ಸಹ ಗುರುತಿಸಬಹುದು.

ಏಕವಚನಕ್ಕೆ-ಹೊನ್ನಲಗನ+ದೊಡ್ಡಿ, ಮಾದಿಗನ+ಹಳ್ಳಿ

ಬಹುವಚನಕ್ಕೆ-ತಿಗಳರ+ಹಳ್ಳಿ, ಸಿದ್ದದೇವರ+ಬೆಟ್ಟ

ಏಕ ವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳನ್ನು ಗುರುತಿಸಲು ಸಾಧ್ಯವಿದೆ.

ಪುಲ್ಲಿಂಗಕ್ಕೆ-ಬೀರನ+ಕುಪ್ಪೆ, ದೊಮ್ಮನ+ಕಟ್ಟೆ

ಸ್ತ್ರೀಲಿಂಗಕ್ಕೆ ನಾಗಲಾ+ಪುರ, ಲಕ್ಷ್ಮಿ+ಪುರ

ನಪುಂಸಕ ಲಿಂಗಕ್ಕೆ-ಬ್ಯಾಲದ+ಕೆರೆ.

ನಿರ್ದಿಷ್ಟ ಅಂತ್ಯದಲ್ಲಿ 'ರ' ಇದ್ದರೆ ಜನಾಂಗ ವಾಚಿ ಸ್ಥಳನಾಮವಾಗಿರುತ್ತದೆ. ಉದಾ. ಕುರುಬರ+ಹಳ್ಳಿ, ಮಾದರ+ಹಳ್ಳಿ.

೨. ವಿಸ್ತೃತ ನಿರ್ದಿಷ್ಟವಾಚಿ ನಾಮ

ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿ ನಿರ್ದಿಷ್ಟವಾಚಿ ನಾಮಗಳು ಅತಿವಿರಳವಾದರೆ, ವಿಸ್ತೃತ ನಿರ್ದಿಷ್ಟ ವಾಚಿಗಳು ಇನ್ನೂ ಅತಿವಿರಳವಾಗಿ ಕಂಡುಬರುತ್ತವೆ. ಉದಾ. ಗುತ್ತಲ+ಹುಣಸೆ, ತೇರು+ಬೀದಿ, ಬಣ್ಣ+ಆನೆ, ಹರಿ+ಹರ, ಮಲ್ಲಿಗೆ+ಮೆಟ್ಟಿಲು.

೩. ವಿಸ್ತೃತವಾರ್ಗಿಕವಾಚಿ ನಾಮ

ವಾರ್ಗಿಕವನ್ನೇ ಒಳಗೊಂಡಿರುವ ಗ್ರಾಮನಾಮಗಳು ವಿರಳವಾದರೆ; ಪೂರ್ವ ಮತ್ತು ಉತ್ತರ ಘಟಕಗಳೆರಡೂ ವಾರ್ಗಿಕಗಳಾಗಿ ಸಿಗುವುದು ತುಂಬಾ ವಿರಳವೆಂದೇ ಭಾವಿಸಬಹುದು. ಮಾಗಡಿ ತಾಲೂಕಿನಲ್ಲಿ ಇಂಥ ಒಂದು ವಿಶೇಷವಾದ ಗ್ರಾಮನಾಮ ಲಭ್ಯವಾಗಿವೆ. ಉದಾ. ಕಲ್ಲೂರು, ಕಲ್ಕೆರೆ, ಕೋಟೆಕೊಪ್ಪ.

ಎರಡಕ್ಕಿಂತ ಹೆಚ್ಚು ಘಟಕಗಳುಳ್ಳ ಸ್ಥಳನಾಮಗಳು ಕೆಲವೊಮ್ಮೆ ಪ್ರಧಾನವಾಗಿ ಇಲ್ಲವೆ ಗಾತ್ರದಲ್ಲಿ ದೊಡ್ಡ ಘಟಕವಾಗಿರುವ ಊರಿನ ಸಂಬಂಧವುಳ್ಳ ಅಥವಾ ಅದರ ಅಂಗವಾಗಿ, ಸಮೀಪವಿರುವ ಇನ್ನೊಂದು

ಕಿರಿಯ ಊರನ್ನು, ಎಡೆಯನ್ನು ಗುರುತಿಸುವ ಉದ್ದೇಶದಿಂದ ಬಂದಿರುತ್ತದೆ. ಇಲ್ಲಿ ಸಾಮಾನ್ಯವಾಗಿ ವಾರ್ಗಿಕವಾಗಿ ಗುರುತಿಸಿಕೊಂಡಿರುವ ವಾರ್ಗಿಕಗಳೇ ನಿರ್ದಿಷ್ಟ ಸ್ಥಾನದಲ್ಲಿ ಬಂದಿರುವ ಸಂಭವವಿರುತ್ತದೆ. ಆದ್ದರಿಂದ ಗ್ರಾಮನಾಮದಲ್ಲಿ ಎರಡು ವಾರ್ಗಿಕಗಳು ಬರುವ ಸಂಭವವಿರುವುದು.

೩.೨.೩. ಬಹು ಘಟಕಾಧಾರಿತ ಸ್ಥಳನಾಮಗಳು

ಎರಡು ಘಟಕಗಳಿಗಿಂತಲೂ ಹೆಚ್ಚು ಘಟಕಗಳನ್ನು ಹೊಂದಿರುವ ಸ್ಥಳನಾಮಗಳಿಗೆ ಬಹುಘಟಕಾಧಾರಿತ ಸ್ಥಳನಾಮಗಳೆಂದು ಸ್ಥೂಲವಾಗಿ ಹೇಳಬಹುದು. ಮೂರು ಘಟಕಗಳುಳ್ಳ ಸ್ಥಳನಾಮಗಳು ಕಡಿಮೆಯಾದರೂ ಕೆಲವೊಂದು ಸ್ಥಳನಾಮಗಳು ಈ ಜಿಲ್ಲೆಯಲ್ಲಿ ಸಿಗುತ್ತವೆ. ಉದಾ. ಕೊಳ+ಗೊಂಡನ+ಹಳ್ಳಿ>ಕೊಳಗೊಂಡನಹಳ್ಳಿ, ಆಲದ+ಕಟ್ಟೆ+ಪಾಳ್ಯ>ಆಲದ ಕಟ್ಟೆ ಪಾಳ್ಯ ಅಡಕ+ಮಾರನ+ಹಳ್ಳಿ>ಅಡಕ ಮಾರನಹಳ್ಳಿ (ನಿರ್ದಿಷ್ಟ+ನಿರ್ದಿಷ್ಟ+ವಾರ್ಗಿಕ>ಗ್ರಾಮನಾಮ)

ಮೇಲಿನ ಉದಾಹರಣೆಯಲ್ಲಿ ಬಂದಿರುವ ನಿರ್ದಿಷ್ಟಗಳು ಜನಸಂಖ್ಯೆಯ ಹೆಚ್ಚಳ ಮತ್ತು ಜನತೆಯ ಸಂಚಾರದೊಂದಿಗೆ ಭೌಗೋಳಿಕ ಜ್ಞಾನದ ಹೆಚ್ಚಳದೊಂದಿಗೆ ಹುಟ್ಟಿಕೊಂಡ ಹೊಸಹೊಸ ವಾಸ್ತವ್ಯಗಳನ್ನನುಸರಿಸಿ ಕಾಲಾಂತರದಲ್ಲಿ ಹೆಚ್ಚಿಕೊಂಡಿರಬೇಕು. ಸಮೀಪದ ಇನ್ನೊಂದು ಹಳ್ಳಿ ಅಂಥದೇ ಹೆಸರಿನಿಂದ ಪ್ರತ್ಯೇಕಿಸಿಕೊಳ್ಳುವ ಉದ್ದೇಶದಿಂದಲೂ ಇಂಥ ಉಪ ಆಕೃತಿಮಾಗಳು ಅಂಟಿಕೊಂಡಿರಬಹುದು. ಉದಾ. ತಿಗಳರ ಹೊಸಹಳ್ಳಿ, ಕೊಕ್ಕರೆ ಹೊಸಹಳ್ಳಿ.

ಬಹುಘಟಕಾಧಾರಿತ ಸ್ಥಳನಾಮಗಳಲ್ಲಿರುವ ಘಟಕಗಳ ವಿವರ ಹೀಗಿವೆ.

೧. ವಿಸ್ತೃತ ನಿರ್ದಿಷ್ಟ-ವಾರ್ಗಿಕವಾಚಿ ನಾಮ

ವಿಸ್ತೃತ ನಿರ್ದಿಷ್ಟಗಳಲ್ಲಿ ಮೊದಲ ಮತ್ತು ಎರಡನೆ ಘಟಕದ ನಿರ್ದಿಷ್ಟದಲ್ಲಿ ಪ್ರತ್ಯಯ ವ್ಯಕ್ತವಾಗಿರಬಹುದು, ಇಲ್ಲವೆ ಅವ್ಯಕ್ತವಾಗಿರಬಹುದು.

ಉದಾ: ವ್ಯಕ್ತ ಪ್ರತ್ಯಯ:	ತೆಂಗ+ನಾಯಕ+ನ+ಹಳ್ಳಿ
	ಮೇಡ+ಮಾರ+ನ+ಹಳ್ಳಿ
ಅವ್ಯಕ್ತ ಪ್ರತ್ಯಯ:	ಚಿಕ್ಕ+ಮೂಡಿ+ಗೆರೆ
	ದೊಡ್ಡ+ಗಂಗ+ವಾಡಿ

೨. ನಿರ್ದಿಷ್ಟ-ವಿಸ್ತೃತ ವಾರ್ಗಿಕವಾಚಿ ನಾಮ

ಸಾಮಾನ್ಯವಾಗಿ ಊರಿನ ಸಂಬಂಧವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ನಿರ್ದಿಷ್ಟವು ವಿಸ್ತಾರವಾಗುವುದುಂಟು; ವಾರ್ಗಿಕವು ವಿಸ್ತಾರಗೊಳ್ಳುವುದಿಲ್ಲ. ಆದರೆ ಒಂದು ಗ್ರಾಮಕ್ಕೆ ಕಾಲಾನಂತರದಲ್ಲಿ ಸುಪ್ರಸಿದ್ಧವಾದ ಅಥವಾ ಜನೋಪಕಾರಿಯಾಗಿ ಜನರ ಮಾನಸದಲ್ಲಿ ನೆಲೆನಿಲ್ಲುವ ರಚನೆಯೊಂದು ಏರ್ಪಟ್ಟ ಸಂದರ್ಭದಲ್ಲಿ ಮಾತ್ರ ವಾರ್ಗಿಕ ವಿಸ್ತೃತಗೊಳ್ಳುವ ಅವಕಾಶವಿದೆ. ಮುಖ್ಯವಾಗಿ ಇದು ಮಾನವನ ಪ್ರಯತ್ನ ಫಲವಾಗಿ ರೂಪುಗೊಂಡ ರಚನೆಯ ಫಲದಿಂದ ವಾರ್ಗಿಕ ವಿಸ್ತೃತಗೊಳ್ಳಲು ಸಾಧ್ಯತೆ ಇದೆ. ಉದಾ: ಚುಳಕನ+ಕೆರೆ+ಕಾವಲು, ಕಲ್ಲು+ಹಟ್ಟಿ+ಪಾಳ್ಯ.

೩. ವಿಸ್ತೃತ ನಿರ್ದಿಷ್ಟ-ವಿಸ್ತೃತ ವಾರ್ಗಿಕವಾಚಿ ನಾಮ

ಗ್ರಾಮನಾಮದ ನಿರ್ದಿಷ್ಟ ಮತ್ತು ವಾರ್ಗಿಕ ಘಟಕದಲ್ಲಿ ವಿಸ್ತೃತವಾದರೆ ಉಚ್ಚರಣೆಗೆ ತೊಂದರೆಯಾಗುವುದು ಖಚಿತ. ಮನುಷ್ಯ ತನ್ನ ಸೌಲಭ್ಯಕಾಂಕ್ಷೆಯಿಂದಲೆ ವಿಸ್ತೃತವಾದುದ್ದನ್ನು ಸಂಕ್ಷೇಪಿಸುವುದನ್ನು ಕಾಣುತ್ತೇವೆ. ಉದಾ. ವೀರರಾಜಪೇಟೆ>ವಿರಾಜಪೇಟೆ ಇಂತಹ ಸಂದರ್ಭದಲ್ಲಿಯೂ ಕೂಡ ಎರಡೂ ಘಟಕಗಳ ವಿಸ್ತೃತವಾದ ಗ್ರಾಮನಾಮಗಳು ಅಪರೂಪವೆಂದರೂ ಈ ಜಿಲ್ಲೆಯಲ್ಲಿ ಅಂಥ ಗ್ರಾಮನಾಮಗಳಿವೆ.

ಉದಾ: ಅಗ್ರಹಾರ+ವಳ+ಕೆರೆ+ಹಳ್ಳಿ-ಅಗ್ರಹಾರ ವಳಗೆರೆಹಳ್ಳಿ

ಬಂದ+ಊರ+ವಳ+ಕೆರೆ+ಹಳ್ಳಿ-ಬಂದೂರ ವಳಗೆರೆಹಳ್ಳಿ

೩.೩. ರಾಮನಗರ ಜಿಲ್ಲೆಯ ಸ್ಥಳನಾಮ ವರ್ಗೀಕರಣ

ಗ್ರಾಮನಾಮಗಳ ರಾಚನಿಕ ಸ್ವರೂಪವನ್ನು ಗಮನಿಸಿದಾಗ ನಿಸರ್ಗ, ಸಮುದಾಯ, ವೃತ್ತಿ, ವ್ಯಕ್ತಿ ನಿರ್ಮಿತ ಮೊದಲಾದ ಸಾಂಸ್ಕೃತಿಕ ಅಂಶಗಳ ಪರಿಣಾಮದಿಂದಾಗಿ ರಚನೆಗೊಂಡಿರುವುದು ತಿಳಿದು ಬರುತ್ತದೆ. ಗ್ರಾಮನಾಮಗಳನ್ನು ಗುರುತಿಸಲು ಮಾನವ; ನಿಸರ್ಗದ ವೈವಿಧ್ಯಮಯ ಅಂಶಗಳ ಜೊತೆಗೆ ತಾನೇ ರೂಪಿಸಿರುವ ಸಾಂಸ್ಕೃತಿಕ ಜಗತ್ತಿನ ಒಳಹೊರ ಅಂಶಗಳನ್ನು ಬಳಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಲೇ ಗಮನಿಸಿದಂತೆ ಸ್ಥಳನಾಮಗಳ ಅಧ್ಯಯನಶೀಲರಾದ ಹಲವಾರು ವಿದ್ವಾಂಸರು ವಿವಿಧ ಬಗೆಯ ವರ್ಗೀಕರಣ ಮಾಡಿದ್ದಾರೆ. ಆದರೂ ಅಧ್ಯಯನದ ಅನುಕೂಲತೆಗಾಗಿ ರಾಮನಗರ ಜಿಲ್ಲೆಯ ಗ್ರಾಮನಾಮಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕಗಳ ಬಲದಿಂದ ಬೇರೆ ಬೇರೆಯಾಗಿ ನೋಡಬಹುದು.

೩.೩.೧. ನಿರ್ದಿಷ್ಟಕ್ಕನುಗುಣವಾಗಿ

೧. ನಿಸರ್ಗವಾಚಿ ಸ್ಥಳನಾಮಗಳು

ಅ. ಜಲವಾಚಿ

ಆ. ಶಿಲಾವಾಚಿ

ಇ. ಪ್ರಾಣಿವಾಚಿ

ಈ. ಸಸ್ಯವಾಚಿ

ಉ. ಪಕ್ಷಿವಾಚಿ

ಊ. ಭೌಗೋಳಿಕ ಲಕ್ಷಣ ಸೂಚಿ

೨. ಸಾಂಸ್ಕೃತಿಕ ಸ್ಥಳನಾಮಗಳು

ಅ. ವೃತ್ತಿವಾಚಿ

ಆ. ಸಮುದಾಯವಾಚಿ

ಇ. ವ್ಯಕ್ತಿವಾಚಿ

ಈ. ದೈವವಾಚಿ

೩.೩.೨. ವಾರ್ಗಿಕಕ್ಕನುಗುಣವಾಗಿ

೧. ನಿಸರ್ಗವಾಚಿ

೨. ವಸತಿವಾಚಿ

೩. ನಿರ್ಮಾಣವಾಚಿ

೩.೩.೩ ಸಂಕೀರ್ಣ

ಅ. ಪ್ರತಿಕರಣ

ಆ. ಸಾಪೇಕ್ಷಯುಕ್ತ

ಇ. ವಿಶೇಷಣ

ಈ. ವರ್ಣಸೂಚಕ

೧. ನಿಸರ್ಗವಾಚಕ ಸ್ಥಳನಾಮಗಳು

ಪ್ರತಿಯೊಂದು ವಸ್ತುವು ಪಂಚಭೂತಗಳಿಂದಾದವು. ಪಂಚಭೂತಗಳು ಇರುವುದು ಈ ನಿಸರ್ಗದಲ್ಲಿಯೇ ಆದ್ದರಿಂದ ಆದಿ ಮಾನವನು ಇವುಗಳೇ ದೈವವೆಂದೇ ಬಗೆದು ನಿಸರ್ಗವನ್ನು ಪೂಜಿಸುತ್ತಿರುವುದು ಗೊತ್ತಿರುವ ಸಂಗತಿ. ಅಷ್ಟೇ ಅಲ್ಲದೆ ಮಾನವ ಬದುಕನ್ನು ಪ್ರಕೃತಿಯ ಮಡಿಲಿನಲ್ಲಿ ಕಟ್ಟಿಕೊಂಡಿದ್ದಾನೆ. ತನ್ನ ಬದುಕನ್ನು ಕಟ್ಟಿಕೊಳ್ಳಲು ನೆರವಾದ ತನ್ನ ಸುತ್ತಮುತ್ತಲಿನ ನಿಸರ್ಗದ ವಸ್ತುಗಳಾದ ಗಾಳಿ, ಬೆಳಕು, ನೀರು, ಮರ, ಗಿಡ, ಬೆಟ್ಟ-ಗುಡ್ಡ, ಕಾಡು-ಕಣಿವೆ, ಕಲ್ಲು-ಬಂಡೆ, ನದಿ ಮೊದಲಾದ ನೈಸರ್ಗಿಕ ವಸ್ತುಗಳ ಹೆಸರನ್ನೇ ಜನ ವಸತಿ ಆರಂಭಿಸಿದಾಗ ಆ ವಸ್ತುಗಳ ನಾಮಗಳನ್ನೇ ಊರುಗಳಿಗೂ ಅನ್ವಯಿಸುವ ಪದ್ಧತಿ ರೂಢಿಸಿಕೊಂಡು ಬಂದಿರಬೇಕು. ಆ ನಿಸರ್ಗವಾಚಿಯಾದ ವಸ್ತುಗಳ ಹೆಸರುಗಳು ಸ್ಥಳನಾಮಗಳ ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲೂ ಕಾಣಿಸಿಕೊಂಡಿರಬಹುದು.

ಅ. ಜಲವಾಚಿ

ಜೀವ ವಿಕಾಸದ ಇತಿಹಾಸದಲ್ಲಿ ಜಲಕ್ಕೆ ತುಂಬಾ ಪ್ರಾಮುಖ್ಯತೆ ಇದೆ. ಏಕಕೋಶ ಜೀವಿ ಅಮಿಬಾದಿಂದ ಮಾನವನವರೆಗೆ ಜೀವ ವಿಕಾಸದ ವಿವಿಧ ಹಂತಗಳಲ್ಲಿ ಜಲ ಅತೀ ಅವಶ್ಯಕವಾಗಿ ಬಂದಿದೆ. ಆಹಾರದ ಅನ್ವೇಷಣೆಗಾಗಿ ಸದಾ ಸಂಚಾರಿಯಾದ ಆದಿ ಮಾನವ ಕಾಲಾನಂತರದಲ್ಲಿ ಅಲೆಮಾರಿ ಜೀವನಕ್ಕೆ ತಿಲಾಂಜಲಿ ನೀಡಿ; ಒಂದೆಡೆ ನಿಂತು, ಕೃಷಿ ಸಂಸ್ಕೃತಿಯಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಜಲ ಮುಖ್ಯ ಎನಿಸಿರಬೇಕು. ಆ ಕಾರಣದಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡಿರಬೇಕು. ತನ್ನ ಅನುಕೂಲಕ್ಕಾಗಿ ಹರಿಯುತ್ತಿದ್ದ ನದಿಗೆ ಕೆರೆ ಕಟ್ಟೆಯನ್ನು ಕಟ್ಟಿ ಜಲ ಸಂಗ್ರಹ ಮಾಡುವ ಕಲೆಯನ್ನು ರೂಢಿಸಿಕೊಂಡಿರಬೇಕು. ತನ್ನ ಜೀವ ಮತ್ತು ಜೀವನಕ್ಕೆ ಜೀವಜಲವಾದ ಇದನ್ನು ತಾನು ನೆಲೆ ನಿಂತ ಸ್ಥಳಗಳಿಗೂ ಅನ್ವಯಿಸಿ ಕರೆಯುವುದನ್ನು ರೂಢಿಸಿಕೊಂಡಿರಬೇಕು. ಆದ್ದರಿಂದಲೇ ಸ್ಥಳನಾಮದ ನಿರ್ದಿಷ್ಟ ಮತ್ತು ವಾರ್ಗಿಕದ ಭಾಗಗಳಲ್ಲಿ ಈ ಜಲವಾಚಿಯಾದ ನೀರು, ನದಿ, ಹೊಳೆ, ಕೆರೆ, ತೊರೆ, ಆಲ, ಉದಕ

ಮೊದಲಾದವು ಕಾಣಿಸಿಕೊಂಡಿವೆ. ಜಲವಾಚಿ ಪದಗಳು ವಾರ್ಗಿಕ ಭಾಗದಲ್ಲಿ ಹೆಚ್ಚಾಗಿ ಕಂಡುಬಂದರೆ, ನಿರ್ದಿಷ್ಟ ಭಾಗದಲ್ಲಿ ಅತಿವಿರಳವಾಗಿ ರಾಮನಗರ ಜಿಲ್ಲೆಯಲ್ಲಿ ಕಾಣಿಸಿಕೊಂಡಿವೆ.

(ಕ)	ಆಲನತ್ತ	ಆಲೂರು	ಕೆಂಪಲನತ್ತ
	ತೊರೆ ಬೇಕುಪ್ಪೆ		
(ಚ)	ತೊರೆಹೊಸೂರು	ಆಲೂರು	ಉದಕುಂಟೆ
(ಮಾ)	ತೊರೆ ಚೆನ್ನೋಹಳ್ಳಿ	ತೊರೆರಾಮನಹಳ್ಳಿ	

ಆಲ: ತಗ್ಗಾದ ಸ್ಥಳದಲ್ಲಿ ನೀರು ನಿಂತಿರುವ ಜಾಗ, ಆಳವಾದ ನೀರುಳ್ಳ ಜಾಗ (ಕಿಟೆಲ್) ದ್ರಾವಿಡ ಜಾತಿಯ ಎಲ್ಲ ಭಾಷೆಗಳಲ್ಲೂ ಈ ರೂಪ ಸಿಗುತ್ತದೆ.

ಉದ: ಉದಕ, ನೀರು ಉದಕ+ಕುಂಟೆ-ಉದಕಕುಂಟೆ>ಉದಕುಂಟೆಯಾಗಿರುವ ಸಾಧ್ಯತೆ ಇದೆ.
ಉದಾ: ಉದಕ, ನೀರು, ದ್ರವವಾಗಿರುವುದು" ತೊರೆಬೇಕುಪ್ಪೆ, ತೊರೆ ಚೆನ್ನೋಹಳ್ಳಿ, ತೊರೆ ಹೊಸೂರು, ತೊರೆ ರಾಮನಹಳ್ಳಿಯ ನಿರ್ದಿಷ್ಟ ಭಾಗದಲ್ಲಿರುವ ವ್ಯಕ್ತಿವಾಚಿ, ಸಸ್ಯವಾಚಿಯಿಂದ ಗುರುತಿಸುತ್ತಿರುವ ನೆಲೆಗೆ ಸ್ಥಳದ ನಿರ್ದಿಷ್ಟತೆಗಾಗಿ 'ತೊರೆ' ಎಂಬ ಉಪ ಆಕೃತಿಮ ಬಂದಿದೆ.

ಆ.ಶಿಲಾವಾಚಿ

ಪ್ರಾಚೀನ ಶಿಲಾಯುಗದ ಮಾನವನು ತನ್ನ ಹೊಟ್ಟೆಯನ್ನು ಹೊರೆದುಕೊಳ್ಳಲು ಪ್ರಾಣಿಗಳನ್ನು ಬೇಟೆಯಾಡಬೇಕಾಗಿತ್ತು. ಶಿಲೆಗಳನ್ನು ಆಯುಧಗಳನ್ನಾಗಿ ಮಾಡಿಕೊಂಡು ಬೇಟೆಯಾಡುತ್ತಿದ್ದನು. ಅಲ್ಲದೇ ವಸತಿ ವ್ಯವಸ್ಥೆ ಗೊತ್ತಿಲ್ಲದ ಸಂದರ್ಭದಲ್ಲಿ ಮಳೆ, ಗಾಳಿ ಹಾಗೂ ಪ್ರಾಣ ರಕ್ಷಣೆಯ ಸಂದರ್ಭದಲ್ಲಿ ವಸತಿಗಳಾಗಿ ಕಲ್ಲಿನ ಗುಹೆಗಳನ್ನು ಅವಲಂಬಿಸಿದ್ದ ಪ್ರಾಚೀನರು ಮಾನವರು ಕಲ್ಲನ್ನು ಅತಿ ಅವಶ್ಯಕ ಸಾಧನವಾಗಿ ಬಳಸುತ್ತಿದ್ದುದರಿಂದ ತಮ್ಮ ನೆಲೆಗೂ ಶಿಲಾವಾಚಿಯಾದ ಹೆಸರನ್ನು ಇಟ್ಟುಕೊಂಡಿರಬೇಕು. ಇದು ಸ್ಥಳನಾಮಗಳ ಅವಲೋಕನದ ಮೂಲಕ ತಿಳಿದುಬರುತ್ತದೆ.

(ಕ)	ಅರಕೆರೆ	ಅರೆಹೊಸಹಳ್ಳಿ	ಕೆಂಗಲುನತ್ತಹಳ್ಳಿ
	ಅರನಕುಪ್ಪೆ	ಕಗ್ಗಲಹಳ್ಳಿ	ಚಿಕ್ಕಕಲ್‌ಬಾಳು
	ಅರೆಕೊಪ್ಪ	ಕಲ್ಲಹಳ್ಳಿ*	ದೇವರಕಗ್ಗಲಹಳ್ಳಿ
	ದೊಡ್ಡಕಲ್ಲುಬಾಳು	ಗುಂಡಿನಗೊಲ್ಲಹಳ್ಳಿ	
(ರಾ)	ಕಲ್ಲು ಗೋಪಹಳ್ಳಿ	ಸಿಡ್ಲಕಲ್ಲು	
(ಮಾ)	ಕಲ್ಲು ದೇವನಹಳ್ಳಿ	ಕಲ್ಲುಹಟ್ಟಿಪಾಳ್ಯ	ಕಲ್ಲೂರು
	ಕಲ್ಕೆರೆ		

*ಶಾಸನದಲ್ಲಿ 'ಕಳ್ಳೇನಹಳ್ಳಿ' ಎಂದು ಉಲ್ಲೇಖಗೊಂಡಿದೆ. ಮೂಲತಃ ಇದು ವ್ಯಕ್ತಿವಾಚಿಯಾಗಿದೆ.

ಅರೆ, ಕಲ್ಲು, ಗುಂಡು, ಬಂಡೆ ಎಂಬುವು ಶಿಲಾವಾಚಕ ಎನಿಸಿವೆ. ಅರಕೆರೆ, ಅರನಕುಪ್ಪೆ. ಈ ಎರಡು ಸ್ಥಳನಾಮಗಳು ಮೇಲ್ನೋಟಕ್ಕೆ ವ್ಯಕ್ತಿವಾಚಿಯಾಗಿ ಕಂಡುಬಂದರೂ 'ಅರ' ಪದದ ನಿಜರೂಪ 'ಅರೆ'

ಇರಬೇಕು. ಅರೆ, ಕಲ್ಲು, ಗುಂಡು ಎಂಬ ಶಿಲಾವಾಚಿ ನಿರ್ದಿಷ್ಟಕ್ಕೆ, ಜಲವಾಚಿ, ವಾಸ್ತವ್ಯವಾಚಿ, ವೃತ್ತಿವಾಚಿ, ಆಡಳಿತ ಸಂಬಂಧಿವಾಚಿಯಾದ ವಾರ್ಗಿಕಗಳು ಉತ್ತರ ಪದವಾಗಿ ಬಂದಿವೆ. ಈ ಶಿಲಾವಾಚಿ ಪದಗಳು ನಿರ್ದಿಷ್ಟಕ್ಕಿಂತಲೂ ವಾರ್ಗಿಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಜಿಲ್ಲೆಯ ಸ್ಥಳನಾಮಗಳಲ್ಲಿ ಬಂದಿವೆ.

೩. ಪ್ರಾಣಿವಾಚಿ

ನಿಸರ್ಗದಲ್ಲಿರುವ ವಸ್ತುಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ೧. ಜೀವವಾಚಿ ೨. ನಿರ್ಜೀವವಾಚಿ. ನಿಸರ್ಗದಲ್ಲಿ ಜೀವವಿರುವ ಪ್ರಾಣಿ, ಪಕ್ಷಿ, ಸಸ್ಯ ಸಂಪತ್ತನ್ನು ಒಂದನೆಯದಾದ ಜೀವವಾಚಿಗೂ, ಕಲ್ಲು, ಬಂಡೆ, ಬೆಟ್ಟ, ನದಿ ಇವುಗಳೂ ಕೂಡ ನಿಸರ್ಗದ ಒಂದು ಅಂಗವೇ. ಆದರೆ ಇವುಗಳಿಗೆ ಜೀವ ಇಲ್ಲದೇ ಇರುವುದರಿಂದ ಎರಡನೆ ವರ್ಗದ ನಿರ್ಜೀವವಾಚಿಗಳೆಂದು ಕರೆಯಬಹುದು.

ಪ್ರಾಚೀನ ಮಾನವನು ಗೆಡ್ಡೆ, ಗೆಣಸುಗಳ ಜೊತೆಗೆ ಪ್ರಾಣಿಗಳ ಹಸಿ ಮಾಂಸವನ್ನು ತನ್ನ ಆಹಾರಕ್ಕಾಗಿ ಉಪಯೋಗಿಸುತ್ತಿದ್ದನು. ಆಗಿನಿಂದಲೇ ಮನುಷ್ಯನಿಗೆ ತನ್ನ ಹಸಿವನ್ನು ನೀಗಿಸಿಕೊಳ್ಳಲು ಪ್ರಾಣಿಗಳ ಸಂಪರ್ಕ ಬೆಳೆದಿರಬೇಕು. ನಂತರದಲ್ಲಿ ಕೃಷಿ ಸಂಸ್ಕೃತಿಯನ್ನು ರೂಢಿಸಿಕೊಂಡ ಮೇಲೆ ಪ್ರಾಣಿಗಳ ಉಪಯೋಗವನ್ನು ಪಡೆದುಕೊಂಡು; ನಂತರ ಸಂಘಟಿತ ಜೀವನಕ್ಕೆ ಕಾಲಿರಿಸಿದಾಗ ತನಗೆ ಒಗ್ಗುವ ಪ್ರಾಣಿಗಳನ್ನು ಸಾಕುಪ್ರಾಣಿಗಳಾಗಿ ಮಾಡಿಕೊಂಡು ಅವುಗಳಿಂದ ಉಪಯೋಗ ಪಡೆದಿರಬೇಕು. ಹೀಗೆ ತನ್ನ ಅವಶ್ಯಕತೆಯನ್ನು ಪೂರೈಸುತ್ತಿದ್ದ ಈ ಸಾಕುಪ್ರಾಣಿಗಳನ್ನು ದೈವತ್ವದ (ಆಕಳು) ನೆಲೆಯಲ್ಲಿ ನೋಡುವ ಸಂಸ್ಕೃತಿಯನ್ನು ಕಾಲಾನಂತರದಲ್ಲಿ ಬೆಳೆಸಿಕೊಂಡನು. ಹೀಗೆ ಹಸು, ಎಮ್ಮೆ, ಮೇಕೆ, ಕುರಿ, ಬೆಕ್ಕು, ನಾಯಿ ಮೊದಲಾದ ಸಾಕು ಪ್ರಾಣಿಗಳ ಜೊತೆಗೆ ಅತಿಮಾನುಷವೆಂದು ತೋರುವ ಪ್ರಾಣಿಗಳಾದ ಸಿಂಹ, ಹುಲಿ, ಆನೆ, ಕೋತಿ ಮೊದಲಾದ ಪ್ರಾಣಿಗಳ ಹೆಸರನ್ನು ತಮ್ಮ ವಾಸದ ನೆಲೆಗೆ ಅನ್ವಯಿಸಿರಬಹುದು. ಇಂತಹ ಹೆಸರುಗಳು ರಾಮನಗರ ಜಿಲ್ಲೆಯಲ್ಲಿ ಸಿಗುತ್ತವೆ.

(ಕ)	ಕಡಸಿಕೊಪ್ಪ	ಕೋಣನಗುಂಡಿ	ಆನೆಹೊಸಹಳ್ಳಿ
	ನರಿಪುರ	ಉರಗನದೊಡ್ಡಿ	ಕೋಣಸಂದ್ರ
(ರಾ)	ಉರಗಹಳ್ಳಿ	ಕೊತ್ತಿಪುರ	ಹುಲಿಕೆರೆಗುನ್ನೂರು
	ಹಂದಿಗುಂದಿ ಅರಣ್ಯ		
(ಚ)	ನಾಯಿದೊಳ್ಳೆ		
(ಮಾ)	ನಾಗಮಂಗಲ	ಹುಲಿಕಟ್ಟೆ,	ಹುಲಿಕಲ್ಲು
	ನಾಗಪುರ	ನಾಗವಾರ.	

ಕಡಸು+ಕೊಪ್ಪದಲ್ಲಿನ 'ಕಡಸು' ಪ್ರಾಯಕ್ಕೆ ಬಂದ ದನದ ಕರು, ಬೆಳೆದ ಹೆಂಗರು ಎಂಬರ್ಥಗಳಿವೆ. ಕಡಸು+ಕೊಪ್ಪ>ಕಡಸುಕೊಪ್ಪ> ಕಡಸಿಕೊಪ್ಪ ಆಗಿರಬಹುದು. ನಿರ್ದಿಷ್ಟ ಪ್ರಾಣಿವಾಚಿಯಾಗಿದ್ದು, ಕೊಪ್ಪ ಸಾಮಾನ್ಯ ವಾರ್ಗಿಕವಾಗಿದೆ. ಬೆಳೆದ ಹೆಂಗರುಗಳಿರುವ ನೆಲೆಯಾಗಿ ಬಳಕೆಯಲ್ಲಿ ಬಂದಿರಬಹುದು.

ಕೋಣ>ಸಮುದ್ರ-ಕೋಣ ಸಮುದ್ರ>ಕೋಣ ಸಂದ್ರ 'ಕೋಣ', ಎಮ್ಮೆ ಜಾತಿಯ ಗಂಡು ಪ್ರಾಣಿ. ಇಲ್ಲಿ ಪ್ರಾಣಿವಾಚಿಯಾದ ನಿರ್ದಿಷ್ಟಗಳಿಗೆ, ವಾಸ್ತವ್ಯವಾಚಿ, ಶಿಲಾವಾಚಿ, ಜಲವಾಚಿಯಾದ ವಾರ್ಗಿಕಗಳು ಸೇರಿವೆ. ಅದೇ ರೀತಿಯಲ್ಲಿ ಕೊತ್ತಿ+ಪುರ-ಕೊತ್ತಿಪುರ; ಕೊತ್ತಿಪುರ>ಕತ್ತಿಪುರ-ಎಂಬ ಪ್ರಾಚೀನ ಉಲ್ಲೇಖ ದೊರಕುತ್ತದೆ. ಕತ್ತಿ, ಖಡ್ಗಗಳನ್ನು ತಯಾರಿಸುವ ನೆಲೆಗಳಾಗಿದ್ದವು ಎಂಬುದಕ್ಕೆ ಬೂದಿ ಇರುವ ಕುಲುಮೆಗಳು ಈಗಲೂ ಸಿಗುತ್ತವೆ. ಕತ್ತಿಪುರ>ಕೊತ್ತಿಪುರವಾಗಿ ಜನರ ಮಾತಿನಲ್ಲಿ ಬಳಕೆಯಲ್ಲಿದೆ.

ಈ. ಸಸ್ಯವಾಚಿ

ಮಾನವನ ವಾಸದ ನೆಲೆಗಳು ನಿರ್ಮಾಣವಾಗದೇ ಇದ್ದ ಕಾಲದಲ್ಲಿ ಪ್ರಾಚೀನ ಮಾನವರು ಮರದ ಪೊಟರೆ, ಮರದ ಎಲೆಗಳನ್ನು ಹೊದ್ದುಕೊಳ್ಳುವ ಮೂಲಕ ರಕ್ಷಣೆಯನ್ನು ಪಡೆಯುತ್ತಿದ್ದನು. ಕಾಡುಗಳಲ್ಲಿನ ಮರ, ಗಿಡಗಳ ಹಣ್ಣುಗಳಿಂದ ಆಹಾರವನ್ನು ಪಡೆಯುತ್ತಿದ್ದನು.

ಮಾನವನ ಬೌದ್ಧಿಕಮಟ್ಟ ಬೆಳೆದಂತೆ ಆಹಾರ ಪದಾರ್ಥಗಳನ್ನು ತಾನೆ ಬೆಳೆಯುತ್ತಿದ್ದನು. ಅಲ್ಲದೇ ಸಸ್ಯದ ಮೂಲಕ ಔಷಧಿಗಳ ಬಳಕೆ, ರಕ್ಷಣೆಗಾಗಿ ಮರಗಳ ಬಳಕೆ ಮೊದಲಾದ ಇನ್ನಿತರ ಕಾರಣಗಳಿಗಾಗಿ ಮರಗಿಡಗಳ ಮೊರೆ ಹೋದನು. ತನಗೆ ಬೇಕಾದ ಮರ ಗಿಡಗಳನ್ನು ಬೆಳೆದು ಅವುಗಳ ಫಲಗಳನ್ನು ಸ್ವೀಕರಿಸಿದ. ನಿರಂತರವಾಗಿ ಮರಗಿಡಗಳ ಬಳಕೆಯಿಂದ ತನ್ನ ನೆಲೆಗೂ ಆ ಮರಗಿಡ ಮತ್ತು ಅವುಗಳ ಉತ್ಪನ್ನಗಳ ಹೆಸರನ್ನು ನೀಡತೊಡಗಿದನು. ತನ್ನ ಅವಶ್ಯಕತೆಯನ್ನು ಹೀಗೆ ಪೂರೈಸುತ್ತಿದ್ದ ಮರಗಿಡಗಳಿಗೆ ಸಹಜವಾಗಿಯೇ ಅವುಗಳ ಮೇಲೆ ಭಕ್ತಿಭಾವ ಬೆಳೆದು, ಮರಗಿಡಗಳು ದೈವತ್ವದ ಸ್ವರೂಪವನ್ನು ಪಡೆದುಕೊಂಡವು. ಅರಳಿ, ಬನ್ನಿ, ತೆಂಗು, ಬೇವು, ತುಳಸಿಗಿಡ ಮೊದಲಾದ ಮರಗಳನ್ನು ಈಗಲೂ ಪೂಜಿಸುತ್ತಿರುವುದನ್ನು ಕಾಣಬಹುದು. ಸಸ್ಯವಾಚಿ ಸ್ಥಳನಾಮಗಳು ಆಯಾ ಪ್ರದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಅಂಶಗಳನ್ನು ತಿಳಿಸುತ್ತವೆ. ಗಿಡ ಮರಗಳ ಬೆಳವಣಿಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗುವ ಸಾಧ್ಯತೆ ಇದೆ. ಇದನ್ನು ಪೂರಕವಾಗಿ ಸ್ಥಳನಾಮಗಳ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

(ಕ)	ಅತ್ತಿಗುಪ್ಪೆ	ಅತ್ತಿಹಳ್ಳಿ	ಅರಳೀಮರದದೊಡ್ಡಿ
	ಅವರೆಮಾಳ	ಗೇರಹಳ್ಳಿ	ದಾಳಿಂಬ
	ಬನವಾಸಿ	ಬನ್ನಿಕುಪ್ಪೆ	ಬನ್ನಿಮುಕೋಡ್ಲು
	ಬಳ್ಳಗೆರೆ	ಬಾಳೆಪುರ	ಬ್ಯಾಲಾಳು
	ಬೇಕುಪ್ಪೆ	ಮಲ್ಲಿಗೆ ಮೆಟ್ಟಿಲು	ಮಾಹಳ್ಳಿ
	ಯಲಚವಾಡಿ	ಯಲಚಹಳ್ಳಿ	ರಾಗಿಹಳ್ಳಿ
	ವಡಕೆ ಕಟ್ಟೆ	ಸೀಗೆಕೋಟೆ	ಸುಂಡಘಟ್ಟ
	ಹಲಸಿನಮರದಹಳ್ಳಿ	ಹಲಸೂರು	ಹಲಸೂರು ಜೋಡಿ

	ಹುಣಸನ ಕೋಡಿಹಳ್ಳಿ	ಹುಣಸನಹಳ್ಳಿ	ಹುಣಸಲನತ್ತ
	ಹೂಕುಂದ.		
(ರಾ)	ಅಕ್ಕೂರು	ಅವರಗೆರೆ	ಅಂಚಿಪುರ
	ಕವಣಾಪುರ	ಕುಂಬಳಗೂಡುಅರಣ್ಯ	ಚಿಕ್ಕಸೂಲಿಕೆರೆ
	ತಾಳಕುಪ್ಪೆ	ತಾಳವಾಡಿ	ತೆಂಗಿನಕಲ್ಲು
	ದೊಡ್ಡ ಸೂಲಿಕೆರೆ	ಬನ್ನಿಕುಪ್ಪೆ	ಬನ್ನಿಗಿರಿ
	ಮೆಳೆಹಳ್ಳಿ	ಹಾಗಲಹಳ್ಳಿ.	
(ಚ)	ಅತ್ತಿಗುಪ್ಪೆ	ಅರಳಾಪುರ	ಅರಳಾಸಂದ್ರ
	ಎಲೆತೋಟದಹಳ್ಳಿ	ಎಲೆಹೊಸಹಳ್ಳಿ	ಗರಕಹಳ್ಳಿ
	ಗೆಂಡೇಮಡು	ತಗಚಗೆರೆ	ಬೇವೂರು
	ಮತ್ತಿಕೆರೆ	ಮಾಕಳಿ	ಯಲಿಯೂರು
	ಹೊಂಗನೂರು.		
(ಮಾ)	ಅಡಕಮಾರನಹಳ್ಳಿ	ಅರಸಿನಕುಂಟೆ	ಅಳಲಕುಪ್ಪೆ
	ಆಲದಕಟ್ಟೆ	ಗೇರಹಳ್ಳಿ	ಚಿಕ್ಕೇಳ್ಳೂರುರಾಮಪುರ
	ಚಿಕ್ಕೆಳ್ಳೂರುವೆಂಕಟಪುರ	ತಗಚಗುಪ್ಪೆ	ತಾವರೆಕೆರೆ
	ತಾಳೆಕೆರೆ	ನಸರುಮಾವಿನಕಟ್ಟೆ	ನೇರಳವಾಡಿ
	ನೇರಳೆಕೆರೆ	ಬಾಳೆಕಟ್ಟೆ	ಬ್ಯಾಲದಕೆರೆ
	ಬ್ಯಾಲಾಳು	ಮತ್ತಿಕೆರೆ	ಮುತ್ತುಗದಹಳ್ಳಿ
	ಯಲಗದಹಳ್ಳಿ	ಯಲಚಕುಪ್ಪೆ	ಯಲಚಕುಪ್ಪೆ ರಾಮಾಪುರ
	ಸೂಲಿವಾರ	ಸೂಲಿವಾರ ರಾಮಪುರ	ಹಲಸಬೆಲೆ
	ಹಂಚಿಕುಪ್ಪೆ	ಹಂಚಿ ಬಸವನಪಾಳ್ಯ	ಹೊಂಗೇಕಾವಲು.

ಬ್ಯಾಲಾಳು: ಬೇಲ+ಹಾಳು-ಬೇಲಹಾಳು>ಬ್ಯಾಲಾಳು ಆಗಿದೆ. ಬೇಲ ಮರದ ನೆಲೆ ಎಂಬರ್ಥದಲ್ಲಿ ಬಳಕೆಯಲ್ಲಿರಬಹುದು.

ಬೇಕುಪ್ಪೆ: ಶಾಸನವೊಂದರಲ್ಲಿ ಬೇವುಕುಪ್ಪೆ ಎಂದು ಉಲ್ಲೇಖಗೊಂಡಿದೆ. ಬೇವು+ಕುಪ್ಪೆ-ಬೇವುಕುಪ್ಪೆ>ಬೇಕುಪ್ಪೆಯಾಗಿದೆ.

ಹುಣಸನಹಳ್ಳಿ, ಹುಣಸನ ಕೋಡಿಹಳ್ಳಿ, ಹೊಂಗನೂರುಗಳಲ್ಲಿ 'ನ'ಕಾರವಿರುವುದರಿಂದ ವ್ಯಕ್ತಿನಾಮ ಕೂಡ ಆಗಬಹುದಾದ ಸಂಭವವಿದೆ. ಅಡಕಮಾರನಹಳ್ಳಿಯ 'ಅಡಕ', 'ಅಡಿಕೆ' ಇರಬಹುದು. ಸ್ಥಳನಾಮಗಳ ನಿರ್ದಿಷ್ಟಭಾಗದಲ್ಲಿ ಹೆಚ್ಚಾಗಿ ಮರ, ಗಿಡ, ಬಳ್ಳಿ, ಸಸ್ಯ, ಬೆಳೆ, ಹೂ ಮುಂತಾದವುಗಳು ನಿರ್ದೇಶನಗೊಂಡಿವೆ.

ಉ. ಪಕ್ಷಿವಾಚಿ

ಮನುಷ್ಯನ ದಿನನಿತ್ಯದ ಬದುಕು ಆರಂಭವಾಗುವುದೇ ಹಕ್ಕಿ-ಪಕ್ಷಿಗಳ ಕೂಗುವಿಕೆಯಿಂದ ಆರಂಭವಾಗುತ್ತದೆ. ಅದೇ ರೀತಿ ಅಂದಿದ್ದ ಪ್ರಾಚೀನ ಮಾನವರು ತಮ್ಮ ಹೊಟ್ಟೆಯನ್ನು ಹೊರೆಯಲು ಪ್ರಾಣಿ-ಪಕ್ಷಿಗಳನ್ನು ಆಶ್ರಯಿಸಿದ್ದರು. ಅಷ್ಟೇ ಅಲ್ಲ ಒಂದು ಅಲೆಮಾರಿ ಜನಾಂಗವಾದ ಹಕ್ಕಿ-ಪಿಕ್ಕಿಯವರ ವೃತ್ತಿ ಕಾಡಿನಲ್ಲಿರುವ ಕೌಜುಗ, ಕಾಡಕ್ಕಿ ಮೊದಲಾದ ಹಕ್ಕಿಗಳನ್ನು ಹಿಡಿದು ಜೀವಿಸುತ್ತಿದ್ದರಿಂದ ಈ ಜನಾಂಗಕ್ಕೆ ಹಕ್ಕಿ-ಪಿಕ್ಕಿಯವರೆಂದೇ ಕರೆಯುವ ಪದ್ಧತಿ ರೂಢಿಯಲ್ಲಿದೆ. ಅಂದರೆ ಮಾನವರ ಮೇಲೆ ಹಕ್ಕಿ-ಪಕ್ಷಿಗಳು ಬೀರಿರುವ ಪ್ರಭಾವವನ್ನು ಗಮನಿಸಬಹುದು.

ಭಾರತೀಯ ಸಂಸ್ಕೃತಿಯಲ್ಲಿ 'ಗರುಡ' ಪಕ್ಷಿಗೆ ಮತ್ತು ಕಾಗೆಗೆ ದೈವತ್ವದ ಪಟ್ಟ ಕಟ್ಟಿರುವುದು ನಮಗೆಲ್ಲ ತಿಳಿದೇ ಇದೆ. ಅಲ್ಲದೆ ಕಾಡಕ್ಕಿ, ಸೋರಕ್ಕಿ, ಕೋಳಿ, ಬಾತುಕೋಳಿ ಮೊದಲಾದ ಹಲವು ಪಕ್ಷಿಗಳು ಮಾನವನ ಆಹಾರಗಳಾಗಿವೆ. ಹೀಗೆ ಮನುಷ್ಯನ ಜೀವನದ ಅಂಗಗಳಾದ ಈ ಪಕ್ಷಿಗಳ ಹೆಸರುಗಳನ್ನು ತನ್ನ ನೆಲೆಗೂ ಆರೋಪಿಸಿರುವುದನ್ನು ಕಾಣಬಹುದು.

(ಕ) ಕೊಕ್ಕರೆ ಹೊಸಹಳ್ಳಿ

(ಮಾ) ಕಾಗಿಮಡು, ಹಕ್ಕಿನಾಳು

ನಿರ್ದಿಷ್ಟ ಭಾಗದಲ್ಲಿ ಬಂದಿರುವ ಕೊಕ್ಕರೆ, ಕಾಗಿ, ಹಕ್ಕಿ ಇವುಗಳ ದಟ್ಟತೆಯನ್ನು ಸೂಚಿಸುವ ಸ್ಥಳಗಳಾಗಿ ಬಂದಿದೆ. ಕಾಗೆ+ಮಡು>ಕಾಗೆಮಡು>ಕಾಗಿಮಡುವಾಗಿರಬಹುದು.

ಊ. ಭೌಗೋಳಿಕ ಲಕ್ಷಣ ಸೂಚಿ

ಭೂಮಿಯ ಮೇಲ್ಭಾಗದಲ್ಲಿರುವ ಲಕ್ಷಣವನ್ನು ಹೇಳುವ ಬೆಟ್ಟ, ಗುಡ್ಡ, ಪರ್ವತ, ಗಿರಿ, ಶಿಖರ, ಕೋಡು ತಿಟ್ಟು ಮೊದಲಾದವು ಭೂ ವೈಶಿಷ್ಟ್ಯವನ್ನು ಹೇಳುವ ಪದಗಳಾಗಿವೆ. ಒಂದು ಊರಿನ ಭೂ ಪ್ರದೇಶದಲ್ಲಿರುವ ಮಣ್ಣು ಸಹ ಈ ಪಟ್ಟಿಯಲ್ಲಿ ಬರುತ್ತದೆ. ಈಗಲೂ ಸಹ ಗಿರಿ, ಶಿಖರಗಳ ಮಡಿಲಿನಲ್ಲಿ ಜೀವನವನ್ನು ಸಾಗಿಸುತ್ತಿರುವ ಬುಡಕಟ್ಟು ಜನಾಂಗಗಳನ್ನು ಕಾಣುತ್ತೇವೆ. ಆದ್ದರಿಂದ ತಾವು ನೆಲೆಸಿದ ನೆಲೆಗೆ ತನ್ನ ಸುತ್ತ ಮುತ್ತಲಿರುವ ಪರ್ವತ, ಬೆಟ್ಟ, ಗುಡ್ಡಗಳ ಹೆಸರನ್ನೇ ಅನ್ವಯಿಸಿರುವುದು ಕಂಡುಬರುತ್ತದೆ. ಮೊದಲೇ ಬೆಟ್ಟ ಗುಡ್ಡ, ಅರಣ್ಯಗಳಿಂದ ಕೂಡಿರುವ ರಾಮನಗರ ಜಿಲ್ಲೆಯು ಇಂಥ ಹೆಸರನ್ನು ತನ್ನ ಸ್ಥಳನಾಮಗಳಲ್ಲಿ ಇಟ್ಟುಕೊಂಡಿರುವುದನ್ನು ಕಾಣಬಹುದು.

(ಕ)	ಕಣಿವೆಕಟ್ಟೆ	ಮರಳಗೆರೆ	ಕಣಿವೆ ಮಾದಪುರ
	ಮರಳೇಬೇಕುಪ್ಪೆ	ಗಟ್ಟಿಗುಂದ,	ದೊಡ್ಡಮರಳವಾಡಿ,
	ಗುಡ್ಡೆವೀರನಹೊಸಹಳ್ಳಿ	ಚಿಕ್ಕಮರಳವಾಡಿ	ಚಿಕ್ಕಬೆಟ್ಟಹಳ್ಳಿ
	ಬೆಟ್ಟಹಳ್ಳಿ ಕಾವಲು		

(ಮಾ)	ಗುಡ್ಡೆಹೊಸೂರು	ಪರ್ವತಪುರ	ಗಟ್ಟಿಪುರ
	ಪರ್ವತಪಾಳ್ಯ	ಗುಡ್ಡಲಹಳ್ಳಿ	ಬೆಟ್ಟದಾಸಿಪಾಳ್ಯ
	ಗುಡೆಮಾರನಹಳ್ಳಿ	ಬೆಟ್ಟಹಳ್ಳಿ	
(ಚ)	ಚಿಕ್ಕಮಣ್ಣುಗುಡ್ಡೆ	ಸುಣ್ಣಘಟ್ಟ	

ಗಟ್ಟಿಗುಂದ-ಗಟ್ಟಿಪುರದ ನಿರ್ದಿಷ್ಟ ಭಾಗದಲ್ಲಿ ಬಂದಿರುವ 'ಗಟ್ಟಿ' ಭೂಮಿಯ ಮೇಲ್ಪದರದ ಕಠಿಣತೆಯನ್ನು ಸೂಚಿಸುವ ಭೂವೈಶಿಷ್ಟ್ಯವಾಗಿದೆ. ಸಾಮಾನ್ಯವಾಗಿ ಈ ಸ್ಥಳನಾಮಗಳಿರುವ ನೆಲೆ ಕಲ್ಲು, ಬಂಡೆಗಳಿಂದ ಕೂಡಿರುವ ನೆಲೆಯಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಗುಡೆ ಮಾರನಹಳ್ಳಿಯ ಗುಡ್ಡೆ>ಗುಡೆ ಆಗಿರುವ ಸಂಭವವಿದೆ ಹಾಗೂ ಈ ಗ್ರಾಮವು ಬೆಟ್ಟದ ಬುಡದಲ್ಲಿ ಬರುವ ಗ್ರಾಮವಾಗಿದೆ.

೨. ಸಾಂಸ್ಕೃತಿಕ ಹಿನ್ನೆಲೆಯ ಸ್ಥಳನಾಮಗಳು

ಸಂಸ್ಕೃತಿ ಜನತೆಯ ಜೀವನದ ವಿಧಾನವೇ ಆಗಿದೆ. ಇದು ಸಂಸ್ಕಾರಗಳಿಂದ ಹುಟ್ಟಿಕೊಂಡಿರುವಂತದ್ದು. ಆಚರಣೆ, ನಂಬಿಕೆ, ಧರ್ಮ, ಮತಶಾಸ್ತ್ರ, ಕಲೆ ಮೊದಲಾದವುಗಳನ್ನು ಮಾನವ ಹಿಂದಿನಿಂದಲೂ ಆಚರಿಸಿಕೊಂಡು ಬರುತ್ತಿದ್ದಾನೆ. ಸಂಸ್ಕೃತಿ ಮಾನವನಲ್ಲಿರುವಂತೆ ಆತ ಊರುಗಳಿಗೆ ಹೆಸರಿಡುವಾಗಲೂ ಇದನ್ನು ತೋರಿಸಿದ್ದಾನೆ ಎಂಬುದಕ್ಕೆ ಸ್ಥಳನಾಮಗಳೇ ಸಾಕ್ಷಿಯಾಗಿವೆ. "ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದ ವಸ್ತು, ವ್ಯಕ್ತಿ, ಘಟನೆಗಳನ್ನು, ಧರ್ಮ, ಸಂಸ್ಕೃತಿಯ ಹಿನ್ನೆಲೆಯಲ್ಲಿ ತಾನು ವಾಸಿಸುವ ಸ್ಥಳಗಳಿಗೆ ಹೆಸರಿಸಿ ಮಾನವನು ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ"[೬] ಈ ಮಾತುಗಳು ರಾಮನಗರ ಜಿಲ್ಲೆಯ ಸ್ಥಳನಾಮಗಳಿಗೂ ಅನ್ವಯಿಸುವಂಥದ್ದಾಗಿದೆ. ಜಿಲ್ಲೆಯಲ್ಲಿ ಹಲವಾರು ಜನಾಂಗ, ಧರ್ಮದವರು ನೆಲೆಸಿ ಸಹಜೀವನ ನಡೆಸುತ್ತಿದ್ದಾರೆ. ಇವರ ವೈಶಿಷ್ಟ್ಯವಾದ ಸಂಸ್ಕೃತಿಯ ಬೇರುಗಳು ಸ್ಥಳನಾಮಗಳಲ್ಲಿ ಉಕ್ತಗೊಂಡಿರುವುದನ್ನು ಗಮನಿಸಬಹುದು.

ಅ. ವೃತ್ತಿವಾಚಿ

ವೃತ್ತಿ ಮತ್ತು ಜಾತಿಗಳು ಒಂದೇ ನಾಣ್ಯದ ಎರಡು ಮುಖವಿದ್ದಂತೆ. ವೃತ್ತಿಗಳು ಬೆಳೆದು ಜಾತಿಯಾಗಿ ಮಾರ್ಪಟ್ಟಿರುವ ಸಂಗತಿ ನಮ್ಮ ಸಾಮಾಜಿಕ ಚರಿತ್ರೆಯಲ್ಲಿರುವುದನ್ನು ಗಮನಿಸಬಹುದು. ಜನರು ತಮ್ಮ ಜೀವನೋಪಾಯಕ್ಕಾಗಿ ಬೇಟೆ, ಕೃಷಿ ಮೊದಲಾದ ವೃತ್ತಿಯನ್ನು ಕಂಡುಕೊಂಡರು. ಕೆಲವು ಸಮುದಾಯದವರು ಒಂದು ನಿರ್ದಿಷ್ಟವಾದ ವೃತ್ತಿಯನ್ನು ಮಾಡುತ್ತಾ ಬಂದಿದ್ದು ನಂತರದಲ್ಲಿ ಅವೇ ಜಾತಿಗಳಾಗಿ ಮಾರ್ಪಟ್ಟಿರುವುದು ಕಂಡುಬರುತ್ತದೆ.

ವೃತ್ತಿಪರ ಜನತೆ ಊರುಗಳು ರೂಪುಗೊಳ್ಳುವಾಗ ತಮ್ಮ ವೃತ್ತಿವಾಚಿಯಾದ ಘಟಕಗಳನ್ನೇ ಆ ಊರುಗಳಿಗೆ ಅನ್ವಯಿಸಿ ಹೇಳುವುದನ್ನು ಬಳಕೆಗೆ ತಂದರು. ಇದರ ಪ್ರತಿಫಲವಾಗಿ ಸ್ಥಳನಾಮಗಳು ವೃತ್ತಿವಾಚಿಯಾದ ಹೆಸರನ್ನು ಪಡೆಯಲು ಸಾಧ್ಯವಾಯಿತು.

ವೃತ್ತಿವಾಚಿಯಾದ ಆ ಊರಿನ ಇಡೀ ಜನಸಮುದಾಯವೇ ಆ ವೃತ್ತಿಯನ್ನು ಮಾಡುತ್ತಿತ್ತು ಎಂದು ಹೇಳಲು ಸಾಧ್ಯವಿಲ್ಲ. ಊರಿನಲ್ಲಿರುವ ಬಹುಪಾಲು ಜನರು ಆ ವೃತ್ತಿಯನ್ನು ಅವಲಂಬಿಸಿರುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ನೈಸರ್ಗಿಕ ವಿಕೋಪಗಳಿಗೆ ಒಳಗಾಗಿ ಅಥವಾ ರೋಗ ರುಜಿನಗಳಿಗೆ ಒಳಗಾಗಿ ಇಲ್ಲವೆ ನಗರೀಕರಣಕ್ಕೆ ಒಳಗಾಗಿ ಇಡೀ ಸಮುದಾಯ ಆ ಗ್ರಾಮವನ್ನು ತೊರೆದು ಬೇರೆಡೆ ವಲಸೆ ಹೋಗಿರಬಹುದು. ಆದರೂ ವೃತ್ತಿಯನ್ನು ಮಾಡುತ್ತಿದ್ದ ಸಮುದಾಯದವರು ಇದ್ದ ನೆಲೆ ಎಂಬುದನ್ನು ಸ್ಥಳನಾಮ ಸೂಚಿಸುತ್ತಾ ಬಂದಿರುವುದನ್ನು ಕಾಣಬಹುದು.

(ಕ) ಬಂಡಿಗನಹಳ್ಳಿ ಬಳೆಚನ್ನವಲಸೆ ಭಂಟಗಾಳು
ಗೊರವನಪುರ

(ರಾ) ಅರ್ಚಕರಹಳ್ಳಿ ಕಂಚಗಾರನಹಳ್ಳಿಕಾವಲು ಕಂಚುಗಾರನಹಳ್ಳಿ
ಡಣಾಯಕನಪುರ ಶಾನುಭೋಗನಹಳ್ಳಿ

(ಚ) ಶಾನುಭೋಗನಹಳ್ಳಿ

(ಮೈ) ಬಂಟರಕುಪ್ಪೆ

ಬಂಡಿಗ+ನ+ಹಳ್ಳಿ>ಬಂಡಿಗನಹಳ್ಳಿ. (ಬಂಡಿ+ಇಗ=ಬಂಡಿಗ) ಸಾರಥಿ, ಬಂಡಿ ಹೊಡೆಯುವವನ ವೃತ್ತಿಯನ್ನು ಮಾಡುವವನ ನೆಲೆ.

ಆ. ಸಮುದಾಯ ವಾಚಿ

ಭಾರತದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆ ಇರುವುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ ಮತ್ತು ಶೂದ್ರ. ಈ ವರ್ಣಗಳೇ ಜಾತಿಗಳಾಗಿ ಮಾರ್ಪಟ್ಟವು. ಈ ನಾಲ್ಕು ವರ್ಣಗಳಿಗೆ ಮುಂದೆ ವೃತ್ತಿಯನ್ನಾಧರಿಸಿ ಇನ್ನಷ್ಟು ಜಾತಿಗಳು ಏರ್ಪಟ್ಟವು. ಕೆಲವು ಜಾತಿಗಳನ್ನು ಸ್ಥಳನಾಮಗಳಿಗೆ ನೇರವಾಗಿ ನಾಮಕರಣ ಮಾಡಿರುವುದು ಸ್ಥಳನಾಮಗಳಲ್ಲಿ ಸಿಗುತ್ತದೆ. ಜಾತಿಸೂಚಕವಾದ ಸ್ಥಳನಾಮಗಳು ಆ ಪ್ರದೇಶದಲ್ಲಿ ವಾಸಿಸುವ ಜನಾಂಗವನ್ನು ಸೂಚಿಸುತ್ತದೆ.

ಕೆಲವೊಂದು ಸಾರಿ ಜನಾಂಗವಾಚಿ ಗ್ರಾಮನಾಮ ಬಂದಿದ್ದರೂ ಸಹ ಆ ಗ್ರಾಮದಲ್ಲಿ ಭಿನ್ನ-ಭಿನ್ನ ಜಾತಿ, ಕುಲ, ಕೋಮುಗಳು ಪರಸ್ಪರ ಸೌಹಾರ್ದದಿಂದ ಸಾಮರಸ್ಯ ಜೀವನ ಸಾಗಿಸುತ್ತಿರುತ್ತಾರೆ. ಅಲ್ಲಿ ಯಾವ ಜಾತಿಯನ್ನಾಗಲೀ, ವರ್ಗವನ್ನಾಗಲೀ ಎತ್ತಿ ಹಿಡಿಯುವ ಅಥವಾ ಹೀಗೆಳೆಯುವ ಪ್ರವೃತ್ತಿ ಇರುವುದಿಲ್ಲ. ಆ ಸ್ಥಳದಲ್ಲಿ ಎಲ್ಲ ಜಾತಿ, ವರ್ಗದವರೂ ಸಹಬಾಳ್ವೆ ನಡೆಸುತ್ತಾ ಇರುತ್ತಾರೆ. ಒಂದು ನಿರ್ದಿಷ್ಟ ಜಾತಿ ಅಥವಾ ಕೋಮಿನವರು ಬಂದು ನಿರ್ವಸಿತ ಪ್ರದೇಶವನ್ನು ವಾಸ್ತವಕ್ಕೆ ಬಳಸಿಕೊಂಡ ಕೂಡಲೇ ಆ ಜಾತಿ ಅಥವಾ ಕೋಮಿನಿಂದ ಅದನ್ನು ಗುರುತಿಸುತ್ತದೆಯೇ ಹೊರತು ಊರಿನ ಸಮಷ್ಟಿ ಬದುಕಿನಿಂದ ಅವರನ್ನು ವಿಚ್ಛೇದಗೊಳಿಸುವ ಅಸ್ಪೃಶ್ಯ ಪ್ರವೃತ್ತಿ ಇರುವುದಿಲ್ಲ. ಉದಾ. ಮಾದರಹಳ್ಳಿ, ಶ್ರೇಣೀಕೃತವಾದ ವ್ಯವಸ್ಥೆಯಲ್ಲಿ 'ಮಾದಿಗ' ಅಸ್ಪೃಶ್ಯ ಸಮುದಾಯ ಇರಬಹುದು. ಆದರೆ, ಆ ಗ್ರಾಮವನ್ನು ಅಸ್ಪೃಶ್ಯ ನೆಲೆಯಲ್ಲಿ

ನೋಡಲಾಗುವುದಿಲ್ಲ. ಇದು ಒಂದರ್ಥದಲ್ಲಿ ಗ್ರಾಮೀಣ ಪರಿಸರದಲ್ಲಿ ವಿವಿಧ ಜನಾಂಗಗಳು, ವರ್ಗಗಳು, ಸಮಾಜದಲ್ಲಿ ಬದುಕಲು ಒಬ್ಬರಿಗೆ ಮತ್ತೊಬ್ಬರು ನೆರವಾಗುವ ಪ್ರಕ್ರಿಯೆಯನ್ನು ಕಾಣಬಹುದು. ಆ ಮೂಲಕ ವಸ್ತು ವಿನಿಮಯ ಪದ್ಧತಿಗೆ ನಾಂದಿ ಆಡಿರುವುದನ್ನು ಸಹ ಕಾಣಬಹುದು.

(ಕ)	ಕುರುಬರಹಳ್ಳಿ	ಗೊಲ್ಲಹಳ್ಳಿ	ಬೈರಮಂಗಲ
	ತಿಗಳರಹಳ್ಳಿ	ತಿಗಳರ ಹೊಸಹಳ್ಳಿ	ತುರುಕರ ಹೊಸಹಳ್ಳಿ
(ರಾ)	ದಾಸರಹಳ್ಳಿ	ವಾಜರಹಳ್ಳಿ	
(ಚ)	ಬ್ಯಾಡರಹಳ್ಳಿ		
(ಮಾ)	ಮಾದರಪಾಳ್ಯ		

ಇ. ವ್ಯಕ್ತಿವಾಚಿ

ನಿಸರ್ಗದಲ್ಲಿ ಸರಳವಾಗಿ ಬದುಕುತ್ತಾ ಜೀವನವನ್ನು ಕಟ್ಟಿಕೊಂಡ ಮಾನವ; ಮೊದಲಿಗೆ ನೈಸರ್ಗಿಕ ವಸ್ತುಗಳಾದ ಕಲ್ಲು, ಗುಡ್ಡ, ಮರ, ಗಿಡ, ನೀರು, ಮಣ್ಣು ಮೊದಲಾದ ವಸ್ತುಗಳನ್ನು ತನ್ನ ನೆಲೆಗೆ ಹೆಸರಿಸಿದ. ನಂತರದಲ್ಲಿ ಜನಾಂಗನಿಷ್ಠೆಗೆ ಹತ್ತಿರವಾದ ಮಾನವ, ಜನಾಂಗನಿಷ್ಠವಾದ ಹೆಸರುಗಳನ್ನೇ ಹೆಸರಿಸಿದ ಮೂರನೆ ಘಟ್ಟದಲ್ಲಿ ಜನಾಂಗಕ್ಕಿಂತಲೂ ಸ್ವಾರ್ಥಪರವಾದ ಆಲೋಚನೆಗಳು ಮಾನವನ ಮನದಲ್ಲಿ ಚಿಗುರೊಡೆದ ಸಂದರ್ಭದಲ್ಲಿ ಈ ವ್ಯಕ್ತಿವಾಚಿಗಳು ತಲೆದೋರಿರಬೇಕು. ಬದುಕಿರುವ ತನ್ನ ಸಂಬಂಧಿಕರ ಅಥವಾ ತನಗೆ ಪ್ರೀತಿ ಪಾತ್ರರಾದವರ ಹೆಸರನ್ನು ವ್ಯಕ್ತಿವಾಚಿ ನಾಮಕರಣದ ಆರಂಭದಲ್ಲಿ ಹೆಸರಿಸಿ, ನಂತರ ತನ್ನ ಹೆಸರನ್ನೇ ಗ್ರಾಮಗಳಿಗೆ ನೀಡುವ ಪರಿಪಾಠವನ್ನು ಬೆಳೆಸಿಕೊಂಡ. ಇವು ರಾಜರ ಕಾಲಮಾನದಲ್ಲಿ ಸಹಜವಾಗಿ ನಡೆದಿರುವ ಘಟನೆಗಳಾದರೆ, ಪ್ರಸ್ತುತ ಸಂದರ್ಭದಲ್ಲಿ ಸಮಾಜ ಸುಧಾರಕರ, ತಮ್ಮ ನೆಚ್ಚಿನ ನಾಯಕ, ಆಧ್ಯಾತ್ಮಿಕ ಗುರುಗಳು, ರಾಜಕೀಯ ನಾಯಕರ ಹೆಸರುಗಳು ಹೊಸಹೊಸ ಬಡಾವಣೆಗಳಿಗೆ ನಾಮಕರಣಗೊಳ್ಳುತ್ತಿರುವುದನ್ನು ಗಮನಿಸಬಹುದು.

(ಕ)	ಲಿಂಗನಹಳ್ಳಿ	ಗಂಗನಹಳ್ಳಿ
(ಚ)	ಸಿದ್ದನಹಳ್ಳಿ	ಅಂಕನಹಳ್ಳಿ
(ಮಾ)	ಸೂರಪ್ಪನಹಳ್ಳಿ	ಚಿಕ್ಕೇನಹಳ್ಳಿ
(ರಾ)	ಕೇತಿಗನಹಳ್ಳಿ	ಕೆಂಪಯ್ಯನಪಾಳ್ಯ

ಈ. ದೈವವಾಚಿ

ಪ್ರಾಚೀನ ಕಾಲದಿಂದ ಇಂದಿನವರೆಗಿನ ಮಾನವ ಸಂಸ್ಕೃತಿಯ ಇಹಾಸದಲ್ಲಿ ಧರ್ಮ, ದೈವ, ದೇವತೆಗಳ ಪರಿಕಲ್ಪನೆ ರೋಚಕವಾದದ್ದು. ತನ್ನ ಬದುಕಿನ ಸುಖ ದುಃಖಗಳಿಗೆ ಕಾರಣವಾಗುವ ಸೃಷ್ಟಿಯ ವಸ್ತುಗಳಾದ ಮರ-ಗಿಡ, ನದಿ ಬೆಟ್ಟ, ಪ್ರಾಣಿ, ಪಕ್ಷಿ ಮೊದಲಾದವುಗಳ ಬಗ್ಗೆ ಆತನಲ್ಲಿ ಭಯ, ಭಕ್ತಿ, ಶ್ರದ್ಧೆ ಬೆಳೆದು ನಿಂತವು. ಆಗ ಸೃಷ್ಟಿಯಲ್ಲಿ ಗೋಚರಾಗೋಚರ ವಸ್ತುಗಳೆಲ್ಲವೂ ಅವನಿಗೆ ಉಪಾಸನಾಯೋಗ್ಯ

[illegible]

[illegible]

[illegible]

[illegible]

[illegible]

ದೇವತೆಗಳೆನಿಸಿದವು. ಹೀಗಾಗಿ ದೇವ ದೇವತೆಗಳ ಸಂಖ್ಯೆ ಬೆಳೆಯುತ್ತ ಹಿಂದೂ ಸಂಸ್ಕೃತಿಯಲ್ಲಿಯೇ ಸುಮಾರು ಮೂವತ್ತುಮೂರು ಕೋಟಿಗೂ ಹೆಚ್ಚು ದೇವ-ದೇವತೆಗಳು ಸೃಷ್ಟಿಯಾಗಿ ಉಪಾಸನೆಗೆ ಒಳಗಾಗುತ್ತಿವೆ.

ಭಾರತದಲ್ಲಿ ಹಲವು ಧರ್ಮಗಳು ಹುಟ್ಟಿಬೆಳೆದಿವೆ. ಅದರಂತೆಯೇ ಅನ್ಯದೇಶದ ಧರ್ಮಗಳು ಹರಡಲು ಮತ್ತು ಬೆಳೆಯಲು ಅವಕಾಶವಾಗಿದೆ. ಶೈವ, ವೈಷ್ಣವ, ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಮೊದಲಾದ ಧರ್ಮೀಯರು ಹಾಗೂ ಪಂಥದವರು ಅವರವರ ನಂಬಿಕೆಗಳಿಗೆ ತಕ್ಕಂತೆ ದೇವತೆಗಳನ್ನು ಆರಾಧಿಸುತ್ತಾ ಬಂದಿರುವುದನ್ನು ಕಾಣಬಹುದು. ದೈವ, ಧರ್ಮಗಳು, ಭಾರತೀಯ ಸಂಸ್ಕೃತಿಯ ನಿಯಂತ್ರಕಗಳಾಗಿ ಮಹತ್ವದ ಪಾತ್ರ ವಹಿಸುವುದರಿಂದ ವ್ಯಕ್ತಿಗಳಿಗೆ ಮತ್ತು ಸ್ಥಳಗಳಿಗೆ ಹೆಸರು ನೀಡುವ ಸಂದರ್ಭದಲ್ಲಿ ದೈವವಾಚಿಗಳನ್ನು ಸ್ಥಳನಾಮಗಳ ನಿರ್ದಿಷ್ಟ ಸ್ಥಾನದಲ್ಲಿ ಬಳಸಿಕೊಂಡರು. ಊರಿಗೆ ಯಾವುದೇ ದುಷ್ಟ ಶಕ್ತಿ ಪ್ರವೇಶವಾಗದಂತೆ ಆ ದೇವತೆ ಕಾವಲಿರುತ್ತದೆ. ಊರಿಗೆ ಸಮೃದ್ಧಿ ರಕ್ಷಣೆ ಹಾಗೂ ಶುಭವನ್ನು ಕೋರುವ ದೇವತೆಗಳಿಗಾಗಿ ಹಾಗೂ ಜನರ ಮನಸ್ಸಿನಲ್ಲಿ ಉಳಿದುಕೊಳ್ಳುವಂತೆ ಸ್ಥಳನಾಮಗಳಲ್ಲೂ ದೈವವಾಚಕಗಳನ್ನು ಬಳಸಿಕೊಂಡರು. ಸುಖ ದುಃಖ ಎಲ್ಲಕ್ಕೂ ಆ ದೇವರೇ ಕಾರಣ. ರೋಗ ತಂದು ಕೊಲ್ಲುವವನೂ ಅವನೇ, ಕಾಪಾಡುವವನೂ ಅವನೇ ಎಂಬ ನಂಬಿಕೆ ನಮ್ಮ ಜನರಲ್ಲಿದೆ. ಆದ್ದರಿಂದ ತಾವು ನೆಲೆನಿಂತ ಸ್ಥಳಗಳಿಗೆ ದೇವತೆಗಳ ಹೆಸರನ್ನು ಅಂಕಿತಗೊಳಿಸುವ ಆ ಹೆಸರುಗಳು ನಮ್ಮ ಗ್ರಾಮಗಳಿಗೆ ಶ್ರೀರಕ್ಷೆಯನ್ನಾಗಲೀ, ದೈವಗಳ ಸ್ಮರಣೆಯಾಗಲಿ ಎಂಬ ಪ್ರಬಲವಾದ ನಂಬಿಕೆ ಬೇರೂರಿದೆ. ಇದರಿಂದ ಕುಲದೈವ, ಇಷ್ಟದೈವ, ಋಷಿ ಮುನಿಗಳ, ಸಿದ್ಧಪುರುಷರ ಹಾಗೂ ಊರಿನ ಅಧಿ ದೇವತೆಗಳ ಹೆಸರನ್ನು ಸ್ಥಳನಾಮಗಳಲ್ಲಿ ಗುರುತಿಸಬಹುದು. “ದೇವರು ಧರ್ಮ ಮುಂತಾದ ಅಮೂರ್ತ ಆಧ್ಯಾತ್ಮಿಕ ಸಂಗತಿಗಳನ್ನು ಸ್ಥಳನಾಮದೊಂದಿಗೆ ತಳುಕು ಹಾಕಿದಾಗಲೂ, ಜನಪದರು ಯಾವುದೇ ಧರ್ಮ ಭೀರುತ್ವ ಅಥವಾ ಮತಾಂಧತೆಯ ಲಕ್ಷಣಗಳನ್ನು ಪ್ರಕಟಿಸಿರುವುದು ಕೂಡ ಇಂದಿನ ನಮ್ಮ ಸಮಾಜಕ್ಕೆ ಒಳ್ಳೆಯ ಮೇಲ್ಪಂಕ್ತಿ ಹಾಕಿಕೊಡುವಷ್ಟು ಉದಾತ್ತ ನಡವಳಿಕೆಯಾಗಿದೆ”.[೭]

ದೈವ, ಧರ್ಮಗಳು ಪರಸ್ಪರ ಪ್ರಭಾವ ಬೀರಿರುವುದನ್ನು ಗ್ರಾಮನಾಮಗಳಲ್ಲಿ ಕಾಣಬಹುದು. ಅಲ್ಲದೆ ಸಮಾಜದಲ್ಲಿ ಧಾರ್ಮಿಕ ಸಾಮರಸ್ಯದ ಅಂಶಗಳು ಗ್ರಾಮನಾಮಗಳು ಪ್ರಕಟಪಡಿಸುತ್ತಿರುವುದು ಒಪ್ಪಿಕೊಳ್ಳುವಂತಹದ್ದಾಗಿದೆ. “ದೇವಸ್ಥಾನ, ದೇವರು, ಧಾರ್ಮಿಕ ವ್ಯಕ್ತಿಗಳ ಸುತ್ತ ಹೆಸರೇನಾದರೂ ಹುಟ್ಟಿಕೊಂಡಿದ್ದರೆ ಅರ್ವಾಚೀನವಾದುವು ಅಷ್ಟೇ ಅಲ್ಲ, ನಿರ್ದಿಷ್ಟ ಕ್ಷೇತ್ರವೊಂದಕ್ಕೆ ಕಾಲಾನಂತರದಲ್ಲಿ ಗ್ರಾಮೀಣ ಸಂಸ್ಕೃತಿಯ ವಿಕಾಸದ ನಿರ್ದಿಷ್ಟ ಕಾಲ ಘಟ್ಟದಲ್ಲಿ ಅನ್ವಯವಾದುವು ಎಂದು ಸಾಮಾನ್ಯವಾಗಿ ಹೇಳಬಹುದು”[೮]

ಸ್ಥಳನಾಮಗಳಲ್ಲಿ ಬಳಕೆಯಾಗಿರುವ ದೈವವಾಚಿಗಳ ಅಧ್ಯಯನದಿಂದ ಒಂದು ಭೌಗೋಳಿಕ ಪರಿಸರದಲ್ಲಿ ಪ್ರಚಲಿತವಿರುವ ದೇವ-ದೇವತೆ, ಸಿದ್ಧ, ಪುರುಷರ ಪ್ರಭಾವವನ್ನು ಗುರುತಿಸಲು ಸಹಕಾರಿಯಾಗುತ್ತದೆ. ಇದರಿಂದ ವಿಶಿಷ್ಟವಾರು ವ್ಯಾಪ್ತಿಯಲ್ಲಿ ಬರುವ ಆಯಾಯ ದೈವಗಳ ವಿಶಿಷ್ಟವಾದ ಸಾಂಸ್ಕೃತಿಕ ವಿವರಗಳು, ಆಚರಣೆಗಳು, ನಂಬಿಕೆಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗುತ್ತವೆ.

ರಾಮನಗರ ಜಿಲ್ಲೆಯ ಪರಿಸರದ ಸ್ಥಳನಾಮಗಳಲ್ಲಿ ಕಂಡುಬರುವ ದೈವಗಳೆಲ್ಲವೂ ಕೂಡ ಸಾಮಾನ್ಯವಾಗಿ ಉಪಾಸನೆಗೆ ಒಳಗಾಗುತ್ತಿವೆ.

(ಕ)	ನಾರಾಯಣಪುರ	ಸೋಮನಾಥಪುರ	ಮೂಡಲಸ್ವಾಮಿ ಕುಪ್ಪೆ
	ಶಿವನಹಳ್ಳಿ	ರಾಮಪುರ	ಶಿವನಹಳ್ಳಿ
(ಮಾ)	ಕೃಷ್ಣಪುರ	ಗಂಗೇಶ್ವರ	ರಘುನಾಥಪುರ
	ವಿಠಲಪುರ	ವಿರೂಪಾಕ್ಷಪುರ	ಮಲ್ಲಿಕಾರ್ಜುನಪುರ
	ಶಂಭುದೇವನಹಳ್ಳಿ		
(ಚ)	ಕೃಷ್ಣಾಪುರ	ರಾಮನಾಥಪುರ	ರಾಮಪುರ
	ಸೋಮನಾಥಪುರ		
(ರಾ)	ಹನುಮಾಪುರ	ಲಕ್ಷ್ಮೀಪುರ	ರಾಮನಗರ
	ಲಕ್ಷ್ಮಿಸಾಗರ		

ಹೀಗೆ ದೇವರು, ಋಷಿ, ಸಿದ್ಧಪುರುಷರು, ಪುರಾಣ ಪುರುಷರೆಲ್ಲರು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದಾರೆ. ಇವರುಗಳೆಲ್ಲ ಸ್ಥಳನಾಮಗಳ ಹೆಸರುಗಳಲ್ಲಿ ಕಾಣಿಸಿಕೊಂಡಿರುವುದು ತಿಳಿದುಬರುತ್ತದೆ. ದೈವವಾಚಿ ಸ್ಥಳನಾಮಗಳ ಮೂಲಕ ಪ್ರಾದೇಶಿಕವಾಗಿರುವ ದೈವಗಳನ್ನು ವಿಶೇಷವಾಗಿ ಅಧ್ಯಯನ ಮಾಡಲು ಸಹಕಾರಿಯಾಗಿರುವುದು. ಅಲ್ಲದೇ ಜಿಲ್ಲೆಯ ದೈವವಾಚಿ ಸ್ಥಳನಾಮಗಳನ್ನು ಗಮನಿಸಿದಾಗ ಶಿಷ್ಟ ದೇವತೆಗಳೇ ಬಹುಪಾಲು ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿವೆ. ಜನಪದ ದೈವಗಳಾದ ಮಾರಮ್ಮ, ದುರ್ಗಮ್ಮ ಮೊದಲಾದ ಸ್ತ್ರೀ ಪ್ರಧಾನ ದೈವಗಳಾಗಲೀ ಅಥವಾ ಶಿಷ್ಟ ಸ್ತ್ರೀ ದೇವತೆಗಳು ಅಲ್ಪ ಪ್ರಮಾಣದಲ್ಲಿ ಕಾಣಿಸಿಕೊಂಡಿವೆ. ಇದಕ್ಕೆ ಸಾಮಾಜಿಕ ವ್ಯವಸ್ಥೆಯಲ್ಲಿನ ಪಿತೃಪ್ರಧಾನ ವ್ಯವಸ್ಥೆಯೇ ಮೂಲ ಕಾರಣವೆಂಬುದನ್ನು ಮರೆಯುವಂತಿಲ್ಲ.

ಕೆಲವೊಂದು ಸ್ಥಳನಾಮಗಳಲ್ಲಿರುವ ನಿರ್ದಿಷ್ಟ ಭಾಗವು ವ್ಯಕ್ತಿವಾಚಿಯೋ ಅಥವಾ ದೈವವಾಚಿಯೋ ಎಂಬ ತೊಡಕು ಉಂಟಾಗುತ್ತದೆ. ಕಾರಣ ದೈವವಾಚಿಗಳನ್ನು ವ್ಯಕ್ತಿಗಳಿಗೂ ಹೆಸರಿಸಿರುವುದು ಕಂಡುಬರುತ್ತದೆ.

೩.೩.೨. ವಾರ್ಗಿಕ್ಕನುಗುಣವಾಗಿ

೧. ನಿಸರ್ಗವಾಚಿ

ಸ್ಥಳನಾಮ ನಿರ್ದೇಶನವು ಆ ಸ್ಥಳದ ಸುತ್ತಲಿನ ಪರಿಸರದ ವಿಶೇಷಗಳನ್ನು ಗಮನಿಸಿ ಅಂದರೆ ಪ್ರಕೃತಿಯ ಸಂಪತ್ತನ್ನು ಆಧಾರವಾಗಿಟ್ಟುಕೊಂಡು, ಭೌಗೋಳಿಕ ವಿಶಿಷ್ಟತೆಯನುಗುಣವಾಗಿ ಸ್ಥಳಗಳಿಗೆ ಹೆಸರು ಕೊಟ್ಟಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ “ಇಲ್ಲಿಯ ನಿರ್ದಿಷ್ಟ ಯಾವುದೇ ಇದ್ದರೂ ಮೇಲೆ ಸೂಚಿಸಿದ ವಾರ್ಗಿಕವುಳ್ಳವು ನಿಸರ್ಗದ ಮಡಿಲಲ್ಲಿರುವ ಗ್ರಾಮಗಳಾಗಿರುತ್ತವೆ. (ಅಥವಾ ಪ್ರಾಕೃತಿಕ ಮನೋಧರ್ಮದವರಿಟ್ಟ ಹೆಸರುಗಳು, ಇಲ್ಲವೆ ಇವುಗಳನ್ನು ಬಳಸಿ ಒಂದು ಪದ್ಧತಿ ಬೆಳೆದ ಬಳಿಕ ಅನುಕರಣದಿಂದ ಇಟ್ಟ ಹೆಸರುಗಳಾಗಿರುತ್ತವೆ) ಸಾಮಾನ್ಯವಾಗಿ ಈ ಹೆಸರುಗಳು ಅಲ್ಲಿಯ ನಿಸರ್ಗವನ್ನ ಪ್ರತಿನಿಧಿಸುತ್ತವೆ”.[೯] ಮನುಷ್ಯನ ಕಣ್ಣಿಗೆ ಕಾಣದ, ಪ್ರಜ್ಞೆಗೆ ಬಾರದ ವಾಸ್ತವತೆಗೆ ನಿಲುಕದ ಯಾವುದೋ

ಒಂದು ಹೆಸರನ್ನು ಇಡಲು ಸಾಧ್ಯವಿಲ್ಲ. ಮಾನವನ ಒಡನಾಟದಲ್ಲಿರುವ ಅಥವಾ ಮಾನವನ ಜೊತೆಯಲ್ಲಿ ನಿಕಟವಾದ ಸಂಬಂಧವಿರುವ ಪ್ರಾಕೃತಿಕ ವಸ್ತುಗಳನ್ನು ಧನ್ಯತಾ ಅಥವಾ ಕೃತಜ್ಞತಾ ಭಾವದಿಂದ ಇಟ್ಟಿರುವ ಸಾಧ್ಯತೆ ಇದೆ. ಇಲ್ಲಿರುವ ವಾರ್ಗಿಕವನ್ನು ಅನುಸರಿಸಿ ಆ ಗ್ರಾಮದ ಭೌಗೋಳಿಕ ಪರಿಸರವನ್ನು ಹೇಳಲು ಸಾಧ್ಯವಿದೆ. ನಿಸರ್ಗ ವಸ್ತುಗಳಾದ ಕಲ್ಲು, ಮಣ್ಣು, ಬೆಟ್ಟ, ಗುಡ್ಡ, ಕೋಡು ಮೊದಲಾದ ಅಂಶಗಳನ್ನು ಒಳಗೊಂಡ ವಾರ್ಗಿಕಗಳನ್ನನುಸರಿಸಿ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು ವಾರ್ಗಿಕಕ್ಕನುಗುಣವಾಗಿ ವರ್ಗೀಕರಿಸಲಾಗಿದೆ.

ಕಣೆ

ಗನಿ, ಉತ್ಪತ್ತಿ ಸ್ಥಾನ, ಕಲ್ಲು ಚೂರು[10] ಎಂಬರ್ಥಗಳಿವೆ. ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿರುವ ನೆಲೆ ಎಂಬರ್ಥವನ್ನು ಸ್ಫುರಿಸುತ್ತದೆ.

(ಕ) ಮುರಕಣೆ

ಒಂದು ಜಾತಿಯ ಕಲ್ಲನ್ನು ಸೂಚಿಸುವ ನೆಲೆಯಾಗಿದೆ. ನಿರ್ದಿಷ್ಟಭಾಗವು 'ಮುರ' ಎಂಬುದು ಪ್ರಾಚೀನ ಜನಾಂಗವಾಚಿಯಾಗಿರಬಹುದು.

ಕಲ್ಲು

ಅರೆ, ಕಲ್ಲು, ಬಂಡೆ, ಗುಂಡು ಇದು ಶಿಲಾವಾಚಿ ಪದಗಳು. ಸಾಮಾನ್ಯವಾಗಿ 'ಕ' ಕಾರದಿಂದ ಆರಂಭವಾಗುವ ಊರುಗಳೆಲ್ಲವೂ ದ್ರಾವಿಡ ಮೂಲದವು. ಕೆಲವು ಊರುಗಳು 'ಕ' ಕಾರಕ್ಕೆ ಬದಲು 'ಗ' ಕಾರ ಬಳಕೆಯಲ್ಲಿವೆ. ಈ ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳಗಳು ಬಹುಪ್ರಾಚೀನವಾದವು. ರಾಮನಗರ ಜಿಲ್ಲೆ ಕಲ್ಲುಬಂಡೆಗಳಿಂದ ಕೂಡಿರುವ ಶಿಲಾಮಯ ಪ್ರದೇಶವಾಗಿದೆ. ಶಿಲಾಯುಗದ ಮಾನವನ ನೆಲೆಗಳು ಹೆಚ್ಚು ಇರುವುದನ್ನು ಸಹ ಕಾಣಬಹುದಾಗಿದೆ. ಶಿಲಾಗುಹೆಗಳಲ್ಲಿ ವಾಸಿಸುತ್ತಿದ್ದ ಶಿಲಾಯುಗದ ಆದಿಮಾನವನ ನಿವಾಸ ಸ್ಥಳ ಈ ಕಲ್ಲುಗುಹೆಗಳೇ ಆಗಿದ್ದವು. ಆದ್ದರಿಂದ ತಮ್ಮ ನೆಲೆಗೆ ಪೂರ್ವದ ನೆಲೆಗಳ ಸಹಚರ್ಯದಿಂದ ತಮ್ಮ ನೆಲೆಗೂ 'ಕಲ್ಲು'ನಾಮವನ್ನು ಬಳಸುತ್ತಿರಬಹುದು.

(ಕ)	ನಿಡಗಲ್ಲು	ಹೊರಳಗಲ್ಲು	
(ರಾ)	ಕೂಟಕಲ್ಲು	ಕೂನಗಲ್ಲು	ಗಾಣಕಲ್ಲು
	ತೆಂಗಿನಕಲ್ಲು	ಸಿಡ್ಡಲಕಲ್ಲು	
(ಚ)	ಗಾಣಕಲ್ಲು	ಚಿಕ್ಕಮಸಕಲ್ಲು	ದೊಡ್ಡಮಸಕಲ್ಲು
	ಶಂಕನಕಲ್ಲು		
(ಮಾ)	ಹುಲಿಕಲ್ಲು	ಪನಕನಕಲ್ಲು	ಹೂಜಿಗಲ್

ಕಲ್ಲಿನ ಆಕಾರ, ಗಾತ್ರ, ಸಸ್ಯ, ವ್ಯಕ್ತಿ, ಪ್ರಾಣಿ ಮೊದಲಾದವು. ಈ ಶಿಲಾವಾಚಿ ವಾರ್ಗಿಕಗಳಿಗೆ ತಳಕು ಹಾಕಿಕೊಂಡಿವೆ. ಈ ಸ್ಥಳನಾಮಗಳು ಬಂಡೆ, ಅರೆಗಳಿಂದ ಕೂಡಿರುವ ಪ್ರದೇಶದಲ್ಲಿಯೇ ಇರುವುವು.

ಹೀಗಾಗಲೇ ಗಮನಿಸಿದಂತೆ ನಿರ್ದಿಷ್ಟದ ಭಾಗದಲ್ಲಿಯೂ ಈ ಶಿಲಾವಾಚಿ ಪದಗಳಿವೆ. ಈ ಶಿಲಾವಾಚಿಗಳು ನಿರ್ದಿಷ್ಟ ಮತ್ತು ವಾರ್ಗಿಕಗಳಲ್ಲಿ ಸಮಪ್ರಮಾಣದಲ್ಲಿ ಬಂದಿರುವುದು ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿನ ವಿಶೇಷವೇ ಸರಿ. ಆದ್ದರಿಂದ ಈ ಪ್ರದೇಶ ಬೆಟ್ಟ, ಗುಡ್ಡ, ಕಲ್ಲು ಬಂಡೆಯಿಂದ ಕೂಡಿರುವ ಭೌಗೋಳಿಕ ಪರಿಸರವನ್ನು ತೋರಿಸುತ್ತದೆ.

ಕುಪ್ಪೆ

ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಗುಂಪು ಅಥವಾ ರಾಶಿಯನ್ನು ಸೂಚಿಸುವ ವಾರ್ಗಿಕವಾಗಿದೆ. ಕೊಪ್ಪ>ಕುಪ್ಪೆ ಆಗಿರುವ ಸಾಧ್ಯತೆ ಇದೆ. ಕುಪ್ಪೆ>ಕುಪ್ಪ>ಕುಪ್ಪಿ ಹಾಗೂ ಕುಪ್ಪ>ಗುಪ್ಪಿ ಆಗಿ ಬಳಕೆಯಾಗುವ ಸಂಭವವೂ ಇದೆ. ಕ>ಗ ಬದಲಾವಣೆಯಿಂದ ಗುಪ್ಪೆ, ಗುಪ್ಪ ಎಂದು ಬಳಕೆಯಾಗುತ್ತದೆ.

(ಕ)	ಅತ್ತಿಗುಪ್ಪೆ	ಅರನಕುಪ್ಪೆ	ಕಲ್ಲನ ಕುಪ್ಪೆ
	ಚೀರಣಕುಪ್ಪೆ	ತಟ್ಟಿಗುಪ್ಪೆ	ಬನ್ನಿಕುಪ್ಪೆ
	ಬಿಳ್ಳಿಗನಕುಪ್ಪೆ	ತೊರೆಬೇಕುಪ್ಪೆ	ಬೀರನಕುಪ್ಪೆ
	ಮರಳೇಬೇಕುಪ್ಪೆ	ಮೂಡಲಸ್ವಾಮಿ ಕುಪ್ಪೆ	
(ಚ)	ಅಬ್ಬನಕುಪ್ಪೆ	ಕೆಂಚನಕುಪ್ಪೆ	ತಾಳಕುಪ್ಪೆ
	ಬನ್ನಿಕುಪ್ಪೆ	ಅತ್ತಿಗುಪ್ಪೆ	ವಂದರಗುಪ್ಪೆ
	ವಡ್ಡರಗುಪ್ಪೆ		
(ಮಾ)	ಅಳಲಕುಪ್ಪೆ	ಗೆಜ್ಜೆಗಾರನಕುಪ್ಪೆ	ಚುಂಚನಕುಪ್ಪೆ
	ತಗಚಗುಪ್ಪೆ	ತಗ್ಗಿಕುಪ್ಪೆ	ದೊನಕುಪ್ಪೆ
	ಬಂಟರಕುಪ್ಪೆ	ಬೈಚಕುಪ್ಪೆ	ಮಾರಿಕುಪ್ಪೆ
	ಯಲಚಕುಪ್ಪೆ	ಸೀಗೆಕುಪ್ಪೆ	ಹಂಚಿಕುಪ್ಪೆ

ಅತ್ತಿ+ಕುಪ್ಪೆ=ಅತ್ತಿಕುಪ್ಪೆ>ಅತ್ತಿಗುಪ್ಪೆ: ಕ ಕಾರಕ್ಕೆ ಬದಲಾಗಿ ಗ ಕಾರ ಆದೇಶವಾಗಿ ಬಂದಿದೆ. ಇದು ಅತ್ತಿ ಮರವನ್ನು ಹೊಂದಿರುವ ಊರು, ಸಸ್ಯವಾಚಿಯ ನಿರ್ದಿಷ್ಟವನ್ನು ಹೊಂದಿದೆ. ಕೆಂಚನ ಕುಪ್ಪೆ, ಅಬ್ಬನಗುಪ್ಪೆ, ಬಿಳ್ಳಿಗನಕುಪ್ಪೆ, ಚೀರಣಕುಪ್ಪೆ ಇವುಗಳು ವ್ಯಕ್ತಿವಾಚಿಯಾಗಿ ನಿರ್ದಿಷ್ಟಭಾಗದಲ್ಲಿ ಬಂದಿವೆ. ಚೀರನಕುಪ್ಪೆ>ಚೀರಣ ಕುಪ್ಪೆಯಾಗಿರುವ ಸಾಧ್ಯತೆ ಇದೆ. ಗೆಜ್ಜೆಗಾರನ ಕುಪ್ಪೆ. ಇದನ್ನು ಶಾಸನವೊಂದರಲ್ಲಿ ಗಜಗಾರಕುಪ್ಪೆ ಎಂದು ಉಲ್ಲೇಖಗೊಂಡಿದೆ. ಇದು ವೃತ್ತಿವಾಚಿಯಾಗಿ ಬಂದಿದೆ. ವಂದರ+ಕುಪ್ಪೆ-ವಂದರಗುಪ್ಪೆ, ನಿರ್ದಿಷ್ಟದ ಕೊನೆಯಲ್ಲಿ 'ರ' ಕಾರವಿರುವುದರಿಂದ ಜನಾಂಗವಾಚಿ ನಾಮವಾಗಿರಬಹುದು. ಹೀಗೆ ಕುಪ್ಪೆ, ಗುಪ್ಪೆ, ವಾರ್ಗಿಕವನ್ನು ಒಳಗೊಂಡವುಗಳಿಗೆ ನಿರ್ದಿಷ್ಟವಾಗಿ ಸಸ್ಯ, ವ್ಯಕ್ತಿ, ನಿರ್ಮಾಣವಾಚಿ, ಶಿಲಾವಾಚಿ, ಪ್ರಾಣಿವಾಚಿ, ಪರಿಮಾಣವಾಚಿ, ಮಣ್ಣಿನ ಗುಣವಾಚಿ, ವೃತ್ತಿವಾಚಿ, ಜನಾಂಗವಾಚಿ ಮೊದಲಾದವು ಬಂದಿರುವುದನ್ನು ಕಾಣಬಹುದು.

ಕುಂದ

ಭೌಗೋಳಿಕ ಲಕ್ಷಣಗಳನ್ನು ಸೂಚಿಸುವ ಪದ. ಕಲ್ಲಿನಿಂದ ಮಾಡಿದ ಕಂಬ, ಚಿಕ್ಕಬೆಟ್ಟ[೧೦]. ಇದು ಕುಂದ-ಕುಂದಿ; ಎಂದು ಬಳಕೆಯಾಗುತ್ತದೆ. ಕುಂದಿ., ತಗ್ಗು ಭೂಮಿ, ಬಾಗಿದ ನೆಲ[೧೧]. ಉನ್ನತ ಭೂ ವಾಚಕ. ಎತ್ತರವಾದ ಭೂ ಭಾಗವನ್ನು ಇದು ಸೂಚಿಸುತ್ತದೆ. ದ್ರಾವಿಡ ಪದ. ಇತರೆ ದ್ರಾವಿಡ ಭಾಷೆಗಳಾದ ತಮಿಳು-ಕುನ್ರಮ್, ಕನ್ನಡ ಮತ್ತು ತೆಲುಗು-ಕೊಂಡೆ, ಮಲಯಾಳಂ, ಕುನ್ರಂ, ತುಳು-ಗುಡ್ಡೆ ಎಂಬ ರೂಪಗಳಿವೆ. ಇದು ಎತ್ತರದ ಸ್ಥಳ. ಗುಡ್ಡ, ಬೆಟ್ಟ ಮೊದಲಾದ ಅರ್ಥಕೊಡುತ್ತದೆ. ಕುಂದ>ಗುಂದ, ಕುಂದ>ಕುಂದಿ ಆಗುವ ಸಂಭವವೂ ಗುಂದ>ಗುಂದಿ ಆಗುವ ಸಂಭವವೂ ಉಂಟು.

(ಕ) ಗಟ್ಟಿಗುಂದ ಮಾರ್ಗಯ್ಯನ ಗುಂದಿ
ಹೂಕುಂದ

(ರಾ) ಮಂಕುಂದ

ಇವುಗಳ ಪೂರ್ವ ನಿರ್ದಿಷ್ಟಪದ, ಭೂವೈಲಕ್ಷಣ, ವ್ಯಕ್ತಿವಾಚಿ ಮತ್ತು ಸಸ್ಯವನ್ನು ಸೂಚಿಸುವ ಪದಗಳಾಗಿವೆ. ಹೂಕುಂದ ಸ್ಥಳದ ಶಾಸನೋಲ್ಲೇಖಿತ ನಾಮ 'ಪೂಕಂದ' ಎಂದು ಹೆಸರಿಸಿದೆ.

ಕೊಪ್ಪ

ಹಲವಾರು ಜನರು ಗುಂಪಾಗಿ ವಾಸಿಸುವ ಕೇರಿ ಅಥವಾ ಸಣ್ಣ ಹಳ್ಳಿ. ಕೊಪ್ಪಲು>ಕೊಪ್ಪ ಆಗಿರುವ ಸಾಧ್ಯತೆ ಇದೆ. ಕೊಪ್ಪಲು ಎಂದರೆ ಊರು, ಕೇರಿ, ಗುಡಿಸಿಲಿನ ಸಮುದಾಯ.[೧೨] ಎಂಬರ್ಥ ಹೊಂದಿದೆ.

(ಕ)	ಇನಾಮ ಚಿಕ್ಕೊಪ್ಪ	ಕೋಟೆಕೊಪ್ಪ	ಅರೆಕೊಪ್ಪ
	ಕಡಸಿಕೊಪ್ಪ	ಚಿಕ್ಕೊಪ್ಪ	ದೊಡ್ಡಕೊಪ್ಪ
(ಚ)	ಕಾರೆಕೊಪ್ಪ	ಹಾರೋಕೊಪ್ಪ	

ಅರೆ+ಕೊಪ್ಪ-ನಿರ್ದಿಷ್ಟ ಭಾಗದಲ್ಲಿ ಅರೆ, ಬಂಡೆಕಲ್ಲು ಎಂಬ ಶಿಲಾವಾಚಿಯನ್ನು ಹೊಂದಿದೆ. ಕಲ್ಲು ಇರುವ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ ಬಳಕೆಯಲ್ಲಿದೆ.

ಕೋಟೆಕೊಪ್ಪ-ಸಾಮಾನ್ಯವಾಗಿ ದ್ವಿಘಟಕವನ್ನು ಹೊಂದಿರುವ ಸ್ಥಳನಾಮಗಳಲ್ಲಿ ನಿರ್ದಿಷ್ಟ+ವಾರ್ಗಿಕ-ಸ್ಥಳನಾಮ, ಗ್ರಾಮನಾಮವಾಗುವ ಸಂಭವ ಹೆಚ್ಚು, ಇಲ್ಲಿ ಪೂರ್ವ ಮತ್ತು ಉತ್ತರಭಾಗಗಳಲ್ಲಿ ವಾರ್ಗಿಕ ರೂಪಗಳೆ ಬಂದಿದೆ. (ಕೋಟೆ+ಕೊಪ್ಪ) ಕೋಟೆ-ನಿರ್ಮಾಣವಾಚಿ, ಕೋಟೆಯನ್ನು ಹೊಂದಿರುವ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ ಬಳಕೆಯಲ್ಲಿದೆ. ನಿರ್ದಿಷ್ಟ ಭಾಗದಲ್ಲಿ ಶಿಲಾವಾಚಿ, ನಿರ್ಮಾಣವಾಚಿ, ಪ್ರಾಣಿವಾಚಿ, ಸಸ್ಯವಾಚಿ, ಜನಾಂಗವಾಚಿ, ಪದಗಳು ಬಂದಿವೆ.

ಕೋಡು

ಸಂಸ್ಕೃತದ 'ಕೂಟ' ಪದಕ್ಕೆ ಸಮಾನಪದವಾಗಿದೆ. ಪರ್ವತ, ಕೋಡುಗಲ್ಲು, ಶಿಖರ, ಕೊಂಬು ಅರ್ಥಗಳನ್ನು ನೀಡುತ್ತದೆ. ಕಲ್ಲು, ಬೆಟ್ಟದ ಶಿಖರ[೧೩] ಕೋಡು>ಗೋಡು ಆಗುವುದು. ದ್ರಾವಿಡ ಭಾಷೆಗಳಲ್ಲಾ

ಒಂದೇ ತೆರನಾದ ರೂಪವಿದ್ದು, ಅದು ಶಿಖರ, ಬೆಟ್ಟದ ತುದಿ ಎಂಬರ್ಥವನ್ನು ಕೊಡುತ್ತದೆ.[೧೫] ತಮಿಳಿನ ಕೋಟಿ, ತುಳುವಿನಲ್ಲಿ ಕೋಡಿ, ಕನ್ನಡದಲ್ಲಿ ಕೋಡು ಆಗುತ್ತದೆ. ಎಲ್ಲ ದ್ರಾವಿಡ ಭಾಷೆಗಳ ಶಬ್ದಗಳಲ್ಲಿ ಶಿಖರ, ಬೆಟ್ಟದ ತುದಿ ಎಂಬರ್ಥವನ್ನು ಹೊಂದಿರುವುದಲ್ಲದೆ, ತೊರೆ, ಹೊಳೆ, ಹೊಳೆಯ ಶಾಖೆ ಎಂಬರ್ಥದಲ್ಲಿ ಬಳಕೆಯಾಗಿರುವುದನ್ನು ದ್ರಾವಿಡ ವ್ಯುತ್ಪತ್ತಿ ಕೋಶ ಗುರುತಿಸಿದೆ.

(ಕ) ಬೆಣ್ಣೆಗೋಡು

ಇದರ ಪೂರ್ವಪದ ಬೆಣ್ಣೆಯನ್ನು ಸೂಚಿಸುವ ಪದವಾಗಿದೆ.

ಗಟ್ಟ-ಘಟ್ಟ

'ಕಟ್ಟೆ' ಎಂಬ ವಾರ್ಗಿಕವು ಶುದ್ಧ ದೇಶೀಯವಾಗಿದ್ದು; ಎತ್ತರದ ನೆಲೆ ಎಂಬರ್ಥವನ್ನು ಕೊಡುತ್ತದೆ. ಕಿಟ್ಟೆಲ್ಲರ ಅರ್ಥಕೋಶದಲ್ಲಿ A structure of earthor stones to sit upon for resting, transactiing business, a stution, a dam, a dike ಎಂಬರ್ಥಗಳಿವೆ.[೧೬] ಕಟ್ಟೆ ಎಂಬ ರೂಪ ಗಟ್ಟೆ ಎಂಬ ರೂಪಾಂತರವಾಗಿ ಗಟ್ಟೆ>ಗಟ್ಟ ಎಂಬ ರೂಪಕ್ಕೆ ಬದಲಾಗಿದೆ. ಗಟ್ಟ ಸಂಸ್ಕೃತೀಕರಣಗೊಂಡಾಗ ಸಿಗುವ ರೂಪ ಘಟ್ಟವಾಗಿದೆ.

(ಕ) ಸುಂಡಘಟ್ಟ

(ಚ) ಲಾಲಘಟ್ಟ ಸುಣ್ಣಘಟ್ಟ

(ಮಾ) ಸಂಕಿಘಟ್ಟ

ಇವುಗಳ ನಿರ್ದಿಷ್ಟದಲ್ಲಿ ಸಸ್ಯ, ವಸ್ತು, ಪಕ್ಷಿ, ವ್ಯಕ್ತಿ ಸೂಚಿಸುವ ಪದಗಳೊಂದಿಗೆ 'ಘಟ್ಟ'ವಾರ್ಗಿಕ ಬಂದಿದೆ.

ಗಿರಿ

ಉನ್ನತ ಭೂ ಲಕ್ಷಣ ಸೂಚಿಸುವ ಪದ. ಬೆಟ್ಟ, ಗುಡ್ಡ, ಪರ್ವತ ಎಂಬರ್ಥಗಳಿವೆ.

(ರಾ) ಬನ್ನಿಗಿರಿ

ನಿರ್ದಿಷ್ಟದಲ್ಲಿ ಸಸ್ಯವಾಚಿ ಪದ ಬಂದಿದೆ.

ಗುಡ್ಡ

ನಿಮ್ನ ಭೂ ವಾಚಕ ಪದ, ದಿಣ್ಣೆ, ಗುಡ್ಡೆ ಎಂಬರ್ಥವನ್ನು ಸೂಚಿಸುತ್ತದೆ. ಕುಪ್ಪೆ, ಗುಡ್ಡಗಾಡು, ಕಾಡು, Hillock, a mountain, a hill[೧೭]. ಎಂಬರ್ಥಗಳಿವೆ.

(ರಾ) ಚಿಕ್ಕಮಣ್ಣುಗುಡ್ಡೆ, ದೊಡ್ಡಮಣ್ಣುಗುಡ್ಡೆ

ಇಲ್ಲಿ ನಿರ್ದಿಷ್ಟವಾಗಿ 'ಮಣ್ಣು' ಪ್ರಾಕೃತಿಕ ಲಕ್ಷಣ ಹೇಳುವ ಪದ. ಅದಕ್ಕೆ ವಿಶೇಷಣಗಳಾಗಿ ಪ್ರಮಾಣವಾಚಿಯಾದ 'ಚಿಕ್ಕ' ಮತ್ತು 'ದೊಡ್ಡ' ಬಂದು ಒಂದರಿಂದ ಮತ್ತೊಂದನ್ನು ಬೇರ್ಪಡಿಸಿದೆ.

ಗುಂಡು

ಶಿಲಾವಾಚಿಪದ. ವರ್ತುಲ, ಗೋಳಾಕಾರ, ದಪ್ಪವಾಗಿರುವ ಕಲ್ಲು, ದೊಡ್ಡಕಲ್ಲು, ಗುಂಪು, ಸಮೂಹ[10] ಎಂಬರ್ಥವನ್ನು ಕೊಡುತ್ತದೆ.

(ಚ) ದಾಬನಗುಂಡು

ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿವಾಚಿಯನ್ನು ಒಳಗೊಂಡಿದೆ.

ನತ್ತ

ನಿಸರ್ಗವಾಚಿ ಪದ. ದ್ರಾವಿಡ ಭಾಷೆಗಳಲ್ಲಿ 'ನತ್ತ' ಎಂಬುವುದಕ್ಕೆ (ಹುಳುಗಳು ಇರುವ) ಚಿಪ್ಪು ಎಂಬರ್ಥವಿದೆ. ಚಿಪ್ಪುಗಳು ಸಿಗುವ ನೆಲೆ ಎಂಬರ್ಥವನ್ನು ಹೊಂದಿರುವ ವಾರ್ಗಿಕವಾಗಿದೆ. ಚಿಪ್ಪುಗಳನ್ನು ಅಗೆದುತೆಗೆದು ಕೂಡಿ ಹಾಕಲು ಇರುವ ನೆಲೆಗಳಾಗಿರಬಹುದು.

'ನತ್ತ' ವಾರ್ಗಿಕವನ್ನು ಹೊಂದಿರುವ ಸ್ಥಳಗಳು ತಮಿಳುನಾಡಿನಲ್ಲಿವೆ (ಗೋಪಿನತ್ತಂ). ಅದೇ ರೀತಿ ತಮಿಳು ಕನ್ನಡ ದ್ವಿಭಾಷಿಕ ಪರಿಸರದ ಗಡಿ ಪ್ರದೇಶಗಳಲ್ಲಿ 'ನತ್ತ'ವಾರ್ಗಿಕವನ್ನೊಳಗೊಂಡ ಊರುಗಳು ಕಂಡು ಬರುತ್ತವೆ. (ಚಾಮರಾಜನಗರ ಜಿ.ಬೈರನತ್ತ) ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಈ 'ನತ್ತ' ವಾರ್ಗಿಕವನ್ನೊಳಗೊಂಡ ಊರುಗಳು ಇಲ್ಲ.

(ಕ) ಆಲನತ್ತ ಕೆಂಪಲನತ್ತ ಕತ್ತರಿನತ್ತ

ತಮಿಳುನಾಡಿನ ಗಡಿ ಪ್ರದೇಶವಾದ ಕನಕಪುರ ತಾಲೂಕಿನಲ್ಲಿ 'ನತ್ತ' ವಾರ್ಗಿಕವನ್ನು ಒಳಗೊಂಡ ಗ್ರಾಮನಾಮಗಳು ಸಿಗುತ್ತವೆ. ಇವುಗಳ ನಿರ್ದಿಷ್ಟ ಭಾಗದಲ್ಲಿ ಜಲವಾಚಿ, ವಸ್ತುವಾಚಿಗಳು ಬಂದಿವೆ. ಜಲವಾಚಿ ಸ್ಥಳನಾಮ 'ಆಲನತ್ತ'ವನ್ನು ಬೇರ್ಪಡಿಸಲು ಮತ್ತೊಂದು ಉಪ ಆಕೃತಿಮ 'ಕೆಂಪ' ಪದ ಬಂದಿದೆ.

ಬೆಟ್ಟ

ಉನ್ನತ ಭೂಪ್ರದೇಶ ಗುಡ್ಡ, ತಿಟ್ಟು, ದಿಣ್ಣೆ, ದಿಬ್ಬ ಇವುಗಳು ಕ್ಷೇತ್ರವಾಚಿ ಮತ್ತು ವಾಸ್ತವ್ಯವಾಚಿಗಳೆರಡರಲ್ಲೂ ಬಳಕೆಯಾಗಿದೆ.

(ರಾ) ರೇವಣ ಸಿದ್ದೇಶ್ವರ ಬೆಟ್ಟ

ಮಲೆ

ಪರ್ವತ, ಬೆಟ್ಟ, ಗುಡ್ಡ, ಔದ್ಧತ್ಯ, ದಿಟ್ಟತನ, ಇದಿರಿಸು, ವಿರೋಧಕೊಟ್ಟು, ಸೊಕ್ಕು, ಮದವೇರು, ಗರ್ವಿಸು[11] ಎಂಬರ್ಥಗಳಿವೆ. ನಿರ್ದಿಷ್ಟ ಭಾಗದಲ್ಲಿ ಭೂ ಸ್ಥಿತಿವಾಚಕ ಬಂದಿದೆ.

(ರಾ) ನೆಲಮಲೆ

(ಮಾ) ತಿರುಮಲೆ.

ಮಾಳ

ನಿಸರ್ಗವಾಚಿಯಾದ ಇದು ಬಯಲು ಪ್ರದೇಶ ಎಂಬರ್ಥವನ್ನು ಹೊಂದಿದೆ. ಗುಡಿಸಲು, ಉಪ್ಪಿನ ಆಗರ, ಬಂಡಿಯನಿಲ್ದಾಣ[೨೦] ವಿಶಾಲವಾದ, ಸಮತಟ್ಟಾದ ಬಯಲನ್ನು ಇದು ಸೂಚಿಸುತ್ತದೆ.

(ಕ) ಅವರೆಮಾಳ

(ರಾ) ಹಳ್ಳಿಮಾಳ

(ಚ) ಕುಪ್ಪೆಮಾಳ

ನಿರ್ದಿಷ್ಟ ಭಾಗದಲ್ಲಿ ಸಸ್ಯವಾಚಿ ಬಂದಿದೆ. ಇನ್ನೆರಡು ನಿರ್ದಿಷ್ಟಭಾಗದಲ್ಲಿ ನಿಸರ್ಗ ಮತ್ತು ವಸತಿವಾಚಿ ವಾರ್ಗಿಕಗಳೇ ಬಂದಿವೆ.

೨. ವಸತಿ ವಾಚಿ

ಆದಿ ಮಾನವ ತನ್ನ ಅಲೆಮಾರಿ ಜೀವನದಿಂದ ಮುಕ್ತಿ ಪಡೆದು, ತನಗೂ ತನ್ನ ಸಂಗಾತಿಗಳಿಗಾಗಿ ಭದ್ರತೆಯನ್ನೊದಗಿಸುವ ಜೀವನಕ್ಕೆ ಅಡಿಪಾಯ ಹಾಕಿದ್ದು; ಮಾನವನ ಸಾಂಸ್ಕೃತಿಕ ಇತಿಹಾಸ ವಿಕಾಸಗೊಳ್ಳಲು ಕಾರಣವಾಗಿದೆ. ಕೃಷಿ ಸಂಸ್ಕೃತಿಯನ್ನು ರೂಢಿಸಿಕೊಂಡ ಮೇಲೆ ತನಗೆ ಅನುಕೂಲಕರವಾದ ಪರಿಸರದಲ್ಲಿ ಒಂದೆಡೆ ಬದುಕಲು ಆರಂಭಿಸಿದಾಗ ಅಲ್ಲಿಯೇ ಬೀಡು ಬಿಡಬೇಕಾದ ಸಂದರ್ಭ ಒದಗಿಬಂದಿರಬೇಕು. "ಕಾಲಾನಂತರದಲ್ಲಿ ಅವರ ಬೀಡುಗಳೇ ಆರಂಭಕಾಲದ ಹಟ್ಟಿಗಳಾಗುತ್ತಿದ್ದವು. ಕೊಪ್ಪಲುಗಳಾಗುತ್ತಿದ್ದವು. ಹಟ್ಟಿಗಳೇ ಆರಂಭ ಕಾಲದ ವಸತಿಗಳೆಂಬುದು ಶಂ.ಬಾ.ಜೋಷಿಯವರ ಊಹೆ[೨೧] ಹೀಗೆ ಜನ ನೆಲೆಯೂರಿ ಬಹುದಿನಗಳಿಂದ ವಾಸಿಸುತ್ತಿರುವ ವಸತಿ ಸ್ವರೂಪದ ವ್ಯವಸ್ಥೆಗಳನ್ನು ವಸತಿಸೂಚಿಗಳೆಂದು ಕರೆಯಲಾಗುತ್ತದೆ. ಅವುಗಳೆಂದರೆ

ಊರು

ಇದು ಅಚ್ಚ ದ್ರಾವಿಡ ಪದ. ವಾಸ ಸ್ಥಳವನ್ನು ಸೂಚಿಸುತ್ತದೆ. ವಸತಿ ವಾಚಕವಾಗಿದೆ. ಮಾನವನ ವಾಸಸ್ಥಳವನ್ನು ಸೂಚಿಸುತ್ತದೆ. ನಾಡು, ಗ್ರಾಮ, ಸಣ್ಣಪಟ್ಟಣ ಎಂಬರ್ಥಗಳಿವೆ. 'ಊರು ಕೊನೆಯಲ್ಲಿ ಬರುವ ಕೆಲವು ಹೆಸರುಗಳಾದರೂ, ಮೂಲತಃ ಪುರದಿಂದ ಕೊನೆಗೊಳ್ಳುತ್ತವೆ ಎಂಬುದಕ್ಕೆ ಶಾಸನಾಧಾರಗಳಿವೆ.[೨೨] ಜನವಾಸ ಮಾಡುವ ಸ್ಥಳ An Inhabited place, a village, a town, a city[೨೩] ಇದು ಅಚ್ಚ ದ್ರಾವಿಡ ಮೂಲದ್ದು. ದಕ್ಷಿಣದ ಪಂಚ ದ್ರಾವಿಡ ಭಾಷೆಗಳಲ್ಲಿ ಮತ್ತು ಇತರ ದ್ರಾವಿಡ ಭಾಷೆಗಳಾದ ಕೊಂಡ, ತೋಡ, ಕೊಡವ, ಕೊಲಾಮಿ, ನಾಯ್ಕಿ ಭಾಷೆಗಳಲ್ಲೂ ಇದು ವ್ಯಾಪಕವಾಗಿ ಬಳಕೆಗೊಂಡಿರುವುದನ್ನು ದ್ರಾವಿಡ ಭಾಷೆಯ ವ್ಯುತ್ಪತ್ತಿ ಕೋಶ ದೃಢಪಡಿಸುತ್ತದೆ.[೨೪] 'ಊರ್' ಎಂಬ ವಾರ್ಗಿಕ ದ್ರಾವಿಡ ಮೂಲದ ಇರ್ ಅಥವಾ ಉರ್ ಧಾತುವಿನಿಂದ ಬಂದಿದ್ದು, ನೆಲಸುವಿಕೆ, ಇರುವಿಕೆ ಎಂಬರ್ಥವನ್ನು ಕೊಡುತ್ತದೆ.

"ಸಾಮಾನ್ಯವಾಗಿ ಕನ್ನಡ 'ರ' ಕಾರ ತುಳುವಿನಲ್ಲಿ 'ಜ' ಕಾರವಾಗುತ್ತದೆ. ಆದ್ದರಿಂದ 'ಊಜು' ಎಂಬಲ್ಲಿ ಸೂಚಿತವಾದ ದ್ರವಾರ್ಥ ಅದರ ಮೂಲವಾಗಿರುವ 'ಊರು' ಎಂಬ ಪದದಲ್ಲಿ ಇದ್ದಿರಲೇಬೇಕು.

ಆದ್ದರಿಂದ 'ಊರು' ಎಂಬುದು ಮೂಲತಃ ಜಲ ಸಂಬಂಧವುಳ್ಳ ಅಥವಾ ಜಲವಾಚಕವಾದ ಒಂದು ಪದವಾಗಿರಬೇಕು"[೨೫] ಎಂದು ಹಲವು ಭಿನ್ನ ಭಿನ್ನ ಸಾಧಿತರೂಪಗಳು ದೃಷ್ಟಾಂತಗಳನ್ನು ಡಾ.ಕೆಮ್ತೂರ ರಘುಪತಿಭಟ್ ಕೊಡುತ್ತಾರೆಯಾದರೂ ಇದು ವಾಸ್ತವ್ಯಸೂಚಿಯಾಗಿದೆ. ಮಾನವ ಒಂದು ಕಡೆ ನೆಲೆ 'ಊರಿದ' ಜಾಗವೇ ಊರಾಯಿತು ಎಂದು ಹೇಳಬಹುದು.

(ಕ)	ಆಲೂರು	ಕೂನೂರು	ಚೀಲೂರು
	ತಿಪ್ಪೂರು	ದೂಂತೂರು	ಬೇಲಿಕೊತ್ತನೂರು
	ಬೇಲೂರು	ಮಾವತ್ತೂರು	ಮುಗ್ಗೂರು
	ಸಾತನೂರು	ಹಣಕಡಬೂರು	ಹಲಸೂರು
	ಹೆಗ್ಗನೂರು		
(ರಾ)	ಅಕ್ಕೂರು	ಬಾನಂದೂರು	ಹೊಸೂರು
(ಚ)	ಅಕ್ಕೂರು	ಇಗ್ಗಲೂರು	ಅಬ್ಬೂರು
	ಕೂಡಲೂರು	ಕೋಳೂರು	ಗುಡ್ಡೆಹೊಸೂರು
	ಚಿಕ್ಕಲೂರು	ಚಿಕ್ಕಮಳೂರು	ತೊರೆ ಹೊಸೂರು
	ನುಣ್ಣೂರು	ನೆರಳೂರು	ಬೇವೂರು
	ಮಳೂರು	ಯಲಿಯೂರು	ಸರಗೂರು
	ಹನಿಯೂರು	ಹೊಂಗನೂರು	
(ಮಾ)	ಆಲೂರು	ಕಣ್ಣನೂರು	ಕಲ್ಲೂರು
	ಕೂಡಲೂರು	ಕೂಡೂರು	ಕೂಡ್ಲೂರು
	ಕೋಳೂರು	ಗೋರೂರು	ಗೋಳೂರು
	ಚಿಕ್ಕಸೋಲೂರು	ಚಿಕ್ಕೇಳ್ಳೂರು	ಚೀಲೂರು
	ಚೌಡಿ ಬೇಗೂರು	ಬಿಸ್ಕೂರು	ಮರೂರು
	ಮಲ್ಲೂರು	ವರ್ತೂರು	ಸೋಲೂರು
	ಹಳ್ಳೂರು		

'ಊರು' ಎಂಬ ವಾರ್ಗಿಕಕ್ಕೆ ಜಲವಾಚಿಯಾದ ಆಲ್ ಮತ್ತು ಸಸ್ಯವಾಚಿ, ಮಣ್ಣಿನ ಗುಣಲಕ್ಷಣ, ಶಿಲಾವಾಚಿ, ವ್ಯಕ್ತಿವಾಚಿ, ದೈವವಾಚಿ ಮೊದಲಾದವು ನಿರ್ದಿಷ್ಟ ಸ್ಥಳದಲ್ಲಿ ಸ್ಥಾನದಲ್ಲಿ ಬಂದಿವೆ.

ಆಲ್+ಊರು-ಆಲೂರು-ತಗ್ಗಾದ ಸ್ಥಳದಲ್ಲಿ ನೀರು ನಿಂತಿರುವ ಜಾಗ ಎಂಬರ್ಥದಲ್ಲಿ ಈ ಸ್ಥಳನಾಮ ಬಂದಿದೆ. ನಿರ್ದಿಷ್ಟದ ಸ್ಥಾನದಲ್ಲಿರುವ 'ಆಲ್' ಎಲ್ಲ ದ್ರಾವಿಡ ಭಾಷೆಯಲ್ಲೂ ದೊರೆಯುವ ಅನ್ಯತಂತ್ರ ರೂಪವಾಗಿದೆ. ಬೇಲ+ಊರು-ಬೇಲೂರು-ಸಸ್ಯವಾಚಿಯಾದ ನಿರ್ದಿಷ್ಟವನ್ನು ಹೊಂದಿದ, ಬೇಲದ ಮರಗಳ ಅಧಿಕ್ಯತೆಯನ್ನು ಇದು ಸೂಚಿಸುತ್ತದೆ.

ಸಾತನೂರು: ಶಾಸನವೊಂದರಲ್ಲಿ ಶಾಂತನೂರು ಎಂದು ಉಲ್ಲೇಖಗೊಂಡಿದೆ. ಶಾಂತ>ಸಾಂತ-ಇದು ವ್ಯಕ್ತಿವಾಚಿಯಾದದ್ದು. ಸಾಂತ+ನ+ಊರು>ಸಾಂತನೂರು> ಸಾತನೂರು. ಬಿಂದು ಲೋಪಗೊಂಡಿದೆ.

ದೂಂತೂರು: ಇದು ಶಾಸನದಲ್ಲಿ ದೋಣತೂರು ಎಂದಿದ್ದು ಅನುನಾಸಿಕವಾದ 'ಣ'ಕಾರಕ್ಕೆ ನಕಾರವಾಗಿ ಮಾರ್ಪಟ್ಟು ಉಚ್ಚರಣೆಗೆ ಜನಸಾಮಾನ್ಯರು ಸುಲಭ ಮಾಡಿಕೊಂಡಿದ್ದಾರೆ.

ದೊಡ್ಡಿ

ವಾಸ್ತವ್ಯವಾಚಿಪದ. ದನಕರುಗಳನ್ನು ಕೂಡಿ ಹಾಕುವ ಸ್ಥಳ. ಕೆಡ್ಡ, ಹಟ್ಟಿಕೊಟ್ಟಿಗೆ, ಯಜಮಾನರಿಲ್ಲದಂಥ ದನಕರುಗಳನ್ನು ಕಟ್ಟುವ ಮನೆ, ಮೂಲದ ಮನೆ[೨೬] a settlers first house, a fold, a stable, a cow, pen[೨೭]

(ಕ)	ಉರಗನ ದೊಡ್ಡಿ	ದೊಂಬರ ದೊಡ್ಡಿ	ಬೆಣಚಕಲ್ ದೊಡ್ಡಿ
	ವಾಡೇದೊಡ್ಡಿ	ಹೊಸದೊಡ್ಡಿ	
(ರಾ)	ಬಸವಯ್ಯನದೊಡ್ಡಿ	ಹುಲತೂರುಹೊಸದೊಡ್ಡಿ	ಹೊಸದೊಡ್ಡಿ
(ಚ)	ಅಮ್ಮಲ್ಲಿದೊಡ್ಡಿ	ಚಗರಿದೊಡ್ಡಿ	ತವಾತನಹಳ್ಳಿದೊಡ್ಡಿ
	ಹಾರೋಹಳ್ಳಿದೊಡ್ಡಿ		
(ಮಾ)	ಪುರದದೊಡ್ಡಿ		

ವಾಸ್ತವ್ಯವಾಚಿಯಾದ ದೊಡ್ಡಿ ವಾರ್ಗಿಕಕ್ಕೆ ಪ್ರಾಣಿವಾಚಿ. ಸಮುದಾಯವಾಚಿ, ಶಿಲಾವಾಚಿ, ಸಸ್ಯವಾಚಿ, ಸಾಪೇಕ್ಷವಾಚಿ, ವಸ್ತುವಾಚಿ ಮೊದಲಾದವು ಒಳಗೊಳ್ಳುವ ಮೂಲಕ ಇಲ್ಲಿನ ಸ್ಥಳನಾಮಗಳು ನಿರ್ದೇಶನಗೊಂಡಿವೆ.

ನಗರ

ವಾಸ್ತವ್ಯಸೂಚಿ ವಾರ್ಗಿಕ, ಸಂಸ್ಕೃತ ಪದ. ಎಲ್ಲ ವರ್ಗ, ಜಾತಿಯವರು ವಾಸಿಸುವ ವಾಣಿಜ್ಯ ಕೇಂದ್ರ. ಕಾಡು ಇಲ್ಲವೇ ಪರ್ವತ ಇರುವ ಪಟ್ಟಣ. ಶಹರ[೨೮] ಎಂಬರ್ಥವನ್ನು ಒಳಗೊಂಡಿದೆ. ವಾಸ್ತವ್ಯವನ್ನು ಸೂಚಿಸುವ ಇದು ಜನಸಾಂದ್ರತೆಯಿಂದ ಕೂಡಿರುವ ವಾಣಿಜ್ಯ ಕೇಂದ್ರವಾಗಿದೆ.

(ಕ) ಮುನಿನಗರ

(ರಾ) ರಾಮನಗರ

ಮುನಿ+ನಗರ-ಮುನಿನಗರ, ರಾಮ+ನಗರ-ರಾಮನಗರ ಇವೆರಡೂ ಸ್ಥಳನಾಮಗಳ ನಿರ್ದಿಷ್ಟವು ದೈವ ವಾಚಿಯಾಗಿದೆ. ಮಾನವ ಸಂಸ್ಕೃತೀಕರಣಗೊಂಡ ನಂತರ ದೈವಗಳ ಮೊರೆ ಹೋಗಿರುವುದು ತಿಳಿದು ಬರುತ್ತದೆ. ನಗರ, ಪಟ್ಟಣ ಇವು ಅರ್ವಾಚೀನವಾದ ವಾರ್ಗಿಕಗಳು ಎನಿಸಿವೆ.

ಪಟ್ಟಣ

ವಾಸ್ತವ್ಯವಾಚಿ, ಅನ್ಯದೇಶೀಯ ವಾರ್ಗಿಕ ಇದಾಗಿದ್ದು, ಪ್ರಾಕೃತದ ಪಟ್ಟಣದ ಸಮಾನ ರೂಪವೇ ಕನ್ನಡದಲ್ಲಿ ಬಳಕೆಯಾಗುತ್ತಿದೆ. "ಸಂಸ್ಕೃತದ ಪಟ್ಟ ಕನ್ನಡಕ್ಕೆ ಬರುವಾಗ ಪಟ್ಟಣವಾಗಿದೆ[೨೯]. ಹಳ್ಳಿಯ ಜನ

ಸಾಂದ್ರತೆಗಿಂತ ಹೆಚ್ಚು ಮತ್ತು ನಗರ ಜನಸಾಂದ್ರತೆಗಿಂತ ಕಡಿಮೆ ಇರುವ ಲಕ್ಷಣವನ್ನು ಹೊಂದಿರುವ ವಸತಿ ಸ್ಥಳವಾಗಿದೆ. ವ್ಯಾಪಾರ ವಹಿವಾಟು ಕೇಂದ್ರವಾಗಿದೆ.

(ಚ) ಚನ್ನಪಟ್ಟಣ ದ್ಯಾವ ಪಟ್ನ ಬಳ್ಳಾಪಟ್ಟಣ
ಮಳೂರು ಪಟ್ಟಣ

(ಮಾ) ನೆಲಪಟ್ಟಣ ಬಸವಪಟ್ಟಣ

ಚನ್ನಪಟ್ಟಣ-ಈ ಸ್ಥಳನಾಮ ಮೇಲ್ನೋಟಕ್ಕೆ ವ್ಯಕ್ತಿವಾಚಿ ಎನಿಸಿದರು, ಅದರ ಮೂಲ ಚಂದ ಪಟ್ಟಣವೆಂದು, ಇಲ್ಲಿರುವ ವಾರ್ಗಿಕ ವಿಶೇಷಣವಾಗಿ ಬಂದಿದೆ. ಚಂದ ಪಟ್ಟಣ>ಚನ್ನಪಟ್ಟಣವಾಗಿದೆ. 'ಚನ್ನಪಟ್ಟಣ' ಚಂದ ಪಟ್ಟಣವಾಗಿತ್ತು. ನಂತರ ದಿನಗಳಲ್ಲಿ ಚನ್ನಪಟ್ಟಣವಾಯಿತು. ಕಾರಣ 'ಚಂದ' ಪದವನ್ನು 'ಚನ್ದ' ಎಂದು ಬರೆಯಬಹುದು. ಹಾಗಾಗಿ 'ದ' ಕಾರದ ಜಾಗದಲ್ಲಿ ಮತ್ತೊಂದು 'ನ'ಕಾರ ಬಂದು 'ಚನ್ನ' ಆಗಿದೆ. ದ್ಯಾವಪಟ್ಲ-ಇದು ಜನಸಾಮಾನ್ಯರ ಉಚ್ಛಾರಣಾ ಸೌಲಭ್ಯಕ್ಕಾಗಿ ಆದ ರೂಪವೆಂದು ಗಮನಿಸಬಹುದು. ಇದರ ನಿಜರೂಪ. ದೇವಪಟ್ಟಣ. ದೇವ+ಪಟ್ಟಣ-ದೇವಪಟ್ಟಣ>ದ್ಯಾವಪಟ್ಟಣ ಎಂದಾಗಿದೆ.

ಮಳೂರು ಪಟ್ಟಣವು ಶಾಸನೋಕ್ತವಾಗಿ ಮಣಲೂರು ಎಂಬ ಭೂವೈಶಿಷ್ಟ್ಯವನ್ನು ಹೇಳುವ ನಿರ್ದಿಷ್ಟವಾದ ಭೂವಾಚಿಯಾಗಿದೆ.

ಇಲ್ಲಿ ಸ್ಥಳನಾಮದ ನಿರ್ದಿಷ್ಟಗಳಾಗಿ ಭೂವೈಶಿಷ್ಟ್ಯ, ವಸ್ತುವಿನ ಗುಣ ವಿಶೇಷ, ದೈವವಾಚಿ ಮತ್ತು ವ್ಯಕ್ತಿವಾಚಿ ಪದಗಳಿಂದ ನಿರ್ದೇಶನಗೊಂಡಿವೆ.

ಪಾಳ್ಯ

ವಾಸ್ತವ್ಯವಾಚಿ. ಕನ್ನಡದಲ್ಲಿ ಪಾಳೆಯ, ಪಾಳ್ಯ ಎಂದು ಬಳಸಲ್ಪಡುತ್ತಿದೆ. ಪಾಳೆಯ, ಪಾಳ್ಯ ಎಂಬುದಕ್ಕೆ ಸೈನ್ಯದ ಶಿಬಿರ ಎಂಬರ್ಥವಿದೆ. ನಾಡ ರಕ್ಷಣೆಗಾಗಿ ಸೈನಿಕರು ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುವಾಗ, ತಾತ್ಕಾಲಿಕವಾಗಿ ಬೀಡು ಬಿಡುತ್ತಿದ್ದ ಊರ ವಲಯದ ಸ್ಥಳಗಳೇ ಇಂದು ಪಾಳ್ಯ ವಾರ್ಗಿಕವುಳ್ಳ ಸ್ಥಳನಾಮಗಳಾಗಿವೆ.

(ಕ) ಹರವತಿಪಾಳ್ಯ

(ರಾ) ಕೆಂಪಯ್ಯನಪಾಳ್ಯ ಕೆ.ಜಿ.ಗೊಲ್ಲರಪಾಳ್ಯ ಗೊಲ್ಲರಪಾಳ್ಯ
ಮಂಚೇಗೌಡನಪಾಳ್ಯ ಯರೇಪಾಳ್ಯ

(ಮಾ) ಆಲದಕಟ್ಟೆ ಪಾಳ್ಯ ಅಣ್ಣಯ್ಯಶಾಸ್ತ್ರಿಪಾಳ್ಯ ಕಲ್ಲುಹಟ್ಟಿಪಾಳ್ಯ
ಕುರುಬರಪಾಳ್ಯ ಕೋಡಿಪಾಳ್ಯ ಗುಡೆಪಾಳ್ಯ
ಗೊಲ್ಲರಪಾಳ್ಯ ಚಿಕ್ಕತೊರೆಪಾಳ್ಯ ತ್ಯಾಗದೆರೆಪಾಳ್ಯ
ತೂಬರಪಾಳ್ಯ ನಾಯಕನಪಾಳ್ಯ ಪಾಪಶಾಸ್ತ್ರೀಪಾಳ್ಯ

ಪರ್ವತಪಾಳ್ಯ	ಪೆದ್ದನಪಾಳ್ಯ	ಬಸವನಪಾಳ್ಯ
ಬೆಟ್ಟದಾಸೀಪಾಳ್ಯ	ಮುದ್ದಯ್ಯನಪಾಳ್ಯ	ರಂಗಾಚಾರಿ ಪಾಳ್ಯ
ಸುಬ್ಬಾಶಾಸ್ತ್ರಿಪಾಳ್ಯ	ಹಂಚಿಬಸವನಪಾಳ್ಯ	

ಆಡಳಿತ ಸಂಬಂಧಿವಾಚಿಯಾದ ಪಾಳೆಯದಿಂದ 'ಪಾಳ್ಯ' ಬಂದಿದೆ. 'ಪಾಳ್ಯ' ವಾರ್ಗಿಕವು ಒಬ್ಬ ವ್ಯಕ್ತಿಯ ಹೆಸರಿನೊಂದಿಗೆ ನಿರ್ದೇಶನಗೊಂಡಿರುವುದು ತಿಳಿಯುತ್ತದೆ. ಆ ಪರಿಸರದ ಪ್ರಭಾವಿತನಾದ ವ್ಯಕ್ತಿಯಾಗಿರಬಹುದು. ಜೊತೆಗೆ ಪ್ರಾದೇಶಿಕ ಆಡಳಿತಗಾರರ ಹೆಸರೂ ಇರಬಹುದು. ಹರವತಿಪಾಳ್ಯ ಮತ್ತು ಬೆಟ್ಟದಾಸಿಪಾಳ್ಯ ಇವುಗಳ ನಿರ್ದಿಷ್ಟವು ಸ್ತ್ರೀವಾಚಿಯಾಗಿದ್ದು, ಹರವತಿ ಆಡಳಿತಗಾರನೊಬ್ಬನ ಪ್ರೀತಿಪಾತ್ರಳಾದ ಅಥವಾ ಗೌರವ ಸೂಚಕವಾದ ವ್ಯಕ್ತಿಯಾಗಿರಲು ಸಾಧ್ಯ. ದಾಸಿಯು ಊರಿನ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿರಬೇಕು. ಇಲ್ಲವೇ ಊರಿನ ಹಿತಕ್ಕಾಗಿ ದುಡಿದ, ಮಡಿದ ಮಹಿಳೆಯರಾಗಿರಲು ಸಾಧ್ಯವಾಗಿರಬಹುದು. ಅದಕ್ಕೆ ಬೆಟ್ಟ ಎಂಬ ವಿಶೇಷಣ ಸೇರಿ ಕೊಂಡಿದೆ.

ಅಣ್ಣಯ್ಯಶಾಸ್ತ್ರಿ ಪಾಳ್ಯ, ಸುಬ್ಬಾಶಾಸ್ತ್ರಿಪಾಳ್ಯ, ಪಾಪಶಾಸ್ತ್ರಿಪಾಳ್ಯಗಳಲ್ಲಿ ಬರುವ ನಿರ್ದಿಷ್ಟವು ಬ್ರಾಹ್ಮಣ ಸೂಚಿಸುವ ವ್ಯಕ್ತಿನಾಮವಾಗಿದ್ದು, ಆ ನೆಲೆಯನ್ನು ಸ್ಥಾಪಿಸುವಲ್ಲಿ ನೆರವಾಗಿರುವ ಅಥವಾ ಬ್ರಾಹ್ಮಣ ವ್ಯಕ್ತಿಗೆ ಉಂಬಳಿಯಾಗಿ ಕೊಟ್ಟ ವಿವರಗಳಿರಬಹುದು ಮತ್ತು ಬ್ರಾಹ್ಮಣ ಸಮುದಾಯದವರ ನೆಲೆಯಾಗಿರಲು ಸಾಧ್ಯವಾಗಿದೆ.

ಜಲಸಂಬಂಧಿ, ಬೆಟ್ಟಗುಡ್ಡ ಸೂಚಿತ, ಜನಾಂಗವಾಚಿ, ದೈವವಾಚಿ ಮತ್ತು ಸಸ್ಯವಾಚಿಯಾದವುಗಳು ನಿರ್ದಿಷ್ಟ ಸ್ಥಾನದಲ್ಲಿ ಬಂದಿವೆ.

ಪುರ

ವಸತಿ ಸೂಚಿಯಾದ ಇದು ಸಂಸ್ಕೃತ ಭಾಷೆಯ ವಾರ್ಗಿಕ. ಪಟ್ಟಣ, ಮನೆ, ನಗರ, ನದಿ, ಕಾಲುವೆ[೩೦] ಎಂಬರ್ಥಗಳಿವೆ. ಪುರದಿಂದ ಕೊನೆಗೊಳ್ಳುವ ಸ್ಥಳನಾಮಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವೆಂದು ಭಾವಿಸಲು ಅವಕಾಶವಿದೆ. ಸಾಮಾನ್ಯವಾಗಿ ಇವುಗಳ ಮಧ್ಯೆ ದೇವಾಲಯವಿರುತ್ತದೆ.[೩೧]

ದಕ್ಷಿಣ ಭಾರತದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕಗಳ ಸ್ಥಳನಾಮಗಳಲ್ಲಿ ವ್ಯಾಪಕವಾಗಿ ಈ 'ಪುರ'ವಾರ್ಗಿಕವಾಗಿ ಬಳಕೆಗೊಂಡಿದೆ.

(ಕ)	ಕನಕಪುರ	ಕೋಡಿಪುರ	ಗೊರವನಪುರ
	ನಾರಾಯಣಪುರ	ಬಸವನಪುರ	ಬಾಳೆಪುರ
	ಲಿಂಗನಪುರ	ಸಾಸಲಾಪುರ	ಸಂಬಾಪುರ
(ರಾ)	ಅಂಚಿಪುರ	ಕವಣಾಪುರ	ಕಾಯಕನಪುರ
	ಕ್ಯಾಸಾಪುರ	ಕುಂಬಾಪುರ	ಕೇಶವಪುರ
	ಕೊತ್ತಿಪುರ	ಜಯಪುರ	ದಣಾಯಕನಪುರ

	ಧಾರಾಪುರ	ಬಸವನಪುರ	ಮಾದಪುರ
	ಲಕ್ಷ್ಮಿಪುರ		
(ಚ)	ಅರ್ಕಾಪುರ	ಅರಳಾಪುರ	ಕಲ್ಲಾಪುರ
	ಕೃಷ್ಣಾಪುರ	ಕೊಂಡಾಪುರ	ಕೋಡಿಪುರ
	ಜಗದಾಪುರ	ನಾಗಪುರ	ನಾಗಲಾಪುರ
	ಬ್ರಾಹ್ಮಣಿಪುರ	ಬೈಚಾಪುರ	ಮಾದಾಪುರ
	ಮೈಲನಾಥನಪುರ	ರಾಮನರಸಿಂಹಪುರ	ರಾಮಪುರ
	ವಿರುಪಾಕ್ಷಪುರ	ಸಿದ್ದಾಪುರ	ಸೋಮನಾಥಪುರ
	ಸಿಂಗರಾಜಪುರ		
(ಮಾ)	ಕರಿಗಿರಿಪುರ	ಕಲ್ಯಾಣಪುರ	ಕೃಷ್ಣಾಪುರ
	ಕೆಂಚನಪುರ	ಕೆಂಪಾಪುರ	ಕೇತೋಹಳ್ಳಿರಾಮಪುರ
	ಗಟ್ಟೀಪುರ	ಗಂಗೇನಪುರ	ಗೌರಾಪುರ
	ಚನ್ನಾಪುರ	ಚಿಕ್ಕೇಳ್ಳೂರುವೆಂಕಟಪುರ	ಚಿಕ್ಕೇಳ್ಳೂರುರಾಮಾಪುರ
	ತಿರುಮಲಾಪುರ	ತ್ರಿಪುರಾಂತಕಚನ್ನಾಪುರ	ದಂಡಿಗೆಪುರ
	ದೇವಮಾಚೋಹಳ್ಳಿನಾರಾಯಣಪುರ		ನರಸಾಪುರ
	ಪುರ	ಬೈರಾಪುರ	ಬೈಚಾಪುರ
	ಮಲ್ಲಾಪುರ	ಮಾದಾಪುರ	ಯಲಚಗುಪ್ಪೆರಾಮಪುರ
	ಯಲ್ಲಾಪುರ	ರಘುನಾಥಪುರ	ವಿಠಲಪುರ
	ವಿರುಪಾಪುರ	ವಿಶ್ವನಾಥಪುರ	ವೀರಾಪುರ
	ಶಾಂತಾಪುರ	ಶ್ರೀಗಿರಿಪುರ	ಶ್ರೀನಿವಾಸಪುರ
	ಶೇಷಗಿರಿಪುರ	ಸಿದ್ದಾಪುರ	ಸೂಲಿವಾರ ರಾಮಪುರ
	ಹನುಮಾಪುರ	ಹೇಮಾಪುರ	ಹೊನ್ನಾಪುರ

ಕನಕಪುರದ ಪ್ರಾಚೀನ ರೂಪ 'ಕಾಣಿಕಾಜಿನಹಳ್ಳಿ' ಎಂದು ಶಾಸನೋಲ್ಲೇಖಗೊಂಡಿದೆ. ಇದು ವೃತ್ತಿವಾಚಿಯಾಗಿದೆ. 'ಪುರ' ಎಂಬ ವಾರ್ಗಿಕಕ್ಕೆ ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿವಾಚಿ, ದೈವವಾಚಿ, ಸಸ್ಯವಾಚಿ, ಆಡಳಿತಸಂಬಂಧಿ, ಜಲ ಸಂಬಂಧಿವಾಚಿ, ವೃತ್ತಿವಾಚಿ, ಲೋಹವಾಚಿ ಮೊದಲಾದ ವೈವಿಧ್ಯಮಯವಾದ ಅಂಶಗಳನ್ನು ಸೂಚಿಸುವ ನಾಮಗಳು ಸೇರಿಕೊಂಡಿವೆ.

ಪೋಡು

ವಾಸ್ತವ್ಯಸೂಚಿ ಪದ. ಇದು ವಿಭಜನೆಯಿಂದ ಜಮೀನಿನ ಭಾಗವನ್ನು ಗುರುತಿಸುವ ವಾರ್ಗಿಕವಾಗಿದ್ದರೂ, ಕಾಡಿನೊಳಗೆ ಅಥವಾ ಬೆಟ್ಟ, ಗುಡ್ಡ ತಪ್ಪಲಿನಲ್ಲಿ ವಾಸ ಮಾಡುತ್ತಿರುವ ಸೋಲಿಗರ

ವಾಸ್ತವ್ಯಗಳನ್ನು 'ಪೋಡು' ಎಂದು ಕರೆಯುತ್ತಾರೆ. ಪಾಲು, ವಿಭಾಗ, ಜಮೀನಿನ ಪೋಡು[31] ವಿಭಾಗ, ಹಂಚಿಕೆ, ಸೇರಿಕೆ[32] ಎಂಬರ್ಥಗಳಲ್ಲೂ ಬಳಕೆಯಲ್ಲಿದೆ.

(ಕ) ಇರಲ್‌ಪೋಡು

ಇರಲ್>ಇರುಳ್>ಇರುಳ, ಇರುಳಿಗ ಎಂಬ ಸಮುದಾಯವಾಚಿಯಾಗಿರುವ ಸಂಭವ ಇದೆ.

ಬಾಳು

ಒಕ್ಕಲಾಗು, ನೆಲಸು, ವಾಸಮಾಡು[34]. ಬಾಳ್, ಬಾಳು, ಬದುಕು, ಜೀವಿಸು[35] ಬಾಳ, ವಾಳ, ವಾಲ, ಹಾಳು<ಪಾಯ್=Open Space, Uncaltivasted land.[36] ಎಂಬರ್ಥಗಳಿವೆ.

(ಕ) ಚಿಕ್ಕಕಲ್ಲುಬಾಳು ದೊಡ್ಡಕಲ್ಲುಬಾಳು ಪಿ.ಮಣಿಯಂಬಾಳ್ ಟಿ.ಮಣಿಯಂಬಾಳ್

ಬೀದಿ

ಊರಿನ ಮುಖ್ಯ ರಸ್ತೆಯಿಂದಲೇ ಈ ವಾರ್ಗಿಕ ನಿಷ್ಪನ್ನವಾಗಿದೆ. ಸಂಸ್ಕೃತದ ವೀಧಿ ತದ್ಭವಗೊಂಡು ಬೀದಿಯಾಗಿದೆ. ಹಾದಿ, ಪೇಟೆ[37]

(ಕ) ತೇರುಬೀದಿ

ನಿರ್ದಿಷ್ಟದಲ್ಲಿ ಸಾಂಸ್ಕೃತಿಕ ಸಂಗತಿಯಾದ ದೇವರಿನ ತೇರು ಹೊಂದಿರುವ ಅಂಶವು ಬಂದಿದೆ.

ಮಠ

ವಾಸ್ತವ್ಯವಾಚಿ. ಸಂನ್ಯಾಸಿಗಳು ವಾಸಿಸುವ ಕುಟೀರ, ವಾಸಸ್ಥಾನ, ಆಶ್ರಮ[38] ಮಟ, (ಮಡ) A hut, a cottage, a heritage, a resitence of gun,. a convent, a monastery[39] ಎಂಬರ್ಥದಲ್ಲೂ ಬಳಕೆಯಲ್ಲಿವೆ.

(ಮಾ) ಕಲ್ಯಾಣ ದೇವರ ಮಠ

ದೈವವಾಚಿಯಾದ ಪದ ವಾಸ್ತವ್ಯವಾಚಿಯಾದ ಮಠದೊಳಗೆ ತಳಕು ಹಾಕಿಕೊಂಡು ಯತಾರ್ಥ ರೂಪವಾದ ಸ್ಥಳನಾಮ ನಿರ್ದೇಶನಗೊಂಡಿದೆ.

ಮಂಗಲ

ಬ್ರಾಹ್ಮಣ ವಾಸ್ತವ್ಯದ ನೆಲೆಯನ್ನು ಇದು ಸೂಚಿಸುತ್ತದೆ. ಚೋಳರ ಆಡಳಿತ ಕಾಲದಲ್ಲಿ ಬಳಕೆಗೆ ಬಂದ ವಾರ್ಗಿಕವಾಗಿದೆ. 'ಮಂಗಲ, ಗಾಲ ಎಂಬ ವಾರ್ಗಿಕಗಳುಳ್ಳ, ಮಹಾಜನ, ಬ್ರಾಹ್ಮಣ, ಶ್ರೋತ್ರೀಯ, ಹಾರೋ ಹಾರನ, ಪಾರ್ವನ ಎಂಬ ನಿರ್ದಿಷ್ಟಗಳುಳ್ಳ, ಅಗ್ರಹಾರ, ಅಗರ, ಅರಗ ಎಂಬ ನಿರ್ದಿಷ್ಟ ಅಲ್ಲವೆ ವಾರ್ಗಿಕ ಇಲ್ಲವೆ ಸ್ವತಂತ್ರ ರೂಪವುಳ್ಳ ಗ್ರಾಮನಾಮಗಳು ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳಾಗಿರುತ್ತವೆ.[40]

ಬ್ರಾಹ್ಮಣರಿಗೆ ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಲಾಗುತ್ತಿತ್ತು. ದಾನ ದತ್ತಿಗಳ ಕೇಂದ್ರ ಎಂಬರ್ಥದಲ್ಲೂ ಬಳಕೆಯಲ್ಲಿದೆ. ನೀರಾವರಿಗೆ ಅನುಕೂಲವಾದ, ವ್ಯವಸಾಯಕ್ಕೆ ಯೋಗ್ಯವಾದ ಭೂ ಪ್ರದೇಶವನ್ನು ದಾನದ ರೂಪದಲ್ಲಿ ಕೊಡುತ್ತಿದ್ದ ಪ್ರದೇಶವಾಗಿತ್ತು.

(ಚ) ಕನ್ನಮಂಗಲ ಕದರ ಮಂಗಲ

(ರಾ) ಜಾಲಮಂಗಲ ಬೈರಮಂಗಲ ಶಾನುಮಂಗಲ

(ಮಾ) ಕರ್ಲಮಂಗಲ ಕೋರಮಂಗಲ

ಇಲ್ಲಿನ ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿವಾಚಿ, ಜನಾಂಗವಾಚಿ, ಭೂಸ್ಥಿತಿವಾಚಿ ಅಂಶಗಳು ವಾರ್ಗಿಕ 'ಮಂಗಲ'ದೊಂದಿಗೆ ಕೂಡಿ ಬಂದಿವೆ.

ವರ

ವಸತಿವಾಚಕ ಹಳ್ಳಿಗಿಂತಲೂ ಜನ ಸಾಂದ್ರತೆ ಹೆಚ್ಚಾಗಿರುವ ಸ್ಥಳ ಇದಾಗಿದೆ.

ಆವರ, ವಾರ, ವರ ಇವು 'ಪುರ'ದ ರೂಪಾಂತರ ಎಂಬುದನ್ನು ಡಾ.ಚಿದಾನಂದಮೂರ್ತಿಯವರು

ಪುರ > ಪುರ>ಪುರ>ವರ>ವಾರ
ಪುರ>ಹುರ>ಊರು ಎಂಬುದಾಗಿ ತೋರಿಸಿದ್ದಾರೆ.

ಆದರೆ ಎಂ.ಎಂ.ಕಲಬುರ್ಗಿಯವರು ವರ-ವಾರ ಎಂಬವು ಆಹಾರ ಎಂಬ ಆಕೃತಿಮಾದ ಎರಡು ಉಪ ಆಕೃತಿಮಾಗಳೂ ಎನ್ನುತ್ತಾರೆ.[೮೧]. ದೀರ್ಘ ಸ್ವರಾದಿಯ 'ವಾರ' ಬಂದರೆ ಅದರ ಹಿಂದಿನ ನಿರ್ದಿಷ್ಟದ ಅಂತ್ಯಸ್ವರ ಹ್ರಸ್ವವಾಗುತ್ತದೆ.

(ಚ) ನಾಗವಾರ

ಹ್ರಸ್ವ ಸ್ವರಾದಿಯ 'ವರ' ಬಂದರೆ ಅದರ ಹಿಂದಿನ ಸ್ವರ ದೀರ್ಘವಾಗುತ್ತದೆ.

(ಚ) ದಸಾವರ

(ಮಾ) ಬೀರಾವರ

ವಾಡಿ

ವಾಸ್ತವ್ಯವಾಚಿ, ವಾಡೆ>ವಾಡ, ವಾಡ>ವಾಡಿಯಾಗಿದೆ. ವಾಡೆ, ಆವಾರ, ಚಿಕ್ಕಕಾಡು, ಹಾಡಿ, ಊರಿನ ವಿಭಾಗ[೮೨]. ಹಾಡಿ ಮತ್ತು ವಾಡಿಗಳು ಪ್ರಾಚೀನ ಕಾಲದ ವಾಸ್ತವ್ಯಸೂಚಿ ನೆಲೆಗಳೆಂದು ಶಂಬಾ ಅವರ ಅಭಿಪ್ರಾಯವಾಗಿದೆ. ಬಿಡಾರ, ವಾಸಸ್ಥಳ, ಸೈನ್ಯದಬೀಡು, ಧಾನ್ಯ ಬೆಳೆಯುವ ಸ್ಥಳವೆಂದೂ ಅರ್ಥ ನೀಡುತ್ತದೆ.

(ರಾ) ಚಿಕ್ಕಗಂಗವಾಡಿ ತಾಳವಾಡಿ ದೊಡ್ಡಗಂಗವಾಡಿ

(ಕ) ಅಣಜವಾಡಿ ಗಬ್ಬಾಡಿ ಚಿಕ್ಕ ಮರಳವಾಡಿ

ಚಿಕ್ಕಮುದವಾಡಿ ಚೀಲಂದವಾಡಿ ದೊಡ್ಡಮರಳವಾಡಿ

ದೊಡ್ಡಮುಂದವಾಡಿ ಶೀತಲವಾಡಿ

(ಮಾ) ನೇರಳವಾಡಿ ಬಾನವಾಡಿ ಬೆಳಗವಾಡಿ

ಯಲಚವಾಡಿ

ವಾಡಿ ಎಂಬ ವಾರ್ಗಿಕಕ್ಕೆ ಸಾಪೇಕ್ಷ ವಾಚಕಗಳಾದ ಚಿಕ್ಕ, ದೊಡ್ಡ ಹಾಗೂ ಸಸ್ಯವಾಚಿ, ಭಾನು, ವ್ಯಕ್ತಿವಾಚಿ, ಭೂವೈಶಿಷ್ಟ್ಯವಾಚಿ ಮೊದಲಾದ ಅಂಶಗಳು ಬಂದಿವೆ.

ಹಟ್ಟಿ

ಆರಂಭಕಾಲದ ಮಾನವನ ನೆಲೆ. ಕೊಟ್ಟಿಗೆ, ದನದ ದೊಡ್ಡಿ, ಗೋಶಾಲೆ[೪೩] ಪಶು ಸಾಕಾಣಿಕೆಯ ವೃತ್ತಿ ಸೂಚಕ ಅಂಶವಾಗಿದೆ. ಪಟ್ಟಿ>ಹಟ್ಟಿಯಾಗಿದೆ.

(ಕ) ಗುಳ್ಳಹಟ್ಟಿ ಕಾವಲು

ಇಲ್ಲಿ ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿವಾಚಿ ಬಂದಿದ್ದು, ಗುಳ್ಳನ ನೆಲೆಯಾಗಿದೆ. 'ಕಾವಲು' ಎಂಬುದಕ್ಕೆ ರಕ್ಷಿತವಾದ ಪ್ರದೇಶ ಎಂಬ ಅರ್ಥಕೊಡುತ್ತಿದ್ದು ನಂತರದಲ್ಲಿ ಈ ವಾರ್ಗಿಕ ಹತ್ತಿರುವುದು ಕಂಡುಬರುತ್ತದೆ.

ಹಳ್ಳಿ

ವಾಸ್ತವ್ಯವಾಚಿ, ದಕ್ಷಿಣ ಭಾರತದಾದ್ಯಂತ ಬಳಕೆಯಲ್ಲಿರುವ ದ್ರಾವಿಡ ಮೂಲ ಪದ. ಪಂಚ ದ್ರಾವಿಡ ಭಾಷೆಗಳಲ್ಲಿ ಹಳ್ಳಿಯ ಮೂಲ ಪಳ್ಳಿಯಾಗಿದೆ. ಇದಕ್ಕೆ ಸಣ್ಣೂರು, ಗುಡಿಸಲು ಎಂಬರ್ಥಗಳಿರುವುದಲ್ಲದೆ, ಬೌದ್ಧ, ಜೈನ ದೇವಾಲಯದ ಸ್ಥಳ ಎಂಬರ್ಥಗಳಿವೆ.[೪೪]

ಕಿಟೆಲ್ಲರು ಪಳ್ಳಿ, ಪಳ್ಳಗಳ ಮೂಲ 'ಪಡು'ವಿನಲ್ಲಿದೆ ಎಂದು ಹೇಳುತ್ತಾರೆ. ಕೆಳಗೆ ಬೀಳು, ಕೆಳಗೆ ಹೋಗು ಎಂಬರ್ಥವನ್ನು ಕೊಡುತ್ತಾರೆ.[೪೫] ಚಿಕ್ಕ ಊರು, ಗ್ರಾಮ ಎಂಬ ಅರ್ಥವನ್ನು ಕೊಡುತ್ತದೆ.

(ಕ)	ಅಜ್ಜಬಸವನಹಳ್ಳಿ	ಅತ್ತಿಹಳ್ಳಿ	ಅನಮನಹಳ್ಳಿ
	ಅರೆಹೊಸಹಳ್ಳಿ	ಅಳ್ಳಿಮಾರನಹಳ್ಳಿ	ಆನೆಹೊಸಹಳ್ಳಿ
	ಆಲಹಳ್ಳಿ	ಉದಾರಹಳ್ಳಿ	ಉಯ್ಯಂಬಳ್ಳಿ
	ಕಗ್ಗಲಹಳ್ಳಿ	ಕಚುವನಹಳ್ಳಿ	ಕಲ್ಲಹಳ್ಳಿ
	ಕಂಚನಹಳ್ಳಿ	ಕಾಡಹಳ್ಳಿ	ಕುರುಬರಹಳ್ಳಿ
	ಕೂತಗೊಂಡನಹಳ್ಳಿ	ಕೆ.ಗೊಲ್ಲಹಳ್ಳಿ	ಕೆಬ್ಬೆಹಳ್ಳಿ
	ಕೊಕ್ಕರೆ ಹೊಸಹಳ್ಳಿ	ಕೊಳ್ಳಿಗನಹಳ್ಳಿ	ಕೋಡಿಹಳ್ಳಿ
	ಕೊಳಗೊಂಡನಹಳ್ಳಿ	ಗಂಗನಹಳ್ಳಿ	ಗಣಗನಹಳ್ಳಿ
	ಗಾದಾರನಹಳ್ಳಿ	ಗುಡ್ಡೆವೀರನಹೊಸಹಳ್ಳಿ	ಗುಂಡಿನಗೊಲ್ಲಹಳ್ಳಿ
	ಗೇರಹಳ್ಳಿ	ಗೊಟ್ಟಿಗೆಹಳ್ಳಿ	ಗೊಲ್ಲಹಳ್ಳಿ
	ಚಾಕನಹಳ್ಳಿ	ಚಿಕ್ಕಾದೇವರಹಳ್ಳಿ	ಚಿಕ್ಕಬೆಟ್ಟಹಳ್ಳಿ
	ಚಿಕ್ಕಸಾದೇನಹಳ್ಳಿ	ಚಿಕ್ಕಲಹಳ್ಳಿ	ಚೂಡಹಳ್ಳಿ
	ತಿಗಳರಹಳ್ಳಿ	ತಿಗಳರ ಹೊಸಹಳ್ಳಿ	ತಿಟ್ಟಮೇಲಿನ ಗೊಲ್ಲಹಳ್ಳಿ
	ತುರುಕರ ಹೊಸಹಳ್ಳಿ	ತೆಂಗನಾಯಕನಹಳ್ಳಿ	ತೋಟಹಳ್ಳಿ

	ದೇವರಹಳ್ಳಿ	ದೇವರಕಗ್ಗಲಹಳ್ಳಿ	ದೇಶವಳ್ಳಿ
	ದೊಡ್ಡಕಬ್ಬಹಳ್ಳಿ	ದೊಡ್ಡಸಾದೇನಹಳ್ಳಿ	ದೊಲ್ಲಹಳ್ಳಿ
	ನಲ್ಲಹಳ್ಳಿ	ನಾಯಕನಹಳ್ಳಿ	ಪುರುಸಗೊಂಡನಹಳ್ಳಿ
	ಬರಡನಹಳ್ಳಿ	ಬಸವನಹಳ್ಳಿ	ಬಾಚಹಳ್ಳಿ
	ಬಂಡಿಗಾನಹಳ್ಳಿ	ಬಾಲಗೌಡನಹಳ್ಳಿ	ಬಿಜ್ಜಹಳ್ಳಿ
	ಬೊಮ್ಮನಹಳ್ಳಿ	ಬಂಡಿಗನಹಳ್ಳಿ	ಮರಸರಹಳ್ಳಿ
	ಮಲ್ಲಪ್ಪನ ಹೊಸಹಳ್ಳಿ	ಮಹಿಮನಹಳ್ಳಿ	ಮಾದನಹಳ್ಳಿ
	ಮಾದರಗಳ್ಳಿ	ಮಾರದೇವನಹಳ್ಳಿ	ಮಾಹಳ್ಳಿ
	ಮುಡೇನಹಳ್ಳಿ	ಮುರಡಿ ಹೊಸಹಳ್ಳಿ	ಮುಳ್ಳಹಳ್ಳಿ
	ಮೇಡಮಾರನಹಳ್ಳಿ	ಯಡಮಾರನಹಳ್ಳಿ	ಯರಹಳ್ಳಿ
	ಯಲಚಹಳ್ಳಿ	ಯಡಗೊಂಡನಹಳ್ಳಿ	ಯಡೆಹಳ್ಳಿ
	ರಾಗಿಹಳ್ಳಿ	ರಾಮನಹಳ್ಳಿ	ವಡೇರಹಳ್ಳಿ
	ಶಿವನಹಳ್ಳಿ	ಸೂರನಹಳ್ಳಿ	ಸೋಮೇದ್ಯಾಪನಹಳ್ಳಿ
	ಹನುಮನಹಳ್ಳಿ	ಹಲಸಿನಮರದಳ್ಳಿ	ಹಾರೋಶಿವನಹಳ್ಳಿ
	ಹಾರೋಹಳ್ಳಿ	ಹುಣಸನಕೋಡಿಹಳ್ಳಿ	ಹುಣಸನಹಳ್ಳಿ
	ಹುಲಗೊಂಡನಹಳ್ಳಿ	ಹೇರಂದ್ಯಾಪನಹಳ್ಳಿ	ಏಳಗಳ್ಳಿ ಹೊನ್ನಹಳ್ಳಿ
	ಹೊನ್ನಿಗನಹಳ್ಳಿ	ಹೊಸಹಳ್ಳಿ	
(ರಾ)	ಅರ್ಚಕರಹಳ್ಳಿ	ಅನುಮನಹಳ್ಳಿ	ಅಮ್ಮನಹಳ್ಳಿ
	ಅರೆಹಳ್ಳಿ	ಉರಗಹಳ್ಳಿ	ಕಲ್ಲು ಗೋಪಹಳ್ಳಿ
	ಕಂಚಗಾರನಹಳ್ಳಿ	ಕಾಕಾರಾಮನಹಳ್ಳಿ	ಕುರುಬರಕರೇನಹಳ್ಳಿ
	ಕುರುಬರಹಳ್ಳಿ	ಕೆಂಜೀಗರಹಳ್ಳಿ	ಕೆಂಪದ್ಯಾಪನಹಳ್ಳಿ
	ಕೆಂಪನಹಳ್ಳಿ	ಕೆಂಪವಡೇರಹಳ್ಳಿ	ಕೆ.ಜಿ.ಹೊಸಹಳ್ಳಿ
	ಕೇತಿಗನಹಳ್ಳಿ	ಕೇತೋಹಳ್ಳಿ	ಕೇತಹಳ್ಳಿ
	ಕಂಚಗಾರನಹಳ್ಳಿ	ಕೋಡಿಯಾಲಕರೇನಹಳ್ಳಿ	ಕೋಟಹಳ್ಳಿ
	ಗೋಪಹಳ್ಳಿ	ಚನ್ನಮಾರನಹಳ್ಳಿ	ಚಾಮನಹಳ್ಳಿ
	ಚಿಕ್ಕಕುಂಟನಹಳ್ಳಿ	ಚಿಕ್ಕೇನಹಳ್ಳಿ	ಚೌಡೇಶ್ವರಿಹಳ್ಳಿ
	ಜಕ್ಕನಹಳ್ಳಿ	ಜಡೇನಹಳ್ಳಿ	ಜೀಗನಹಳ್ಳಿ
	ತಮ್ಮನಾಯಕನಹಳ್ಳಿ	ದಾಸರಹಳ್ಳಿ	ಬಳೆವೀರನಹಳ್ಳಿ
	ಬಿಲ್ಲಕೆಂಪನಹಳ್ಳಿ	ಬೆನ್ನಹಳ್ಳ	ಬೈಚೋಹಳ್ಳಿ

	ಬೊಮ್ಮಚಾನಹಳ್ಳಿ	ಬೋರೆಹಳ್ಳಿ	ಬೋಳಪ್ಪನಹಳ್ಳಿ
	ಭೀಮೇನಹಳ್ಳಿ	ಮಂಚನಾಯಕನಹಳ್ಳಿ	ಮೂಡಲಹಳ್ಳಿ
	ಮಾಯಗನಹಳ್ಳಿ	ಮಾದಿಗನಹಳ್ಳಿ	ಮುದ್ದಾಪುರಕರೇನಹಳ್ಳಿ
	ಮೆಳೆಹಳ್ಳಿ	ಯರೇಹಳ್ಳಿ	ರಾಮನಹಳ್ಳಿ
	ಲಕ್ಕಪ್ಪನಹಳ್ಳಿ	ಲಕ್ಕೋಜನಹಳ್ಳಿ	ವಡೇರಹಳ್ಳಿ
	ವಾಜರಹಳ್ಳಿ	ಶಾನುಭೋಗನಹಳ್ಳಿ	ಶಿವನಹಳ್ಳಿ
	ಶೇಷಗಿರಿಹಳ್ಳಿ	ಸುಗ್ಗನಹಳ್ಳಿ	ಹಾಗಲಹಳ್ಳಿ
	ಹಿರೇಹಳ್ಳಿ	ಹುಣಸನಹಳ್ಳಿ	
(ಚ)	ಅಗ್ರಹಾರ ವಳಗೆರೆಹಳ್ಳಿ	ಅಜ್ಜನಹಳ್ಳಿ	ಅವ್ವೇರಹಳ್ಳಿ
	ಮ್ಯಾಜಖೇತ ವಡೇರಹಳ್ಳಿ	ಅಂಕುಶನಹಳ್ಳಿ	ಅಂಬಾಡಹಳ್ಳಿ
	ಎಲೆತೋಟದಹಳ್ಳಿ	ಎಲೆ ಹೊಸಹಳ್ಳಿ	ಕಾಡುಕೊತ್ತನಹಳ್ಳಿ
	ಕೋಡಂಬಳ್ಳಿ	ಕೋಡಿಹಳ್ಳಿ	ಕೋಡಿ ಹೊಸಹಳಿ
	ಕೋತನಹಳ್ಳಿ	ಕೋಮನಹಳ್ಳಿ	ಗರಕಹಳ್ಳಿ
	ಗೋವಿಂದನಹಳ್ಳಿ	ಚಿಕ್ಕೇನಹಳ್ಳಿ	ಚೋಳಮಾರನಹಳ್ಳಿ
	ತವಾತನಹಳ್ಳಿ	ತೆಂಕನಹಳ್ಳಿ	ದೇವರಹಳ್ಳಿ
	ದೇವರ ಹೊಸಹಳ್ಳಿ	ದೊಡ್ಡನಹಳ್ಳಿ	ನೀಲಕಂಠನಹಳ್ಳಿ
	ನೆಲಮಾಕನಹಳ್ಳಿ	ಬನಂತನಹಳ್ಳಿ	ಬಂದೂರುವಳಗೆರೆಹಳ್ಳಿ
	ಬಾಚಹಳ್ಳಿ	ಬಾಣಗಹಳ್ಳಿ	ಬ್ಯಾಡರಹಳ್ಳಿ
	ಭೂಹಳ್ಳಿ	ಬೊಮ್ಮನಹಳ್ಳಿ	ಭೈರನಾಯಕನಹಳ್ಳಿ
	ಭೈರಶೆಟ್ಟಿಹಳ್ಳಿ	ಮಂಗಾಡಹಳ್ಳಿ	ಮಂಡ್ಯಬೊಮ್ಮನಹಳ್ಳಿ
	ಮಾರಚನಹಳ್ಳಿ	ಮೆಣಸಿಗನಹಳ್ಳಿ	ಮೈಲನಾಯಕನಹಳ್ಳಿ
	ಮೊಗೇನಹಳ್ಳಿ	ವಡೇರಹಳ್ಳಿ	ವಿಟಲೇಶಹಳ್ಳಿ
	ಶಾನುಭೋಗನಹಳ್ಳಿ	ಸಣಬನಹಳ್ಳಿ	ಸಂತೇಮೊಗೇನಹಳ್ಳಿ
	ಸಾದಹಳ್ಳಿ	ಸಿದ್ಧನಹಳಿ	ಸೀಬನಹಳ್ಳಿ
	ಸೆಟ್ಟಹಳ್ಳಿ	ಸೌದಹಳ್ಳಿ	ಹಳೇಹಳ್ಳಿ
	ಹುಣಸನಹಳ್ಳಿ	ಹೊಟ್ಟಿಗನಹೊಸಹಳ್ಳಿ	ಹೊನ್ನನಾಯಕನಹಳ್ಳಿ
	ಹೊನ್ನಿಗನಹಳ್ಳಿ	ಹೊಸಹಳ್ಳಿ	
(ಮಾ)	ಅಜ್ಜನಹಳ್ಳಿ	ಅಡಕಮಾರನಹಳ್ಳಿ	ಅಣ್ಣೇಕಾರನಹಳ್ಳಿ
	ಅಯ್ಯಂದಹಳ್ಳಿ	ಅವ್ವೇರಹಳ್ಳಿ	ಅಂಜಗನಹಳ್ಳಿ

ಆಲಸೆಟ್ಟಿಹಳ್ಳಿ	ಉದ್ದಂಡಹಳ್ಳಿ	ಕದುರಮನಹಳ್ಳಿ
ಕನಕೇನಹಳ್ಳಿ	ಕರಿಯಹಳ್ಳಿ	ಕಲ್ಲುದೇವನಹಳ್ಳಿ
ಕಲ್ಯಾಣ ವಡೇರಹಳ್ಳಿ	ಕಂಚುಗಾರನಹಳ್ಳಿ	ಕರ್ಲಹಳ್ಳಿ
ಕೆಂಗೊಂಡನಹಳ್ಳಿ	ಕೆಂಚನಹಳ್ಳಿ	ಕೆಂಪೋಹಳ್ಳಿ
ಕೆಂಪುಗೊಂಡನಹಳ್ಳಿ	ಕೇತೋಹಳ್ಳಿ	ಕೊತ್ತಗೊಂಡನಹಳ್ಳಿ
ಕೊಂಡಹಳ್ಳಿ	ಕೋಟಗಾರಹಳ್ಳಿ	ಕೋಡಿಹಳ್ಳಿ
ಗಣಪತಿಹಳ್ಳಿ	ಗಂಗಪ್ಪನಹಳ್ಳಿ	ಗಂಗೇನಹಳ್ಳಿ
ಗಂಗೋನಹಳ್ಳಿ	ಗುಡ್ಡಲಹಳ್ಳಿ	ಗುಡೆಮಾರನಹಳ್ಳಿ
ಗೇರಹಳ್ಳಿ	ಗೊಲ್ಲಹಳ್ಳಿ	ಚನ್ನಹಳ್ಳಿ
ಚನ್ನೇನಹಳ್ಳಿ	ಚಂದುರಾಯನಹಳ್ಳಿ	ಚಿಕ್ಕನಹಳ್ಳಿ
ಚಿಕ್ಕೇನಹಳ್ಳಿ	ಚಿಕ್ಕಹಳ್ಳಿ	ಚೋಳನಾಯಕನಹಳ್ಳಿ
ಜುಟ್ಟನಹಳ್ಳಿ	ಜೋಗೇರಹಳ್ಳಿ	ಡೊಳ್ಳೇನಹಳ್ಳಿ
ತಮ್ಮೇನಹಳ್ಳಿ	ತವಕದಹಳ್ಳಿ	ತಿಪ್ಪಗೊಂಡನಹಳ್ಳಿ
ತೊರೆಚೆನ್ನೋಹಳ್ಳಿ	ತೊರೆರಾಮನಹಳ್ಳಿ	ದಂಡೆನಹಳ್ಳಿ
ದೊಡ್ಡಮಾರನಹಳ್ಳಿ	ದೊಡ್ಡಸೋಮನಹಳ್ಳಿ	ದೊಡ್ಡಹಳ್ಳಿ
ದೊಳ್ಳೇನಹಳ್ಳಿ	ನಾಗನಹಳ್ಳಿ	ನಾಗಶೆಟ್ಟಿಹಳ್ಳಿ
ನೇತೇನಹಳ್ಳಿ	ಪಾಲನಹಳ್ಳಿ	ಪಾಳ್ಯದಹಳ್ಳಿ
ಪುನಗುಮಾರನಹಳ್ಳಿ	ಪೋಲೋಹಳ್ಳಿ	ಬಸವೇನಹಳ್ಳಿ
ಬಾಚೇನಹಳ್ಳಿ	ಬೋಳೇನಹಳ್ಳಿ	ಬ್ಯಾಡರಹಳ್ಳಿ
ಬಿಸಲಹಳ್ಳಿ	ಬೀಚನಹಳ್ಳಿ	ಬೊಮ್ಮನಹಳ್ಳಿ
ಮಾದಿಗೊಂಡನಹಳ್ಳಿ	ಮಲ್ಲಪ್ಪನಹಳ್ಳಿ	ಮಲ್ಲೇನಹಳ್ಳಿ
ಮಾಚೋಹಳ್ಳಿ	ಮಣ್ಣಿಗನಹಳ್ಳಿ	ಮಾಯನಾಯಕನಹಳ್ಳಿ
ಮಾರದೇವನಹಳ್ಳಿ	ಮಾರಯ್ಯನಹಳ್ಳಿ	ಮರಿಸೋಮನಹಳ್ಳಿ
ಮಾರೇನಹಳ್ಳಿ	ಮುತ್ತುಗದಹಳ್ಳಿ	ಮುಪ್ಪೇನಹಳ್ಳಿ
ಮುಮ್ಮೇನಹಳ್ಳಿ	ಮೂಗನಹಳ್ಳಿ	ಮೇಲನಹಳ್ಳಿ
ಮೈಲನಹಳ್ಳಿ	ಮೋಟಗೊಂಡನಹಳ್ಳಿ	ಯಲಗದಹಳ್ಳಿ
ರಘುವನಹಳ್ಳಿ	ರಂಗೇನಹಳ್ಳಿ	ರಾಮನಹಳ್ಳಿ
ಲಕ್ಕೋನಹಳ್ಳಿ	ಲಿಂಗೇನಹಳ್ಳಿ	ವಡ್ಡರಹಳ್ಳಿ
ವರದೇನಹಳ್ಳಿ	ವರದೋಹಳ್ಳಿ	ವಾಜರಹಳ್ಳಿ

ವಾಡಹಳ್ಳಿ	ವಾರ್ತೇನಹಳ್ಳಿ	ವೆಂಗಳಪ್ಪನಹಳ್ಳಿ
ಶಂಭುದೇವನಹಳ್ಳಿ	ಶಿರಗನಹಳ್ಳಿ	ಸಿಂಗದಾಸನಹಳ್ಳಿ
ಶ್ರೀಪತಿಹಳ್ಳಿ	ಶೆಟ್ಟರಹಳ್ಳಿ	ಸಾದಮಾರನಹಳ್ಳಿ
ಸಿಡಗನಹಳ್ಳಿ	ಸುಗ್ಗನಹಳ್ಳಿ	ಸುಬ್ರಾಯಬ್ಯಾಡರಹಳ್ಳಿ
ಸೂರಪ್ಪನಹಳ್ಳಿ	ಸೊಣ್ಣೇನಹಳ್ಳಿ	ಸೋಮದೇವನಹಳ್ಳಿ
ಹಲಿಗೇನಹಳ್ಳಿ	ಹಾಲಸಿಂಗನಹಳ್ಳಿ	ಹಾಲಶೆಟ್ಟಿಹಳ್ಳಿ
ಹಾರೋಹಳ್ಳಿ	ಹ್ಯಾಗನಹಳ್ಳಿ	ಹುಲುವೇನಹಳ್ಳಿ
ಹುಲ್ಲೇನಹಳ್ಳಿ	ಹೇಳಿಗೆಹಳ್ಳಿ	ಹೊನ್ನಿಗನಹಳ್ಳಿ
ಹೊಸಹಳ್ಳಿ		

'ಹಳ್ಳಿ' ಪಂಚ ದ್ರಾವಿಡ ಭಾಷೆಯಲ್ಲಿ ಬಳಕೆಯಾಗಿರುವ ವಾರ್ಗಿಕವಾಗಿದೆ. ಜನರವಾಸ ಸ್ಥಳವಾಗಿದೆ. ಹಳ್ಳಿ ಗಾತ್ರದಲ್ಲಿ ಚಿಕ್ಕದಾಗಿದ್ದು ಗ್ರಾಮೀಣ ಸಮುದಾಯದ ಜನರ ನೆಲೆಯಾಗಿರುತ್ತದೆ.

'ಹಳ್ಳಿ'ಯನ್ನು ಸೂಚಿಸುವ ವಾರ್ಗಿಕವನ್ನೊಳಗೊಂಡ ಗ್ರಾಮನಾಮಗಳು ಜಿಲ್ಲೆಯಲ್ಲಿ ಅತ್ಯಧಿಕವೆಂದೇ ಹೇಳಬಹುದು. 'ಹಳ್ಳಿ'ಗಳು ಗ್ರಾಮೀಣ ಪರಿಸರವನ್ನು ಒಳಗೊಂಡಿರುವ ನೆಲೆಗಳಾಗಿವೆ. ನಗರದಲ್ಲಿನ ಸುವ್ಯವಸ್ಥೆಗಳನ್ನು ಈ ಹಳ್ಳಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಗ್ರಾಮೀಣ ಜನಪದ ಸಂಸ್ಕೃತಿಯ ತವರೂರು ಈ ಹಳ್ಳಿಗಳಾಗಿವೆ. ಹೀಗೆ ಹಲವಾರು ಸಾಂಸ್ಕೃತಿಕ ಸಂಗತಿಗಳನ್ನು ನಿರ್ದಿಷ್ಟ ಭಾಗದಲ್ಲಿ ಹೊಂದಿ, ವೈಶಿಷ್ಟ್ಯಪೂರ್ಣವಾದ ವಿವರಗಳು ದೊರೆಯುತ್ತವೆ.

'ಹಳ್ಳಿ' ವಾರ್ಗಿಕವನ್ನು ಒಳಗೊಂಡಿರುವ ಸ್ಥಳನಾಮಗಳು ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿದ್ದರೆ, ಉತ್ತರ ಕರ್ನಾಟಕದಲ್ಲಿ ಕಡಿಮೆ ಪ್ರಮಾಣದಲ್ಲಿವೆ.

ಅಜ್ಜ+ಬಸವನ+ಹಳ್ಳಿ: ವ್ಯಕ್ತಿವಾಚಿ ಸ್ಥಳನಾಮ. ಬಸವನಹಳ್ಳಿ ಎಂಬ ಗ್ರಾಮನಾಮಕ್ಕೆ ಮತ್ತೊಂದು ಬಸವನಹಳ್ಳಿಯಿಂದ ಬೇರ್ಪಡಿಸಲು ಅಜ್ಜ ಎಂಬ ಸಂಬಂಧವಾಚಿಯನ್ನು ಉಪ ಆಕೃತಿಮಾವಾಗಿ ಪಡೆದಿದೆ. ಆಲ+ಹಳ್ಳಿ: ಸಸ್ಯವಾಚಿ ಗ್ರಾಮನಾಮವಾಗಿದ್ದು, ಆಲದ ಮರಗಳಿರುವ ನೆಲೆ ಎಂಬರ್ಥವನ್ನು ಒಳಗೊಂಡಿದೆ. ಗಂಗನ+ಹಳ್ಳಿ: ವ್ಯಕ್ತಿವಾಚಿಯಾದ ಸ್ಥಳನಾಮ. ಗಂಗನೆಂಬ ವ್ಯಕ್ತಿ ತರಗು ಗುಡಿಸಿ ನೆಲೆಸಿದ ಜಾಗ ಎಂದು ಗುರುತಿಸಬಹುದು.

ಕಲ್ಲಹಳ್ಳಿ: ಶಾಸನವೊಂದರಲ್ಲಿ ಕಳ್ಳೇನಹಳ್ಳಿ ಎಂದಿದೆ; ಆದ್ದರಿಂದ ಇದು ವ್ಯಕ್ತಿವಾಚಿ 'ಕಳ್ಳಯ್ಯನಹಳ್ಳಿ' ಎಂದಿರಬೇಕು. ಆ ಪರಿಸರದಲ್ಲಿ ಕಳ್ಳಾಳಯ್ಯ ಎಂಬ ವ್ಯಕ್ತಿಯ ನಾಮಗಳು ಸಿಗುತ್ತವೆ.

ತಿಗಳರಹಳ್ಳಿ-ತಿಗಳರಹಳ್ಳಿ-ಜನಾಂಗವಾಚಿಯಾದ ತಿಗಳ ನಿರ್ದಿಷ್ಟಸ್ಥಾನದಲ್ಲಿದೆ. ತಿಗಳ ಜನಾಂಗದವರು ನೆಲೆಸಿರುವ ಊರು ಎಂಬರ್ಥವನ್ನು ಕೊಡುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ‘ಹಳ್ಳಿ’ ಎಂಬ ವಾರ್ಗಿಕದೊಂದಿಗೆ ಸಸ್ಯವಾಚಿ, ಜನಾಂಗವಾಚಿ, ವೃತ್ತಿವಾಚಿ, ಮಣ್ಣಿನ ಗುಣಲಕ್ಷಣವನ್ನು ಹೇಳುವ, ಜಲಸಂಬಂಧಿವಾಚಿಯಾದ ಹಾಗೂ ದೈವವಾಚಿಗಳು ಬಂದಿರುವುದನ್ನು ಗಮನಿಸಬಹುದು. ಅದಕ್ಕಿಂತಲೂ ಮುಖ್ಯವಾಗಿ ವ್ಯಕ್ತಿವಾಚಿಗಳಲ್ಲಿ ಹೆಚ್ಚಾಗಿ ಪುರುಷವಾಚಿಯಾದ ಹೆಸರುಗಳು ಬಂದಿದ್ದರೆ. ಸ್ತ್ರೀವಾಚಿಯಾದ ಚಂದಿಮಾದಿಯಹಳ್ಳಿ ಗ್ರಾಮವು ಚಂದಿ ಮತ್ತು ಮಾದಿಯರೆಯ ವೀರವನಿತೆಯರನ್ನು ಶಾಸನವು ಉಲ್ಲೇಖಿಸುತ್ತದೆ. ಆದರೆ ಕಾಲಾನಂತರದಲ್ಲಿ ಚಂದಿಮಾದಿಯಹಳ್ಳಿಯು>ಚನ್ನಮಾರನಹಳ್ಳಿಯ ಎಂದಾಗಿದೆ. ಪುರುಷಪ್ರಧಾನವಾದ ವ್ಯವಸ್ಥೆಯು ಗ್ರಾಮನಾಮಗಳ ಮೇಲೂ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

ಒಂದೇ ಹೆಸರಿನ ಊರುಗಳಿದ್ದಾಗ ಗ್ರಾಮದ ಪ್ರತಿಷ್ಠಿತ ವ್ಯಕ್ತಿ, ದೇವತೆ, ಅಲ್ಲಿಯ ಪ್ರಸಿದ್ಧವಸ್ತು, ದೊಡ್ಡ ಚಿಕ್ಕ ಎಂಬ ವಿಶೇಷಣಗಳನ್ನು ಮತ್ತು ಭೂವೈಶಿಷ್ಟ್ಯವನ್ನು, ಅಲ್ಲಿಯ ವೃತ್ತಿ, ಜನಾಂಗ, ಜಲ, ಪಕ್ಷಿ, ಶಿಲಾವಾಚಿ, ಸಸ್ಯವಾಚಿಯಾದ ವಸ್ತುಗಳನ್ನು ಬಳಸಿಕೊಂಡಿರುವುದನ್ನು ಕಾಣಬಹುದು.

ಉದಾ: ಆನೆ ಹೊಸಹಳ್ಳಿ, ಕೊಕ್ಕರೆ ಹೊಸಹಳ್ಳಿ, ದೇವರಕಗ್ಗಲಹಳ್ಳಿ, ಚಿಕ್ಕಬೆಟ್ಟಹಳ್ಳಿ, ಮಲ್ಲಪ್ಪನ ಹೊಸಹಳ್ಳಿ, ಕುರುಬರಕರೇನಹಳ್ಳಿ, ಕಲ್ಲುಗೋಪನಹಳ್ಳಿ, ತೊರೆಚೆನ್ನೋಹಳ್ಳಿ, ಇತ್ಯಾದಿ.

ಹಾಳ

ವಾಸ್ತವ್ಯವಾಚಿ ಪದ. ದ್ರಾವಿಡ ಮೂಲದ ವಾರ್ಗಿಕ. ತಮಿಳು ಮಲಯಾಳಂಗಳಲ್ಲಿ ‘ಪಾಳ’ ಎಂದೂ, ತುಳುವಿನಲ್ಲಿ ಪಾಳು ಎಂದೂ, ಕನ್ನಡದಲ್ಲಿ ‘ಹಾಳ್’ ‘ಹಾಳು’ ಎಂದು ಬಳಕೆಯಾಗಿದೆ. ಹಾಳ್, ಪಾಳ್ ಮುಂತಾದ ರೂಪಗಳ ಮೂಲ ‘ಪಡು’ವಿನಲ್ಲಿದೆ.[೬೬] ಕನ್ನಡದಲ್ಲಿ ಈ ಶಬ್ದಗಳಲ್ಲಿ ಪಾಳುಬಿದ್ದ ಭೂಮಿ, ಸಾಗುವಳಿ ಮಾಡದ ಭೂಮಿ, ಒಣಗಿದ ಭೂಮಿ ಎಂಬರ್ಥಗಳಿವೆ[೬೭] ಭೂಮಿ, ಗದ್ದೆ, ದತ್ತಿ, ದಾನಿ, ಕೆಟ್ಟ, ಬಂಜರು[೬೮] ಎಂಬರ್ಥವನ್ನು ಕೊಡುತ್ತದೆ. ಹಾಳ<ಹಾಳುವಾಗಿದೆ.

(ಕ)	ಅರಳಾಳು	ಕಬ್ಬಾಳು	ಕೊಟ್ಟಗಾಳು
	ಗಾಣಾಳು	ಬ್ಯಾಲಾಳು	ಭಂಟಗಾಳು
(ಚ)	ಮಳಗಾಳು		
(ಮಾ)	ತಟವಾಳು	ಬ್ಯಾಲಾಳು	ಹಕ್ಕೇನಾಳು
	ಹೆಬ್ಬಲಾಳು		

*ಅರುಳಹಾಳ>ಅರುಳಾಳು

*ಕಬ್ಬಹಾಳ>ಕಬ್ಬಾಳು

*ಗಾಳಿಹಾಳು>ಗಾಣಾಳು

*ಮೊಳಗಾಳ>ಮಳಗಾಳು ಎಂಬ ಶಾಸನೋಲ್ಲೇಖಿತ ರೂಪಗಳು ದೊರಕಿವೆ. ದೈವವಾಚಿ, ಮಣ್ಣಿನ ಗುಣ ಲಕ್ಷಣವನ್ನು ಹೇಳುವ, ವಸ್ತುವಾಚಿ, ಸಸ್ಯವಾಚಿ ಮೊದಲಾದವುಗಳನ್ನು ‘ಹಾಳ’ ವಾರ್ಗಿಕದೊಂದಿಗೆ ಸ್ಥಳನಾಮಗಳು ನಿರ್ದೇಶನಗೊಂಡಿವೆ.

ರಾಮನಗರ ಜಿಲ್ಲೆಯು ಶಿಲೆಯಿಂದ ಕೂಡಿರುವ, ಗುಡ್ಡ ಬೆಟ್ಟ, ಕಾಡುಗಳಿಂದ ಕೂಡಿರುವ ಭೌಗೋಳಿಕ ಲಕ್ಷಣವನ್ನು ಹೊಂದಿದೆ ಎಂಬುದು ಸ್ಥಳನಾಮಗಳ ಮೂಲಕವಾಗಿಯೂ ವ್ಯಕ್ತವಾಗಿದೆ. ರಾಮನಗರ ಜಿಲ್ಲೆಯ ಒಟ್ಟಾರೆ ಸ್ಥಳನಾಮಗಳ ವಾಸ್ತವ್ಯಸೂಚಿ ವಾರ್ಗಿಕಗಳನ್ನು ಪರಿಶೀಲಿಸಿದರೆ, ನಗರ ಮತ್ತು ಪಟ್ಟಣ ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳ ಮತ್ತು 'ಹಳ್ಳಿ'ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳ ತುಲನಾತ್ಮಕ ಅಧ್ಯಯನದಿಂದ ನಗರ ಮತ್ತು ಪಟ್ಟಣಗಳನ್ನು ಹೊಂದಿರುವ ವಾರ್ಗಿಕಗಳನ್ನು ಹೊಂದಿದ ಊರುಗಳು ಕಡಿಮೆ ಸಂಖ್ಯೆಯಲ್ಲಿವೆ.

೩. ನಿರ್ಮಾಣವಾಚಿ

ಮಾನವನು ಹುಲ್ಲು, ನೀರು, ಗೆಡ್ಡೆ ಗೆಣಸು ಯಥೇಚ್ಛವಾಗಿ ದೊರಕುವ ರಕ್ಷಣಾ ಸೌಲಭ್ಯಗಳಿರುವ ಮತ್ತು ವಾಸಕ್ಕೆ ಯೋಗ್ಯವಾದ ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ಜನವಸತಿ ನೆಲೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ನಂತರ ಮನುಷ್ಯ ನಿರ್ವಹಿಸುವ ಕಷ್ಟದಾಯಕವಾದ ಕೆಲಸಗಳಿಗೆ ವಿಮುಕ್ತಿಯನ್ನು ನೀಡಿ ತಾನಿರುವಲ್ಲಿಯೇ ಆಹಾರ, ನೀರು ಮೊದಲಾದ ಜೀವನಾವಶ್ಯಕವಾದ ವಸ್ತುಗಳ ಜೊತೆಗೆ ಸುವ್ಯವಸ್ಥಿತವಾದ ವಸತಿ ಸ್ಥಳಗಳನ್ನು ತಾನಿರುವಲ್ಲಿಯೇ ನಿರ್ಮಾಣ ಮಾಡಿಕೊಂಡಿರಲು ಸಾಧ್ಯ.

ಕಾಲಾನಂತರದಲ್ಲಿ ಕಷ್ಟ ಸಹಿಷ್ಣುತೆಯ ಮನೋಭಾವ ಮಾನವನಲ್ಲಿ ಯಾವಾಗ ಕಡಿಮೆಯಾಯಿತೋ, ಹೆಚ್ಚುಹೆಚ್ಚು ಜನಸಂಖ್ಯೆ ಹೆಚ್ಚಿದಂತೆಲ್ಲಾ ಗ್ರಾಮಗಳ ಉದಯದ ಪ್ರಮಾಣವೂ ಹೆಚ್ಚಾದ ಸಂದರ್ಭದಲ್ಲಿ ಗುಡ್ಡಗಾಡು, ಕಾಡು, ನದಿ ತೀರದ ಪ್ರದೇಶದಿಂದ ಮನುಷ್ಯ ಸಮತಟ್ಟಾದ ಬಯಲು ಪ್ರದೇಶವನ್ನು ತನ್ನ ವಸತಿಗಾಗಿ ಆಯ್ಕೆ ಮಾಡಿಕೊಂಡಿರಬೇಕು. ಆಗ; ತಾನು ನೆಲೆಸಿರುವ ಸ್ಥಳದ ಸಮೀಪವೇ ಜೀವನಕ್ಕೆ ಯೋಗ್ಯವಾದ ಹಾಗೂ ತನ್ನ ಕುಟುಂಬ ವರ್ಗದವರ ರಕ್ಷಣೆಗಾಗಿ ಕೆರೆ, ಕಟ್ಟೆ, ಬಾವಿ ಮೊದಲಾದ ಜಲ ಸಂಗ್ರಹಗಳನ್ನು; ಕಾಲಮಾನದಲ್ಲಿ ಆಳರಸರ ದುರಾಕ್ರಮಣಗಳಿಂದ ರಕ್ಷಣೆ ಪಡೆಯಲೋಸುಗ ಊರ ಸುತ್ತಲು ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಚಾಲನೆ ನೀಡಿರುವುದು ಇತಿಹಾಸದಿಂದ ತಿಳಿದು ಬಂದಿರುವುದು.

ನಿರ್ಮಾಣವಾಚಿಗಳಾದ, ಕೆರೆ, ಕಟ್ಟೆ, ಸಾಗರ, ಬಾವಿ, ಕೋಟೆ ಮೊದಲಾದ ವಾರ್ಗಿಕಗಳನ್ನು ಗಮನಿಸಿದಾಗ ಇವುಗಳು ಊರಿನ ಅಥವಾ ಜನರ ಪ್ರಯೋಜನಕ್ಕೆ ಹಾಗೂ ರಕ್ಷಣೆಗಾಗಿಯೇ ನಿರ್ಮಿಸಿರುವುದು ಕಂಡುಬರುತ್ತದೆ. ಇಲ್ಲಿ ಮುಖ್ಯವಾಗಿ ಊರಿನ, ಸಮುದಾಯದ ಕಲ್ಯಾಣವನ್ನೇ ಗುರಿಯಾಗಿಸಿಕೊಂಡು ನಿರ್ಮಿಸಲ್ಪಟ್ಟಿರುವುದು ತಿಳಿದು ಬರುತ್ತದೆ. ನಿರ್ಮಾಣವಾಚಿಗಳಲ್ಲಿ ಮುಖ್ಯವಾಗಿ ಹೆಚ್ಚು ವ್ಯಕ್ತನಿಷ್ಠವಾದ ವ್ಯಕ್ತಿವಾಚಿಗಳು ನಿರ್ದಿಷ್ಟ ಭಾಗದಲ್ಲಿ ಕಾಣಿಸಿಕೊಂಡಿವೆ. ತಾನು ನಿರ್ಮಿಸಲ್ಪಟ್ಟ ಕೆರೆ ಕಟ್ಟೆ ಬಾವಿಗಳಿಗೆ ತನ್ನ ಅಥವಾ ತನ್ನ ಪ್ರೀತಿಪಾತ್ರದವರ ಹೆಸರನ್ನು ನಿರ್ಮಿಸಿರುವ ವಸ್ತುಗಳ ಜೊತೆ ಅಂಟಿಕೊಂಡು ಬಂದಿರುವುದನ್ನು ಗುರುತಿಸಲು ಸಾಧ್ಯವಿದೆ. ವ್ಯಕ್ತಿವಾಚಿಯಾಗಿ ನಿರ್ಮಿಸಲ್ಪಟ್ಟ ವಸ್ತುಗಳೇ ನಂತರದಲ್ಲಿ ಗ್ರಾಮನಾಮಗಳಾಗಿ ಬಂದಿರಲು ಸಾಧ್ಯ. ನಿರ್ದಿಷ್ಟ ಭಾಗದಲ್ಲಿ ಕೆಲವೊಂದು ಸ್ಥಳನಾಮಗಳಲ್ಲಿ ಭಿನ್ನವಾದ ಇತರ ಅಂಶಗಳು ಬಂದಿವೆ.

ಏರಿ

ಜಲವಾಚಿಯಾದ ಏರಿ; ನೀರು ನಿಲ್ಲಿಸಲು ಕೃತಕವಾಗಿ ನಿರ್ಮಾಣಮಾಡಿದ ಕಟ್ಟೆ. ಜಲವಾಚಕದ ಕೆರೆ ಕಟ್ಟೆಯನ್ನು ಹೇಳುವ ಪದ. ಮಣ್ಣಿನ ಸಾಲು, ದಂಡೆ[೨೯] ಎಂಬರ್ಥಗಳಿವೆ.

ಕೆರೆ, ಕುಂಟೆಯ ನೀರು ನಿಲ್ಲಿಸಲು ಸಹಾಯಕವಾದ ಎತ್ತರದ ಭೂ ಪ್ರದೇಶವಾಗಿದೆ.

(ಚ) ಸುಳ್ಳೇರಿ

(ಮಾ) ದೊಡ್ಡೇರಿ

ಕಟ್ಟೆ

ಜಲವಾಚಿ ಸೂಚಕ ಪದ. ನೀರು ಹರಿಯುವುದನ್ನು ತಡೆಯಲು ಕಟ್ಟುವ ತಡೆಗೋಡೆ, ನಿರ್ಮಾಣವಾಚಿಯಾಗಿದೆ.

a boudry, a Share a bank ಎಂಬರ್ಥ ನೀಡುತ್ತದೆ.[೩೦]

(ಕ) ಕಣಿವೆಕಟ್ಟೆ ವಡಕೆಕಟ್ಟೆ ಹೊದಿಕೆಕಟ್ಟೆ

(ಮಾ) ಆಲದಕಟ್ಟೆ ಬಾಳೆಕಟ್ಟೆ ಹುಲಿಕಟ್ಟೆ

'ಕಟ್ಟೆ' ನಿರ್ಮಾಣವಾಚಿಯಾದರೂ ಪೂರ್ವದ ನಿರ್ದಿಷ್ಟ ಭಾಗದಲ್ಲಿ, ಉನ್ನತಭೂವಾಚಕ, ಸಸ್ಯವಾಚಿಯಾದವುಗಳು ಬಂದಿವೆ. ಹುಲಿಕಟ್ಟೆ ಗ್ರಾಮದ ಪ್ರಾಚೀನ ರೂಪ ಹುಳಿಕಟ್ಟೆ ಎಂಬ ಶಾಸನೋಲ್ಲೇಖ ದೊರಕಿದೆ. 'ಕಟ್ಟೆ' ವಾರ್ಗಿಕವನ್ನು ಒಳಗೊಂಡಂತೆ ನಿರ್ದಿಷ್ಟವಾಗಿ ಸಸ್ಯವಾಚಿಯಾದವು ಸಂಖ್ಯಾದೃಷ್ಟಿಯಿಂದ ಹೆಚ್ಚಾಗಿವೆ. ಆ ಹಿನ್ನೆಲೆಯಲ್ಲಿ 'ಹುಳಿ' ಎಂದರೆ ಹುಣಸೆಮರದ ನೆಲೆ ಎಂಬರ್ಥ ಸೂಚಿಸುತ್ತಿರಬೇಕೆಂಬುದು ತೋರುತ್ತದೆ.

ಕಾವಲು

ನಿರ್ಮಾಣವಾಚಿಯಾದದ್ದು. ಗೋವಿನ ಮೇವಿಗೆ ಹಾಗೂ ಸಾಕಾಣಿಕೆಗೆ ಮೀಸಲಿಟ್ಟ ಸ್ಥಳವೇ ಕಾವಲು. ತಮಿಳು, ಮಲಯಾಳಂನಲ್ಲಿ 'ಕಾವಲ್' ಎಂದಿದ್ದರೆ, ತೆಲುಗಿನಲ್ಲಿ 'ಕಾವಲಿ' ಎಂಬ ರೂಪಗಳಿವೆ. ಅದಕ್ಕೆ ಕಾಪು, ರಕ್ಷಣೆ ಎಂಬರ್ಥಗಳಿವೆ. ಊರ ಹೊರವಲಯದಲ್ಲಿರುವ ರಕ್ಷಿತ ಪ್ರದೇಶ ಎಂಬರ್ಥವನ್ನು ನೀಡುತ್ತದೆ. ಕಾವಲ್, ಕಾವಲ, ಕಾವಲಿ, Guarding, a guard, a watch ತುಳು, ತಮಿಳು ತೆಲುಗಿನಲ್ಲಿ 'ಕಾವಲಿ' ಎಂದಿದೆ. ಕಾಯುವಿಕೆ, ಪಹರೆ, ಹುಲ್ಲುಗಾವಲು[೩೧] ಎಂಬರ್ಥಗಳಿವೆ.

(ಕ) ಗುಳ್ಳಹಟ್ಟಿ ಕಾವಲು ರಾಮಪುರಕರುವಿನಹಟ್ಟಿಕಾವಲ್

ನಿರ್ದಿಷ್ಟ ಭಾಗದಲ್ಲಿ ವ್ಯಕ್ತಿ ಮತ್ತು ಪ್ರಾಣಿ ನಿರ್ದೇಶಿಸುವ ವಾಚಕ ಬಂದಿದೆ.

ಕುಳಿ

ನಿರ್ಮಾಣವಾಚಿ. ಇದು ಕುಣಿ, ಗುಂಡಿ, ತಗ್ಗು[೩೨] ತಗ್ಗಾದ ಭೂ ಭಾಗವನ್ನು ಹೊಂದಿರುವುದು. ಇದು ನಿಮ್ನಭೂವಾಚಕವಾಗಿರಬಹುದು. ಇಲ್ಲವೇ ನಿರ್ಮಾಣವಾಚಿಯಾಗಿರಲು ಸಾಧ್ಯ. ಊರಿನ ಭೌಗೋಳಿಕ ಸ್ವರೂಪವನ್ನು ನೋಡಿ ನಿರ್ಧರಿಸಲು ಸಾಧ್ಯವಾಗುತ್ತದೆ.

(ಕ)	ದೊಡ್ಡಗುಳಿ	ಯಕ್ಕುಳಿ	ಹಂಚುಗುಳಿ
(ಮಾ)	ದಬ್ಬಗುಳಿ		
(ರಾ)	ಬಾಲಗುಳಿಮಜ್ರೆ		

ಕುಂಟೆ

ನಿರ್ಮಾಣವಾಚಿಯಾದ ಇದು; ಜಲಸಂಬಂಧಿ ವಾರ್ಗಿಕವಾಗಿದೆ. ನೀರಿನ ಸಂಗ್ರಹ ಮಾಡಿರುವ ಪ್ರದೇಶ, 'ನೀರಕುಣಿ', ಕೊಳ[೫೩].

(ಮಾ) ಅರಸಿನಕುಂಟೆ ಉದಕುಂಟೆ ವಂಬತ್ತನಕುಂಟೆ

ನಿರ್ದಿಷ್ಟ ಭಾಗದಲ್ಲಿ ಸಸ್ಯವಾಚಿ, ಜಲವಾಚಿ ವ್ಯಕ್ತಿವಾಚಿಗಳೊಂದಿಗೆ 'ಕುಂಟೆ' ವಾರ್ಗಿಕ ಬಂದಿದೆ.

ಕೆರೆ

ಇದು ಜಲಸೂಚಕವಾದದ್ದು. ಇದು ಎಲ್ಲ ದ್ರಾವಿಡ ಭಾಷೆಗಳಲ್ಲೂ ಬಳಕೆಯಲ್ಲಿದೆ. ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ, A tank, a reserrior[೫೪] ಆದ್ದರಿಂದ ಇದು ನಿರ್ಮಾಣವಾಚಿ ಗುಂಪಿಗೆ ಸೇರುತ್ತದೆ. ಕ>ಗಕಾರಾದೇಶವಾಗಿ ಕೆರೆ>ಗೆರೆ ಎಂದು ಬಳಕೆಗೊಳ್ಳುವುದು.

(ಕ)	ಅರಕೆರೆ	ಮರಳಗೆರೆ	ದೊಡ್ಡಸೂಲಿಕೆರೆ
	ತಟ್ಟೆಕೆರೆ	ಎರಂಗೆರೆ	ವಿಭೂತಿಕೆರೆ
	ಪಡುವಣಗೆರೆ	ಸೂಲಿಗೆರೆ	ಸಬ್ಬಕೆರೆ
	ಪಿಟ್ಟನಕೆರೆ	ಬಳ್ಳಗೆರೆ	
(ರಾ)	ಅವರಗೆರೆ	ಸೀಬಕೆರೆ	ಕೊತ್ತಿಪುರದಅಮಾನಿಕೆರೆ
	ಹೆಗ್ಗಡಗೆರೆ		
(ಚ)	ಅಣ್ಣಿಗೆರೆ	ತಟ್ಟೆಕೆರೆ	ಸಂಕಲಗೆರೆ
	ಗುಂಡಿಗೆರೆ	ಕೂರ್ಣಗೆರೆ	ತೂಬಿನಕೆರೆ
	ಕೆಳಗೆರೆ	ಬೆಳಕೆರೆ	ಗೌಡಗೆರೆ
	ಮುತ್ತಿಕೆರೆ	ಝುತ್ತೆಕೆರೆ	ಮಲ್ಲಂಗೆರೆ
	ತಗಚಗೆರೆ	ಮೂಡಿಗೆರೆ	ಬಗನಿಗೆರೆ
	ಬ್ಯಾಲದಕೆರೆ	ಮತ್ತಿಕೆರೆ	ಯೆಣ್ಣೆಗೆರೆ
(ಮಾ)	ಅತ್ತಿಂಗೆರೆ	ಚಿಕ್ಕಮೂಡಿಗೆರೆ	ಉಡುವೆಗೆರೆ
	ತಟ್ಟೆಕೆರೆ	ಕಲ್ಕೆರೆ	ತಾವರೆಕೆರೆ
	ಕುಟ್ಟನಗೆರೆ	ತಾಳೆಕೆರೆ	ಕೆಂಕೆರೆ
	ತೂಬಿನಕೆರೆ	ನೇರಳೆಕೆರೆ	

ವಾರ್ಗಿಕವಾದ 'ಕೆರೆ'ಗೆ ನಿರ್ದಿಷ್ಟ ಭಾಗದಲ್ಲಿ ಗ್ರಾಮದ ಸ್ಥಿತಿಗತಿಯನ್ನು ಹೇಳುವ ಅಂಶಗಳು ಬಂದಿವೆ. ಅರೆ, ತಟ್ಟೆ, ಮರಳ, ಎರಂ>ಏರಿ, ವಿಭೂತಿ, ಕೆಳ, ತೂಬು, ಬೆಳ, ಮೂಡಿ, ಕಲ್, ಕೆಂಪು ಮೊದಲಾದ ಅಂಶಗಳು ಬಂದಿವೆ. ಪಡುವಣ, ಮೂಡಣ>ಮೂಡಿ, ಕೆಳ ಇವು ಗ್ರಾಮಗಳಿರುವ ದಿಕ್ಕನ್ನು ಸೂಚಿಸಿರುವುದಾಗಿದೆ. ಅವರೆ, ಸೂಲಿ, ತಗಚ>ತಗಚೆ ಮತ್ತಿ, ತಾವರೆ, ತಾಳೆ ಇವುಗಳು ಸಸ್ಯವಾಚಿಯಾಗಿದ್ದು, ಇವುಗಳ ಅಧಿಕ್ಯತೆಯನ್ನು ತಿಳಿಸುತ್ತವೆ. ಈ ಗ್ರಾಮಗಳಲ್ಲಿ ಅಥವಾ ಸಮೀಪದಲ್ಲಿ ಜಲ ಸಂಗ್ರಹಕಗಳಾದ ಕೆರೆಗಳು ಇದ್ವೇ ಇರುವುದು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ.

ಕೋಟೆ

ನಿರ್ಮಾಣವಾಚಿಯನ್ನು ಸೂಚಿಸುವ ವಾರ್ಗಿಕ. ಸೇನೆಯ, ಊರಿನ ರಕ್ಷಣೆಗಾಗಿ ನಿರ್ಮಿಸಿಕೊಂಡ, ಎತ್ತರವಾದ, ಬಲವಾದ ಮತ್ತು ಅಗಲವಾದ ಗೋಡೆಯನ್ನೊಳಗೊಂಡಿರುವ ಭೂ ಪ್ರದೇಶ.

(ಕ) ನಾಗರಸನಕೋಟೆ ಸೀಗೆಕೋಟೆ ಹೊಸಕೋಟೆ

(ಮಾ) ಅಗಲಕೋಟೆ

ವ್ಯಕ್ತಿವಾಚಿ, ಸಸ್ಯವಾಚಿ, ಸಾಪೇಕ್ಷವಾಚಕ ಪದಗಳನ್ನು ನಿರ್ದಿಷ್ಟದ ಭಾಗದಲ್ಲಿ ಹೊಂದಿವೆ.

ಕೋಡಿ

ಜಲ ಸಂಬಂಧಿವಾಚಿ. ಕೆರೆಕುಂಟೆಯಿಂದ ಹೆಚ್ಚಾದ ನೀರನ್ನು ಸುರಕ್ಷಿತವಾಗಿ ಹೊರಹೋಗುವ ಪ್ರದೇಶದಲ್ಲಿರುವ ಸ್ಥಳವಾಗಿದೆ. ಇದು ನಿರ್ಮಾಣವಾಚಿಯಾಗಿದೆ. a passage too carry of excess water. The outlet of tank to flow in streams[೨೨] ಎಂಬರ್ಥಗಳಿವೆ.

(ರಾ) ಹೆಬ್ಬಕೋಡಿ

ಗುಂಡಿ

ಗುಣಿ, A hole, a pit, a hollow, ನೀರಗುಂಡಿ[೨೩] ಆಳ, ಕುಣಿ, ಕುಳಿ, ಕ್ಷಯ[೨೪] ಎಂಬರ್ಥಗಳಿವೆ. ಕುಂಡಿ>ಗುಂಡಿ ಎಂಬುದಾಗಿ ಕಕಾರ ಗಕಾರವಾಗಿ ಆದೇಶವಾಗುತ್ತದೆ.

(ಕ) ಕೊಳಲುಗುಂಡಿ ಕೋಣನಗುಂಡಿ

ವಸ್ತು ಮತ್ತು ಪ್ರಾಣಿವಾಚಿಯಾದ ಅಂಶವನ್ನು ನಿರ್ದಿಷ್ಟಭಾಗವು ಹೊಂದಿದೆ.

ದುರ್ಗ

ನಿರ್ಮಾಣವಾಚಿ. ಸಂಸ್ಕೃತ ಪದವಾಗಿದೆ. ಕೋಟೆ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ರಕ್ಷಣೆಗಾಗಿ ಕಟ್ಟಿಕೊಂಡಿರುವ ಅಗಲವಾದ ಗೋಡೆಯ ಪ್ರದೇಶ. ಪ್ರಾಕೃತಿಕವಾಗಿಯೂ ಈ ರೀತಿಯ ಲಕ್ಷಣ ಹೊಂದಿರಬಹುದು.

(ಕ) ಹೊಸದುರ್ಗ

(ಮಾ) ಸಾವನದುರ್ಗ

ಸಾವನದುರ್ಗವನ್ನು ಸಾಮಂತನದುರ್ಗವೆಂಬ ಉಲ್ಲೇಖಗಳು ಇತಿಹಾಸ ಗ್ರಂಥಗಳಲ್ಲಿ ಸಿಗುತ್ತವೆ. ನಿರ್ದಿಷ್ಟಭಾಗದಲ್ಲಿ ವ್ಯಕ್ತಿವಾಚಿ ಕಾಣಿಸಿಕೊಂಡಿದೆ. ಹೊಸದುರ್ಗದ ಪಕ್ಕದ ರಾಮದೇವರ ದುರ್ಗದಲ್ಲಿಯೂ ಹಳೆಯ ಕಾಲದ ಶಿಥಿಲಾವಸ್ಥೆಯಲ್ಲಿರುವ ಹಳೆದುರ್ಗವಿದೆ. ಇದರ ಹಿನ್ನೆಲೆಯಲ್ಲಿ ಹೊಸದುರ್ಗವೆಂಬ ಊರು ನಿರ್ಮಾಣಗೊಂಡಿರಬಹುದು.

ಬಾಗಿಲು

ಕೋಟೆಯ ಬಾಗಿಲು ಚಾರಿತ್ರಿಕವಾಗಿ ನಿರ್ಮಿತವಾದ ನಿರ್ಮಾಣವಾಚಿ. ಶತ್ರುಗಳಿಂದ ರಕ್ಷಣೆ ಪಡೆಯಲು, ಶತ್ರುಗಳ ಧಾಳಿಯನ್ನು ತಡೆಯುವ ಸ್ಥಳವಾಗಿದೆ. ಪ್ರಾಕೃತಿಕವಾಗಿ ಕಿರಿದಾದ ಸ್ಥಳದಲ್ಲಿ ಶತ್ರುಗಳನ್ನು ಅಡ್ಡಗಟ್ಟಿ ದಾಳಿಮಾಡಲು ಸಹಾಯಕವಾದ ಸ್ಥಳ ಇದಾಗಿದೆ.

(ರಾ) ಐವಾಗಿಲು ತಡಿಕವಾಗಿಲು

ಬಾವಿ

ಜಲವಾಚಿಪದ. ವಾಪಿ ಪದದ ತದ್ಭವ ರೂಪ 'ಬಾವಿ'ಯಾಗಿದೆ. ನೀರು ನಿಂತಿರುವ ಆಳವಾದ ಹಳ್ಳ, ತಗ್ಗು ಪ್ರದೇಶವಾಗಿದೆ. ಪ್ರಾಕೃತಿಕವಾದ ಅಥವಾ ಕೃತಕ ನಿರ್ಮಾಣವಾಚಿಯಾಗಿರಬಹುದು. ನಿರ್ದಿಷ್ಟದ ಮೂಲಕ ಪ್ರಾಕೃತಿಕ ಅಥವಾ ಕೃತಕ ನಿರ್ಮಾಣವಾಚಿಯೆಂಬುದನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಕೃತಕ ನೀರಿನ ಆಸರೆ[೨೮] ಎಂಬರ್ಥವಿದೆ.

(ರಾ) ಕುತರಬಾವಿ

(ಮಾ) ಚಕ್ರಬಾವಿ

ಚಕ್ರಬಾವಿಯನ್ನು ಶಾಸನವೊಂದರಲ್ಲಿ ಚಿಕ್ಕರಬಾವಿ ಎಂದು ಹೆಸರಿಸಲ್ಪಟ್ಟಿದೆ. ಗ್ರಾಮನಾಮಗಳ ಮಧ್ಯದಲ್ಲಿ ಬರುವ 'ರ'ಕಾರ ಜನಾಂಗಗಳನ್ನು ಸೂಚಿಸುತ್ತಿರುತ್ತದೆ ಎಂಬುದು ಡಾ.ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯದಂತೆ ಕುತರ, ಚಿಕ್ಕರ ಎಂಬ ಜನಾಂಗಗಳು ನೆಲೆಸಿದ ಊರುಗಳು ಅವಾಗಿರಬಹುದು.

ಮಡು

ಮಡ, ಮಡವು, ಮಡುವು, ಮಡುಹು, Deep Water: a pool) ದೊಣೆ[೨೯] ಕಂತವಾದ ಗುಂಡಿ, ಆಳವಾದ ನೀರಿರುವ ನದಿಯ ಭಾಗ[೩೦] ಎಂಬರ್ಥದಲ್ಲೂ ಬಳಕೆಯಲ್ಲಿವೆ.

(ಕ) ಎಡಮಡು

(ಮಾ) ಕಾಗಿಮಡು

(ರಾ) ಇಟ್ಟಮಡು

(ಚ) ಗೆಂಡೆಮಡು

ವಾರ್ಗಿಕ 'ಮಡು'ಗೆ ನಿರ್ದಿಷ್ಟಗಳಾಗಿ ದಿಗ್ವಾಚಕ, ಪಕ್ಷಿವಾಚಿ, ವಸ್ತುವಾಚಿ, ಸಸ್ಯವಾಚಿಗಳು ಬಂದಿವೆ.

ಮೆಟ್ಟಿಲು

ನಿರ್ಮಾಣವಾಚಿ ಪದ. ಮೆಟ್ಲು, ಮೆಟ್ಟಿಲು, ಪಾವಟಿಗೆ, ಸೋಪಾನ್[೬೧] ಮೆಟ್ಟುವ ತಾಣ, ಸೋಪಾನ, ಪಾವಟಿಗೆ, ಮೆಟ್ಟಿಕೆ[೬೨] ಎಂಬರ್ಥದಲ್ಲೂ ಬಳಕೆಯಲ್ಲಿವೆ.

(ಕ) ಮಲ್ಲಿಗೆ ಮೆಟ್ಟಿಲು

ಸಮುದ್ರ-ಸಂದ್ರ

ಜಲವಾಚಿ ವಾರ್ಗಿಕ, ಸಾಗರ, ಸಮುದ್ರದ ಪರ್ಯಾಯಪದ. The Sea, The Ocean[೬೩] ಜಲವಾಚಿ, ಕಡಲು, ಸಾಗರ[೬೪] ಇದು ಸಾಮಾನ್ಯವಾಗಿ ವಾಚ್ಯಾರ್ಥವಾಗಿ ಬಳಕೆಗೊಂಡಿಲ್ಲ. ಕೆರೆ, ಕುಂಟೆ ಮುಂತಾದವುಗಳನ್ನೇ ಉತ್ಪ್ರೇಕ್ಷೆ ಮಾಡಿ ಸಮುದ್ರ, ಸಾಗರ ಎಂಬ ಪದಗಳ ಬಳಕೆ ಮಾಡಿದ್ದಾರೆ. ಸಮುದ್ರ>ಸಂದ್ರವಾಗಿ ಅಂದರೆ ಅನುನಾಸಿಕ 'ಮ್' ಕಾರ 'ಬಿಂದು'ವಾಗಿ ಉಚ್ಛರಣೆಗೊಂಡು ಸ್ಥಿತ್ಯಂತರಗೊಂಡಿರಬಹುದು.

(ಕ)	ಅಲಾಳ ಸಂದ್ರ	ಕಾಡುಜಕ್ಕಸಂದ್ರ	ಕೆರಳಾಳುಸಂದ್ರ
	ಕೋಣಸಂದ್ರ	ಚನ್ನಸಂದ್ರ	ಚೋಕಸಂದ್ರ
	ಜಕ್ಕಸಂದ್ರ	ತಾಮಸಂದ್ರ	ತೋಕಸಂದ್ರ
	ದ್ಯಾವಸಂದ್ರ	ನಿಡಗಲ್ಅರಳಾಳುಸಂದ್ರ	ಬಸವಾಪಟ್ಟಣವೀರಸಂದ್ರ
	ಬೊಮ್ಮಸಂದ್ರ	ಭೀಮಸಂದ್ರ	ಮಾರಸಂದ್ರ
	ರಾಯಸಂದ್ರ	ವಿರುಪಸಂದ್ರ	ವೀರಸಂದ್ರ
	ಸಿಂಗಸಂದ್ರ		
(ರಾ)	ಅಳ್ಳಾಳಸಂದ್ರ	ಲಕ್ಕಸಂದ್ರ	ವಿರೂಪಸಂದ್ರ
	ಹರಿಸಂದ್ರ		
(ಚ)	ಅರಳಾಳಸಂದ್ರ	ಕನ್ನಸಂದ್ರ	ಗುಮ್ಮಸಂದ್ರ
	ನೀಲಸಂದ್ರ	ವಿರೂಪಸಂದ್ರ	
(ಮಾ)	ಕನ್ನಸಂದ್ರ	ಮಾಯಸಂದ್ರ	ಮಾರಸಂದ್ರ
	ಗುಮ್ಮಸಂದ್ರ	ತಿಪ್ಪಸಂದ್ರ	ತಿಮ್ಮಸಂದ್ರ
	ಲಕ್ಕಸಂದ್ರ	ಶಿವನಸಂದ್ರ	ನಾರಸಂದ್ರ
	ಬಿಟ್ಟಸಮುದ್ರ	ಬೈರಸಂದ್ರ	ಮಲ್ಲಸಂದ್ರ

ಇವುಗಳ ನಿರ್ದಿಷ್ಟದಲ್ಲಿ ವ್ಯಕ್ತಿವಾಚಿ, ಪ್ರಾಣಿವಾಚಿ, ದೈವವಾಚಿ, ಜನಾಂಗ ವಾಚಿ ಮುಂತಾದ ಅಂಶವನ್ನು ಸೂಚಿಸುವ ಪದಗಳಾಗಿ ಬಂದಿವೆ. ಅತಿ ಹೆಚ್ಚಾಗಿ ವ್ಯಕ್ತಿವಾಚಿಗಳು ಬಂದಿದ್ದು, ಇದರಲ್ಲಿ ವ್ಯಕ್ತಿಯು ಇವುಗಳ ನಿರ್ಮಾಣದ ಕಾರ್ಯದಲ್ಲಿ ತನ್ನ ಹೆಸರು ಶಾಶ್ವತವಾಗಿರಬೇಕೆಂಬ ಪರಿಕಲ್ಪನೆ ಇದ್ದಂತಿದೆ. ಜಲವಾಚಿಯಾದ ಇದು ಊರ ಸಮೀಪ ಅಥವಾ ಮಧ್ಯ ಭಾಗದಲ್ಲಿ ಕೆರೆ ಕಟ್ಟೆಗಳನ್ನು ಕಾಣಲು ಸಾಧ್ಯ.

ಸಾಗರ

ಜಲವಾಚಿಯಾದ ಪದ. ಸಮುದ್ರ ಪದಕ್ಕೆ ಪರ್ಯಾಯಪದವಾಗಿ ಬಳಕೆಗೊಂಡಿದೆ. ದೊಡ್ಡದಾದ ಕೆರೆ, ಕುಂಟೆಯನ್ನು ಸಾಗರ ಎಂದು ಬಳಸುವುದರ ಮೂಲಕ ಉತ್ಪ್ರೇಕ್ಷೆ ಮಾಡಿರುವ ಸಂಭವ ಉಂಟು. ಮಹಾಸಮುದ್ರ, ವಿಶಾಲವಾದ ಕಡಲು[೬೫]

(ಕ) ಕಂಸಾಗರ

(ರಾ) ಲಕ್ಷ್ಮಿಸಾಗರ

(ಚ) ಬುಕ್ಕಸಾಗರ

(ಮಾ) ಕಮ್ಮಸಾಗರ ಮುತ್ತಸಾಗರ ಮತ್ತಸಾಗರ ಕೆಂಪಸಾಗರ

ಕಮ್ಮಸಾಗರ>ಕಂಸಾಗರವಾಗಿರಬೇಕು

'ಸಾಗರ' ನಿರ್ಮಾಣವಾಚಿಯಾದದ್ದು. ನಿರ್ಮಿಸಿದವರ ಅಥವಾ ಅವರ ಪ್ರೀತಿಪಾತ್ರದವರ ಹೆಸರು ನಿರ್ದಿಷ್ಟಭಾಗದಲ್ಲಿ ಬಂದಿರುವುದನ್ನು ಪೂರ್ವದಲ್ಲಿನ ಅವರ ವ್ಯಕ್ತಿವಾಚಕಗಳೇ ಸೂಚಿಸುತ್ತಿರುವುದನ್ನು ಕಾಣಬಹುದು.

೩.೩.೩. ಸಂಕೀರ್ಣ

ಅ. ಪ್ರತಿಕರಣ ಸ್ಥಳನಾಮಗಳು (Duplication Place Names)

ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಒಂದೇ ಹೆಸರಿನ ಗ್ರಾಮನಾಮ, ಸ್ಥಳನಾಮಗಳು ಕಂಡುಬರುತ್ತವೆ. ಇಂತಹುಗಳಿಗೆ ಪ್ರತಿನಾಮಕರಣ ಸ್ಥಳನಾಮಗಳೆಂದು ಹೆಸರು. ಇದಕ್ಕೆ ಭೌಗೋಳಿಕ ಸ್ಥಿತಿ, ಐತಿಹಾಸಿಕ ಘಟನೆಗಳು, ಆಡಳಿತ ಹಾಗೂ ಧಾರ್ಮಿಕ ಸ್ಥಿತಿಗತಿಗಳು ಕಾರಣವಿರಬಹುದು. ಅದಕ್ಕಿಂತಲೂ ಮುಖ್ಯವಾಗಿ ಗ್ರಾಮನಾಮ, ಸ್ಥಳನಾಮಗಳಿಗೆ ನಾಮಕರಣ ಮಾಡುವವರು ಪಕ್ಕದ ಊರಿನವರೆಂಬುದನ್ನು ಮರೆಯಬಾರದು. ತನ್ನ ಗ್ರಾಮನಾಮದ ಮಧುರ ಬಾಂಧವ್ಯ ಮತ್ತು ಪ್ರೀತಿಗಾಗಿಯೂ ಕಾರಣವಾಗಿರಬಹುದು. ಗ್ರಾಮೀಣ ಪರಿಸರದ ನಮ್ಮ ಜನಪದರ ನಂಬಿಕೆ, ಸಂಪ್ರದಾಯ, ಆಚರಣೆ, ದೈವ ಮುಂತಾದುವುಗಳನ್ನು ತಮ್ಮ ನೆಲೆಗಳಿಗೆ ಇಡುವ ಜಾಯಮಾನವಿದೆ. ಬಹುಬೇಗನೆ ಊರುಗಳ ಸಂಖ್ಯೆ ಮಿತಿಮೀರಿ ಬೆಳೆದದ್ದರಿಂದ ಹೆಚ್ಚು ಹೆಚ್ಚು ಹೆಸರುಗಳ ಅಗತ್ಯತೆ ತಲೆದೋರಿ, ಅವು ಪುನರಾವರ್ತನೆಯಾಗಿರಲು ಸಾಧ್ಯವಿದೆ. ಇಲ್ಲವೆ ವ್ಯಕ್ತಿಗೌರವ, ಸ್ಥಳಾಭಿಮಾನ, ನಾಮ ವಿಶ್ವಾಸದ ಕಾರಣಬಲದಿಂದಲೂ ಒಂದೇ ಹೆಸರಿನ ಊರು; ಅನೇಕ ಕಡೆ ಚಾಲ್ತಿಯಲ್ಲಿರಬಹುದು. ಪ್ರಕೃತಿಯಲ್ಲಿ ಕಂಡುಬರುವ ಮರಗಿಡ, ಬೆಟ್ಟ, ನದಿ ಮೊದಲಾದ ವಸ್ತುಗಳಿಗೆ ಪುರಾಣ ಸಂಬಂಧಿಯಾದ ವ್ಯಕ್ತಿಗಳನ್ನು ಆರೋಪಿಸುವ ಮೂಲಕ ಸ್ಥಳನಾಮಕರಣ ಮಾಡಿರುವುದನ್ನು ಕಾಣುತ್ತೇವೆ. ಎಲ್ಲ ಜನಪದರ ಸಂವೇದನೆಗಳು ಕೂಡ ಮೇಲೆ ತಿಳಿಸಿದಂತೆಯೇ ಇರುವುದರಿಂದ ಏಕಮಾದರಿಯ ಸ್ಥಳನಾಮಗಳು ಕಂಡು ಬರುವುದನ್ನು ಕಾಣಬಹುದು.

(ಮಾ.ಚ)	ಅಜ್ಜನಹಳ್ಳಿ	(ಚ.ರಾ.ಕ)	ಅತ್ತಿಗುಪ್ಪೆ, ಹುಣಸನಹಳ್ಳಿ
(ಕ.ಚ.ಮಾ)	ಕೋಡಿಹಳ್ಳಿ	(ರಾ.ಕ)	ಹನಮನಹಳ್ಳಿ
(ಚ.ಕ)	ಅರಳಾಸಂದ್ರ	(ಚ.ಮಾ)	ಅವ್ವೇರಹಳ್ಳಿ
(ರಾ)	ಅಂಕನಹಳ್ಳಿ	(ಕ.ರಾ)	ಕುರುಬರಹಳ್ಳಿ
(ಕ.ಚ)	ಕೋಡಿಪುರ	(ಮಾ.೨)	ಕೋರಮಂಗಲ
(ರಾ.ಚ)	ಗೊಲ್ಲರಪಾಳ್ಯ	(ಚ-೨, ಕ-೨)	ಗೊಲ್ಲರಹಳ್ಳಿ
(ಮಾ-೨, ರಾ)	ಚಿಕ್ಕೇನಹಳ್ಳಿ	(ರಾ-೨ ಕ)	ಬನ್ನಿಕುಪ್ಪೆ
(ಕ.ಮಾ)	ನಾರಾಯಣಪುರ	(ಮಾ-೨)	ಬ್ಯಾಡರಹಳ್ಳಿ
(ಮಾ-೨)	ಬೀಚನಹಳ್ಳಿ	(ಕ-೨-ಮಾ)	ಮಲ್ಲಾಪುರ
(ಕ.ಚ.ಮಾ)	ಹಾರೋಹಳ್ಳಿ	(ಮಾ-೩, ಕ-೨ ಚ)	ಹೊಸಹಳ್ಳಿ
(ಚ-೨.ಕ-೨.ಮಾ)	ಹೊನ್ನಿಗನಹಳ್ಳಿ	(ಮಾ-೨)	ಹುಲುವೇನಹಳ್ಳಿ
(ಮಾ-೨.ಕ)	ರಾಮನಹಳ್ಳಿ	(ಮಾ-೨)	ಲಕ್ಕೇನಹಳ್ಳಿ
		(ಕ.ರಾ)	ಶಿವನಹಳ್ಳಿ

ಈ ಪ್ರತಿಕರಣ ಸ್ಥಳನಾಮಗಳನ್ನು ಗಮನಿಸಿದಾಗ ಸಮುದಾಯವಾಚಿ, ವೃತ್ತಿವಾಚಿ, ವ್ಯಕ್ತಿವಾಚಿ, ಜಲ ಸಂಬಂಧಿವಾಚಿ, ಸಸ್ಯವಾಚಿ, ಪ್ರಕೃತಿವಾಚಿ ಮೊದಲಾದ ಅಂಶಗಳು ಬಂದಿವೆ. ಇದಕ್ಕೆ ಸಮಾನವಾದ ಭೌಗೋಳಿಕ ಪರಿಸರ ಮತ್ತು ಸಾಂಸ್ಕೃತಿಕ ಅಂಶಗಳು ಪ್ರಭಾವ ಬೀರಿರಬಹುದು. ಈ ರೀತಿಯಾದ ಪ್ರತಿಕರಣ ಸ್ಥಳನಾಮಗಳು ಉಳಿದ ಬೇರೆ ಬೇರೆ ಪ್ರದೇಶಗಳಲ್ಲಿಯೂ ಕಂಡುಬರಬಹುದು.

ಆ. ಸಾಪೇಕ್ಷ ಸ್ಥಳನಾಮಗಳು (Relative Place Names)

ಸ್ಥಳನಾಮಗಳ ನಿರ್ದಿಷ್ಟ ಭಾಗದ ಆದಿಯಲ್ಲಿ ದೊಡ್ಡ, ಸಣ್ಣ, ಕಿರಿಯ, ಹಿರಿಯ, ಹಳೆಯ, ಹೊಸ, ತಗ್ಗು, ತಿಟ್ಟು ಮೊದಲಾದ ವಿಶೇಷಣಗಳನ್ನು ಬಳಸುವುದರಿಂದ ನಿರ್ದಿಷ್ಟದ ಸಂಖ್ಯೆ ಹೆಚ್ಚಾಗುತ್ತದೆ. ಈ ರೀತಿಯಾದ ಸಾಪೇಕ್ಷ ಸ್ಥಳನಾಮಗಳು ಸಮೀಪವರ್ತಿಯಾದ ಗ್ರಾಮಗಳಾಗಿರುತ್ತವೆ. ಒಂದು ಗ್ರಾಮದಿಂದ ಮತ್ತೊಂದು ಗ್ರಾಮವನ್ನು ಬೇರ್ಪಡಿಸಿ, ಭೌಗೋಳಿಕ ಚಹರೆಯನ್ನು ಗುರುತಿಸಲು ಇಂಥ ವಿಶೇಷಣಗಳು ಬಳಕೆಯಾಗಿರುವುದನ್ನು ನೋಡಬಹುದು.

(ಮಾ)	ಚಿಕ್ಕಕಲ್ಯ	ಚಿಕ್ಕತೊರೆಪಾಳ್ಯ	ಚಿಕ್ಕಮಸಕಲ್ಲು
	ಚಿಕ್ಕಮೂಡಿಗೆರೆ	ಚಿಕ್ಕಸೋಲೂರು	ಚಿಕ್ಕಹಳ್ಳಿ
	ಚಿಕ್ಕೇಳ್ಳೂರು	ದೊಡ್ಡಮಾರನಹಳ್ಳಿ	ದೊಡ್ಡಮೂಡಿಗೆರೆ
	ದೊಡ್ಡಮಸಕಲ್ಲು	ದೊಡ್ಡಸೋಮನಹಳ್ಳಿ	ದೊಡ್ಡಹಳ್ಳಿ
	ಹೊಸಹಳ್ಳಿ		

(ಚ)	ಚಿಕ್ಕಮಳೂರು	ಹಳೇಹಳ್ಳಿ	ಹೊಸಹಳ್ಳಿ
(ರಾ)	ಚಿಕ್ಕಕುಂಟನಹಳ್ಳಿ,	ಚಿಕ್ಕಗಂಗವಾಡಿ	ಚಿಕ್ಕಮಣ್ಣುಗುಡ್ಡೆ
	ಚಿಕ್ಕಸೂಲಿಕೆರೆ	ದೊಡ್ಡಗಂಗವಾಡಿ	ದೊಡ್ಡಮಣ್ಣುಗುಡ್ಡೆ
	ದೊಡ್ಡಸೂಲಿಕೆರೆ	ಹಿರೇಹಳ್ಳಿ	ಹೊಸದೊಡ್ಡಿ
	ಹೊಸೂರು		
(ಕ)	ಚಿಕ್ಕಕಲ್‌ಬಾಳು	ಚಿಕ್ಕದೇವರಹಳ್ಳಿ	ಚಿಕ್ಕಬೆಟ್ಟಹಳ್ಳಿ
	ಚಿಕ್ಕಮರಳವಾಡಿ	ಚಿಕ್ಕಮಾದುಡೆ	ಚಿಕ್ಕಮುಕ್ಕೋಡ್ಲು
	ಚಿಕ್ಕ ಮುದವಾಡಿ	ಚಿಕ್ಕಸಾದೇನಹಳ್ಳಿ	ಚಿಕ್ಕಾಲಹಳ್ಳಿ
	ಚಿಕ್ಕೊಪ್ಪ	ಚಿಕ್ಕ ಬೆಜ್ಜಲಹಟ್ಟಿ	ದೊಡ್ಡಕಬ್ಬಹಳ್ಳಿ
	ದೊಡ್ಡಕಲ್ಲುಬಾಳು	ದೊಡ್ಡಕೊಪ್ಪ	ದೊಡ್ಡಗುಳಿ
	ದೊಡ್ಡಬೆಜ್ಜಲಹಟ್ಟಿ	ದೊಡ್ಡಮರಳವಾಡಿ	ದೊಡ್ಡಮುದವಾಡಿ
	ದೊಡ್ಡಸಾದೇನಹಳ್ಳಿ	ಹೊಸಕೋಟೆ	ಹೊಸದುರ್ಗ
	ಹೊಸದೊಡ್ಡಿ	ಹೊಸಹಳ್ಳಿ	

ಇ. ವಿಶೇಷಣಯುಕ್ತ ಸ್ಥಳನಾಮಗಳು

ಒಂದು ಸ್ಥಳ; ಗ್ರಾಮಕ್ಕೆ ಈಗಾಗಲೇ ಒಂದು ಸ್ಥಳನಾಮವಿದ್ದು ಅದೇ ಹೆಸರಿನ ಮತ್ತೊಂದು ಸ್ಥಳವಿದ್ದರೆ ಅದನ್ನು ಮತ್ತೊಂದರಿಂದ ಬೇರ್ಪಡಿಸಲು ಇಂಥ ವಿಶೇಷಣಗಳ ಬಳಕೆ ಇರುವುದನ್ನು ಕಾಣಬಹುದು. ಸಾಮಾನ್ಯವಾಗಿ ಈ ಬಗೆಯ ವಿಶೇಷಣಗಳು ನಿರ್ದಿಷ್ಟದ ಆದಿಭಾಗದಲ್ಲಿ ಕಾಣಿಸಿಕೊಳ್ಳುವುದುಂಟು. ಭೂವಿವರಣೆ, ವಸ್ತು, ಜಾತಿ, ವೃತ್ತಿ, ವ್ಯಕ್ತಿಯ ಗುಣ, ಗಾತ್ರ, ಬಣ್ಣ, ಪ್ರಾಣಿ, ಪಕ್ಷಿ, ದೈವ ಮೊದಲಾದವು ವಿಶೇಷಣಗಳಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಈ ವಿಶೇಷಣಗಳು ವಾರ್ಗಿಕದಲ್ಲಿ ಬರುವುದಿಲ್ಲ. ಅಂತಹ ಕೆಲವುಗಳು ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿ ಕಂಡುಬರುತ್ತವೆ.

(ಕ)	ಅಜ್ಜಬಸವನಹಳ್ಳಿ	ಅರೆಹೊಸಹಳ್ಳಿ	ಹಳ್ಳಿಮಾರನಹಳ್ಳಿ
	ಆನೆಹೊಸಹಳ್ಳಿ	ಇನಾಮ ಚಿಕ್ಕೋಪ್ಪ	ಕಣಿವೆಮಾದಪುರ
	ಹಣಕಡಬೂರು	ಕಾಡುಜಕ್ಕಸಂದ್ರ	ಕೊಕ್ಕರೆ ಹೊಸಹಳ್ಳಿ
	ಗುಡ್ಡೇವೀರನಹೊಸಹಳ್ಳಿ	ಗುಂಡಿನಗೊಲ್ಲಹಳ್ಳಿ	ತಿಗಳರಹೊಸಹಳ್ಳಿ
	ತಿಟ್ಟಮೇಲಿನಗೊಲ್ಲಹಳ್ಳಿ	ತುರುಕರಹೊಸಹಳ್ಳಿ	ದೇವರಕಗ್ಗಲಹಳ್ಳಿ
	ಬೇಲಿಕೊತ್ತನೂರು	ಮರಳೆಬೇಕುಪ್ಪೆ	ಮಲ್ಲಪ್ಪನ ಹೊಸಹಳ್ಳಿ
	ಹಾರೋಶಿವನಹಳ್ಳಿ	ಹುಣಸನಕೋಡಿಹಳ್ಳಿ	
(ರಾ)	ಕಲ್ಲುಗೋಪಹಳ್ಳಿ	ಕುರುಬರಕರೇನಹಳ್ಳಿ	ಕೆಂಪವಡೇರಹಳ್ಳಿ
	ಕೋಲಮಾರನಕುಪ್ಪೆ	ಬಳೆವೀರನಹಳ್ಳಿ	ಬಿಲ್ಲಕೆಂಪನಹಳ್ಳಿ
	ಬೊಮ್ಮಚಾನಹಳ್ಳಿ		

(ಚ)	ಎಲೆತೋಟದಹಳ್ಳಿ	ಎಲೆಹೊಸಹಳ್ಳಿ	ಕಾಡುಕೊತ್ತನಹಳ್ಳಿ
	ಕೋಡಿಹೊಸಹಳ್ಳಿ	ಗುಡ್ಡೆಹೊಸೂರು	ತೊರೆಹೊಸೂರು
	ದೇವರ ಕಗ್ಗಲಹಳ್ಳಿ	ಹೊಟ್ಟಿಗನ ಹೊಸಹಳ್ಳಿ	
(ಮಾ)	ಕದುರಮನಹಳ್ಳಿ	ಕಲ್ಯಾಣವಡೇರಹಳ್ಳಿ	ಕಾಡುರಾಮನಹಳ್ಳಿ
	ಗುಡೆಮಾರನಹಳ್ಳಿ	ಚೌಡಿಬೇಗೂರು	ತ್ರಿಪುರಾಂಬಕಚನ್ನಪುರ
	ತೊರೆಚೆನ್ನೋಹಳ್ಳಿ	ತೊರೆರಾಮನಹಳ್ಳಿ	ನಸರುಮಾವಿನಕಟ್ಟೆ
	ಪುನಗುಮಾರನಹಳ್ಳಿ	ಮರಿಸೋಮನಹಳ್ಳಿ	ಸಾದಮಾರನಹಳ್ಳಿ
	ಸುಬ್ರಾಯಬ್ಯಾಡರಹಳ್ಳಿ	ಹಂಚಿಬಸವನಪಾಳ್ಯ	

ಈ. ವರ್ಣ ಸೂಚಕ ಸ್ಥಳನಾಮಗಳು

ಭೌಗೋಳಿಕ ವಸ್ತುಗಳಾದ ಮಣ್ಣು, ಕಲ್ಲು, ನೀರು, ಸಸ್ಯ ಸಂಪತ್ತು ಮೊದಲಾದವುಗಳನ್ನು ಪರಿಸರಕ್ಕನುಗುಣವಾಗಿ ಕಪ್ಪು, ಬಿಳಿ, ಕೆಂಪು ಬಣ್ಣಗಳಿಂದ ಕೂಡಿವೆ. ಇವುಗಳು ನಿಸರ್ಗವಾಚಿ ಸ್ಥಳನಾಮಗಳ ನಿರ್ದಿಷ್ಟ ಭಾಗದಲ್ಲಿ ಅಥವಾ ನಿರ್ದಿಷ್ಟಭಾಗದ ಆದಿಯಲ್ಲಿ ಉಪ ಆಕೃತಿಮಾವಾಗಿ ಸ್ಥಳನಾಮಗಳಲ್ಲಿ ಕಾಣಿಸಿಕೊಂಡು ಬಳಸಲ್ಪಡುತ್ತಿವೆ.

(ಕ)	ಕಗ್ಗಲಹಳ್ಳಿ	ಕೆಬ್ಬೆಹಳ್ಳಿ	ಕೆಬ್ಬರೆ
	ಕೆಮ್ಮಾಳೆ	ಕೆಂಗಲನತ್ತಹಳ್ಳಿ	ಕೆಂಪಲನತ್ತ
	ದೇವರಕಗ್ಗಲಹಳ್ಳಿ	ಬಿಳಿಕಲ್ಅರಣ್ಯ	ಬಿಳಿದಾಳೆ.
(ರಾ)	ಬಿಳಗುಂಬ	ಕೆಂಗಲ್	
(ಚ)	ಬೆಳಕೆರೆ		
(ಮಾ)	ಕರಿಗಿರಿಪುರ	ಕರಿಯಹಳ್ಳಿ	ಕೆಂಕೆರೆ
	ಬೆಳಗವಾಡಿ	ಬೆಳಗುಂಬ.	

ಕೆಬ್ಬೆಹಳ್ಳಿ: ಕೆಂಪು>ಕೆಬ್ಬೆ+ಹಳ್ಳಿ, ಕೆಬ್ಬರೆ: ಕೆಂಪು>ಕೆಬ್ಬೆ+ಅರೆ, ಕೆಮ್ಮಾಳೆ: ಕೆಂಪು>ಕೆಮ್>ಮಾಳ, ಕೆಂಕೆರೆ: ಕೆಂಪು>ಕೆಮ್>ಕೆರೆ, ಕೆಂಗಲ್: ಕೆಂಪು+ಕಲ್

ಕೆಬ್ಬೆ, ಕೆಮ್‌ಗಳು ಕೆಂಪು, ಕೆಂಪುತನವನ್ನು ಒಳಗೊಂಡಿದೆ. ಆ ಪ್ರದೇಶದಲ್ಲಿರುವ, ಅರೆ, ಮಾಳ (ಬಯಲು), ಕೆರೆಯನೀರು, ಎಲ್ಲವೂ ಕೆಂಪು ಬಣ್ಣದಿಂದ ಕೂಡಿರುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಬಿಳಿ+ತಾಳೆ-ಬಿಳಿದಾಳೆ: ಬಿಳಿಯ ತಾಳೆಮರ ನೆಲೆ ಎಂಬರ್ಥವನ್ನು ಕೊಡುತ್ತದೆ. ಬೆಳಕು+ಕುಂಭ-ಬೆಳಕುಕುಂಭ>ಬೆಳಗುಂಭ>ಬೆಳಗುಂಬ ಆಗಿರುವ ಸಾಧ್ಯತೆ ಇದೆ. ಬಿಳಿಯ ಕುಂಭವಿರುವ ನೆಲೆ. ಬಿಳಿ, ಬೆಳಗು-ಬಿಳಿಯ ಬಣ್ಣವನ್ನು ಸೂಚಿಸುತ್ತದೆ.

ಆ ಪ್ರದೇಶದ ಭೌಗೋಳಿಕ ಪರಿಸರದಲ್ಲಿರುವ ಕಲ್ಲು, ಮಣ್ಣು, ನೀರಿನ ಬಣ್ಣ, ಸಸ್ಯ ಮುಂತಾದುವನ್ನು ಈ ವರ್ಣ ಸೂಚಕ ವಿಶೇಷಣಗಳು ವರ್ಣಿಸುತ್ತವೆ. ಕಪ್ಪು, ಬಿಳಿ, ಕೆಂಪು ಈ ಮೂರು ಬಣ್ಣಗಳು ನಿರ್ದಿಷ್ಟ ಸ್ಥಾನದಲ್ಲಿ ಬಂದಿರುವುದನ್ನು ಕಾಣಬಹುದು.

ಹೀಗೆ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕವಾಗಿ ವರ್ಗೀಕರಣವನ್ನು ಮಾಡಿ ತೋರಿಸಲಾಗಿದೆ. "ಇಷ್ಟಾದರೂ ವರ್ಗೀಕರಣ ಸಮಸ್ಯೆ ಬಗೆಹರಿದಂತೆ ಕಾಣುವುದಿಲ್ಲ. ಅರ್ಥಬಾಹುಳ್ಯ; ವೈವಿಧ್ಯತೆಗಳಿಂದಾಗಿ ಆ ಈ ವರ್ಗಗಳಿಗೆ ಸೇರದ ಹಲವು ಹೆಸರು ಅವುಗಳ ಹೊರಗುಳಿಯುತ್ತವೆ. ಕೆಲವು ಸಾರಿ ಯಾವ ಅರ್ಥಗ್ರಾಹ್ಯ, ಯಾವುದು ತ್ಯಾಜ್ಯ ಎಂಬ ಸಂದೇಹಕ್ಕೆ ಎಡೆಯಾಗುವುದುಂಟು"[೬೬] ಇದು ಸ್ಥಳನಾಮಗಳಲ್ಲಿನ ಅರ್ಥ ವೈಶ್ಯಾಲತೆ ಮತ್ತು ಬಹುಮುಖತೆಯನ್ನು ತೋರಿಸುವುದು.

ಕೊನೆ ಟಿಪ್ಪಣಿಗಳು

೧. ಅರ್ಕೆ ಮಣಿಪಾಲ, ಹೆಸರಿನಲ್ಲೇನಿದೆ? ಪುಟ.೯-೧೦, ೧೯೯೯

೨. ದೇಜಗೌ, ಸ್ಥಳನಾಮ ವ್ಯಾಸಂಗ, ಪುಟ.೬೪, ೧೯೯೦

೩. ಅದೇ, ಪುಟ.೭೭, ೧೯೯೦

೪. ಅರ್ಕೆ ಮಣಿಪಾಲ, ಹೆಸರಿನಲ್ಲೇನಿದೆ? ಪುಟ.೨೦, ೧೯೮೯

೫. ಸಿ.ಅ, ಪುಟ.೫೧.

೬. ಸಂಗಮೇಶ ಸವದತ್ತಿಮಠ, ಜನಪದಭಾಷಾ ಸಮೀಕ್ಷೆ, ಪುಟ.೬೨, ೧೯೮೫

೭. ಅರ್ಕೆ ಮಣಿಪಾಲ, ಹೆಸರಿನಲ್ಲೇನಿದೆ?, ಪುಟ.೭೪, ೧೯೮೯

೮. ಅದೇ ಪುಟ. ೭೪-೭೫

೯. ಎಂ.ಎಂ.ಕಲಬುರ್ಗಿ, ಕನ್ನಡ ನಾಮವಿಜ್ಞಾನ, ಪುಟ. ೭೪, ೧೯೮೯

೧೦. ಸಿ.ಅ.ಪುಟ.೮೧

೧೧. ಸಿ.ಅ.ಪುಟ.೧೧೩

೧೨. ಸಿ.ಅ.ಪುಟ.೧೧೩

೧೩. ಸಿ.ಅ., ಪುಟ.೧೨೪

೧೪. ಸಿ.ಅ, ಪುಟ.೧೨೭

೧೫. ಕೆಮ್ತೂರು ರಘುಪತಿಭಟ್ಟ, ತುಳುನಾಡಿನ ಸ್ಥಳನಾಮ, ಪುಟ.೧೯, ೧೯೮೧

೧೬. ಕಿ.ನಿ. ಪುಟ.೩೫೮

೧೭. ಕಿ.ನಿ.ಪುಟ.೫೭೮

೧೮. ಕ.ನಿ. ಪುಟ.೨೫೨೧

೧೯. ಸಿ.ಅ, ಪುಟ.೩೭೫

೨೦. ಸಿ.ಅ.ಪುಟ.೩೮೫

೨೧. ದೇಜಗೌ, ಸ್ಥಳನಾಮ ವ್ಯಾಸಂಗ, ಪುಟ.೧೭, ೧೯೯೦

೨೨. ಎಂ.ಚಿದಾನಂದಮೂರ್ತಿ, ವಾಗಾರ್ಥ, ಪುಟ.೧೫, ೧೯೮೧.

೨೩. ಕ.ಕ.ಇ.ನಿ.ಪುಟ.೧೬೬

೨೪. ಡಿ.ಇ.ಡಿ.ನಂ.೬೪೩,ಪುಟ.೬೭

೨೫. ಕೆಮ್ತೂರು ರಘುಪತಿಭಟ್ಟ, ತುಳುನಾಡಿನ ಸ್ಥಳನಾಮಗಳು, ಪುಟ.೫೭-೫೨, ೧೯೮೧

೨೬. ಸಿ.ಅ. ಪುಟ.೨೪೧

೨೭. ಕಿ.ನಿ. ಪುಟ.೮೧೦.

೨೮. ಸಿ.ಅ.ಪುಟ.೨೫೧

೨೯. ಕ.ನಿ.ಪುಟ.೫೧೧೬

೩೦. ಸಿ.ಅ.ಪುಟ.೩೦೮

೩೧. ವ್ಹಿ.ಜಿ.ಪೂಜಾರ, ಕನ್ನಡ ಸಾಹಿತ್ಯ ಸಂಬಂಧ, ಪು.೧೯೦, ೧೯೯೫

೩೨. ಕ.ನಿ. ಪುಟ.೫೯೯೫

೩೩. ಸಿ.ಅ. ಪುಟ.೩೧೧೩

೩೪. ಕ.ನಿ.ಪುಟ.೬೪೧೮

೩೫. ಸಿ.ಅ. ಪುಟ.೩೪೪

೩೬. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೨, ಕರ್ನಾಟಕ ಸ್ಥಳನಾಮಗಳು, ಪುಟ.೭, ೨೦೦೨.

೩೭. ಸಿ.ಅ.ಪುಟ.೩೪೯

೩೮. ಕ.ನಿ. ಪುಟ.೬೮೬೦

೩೯. ಕಿ.ನಿ.ಪುಟ.೧೧೮೯

೪೦. ಎಂ.ಎಂ.ಕಲಬುರ್ಗಿ, ಕನ್ನಡನಾಮ ವಿಜ್ಞಾನ, ಪುಟ.೮೭, ೧೯೯೫.

೪೧. ಎಂ.ಎಂ.ಕಲ್ಬುರ್ಗಿ, ಮಾರ್ಗ .ಸಂ.೨, ಪುಟ.೫೩೩, ೧೯೯೮

೪೨. ಸಿ.ಅ. ಪುಟ.೪೩೧

೪೩. ಸಿ.ಅ.ಪುಟ.೪೯೦

೪೪. ಡಿ.ಇ.ಡಿ. ನಂ.೩೦೦೯, ಪುಟ.೨೬೯

೪೫. ಚೆನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂಧರು, ಪುಟ.೧೧೧, ೧೯೯೫

೪೬. ಚೆನ್ನಬಸಯ್ಯ ಹಿರೇಮಠ, ಕುರುಗೋಡು ಸಿಂದರು, ಪುಟ.೧೧೧, ೧೯೯೫

೪೭. ಡಿ.ಇ.ಡಿ. ನಂ.೩೩೮೧, ಪು.೨೭೪.

೪೮. ಸಿ.ಅ.ಪುಟ.೪೯೭

೪೯. ಸಿ.ಅ.ಪುಟ.೬೮.

೫೦. ಕಿ.ನಿ, ಪುಟ.೩೩೯.

೫೧. ಸಿ.ಅ.ಪುಟ.೧೦೦

೫೨. ಸಿ.ಅ.ಪುಟ.೧೧೨

೫೩. ಸಿ.ಅ. ಪುಟ.೧೧೨

೫೪. ಕ.ಕ.ಇ.ನಿ, ಪುಟ.೧೯೭

೫೫. ಕಿ.ನಿ. ಪುಟ.೫೨೯

೫೬. ಕಿ.ನಿ.ಪುಟ.೫೫೨

೫೭. ಸಿ.ಅ, ಪುಟ.೧೪೮

೫೮. ಸಿ.ಅ.ಪುಟ.೩೪೩

೫೯. ಕಿ.ನಿ. ಪುಟ, ೧೧೮೯

೬೦. ಸಿ.ಅ. ಪುಟ.೩೬೮

೬೧. ಕ.ನಿ. ಪುಟ.೭೩೬೮

೬೨. ಸಿ.ಅ.ಪುಟ.೩೯೭

೬೩. ಕ.ಕ.ಇ.ನಿ.ಪುಟ.೯೦೭

೬೪. ಸಿ.ಅ.ಪುಟ.೪೬೨.

೬೫. ಸಿ.ಅ.ಪುಟ.೪೭೧.

೬೬. ದೇಜಗೌ, ಸ್ಥಳನಾಮ ವ್ಯಾಸಂಗ, ಪುಟ.೭೨-೭೩, ೧೯೯೦

ಅಧ್ಯಾಯ - ೪

ಶಾಸನೋಕ್ತ ಸ್ಥಳನಾಮಗಳು ಮತ್ತು ಭಾಷಾ ವೈಜ್ಞಾನಿಕ ಪರಿಶೀಲನೆ

ಅಧ್ಯಾಯ ೪

ಶಾಸನೋಕ್ತ ಸ್ಥಳನಾಮಗಳು ಮತ್ತು ಭಾಷಾ ವೈಜ್ಞಾನಿಕ ಪರಿಶೀಲನೆ

ಶಾಸನಗಳ ಅಧ್ಯಯನವೆಂದರೆ ಆಳ್ವಿಕೆ ನಡೆಸಿದ ರಾಜರು, ಆ ಕಾಲದ ರಾಜಕೀಯ ವ್ಯವಸ್ಥೆಯನ್ನು, ನಡೆದ ಯುದ್ಧಗಳ ಸೋಲು-ಗೆಲುವುಗಳ ಘಟನಾವಳಿಗಳನ್ನು ದಾಖಲಿಸುವುದಷ್ಟೇ ಶಾಸನಗಳ ಗುರಿ ಹೀಗೆಂದು ಭಾವಿಸಿದರೆ ತಪ್ಪಾಗುತ್ತದೆ. ಶಾಸನಗಳು ಸಾಮಂತರಿಗೆ, ಮಾಂಡಲೀಕರಿಗೆ ಮತ್ತು ಇತರ ಅಧಿಕಾರಿಗಳಿಗೆ ಒಪ್ಪಿಸಿದ ಕೇವಲ ಕರ್ತವ್ಯಗಳ ನಿರೂಪಣೆಯಲ್ಲ ಅಥವಾ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು, ಸಂನ್ಯಾಸಿಗಳ ಮರಣವನ್ನು, ದಾನದ ವಿಷಯವನ್ನು, ಕೆರೆಕಟ್ಟೆ, ದೇವಾಲಯಗಳನ್ನು ಕಟ್ಟಿಸಿದ ವಿಷಯವನ್ನು ಮಾತ್ರ ತಿಳಿಸಿಕೊಡದೆ, ಇಡೀ ಭಾರತೀಯ ಸಂಸ್ಕೃತಿಯನ್ನು ತಿಳಿಸಿಕೊಡುವುದು ಶಾಸನಗಳ ಮೂಲಕವೆಂದರೆ ಅತಿಶಯೋಕ್ತಿಯಲ್ಲ.

ಒಂದು ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಸಾಹಿತ್ಯದಷ್ಟೇ ಶಾಸನಗಳೂ ಮುಖ್ಯ ಆಕರಗಳಾಗುತ್ತವೆ. "ಕನ್ನಡ ನಾಡಿನ ಜೀವನವು ಎಲ್ಲಿಯೂ ಯಾವ ಕೃತಿಗಳಲ್ಲಿಯೂ ಮಡುಗಟ್ಟಿ ನಿಂತಿಲ್ಲ. ಅದು ಕೇವಲ ಕಾವ್ಯಗಳಲ್ಲಿ ಅಲ್ಲಲ್ಲಿ, ಗೋಪ್ಯದ ಜಲದಂತೆ ಕಂಡುಬಂದರೂ, ಹೆಚ್ಚು ಪ್ರಮಾಣದಲ್ಲಿ ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧ ರೂಪದಲ್ಲಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ"[೧] ಎನ್ನುವಾಗ ಶಾಸನಗಳಲ್ಲಿನ ಖಚಿತತೆ, ವಸ್ತುನಿಷ್ಠತೆಯನ್ನು ಗಮನಿಸಬಹುದು. ಇಂಥ "ಶಾಸನಗಳು ಐತಿಹಾಸಿಕ ದಾಖಲೆಗಳಷ್ಟೇ ಅಲ್ಲ, ಸ್ಥಳನಾಮ ಕೋಶಗಳೂ ಅಹುದು"[೨] ಶಾಸನಗಳು ಹಳ್ಳಿ ಹಳ್ಳಿಗಳಲ್ಲೂ ದೊರಕುತ್ತವೆ. ಅದೇ ರೀತಿ ಪ್ರತಿ ಶಾಸನಗಳಲ್ಲೂ ಊರುಗಳ ಉಲ್ಲೇಖ ಕಂಡುಬರುತ್ತವೆ.

ಶಾಸನಗಳ ಸಹಾಯದಿಂದ ಆಯಾ ಪ್ರದೇಶ ಚರಿತ್ರೆಯನ್ನು ಅರಿಯಲು ಸಾಧ್ಯವಾಗುತ್ತದೆ. ಆ ಕಾಲದ ಭಾಷಾ ಸ್ವರೂಪವನ್ನು ತಿಳಿಯಲು ಶಾಸನಗಳಿಗಿಂತ ಮತ್ತೊಂದು ಆಕರ ಸಿಗಲು ಸಾಧ್ಯವಿಲ್ಲ. ಇದರಿಂದ ಹೆಚ್ಚು ನಿಖರವಾದ ಭಾಷಾ ಸ್ವರೂಪವನ್ನು ತಿಳಿಯಬಹುದು "ಸೃಷ್ಟಿಯ ಪ್ರತಿಯೊಂದು ಪದಾರ್ಥಕ್ಕೂ ಒಂದು ಹಿನ್ನೆಲೆ ಇತಿಹಾಸವಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ಊರಿಗೂ ಚರಿತ್ರೆ ಇರುತ್ತದೆ. ವ್ಯಕ್ತಿಯ ಹೆಸರು, ಊರಿನ ಹೆಸರು ಬರಿಯ ಹೆಸರುಗಳಲ್ಲ. ಆ ಹೆಸರುಗಳ ಉಸಿರಲ್ಲಿ, ಬಸಿರಲ್ಲಿ ಆತ್ಮ ಚರಿತ್ರೆ ಇರುತ್ತದೆ"[೩] ಆದ್ದರಿಂದ ರಾಮನಗರ ಜಿಲ್ಲೆಯಲ್ಲಿಯೂ ಶಾಸನಗಳು ದೊರಕುವುದರಿಂದ ಶಾಸನಗಳಲ್ಲಿ ದೊರೆಯುವ ಸ್ಥಳನಾಮಗಳ ಮೂಲಕ ಸಂಸ್ಕೃತಿ, ಜನಜೀವನ, ಭಾಷಾ ಸ್ವರೂಪ, ಚರಿತ್ರೆಯನ್ನು

ಅರಿಯಲು ಸಾಧ್ಯವಾದರೂ ಶಾಸನಗಳ ಸಹಾಯದಿಂದ ಸ್ಥಳನಾಮಗಳ ಪ್ರಾಚೀನ ರೂಪಗಳನ್ನು ಗುರುತಿಸಿ, ಅವುಗಳು ಕಾಲದಿಂದ ಕಾಲಕ್ಕೆ ಹೊಂದಿರಬಹುದಾದ ರೂಪವ್ಯತ್ಯಾಸ, ಅರ್ಥ ವ್ಯತ್ಯಾಸ ಹಾಗೆಯೇ ಮಾನವನ ನೆಲೆಗಳ ಪ್ರಾಚೀನ ರೂಪಗಳ ಅಧ್ಯಯನ ಶಾಸನೋಕ್ತ ಸ್ಥಳನಾಮಗಳ ಅಧ್ಯಯನಕ್ಕೆ ಪೂರಕ ಎನಿಸುತ್ತದೆ. "ಅವುಗಳು (ಸ್ಥಳನಾಮಗಳು) ಸಹಾಯದಿಂದ ಊರುಗಳ ಗಡಿಗಳನ್ನು, ಕಾಲವನ್ನು ಸಂದೇಹಕ್ಕೆಡೆಯಿರದಂತೆ ನಿರ್ಣಯಿಸಬಹುದು. ರಾಜರ ಇತಿಹಾಸದ ಜತೆಗೆ ಊರುಗಳ ಇತಿಹಾಸಕ್ಕೂ ಅವೇ ಆಕರವೆನ್ನಬಹುದು. ಅವುಗಳ ಸ್ಥಾನಮಾನಗಳ ಏರಿಳಿತಗಳೂ, ಕಾಲಕಾಲಕ್ಕೆ ಅವು ಪಡೆದ ಪ್ರತಿನಾಮಗಳ ವಿವರಗಳೂ, ಆಗಾಗ್ಗೆ ಪ್ರಾಪ್ತವಾದ ಉಚ್ಚಾರಣಾ ವ್ಯತ್ಯಾಸಗಳೂ ಶಾಸನಗಳಿಂದ ತಿಳಿಯುತ್ತವೆ"[೪] ಶಾಸನಗಳ ಕಾಲಮಾನಕ್ಕಿಂತಲೂ ಮೊದಲೇ ಸ್ಥಳಗಳಿಗೆ ಹೆಸರುಗಳು ಇರುತ್ತಿದುದ್ದರಿಂದ ಸ್ಥಳನಾಮಗಳಿಗೆ ಶಾಸನಗಳಿಗಿಂತ ಸಾವಿರಾರು ವರ್ಷಗಳ ಪ್ರಾಚೀನ ಇತಿಹಾಸವನ್ನು ಕಟ್ಟಿಕೊಡುವುದರಲ್ಲಿ ಸಂಶಯವಿಲ್ಲ. ಅಂತಹ ಸ್ಥಳನಾಮಗಳ ಸಂಪೂರ್ಣ ಮಾಹಿತಿಯು ನಂತರದ ತಲೆಮಾರಿನ ಜನರಿಗೆ ಇಲ್ಲದೇ ಹೋಯಿತು ಮತ್ತು "ತಲೆಮಾರು ಬದಲಾದಂತೆಲ್ಲ ಅವುಗಳಲ್ಲಿಯ (ಸ್ಥಳನಾಮಗಳ) ಧ್ವನಿ, ರೂಪ, ಭಾಷಾ ಬಳಕೆಯ ವಿಧಾನ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಬದಲಾವಣೆಯಾಗುತ್ತಲೇ ಮುಂದುವರಿಯುತ್ತವೆ. ಹೊಸಪದಗಳು, ಹೊಸ ಅರ್ಥಗಳು ಹುಟ್ಟಿಕೊಳ್ಳುತ್ತವೆ. ಇವುಗಳೆಲ್ಲವೂ ಸ್ಥಳನಾಮಗಳಲ್ಲಿ ಜೀರ್ಣವಾಗಿವೆ.... ಸಂಶೋಧಕನು ಪ್ರಾಚೀನ ಹಾಗೂ ಪ್ರಾಮಾಣಿಕ ರೂಪವನ್ನು ಹುಡುಕಬೇಕಾಗುತ್ತದೆ. ಇಂತಹ ಪ್ರಾಮಾಣಿಕರೂಪ ದೊರೆಯುವ ಮುಖ್ಯ ಆಕರಗಳಲ್ಲಿ ಶಾಸನಗಳು ಪ್ರಮುಖವಾಗಿವೆ. ಬಳಕೆಯ ಕಾಲಸಂದರ್ಭ ಮುಂತಾದ ಹೆಚ್ಚಿನ ಮಾಹಿತಿ ದೊರೆಯುವುದರಿಂದ ಅವು ಹೆಚ್ಚಿನ ವಿಶ್ವಾಸನೀಯ ದಾಖಲೆಗಳೂ ಆಗಿವೆ"[೫] ಎಂಬ ಮಾತು ತುಂಬಾ ಗಮನಾರ್ಹವಾದದ್ದು.

ಆದ್ದರಿಂದ ಶಾಸನೋಕ್ತ ಸ್ಥಳನಾಮಗಳಲ್ಲಿ ದೊರೆಯುವ ಪ್ರಾಚೀನ ರೂಪಗಳಿಂದ ಪ್ರಾಮಾಣಿಕ ರೂಪವನ್ನು ಪತ್ತೆ ಹಚ್ಚಲು ಸಹಕಾರಿಯಾಗುತ್ತದೆ. ಅಷ್ಟೇ ಅಲ್ಲದೇ ಸ್ಥಳನಾಮಗಳಿಂದ ಆಯಾಯ ಕಾಲಮಾನದಲ್ಲಿ ದೊರಕಬಹುದಾದ ರೂಪ, ಧ್ವನಿ ವ್ಯತ್ಯಾಸಗಳ ಒಂದು ಸಾಮಾನ್ಯ ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ.

ಅದಕ್ಕಾಗಿಯೇ ಈ ಅಧ್ಯಯನ ಮತ್ತು ಈ ಅಧ್ಯಾಯ. ಈ ಅಧ್ಯಾಯದಲ್ಲಿ ಅನುಸರಿಸಲಾಗಿರುವ ಕ್ರಮ ಹೀಗಿದೆ.

೧. ಶಾಸನಗಳ ಪೂರ್ಣಪ್ರಮಾಣದ ಪಾಠವನ್ನಾಗಲೀ, ಶಾಸನಗಳು ಯಾವ ಪ್ರಕಾರದ ಸ್ವರೂಪವನ್ನಾಗಲೀ ಕೊಡಲಾಗಿಲ್ಲ.

೨. ಶಾಸನೋಕ್ತ ಸ್ಥಳನಾಮಗಳ ಪಟ್ಟಿಯಲ್ಲಿ ಕ್ರಮವಾಗಿ ಶಾಸನ ಸಂಖ್ಯೆ. ದೊರಕಿದ ಸ್ಥಳ, ಶಾಸನದಲ್ಲಿ ಸ್ಪಷ್ಟವಾಗಿ ತಿಳಿಯಲಾದ ಕಾಲಮಾನ, ಉಲ್ಲೇಖಿತವಾದ ಸ್ಥಳನಾಮಗಳನ್ನು ಕೊಡಲಾಗಿದೆ.

೩. ಉಲ್ಲೇಖಿತ ಸ್ಥಳನಾಮಗಳ ಮೇಲೆ ಸೂಚಿತವಾಗಿರುವ ಸಂಖ್ಯೆಗಳು ಆ ಸ್ಥಳನಾಮವಿರುವ ಶಾಸನದ ಸಾಲುಗಳನ್ನು ನಿರ್ದೇಶಿಸುತ್ತದೆ.

೪. ಈ ಅಧ್ಯಯನಕ್ಕೆ ಶ್ರೀಯುತ ಬಿ.ಎಲ್.ರೈಸ್ ಅವರ ಎಫಿಗ್ರಾಫಿಯಾ ಕರ್ನಾಟಿಕದ ೧೯೦೫ರ ಆವೃತ್ತಿಯ ಬೆಂಗಳೂರು ಜಿಲ್ಲೆಯ ಶಾಸನ ಸಂಪುಟ ೯ನ್ನು ಆಧಾರ ಗ್ರಂಥವನ್ನಾಗಿ ಇರಿಸಿಕೊಳ್ಳಲಾಗಿದೆ.

ರಾಮನಗರ ಜಿಲ್ಲೆಯಲ್ಲಿ ಸುಮಾರು ಕ್ರಿ.ಶ.೮೯೯ ರಿಂದ ಕ್ರಿ.ಶ.೧೭೯೯ರ ನಡುವಿನ ಕಾಲಮಾನದ ಶಾಸನೋಲ್ಲೇಖಿತ ಸ್ಥಳನಾಮಗಳಲ್ಲಿ ವ್ಯಕ್ತಗೊಂಡ ಸ್ವರ ಮತ್ತು ವ್ಯಂಜನ ಧ್ವನಿಗಳ ಸಮಾಮ್ನಾಯಗಳನ್ನು ವಿಲ್ಯಂ ಮಾಡ್ತ ಅವರ **ಕನ್ನಡ ಭಾಷೆಯ ರೂಪರೇಷೆಗಳು** ಕೃತಿಯನ್ನು ಆದರ್ಶವಾಗಿ ಇರಿಸಿಕೊಂಡು; ಈ ಕೆಳಗಿನ ಪಟ್ಟಿಯಲ್ಲಿ ವರ್ಗೀಕರಿಸಲಾಗಿದೆ.

ರಾಮನಗರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ವ್ಯಕ್ತವಾಗುವ ಸ್ವರ ಧ್ವನಿಗಳ ಸಮಾಮ್ನಾಯಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದಾಗಿದೆ.

	ಪೂರ್ವ		ಮಧ್ಯ		ಪಶ್ಚ	
	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ
ಉನ್ನತ	ಇ	ಈ	-	-	ಉ	ಊ
ಉನ್ನತ ಮಧ್ಯ	ಎ	ಏ	-	-	ಒ	ಓ
ನಡುಮಧ್ಯ	-	-	-	-	-	-
ಅವನತ ಮಧ್ಯ	-	-	-	-	-	-
ಅವನತ	-	-	ಅ	ಆ	-	-

ನಾಲಗೆಯ ಉನ್ನತಿಯನ್ನು ಅನುಸರಿಸಿ ೧. ಉನ್ನತ, ೨. ಉನ್ನತಮಧ್ಯ, ೩. ನಡುಮಧ್ಯೆ, ೪. ಅವನತ ಮಧ್ಯ ೫. ಅವನತ ಎಂಬುದಾಗಿ ೫ ಬಗೆಯಾಗಿಯೂ; ನಾಲಗೆಯ ಪ್ರಗತಿ (ಹಿಂದೆ, ಮುಂದೆ, ನಡುವೆ) ಅನುಸರಿಸಿ ಪೂರ್ವ, ಮಧ್ಯ, ಪಶ್ಚ ಎಂದು ೩ ರೀತಿಯಲ್ಲಿಯೂ ಸ್ವರಧ್ವನಿಗಳನ್ನು ವರ್ಗೀಕರಿಸಿಕೊಂಡು ನೋಡಿದಾಗ ಉನ್ನತದ ಪೂರ್ವ, ಮಧ್ಯ, ಪಶ್ಚದಲ್ಲಿ, ಉನ್ನತ ಮಧ್ಯದಲ್ಲಿ ಪೂರ್ವ, ಪಶ್ಚದಲ್ಲಿ ಮತ್ತು ಅವನತ ಮಧ್ಯದ ಪೂರ್ವ ಮತ್ತು ಮಧ್ಯದಲ್ಲಿ ಸ್ವರ ಧ್ವನಿಗಳನ್ನು ಕಾಣಬಹುದು.

ಶಾಸನೋಕ್ತ ಸ್ಥಳನಾಮಗಳಲ್ಲಿರುವ ವ್ಯಂಜನ ಧ್ವನಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು.

		ಉಭಯೋಷ್ಠ್ಯ	ದಂತೋಷ್ಠ್ಯ	ದಂತ್ಯ	ವರ್ತ್ಸ್ಯ	ಪರಿವೇಷ್ಠಿತ	ತಾಲವ್ಯ	ಕಂಠ್ಯ
ಸ್ಪರ್ಶ	ಅಘೋಷ	ಪ್	-	ತ್	-	ಟ್	-	ಕ್
	ಘೋಷ	ಬ್	-	ದ್	-	ಡ್	-	ಗ್
ಘರ್ಷ	ಅಘೋಷ	-	-	-	ಸ್	-	ಶ್	-
	ಘೋಷ	-	-	-	-	-	-	ಹ
ಅನು ಘರ್ಷ	ಅಘೋಷ	-	-	-	-	-	ಚ್	-
	ಘೋಷ	-	-	-	-	-	ಜ್	-
ಅನು ನಾಸಿಕ		ಮ್	-	-	ನ್	ಣ್	-	ಜ್
ಪಾರ್ಶ್ವಿಕ					ಲ್	ಳ್	-	-
ಕಂಪಿತ					ರ್			
ಅರೆ ವ್ಯಂಜನ		ವ್	-	-	-	-	ಯ್	-

೪.೧.ಶಾಸನೋಕ್ತ ಸ್ಥಳನಾಮಗಳು

ಕನಕಪುರ ತಾಲ್ಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ (ಕ್ರಿ.ಶ.)	ಉಲ್ಲೇಖಿತ ಸ್ಥಳನಾಮಗಳು
೩.	ಹಾರೋಹಳ್ಳಿ	೧೫೩೩	ಹಾರುವಹಳ್ಳಿ೧೦
೬.	ಗಾಣಾಳುಕೊಪ್ಪ	೧೩೧೬	ಗಾಳಿಹಾಳು೧೨-೧೩
೮.	ಚಿಕ್ಕಮರಳವಾಡಿ	೧೪೮೪	ಚಿಕ್ಕಮಣಲವಾಡಿ೭
			ಅಬ್ಬುಹಳ್ಳಿ೭
೧೦.	ಅಗ್ರಹಾರ	೧೫೩೮	ಚಂನಪಟ್ಟಣ೬
			ಬ್ರಂಹ-ಸಮುದ್ರಅಗ್ರಹಾರ೬-೭
೧೯.	ದೊಡ್ಡಕಬ್ಬಹಳ್ಳಿ	೧೭೨೬	ಬಸಹಳ್ಳಿ೬
೨೮.	ಕೋಟೆಕೊಪ್ಪ		ಪೂಕಂದ೧೫
೩೧.	ನಲ್ಲಹಳ್ಳಿ	೧೫೦೧	ನಲ್ಲಹಳ್ಳಿ೯
			ಅಂಣಿಗಹಳ್ಳಿ೮
೩೨.	ನಾರಗೊಂಡನಹಳ್ಳಿ	೧೫೬೩	ಕನಕಪುರ೭
			ಚಂಣ್ಣಪಟ್ಟಣ೮
೩೬.	ಕೃಷ್ಣಯ್ಯನದೊಡ್ಡಿ	೧೪೬೫	ಕಲ್ಲಾಪುರ೧೨
೩೭.	ಸಾವನಕಟ್ಟೆ	೧೩೧೪	ಅರುಳಹಳ್ಳಿ೪
೩೯.	ಎಡಮಾರನಹಳ್ಳಿ	೧೫೦೬	ಮಗಣಿ ಸೀಮೆ೫
			ಮಾರೇಹಳ್ಳಿ೭
೪೦	ಎಡಮಾರನಹಳ್ಳಿ	೧೩೫೧	ಮಾರೇಹಳ್ಳಿ೫-೬
೪೧.	ಮುಳ್ಳಹಳ್ಳಿ	೧೩೨೪	ಅಗರ೭
			ಬನಹಳ್ಳಿ೮
೪೬.	ಪುರುಸಗೊಂಡನಹಳ್ಳಿ	-	ಪುರುಸಗೊಂಡನಹಳ್ಳಿ೬
೪೭.	ನಾಯಕನಹಳ್ಳಿ	೧೨೯೫	ಅರುಳಹಳ್ಳಿ೧೪-೧೫
೫೬.	ಹಲಸೂರು	೧೫೧೩	ಹಲ್ಸೂರ೬
೫೯.	ಹೊನ್ನಹಳ್ಳಿ	೧೪೨೫	ಹನಿಊರ೬-೭
೬೪.	ಕಬ್ಬಾಳು	೧೨೭೯	ಕಬ್ಬಹಾಳ೫
			ಕೂಡಲೂರ ೧೦
೬೫.	ಕಬ್ಬಾಳು	೧೪೨೯	ಕಬ್ಬಹಾಳ ೧೫

೬೭.	ಅಚ್ಚಲು	-	ಬಂಡಹಳ್ಳಿ೫
೬೮.	ಅಚ್ಚಲು	೧೩೧೯	ಕಾಣಿಕಾಜಿಹಳ್ಳಿ೧೨
			ಅಚಲ೨೧
			ತುಂಗಣಿ೧೨
೭೦.	ಚಿಕ್ಕಾಲಹಳ್ಳಿ	೧೩೧೪	ಸಿವಪುರ೧೩
			ಜೀಯನಾಥನಹಳ್ಳಿ೧೪
೭೨	ಹಲ್ಲೂಕರು	-	ಚಿಕ್ಕಗಂಗವಾಡಿ೨೩
			ಚತುರ್ವೇದಿ ಮಂಗಲ೨೪
			ಸಿವಪುರ೨೪
			ಹಲುಗೂರು೨೬
೭೩.	ಹರಿಹರಗ್ರಾಮ	-	ಹರಿಹರ೪-೫
			ಚಂಬಾಪುರ೫
			ಸೊಲಿಗಿರಿ೫
೭೬.	ನಿಟ್ಟೂರು	೧೨೯೯	ಚಿಕ್ಕಗಂಗವಾಡಿ೧೪
			ನಿಟ್ಟೂರು೩೭
೮೦.	ನಿಟ್ಟೂರು	೧೨೬೫	ಗಂಗವಾಡಿ೧೭
			ಹೊಂಗನೂರ೧೭-೧೮
			ಗವುಡನಹಳ್ಳಿ೩೨
			ಜೀಯಗವುಡನಹಳ್ಳಿ೩೪
			ನಿಟ್ಟೂರುಹಳ್ಳಿ೩೭
೮೭.	ಕುಂತೂರು	-	ಮಾಕಗಲುಡನಹಳ್ಳಿ೧೨
			ಕುಂದತೂರ೧೧
೯೧.	ಕನಕಪುರ	೧೬೬೭	ವಿರುಪಸಮುದ್ರ೫
೯೪.	ಮಳಗಾಳು	೧೬೩೯	ಮೊಳಗಾಳ೮
			ಕಾಣಿಕಾರನಹಳ್ಳಿ೧೪-೧೫
೯೫.	ವಿರುಪಸಂದ್ರ	೧೬೬೨	ಕಾಣಿಕಾರನಹಳ್ಳಿ೬
			ವಿರೂಪ ಸಮುದ್ರ೭-೮
			ಮೊಳಗಾಳ೭
			ಹೊರಳುಗಲ್ಲ೯-೧೦

೯೬.	ಬೂದಿಗಪ್ಪೆ	೧೬೫೩	ಬೂದಿಕುಪ್ಪೆ೪
೯೭.	ಅರಳಾಳು	೧೪೦೧	ಅರುಳಹಾಳ೧೬-೧೭
		-	ಮಾರಸಮುದ್ರ೨೧-೨೨
೯೮.	ಅರಳಾಳು	೧೩೯೧	ಅರುಳಹಾಳ್೭
೧೦೦.	ಅರಳಾಳು	-	ಅರುಳಹಾಳ೭-೮
೧೦೨.	ಶ್ರೀನಿವಾಸನಹಳ್ಳಿ	-	ಅಚ್ಚಲ೨
			ಬೇಲುಕುಪ್ಪೆ೪
೧೦೪.	ತುಂಗಣಿ	-	ವನ್ನಿಗಹಳ್ಳಿ೪
			ತುಂಗಣಿ೭
೧೦೫.	ತುಂಗಣಿ	-	ತುಂಗಣಿ೨
೧೦೬.	ರಾಮಪುರ	೧೩೮೬	ರಾಮಪುರ೧೩
೧೦೭.	ಕಲ್ಲಹಳ್ಳಿ	೧೨೯೪	ಕಳ್ಳೇನಹಳ್ಳಿ೭
೧೦೮.	ಅಲ್ಲಾಳಸಂದ್ರ	೧೬೮೧	ಅಲಾಳಸಮುದ್ರ೫-೬
೧೧೪.	ಚಿಕ್ಕಮುದವಾಡಿ		ಮುದುವಾಡಿ
೧೧೬.	ಮುರಕಣಿ		ಚಂನಪಟ್ಟಣ೨-೩
			ಮುಱುಕುಣಿ೭
೧೧೮.	ಬಂಡಿಗನಹಳ್ಳಿ	೧೬೬೨	ಮುದುವಾಡಿ೩
			ಬಂಡಿಗಾನಹಳ್ಳಿ೪
೫೨.	ದೂಂತೂರು	೯೦೦	ದೂಣೆತೂರು೭
೪೮.	ಸಾತನೂರು	೮೯೯	ಸಾನ್ತನುರ೧೫

ಚನ್ನಪಟ್ಟಣ ತಾಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ (ಕ್ರಿ.ಶ.)	ಉಲ್ಲೇಖಿತ ಸ್ಥಳನಾಮಗಳು
೧.	ಗೊಲ್ಲಹಳ್ಳಿ	೧೫೩೩	ಮಾಗಡ್ಡಿ೯
೨.	ಬನ್ನಿಕುಪ್ಪೆ	೧೬೬೭	ಸೊಂಡೆಯ ಕೊಪ್ಪ೪-೫
			ಕಾಲುವಳ್ಳಿ೫
			ಬಂನಿಕುಪ್ಪೆ೫
೩.	ಕೆಂಪದ್ಯಾಪನಹಳ್ಳಿ	೧೭೮೯	ಪರಾದಹಳ್ಳಿ೨

೫.	ರಾಮನಗರ	-	ಕುಲೂಸಪೇಟೆ೧
೭.	ಹಾಗಲಹಳ್ಳಿ	೧೩೪೪	ಹಾಗಲಹಳ್ಳಿ೧೯
೮.	ಹಾಗಲಹಳ್ಳಿ	-	ಹಾಗಲಹಳ್ಳಿ೩-೪
೧೦.	ಮಾರೇಗೌಡನದೊಡ್ಡಿ	೧೪೧೩	ಸುಗನಹಳ್ಳಿ೧೪
			ಹರದೇವನಹಳ್ಳಿ೧೫
			ಹಾಗಲಹಳ್ಳಿ೧೫-೧೬
೧೨.	ಚನ್ನಮಾರನಹಳ್ಳಿ	೧೩೧೯	ಚಂದಿಮಾದಿಯಹಳ್ಳಿ೨೧
			ವೀರಂಗಣೆಗರಹಳ್ಳಿ೨೬
೧೬.	ಐಜೂರು	೧೩೫೧	ತಾಳವಾಡಿ೬
			ಗಂಗವಾಡಿ೭
			ಮಿಳೆಹಳ್ಳಿ೮
			ಜೀಯ ಗಉಂಡನಹಳ್ಳಿ೯
೧೮.	ಬನ್ನಿಕುಪ್ಪೆ	೧೭೬೭	ಚಂನಪಟ್ಟಣ೯
			ಬನ್ನಿಕುಪ್ಪೆ೧೦
೨೩.	ಬ್ಯಾಲಕುಳಿ	೧೬೪೭	ಮಳಲೂರ೫-೬
			ಚಂನಪಟ್ಟಣ೫
			ಬಲಕುಳಿ೧೧
೨೪.	ಕೋಟಹಳ್ಳಿ	೧೫೨೭	ಸಬಕೆಜೆ೭
೨೫.	ಕೋಟಹಳ್ಳಿ	೧೩೧೧	ಮಳಲೂರು೭
೨೬.	ನಾಗೋಹಳ್ಳಿ	೧೬೫೧	ಚಂನಪಟ್ಟಣ೬
			ನಾಗುವಳ್ಳಿ೭
೨೮.	ಬೆಣೆಹಳ್ಳಿ	-	ಸುದಮಲು೫-೬
೩೧.	ಬನ್ನಿಕುಪ್ಪೆ	೧೩೨೦	ನಂಜಂನಹಳ್ಳಿ೭-೮
೩೨.	ಚನ್ನಪಟ್ಟಣ	೧೭೬೦	ಮೊಗೆಹಳ್ಳಿ೭
			ಚಂನಪಟ್ಟಣ೭
೩೬.	ಹರೂರು	೧೩೦೭	ಮಳಲೂರ೧೬
			ಹರಊರ೨೧
೩೭.	ಹರೂರು	೧೩೯೬	ಹಿರಿಯ ಮಳಲೂರ೨೯-೩೦
೪೭.	ಮೋಗೇನಹಳ್ಳಿ	೧೦೦೦	ಗಜ್ಗವಾಡಿ೪
			ಪುಜ್ಗನೂರ೧೧
			ಚತುರ್ವ್ವೇದಿ ಮಜ್ಗಲ೧೨
೪೯.	ಮೋಗೇನಹಳ್ಳಿ	೧೭೬೦	ಚಂನಪಟ್ಟಣ೧೦
			ಮೋಗೇಹಳಿ೧೦

೫೧.	ಮಾಳಗಾಳು	೧೩೨೪	ಮಾಳಿಗೆಹಳ್ಳಿ೧೧
೫೨.	ಕೋಡಂಬಳ್ಳಿ	೧೪೯೯	ಕೋಡಂಬಳ್ಳಿ೧೦-೧೧
			ಚಂನಪಟ್ಟಣ೧೦
೫೩.	ಕೋಡಂಬಳ್ಳಿ	೧೫೩೫	ಕೋಡಂಬಳ್ಳಿ೯-೧೦
			ಸರಗೂರು೧೦
			ನಿಟ್ಟೂರು೧೦
			ಅಂಕನಹಳ್ಳಿ೧೪
			ತಾರಾಂಕನಹಳ್ಳಿ೨೧
			ಕೊಚೆಗೆಜೆ೨೨
			ಬೀರನಕಟ್ಟೆ೨೮
			ಸಿಧಾಪುರ೨೯
೫೬.	ಗರಕಹಳ್ಳಿ	೧೬೬೬	ಗರಿಖಹಳ್ಳಿ೮
			ಸೋಗಾಲ೧೪
			ದಾಸರಹಳ್ಳಿ೧೪
			ರಾಮೇನಹಳ್ಳಿ೧೪
೫೮.	ಗರಕಹಳ್ಳಿ	೧೪೧೦	ಗಜುಕೆಹಳ್ಳಿ೪
೬೨.	ಇಗ್ಗಲೂರು	೧೪೪೩	ಇಗ್ಗಲೂರ೧
೬೩.	ಇಗ್ಗಲೂರು	-	ಇಗ್ಗಲೂರ್೯
೬೪.	ಇಗ್ಗಲೂರು	೧೧೭೬	ಇಗ್ಗಲೂರ್೯
೬೫.	ಯಲಿಯೂರು	೧೨೭೮	ಯಲೆವೂರು೮
೬೮.	ಬೇವೂರು	೧೬೬೦	ಭೇಊರ್೬
೭೧.	ಬೇವೂರು	೧೩೩೧	ಬೇಹೂರ೨೩
೭೩.	ಮಾಗೇನಹಳ್ಳಿ	೧೩೧೯	ಮಗುವನಹಳ್ಳಿ೨೭
೭೪.	ಮಾಗೇನಹಳ್ಳಿ	೧೩೫೩	ಮುಗುಳನಹಳ್ಳಿ೭
			ಗೌಡಿಗೆರೆ೭
			ಹೊಸಹಳ್ಳಿ೭-೮
೯೮.	ಮಳೂರು	೧೩೨೭	ಹಿರಿಯ ಮಳವೂರ೧೫
			ರಾಜೇಂದ್ರಸಿಂಹ್ಮಚತುರ್ವೇದಿ
			ಮಂಗಲ೧೬

೯೯.	ಮಳೂರು	೧೫೭೨	ಮಳಲೂರ೭
೧೦೮.	ಕೂಡ್ಲೂರು	೧೮೨೮	ಕಾನಕಾನಹಳ್ಳಿ೯-೧೦
			ಕೂಡ್ಲೂರು೧೧
೧೧೪.	ಕೂಡ್ಲೂರು	೧೭೬೭	ಕೂಡ್ಲೂರು೭-೮
೧೪೬.	ಮಳೂರು	೧೭೬೪	ಚಂನಪಟ್ಟಣ೮
			ಮಳೂರು ಪಟ್ಟಣ೮
೧೪೭.	ಮಳೂರು ಪಟ್ಟಣ	೧೪೩೧	ಮಳಲೂರ ಪಟ್ಟಣ೪
೧೪೮.	ಮಳೂರು ಪಟ್ಟಣ	-	ಕೆಳಲೆ೩
			ಮಳಲೂರಪಟ್ಟಣ೩
			ಹೊಂಗನೂರ೪
೧೫೫.	ಚಕ್ಕರೆ	೧೫೩೪	ರಾಜರಾಜಚೋಳ ಚತುರ್ವೇದಿ ಮಂಗಲ೧೦-೧೧
			ಚಕ್ಕೆಜೆ೧೧
೧೫೬.	ಹೊಸಹಳ್ಳಿ	೧೫೧೩	ಕೂಡಲೂರ೧೦
			ಹೊಸಹಳ್ಳಿ೧೧
೧೫೮.	ಚಕ್ಕಲೂರು	೧೪೭೮	ಗೌಡಹಳ್ಳಿ೩
			ಚಕ್ಕಲೂರು೬
೧೬೨.	ಕುಕ್ಕೂರು	೧೪೨೬	ಕೊಡಂಬಳ್ಳಿ೬
೧೬೮.	ಮಾರ್ಚನಹಳ್ಳಿ	೧೩೩೬	ಮಾರಚನಹಳ್ಳಿ೭
೧೭೦.	ಕನ್ನಮಂಗಲ	-	ಕಂನಮಂಗಲ೨
			ಹೊಸಹಳ್ಳಿ೨
			ಮರಗಾಪಟ್ಣ೨
			ಗೊಲ್ಲಹಳ್ಳಿ೩
			ಚಾಮನಹಳ್ಳಿ೩
೧೭೧.	ಕನ್ನಮಂಗಲ	-	ಕಂನಮಂಗಲ೩
೧೮೩.	ದೊಡ್ಡಗಂಗವಾಡಿ	೧೨೯೪	ಹಿರಿಯ ಗಂಗವಾಡಿ೪
೧೮೫.	ಅಕ್ಕೂರು	೧೩೪೧	ಮಾರಪ್ಪನಕುಪ್ಪೆ೬

ಮಾಗಡಿ ತಾಲೂಕು

ಶಾಸನ ಸಂಖ್ಯೆ	ದೊರಕಿದ ಸ್ಥಳ	ಶಾಸನದ ಕಾಲ (ಕ್ರಿ.ಶ.)	ಉಲ್ಲೇಖಿತ ಸ್ಥಳನಾಮಗಳು
೧.	ಮಾಗಡಿ	-	ಕಂಚುಗಾರ್ರಹಳ್ಳಿ೧೫
			ಹಾಲು ಶಿಂಗನಹಳ್ಳಿ೧೫-೧೬

೨.	ಮಾಗಡಿ	೧೬೭೦	ಅತಿಮಿಗೆರೆ೧೬
			ಕೆಂಪಾಪುರ೧೬
			ಹಂಚಿಕುಪ್ಪೆ೧೫-೧೬
೩.	ಮಾಗಡಿ	೧೭೧೨	ಉದ್ದುರಳಹಳಿ೧೪
೪.	ಮಾಗಡಿ	೧೭೧೭	ಜಟ್ಟನಹಳ್ಳಿ೧೨
			ಶಿರುಪತಹಳ್ಳಿ೧೨-೧೩
೫.	ಮಾಗಡಿ	೧೬೭೬	ಹಾರಂಗಹಳ್ಳಿ೩
			ಕೆಂಪಸಾಗರ೪
			ಭೂಮಿಹಾಲಶೆಟ್ಟಿಹಳ್ಳಿ೪
			ಶ್ರೀಪತಿಹಳ್ಳಿ೪
೭.	ತಿರುಮಲೆ	-	ಪೆಂಮನಹಳ್ಳಿ೫
			ಬೊಂಮನಹಳ್ಳಿ೬
೮.	ತಿರುಮಲೆ	೧೬೮೧	ಯೆಲೆಯೂರು೫
			ಡೊಂಕನಪುರ೫
			ಕಲ್ಲಿಕೆರೆ೫
೧೦.	ಉಡುವಗೆರೆ ವಳಗೆರೆ	೧೩೧೫	ವುಡುವಗೆರೆ೧೩
			ಚಿಕ್ಕರಬಾವಿ೧೩-೧೪
೧೧.	ನಾಗಶೆಟ್ಟಿಹಳ್ಳಿ	೧೫೨೦	ಸೋಲೂರು೭
			ಸಟ್ಟಿಹಳ್ಳಿ೬
೧೨.	ಬ್ಯಾಲದಕೆರೆ		ಬೇಲಕೆಜ್ಜೆ೩
೧೩.	ಮಾಡಬಾಳ	೧೩೪೦	ಮಾಡಂಬಾಳ೭
೧೪.	ಕರ್ಲಮಂಗಲ	-	ಕಳ್ಳಬಿಮಂಗಲ೮
೧೭.	ಕಲ್ಯ	೧೫೬೨	ಚೋಳೆನಾಯಕನಹಳ್ಳಿ೧೦-೧೧
೧೮.	ಕಲ್ಯ	೧೩೬೮	ತಿರುನಾರಾಯಣಪುರ೨೬-೨೭
೧೯.	ಕಲ್ಯ	೧೩೪೧	ಹುಳೇನಹಳ್ಳಿ೧೧
೨೩.	ಕಲ್ಯ	-	ದೇವನಕೆಜೆ೨-೩
			ಹುಳಿಕಟ್ಟೆ೩
೨೯.	ಕೆಂಪಸಾಗರ	೧೬೬೮	ಹೆರಳಿಗನಹಳ್ಳಿ೮
			ಕೆಂಪಸಾಗರ೯

೩೦.	ಹಾಲಶೆಟ್ಟಿಹಳ್ಳಿ	೧೬೬೮	ಹೊರಳಿಗನಹಳ್ಳಿ೯
			ಕೆಂಪಸಗರ೧೧
			ಭುಮಿಹಾಲಸೆಟ್ಟಿಹಳ್ಳಿ೧೨-೧೩
			ಸಿರಿಪತಿಹಳ್ಳಿ೧೩
೩೩.	ಯಲಗದಹಳ್ಳಿ	-	ಚಕ್ರಭಾವಿ೨
			ಮರುಳದೇವರಕಟ್ಟೆ೭
			ಚಿಕ್ಕವಡೇರಕಟ್ಟೆ೭-೮
೩೪.	ಅಳಲಕುಪ್ಪೆ	-	ಅಳಲುಕುಪ್ಪೆ೩-೪
೩೫.	ಅಳಲಕುಪ್ಪೆ	-	ಅಳುಲಕುಪ್ಪೆ೧೦
೩೬.	ಅಳಲಕುಪ್ಪೆ	-	ಅರುಲಕುಪ್ಪೆ೪
೩೮.	ಗೆಜ್ಜೆಗಾರಕುಪ್ಪೆ	-	ಗಜಗಾರಗುಪ್ಪೆ೮
೪೨.	ಮಾಯಿನಾಯಕನಹಳ್ಳಿ	-	ಅಗ್ರಹಾರ೧೧
			ಮಾಯಿ ನಾಯಕನಹಳ್ಳಿ೧೩
			ಮಾದನಹಳ್ಳಿ೧೪
			ಹನುಮಾಪುರ೧೪
			ಕೆಂಪಸಾಗರ೧೪
			ವಳಗೆರೆಯತೋಟ೧೪-೧೫
೪೪.	ನಾರಸಂದ್ರ	೧೪೭೫	ಬುವನಹಳ್ಳಿ೪
೪೫.	ಕೆಂಪೋಹಳ್ಳಿ	-	ಸೋಲೂರ೧
			ಕೆಂಪನಪುರ೧
			ದಂಮಿನಕಟ್ಟೆ೧
೪೯.	ಶ್ರೀಗಿರಿಪುರ	-	ಶ್ರೀಗಿರಿ ಸಮುದ್ರದಪುರ೧೩-೧೪
೫೦.	ಶ್ರೀಗಿರಿಪುರ	-	ಸಿರಿಗಿರಿಪುರ೭-೮
೫೨.	ಬಿಸ್ಕೂರು	೧೫೬೪	ಬಿಸಗೂರ೮
೫೮.	ಸಣ್ಣೇನಹಳ್ಳಿಗುಡಿಬಳಿ ಹೆಬ್ಬಳಲು	೧೩೧೫	ಹುಳೆಯನಹಳ್ಳಿ೯-೧೦
೫೯.	ಹುಲ್ಲೇನಹಳ್ಳಿ	೧೩೧೮	ಹುಳಿಂನಹಳ್ಳಿ೭
೬೨.	ಸೋಲೂರು	೧೫೧೦	ಸೋಲುರ೮
೬೭.	ವೊಂಬತ್ತನಕುಂಟೆ	೧೧೨೫	ಸೋಲೂರ೧-೨

೬೮.	ಅರಶಿನಕುಂಟೆ	-	ಸೋಲೂರ೧೬
			ಅರಸಿನಗುಂಟೆ೧೬-೧೭
೭೨.	ಗೋರೂರು	-	ಗೊಉರಪುರ೧
೭೪.	ಬಾಣವಾಡಿ	೧೫೪೨	ಬಾಣವಾಡಿ೧೨
		-	ರಾಮಪುರ೧೪
೭೫.	ಮೂಡ್ಲುಪಾಳ್ಯ	-	ಮಣ್ಣೆ೧೩
			ದೇವರಕೆಜೆ೧೯
೭೯.	ಬಿಟ್ಟಸಂದ್ರ	೧೫೧೧	ಬಿಟ್ಟಸಮುದ್ರ೩೫-೩೬
೮೧.	ಬೈಚಕುಪ್ಪೆ	-	ತಾವರೇಕೆರ್ಜೆ
			ಹೆಸರಹಳ್ಳಿ೧೦
೮೨.	ಮಾರೇನಹಳ್ಳಿ	೧೫೨೪	ಮಾರಯ್ಯನಹಳ್ಳಿ೧೫
			ಡಣಾಯಕಪುರ೧೫

೪.೨. ಭಾಷಾ ವೈಜ್ಞಾನಿಕ ಪರಿಶೀಲನೆಗಳು

ರಾಮನಗರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳನ್ನು ಈಗಾಗಲೇ ದಾಖಲಿಸಿದ್ದು; ಅದರ ಮುಂದುವರೆದ ಭಾಗವಾಗಿ ಇಲ್ಲಿ ಭಾಷಾ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗಿದೆ. ಈ ಪರಿಶೀಲನೆಯಲ್ಲಿ ಡಾ.ವಿ.ಶಿವಾನಂದ ಅವರ "ಕಲಬುರಗಿ ಜಿಲ್ಲೆಯ ಶಿಲಾಶಾಸನಗಳು" ಗ್ರಂಥ ಮಾದರಿಯನ್ನು ಆದರ್ಶವಾಗಿ ಇರಿಸಿಕೊಳ್ಳಲಾಗಿದೆ. ಈ ಪರಿಶೀಲನೆಯಲ್ಲಿ ಅನುಸರಿಸಿರುವ ಕ್ರಮಗಳು ಈ ಕೆಳಗಿನಂತಿವೆ.

೧. ಇಲ್ಲಿ ಶಾಸನ ಸಂಖ್ಯೆಯ ಅನುಕ್ರಮಣಿಕೆಯನ್ನು ಅನುಸರಿಸಲಾಗಿದೆಯೇ ಹೊರತು ಕಾಲಾನುಕ್ರಮಣಿಕೆಯನ್ನಲ್ಲ.

೨. ಕಾಲಘಟ್ಟಕ್ಕನುಗುಣವಾಗಿ ಭಾಷೆಯ ಸ್ವರೂಪವನ್ನು ಆಯಾಕಾಲದ ಶಾಸನಗಳು ದಾಖಲಿಸಿಕೊಂಡಿರುವುದರಿಂದ ಶಾಸನ ಸಂಖ್ಯೆ ಮತ್ತು ಅದರ ಕಾಲವನ್ನು ಪುನರಾವರ್ತಿಸಲಾಗಿದೆ.

೩. ಶಾಸನೋಕ್ತ ಸ್ಥಳನಾಮವಾಗಿದ್ದರೂ, ಈಗ ಅಸ್ತಿತ್ವದಲ್ಲಿಲ್ಲದ ಅಥವಾ ಕ್ಷೇತ್ರ ವಿಂಗಡಣೆಯ ಸಂದರ್ಭದಲ್ಲಿ ಬೇರೆ ಜಿಲ್ಲೆಗೋ ಅಥವಾ ಬೇರೆ ತಾಲೂಕಿಗೋ ಸೇರ್ಪಡೆಗೊಂಡಿರುವ ಸ್ಥಳನಾಮಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿಲ್ಲ.

೪. ಒಂದು ಸ್ಥಳನಾಮ ಹಲವು ಶಾಸನಗಳಲ್ಲಿ ಉಕ್ತಗೊಂಡಿರುವಾಗ ಪ್ರಾಚೀನತಮ ಶಾಬ್ದಿಕರೂಪವನ್ನು ಮಾತ್ರ ಈ ಭಾಷಾ ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಲಾಗಿದೆ.

೫. ಒಂದೇ ಸ್ಥಳನಾಮದ ಭಿನ್ನ ರೂಪಗಳು ಉಲ್ಲೇಖಿತಗೊಂಡಿದ್ದಾಗ, ಶಾಬ್ದಿಕ ರೂಪಗಳನ್ನು ಆಧರಿಸಿ ಆಯಾ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ.

೬. ಶಾಸನೋಕ್ತ ಸ್ಥಳನಾಮವು ಆಯಾ ಕಾಲದಲ್ಲಿ ಹೊಂದಿರುವ ಉಚ್ಚಾರಣಾ ರೂಪವನ್ನು ಹೊಂದಿರುವುದರಿಂದ, ಆಗಿರುವ ಶಾಬ್ದಿಕ ರೂಪವನ್ನು ಕೊಟ್ಟು-ವರ್ತಮಾನ ಉಚ್ಚಾರಣಾ ರೂಪಕ್ಕೆ ಕರ್ನಾಟಕ ಗ್ರಾಮಸೂಚಿ ಮತ್ತು ಭಾರತ ಸರ್ಕಾರದ ಜನಗಣತಿಯಲ್ಲಿನ ಊರುಗಳ ಪಟ್ಟಿಯನ್ನು ಆಧಾರ ಗ್ರಂಥಗಳಾಗಿ ಇರಿಸಿಕೊಳ್ಳಲಾಗಿದೆ. 'ಶಾ.ಸಂ.' ಎಂಬುದು ಶಾಸನಸಂಖ್ಯೆ ಎಂಬುದರ ಸಂಕ್ಷಿಪ್ತ ರೂಪವಾಗಿದೆ.

೪.೨.೧. ಸ್ವರಾರಂಭ ಸ್ಥಳನಾಮಗಳು

ಕ್ರ.ಸಂ.	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ)	ವರ್ತಮಾನ ಉಚ್ಚಾರಣಾ ರೂಪ	ಶಾಬ್ದಿಕ ವ್ಯತ್ಯಾಸ
೧.	ಅಚಲ ಶಾ.ಸಂ. ೬೮ (ಕ)	೧೩೯೯	ಅಚ್ಚಲು	ಚ-ದ್ವಿತ್ವಾಗಮನ ಅ>ಉ
೨.	ಅರುಳಹಾಳ ಶಾ.ಸಂ.೯೮ (ಕ)	೧೩೯೧	ಅರಳಾಳು	ಉ>ಅ ಅ>ಆ ಹ-ಲೋಪ ಅ>ಉ
೩.	ಅಲಾಳ ಸಮುದ್ರ ಶಾ.ಸಂ.೧೦೮ (ಕ)	೧೬೮೧	ಅಲ್ಲಾಳಸಂದ್ರ	ಲ-ದ್ವಿತ್ವಾಗಮನ ಮ-ಲೋಪ ಬಿಂದು-ಆಗಮನ
೪.	ಅಂಕನಹಳ್ಳಿ ಶಾ.ಸಂ.೫೩ (ಚ)	೧೫೩೫	ಅಂಕನಹಳ್ಳಿ	-
೫.	ಅತಿಮಿಗೆರೆ ಶಾ.ಸಂ.೨ (ಮಾ)	೧೬೭೦	ಅತ್ತಿಂಗೆರೆ	ತ-ದ್ವಿತ್ವಾಗಮನ ಮ-ಲೋಪ ಬಿಂದು-ಆಗಮನ
೬.	ಅಳಲುಕುಪ್ಪೆ ಶಾ.ಸಂ.೩೪ (ಮಾ)	-	ಅಳಲಕುಪ್ಪೆ	ಉ>ಅ
೭.	ಅರುಲಕುಪ್ಪೆ ಶಾ.ಸಂ.೩೬ (ಮಾ)	-	ಅಳಲಕುಪ್ಪೆ	ರ>ಳ
೮.	ಅರಸಿನಗುಂಟೆ ಶಾ.ಸಂ.೬೮ (ಮಾ)	-	ಅರಶಿನಕುಂಟೆ	ಸ>ಶ ಗ>ಕ

೪.೨.೨. ಸಬಿಂದು ಸ್ಥಳನಾಮಗಳು

ಕ್ರ.ಸಂ.	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ.)	ವರ್ತಮಾನ ಉಚ್ಚಾರಣಾ ರೂಪ	ಶಾಬ್ದಿಕ ವ್ಯತ್ಯಾಸ
೧.	ಪೂಕಂದ ಶಾ.ಸಂ. ೨೮ (ಕ)	-	ಹೂಕುಂದ	ಪ>ಹ ಅ>ಉ
೨.	ಪುರುಸಗೊಂಡನಹಳಿ ಶಾ.ಸಂ.೪೬ (ಕ)	-	ಪುರುಷಗೊಂಡನಹಳ್ಳಿ	ಸ>ಷ ದ್ವಿತ್ವಾಗಮನ
೩.	ತುಂಗಣಿ ಶಾ.ಸಂ.೬೮ (ಕ)	೧೩೧೯	ತುಂಗಣಿ	-
೪.	ಕುಂದತೂರ ಶಾ.ಸಂ.೮೭ (ಕ)	-	ಕುಂತೂರು	ದ-ಲೋಪ ಅ>ಉ
೫.	ಬಂಡಿಗಾನಹಳ್ಳಿ ಶಾ.ಸಂ. ೧೧೮(ಕ)	೧೬೬೨	ಬಂಡಿಗನಹಳ್ಳಿ	ಆ>ಅ
೬.	ಬಂನಿಕುಪ್ಪೆ ಶಾ.ಸಂ.೨ (ಚ)	೧೬೬೭	ಬನ್ನಿಕುಪ್ಪೆ	ಬಿಂದು-ಲೋಪ ದ್ವಿತ್ವಾಗಮನ
೭.	**ಚಂದಿಮಾದಿಯಹಳ್ಳಿ ಶಾ.ಸಂ.೧೨ (ಚ)	೧೩೧೯	ಚನ್ನಮಾರನಹಳ್ಳಿ	ಬಿಂದು-ಲೋಪ ನ-ಆಗಮನ ದ-ಲೋಪ ದ>ರ ಯ>ನ
೮.	ಚಂನಪಟ್ಟಣ ಶಾ.ಸಂ.೫೨ (ಚ)	೧೪೯೯	ಚನ್ನಪಟ್ಟಣ	ಬಿಂದು-ಲೋಪ ದ್ವಿತ್ವಾಗಮನ
೯.	ಕೋಡಂಬಳ್ಳಿ ಶಾ.ಸಂ.೫೨ (ಚ)	೧೪೯೯	ಕೋಡಂಬಳ್ಳಿ	
೧೦.	ಹೊಂಗನೂರ ಶಾ.ಸಂ.೧೪೮ (ಚ)	-	ಹೊಂಗನೂರು	ಅ>ಉ
೧೧.	ರಾಜರಾಜ ಚತುರ್ವೇದಿ ಮಂಗಲ ಶಾ.ಸಂ.೧೫೫ (ಚ)	೧೫೩೪	ಕೂಡ್ಲೂರು	ಪುನರ್‌ನಾಮಕರಣ
೧೨.	ಕಂನಮಂಗಲ ಶಾ.ಸಂ. ೧೭೦-೧೭೧ (ಚ)	-	ಕನ್ನಮಂಗಲ	ಬಿಂದುಲೋಪ ದ್ವಿತ್ವಾಗಮನ

೧೪.	ಹಿರಿಯ ಗಂಗವಾಡಿ ಶಾ.ಸಂ.೧೮೩ (ಚ)	೧೨೯೪	ದೊಡ್ಡಗಂಗವಾಡಿ	ಹಿರಿಯ>ದೊಡ್ಡ ಪದ ಬದಲಾವಣೆ
೧೫.	ಕಂಚುಗಾರ್ರಹಳ್ಳಿ ಶಾ.ಸಂ.೧ (ಮಾ)	-	ಕಂಚುಗಾರನಹಳ್ಳಿ	ರ-ದ್ವಿತ್ವ ಲೋಪ ನ-ಆಗಮನ
೧೬.	ಹಾಲು ಶಿಂಘಿಗನಹಳ್ಳಿ ಶಾ.ಸಂ.೧ (ಮಾ)	-	ಹಾಲುಸಿಂಗನಹಳ್ಳಿ	ಶ>ಸ ಘ-ಲೋಪ
೧೭.	ಕೆಂಪಾಪುರ ಶಾ.ಸಂ.೨ (ಮಾ)	೧೬೭೦	ಕೆಂಪಾಪುರ	-
೧೮.	ಹಂಚಿಕುಪೆ ಶಾ.ಸಂ.೨ (ಮಾ)	೧೬೭೦	ಹಂಚಿಕುಪ್ಪೆ	ದ್ವಿತ್ವಾಗಮನ
೧೯.	ಹಾರಂಗಹಳ್ಳಿ ಶಾ.ಸಂ.೫ (ಮಾ)	೧೬೭೬	ಹ್ಯಾಗನಹಳ್ಳಿ	ಯ-ದ್ವಿತ್ವಾಗಮನ ರ-ಲೋಪ ಬಿಂದು-ಲೋಪ ನ-ಆಗಮನ
೨೦.	ಕೆಂಪಸಾಗರ ಶಾ.ಸಂ.೫ (ಮಾ)	೧೬೭೬	ಕೆಂಪಸಾಗರ	-
೨೧.	ಪೆಂಮನಹಳ್ಳಿ ಶಾ.ಸಂ.೭ (ಮಾ)	-	ಪೆಮ್ಮನಹಳ್ಳಿ	ಬಿಂದು-ಲೋಪ ದ್ವಿತ್ವಾಗಮನ
೨೨.	ಬೊಂಮನಹಳ್ಳಿ ಶಾ.ಸಂ.೭ (ಮಾ)	-	ಬೊಮ್ಮನಹಳ್ಳಿ	ಬಿಂದು-ಲೋಪ ದ್ವಿತ್ವಾಗಮನ
೨೩.	ಕಳ್ಳಱಮಂಗಲ ಶಾ.ಸಂ.೧೪ (ಮಾ)	-	ಕರ್ಲಮಂಗಲ	ನಿರ್ದಿಷ್ಟ ಬದಲು ಳ-ಕಾರಲೋಪ ಳ-ದ್ವಿತ್ವ ಲೋಪ ಱ>ರ ಲ-ದ್ವಿತ್ವಾಗಮನ
೨೪.	ಮಾಡಂಬಾಳ ಶಾ.ಸಂ.೧೩ (ಮಾ)	೧೩೪೦	ಮಾಡಬಾಳ	ಬಿಂದು ಲೋಪ
೨೫.	ಕೆಂಪನಪುರ ಶಾ.ಸಂ. ೪೫ (ಮಾ)	-	ಕೆಂಪೋಹಳ್ಳಿ	ಅ>ಓ ನ-ಲೋಪ ವಾರ್ಗಿಕ ಬದಲಾವಣೆ

೨೬.	ದಂಮಿನಕಟ್ಟೆ ಶಾ.ಸಂ.೪೫ (ಮಾ)	-	ದೊಮ್ಮನಕಟ್ಟೆ	ಅ>ಒ ಬಿಂದು-ಲೋಪ ಇ>ಅ ದ್ವಿತ್ವಾಗಮನ
೨೭.	**ಹುಳಿಂನಹಳ್ಳಿ ಶಾ.ಸಂ.೫೯ (ಮಾ)	೧೩೧೮	ಹುಲ್ಲೇನಹಳ್ಳಿ	ಳ>ಲ ಇ>ಏ ಬಿಂದು-ಲೋಪ ದ್ವಿತ್ವಾಗಮನ

೪.೨.೩. ಸಜಾತಿ ದ್ವಿತ್ವದ ಸ್ಥಳನಾಮಗಳು

ಕ್ರ.ಸಂ.	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ.)	ವರ್ತಮಾನ ಉಚ್ಚಾರಣಾ ರೂಪ	ಶಾಬ್ದಿಕ ವ್ಯತ್ಯಾಸ
೧.	ಹಾರುವಹಳ್ಳಿ ಶಾ.ಸಂ.೩ (ಕ)	೧೫೩೩	ಹಾರೋಹಳ್ಳಿ	ಉ>ಓ
೨.	ಚಿಕ್ಕಮಣಲವಾಡಿ ಶಾ.ಸಂ.೮.(ಕ)	೧೪೮೪	ಚಿಕ್ಕಮರಳವಾಡಿ	ಣ>ರ ಲ>ಳ
೩.	ನಲ್ಲಹಳ್ಳಿ ಶಾ.ಸಂ.೩೧ (ಕ)	೧೫೦೧	ನಲ್ಲಹಳ್ಳಿ	-
೪.	ಮಾರೆಹಳ್ಳಿ ಶಾ.ಸಂ.೪೦ (ಕ)	೧೩೫೧	ಎಡಮಾರನಹಳ್ಳಿ	ದಿಗ್ವಾಚಕ ಆಗಮನ ಏ>ಅ ನ-ಆಗಮನ
೫.	ಪುರುಸಗೊಂಡನಹಳ್ಳಿ ಶಾ.ಸಂ.೪೬ (ಕ)	-	ಪುರುಷಗೊಂಡನಹಳ್ಳಿ	ಸ>ಷ ದ್ವಿತ್ವಾಗಮನ
೬.	**ಕಾಣಿಕಾಖಿಹಳ್ಳಿ ಶಾ.ಸು.೬೮ (ಕ)	೧೩೧೯	ಕನಕಪುರ	ಆ>ಅ ಣ>ನ ಆ>ಅ ಶಕಟರೇಫ-ಲೋಪ ವಾರ್ಗಿಕ ಬದಲಾವಣೆ
೭.	ಕಬ್ಬಹಾಳ ಶಾ.ಸಂ.೬೪ (ಕ)	೧೨೭೯	ಕಬ್ಬಾಳು	ಅ>ಆ ಹ-ಲೋಪ ಅ>ಉ
೮.	ನಿಟ್ಟೂರಹಳ್ಳಿ ಶಾ.ಸಂ.೭೬ (ಕ)	೧೨೯೯	ನಿಟ್ಟೂರು	ಅ>ಉ ವಾರ್ಗಿಕಲೋಪ

೯.	ಜೀಯಗವುಡನಹಳ್ಳಿ ಶಾ.ಸಂ.೮೦ (ಕ)	೧೨೬೫	ಜೀಯಗೊಂಡನಹಳ್ಳಿ	ಅ>ಒ ಬಿಂದು ಆಗಮನ ವ-ಲೋಪ
೧೦.	ಬೂದಿಕುಪ್ಪೆ ಶಾ.ಸಂ. ೯೬ (ಕ)	೧೬೫೩	ಬೂದಿಗುಪ್ಪೆ	ಕ>ಗ
೧೧.	ಬೆಉಕುಪ್ಪೆ ಶಾ.ಸಂ.೧೦೨ (ಕ)	-	ಬೇಕುಪ್ಪೆ	ಎ>ಏ ಉ-ಲೋಪ
೧೨.	ಕಳ್ಳೇನಹಳ್ಳಿ ಶಾ.ಸಂ. ೧೦೭ (ಕ)	೧೨೯೪	ಕಲ್ಲಹಳ್ಳಿ	ಳ>ಲ ನ-ಲೋಪ
೧೩.	ಬಂಡಿಗಾನಹಳ್ಳಿ ಶಾ.ಸಂ.೧೧೮ (ಕ)	೧೬೬೨	ಬಂಡಿಗನಹಳ್ಳಿ	ಆ>ಅ
೧೪.	**ಮಿಳೆಹಳ್ಳಿ ಶಾ.ಸಂ.೧೬ (ಚ)	೧೩೫೧	ಮೆಳೆಹಳ್ಳಿ	ಇ>ಎ
೧೫.	ಚಂನಪಟ್ಟಣ ಶಾ.ಸಂ.೫೨ (ಚ)	೧೪೯೯	ಚನ್ನಪಟ್ಟಣ	ಬಿಂದು-ಲೋಪ ದ್ವಿತ್ವಾಗಮನ
೧೬.	ಬನ್ನಿಕುಪ್ಪೆ ಶಾ.ಸಂ.೧೮ (ಚ)	೧೭೬೭	ಬನ್ನಿಕುಪ್ಪೆ	-
೧೭.	ಸಾಗುವಳ್ಳಿ ಶಾ.ಸಂ.೨೬ (ಚ)	-	ಸಾಗೋಹಳ್ಳಿ	ಉ>ಓ ವ>ಹ
೧೮.	ಮೊಗೇಹಳ್ಳಿ ಶಾ.ಸಂ.೪೯ (ಚ)	೧೭೬೦	ಮೋಗೇನಹಳ್ಳಿ	ಒ>ಓ ನ-ಆಗಮನ
೧೯.	**ಮಾಳಿಗೆಹಳ್ಳಿ ಶಾ.ಸಂ.೫೧ (ಚ)	-	ಮಾಳಗಾಳು	ಇ>ಅ ಎ>ಆ ಳ-ಆಗಮನ ವಾರ್ಗಿಕ ಬದಲಾವಣೆ
೨೦.	ಕೋಡಂಬಳ್ಳಿ ಶಾ.ಸಂ.೫೨ (ಚ)	೧೪೯೯	ಕೋಡಂಬಳ್ಳಿ	-
೨೧.	ಅಂಕನಹಳ್ಳಿ ಶಾ.ಸಂ.೫೩ (ಚ)	೧೫೩೫	ಅಂಕನಹಳ್ಳಿ	-
೨೨.	ಗರಿಖಹಳ್ಳಿ ಶಾ.ಸಂ.೫೬ (ಚ)	೧೬೬೬	ಗರಕಹಳ್ಳಿ	ಇ>ಅ ಖ>ಕ

೨೩.	ದಾಸರಹಳ್ಳಿ ಶಾ.ಸಂ.೫೬ (ಚ)	೧೬೬೬	ದಾಸರಹಳ್ಳಿ	-
೨೪.	ರಾಮೇನಹಳ್ಳಿ ಶಾ.ಸಂ.೫೬ (ಚ)	೧೬೬೬	ರಾಮನಹಳ್ಳಿ	ಏ>ಅ
೨೫.	ಗಱುಕೆಹಳ್ಳಿ ಶಾ.ಸಂ.೫೮(ಚ)	೧೪೧೦	ಗರಕಹಳ್ಳಿ	ಱ>ರ ಉ>ಅ ಎ>ಅ
೨೬.	ಇಗ್ಗಲೂರ ಶಾ.ಸಂ.೬೨ (ಚ)	೧೪೪೩	ಇಗ್ಗಲೂರು	ಅ>ಉ
೨೭.	ಮಗುವನಹಳ್ಳಿ ಶಾ.ಸಂ. ೭೩ (ಚ)	೧೩೧೯	ಮಾಗೇನಹಳ್ಳಿ	ಅ>ಆ ಉ>ಏ ವ-ಲೋಪ
೨೮.	ಚಕ್ಕಱೆ ಶಾ.ಸಂ.೧೫೫ (ಚ)	೧೫೩೪	ಚಕ್ಕರೆ	ಱ>ರ
೨೯.	ಹೊಸಹಳ್ಳಿ ಶಾ.ಸಂ.೧೫೬ (ಚ)	೧೫೧೩	ಹೊಸಹಳ್ಳಿ	-
೩೦.	ಚಕ್ಕಲೂರು ಶಾ.ಸಂ.೧೫೮ (ಚ)	೧೪೭೮	ಚಕ್ಕಲೂರು	-
೩೧.	ಮಾರಚನಹಳ್ಳಿ ಶಾ.ಸಂ.೧೬೮ (ಚ)	೧೩೩೬	ಮಾರ್ಚನಹಳ್ಳಿ	ದ್ವಿತ್ವಾಗಮನ
೩೨.	ಚಾಮನಹಳ್ಳಿ ಶಾ.ಸಂ.೧೭೦ (ಚ)	-	ಚಾಮನಹಳ್ಳಿ	-
೩೩.	ಮಾರಪ್ಪನಕುಪ್ಪೆ ಶಾ.ಸಂ.೧೮೫ (ಚ)	೧೩೪೧	ಅಕ್ಕೂರು	ಪುನರ್‌ನಾಮಕರಣ
೩೪.	ಕಂಚುಗಾರ್ರಹಳ್ಳಿ ಶಾ.ಸಂ.೧ (ಮಾ)	-	ಕಂಚುಗಾರನಹಳ್ಳಿ	ದ್ವಿತ್ವಲೋಪ ನ-ಆಗಮನ
೩೫.	ಶಿರುಪತಹಳ್ಳಿ ಶಾ.ಸಂ.೪ (ಮಾ)	೧೭೧೭	ಶ್ರೀಪತಿಹಳ್ಳಿ	ದ್ವಿತ್ವಲೋಪ ರ-ಲೋಪ ಇ>ಈ ಅ>ಇ

೩೬.	ಜಟ್ಟನಹಳ್ಳಿ ಶಾ.ಸಂ.೪ (ಮಾ)	೧೭೧೭	ಜುಟ್ಟನಹಳ್ಳಿ	ಅ>ಉ
೩೭.	ಭೂಮಿಹಾಲಶೆಟ್ಟಿಹಳ್ಳಿ ಶಾ.ಸಂ.೫ (ಮಾ)	೧೬೭೬	ಹಾಳಶೆಟ್ಟಿಹಳ್ಳಿ	ಭೂ ಸ್ಥಿತಿವಾಚಕ ಲೋಪ
೩೮.	ಕಲ್ಲಿಕೆರೆ ಶಾ.ಸಂ. ೮ (ಮಾ)	೧೬೮೧	ಕಲ್ಕೆರೆ	ಸಜಾತಿದ್ವಿತ್ವ ಲೋಪ ಇ>ಎ ವಿಜಾತಿ ದ್ವಿತ್ವ ಆಗಮನ
೩೯.	**ಚಿಕ್ಕರಬಾವಿ ಶಾ.ಸಂ. ೧೦ (ಮಾ)	೧೩೧೫	ಚಕ್ರಬಾವಿ	ಇ>ಅ ಸಜಾತಿದ್ವಿತ್ವ>ವಿಜಾತಿದ್ವಿತ್ವ
೪೦.	ಸಟ್ಟೆಹಳ್ಳಿ ಶಾ.ಸಂ. ೧೧ (ಮಾ)	೧೫೨೦	ನಾಗಶೆಟ್ಟಿಹಳ್ಳಿ	ನಿರ್ದಿಷ್ಟ ಆಗಮನ ಸ>ಶ ಎ>ಇ
೪೧.	ಹುಳೇನಹಳ್ಳಿ ಶಾ.ಸಂ.೧೯ (ಮಾ)	೧೩೪೧	ಹುಲ್ಲೇನಹಳ್ಳಿ	ಳ>ಲ ದ್ವಿತ್ವಾಗಮನ
೪೨.	ಹುಳಿಕಟ್ಟೆ ಶಾ.ಸಂ.೨೩ (ಮಾ)	-	ಹುಲಿಕಟ್ಟೆ	ಳ>ಲ
೪೩.	**ಹೆರಳಗನಹಳ್ಳಿ ಶಾ.ಸಂ.೨೯ (ಮಾ)	೧೬೬೮	ಹೇಳಿಗೆಹಳ್ಳಿ	ಎ>ಏ ರ-ಲೋಪ ಅ>ಎ ನ-ಲೋಪ
೪೪.	ಸಿರಿಪರಿಹಳ್ಳಿ ಶಾ.ಸಂ.೩೦ (ಮಾ)	೧೬೬೮	ಶ್ರೀಪತಿಹಳ್ಳಿ	ಸ>ಶ ಇ>ಈ ವಿಜಾತಿ ದ್ವಿತ್ವಾಗಮನ
೪೫.	ಮರುಳದೇವರ ಕಟ್ಟೆ ಶಾ.ಸಂ.೩೩ (ಮಾ)	೧೬೬೮	ಮರಳುದೇವನಕಟ್ಟೆ	ಉ>ಅ ಅ>ಉ ರ>ನ
೪೬.	**ಗಜಗಾರಕುಪ್ಪೆ ಶಾ.ಸಂ.೩೮ (ಮಾ)	-	ಗೆಜ್ಜೆಗಾರಕುಪ್ಪೆ	ಅ>ಎ ಅ>ಎ ದ್ವಿತ್ವಾಗಮನ

೪೭.	ಮಾಯಿನಾಯಕನಹಳ್ಳಿ ಶಾ.ಸಂ.೪೨ (ಮಾ)	-	ಮಾಯನಾಯಕನಹಳ್ಳಿ	ಇ>ಅ
೪೮.	ಕೆಂಪನಪುರ ಶಾ.ಸಂ. ೪೫ (ಮಾ)	-	ಕೆಂಪೋಹಳ್ಳಿ	ಅ>ಓ ನ-ಲೋಪ ವಾರ್ಗಿಕ ಬದಲಾವಣೆ
೪೯.	**ದಂಮಿನಕಟ್ಟೆ ಶಾ.ಸಂ.೪೫ (ಮಾ)	-	ದೊಮ್ಮನಕಟ್ಟೆ	ಅ>ಒ ಬಿಂದು-ಲೋಪ ಇ>ಅ ದ್ವಿತ್ವಾಗಮನ
೫೦.	**ಹುಳಿಂನಹಳ್ಳಿ ಶಾ.ಸಂ.೫೯ (ಮಾ)	೧೩೧೮	ಹುಲ್ಲೇನಹಳ್ಳಿ	ಳ>ಲ ಇ>ಏ ಬಿಂದು-ಲೋಪ ದ್ವಿತ್ವಾಗಮನ
೫೧.	ಮಾರಯ್ಯನಹಳ್ಳಿ ಶಾ.ಸಂ. ೮೨ (ಮಾ)	೧೫೨೪	ಮಾರೇನಹಳ್ಳಿ	ಅ>ಏ ಯ-ಲೋಪ
೫೨.	ಬಿಟ್ಟಸಮುದ್ರ ಶಾ.ಸಂ.೭೮ (ಮಾ)	೧೫೧೧	ಬಿಟ್ಟಸಂದ್ರ	ಮ-ಲೋಪ ಬಿಂದು-ಆಗಮನ

**ಶಾಸನೋಕ್ತ ಸ್ಥಳನಾಮಗಳು ಹಾಗೂ ವರ್ತಮಾನದ ಉಚ್ಚರಣಾ ರೂಪದಲ್ಲಿರುವ ಸ್ಥಳನಾಮಗಳಲ್ಲಿ ಶಾಬ್ದಿಕ ಮತ್ತು ಭಾಷಿಕವಾಗಿ ವ್ಯತ್ಯಾಸವಾಗಿರುವುದನ್ನು ಗಮನಿಸಿದಾಗ ನಾಮಾಂತರ ಕ್ರಿಯೆಗೆ ಒಳಗಾಗಿರುವ ಸಂಭವವಿದೆ.

೪.೨.೪. ವಿಜಾತಿ ದ್ವಿತ್ವದ ಸ್ಥಳನಾಮಗಳು

ಕ್ರ.ಸಂ.	ಶಾಸನೋಕ್ತ ಸ್ಥಳನಾಮ	ಶಾಸನದ ಕಾಲ (ಕ್ರಿ.ಶ.)	ವರ್ತಮಾನ ಉಚ್ಚಾರಣಾ ರೂಪ	ಶಾಬ್ದಿಕ ವ್ಯತ್ಯಾಸ
೧.	ಹಲ್ಸೂರು ಶಾ.ಸಂ.೫೬ (ಕ)	೧೫೧೩	ಹಲಸೂರು	ವಿಜಾತಿ ದ್ವಿತ್ವ>ಅದ್ವಿತ್ವ
೨.	ವಿರುಪ ಸಮುದ್ರ ಶಾ.ಸಂ. ೯೧ (ಕ)	೧೬೬೭	ವಿರುಪಸಂದ್ರ	ಮ-ಲೋಪ ಬಿಂದು-ಆಗಮನ
೩.	ವಿರೂಪ ಸಮುದ್ರ ಶಾ.ಸಂ.೯೫ (ಕ)	೧೬೬೨	ವಿರುಪಸಂದ್ರ	ಊ>ಉ ಮ-ಲೋಪ ಬಿಂದು-ಆಗಮನ

೪.	ಕೂಡ್ಲೂರು ಶಾ.ಸಂ.೧೧೪ (ಚ)	೧೭೬೭	ಕೂಡ್ಲೂರು	-
೫.	ರಾಜರಾಜ ಚತುರ್ವೇದಿ ಮಂಗಲ, ಶಾ.ಸಂ.೧೫೫ (ಚ)	೧೫೩೪	ಕೂಡ್ಲೂರು	ಪುನರ್‌ನಾಮಕರಣ
೬.	ಶ್ರೀಪತಿಹಳ್ಳಿ ಶಾ.ಸಂ.೫ (ಮಾ)	೧೬೭೬	ಶ್ರೀಪತಿಹಳ್ಳಿ	-
೭.	ಶ್ರೀಗಿರಿ ಸಮುದ್ರಪುರ ಶಾ.ಸಂ. ೪೯ (ಮಾ)		ಶ್ರೀಗಿರಿಪುರ	ವಾರ್ಗಿಕ (ಸಮುದ್ರ)-ಲೋಪ
೮.	ಬಿಟ್ಟ ಸಮುದ್ರ ಶಾ.ಸಂ.೭೯ (ಮಾ)	೧೫೧೧	ಬಿಟ್ಟಸಂದ್ರ	ಮಲೋಪ ಬಿಂದು-ಆಗಮನ ಅ>ಅ

೪.೩. ಭಾಷಾ ಪ್ರಮುಖ ಅಂಶಗಳು

ರಾಮನಗರ ಜಿಲ್ಲೆಯ ಸುಮಾರು ಕ್ರಿ.ಶ.೮೯ ರಿಂದ ಕ್ರಿ.ಶ.೧೭೯ರ ನಡುವಿನ ಸುಮಾರು ಒಂಬತ್ತು ನೂರು ವರ್ಷಗಳ ಶಾಸನೋಕ್ತ ಸ್ಥಳನಾಮಗಳನ್ನು ಭಾಷಾವೈಜ್ಞಾನಿಕ ಪರಿಶೀಲನೆಗೊಳಪಡಿಸಿದಾಗ ಹೊರಹೊಮ್ಮಿದ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದಾಗಿದೆ.

೪.೩.೧. ಸಂಧ್ಯಾಕ್ಷರಗಳಾದ ಐ ಮತ್ತು ಔಗಳು ಎಲ್ಲಿಯೂ ಕಂಡುಬರುವುದಿಲ್ಲ.

೪.೩.೨. ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳೆಲ್ಲವೂ ಸಾಮಾನ್ಯವಾಗಿ ಸ್ವರಾಂತವಾಗಿವೆ. ವ್ಯಂಜನಾಂತವಾಗಿ ಎಲ್ಲಿಯೂ ಕಂಡುಬರುವುದಿಲ್ಲ.

೪.೩.೩. ಅನುನಾಸಿಕವಾದ 'ಞ' ಯಾವ ಸ್ಥಳನಾಮಗಳಲ್ಲಿಯೂ ಕಂಡು ಬರುವುದಿಲ್ಲ. ಆದರೆ ಮತ್ತೊಂದು ಕಂಠ್ಯ ಅನುನಾಸಿಕವಾದ 'ಙ' ಕಂಡುಬರುತ್ತದೆ. ಇಲ್ಲಿ ಬಿಂದುವಿನ ಬದಲಾಗಿ ಕಂಠ್ಯ ಅನುನಾಸಿಕದ ಬಳಕೆಯಾಗಿದೆ. ಪ್ರಾಚೀನ ಕನ್ನಡ ಶಾಸನಗಳಲ್ಲಿ ಬಿಂದುವಿನ ಬದಲಾಗಿ ಅನುನಾಸಿಕಗಳ ಬಳಕೆಯನ್ನು ನೋಡಬಹುದು.

ಉದಾ. ಗಂಗವಾಡಿ>ಗಙ್ಗವಾಡಿ

ಪುಂಗನೂರ>ಪುಙ್ಗನೂರ

೪.೩.೪. ಘರ್ಷಗಳ ಪೈಕಿ ತಾಲವ್ಯ 'ಶ್' ಸಂಸ್ಕೃತದಿಂದ ನಿಷ್ಪನ್ನವಾದ ಸ್ಥಳನಾಮಗಳಲ್ಲಿ ಮಾತ್ರ ಕಂಡುಬರುತ್ತದೆ. ಮೂಲ ಸ್ಥಳನಾಮಗಳು 'ಶ್'ಗಳನ್ನು ಹೊಂದಿರಲಾರವು ಎಂಬುದು ಕೇವಲ ಊಹೆಯಾಗಿರದೆ ಸತ್ಯವೇ ಆಗಿರುವುದು ನಿಷ್ಪತ್ತಿ ನಿರ್ಣಯದಲ್ಲಿ ದೃಢಗೊಳ್ಳಲಿದೆ. ಉದಾ. ಹಾಲು ಶಿಂಘಿಗನಹಳ್ಳಿ

೪.೩.೫. ದ್ರಾವಿಡ ಭಾಷೆಗಳಲ್ಲಾಗಲಿ, ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲಾಗಲಿ ಮಹಾಪ್ರಾಣಗಳ ಬಳಕೆ ಇಲ್ಲ. ಕೇವಲ ಸುಶಿಕ್ಷಿತರ ನುಡಿಯಲ್ಲಿ ಮಾತ್ರ (ಮೂಲತಃ ಕನ್ನಡದಲ್ಲಿ ಸಹಜವಾಗಿಲ್ಲದ ಮಹಾಪ್ರಾಣಗಳು) ಸಂಸ್ಕೃತ-ಪ್ರಾಕೃತ ಭಾಷೆಗಳ ಪ್ರಭಾವದಿಂದ ಸೇರಿಕೊಂಡಿವೆ. ಈ ಎಲ್ಲ ಕಾರಣಗಳಿಂದ ಅಚ್ಚಗನ್ನಡದಲ್ಲಿ (ತಿರುಳಿನಲ್ಲಿ)ಮಹಾಪ್ರಾಣಗಳನ್ನು ಸೇರಿಸಲಾಗುವುದಿಲ್ಲ[೬] ಎಂದು ಹೇಳಿದರೂ ಅನ್ಯಭಾಷೆಗಳ ಪ್ರಭಾವಕ್ಕೆ ಒಳಗಾಗಿ ಕೆಲವು ಸ್ಥಳನಾಮಗಳಲ್ಲಿ ಮಹಾಪ್ರಾಣಗಳ ಬಳಕೆಯಾಗಿದೆ.

ಉದಾ. ಹಾಲು ಶಿಂಘಿಗನಹಳ್ಳಿ

ಗರಿಖಹಳ್ಳಿ

ಭೇ ಊರ

೪.೩.೬. ಹಳಗನ್ನಡ ಭಾಷೆಯ ಕಾವ್ಯದಲ್ಲಿ ಬಳಕೆಯಾಗಿರುವ ಶಕಟರೇಫೆ 'ಱ'ಕಾರವು ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ಬಳಕೆಯಾಗಿದೆ.

ಉದಾ. ಮುಱುಕುಣಿ

ಸಱಕೆಱೆ (ಕ್ರಿ.ಶ. ೧೫೨೭)

ಗಱುಕೆಹಳ್ಳಿ (ಕ್ರಿ.ಶ. ೧೪೧೦)

ಕಾಣಿಕಾಱಹಳ್ಳಿ (ಕ್ರಿ.ಶ. ೧೩೮೯)

ಚಕ್ಕೆಱೆ (ಕ್ರಿ.ಶ. ೧೫೩೪)

ಕಳ್ಳಱಮಂಗಲ

ಅಚ್ಚಗನ್ನಡ ದೇಶೀಯ ವರ್ಣವಾದ 'ಱ' ಕಾರವು ೧೨ನೇ ಶತಮಾನದ ನಂತರ ರೇಫೆಯಾಗಿ ಬಳಕೆಯಾಗುತ್ತಿದ್ದರೂ ಕೂಡ ಇಲ್ಲಿನ ಶಾಸನೋಕ್ತ ಸ್ಥಳನಾಮಗಳಲ್ಲಿ ನಂತರವೂ ಅಂದರೆ ೧೬ನೇ ಶತಮಾನದವರೆಗೂ 'ಱ' ಬಳಕೆಯಲ್ಲಿತ್ತು ಎಂಬುದು ತಿಳಿದು ಬರುತ್ತದೆ. 'ರೇಫೆ' ಮತ್ತು ಶಕಟರೇಫೆಗಳ ಪ್ರಯೋಗ ಶಾಸನಗಳಲ್ಲಿ ಮುಂದುವರೆದಿತ್ತೆಂಬುದು ಇದರಿಂದ ಸಾಬೀತಾಗುತ್ತದೆ.

೪.೩.೭. ಅನುಸ್ವಾರ ಲೋಪವಾಗಿ ದ್ವಿತ್ವಾಗಮವಾಗುವ ಪ್ರಕ್ರಿಯೆಯನ್ನು ಕೆಲವು ಸ್ಥಳನಾಮಗಳಲ್ಲಿ ಕಾಣಬಹುದು.

(ಚ) ಚಂನಪಟ್ಟಣ>ಚನ್ನಪಟ್ಟಣ

(ಚ) ಕಂನಮಂಗಲ>ಕನ್ನಮಂಗಲ

(ಮಾ) ದಂಮಿನಕಟ್ಟೆ>ದಮ್ಮಿನಕಟ್ಟೆ

೪.೩.೮. ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ಕಂಡುಬರುವ ಧ್ವನಿಗಳನ್ನು ವರ್ತಮಾನ ಉಚ್ಚಾರಣಾ ರೂಪಕ್ಕೆ ಹೋಲಿಸಿದಾಗ ಉಂಟಾಗಿರುವ ಧ್ವನಿ ಪಲ್ಲಟಗಳನ್ನು ಈ ಕೆಳಕಾಣಿಸಿರುವಂತೆ ಸಂಗ್ರಹಿಸಬಹುದು.

ಧ್ವನಿ	ಹೊಂದಿದ ವ್ಯತ್ಯಾಸ	ಉದಾಹರಣೆ
ಅ	ಆ	ಕಬ್ಬಹಾಳ>ಕಬ್ಬಾಳು
	ಇ	ಶಿರುಪತಹಳ್ಳಿ>ಶ್ರೀಪತಿಹಳ್ಳಿ
	ಉ	ನಿಟ್ಟೂರಹಳ್ಳಿ>ನಿಟ್ಟೂರು
	ಎ	ಗಜಗಾರಕುಪ್ಪೆ>ಗೆಜ್ಜೆಗಾರಕುಪ್ಪೆ
	ಒ	ದಂಮಿನಕಟ್ಟೆ>ದೊಮ್ಮನಕಟ್ಟೆ
	ಓ	ಕೆಂಪನಪುರ>ಕೆಂಪೋಹಳ್ಳಿ
ಆ	ಅ	ಬಂಡಿಗಾನಹಳ್ಳಿ>ಬಂಡಿಗನಹಳ್ಳಿ
ಇ	ಅ	ಮಾಯಿನಾಯಕನಹಳ್ಳಿ>ಮಾಯನಾಯಕನನಹಳ್ಳಿ
	ಈ	ಸಿರಿಪತಿಹಳ್ಳಿ>ಶ್ರೀಪತಿಹಳ್ಳಿ
	ಎ	ಕಲ್ಲಿಕೆರೆ>ಕಲ್ಕೆರ, ಮಿಳೆಹಳ್ಳಿ>ಮೆಳೆಹಳ್ಳಿ
	ಏ	ಹುಳಿಂನಹಳ್ಳಿ>ಹುಲ್ಲೇನಹಳ್ಳಿ
ಉ	ಅ	ಅಳಲುಕಪ್ಪೆ>ಅಳಲಕುಪ್ಪೆ
	ಏ	ಮಗುವನಹಳ್ಳಿ>ಮಾಗೇನಹಳ್ಳಿ
	ಓ	ಹಾರುವಹಳ್ಳಿ>ಹಾರೋಹಳ್ಳಿ
ಎ	ಅ	ಗಱುಕೆಹಳ್ಳಿ>ಗರಕಹಳ್ಳಿ
	ಇ	ಸೆಟ್ಟೆಹಳ್ಳಿ>ನಾಗಶೆಟ್ಟಿಹಳ್ಳಿ
	ಏ	ಹೆರಳಿಗನಹಳ್ಳಿ>ಹೇಳಗೆಹಳ್ಳಿ
ಏ	ಅ	ರಾಮೇನಹಳ್ಳಿ>ರಾಮನಹಳ್ಳಿ
ಒ	ಓ	ಮೊಗೇಹಳ್ಳಿ>ಮೋಗೇನಹಳ್ಳಿ
ಕ	ಗ	ಬೂದಿಕುಪ್ಪೆ>ಬೂದಿಗುಪ್ಪೆ
ಖ	ಕ	ಗರಿಖಹಳ್ಳಿ>ಕರಿಕಹಳ್ಳಿ
ಣ	ನ	ಕಾಣಿಕಾರನಹಳ್ಳಿ>ಕನಕಪುರ
	ರ	ಚಿಕ್ಕಮಣಲವಾಡಿ>ಚಿಕ್ಕಮರಳವಾಡಿ
ರ	ಳ	ಅರಲುಕುಪ್ಪೆ>ಅಳಲುಕುಪ್ಪೆ
ಲ	ಳ	ಚಿಕ್ಕಮಣಲವಾಡಿ>ಚಿಕ್ಕಮರಳವಾಡಿ
ಶ	ಸ	ಹಾಲುಶಿಂಘನಹಳ್ಳಿ>ಹಾಲುಸಿಂಗನಹಳ್ಳಿ
ಸ	ಶ	ಸೆಟ್ಟೆಹಳ್ಳಿ>ನಾಗಶೆಟ್ಟಿಹಳ್ಳಿ
	ಷ	ಪುರುಸಗೊಂಡನಹಳ್ಳಿ>ಪುರುಷಗೊಂಡನಹಳ್ಳಿ

ಳ ಲ ಹುಳಿಕಟ್ಟೆ>ಹುಲಿಕಟ್ಟೆ

ಹುಳೇನಹಳ್ಳಿ>ಹುಲ್ಲೇನಹಳ್ಳಿ

೪.೩.೯. ಸ್ಥಳನಾಮಗಳಿಗೆ ಸೇರಿಕೊಳ್ಳುವ ಉಪ ಆಕೃತಿಮಾ (ಸಾಪೇಕ್ಷ), ವಿಶೇಷಣಗಳೂ ಬಹು ಸೀಮಿತ ಪ್ರಮಾಣದಲ್ಲಿವೆ. ಅವುಗಳೆಂದರೆ ಚಿಕ್ಕ ಮತ್ತು ಹಿರಿಯ. ಉದಾ. ಚಿಕ್ಕ ಮಣಲವಾಡಿ, ಹಿರಿಯ ಮಳಲೂರ.

೪.೩.೧೦. ಅನುನಾಸಿಕವು ಅನುಸ್ವಾರಗೊಳ್ಳುವ ಕನ್ನಡ ಭಾಷೆಯ ಜಾಯಮಾನ ಸ್ಥಳನಾಮಗಳಲ್ಲಿ ಕಂಡುಬರುತ್ತದೆ. ಉದಾ. ಗಙ್ಗವಾಡಿ>ಗಂಗವಾಡಿ, ಪುಙ್ಗನೂರ>ಪುಂಗನೂರ

೪.೩.೧೧. ನಿರ್ದಿಷ್ಟದ ಕೊನೆಯಲ್ಲಿ ಆದರೆ ವಾರ್ಗಿಕದ ಪೂರ್ವದಲ್ಲೇ ಸೇರುವ ಸಂಬಂಧ ಸೂಚಕ ಪ್ರತ್ಯಯಗಳು ಹಲವಾರು. ಅವುಗಳೆಂದರೆ ನ.ಣ.ಗ.ಏ.ಲ.ಲಾ.ಳ.ಬೆ.ಬ್ಬೆ.ಕ.ಕ್ಕ ಮತ್ತು ರ ಮುಂತಾದವುಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ರಾಮನಗರ ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ಬಹು ಸೀಮಿತವಾದ ಸಂಬಂಧಸೂಚಕ ಪ್ರತ್ಯಯಗಳ ಬಳಕೆಯಾಗಿರುವುದನ್ನು ಕಾಣಬಹುದು. ಅವುಗಳೆಂದರೆ ನ, ರ, ಯ, ದ ಮಾತ್ರ ಆಗಿವೆ. ಉದಾ. ಬಂಡಿಗಾನಹಳ್ಳಿ, ದಾಸರಳ್ಳಿ, ಸೊಂಡೆಯಕೊಪ್ಪ, ಪರಾದಹಳ್ಳಿ.

೪.೩.೧೨. ಜಿಲ್ಲೆಯ ಶಾಸನೋಕ್ತ ಸ್ಥಳನಾಮಗಳಲ್ಲಿ ಬಳಕೆಯಾಗಿರುವ ತದ್ಭವಗಳು ಇಂತಿವೆ. ಉದಾ. ಪೂಕಂದ, ಗವುಡನಹಳ್ಳಿ, ಸಿರಿಪತಿಹಳ್ಳ, ಬಿಟ್ಟಸಮುದ್ರ.

೪.೩.೧೩. ಕೆಲವೊಂದು ಸ್ಥಳನಾಮಗಳಲ್ಲಿ ವರ್ಣಾವೃತ್ತಿಯೂ ಕಂಡುಬರುತ್ತದೆ. ಉದಾ. ಮರುಳದೇವರಕಟ್ಟೆ, ಹುಳೇನಹಳ್ಳಿ, ತಿರುನಾರಾಯಣಪುರ, ಕಾಣಿಕಾರನಹಳ್ಳಿ.

೪.೩.೧೪. ಸಮುದ್ರ>ಸಂದ್ರ: ಇಲ್ಲಿ ಉಭಯೋಷ್ಠ್ಯ 'ಮ್' ಕಾರವು ಮುಂದಿನ ದಂತ್ಯಸ್ಪರ್ಶ ವ್ಯಂಜನದಿಂದಾಗಿ ದಂತ್ಯ 'ನ್'ಕಾರವಾಗಿ ಪರಿವರ್ತಿತವಾಗಿದೆ. ಈ ವ್ಯತ್ಯಾಸವು ಹದಿನಾಲ್ಕು-ಹದಿನೈದನೇ ಶತಮಾನಗಳಿಗಿಂತ ಹಿಂದಿನವಲ್ಲವೆಂಬುದಕ್ಕೆ ಶಾಸನಾಧಾರವಿದೆ. ಉದಾ. ಬಿಟ್ಟಸಮುದ್ರ>ಬಿಟ್ಟಸಂದ್ರ (ಮಾಗಡಿ.೭೯, ಕ್ರಿ.ಶ.೧೫೧೧).

೪.೪.೦. ವಾರ್ಗಿಕಗಳು ಮತ್ತು ವಾರ್ಗಿಕ ಬಳಕೆಯ ಶಾಸನಗಳ ಆವರ್ತನ

<table>
<tr><th>ಕ್ರ.ಸಂ.</th><th>ವಾರ್ಗಿಕಗಳು</th><th>ವಾರ್ಗಿಕಗಳ ಆವರ್ತನ</th><th>ಶಾಸನಗಳ ಆವರ್ತನ</th></tr>
<tr><td>೦೧.</td><td>ಊರ | ಊರು | ವೂರ | ಉರ</td><td>೫೨</td><td>೨೨</td></tr>
<tr><td>೦೨.</td><td>-ಕಟ- | ಕಟ್ಟ | ಕಟ್ಟೆ | -ಗಟ್ಟೆ|-ಘಟ್ಟ</td><td>೧೨</td><td>೦೫</td></tr>
<tr><td>೦೩.</td><td>-ಕೆರೆ | -ಗೆರೆ | -ಕೇರಿ | -ಗೇರಿ</td><td>೪೫</td><td>೦೮</td></tr>
<tr><td>೦೪.</td><td>ಕಲ್ಲ |-ಕಲ್ಲು ಕಲು ಗಲು</td><td>೧೪</td><td>೦೧</td></tr>
<tr><td>೦೫.</td><td>-ಪುರ</td><td>೭೯</td><td>೧೪</td></tr>
</table>

೦೬.	-ಸಂತೆ | -	೦೧	-
೦೭.	- ಸಮುದ್ರ | -ಸಂದ್ರ | -ಸಾಗರ	೫೦	೦೯
೦೮.	- ಕುಪ್ಪೆ | - ಗುಪ್ಪೆ |	೩೩	೦೬
೦೯.	- ವಾಡ | - ವಾಡಿ	೧೩	೦೬
೧೦.	- ಮಂಗಲ	೦೯	೦೪
೧೧.	- ಹಳ್ಳಿ | -ಹಳಿ | -ಹಾಳ |-ವಳಿ	೩೫೧	೭೦

ಮೇಲ್ಕಾಣಿಸಿದ ವಾರ್ಗಿಕ ಆವರ್ತನವನ್ನು ಗಮನಿಸಿದಾಗ ಕನ್ನಡ ವಾರ್ಗಿಕವಾದ ಹಳ್ಳಿ ಅಗ್ರಸ್ಥಾನವನ್ನು ಪಡೆದಿದ್ದರೆ, ನಂತರದ ಸ್ಥಾನವನ್ನು ಊರು ಪಡೆದಿದೆ. ಶಾಸನೋಕ್ತ ಆವರ್ತನಗಳನ್ನು ಗಮನಿಸಿದಾಗ ಇವು ಅಚ್ಚಗನ್ನಡ ಪ್ರದೇಶಕ್ಕೆ ಸೇರಿದ ಪ್ರದೇಶವೆಂಬುದು ದೃಢಪಟ್ಟಿದ್ದರೂ ನಂತರದ ಸ್ಥಾನದಲ್ಲಿರುವ ಸಂಸ್ಕೃತದ 'ಪುರ' ಹಾಗೂ 'ಸಮುದ್ರ' ವಾರ್ಗಿಕಗಳನ್ನು ಗಮನಿಸಿದಾಗ ಈ ಪ್ರದೇಶದ ಮೇಲೆ ಸಂಸ್ಕೃತದ ಪ್ರಭಾವ ಇರುವುದು ಗೋಚರಿಸುತ್ತದೆ. ಅನ್ಯ ಭಾಷೆಗೆ ಪ್ರಭಾವಕ್ಕೆ ಒಳಗಾಗಿರುವುದು ಗೊತ್ತಾಗುತ್ತದೆ. ಬ್ರಾಹ್ಮಣರ ವಾಸ್ತವ್ಯಕ್ಕಾಗಿ ಹಲವು ಅಗ್ರಹಾರಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುವುದರಿಂದ ಈ ಪ್ರದೇಶ ವಿದ್ವಜನರಿಂದ ಕೂಡಿದ ಪ್ರದೇಶವಾಗಿತ್ತು ಎಂಬುದು ಬೆಳಕಿಗೆ ಬರುವುದು. ಚೋಳರ ಕಾಲದಲ್ಲಿ ಅಗ್ರಹಾರಗಳನ್ನು 'ಚತುರ್ವೇದಿ ಮಂಗಲ'ಗಳೆಂದು ಕರೆಯುತ್ತಿದ್ದರು. 'ಮಂಗಲ'ದಿಂದ ಕೊನೆಗೊಳ್ಳುವ ಗ್ರಾಮಗಳು ಚೋಳರ ಅಧಿಪತ್ಯಕ್ಕೆ ಸೇರಿದ್ದವು. ಇದರಿಂದ ರಾಮನಗರ ಜಿಲ್ಲೆಯ ಈ ಪ್ರದೇಶಗಳು ಚೋಳರ ಆಡಳಿತ ಕ್ರಮಕ್ಕೆ ಒಳಪಟ್ಟಿದ್ದವು ಎಂಬುದು ತಿಳಿದು ಬರುತ್ತದೆ. ಕೊನೆಯ ಸ್ಥಾನವಾಗಿರುವ 'ಸಂತೆ'ಯನ್ನು ಗಮನಿಸಿದರೆ ಈ ಪ್ರದೇಶವು ಮುಖ್ಯ ವಾಣಿಜ್ಯ ಕೇಂದ್ರ ಅಥವಾ ವ್ಯಾಪಾರ ಮಾಡುವ ಜನರಿಂದ ಕೂಡಿರಲಿಲ್ಲವೆಂಬುದು ಸಾಬೀತಾಗುತ್ತದೆ.

ಒಟ್ಟಿನಲ್ಲಿ ಕನ್ನಡ ಭೌಗೋಳಿಕ ಪರಿಸರವನ್ನು ಹೊಂದಿದ್ದರೂ ಕೂಡ ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಗಂಗರು, ಚೋಳರು, ಹೊಯ್ಸಳರು ಹೀಗೆ ಹಲವಾರು ಮನೆತನಗಳು ತಮ್ಮ ಆಳ್ವಿಕೆಗೆ ಸೇರಿದ ಪ್ರದೇಶಗಳಾದ್ದರಿಂದ ಆಯಾಯ ಕಾಲಮಾನಕ್ಕನುಗುಣವಾಗಿ ಭಾಷಿಕ ಹಾಗೂ ರಾಜಕೀಯ ಒತ್ತಡಗಳು ಇರುವುದು ಕಂಡುಬರುತ್ತದೆ. ಭಾಷಾ ಚರಿತ್ರೆಯಲ್ಲಿ ಭಾಷಾ ವ್ಯತ್ಯಾಸಗಳನ್ನು ತಿಳಿಸಿರುವಂತೆ ಕ.ತ.ಪ.ಗಳು ಗ.ದ.ಬ.ಗಳಾಗಿ ಪ>ಹವಾಗಿ, ಸಬಿಂದುಗಳು ಬಿಂದು ರಹಿತವಾಗಿ ಹಾಗೂ ವಿಜಾತಿ ದ್ವಿತ್ವಗಳು ಸಜಾತಿ ದ್ವಿತ್ವಗಳಾಗಿ ಹಾಗೂ ಕನ್ನಡದಲ್ಲಿ ಇಲ್ಲದ ಮಹಾಪ್ರಾಣಾಕ್ಷರ ಬಳಕೆ ಈ ಎಲ್ಲ ರೀತಿಯ ಭಾಷಾ ವ್ಯತ್ಯಾಸಗಳನ್ನು ನೋಡಿದಾಗ ಸ್ಥಳನಾಮಗಳಲ್ಲಿ ಕಂಡುಬರುವ ಭಾಷಾ ವ್ಯತ್ಯಾಸಗಳನ್ನು ಯಾವುದೇ ಒಂದು ಸೂತ್ರಕ್ಕೆ, ಒಂದು ಚೌಕಟ್ಟಿಗೆ ಒಳಪಡಿಸುವುದು ಕಷ್ಟ ಸಾಧ್ಯವೆಂಬುದು ಈ ಅಧ್ಯಯನದ ಪರಿಶೀಲನೆಯಿಂದ ತಿಳಿದ ಸಂಗತಿಯಾಗಿದೆ.

ಕೊನೆ ಟಿಪ್ಪಣಿಗಳು

೧. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೯. ೨೦೦೨

೨. ದೇಜಗೌ, ಸ್ಥಳನಾಮ ವ್ಯಾಸಂಗ, ಪುಟ.೨೨, ೧೯೯೦

೩. ಶಂ.ಬಾ.ಜೋಶಿ, ಎಡೆಗಳು ಹೇಳುವ ಕಂನಾಡ ಕತೆ, ಪುಟ.೬-೭, ೨೦೦೫.

೪. ದೇಜಗೌ, ಸ್ಥಳನಾಮ ವ್ಯಾಸಂಗ, ಪುಟ.೨೨, ೧೯೯೦.

೫. ಲಕ್ಷ್ಮಣ್ ತೆಲಗಾವಿ, (ಸಂ), ಸಂಶೋಧನಾ, ಪುಟ.೧೪೯, ೧೯೯೧

೬. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ವ್ಯಾಸಂಗ, ಪು.೧೨೨, ೧೯೯೩

ಅಧ್ಯಾಯ - ೫

ಚರಿತ್ರೆ ಮತ್ತು ಸ್ಥಳನಾಮಗಳು

೫.೧. ರಾಮನಗರ ಜಿಲ್ಲೆಯ ಇತಿಹಾಸ

೫.೨. ಪ್ರಾದೇಶಿಕ ವಿಭಾಗಗಳು ಮತ್ತು ಸ್ಥಳನಾಮಗಳು

೫.೩. ಐತಿಹಾಸಿಕ ಮಹತ್ವದ ಸ್ಥಳನಾಮಗಳು

೫.೪. ಸ್ಥಳನಾಮಗಳ ಪ್ರತಿನಾಮಕರಣ

ಅಧ್ಯಾಯ ೫

ಚರಿತ್ರೆ ಮತ್ತು ಸ್ಥಳನಾಮಗಳು

ಇತಿಹಾಸವೆಂದರೆ ಕೇವಲ ರಾಜಮನೆತನಗಳ ಮತ್ತವರ ಆಡಳಿತ, ಯುದ್ಧ ಜಯಾಪಜಯಗಳ, ರಾಜ್ಯ ವಿಸ್ತರಣೆಗೆ ಸಂಬಂಧಿಸಿದ ಸ್ಥೂಲ ಸ್ತರದ ಅಧ್ಯಯನವಾಗಿರದೆ; ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಇತಿಹಾಸವನ್ನು ಕಟ್ಟಿಕೊಡಲು ಶಾಸನಗಳು ಮತ್ತು ಸಾಹಿತ್ಯಾಧಾರಗಳು ಪ್ರಥಮ ಹಾಗೂ ಅನುಷಂಗಿಕ ಆಕರಗಳಾಗಿವೆ. ಆದರೆ "ಊರುಗಳು ಶಿಲಾಶಾಸನಾದಿಗಿಂತಲೂ ಸಾವಿರಾರು ವರುಷ ಮೊದಲು ಎಂಬಲ್ಲಿ ಸಂದೇಹ ಇಲ್ಲ. ಆದುದರಿಂದ ಲಿಖಿತ ಆಧಾರಗಳಿಂದ ಗೊತ್ತಾಗದ ಹಲವು ಸಂಗತಿಗಳಿಗಾಗಿ ಊರುಗಳ ಹೆಸರಿನ ನೆರವನ್ನು ಕೋರದೆ ಗತಿಯಿಲ್ಲ. ಕಲ್ಬರೆಹ, ತಾಮ್ರಪಟಗಳಂತೆ ಎಡೆಯ ಹೆಸರುಗಳೂ ನಮ್ಮ ನಾಡಿನ ಇರುವನ್ನು ತೋರುವ ಮಹತ್ವ ಸಾಧನವಾಗಿವೆ"[1] ಇತಿಹಾಸ ರಚನೆಗೆ ಲಿಖಿತ ಆಧಾರಗಳ ಕೊರತೆಯಿದ್ದಲ್ಲಿ ಸ್ಥಳನಾಮಗಳು ಎಷ್ಟು ಅವಶ್ಯಕವೆಂಬುದು ಹಾಗೂ ಶಾಸನಗಳಿಗಿಂತಲೂ ಪ್ರಾಚೀನತೆಯನ್ನು ಹೊಂದಿವೆ ಎನ್ನುವಲ್ಲಿ ಸ್ಥಳನಾಮಗಳ ಪಾತ್ರ ಎಷ್ಟೆಂಬುದು ಗೊತ್ತಾಗುತ್ತದೆ.

ಒಂದು ಮಹಾ ಸಾಮ್ರಾಜ್ಯದ ಏಳ್ಗೆಗೆ ಆಧಾರ ಸ್ತಂಭಗಳಂತಿದ್ದು, ಸಣ್ಣ ಪುಟ್ಟ ಪ್ರಾಂತ್ಯಗಳಿಗೆ, ಪಾಳೆಪಟ್ಟುಗಳ ರಚನೆಯಲ್ಲಿ ಹಲವು ಗ್ರಾಮ ಸಮೂಹ ಅವಶ್ಯಕ; ಆದ್ದರಿಂದ ಇವುಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಆಳವಾದ ಅಧ್ಯಯನವೆಂದರೆ ಅದು ಸ್ಥಳನಾಮ ಅಧ್ಯಯನವೇ ಎಂದು ಹೇಳಿದರೆ ತಪ್ಪಾಗಲಾರದು. ಜನ ಸಾಮಾನ್ಯರ ನೋವು, ನಲಿವು, ಆಚಾರ-ವಿಚಾರ, ರೂಢಿ, ಸಂಪ್ರದಾಯಗಳಂತಹ ಸಾಂಸ್ಕೃತಿಕ ಅಂಶಗಳ ಕುರಿತಾದ ಸೂಕ್ಷ್ಮತರವಾದ ವಿಚಾರಗಳು ದಾಖಲಾಗಿರುವುದು, ಈ ಪರಿಸರದ ಜನರಿಂದಲೇ ಹೆಸರಿಲ್ಪಟ್ಟ ಸ್ಥಳಗಳಿಂದ ಎಂಬುದು ವೇದ್ಯವಾಗುತ್ತದೆ. ಆಯಾಯ ಕಾಲಘಟ್ಟದಲ್ಲಿ ಹೆಸರಿಸಲ್ಪಟ್ಟ ಗ್ರಾಮನಾಮಗಳ ಹೆಸರಿನಿಂದಲೇ ಆ ಸ್ಥಳಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಕ್ಕೆ ಆಕರವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನ ಅವಶ್ಯಕವಾಗಿದೆ. "ಸ್ಥಳನಾಮಗಳ ಹೆಸರಿನಂತಹ ಸಾಮಾನ್ಯ ವಿಷಯ ಆದರೆ ಅದರಲ್ಲಿ ಎಷ್ಟೊಂದು ಮಹತ್ವದ ಅಪೂರ್ವವಾದ ಸಂಗತಿಗಳು ಹುದುಗಿಕೊಂಡಿವೆ! ಅದೆಷ್ಟು ಅಜ್ಞಾತ ವಿಷಯಗಳು ಬೆಳಕಿಗೆ ಬಂದಿವೆ! ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿ ಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಾದಿಗಳಲ್ಲಿ ದೊರೆಯದ ಆಧಾರಗಳು ಎಡೆಗಳ ಹೆಸರಿನಲ್ಲಿ ಸಿಕ್ಕುತ್ತಿವೆ. ಇತಿಹಾಸವು ಯಾರ ಹೆಸರನ್ನು ಕಡೆಗಣಿಸಿ ತೀರ

ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವುದಿಲ್ಲವೋ ಅಂತಹ ಅನೇಕಾನೇಕ ಅರಸರು, ನಾಯಕರು, ಗೌಡರು, ಗೌಡತಿಯರೂ, ಕುರುಬರು, ಗೊಲ್ಲರು ಮೊದಲಾದವರು ತಮ್ಮ ಹೆಸರಿನ ಹಟ್ಟಿ-ಊರುಗಳನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರರಾಗಿದ್ದಾರೆ. ಪುರಾಣಗಳಿಗೆ ಪೂರಕವಾಗಿ ಪೋಷಕರಾಗಿ ಇರುವ ಹಲವು ಕತೆಗಳಿಗೆ ಆಧಾರವಾದ ಅನೇಕ ಯಾತ್ರೆ, ತೀರ್ಥ, ಗ್ರಾಮಗಳ ಹೆಸರುಗಳಿವೆ. ನಮ್ಮ ನಾಡಿನಲ್ಲಿ ಬಂದು ಹೋದ ಹಲವು ಧರ್ಮ-ಸಂಸ್ಕೃತಿಗಳ ಮಹಾ ಪ್ರವಾಹದ ಕುರುಹುಗಳನ್ನು ತೋರುವ ಎಡೆಗಳಿವೆ"[3]. ಹೀಗೆ ಐತಿಹಾಸಿಕ ಮಹತ್ವವುಳ್ಳ ಗ್ರಾಮಗಳ ಅಧ್ಯಯನದಿಂದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ರಾಜವಂಶಸ್ಥರ ಆಡಳಿತ ವಿಭಾಗಗಳ ವ್ಯವಸ್ಥೆ, ಅವರ ಕಾಲಘಟ್ಟದಲ್ಲಿ ನಡೆದಂಥ ಪ್ರಮುಖವಾದ ಬದಲಾವಣೆಗಳು, ಆಯಾ ರಾಜಮನೆತನದವರಿಂದ ಕಟ್ಟಲ್ಪಟ್ಟ ಕೆರೆ, ಕಟ್ಟೆಯಂಥ ಜನೋಪಕಾರಿಯಾದ ವಿಷಯಗಳು, ಯಾವ ರಾಜಮನೆತನದ, ಯಾವ ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟ ಅಗ್ರಹಾರ ಮತ್ತು ಕೆರೆಗಳಿಗೆ ತಮ್ಮದೇ ಹೆಸರಿಡುವ ಮೂಲಕ; ಚಾರಿತ್ರಿಕವಾಗಿ ಸ್ಥಳಗಳಲ್ಲಿ ಅವರ ಹೆಸರುಗಳು ಬೆರೆತು ಹೋಗಿರುವುದು ಹಾಗೂ ಹಲವಾರು ಗ್ರಾಮಗಳಿಗೆ ನೀಡಿದ ದಾನದತ್ತಿಪರವಾದ ಎಲ್ಲ ವಿವರಗಳು ಪ್ರಕಟಗೊಳ್ಳಲು ಸಾಧ್ಯ. ಹೊಸ ಹೊಸ ಅಗ್ರಹಾರಗಳನ್ನು ನಿರ್ಮಾಣ ಮಾಡಿ ಅವುಗಳಿಗೆ ನೀಡಿದ ಪ್ರತಿನಾಮಕರಣ ಹೀಗೆ ಹಲವಾರು ಸಂದರ್ಭಗಳ ವಿಷಯಗಳು ಸ್ಥಳನಾಮಗಳಲ್ಲಿ ಹುದುಗಿರುವುದು ಸ್ಪಷ್ಟ.

ಒಂದು ಸ್ಥಳದ ಹೆಸರಿನಿಂದ ಉಂಟಾದ ಗ್ರಾಮದ ನಿರ್ಮಾಣ, ಬೆಳವಣಿಗೆಯ ಹಂತಗಳಲ್ಲಿ ಆದ ಐತಿಹಾಸಿಕ, ಭಾಷಿಕ, ಸಾಮಾಜಿಕ, ಧಾರ್ಮಿಕ ಮೊದಲಾದ ಸಾಂಸ್ಕೃತಿಕ ವಿಷಯಗಳಿರುತ್ತವೆ. ಆ ಮೂಲಕ ಪರಿಸರದಲ್ಲಿನ ಗ್ರಾಮದ ಸಂಸ್ಕೃತಿಯ ಅನಾವರಣ ಸಾಧ್ಯವಾಗುತ್ತದೆ. ಒಂದು ರಾಷ್ಟ್ರದ ಸಾಂಸ್ಕೃತಿಕ ಇತಿಹಾಸ ರಚಿಸುವಲ್ಲಿ ಗ್ರಾಮಗಳ ಪಾತ್ರ ಬಹುಮುಖ್ಯವಾದುದಾಗಿದೆ. ಅಲ್ಲಿನ ವಿಶೇಷವಾದ ಪರಿಸರ, ವಿಶಿಷ್ಟವಾದ ಘಟನಾವಳಿಗಳು, ಸಾಂಸ್ಕೃತಿಕ ವಿವರಗಳ ಹಿನ್ನೆಲೆಯಲ್ಲಿ ರಚನೆಗೊಂಡ ಪ್ರತಿಯೊಂದು ಗ್ರಾಮಕ್ಕೆ ತನ್ನದೇ ಆದ ಇತಿಹಾಸ ಇರುವುದು. ಗ್ರಾಮನಾಮಗಳನ್ನು ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ರಾಷ್ಟ್ರ, ರಾಜ್ಯ ಮತ್ತು ಒಂದು ಪ್ರದೇಶದ ಇತಿಹಾಸವನ್ನು ಪುನರ್‌ರಚಿಸಲು ಸಾಧ್ಯವಾಗುತ್ತದೆ.

ಎಷ್ಟೋ ಸ್ಥಳನಾಮಗಳಿಗೆ ಇದ್ದ ಹೆಸರುಗಳು ಬಿದ್ದುಹೋಗಿ ಯಾವುದೋ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಕ್ಕೆ ಒಳಗಾಗಿ ಜನಸಾಮಾನ್ಯರಿಗೆ ಅಪಥ್ಯವಾದರೂ ಸರಿಯೇ ಸ್ಥಳನಾಮಗಳು ಪ್ರತಿನಾಮಕರಣಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಆದರೆ ಕಾಲಾನಂತರದಲ್ಲಿ ರಾಜಕೀಯ, ಧಾರ್ಮಿಕ ಇಲ್ಲವೆ ಸಾಮಾಜಿಕ ಒತ್ತಡಕ್ಕೆ ಸಿಲುಕಿದ ಗ್ರಾಮನಾಮಗಳು ಆ ಒತ್ತಡಕ್ಕೆ ಕಾರಣವಾದ ವಸ್ತು, ವ್ಯಕ್ತಿ ಆ ಪರಿಸರದಲ್ಲಿ ಬದಲಾವಣೆಯಾದ ನಂತರ ನೇಪಥ್ಯಕ್ಕೆ ಸರಿದು ಜನಮೆಚ್ಚುಗೆಯ ಹಿಂದಿನ ಹೆಸರುಗಳೇ ಮರು ಚಾಲ್ತಿಗೆ ಬಂದಿರುವ ವಿವರಗಳು ಶಾಸನ ಅಥವಾ ಚಾರಿತ್ರಿಕ ಅಧ್ಯಯನದಿಂದ ಮಾತ್ರ ಸಾಧ್ಯವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಮೂಲಭೂತವಾಗಿರುವ ಸಹಿಷ್ಣುತೆ, ಸುಸ್ವಭಾವ ಹಾಗೂ ಬಹುಮುಖತೆಗಳು

ಸ್ಥಳೀಯವಾಗಿವೆ. ನಮ್ಮ ಸಾಮಾಜಿಕ ವ್ಯವಸ್ಥೆಯ ಒಳಿತು-ಕೆಡುಕುಗಳೆಲ್ಲವೂ ಸ್ಥಳೀಯವಾಗಿರುವುದರಿಂದ ಅಂತೆಯೇ ಸ್ಥಳನಾಮಗಳು ಕೂಡ ಸ್ಥಳೀಯವಾಗಿರುವುದರಿಂದ ಅವುಗಳ ಅಧ್ಯಯನದ ಕಡೆಗೆ ಲಕ್ಷ್ಯವಹಿಸಬೇಕಾದ ಮಹತ್ತರವಾದ ಕೆಲಸವಾಗಬೇಕಾಗಿದೆ.

ಒಂದು ಪ್ರದೇಶದ ಇತಿಹಾಸವನ್ನು ರಚಿಸುವ ಸಂದರ್ಭದಲ್ಲಿ ಈವರೆಗೂ ಇತಿಹಾಸಕಾರರು ಸ್ಥಳನಾಮಗಳನ್ನು ಮಹತ್ವದ ಆಕರಗಳಾಗಿ ಪರಿಗಣಿಸಿರಲಿಲ್ಲ. ಆದರೆ ಇತ್ತೀಚಿಗೆ ಶಂಬಾ, ಚಿದಾನಂದಮೂರ್ತಿ, ಕಲಬುರ್ಗಿಯವರಂಥ ಸಂಶೋಧಕರಿಂದ ಹಾಗೂ ಭಾಷಾಶಾಸ್ತ್ರಜ್ಞರು ಸ್ಥಳನಾಮಗಳ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಿದಾಗ ಸ್ಥಳನಾಮಗಳ ವಿಷಯ ಬಹುಮುಖತತೆ ತೋರಲು ಆರಂಭಿಸಿತು. ಇದರಿಂದ ಭಾಷಿಕ ಅಧ್ಯಯನದ ಜೊತೆಗೆ ಸಾಂಸ್ಕೃತಿಕ ಅಧ್ಯಯನಕ್ಕೂ ವಸ್ತು ವಿಷಯವನ್ನು ಒದಗಿಸುವ ಮಟ್ಟಕ್ಕೆ ಸ್ಥಳನಾಮಗಳು ಬೆಳೆದವು. ಇದರಿಂದ ಇತಿಹಾಸ ಪೂರ್ವಕಾಲದಲ್ಲಿಯೇ ಮಾನವನಿಗೆ ನೆಲೆಯಾಗಿದ್ದ ರಾಮನಗರ ಜಿಲ್ಲೆಯ ಪರಿಸರವು ಕರ್ನಾಟಕವನ್ನಾಳಿದ ಪ್ರಮುಖ ರಾಜಮನೆತನಗಳಾದ ಗಂಗ, ರಾಷ್ಟ್ರಕೂಟ, ಚೋಳ, ಹೊಯ್ಸಳ, ಕಾಕತೀಯ, ವಿಜಯನಗರ, ಮೈಸೂರು ಮತ್ತು ಯಲಹಂಕ ಪ್ರಭುಗಳ ಆಳ್ವಿಕೆಯ ಇತಿಹಾಸವನ್ನು ತನ್ನ ಕಾಲಗರ್ಭದಲ್ಲಿ ಹುದುಗಿಸಿಕೊಂಡಿರುವ ಸ್ಥಳನಾಮಗಳ ಅಧ್ಯಯನವನ್ನು ಇಲ್ಲಿ ಗಮನಿಸೋಣ.

೫.೧. ರಾಮನಗರ ಜಿಲ್ಲೆಯ ಇತಿಹಾಸ

ಇತಿಹಾಸದ ದೃಷ್ಟಿಯಿಂದ ಕಾಲವನ್ನು ಐತಿಹಾಸಿಕ ಕಾಲ ಮತ್ತು ಪ್ರಾಗೈತಿಹಾಸಿಕ ಕಾಲವೆಂದು ಗುರುತಿಸಲಾಗುತ್ತದೆ. ಲಿಖಿತ ಆಧಾರ ದೊರೆಯುವುದು ಕ್ರಿ.ಪೂ.೩ನೇ ಶತಮಾನದ ಅಶೋಕನ ಶಿಲಾಶಾಸನಗಳಿಂದ. ಹೀಗೆ ಲಿಖಿತ ಆಧಾರಗಳು ದೊರೆಯುವ ಕಾಲವನ್ನು ಇತಿಹಾಸ ಕಾಲವೆಂದು, ಲಿಖಿತ ಆಧಾರಗಳಿಲ್ಲದ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಕರೆಯಲಾಗುತ್ತದೆ. ರಾಮನಗರ ಜಿಲ್ಲೆಯ ಇತಿಹಾಸವು ಈ ಎರಡು ಕಾಲಘಟ್ಟಗಳಲ್ಲಿಯೂ ಕಾಣಿಸಿಕೊಳ್ಳುವುದು.

ಪ್ರಾಗೈತಿಹಾಸಿಕ ಕಾಲ

ಪ್ರಾಗೈತಿಹಾಸಿಕ ಕಾಲದ ಜನ ಸಮುದಾಯವು ಜೀವನೋಪಾಯಕ್ಕಾಗಿ ಬಳಸುತ್ತಿದ್ದ ವಸ್ತುಗಳು, ಉಪಕರಣಗಳು, ಮನೆಗಳು ಇತ್ಯಾದಿಗಳೇ ಅವರ ಜೀವನ ವಿಧಾನವನ್ನರಿಯುವ ಮುಖ್ಯ ಸಾಮಾಗ್ರಿಗಳಾಗಿವೆ. ಆ ಕಾಲದ ಜನ ಬಳಸುತ್ತಿದ್ದ ವಸ್ತು, ಪದಾರ್ಥಗಳ ಸ್ವರೂಪವನ್ನಾಧರಿಸಿ ಪ್ರಾಗೈತಿಹಾಸಿಕ ಯುಗವನ್ನು

೧. ಹಳೆಯ ಶಿಲಾಯುಗ (ಕ್ರಿ.ಪೂ.ಸುಮಾರು ೫೦೦,೦೦೦ ರಿಂದ ೧೦,೦೦೦ ವರ್ಷಗಳ ವರೆಗೆ).

೨. ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೧೦,೦೦೦-೩,೦೦೦)

೩. ನೂತನಶಿಲಾ-ತಾಮ್ರಯುಗ (ಕ್ರಿ.ಪೂ. ೩,೫೦೦-೮೦೦)

೪. ಕಬ್ಬಿಣಯುಗ-ಬೃಹತ್‌ಶಿಲಾಯುಗ (ಕ್ರಿ.ಪೂ. ೧೦೦೦-೩೦೦)

ರಾಮನಗರ ಜಿಲ್ಲೆಯು ಬೆಟ್ಟ, ಗುಡ್ಡ, ಗುಹೆ, ದಟ್ಟವಾದ ಅರಣ್ಯ ಪ್ರದೇಶವುಳ್ಳ ಮತ್ತು ಶಿಲಾ ಸಂಪತ್ತುಳ್ಳ ಭೌಗೋಳಿಕ ಪರಿಸರದಲ್ಲಿರುವುದರಿಂದ ಮಾನವನ ಪ್ರಾಗೈತಿಹಾಸಿಕ ಕಾಲದ ನೆಲೆಗಳನ್ನು

ಗುರುತಿಸಬಹುದು. 'ಚನ್ನಪಟ್ಟಣ ತಾಲೂಕಿನ ಸಿದ್ಧಾಪುರದಲ್ಲಿ ಸೂಕ್ಷ್ಮ ಶಿಲಾಯುಗಕ್ಕೇ ಸೇರಿದ ಬೆಣಚುಕಲ್ಲಿನ ಆಯುಧಗಳು ದೊರೆತಿವೆ. ಈ ಆಯುಧಗಳು ಕ್ರಿ.ಪೂ. ಹತ್ತು ಸಾವಿರ ವರ್ಷಗಳಷ್ಟು ಪ್ರಾಚೀನವಾದವುಗಳೆಂದು ವಿದ್ವಾಂಸರು ಗುರುತಿಸಿದ್ದಾರೆ"[೩].

ಮಾಗಡಿ ತಾಲ್ಲೂಕಿನ ವಿರುಪಾಪುರದಲ್ಲಿ ನವಶಿಲಾಯುಗಕ್ಕೆ ಸೇರಿದ ಬೂದಿಗುಡ್ಡೆಗಳು ಪತ್ತೆಯಾಗಿವೆ. ಇದೆ ತಾಲೂಕಿನ ಸಾವನದುರ್ಗ, ಹೂಜಿಗಲ್ಲು, ರಾಮನಗರ ತಾಲ್ಲೂಕಿನ ಜಾಲಮಂಗಲ, ರಾಮಗಿರಿ ಬೆಟ್ಟದ ತಪ್ಪಲುಗಳಲ್ಲಿ ನವಶಿಲಾಯುಗದ ಜನರು ಬಳಸುತ್ತಿದ್ದ ಕಲ್ಲಿನ ಕೊಡಲಿಗಳು ಪತ್ತೆಯಾಗಿವೆ. ಕನಕಪುರ ತಾಲೂಕಿನ ಸಂಬಾಪುರ, ವಿರುಪಾಪುರದಲ್ಲಿ ನವ ಶಿಲಾಯುಗದ ಕೈಕೊಡಲಿ ಮತ್ತು ಮಡಿಕೆಗಳು ದೊರೆತಿವೆ.

ರಾಮನಗರ ಕಡೆಯಿಂದ ಕನಕಪುರಕ್ಕೆ ಹಾಯ್ದು ಬಂದರೆ ಕನಕಪುರ ತಾಲೂಕಿನ ಉದಾರಹಳ್ಳಿಯ ಸುತ್ತಮುತ್ತಲಿನ ಹಳ್ಳಿಗಳಾದ ಅಳ್ಳಿಮಾರನಹಳ್ಳಿ, ಹೊನ್ನಿಗನಹಳ್ಳಿ, ಬೇಲಕುಪ್ಪೆ, ವಾಡೆದೊಡ್ಡಿ, ಬಸವನಹಳ್ಳಿ, ಕೊತ್ತನೂರು ಮತ್ತು ಅಲ್ಲಲ್ಲಿ ಅರಣ್ಯದ ಒಳಭಾಗಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳಿಂದ ಕೂಡಿರುವ ನೆಲೆಗಳು ಕಂಡು ಬಂದಿವೆ. ಕಬ್ಬಿಣಯುಗದ ಸಂಸ್ಕೃತಿಯಲ್ಲಿ ಶವಗಳನ್ನು ಕಲ್ಲಿನ ನೆಲಮಾಳಿಗೆ ಗೋರಿಯಲ್ಲಿಟ್ಟು ಅದರ ಮೇಲ್ಭಾವಣೆಯನ್ನು ದಪ್ಪನೆಯ ವೃತ್ತಾಕಾರದ ಬಂಡೆಯಿಂದ ಮುಚ್ಚುತ್ತಿದುದ್ದರಿಂದ ಅದನ್ನು 'ಬೃಹತ್ ಶಿಲಾಯುಗ ಸಂಸ್ಕೃತಿ' ಎಂದು ಕರೆಯಲಾಗಿದೆ. ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಹಕಾರಿಯಾಗಿ ದಟ್ಟವಾದ ಅರಣ್ಯ, ಬೆಟ್ಟ, ಗುಡ್ಡಗಳು, ನೀರಿನ ಹರಿವಿನ ಹದವಾದ ಜಾಗಗಳಾದ ಮಾಗಡಿ ತಾಲೂಕಿನ ಸಾವನದುರ್ಗ, ಗುಡ್ಡಹಳ್ಳಿ, ಗವಿನಾಗಮಂಗಲ, ಅಜ್ಜನಹಳ್ಳಿ, ಕೋರಮಂಗಲ, ಹೂಜಿಗಲ್ಲು, ಕಣ್ಣೂರು, ಕಲ್ಯ, ಹೊಸಪಾಳ್ಯ, ಅಂಕನಪಾಳ್ಯ ಮುಂತಾದ ಸ್ಥಳಗಳಲ್ಲಿ ನೂರಾರು ಬೃಹತ್ ಶಿಲಾ ಗೋರಿಗಳಿವೆ. ಕ್ರಿ.ಶ.೧೮೮೧ರಲ್ಲಿ ಕರ್ನಲ್ ಬಿ.ಆರ್.ಬ್ರಾನ್‌ಫಿಲ್ ಸಾವನದುರ್ಗದಲ್ಲಿ ನಡೆಸಿರುವ ಸಂಶೋಧನೆಯಲ್ಲಿ ಅಸ್ಥಿಪಂಜರ, ನವಶಿಲಾಯುಗದ ಆಯುಧ, ಪಿಂಗಾಣಿಪಾತ್ರೆ, ಮತ್ತಿತರ ಹೂಜಿಗಳು ದೊರೆತಿರುವುದನ್ನು ತಮ್ಮ ಲೇಖನದಲ್ಲಿ ಹೇಳಿದ್ದಾರೆ.[೪]

ಕನಕಪುರ ತಾಲೂಕಿನ ಗುತ್ತಲ ಹುಣಸೆಯಲ್ಲಿ, ೪೫ ಶಿಲಾಗೋರಿಗಳಿದ್ದು, ಗೋರಿಗಳಿರುವ ಸುಮಾರು ೪ ಎಕರೆ ಭೂಮಿಯ ಮಣ್ಣು ಬೂದಿಬಣ್ಣ ಹೊಂದಿದೆ.[೫] "ಬೂದಿ ಪದವಿರುವ ಎಷ್ಟೋ ಹೆಸರುಗಳು ಪುರಾತತ್ವ ಶೋಧಕರು ಇತಿಹಾಸಪೂರ್ವ ಪ್ರಾಚೀನ ನಿವೇಶನಗಳನ್ನು ಪತ್ತೆಹಚ್ಚಲು ಸಹಾಯಕವಾಗಿವೆ"[೬]. ಎಂಬ ಅಭಿಪ್ರಾಯಕ್ಕೆ ಪುರಸ್ಕಾರವೆಂಬಂತೆ ಗುತ್ತಲಹುಣಸೆ ಗ್ರಾಮ ಉತ್ತಮ ನಿದರ್ಶನ. ಅದೇ ರೀತಿ ಕನಕಪುರ ತಾಲೂಕಿನ ಬೂದಿಗುಪ್ಪೆ ಗ್ರಾಮದ ಸ್ಥಳನಾಮವೂ ಕೂಡ ಇತಿಹಾಸ ಪೂರ್ವಕಾಲದ ನಿರ್ದೇಶನವನ್ನು ಕೊಡುವ ಸ್ಥಳವಾಗಿದೆ.

ಸಾತನೂರು ಹೋಬಳಿಯ ವೀರೇಗೌಡನ ದೊಡ್ಡಿ ಬಳಿಯ 'ಶ್ರವಣನ ಅರೆ' ಎಂಬ ಬೋಳರೆಗೆ ಪೂರ್ವದಿಕ್ಕಿನಲ್ಲಿ ೧೫ಕ್ಕೂ ಹೆಚ್ಚು ಬೃಹತ್ ಶಿಲಾಯುಗದ ಗೋರಿಗಳು ಕಂಡುಬಂದಿವೆ. ಗೊಟ್ಟಿಗೆ ಹಳ್ಳಿಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ನೆಲೆಯೂರಿತ್ತು. ಇಲ್ಲಿ ಸುಮಾರು ೩೦೦ ಶಿಲಾ ಸಮಾಧಿಗಳು ಕಂಡು

ಬಂದಿದ್ದು, ಸ್ಥಳೀಯರು ಇವುಗಳನ್ನು 'ಪಾಂಡವರ ಗುಡಿಗಳು' ಎಂದು ಕರೆಯುತ್ತಾರೆ. ಈ ಹಳ್ಳಿಯಲ್ಲಿ ದೊರೆತ ಅತಿದೊಡ್ಡ ಶಿಲಾ ಸಮಾಧಿಯ ಮುಚ್ಚಳಿಕೆ ಕಲ್ಲಿನ ಅಳತೆ. ೩೫೦ ಸೆಂ.ಮೀ. ಮತ್ತು ೨೭೫ ಸೆಂ.ಮೀ. ಅಗಲ ಮತ್ತು ದಪ್ಪ ೩೩ ಸೆಂ.ಮಿ. ಈ ಕಲ್ಲು ನೆಲದಿಂದ ೭೫ ಸೆಂ.ಮೀ. ಮೇಲಿದೆ. ಅತಿಚಿಕ್ಕ ಶಿಲಾಸಮಾಧಿ ಅಳತೆ ೧೪೫ ಸೆಂ.ಮೀ. ಉದ್ದ ೮೪.ಸೆಂ.ಮೀ. ಅಗಲ ಪ್ರಾಯಶಃ ಇದು ಮಗುವಿನ ಸಮಾಧಿ ಇರಬಹುದು. ಒಂದು ಕಡೆ ಒಂದರ ಪಕ್ಕದಲ್ಲಿ ಮತ್ತೊಂದು ಸಮಾಧಿ ಇದ್ದರೆ ಇನ್ನೊಂದು ಕಡೆ ಬಿಡಿ ಬಿಡಿಯಾಗಿ ಇದೆ.[೬]

ಸೂಳೆಕಲ್ ಮಠದಲ್ಲಿ ದೊರೆತ ಕಲ್ಮನೆಗಳಲ್ಲಿ ಇರುವ ಗುಹಾಚಿತ್ರಗಳು ವೈವಿಧ್ಯತೆಯಿಂದ ಕೂಡಿವೆ. ಆಯುಧಧಾರಿ ಮನುಷ್ಯರು, ಪ್ರಾಣಿಗಳ ಮೇಲೆ ಸವಾರಿ ಮಾಡುವ ಮನುಷ್ಯರು, ಸಸ್ಯಗಳು, ಮನೆಗಳು, ನರ್ತನ ಮಾಡುವ ಮನುಷ್ಯರು, ವಿವಿಧ ಭಂಗಿಗಳಲ್ಲಿ ನಿಂತಂತೆ, ಜಿಗಿಯುವಂತೆ ತೋರುವ ಮನುಷ್ಯರು ಹಾಗೂ ಲಂಬ ಮತ್ತು ಅಡ್ಡ ರೇಖೆಗಳ ರಚನೆಗಳನ್ನು ಕಾಣಬಹುದು.[೭] ಇದೇ ತಾಲೂಕಿನ ಬಂಡೆಗುಡಿ, ತಿಗಳ ಹೊಸಹಳ್ಳಿ, ಗದ್ದೆ ಮಡಿನಕ್ಕಲು, ಮರಳೆಗವಿಮಠ, ಸಂಬೇಗೌಡನದೊಡ್ಡಿಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಮಾನವರು ನೆಲೆಸಿದ್ದಾರೆಂಬುದಕ್ಕೆ, ಬೃಹತ್‌ಶಿಲಾಯುಗಕ್ಕೆ ಸೇರಿದ ವಿವಿಧ ವಿನ್ಯಾಸದ ಬಗೆಬಗೆಯ ಶಿಲಾವೃತ್ತಗಳು ಕಂಡುಬಂದಿವೆ.

"ರಾಮನಗರ, ಹತ್ತಿರದಲ್ಲಿರುವ ಬಸವನಪುರ, ಗಂಗರಾಜರಹಳ್ಳಿ, ಕೆಂಜಿಗರಹಳ್ಳಿ, ವಡೇರಹಳ್ಳಿ, ಅರಳೀಮರದದೊಡ್ಡಿ ಮುಂತಾದ ಸ್ಥಳಗಳಲ್ಲಿ ನೂರಾರು ಬೃಹತ್ ಶಿಲಾ ಯುಗದ ಸಮಾಧಿಗಳು ಪತ್ತೆಯಾಗಿದ್ದವು"[೮]. ಅಲ್ಲದೆ ಕೂಟಗಲ್ಲು, ಬಸವನದುರ್ಗ, ಶಾನುಭೋಗನಹಳ್ಳಿ, ಜಾಲಮಂಗಲ, ಚನ್ನಪಟ್ಟಣ ತಾಲೂಕಿನ ಸಿಂಗರಾಜಪುರ, ಭೂಹಳ್ಳಿ, ಭೈರಶೆಟ್ಟಿಹಳ್ಳಿ, ಉಜ್ಜನಹಳ್ಳಿ, ವಿಠಲೇನಹಳ್ಳಿ, ಹುಣಸನಹಳ್ಳಿ, ಸಿದ್ದಾಪುರ ಮುಂತಾದ ಸ್ಥಳಗಳಲ್ಲಿ ನೆಲಮಾಳಿಗೆ ಶವದ ಗೋರಿ ಅಥವಾ ಬೃಹತ್ ಶಿಲಾಯುಗದ ಗೋರಿಗಳನ್ನು ನೋಡಬಹುದು.

ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಬೆಟ್ಟಗುಡ್ಡಗಳನ್ನು ಆಧಾರವಾಗಿಟ್ಟುಕೊಂಡು ಆ ಪ್ರದೇಶದ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಐತಿಹ್ಯಾತ್ಮಕ, ಜಾನಪದೀಯ ವಿವರಗಳನ್ನು ದಾಖಲಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಿದಾಗ ಅಪೂರ್ವವಾದ ಮಾನವ ನೆಲೆಗಳ ಪ್ರಾಗೈತಿಹಾಸಿಕ ಕಾಲದ ಅಮೂಲ್ಯ ಸ್ಮಾರಕಗಳಾಗಿ, ಹತ್ತು ಹಲವು ಸತ್ಯಗಳನ್ನು ಈ ಸ್ಥಳಗಳು ಹುದುಗಿಸಿಟ್ಟುಕೊಂಡಿರುವುದನ್ನು ಬೆಳಕಿಗೆ ತರಲು ಪ್ರಯತ್ನಿಸಬಹುದು. ಪ್ರಾಗೈತಿಹಾಸಿಕ ಕಾಲದ ಮಾನವ ನೆಲೆಗಳಾಗಿದ್ದ ಈ ಸ್ಥಳಗಳಿಗೆ ಅಂದು ಬದುಕಿ, ಜೀವನ ನಡೆಸಿದ್ದ ಮಾನವ ತನ್ನ ನೆಲೆಯನ್ನು ಗುರುತಿಸುವುದಕ್ಕಾಗಿ ಖಂಡಿತ ಆ ನೆಲೆಗೊಂದು ಹೆಸರನ್ನು ಕೊಟ್ಟಿರಬಹುದು. ತಾನು ಹೆಸರಿಸಿದ ನೆಲೆಗೆ ನಾಮವಾಗಿ ತನ್ನ ಭೌಗೋಳಿಕ ಪರಿಸರದಲ್ಲಿನ ವಸ್ತುಗಳನ್ನೇ ಹೆಸರಿಸಿರಬೇಕು; ಇದು ಸ್ಥಳನಾಮಾಧ್ಯಯನದ ಇತಿಹಾಸದಿಂದ ತಿಳಿದು ಬರುತ್ತದೆ. ಆದರೆ ಕಾಲಾನಂತರದಲ್ಲಿ ಸಂಸ್ಕೃತೀಕರಣಕ್ಕೆ ಒಳಗಾಗಿ ಭೌಗೋಳಿಕ ಪರಿಸರದ ನಾಮಗಳು ಅಳಿಸಿ ಸಾಂಸ್ಕೃತಿಕ

ಹೆಸರುಗಳನ್ನು ಕೊಟ್ಟಿರುವುದು ಜಿಲ್ಲೆಯ ಸ್ಥಳನಾಮಗಳನ್ನು ಗಮನಿಸಿದಾಗ ನಮಗೆ ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಪ್ರಪಂಚದಾದ್ಯಂತ ಸಾವಿನ ನಂತರದ ಸಂಸ್ಕಾರಾದಿ ಕ್ರಿಯೆಗಳು ಅದರ ಸಾಮಾಜಿಕ, ಸಾಂಸ್ಕೃತಿಕ ಮಹತ್ವವನ್ನು ಸಾರಿ ಹೇಳುವುದಲ್ಲದೆ, ಅಪೂರ್ವ ಐತಿಹಾಸಿಕ ಸ್ಮಾರಕಗಳಾಗಿ ಹತ್ತು ಹಲವು ಸತ್ಯಗಳನ್ನು ಸಾಕ್ಷಾತ್ಕರಿಸುತ್ತವೆ. ಅಂಥ ಸಮಾಧಿ ನೆಲೆಗಳು ಆಯಾ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನಸಮುದಾಯಗಳ, ಆಯಾ ಪ್ರದೇಶವನ್ನಾಳಿ ಅಳಿದು ಹೋದ ರಾಜ ಮಹಾರಾಜರ, ಸಂತ ಶರಣರ ಬದುಕಿನ ವೈವಿಧ್ಯಮಯ ಚಿತ್ರಣಗಳನ್ನು ಬಿಚ್ಚಿಡುವ ಸ್ಮಾರಕಗಳಾಗಿವೆ. ಈಜಿಪ್ಟಿನ ಪಿರಮಿಡ್ಡುಗಳು ಶವ ಸಂಸ್ಕಾರದ ನೆಲೆಗಳೇ ಆಗಿವೆ. ಇಂಥ ಪ್ರಾಗೈತಿಹಾಸಿಕ ನೆಲೆಗಳಿರುವ ಸ್ಥಳಗಳು ರಾಮನಗರ ಜಿಲ್ಲೆಯಲ್ಲಿವೆ.

ರಾಜಕೀಯ ಚರಿತ್ರೆ ಮತ್ತು ಸ್ಥಳನಾಮಗಳು

ರಾಮಾಯಣ, ಮಹಾಭಾರತ ಕಾಲದ ಸಾಂದರ್ಭಿಕ ಚರಿತ್ರೆಯನ್ನು ಹೇಳುವ ಎಷ್ಟೋ ಸ್ಥಳನಾಮಗಳು ರಾಮನಗರ ಜಿಲ್ಲೆಯಲ್ಲಿವೆ. ಆದರೂ, ಲಿಖಿತವಾದ ಆಧಾರಗಳ ಮೂಲಕ ಗಮನಿಸುವ ರಾಜಕೀಯ ಚರಿತ್ರೆಯನ್ನು ಅವಲೋಕಿಸಿದಾಗ ಹಲವಾರು ರಾಜಪ್ರಭುತ್ವಗಳು, ರಾಜವಂಶಗಳು ಆಳಿರುವ ಕುರುಹುಗಳು ಸ್ಥಳನಾಮಗಳ ಮೂಲಕ ಉಕ್ತಗೊಂಡಿರುವುದನ್ನು ರಾಜರಾಜ ಚತುರ್ವೇದಿ ಮಂಗಲ, ಸಾವನದುರ್ಗ, ಮಾಗಡಿ ಮೊದಲಾದ ಹಲವು ಸ್ಥಳಗಳ ಮೂಲಕ ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಪ್ರದೇಶವನ್ನಾಳಿದ ರಾಜಪ್ರಭುತ್ವಗಳ ಸಂಕ್ಷಿಪ್ತ ಇತಿಹಾಸವನ್ನು ತಿಳಿಯಬಹುದು.

ಗಂಗರು

ಕರ್ನಾಟಕದ ಇತಿಹಾಸಕ್ಕೆ ಸಾಂಸ್ಕೃತಿಕವಾದ ಬುನಾದಿ ಹಾಕಿದ ಕೀರ್ತಿ ಗಂಗರಿಗೆ ಸಲ್ಲುತ್ತದೆ. ಈ ಜಿಲ್ಲೆಯು ಗಂಗವಾಡಿ ೯೬,೦೦೦ದ ಭಾಗವಾಗಿತ್ತು. ಚನ್ನಪಟ್ಟಣ ಸಮೀಪದ ಮಂಕುಂದ ಗಂಗ ಭೂವಿಕ್ರಮ (೬೬೯-೬೭೯) ಮತ್ತು ಮೊದಲನೆಯ ಶಿವಮಾರ (೬೭೯-೭೨೬)ರ ಕಾಲದಲ್ಲಿ ರಾಜ್ಯಾಡಳಿತದ ಉಪರಾಜಧಾನಿಯಾಗಿತ್ತು. ಮೊದಲನೆ ಶಿವಮಾರನ ಮಗನಾದ ಶ್ರೀಪುರುಷ ನೆಲಮಂಗಲ ತಾಲೂಕಿನ ಮಾನ್ಯಪುರ ಅಥವಾ ಮಣ್ಣೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೬೦ ವರ್ಷಗಳ ಕಾಲ ದೀರ್ಘ ಆಳ್ವಿಕೆ ಮಾಡಿದನು. ಇವನಿಗೆ ಎರಡನೆ ಶಿವಮಾರ ಅಥವಾ ಸೈಗೊಟ್ಟ ಶಿವಮಾರ, ಸಿಯಗಲ್ಲ, ದುಗ್ಗಮಾರ ಮತ್ತು ವಿಜಯಾದಿತ್ಯರೆಂಬ ಮಕ್ಕಳಿದ್ದರು. ಮಾಗಡಿ ತಾಲೂಕಿನ ಕುಪ್ಪೆಪಾಳ್ಯದ ಶಾಸನದಲ್ಲಿ "ಶಿವಮಾರ ಜೇಪೊ ಕುಣಿಗಿಲ್ನಾಡಾಳೆ ಬಿಸಿಗೂರೊಳೆ ಬಾಳ್ವ ಪ್ರಜಗೆಲ್ಲಂ ಕೊಟ್ಟುದು ಕಟ್ಟಾಣಿ ಮಾರ್ಯಾದೆ" ಎಂದು ತಿಳಿಸುತ್ತದೆ. ಬಿಸಗೂರಿನ ಬಾಳುವ ಪ್ರಜೆಗೆಲ್ಲ ಕೊಟ್ಟಿರುವ ಶ್ರೇಷ್ಠ ಮರ್ಯಾದೆ ಯಾವುದು? ತಿಳಿಯಬೇಕಿದೆ.

ಕನಕಪುರ ತಾಲೂಕಿನ ಸಾತನೂರಿನ° ಶಾಸನವು ಇಮ್ಮಡಿ ರಾಚಮಲ್ಲನ ಕಾಲದಲ್ಲಿ ಸಾಂತನೆಂಬುವನು ದರೋಡೆಗೆ ಬಂದವರ ಮೇಲೆ ಎರಗಿ ಪೌರುಷದಿಂದ ಮೆರೆದು ಸತ್ತ ಸಂಗತಿಯನ್ನು ತಿಳಿಸುತ್ತದೆ. ೧೨೫ನೇ ನಂ.ಶಾಸನದಲ್ಲಿ ಸ್ಥಳನಾಮ ಶಾಂತನೂರು ಎಂದಿದ್ದು, ಈ ಸಾಂತ (ಶಾಂತ) ನಿಂದಾಗಿಯೇ. ಊರಿಗೆ ಆ

ಹೆಸರು ಬಂದಿದ್ದಾರೂ ಬಂದಿರಬಹುದು[೧೧]. ಯಲಚಗೆರೆ ಗ್ರಾಮದ ವೀರಗಲ್ಲು (ಎ.ಕ.೯) ಪೆರ್ಮಾನಾಡಿಯ ಹೆಸರನ್ನು ಸೂಚಿಸುತ್ತಿದ್ದು ಈ ಪ್ರದೇಶ ಗಂಗರ ಗಂಗವಾಡಿ ೯೬,೦೦೦ ಭಾಗಕ್ಕೆ ಸೇರಿದ್ದವು ಎಂಬುದನ್ನು ಸೂಚಿಸುತ್ತದೆ. ರಾಷ್ಟ್ರಕೂಟರ ೩ನೇ ಕೃಷ್ಣನಿಗೆ ಕನ್ನರದೇವ ಎಂಬ ಹೆಸರಿತ್ತು. ಗಂಗದೊರೆ ೨ನೇ ಬೂತುಗನ ಮಗನಾದ ೩ನೇ ನರಸಿಂಹ ಈ ಕನ್ನರ ದೇವನ ಸಾಮಂತನಾಗಿದ್ದನು. ಇವನ ಕಾಲದಲ್ಲಿ ಮಾಗಡಿ ತಾಲೂಕಿನ ಮೂಡಲಪಾಳ್ಯದಲ್ಲಿ ದಡಿಗೇಶ್ವರ ದೇಗುಲ ನಿರ್ಮಾಣಗೊಂಡಿದೆ. ದಡಿಗನನ್ನು ಗಂಗಗಚ್ಚಿನ ಪಿರಿಯ ಮಗನೆಂದು ವರ್ಣಿಸಿರುವುದು ವಿಶೇಷ ಸಂಗತಿ.[೧೨]

೯ನೇ ಶತಮಾನದಲ್ಲಿ ಕೆಳ್ಗಲಿನಾಡಿಗೆ ಚನ್ನಪಟ್ಟಣವೂ ಸೇರಿತ್ತು. ಎರಡನೇ ನೀತಿಮಾರ್ಗನ ಕಾಲದಲ್ಲೂ ಅವನಾಳ್ವಿಕೆಗೆ ಒಳಪಟ್ಟಿದ್ದರ ಬಗ್ಗೆ ಕ್ರಿ.ಶ.೯೦೪-೯೦೭ರ ನಡುವಿನ ಚನ್ನಪಟ್ಟಣ ಶಾಸನಗಳು ತಿಳಿಸುತ್ತವೆ. ಅಂದರೆ ೧೦ನೇ ಶತಮಾನದಲ್ಲಿಯೂ ಚನ್ನಪಟ್ಟಣ, ರಾಮನಗರ ಪ್ರದೇಶ ಗಂಗರ ಆಳ್ವಿಕೆಯಲ್ಲಿತ್ತೆಂದು ತಿಳಿಯುತ್ತದೆ. ಗಂಗರನ್ನು ಚೋಳರು ಕ್ರಿ.ಶ.೧೦೦೧ರಲ್ಲಿ ಸೋಲಿಸಿದಾಗ ಕೆಳ್ಗಲಿನಾಡು=ಕೆಳಲೆನಾಡು ಪ್ರದೇಶವೆಲ್ಲ ಚೋಳರ ಅಧೀನಕ್ಕೆ ಬಂದಿತು. ಚನ್ನಪಟ್ಟಣ ರಾಜೇಂದ್ರ ಚೋಳನ ಮುಖ್ಯಪಟ್ಟಣವಾಯಿತು.[೧೩]

ಚೋಳರು

ಚೋಳರ ರಾಜರಾಜನ ಮಗನಾದ ರಾಜೇಂದ್ರ ಚೋಳ ಕ್ರಿ.ಶ.೧೦೦೪ರಲ್ಲಿ ತಲಕಾಡನ್ನು ವಶಪಡಿಸಿಕೊಂಡಾಗ ಗಂಗರ ಅಧಿಕಾರ ಕೊನೆಗೊಂಡಿತು. ಗಂಗರಿಂದ ವಶಪಡಿಸಿಕೊಂಡ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡ ಚೋಳರು; ಚೋಳರ ರಾಜರಾಜ ಚೋಳನು ತಲಕಾಡು ಸುತ್ತಮುತ್ತಲಿನ ಪ್ರದೇಶವನ್ನು 'ಮುದಿಗೊಂಡ ಚೋಳ ಮಂಡಲ'ವೆಂದು ಹೆಸರು ಕೊಟ್ಟನು. ತಲಕಾಡಿಗೆ 'ರಾಜಪುರಂ' ಎಂದು ಹೆಸರಿಟ್ಟು ಇದನ್ನು ದೊಡ್ಡ ಆಡಳಿತದ ವಿಭಾಗವಾಗಿಸಿದರು. ರಾಮನಗರ ಜಿಲ್ಲೆಯು ಮುದಿಗೊಂಡ ಚೋಳಮಂಡಲದ ಒಂದು ಭಾಗವಾಗಿತ್ತು. ಇದರಲ್ಲಿ ಕಿಳಲೆನಾಡು, ಮೊರಸುನಾಡು, ಸಿಗಲ್‌ನಾಡು, ರಾಜೇಂದ್ರಚೋಳ ಒಳನಾಡು ಉಪವಿಭಾಗಗಳಿದ್ದವು.

ಮಾಗಡಿ ಸೀಮೆ ರಾಜೇಂದ್ರ ಚೋಳ ಒಳನಾಡು ಮತ್ತು ಮಣ್ಣೆನಾಡಿನಲ್ಲಿ ಅಂತರ್ಗತವಾಗಿತ್ತೆಂಬುದು ಗಂಗರ ಕಾಲದ ಶಾಸನದಿಂದ[೧೪] ಸ್ಪಷ್ಟವಾಗಿದೆ. ಚನ್ನಪಟ್ಟಣ ಸೀಮೆಯ ಅದರ ವಳಿತಕ್ಕೆ ಸೇರಿದ್ದ ಕಾನಕಾನ ಹಳ್ಳಿಯೂ ಆ ತಾಲೂಕಿನ ಇತರ ಸ್ಥಳಗಳು, ಕೆಳಲೆನಾಡಿನ (ಕಿವಿಲೈನಾಡು) ಭಾಗಕ್ಕೆ ಸೇರಿರುವುದು.[೧೫] ನಂದಿ ಸುತ್ತಮುತ್ತಲಿನ ಚೋಳರ ಪ್ರಾಂತ್ಯಕ್ಕೆ ನಿಕರಿಲಿ ಚೋಳಮಂಡಲವೆಂಬ ಹೆಸರಿತ್ತಾದರೂ, ಚನ್ನಪಟ್ಟಣ ಸಮೀಪದ ಮಣಲೂರು ಅಥವಾ ಮಾಳೂರಿಗೆ 'ನಿಕರಿಲಿ ಚೋಳಪುರಂ' ಎಂಬ ಹೆಸರಿತ್ತು. ಇದರಿಂದಾಗಿ ಚೋಳರು ತಮ್ಮ ರಾಜ್ಯವನ್ನು ಮೂರು ಮಂಡಲಗಳನ್ನಾಗಿ ವಿಂಗಡಿಸಿದ್ದು, ನಾಡುಗಳೆಂಬ ಅನೇಕ ಉಪ ವಿಭಾಗಗಳನ್ನು ರಚಿಸಿದ್ದಾರೆಂದು ತಿಳಿಯುತ್ತದೆ. ಕನಕಪುರ ತಾಲೂಕಿನಲ್ಲಿ ಸುಮಾರು, ೨೫ ಶಾಸನಗಳು ತಮಿಳು ಭಾಷೆಯಲ್ಲಿವೆ. ತಮಿಳುನಾಡಿನ ಗಡಿಯ ಗ್ರಾಮಗಳಲ್ಲಿ ಚೋಳರ ಆಡಳಿತದಿಂದಾದ ಪ್ರಭಾವಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಹೊಯ್ಸಳರು

ಚೋಳ-ಚಾಲುಕ್ಯ ಪ್ರಾಬಲ್ಯದ ನಡುವೆಯು ನಿರ್ಣಾಯಕವಾದ ಜಯವನ್ನು ಸಾಧಿಸಿ ಕನ್ನಡ ರಾಜ್ಯವನ್ನು ವಿಸ್ತರಿಸಿದ ಕೀರ್ತಿ ವಿಷ್ಣುವರ್ಧನನಿಗೆ ಸಲ್ಲುತ್ತದೆ. "ಕ್ರಿ.ಶ.೧೧೧೬ರಲ್ಲಿ ತಲಕಾಡಿಗೆ ದಂಡೆತ್ತಿ ಬಂದ ಚೋಳರ ಅಡಿಯಣ್ಣ ಮತ್ತು ಇತರೆ ಚೋಳ ಸಾಮಂತರು ಹೊಯ್ಸಳ ವಿಷ್ಣುವರ್ಧನನ ಪ್ರಭುತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸಿದಾಗ, ಹೊಯ್ಸಳ ಸೇನಾಪತಿ ಗಂಗರಾಜನು ಅವರನ್ನು ಸೋಲಿಸಿದನು. ಕ್ರಿ.ಶ.೧೧೧೭ರ ಮಳವಳ್ಳಿ ಶಾಸನದಲ್ಲಿ ಈ ಯುದ್ಧದ ವರ್ಣನೆ ಇದೆ".[೧೬] ಗಂಗವಾಡಿಯನ್ನು ಚೋಳರ ಹಿಡಿತದಿಂದ ತಪ್ಪಿಸಿ, ಹೊಯ್ಸಳರು ನಾಯಕರಾದರು. ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳು ಹೊಯ್ಸಳರ ಸಾಮ್ರಾಜ್ಯದಲ್ಲಿ ವಿಲೀನವಾದವು. ಬೆಂಗಳೂರು ಜಿಲ್ಲೆಯ ಪಶ್ಚಿಮ ದಿಕ್ಕಿನ ಚನ್ನಪಟ್ಟಣ, ರಾಮನಗರ, ಮಾಗಡಿ ಹಾಗೂ ಕನಕಪುರ ತಾಲೂಕಿನ ಭಾಗಗಳು ಹೊಯ್ಸಳ ನಾಡಿನಲ್ಲಿ ಸೇರಿದವು. ಚೋಳರ ಮೇಲೆ ವಿಜಯ ಸಾಧಿಸಿದಾಗ ವಿಷ್ಣುವರ್ಧನ ಮಹಾಮಂಡಳೇಶ್ವರನಾಗಿದ್ದ; ತಲಕಾಡು ಗೆದ್ದ ನೆನಪಿಗಾಗಿ 'ತಲಕಾಡುಗೊಂಡ'ನೆಂಬ ಬಿರುದುಗಳಿಸಿದ ಸಂಗತಿಯು ಮಾಗಡಿಯ ಶಾಸನವೊಂದು[೧೭] ಉಲ್ಲೇಖಿಸುತ್ತದೆ.

ವಿಷ್ಣುವರ್ಧನನ ನಂತರ ಅಧಿಕಾರಕ್ಕೆ ಬಂದ ಅವನ ಮಗ ೧ನೇ ನರಸಿಂಹನು ಕ್ರಿ.ಶ.೧೧೬೯ರ ಅಪೂರ್ಣ ಶಾಸನವೊಂದು ಸಾವನದುರ್ಗ ಪಶ್ಚಿಮಕ್ಕೆ ಸಮೀಪದ ಕರ್ಲಮಂಗಲ ವೀರಗುಡಿಯ ಮುಂದಿದೆ. ಈ ಶಾಸನದಲ್ಲಿ ಕರ್ಲಮಂಗಲ ಗ್ರಾಮವನ್ನು ಕಳರಮಂಗಲವೆಂಬ ಹೆಸರಿನಿಂದ ಉಲ್ಲೇಖಿಸುತ್ತದೆ.

ಸಂಕಿಘಟ್ಟದ ಪುರಾತನ ವರ್ಧಮಾನ ಬಸದಿಯಲ್ಲಿರುವ ವರ್ಧಮಾನ ವಿಗ್ರಹದ ಹಿಂಬದಿಯಲ್ಲಿರುವ ಶಾಸನ[೧೮] ಹೊಯ್ಸಳ ದೊರೆಗಳಾದ ವಿನಯಾದಿತ್ಯನಿಂದ ಒಂದನೇ ನರಸಿಂಹನವರೆಗಿನ ವಂಶಾವಳಿಯನ್ನು ತಿಳಿಸುತ್ತದೆ.

ಒಂದನೇ ನರಸಿಂಹನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಬಲ್ಲಾಳನ ಕಾಲದ ಶಾಸನಗಳು ಕನಕಪುರ ತಾಲೂಕಿನ ಕುಂತೂರು ಗ್ರಾಮದ ವೀರಗಲ್ಲಿನಲ್ಲಿ[೧೯] ಸ್ಥಳನಾಮ ಕುಂದತೂರು ಎಂದು ಉಲ್ಲೇಖಗೊಂಡಿದೆ. ಹುಲಿಕಲ್ಲು ಸಮೀಪದ ವಿರುಪಾಪುರ ವೀರೇಶ್ವರ ದೇವರಪುರವಾಗಿತ್ತು.[೨೦] ಇವೆಲ್ಲವು ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ಶಾಸನಗಳು.

ಮುಮ್ಮಡಿ ನರಸಿಂಹನ ಕಾಲದಲ್ಲಿ ಸೋಮಯ್ಯ ಡಣ್ಣಾಯಕನ ಅಳಿಯ ಗಾಯಿ ದಣ್ಣಾಯಕನು ಚಿಕ್ಕ ಗಂಗವಾಡಿಯ ರಾಜಧಾನಿಯಾದ ಹೊಂಗನೂರಿನಲ್ಲಿರುತ್ತಿದ್ದನು. ಆಗ ನಿರ್ಮಾಣವಾದ ರಾಮನಾಥ ದೇವಾಲಯಕ್ಕೆ ೧೨೬೫ರಲ್ಲಿ ಜೀಯಗೌಡನ ಹಳ್ಳಿಯನ್ನು ಬೇಡಿ ಪಡೆಯಲಾಯಿತು.

ಮುಮ್ಮಡಿ ನರಸಿಂಹ ಮಗ ಮುಮ್ಮಡಿ ವೀರಬಲ್ಲಾಳನ ಆಳಿಕೆಯ ಕಾಲದ ಕಾನಕಾನಹಳ್ಳಿ, ಹೋಬಳಿ ಕಲ್ಲಹಳ್ಳಿಯ ವೀರಗಲ್ಲು[೨೧] ಇಂದಿನ ಕಲ್ಲಹಳ್ಳಿಯೇ ಶಾಸನೋಕ್ತ ಕಳ್ಳೇನ ಹಳ್ಳಿಯಾಗಿದೆ. ನಿಟ್ಟೂರಿನ ಅಂಕನಾಥೇಶ್ವರ ಸ್ವಾಮಿಗೆ ಪೂಜಾ ವ್ಯವಸ್ಥೆಗೆಂದು ದತ್ತಿ ನೀಡಿದ ಸಂಗತಿಯನ್ನು ತಿಳಿಸುವ ಶಾಸನ[೨೨] ಸಾತನೂರು ಹೋಬಳಿ ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿ ಹತ್ತಿರ ಕಂಡುಬಂದ ಶಾಸನದಲ್ಲಿ ಗ್ರಾಮನಾಮ

ಕಬ್ಬಹಾಳು ಎಂದು ಉಲ್ಲೇಖಗೊಂಡಿದೆ.[೨೩] ಕೋಟೆಕೊಪ್ಪ[೨೪]ದ ಶಾಸನಗಳೆಲ್ಲವೂ ಸ್ಥಳದ ವೀರ ಜೀವನದ ವೈಖರಿಗೆ ಸಾಕ್ಷಿಯಾಗಿವೆ. ಕ್ರಿ.ಶ.೧೩೦೭ರ ಶಾಸನ[೨೫] ಇವನನ್ನು "ಸ್ವಸ್ತಿ ಸಮಸ್ತ ಭುವನಾಶ್ರಯಂ, ಪೃಥ್ವಿವಲ್ಲಭಂ, ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕ, ಯಾದವ ಕುಲಾಂಬರಾ, ಸರ್ವಜ್ಞ ಚೂಡಾಮಣಿ, ಮಲೆರಾಜರಾಜ, ಮಲೆಪರೊಳ್‌ಗಂಡ, ಗಂಡಭೇರುಂಡ, ಕದನ ಪ್ರಚಂಡ, ಅಸಹಾಯಶೂರ, ಏಕಾಂಗಿವೀರ, ಶನಿವಾರ ಸಿದ್ಧಿ, ಗಿರಿದುರ್ಗಮಲ್ಲ, ಛಲದಂಕಮಲ್ಲ, ಚೋಳರಾಯ ಸ್ಥಾಪನಾಚಾರ್ಯ, ಪಾಂಡ್ಯಕುಲ ಸಮುದ್ಧರಣ, ವೈರೀಭ ಕಂಠೀರವ, ಮಗರರಾಜ್ಯ ನಿರ್ಮೂಲನ" ಎಂದು ಗುಣಗಾನ ಮಾಡಿದೆ.

ಮೂರನೆ ಬಲ್ಲಾಳನ ಆಳ್ವಿಕೆಯಲ್ಲಿ ವಿಶಾಲವಾದ ಹೊಯ್ಸಳ ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ಆದರೆ ನಿಯಂತ್ರಣ ಕಳೆದುಕೊಂಡು ಕ್ಷೀಣಿಸಿತು. ಇಂಥ ಸಂದರ್ಭದಲ್ಲಿಯೇ ಕ್ರಿ.ಶ.೧೩೧೧ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಪತಿ ಮಲ್ಲಿಕಾಫರ್ ದ್ವಾರಸಮುದ್ರದ ಮೇಲೆ ದಾಳಿ ಮಾಡಿದನು. ಆದರೆ ಮಹಮ್ಮದ್ ಬಿನ್ ತೊಘಲಕ್ ಕ್ರಿ.ಶ.೧೩೨೭ರಲ್ಲಿ ನಡೆಸಿದ ದಾಳಿಯಿಂದ ದ್ವಾರಸಮುದ್ರ ನಾಶವಾಯಿತು.

ಕ್ರಿ.ಶ.೧೩೧೮ರಲ್ಲಿ ಮುಮ್ಮಡಿ ವೀರಬಲ್ಲಾಳ ಕೀರ್ತಿಯರಸ ಮತ್ತು ವಿದ್ಯಾರಾಜುಭಟ ಎಂಬ ಇಬ್ಬರು ಸಹೋದರರಿಗೆ ಮಳವಳ್ಳಿ ತಾಲೂಕಿನ ಅರುಹನಹಳ್ಳಿ[೨೬] ಮಾಗಡಿ ತಾಲೂಕಿನ ಗಜಗಾರ ಕುಪ್ಪೆಯನ್ನು[೨೭] ಕ್ರಮವಾಗಿ ತ್ಯಾಗದ ಕೊಡುಗೆಯಾಗಿ ನೀಡಿದ್ದಾನೆ. ಇಂದಿನ ಗೆಜ್ಜೆಗಾರ ಕುಪ್ಪೆ, ಹೊಯ್ಸಳರ ಕಾಲದಲ್ಲಿ ಪ್ರಾಚೀನ ಗಜಪುರಿ ಪಟ್ಟಣವಾಗಿತ್ತೆಂಬ ಸ್ಥಳಪುರಾಣವಿದೆ. ಹೊಯ್ಸಳರ ಕಾಲಕ್ಕಿಂತಲೂ ಮುನ್ನ ಈ ಊರಿನಲ್ಲಿ ಗಜಗಾರ ವೃತ್ತಿಯರಿರಬಹುದು ಎಂದು ಊಹಿಸಬಹುದು. ಮಾಗಡಿ ತಾಲೂಕಿನ ಗಜಗಾರ ಕುಪ್ಪೆಯ ಊರ ಮುಂದಿನ ವಿದ್ಯಾರಾಜು ಜಗತಿಯ ಮೇಲಿರುವ ಈ ಶಿಲಾಶಾಸನಕ್ಕೆ ವಿದ್ಯಾರಾಜುಭಟ ಮನೆತನದವರಿಂದ ಈಗಲೂ ಪೂಜೆ ನಡೆಯುತ್ತಿದೆ.

ಕಾಕತೀಯರು

"ಹೊಯ್ಸಳರ ಅವನತಿ ಮತ್ತು ವಿಜಯನಗರದ ಏಳ್ಗೆಯ ನಡುವಿನ ಕಾಲದಲ್ಲಿ ಮಾಗಡಿ ಸೀಮೆಯನ್ನು ಕಾಕತೀಯರ ಪ್ರತಾಪರುದ್ರ ದೇವ ಆಳಿದ್ದಾನೆಂದು ಎಂ.ವಿ.ಕೃಷ್ಣರಾವ್ ಅಭಿಪ್ರಾಯಪಡುತ್ತಾರೆ".[೨೮] ಕಾಕತೀಯರ ಪ್ರತಾಪರುದ್ರದೇವ ಕ್ರಿ.ಶ.೧೨೯೫ರಲ್ಲಿ ಅರಸನಾಗಿ ಹೊಯ್ಸಳರನ್ನು ಸೋಲಿಸಿ ಚಿರುಚನಾಪಳ್ಳಿಯವರೆಗೂ ರಾಜ್ಯ ವಿಸ್ತರಿಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಕಾಕತೀಯರ ಆಡಳಿತದಲ್ಲಿ ೭೪ ನಾಯಕರ ಆಡಳಿತವಿತ್ತು. ೭೪ ಕುಟುಂಬಕ್ಕೆ ಸೇರಿದ್ದ ಮುನ್ನೂರು ನಾಯಕರಿದ್ದರು. ಇಂತಹ ನಾಯಕನಲ್ಲೊಬ್ಬನಾದ ಚೆನ್ನಯ್ಯನಾಯಕ ಹುತ್ರಿಕಲ್ಲು ಕೋಟೆ ಎಲಿಯೂರು ಬಾಗಿಲಿನಲ್ಲಿ ನಿಜ ಸ್ತಂಭವಾಗಿ ಸ್ಥಾಪಿಸಿದ್ದಾನೆ. ಮಹಾಮಂಡಲೇಶ್ವರ ಸೋಮರಸ ಕಲುವಳಿನಾಡ ಪ್ರಭುವಾಗಿ ೧೩೫೧ರ ವೇಳೆಗೆ ಐಜೂರನ್ನು ಕುಕ್ಕಲನಾಡು ಅಧಿಕಾರಿಯಾದ ಸೋದರ ಚೆನ್ನಯ್ಯ ನಾಯಕನಿಗೆ ಕೊಟ್ಟಿರುವ ಸಂಗತಿ ಇದೆ. ಐಜೂರಿನ ತಾಳವಾಡಿ, ಗಂಗವಾಡಿ, ಮೂಡಬಾಳು, ಮುಳವಳ್ಳಿ, ಬೆಟ್ಟ, ಅರೆಗೊಳಲು, ಭೀಮಗೊಂಡನಹಳ್ಳಿಯ ಮುಖ್ಯಸ್ಥರನ್ನು ನಾಡಶಾನುಭೋಗರನ್ನು ಪ್ರಸ್ತಾಪಿಸುತ್ತದೆ"[೨೯].

ವಿಜಯನಗರದ ಅರಸರು

ರಾಮನಗರದ ರಾಮದೇವರ ಬೆಟ್ಟದ ಕೋಟೆ ಜಗತಿಯ ಮೇಲಿರುವ ಶಾಸನವನ್ನು ತಜ್ಞ ಎಂ.ಜಿ.ನಾಗರಾಜ್‌ರವರು ವಿಶ್ಲೇಷಣೆ ಮಾಡಿ ಈ ಶಾಸನದಲ್ಲಿ ಬುಕ್ಕಹಕ್ಕನ ಅರಸಿಯರು ಕಟ್ಟಿಸಿದ "ತ್ರಿಯಂಬಕಮಟ" ಎಂದಿದ್ದು, ತ್ರಿಯಂಬಕ ಮೂಲವನ್ನು ಗುರುತಿಸಿ ಹಕ್ಕಬುಕ್ಕರು ಮೂಲತಃ ರಾಮನಗರ ಪ್ರದೇಶದವರಾಗಿದ್ದು, ಕಾಳಾಮುಖ ಶೈವಗುರು ಕ್ರಿಯಾಶಕ್ತಿಯ ಶಿಷ್ಯನಾದ ಕಾಕತೀಯ ಪ್ರತಾಪರುದ್ರನೊಂದಿಗೆ ಸಾಂಪ್ರದಾಯಿಕ ಸಂಪರ್ಕ ಬೆಳೆಸಿರಬಹುದು ಎನ್ನುತ್ತಾರೆ. ಕ್ರಿಯಾಶಕ್ತಿ ಮೂಲತಃ ಕಾಳಾಮುಖ ಶೈವ ಪಂಗಡದವನಾಗಿ ನಂತರ ನಿಜೇಷ್ಟಲಿಂಗ ದೃಢಿಷ್ಟನಾಗಿ ವೀರಶೈವನಾದ "ಕಾಶೀವಿಲಾಸ ಕ್ರಿಯಾಶಕ್ತಿ" ಹಕ್ಕಬುಕ್ಕರ ಕುಲಗುರು. ಈ ಪ್ರಭಾವಕ್ಕೊಳಗಾಗಿ ವೀರಶೈವ ಧರ್ಮದ ದೀಕ್ಷೆ ಪಡೆದು ವೈದಿಕ ಧರ್ಮಕ್ಕೊಳಗಾದವರೆಂಬುದನ್ನು[೩೦] ಆಳವಾಗಿ ಅವಲೋಕಿಸಬೇಕಾಗಿದೆ. ನಂತರದ ಕಾಲದಲ್ಲಿ ಇವರಿಗೆ ವಿದ್ಯಾರಣ್ಯರ ನೆರವು ದೊರೆತಿರುವುದನ್ನು ಅಲ್ಲಗಳೆಯಲಾಗದು.

ಕಲ್ಯದ ಧರ್ಮ ಸಂಘರ್ಷದ ಘಟನೆಯನ್ನು ಹೇಳುವ ಶಾಸನವು[೩೧] ಬುಕ್ಕನನ್ನು ಶ್ರೀಮಾನ್ ಮಹಾಮಂಡಲೇಶ್ವರಂ ಎಂದು ವರ್ಣಿಸಿದೆ. ಬುಕ್ಕನ ಕುಮಾರ, ಮಲ್ಲಿ ಒಡೆಯರು ಬೇಲೂರು ಚೆನ್ನಕೇಶವನಾಥ ದೇವರಿಗೆ ನೀಡಿರುವ ಅಜ್ಜನಹಳ್ಳಿ ದಾನ ಶಾಸನ[೩೨] ಹಾಗೂ ಬುಕ್ಕರಾಯನ ಬಂಟ ವಿಠಲನಾಥ; ಕಲ್ಯದ ಕೆರೆ ಕಟ್ಟಿಸಿ ಕಾಲುವೆಗಳನ್ನು ಧರ್ಮಕಾರ್ಯ ನಿಮಿತ್ತ ಮಾಡಿಸಿದ್ದಾನೆ.[೩೩] ಹೀಗೆ ವಿಜಯನಗರದ ಅರಸರು ಹಲವಾರು ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟಿರುವ ವಿಷಯ ರಾಮನಗರ ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಇಮ್ಮಡಿ ದೇವರಾಯ (ಪ್ರೌಢದೇವರಾಯ)ನ ಆಳ್ವಿಕೆಯ ಕಾಲಕ್ಕೆ ಸೇರಿದ ಕಬ್ಬಾಳು ಗ್ರಾಮದ ಕಬ್ಬಾಳಮ್ಮನ ಗುಡಿ ಉತ್ತರದಲ್ಲಿರುವ ಶಾಸನವು[೩೪] ಪಾಂಚಾಳ ವೃತ್ತಿಗೆ ಸಂಬಂಧಿಸಿದ ಒಡಂಬಡಿಕೆ ಮಾಡಿಕೊಂಡ ವಿಷಯ ತಿಳಿಸಿದ್ದು, ಇದರಲ್ಲಿ ಕಬ್ಬಾಳಮ್ಮನನ್ನು 'ಕಾಳಿಕಾದೇವಿ' ಎಂದು ಕರೆದಿರುವುದನ್ನು ಕಾಣಬಹುದು.

ವಿಜಯನಗರದ ಪ್ರಖ್ಯಾತ ಅರಸ ಕೃಷ್ಣದೇವರಾಯನಿಗೆ ಗಂಗಾಜಲವನ್ನು ತರುತ್ತಿದ್ದ ಕೋಣಪ್ಪ ನಾಯಕನೆಂಬುವನು, ಮಾರಯ್ಯನಹಳ್ಳಿಯನ್ನು ಡಣಾಯಕಪುರವೆಂದು ಪ್ರತಿನಾಮಕರಣ ಮಾಡಿ, ಕೃಷ್ಣ ದೇವರಾಯನ ಮಗ ತಿರುಮಲ ಮತ್ತು ಸಾಳ್ವತಿಮ್ಮನ ಹೆಸರಿನಲ್ಲಿ ಕಲ್ಲೂರಿನ ವರದರಾಜ ದೇವಾಲಯಕ್ಕೆ ದಾನ ಮಾಡಿದ್ದಾನೆ.[೩೫] ಮಾಗಡಿಯ ತಿರುಮಲೆ ರಂಗನಾಥ ತಿರುವೆಂಗಳೇಶ್ವರನಾಗಿದ್ದಕ್ಕೆ ಶಾಸನಾಧಾರಗಳಿವೆ[೩೬] ಹಾಗೂ ಹಲ್ಕೂರು ಹೋಬಳಿ ಹರಿಹರ ಗ್ರಾಮದ ಶಾಸನದಲ್ಲಿ[೩೭] ಕೃಷ್ಣದೇವರಾಯನ ಪ್ರಧಾನನಾದ ಕಂಪ ಒಡೆಯ ದಣ್ಣಾಯಕನು ನಂಜಯ್ಯ ಎಂಬುವನಿಗೆ ಹರಿಹರಗ್ರಾಮ, ಚಂಬಾಪುರ, ಸೋಲಿಗಿರಿ ಈ ಮೂರು ಗ್ರಾಮಗಳನ್ನು ಹರಿಹರ ದೇವರ ಸೇವೆಗಾಗಿ ದತ್ತಿ ನೀಡಿರುವ ವಿಚಾರವಿದೆ.

ಅಚ್ಯುತ ದೇವರಾಯನ ಕಾಲದ ಹಾರೋಹಳ್ಳಿಯ ವೆಂಗಳಯ್ಯನ ಕೆರೆ ತೂಬಿನ ಬಳಿ ಕಂಡುಬಂದ ಶಾಸನದಲ್ಲಿ ಹಾರುವಳ್ಳಿಗೆ ವರದ ತಿಮ್ಮಯ್ಯನೆಂಬುವನು ತಿರುವೆಂಗಡನಾಥ ದೇವರನ್ನು ಪ್ರತಿಷ್ಠಾಪಿಸಿದ್ದಕ್ಕೆ ಗ್ರಾಮವನ್ನು ದತ್ತಿ ಕೊಟ್ಟ ವಿಚಾರ ತಿಳಿಸುತ್ತದೆ. ಇದರಲ್ಲಿ ಹಾರೋಹಳ್ಳಿಯನ್ನು 'ಹಾರುವ ಹಳ್ಳಿ' ಎಂದು ಕರೆದಿದೆ.

ಚನ್ನಪಟ್ಟಣ ಸೀಮೆಯ ಪಾಳೆಯಗಾರರು

ಪೆನುಕೊಂಡ ವಿಜಯನಗರದ ಅರಸರ ಸಾಮಂತರಾಗಿ ೧೫೭೦-೧೬೩೦ರ ನಡುವೆ ಚನ್ನಪಟ್ಟಣವನ್ನು ಕೇಂದ್ರವನ್ನಾಗಿ ಮಾಡಿಕೊಂಡು, ರಾಮನಗರ ಜಿಲ್ಲೆಯ ಚನ್ನಪಟ್ಟಣ ಮತ್ತು ಕನಕಪುರ ತಾಲೂಕುಗಳನ್ನು, ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ಮದ್ದೂರು ತಾಲೂಕುಗಳ ಕೆಲವು ಭಾಗಗಳನ್ನು ಒಳಗೊಂಡಂತೆ ಚನ್ನಪಟ್ಟಣದ ಪಾಳೆಯಗಾರರು ಆಳ್ವಿಕೆ ಮಾಡುತ್ತಿದ್ದರು. ಈ ಪಾಳೆಯಗಾರರು ಮೈಸೂರು ಒಡೆಯರ ರಾಜಕೀಯ ಇತಿಹಾಸದೊಂದಿಗೆ ಸಮಾನಾಂತರವಾಗಿ ಕೆಲವು ಕಾಲ ಆಳ್ವಿಕೆ ಮಾಡಿದರಾದರೂ ೧೭ನೇ ಶತಮಾನದ ಪೂರ್ವಾರ್ಧದ ವೇಳೆಗೆ ಮೈಸೂರು ಒಡೆಯರ ಸಂಸ್ಥಾನದಲ್ಲಿ ಮಾಗಡಿ ಸಂಸ್ಥಾನ ವಿಲೀನವಾಗಿ ನಿಂತು ಹೋಯಿತು.

ಚನ್ನಪಟ್ಟಣ ಪಾಳೆಯಗಾರರ ಪೂರ್ವಿಕರು ವಿಜಯನಗರದ ಅರಸರಲ್ಲಿ ಗಣ್ಯರಾದ ಅಧಿಕಾರಿಗಳಾಗಿದ್ದರು ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ಚನ್ನಪಟ್ಟಣ ಸೀಮೆಯ ಪಾಳೆಯಗಾರ ಇಮ್ಮಡಿ ಜಯದೇವರಾಯನ ಮುತ್ತಜ್ಜ ಭಂಡಾರದ ತಿಮ್ಮಪ್ಪಯ್ಯ ಅಚ್ಯುತರಾಯನ ಆಡಳಿತಕಾಲದಲ್ಲಿ ಚನ್ನಪಟ್ಟಣ ರಾಜ್ಯದ ನಾಯಕತನ ಅನುಭವಿಸಿದಂತೆ ತಿಳಿಯುವುದು. ಇಮ್ಮಡಿ ಜಗದೇವರಾಯನ ತಂದೆಯಾದ ತಿಮ್ಮನಾಯಕನು ನಾಗಮಂಗಲ ಸೀಮೆಯ ಅಧಿಕಾರಿಯಾಗಿದ್ದನು. ಈತನ ಮಗ ಪೆದ್ದ ಜಗದೇವರಾಯ ಕೂಡ ಆ ಸ್ಥಳದ ಅಧಿಕಾರಿಯಾಗಿದ್ದನು. ಇವನ ತಮ್ಮನೇ ಇಮ್ಮಡಿ ಜಗದೇವರಾಯ.

ವಿಜಯನಗರ ಚಕ್ರವರ್ತಿ ಪೆನುಗೊಂಡೆಯ ತಿರುಮಲರಾಯನು ಗೋಲ್ಕೊಂಡ ಮತ್ತು ಅಹ್ಮದ್‌ನಗರಗಳ ಸುಲ್ತಾನರ ದಾಳಿಯನ್ನು ಎದುರಿಸಬೇಕಾಯಿತು. ಆ ಸಂದರ್ಭದಲ್ಲಿ ದೊರೆಗೆ ಸಹಾಯ ಮಾಡಿದ ಇಮ್ಮಡಿ ದೇವರಾಯನು ಶತ್ರುಗಳ ಆಕ್ರಮಣದಿಂದ ಪೆನುಗೊಂಡೆಯನ್ನು ಪಾರು ಮಾಡಿದ್ದರಿಂದ ಸಂಪ್ರೀತಗೊಂಡ ಚಕ್ರವರ್ತಿ ತಿರುಮಲರಾಯನಿಗೆ 'ಘನಗಿರಿ ರಕ್ಷಕ' ಎಂಬ ಬಿರುದು ನೀಡಿ, ೯ ಲಕ್ಷ ಪಗೋಡಗಳ ವರಮಾನ ಬರುವ ದೊಡ್ಡಸೀಮೆಯನ್ನು ಜಹಗೀರಾಗಿ ನೀಡಿದನು. ಈತನು ಚನ್ನಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸುತ್ತಮುತ್ತಲ ಪ್ರದೇಶವನ್ನು ಆಳಿದನು. ಕನಕಪುರದ ಕೋಟೆಯನ್ನು ನಿರ್ಮಿಸಿದವನು ಈ ಇಮ್ಮಡಿ ಜಗದೇವರಾಯನೇ. ಇವನ ನಂತರ ಇವನ ಮಕ್ಕಳಾದ ಜಗದೇವ, ನಂತರ ಅಂಕುಶ ವೆಂಕಟಪತಿ ಸ್ವಲ್ಪಕಾಲ ಆಳ್ವಿಕೆ ಮಾಡಿ; ವೆಂಕಟಪತಿಯ ಸೋದರಳಿಯ ಇಮ್ಮಡಿ ಕುಮಾರ ಜಗರಾಯ (ಸು.೧೬೨೦-೧೬೨೯) ರಾಜ್ಯವಾಳಿದ ವಿಚಾರ ಶಾಸನಗಳಲ್ಲಿ ಲಭ್ಯವಿದೆ.

ಕನಕಪುರದ ಅಲ್ಲಾಳಸಂದ್ರ ಶಾಸನದಲ್ಲಿ[೩೮] "ಕೊಮರ ಯಿಮಡಿ ಜಗದೇವರಾಯ ಅಯನವರು ಬಸಪಣಪಳಿ ಆಳಾಜವಾನರು ಪ್ರತಿಷ್ಠೆಮಾಡಿದ ಕಾಶೀವಿಶ್ವನಾಥ ಸ್ವಾಮಿಗೆ ಕನುಕನಳಿ ಸೀಮೆಯೊಳಗಿನ ಅಲಾಳಸಮುದ್ರ ಗ್ರಾಮವನ್ನು ಸರ್ವಮಾನ್ಯ ಗ್ರಾಮ"ವಾಗಿ ಕೊಟ್ಟಸಂಗತಿ ಇದೆ. ಇನ್ನೊಂದು ಚನ್ನಪಟ್ಟಣ ತಾಲೂಕಿನ ದಶಾವರ[೩೯] ಶಾಸನದಲ್ಲಿ ಅರವೀಡು ಮನೆತನದ ರಾಮರಾಯನ ಸಾಮಂತನೆಂಬುದಾಗಿ ಹೇಳಿಕೊಂಡಿದ್ದಾನೆ. ದೊರೆ ಚಾಮರಾಜ ಒಡೆಯರು ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದ ಕಾಲದಲ್ಲಿ

ಚಾಮರಾಜನ ದಳವಾಯಿ ವಿಕ್ರಮರಾಯನು ಚನ್ನಪಟ್ಟಣವನ್ನು ಸ್ವಾಧೀನಪಡಿಸಿಕೊಂಡನು (೧೬೩೦) ಹೀಗಾಗಿ ಚನ್ನಪಟ್ಟಣದೊಂದಿಗೆ ಮಳವಳ್ಳಿ, ನಾಗಮಂಗಲ, ಕನಕಪುರ, ಚನ್ನರಾಯಪಟ್ಟಣ, ಪಿರಿಯಾಪಟ್ಟಣ, ಡಣಾಯಕನ ಕೋಟೆ ಹೀಗೆ ಹಲವು ಪ್ರದೇಶಗಳ ಒಡೆತನ ಚಾಮರಾಜ ಒಡೆಯರ ಕೈಸೇರಿ ಆತ ವಿಜಯನಗರದ ಸಾಮಂತರಲ್ಲಿ ಪ್ರಭಾವಶಾಲಿಯಾದ ಸ್ಥಾನವನ್ನು ಪಡೆಯುವಂತಾಯಿತು.

ಯಲಹಂಕ ಪ್ರಭುಗಳು

ಯಲಹಂಕ ಪ್ರಭುಗಳು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಆಳಿಕೆ ಮಾಡಿದವರು. ಆವತಿ, ದೇವನಹಳ್ಳಿ, ಬೆಂಗಳೂರು, ಮಾಗಡಿ, ಸಾವನದುರ್ಗ (ನೆಲಪಟ್ಟಣ)ವನ್ನು ತಮ್ಮ ಕೇಂದ್ರವನ್ನಾಗಿಸಿಕೊಂಡು ಆಳ್ವಿಕೆ ನಡೆಸಿದ್ದಾರೆ.

೧೫೩೭ರಲ್ಲಿ ಬೆಂಗಳೂರು ಸ್ಥಾಪಿಸಿದ ಹಿರಿಯ ಕೆಂಪೇಗೌಡ ಇವನ ಪತ್ನಿ ಚನ್ನಮ್ಮ ಮಾಗಡಿಯವಳು.[೪೦] ಇವನ ತಮ್ಮ ಬಸವಯ್ಯ ರಾಮಗಿರಿಗೂ (ರಾಮನಗರ) ಮತ್ತೊಬ್ಬ ತಮ್ಮ ಕೆಂಪಸೋಮಯ್ಯ ಶಿವಗಂಗೆಗೂ ನೇಮಕಗೊಂಡಿದ್ದರು. ಇವರಿಬ್ಬರು ಕ್ರಿ.ಶ.೧೫೬೫ರ ರಕ್ಕಸ ತಂಗಡಿ ಕದನದಲ್ಲಿ ಹೋರಾಡಿ ಮಡಿದು ವೀರರಾದರು.[೪೧]

ವಿಜಯನಗರದ ಅಚ್ಯುತರಾಯನಿಂದ ಮಾಗಡಿ ಪ್ರಾಂತ್ಯವನ್ನು ಜಹಗೀರಾಗಿ ಪಡೆದು ಆಳಿದ ಸಾಮಂತರಾಯ, ಸಾವನದುರ್ಗದಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿಸಿ ಅಲ್ಲಿಂದಲೇ ಆಳ್ವಿಕೆ ನಡೆಸಿದ. ಇವನ ನಂತರ ಸಂಪಜರಾಯ ಮತ್ತು ಚಿಕ್ಕರಾಯ ಆಡಳಿತ ನಡೆಸಿದರು. ಪುತ್ರ ಸಂತಾನವಿಲ್ಲದ ಚಿಕ್ಕರಾಯನನ್ನು ಗುಡೇಮಾರನ ಹಳ್ಳಿಯ ತಳಾರಿ ಗಂಗಪ್ಪ ನಾಯಕನು ಮೂಲೆ ಗುಂಪು ಮಾಡಿ ಏಳ್ಗೆಗೆ ಬಂದ. ವಿಜಯನಗರ ಸಾಮ್ರಾಟರ ಆದೇಶದಂತೆ ಇಮ್ಮಡಿ ಕೆಂಪೇಗೌಡ ತಳಾರಿ ಗಂಗಪ್ಪನನ್ನು ಕೊಂದು ಸಾವನ ದುರ್ಗವನ್ನು ವಶಪಡಿಸಿಕೊಂಡ. ಮಾಗಡಿ ಮತ್ತು ಬೆಂಗಳೂರನ್ನು ಕ್ರಿ.ಶ.೧೬೩೮ರ ವರೆಗೆ ಇಮ್ಮಡಿ ಕೆಂಪೇಗೌಡ ಬೆಂಗಳೂರಿನಿಂದಲೇ ಆಳಿದನು. ಆಗ ಇವನ ಕಾಲದಲ್ಲಿ ಸಾವನದುರ್ಗ ಪ್ರಮುಖ ಸೈನಿಕ ನೆಲೆಯಾಗಿ ಅಭಿವೃದ್ಧಿ ಕಂಡಿತು.

ಬಿಜಾಪುರದ ರಣದುಲ್ಲಾ ಖಾನ್‌ನ ನೇತೃತ್ವದಲ್ಲಿ ಸಾವನದುರ್ಗದಲ್ಲಿ ನಡೆದ ಕದನದಲ್ಲಿ "ಇಮ್ಮಡಿ ಕೆಂಪೇಗೌಡ ಒಪ್ಪಂದ ಮಾಡಿಕೊಂಡು ಇದರಂತೆ ಕ್ರಿ.ಶ.೧೬೩೮ರಲ್ಲಿ ಬೆಂಗಳೂರನ್ನು ಸುಲ್ತಾನನಿಗೆ ಒಪ್ಪಿಸಿ ವಾರ್ಷಿಕ ಪೊಗದಿ ನೀಡಲು ಒಪ್ಪಿಕೊಂಡನು. ರಾಮಗಿರಿಯನ್ನು ಒಪ್ಪಿಸಿದ ಇಮ್ಮಡಿ ಕೆಂಪೇಗೌಡ ತನ್ನ ಮಗನನ್ನು ಒತ್ತೆಯಾಗಿಟ್ಟು, ಸುಲ್ತಾನನಿಂದ ಸ್ಥಳೀಯ ನಾಯಕರ ವಿರುದ್ಧ ರಕ್ಷಣೆಯ ಭರವಸೆ ಪಡೆದನು"[೪೨] ಇವನ ಪಾಲಿಗೆ ಬಂದುದನ್ನು ಮಾಗಡಿ ಸೀಮೆಯಿಂದಲೇ ಆಳ್ವಿಕೆ ಆರಂಭಿಸಿದನು. ಇಲ್ಲಿಂದೀಚೆಗೆ ಇವನ ವಂಶಸ್ಥರಿಗೆ ಮಾಗಡಿ ಕೆಂಪೇಗೌಡರೆಂಬ ಹೆಸರು ಬಂತು. ಮಾಗಡಿ ಸೀಮೆಗೆ ಹುಲಿಕಲ್ಲು, ಸಾವನದುರ್ಗ, ನೆಲಪಟ್ನ, ಹುಲಿಯೂರುದುರ್ಗ, ಹುತ್ರಿದುರ್ಗ, ಭೈರವನದುರ್ಗ ಮತ್ತು ಕುಣಿಗಲ್ ಪ್ರಾಂತ್ಯಗಳಲ್ಲಿ ಇವನ ವಂಶಸ್ಥರು ಆಡಳಿತ ನಡೆಸಿದರು. ಇಮ್ಮಡಿ ಕೆಂಪೇಗೌಡನು ಮಾಗಡಿಯ ರಾಮೇಶ್ವರ ದೇವರ ಸೇವೆಗೆ

ಕಂಚುಗಾರನಹಳ್ಳಿ ಮತ್ತು ಹಾಲಸಿಂಗನಹಳ್ಳಿಗಳನ್ನು[೪೩] ಕಲ್ಯ, ಮಾಡಬಾಳ, ತಿರುಮಲೆ, ಹರತಿ, ಮಾಗಡಿ ಸ್ಥಳದ ಪಂಚಾಂಗ ವಾಚನಕ್ಕೆ[೪೪] ಹೀಗೆ ಹಲವಾರು ದಾನದತ್ತಿ ನೀಡಿರುವುದಕ್ಕೆ ಶಾಸನಾಧಾರಗಳಿವೆ.

"ಇವನ ಮಕ್ಕಳಲ್ಲೊಬ್ಬರಾದ ಹೊನ್ನಪ್ಪ ಗೌಡನಿಗೆ ಭೈರವದುರ್ಗದ ೫೦೦೦ಸೀಮೆಯನ್ನು ನೀಡಲಾಗಿ ಹುಲಿಕಲ್ಲು ಸಂಸ್ಥಾನ ಪ್ರತ್ಯೇಕವಾಗಿ ಪ್ರಾರಂಭಗೊಂಡಿತು. ಇಂದಿಗೂ ಹುಲಿಕಲ್ಲಿನಲ್ಲಿ ಇವರ ಸಂತತಿಯವರಿದ್ದಾರೆ".[೪೫] ಇಮ್ಮಡಿ ಕೆಂಪೇಗೌಡನ ನಂತರ ಅಧಿಕಾರಕ್ಕೆ ಬಂದ ಮುಮ್ಮಡಿ ಕೆಂಪೇಗೌಡನು ತನ್ನ ಇಷ್ಟ ದೇವರಾದ ಸಾವನದುರ್ಗದ ವೀರಭದ್ರಸ್ವಾಮಿಯ ಸನ್ನಿದಾನದಲ್ಲಿ ಕೋಟಗಾರ ಸಿದ್ದಪ್ಪನ ಹಳ್ಳಿಗೆ ಶ್ರೀನಿವಾಸಪುರವೆಂದು[೪೬] ಹೆಸರಿಟ್ಟು ದಾನ ಮಾಡಿದ್ದಾನೆ. ಪವಿತ್ರ ಕಾಶಿ ಮಠವೊಂದನ್ನು ಕಟ್ಟಿಸಿ ಲಿಂಗ ಪ್ರತಿಷ್ಠಾಪನೆ ಮಾಡಿ, ಅದರ ಅಭಿವೃದ್ಧಿಗಾಗಿ ಮಾಗಡಿ ಸೀಮೆಯ ಅಳಲುಕುಪ್ಪೆ ಗ್ರಾಮವನ್ನು[೪೭] ಸರ್ವಮಾನ್ಯವಾಗಿ ನೀಡಿದನು. ಇದರಂತೆಯೇ "ಮಾಗಡಿ ಸೀಮೆಯ ಹಂಚಕುಪ್ಪೆ, ವೊತ (ಮತ್ತ) ಅತಿಮಗೆರೆ ಮತ್ತು ಕೆಂಪಾಪುರ ಗ್ರಾಮಗಳನ್ನು ವೀರೇಶ್ವರ ಸ್ವಾಮಿಯ ಸೇವೆಗಾಗಿ ದಾನ ನೀಡಲಾಗಿದೆ"[೪೮]

ಇವನ ನಂತರ ಇಮ್ಮಡಿ ಕೆಂಪೇಗೌಡನ ಎರಡನೆ ಹೆಂಡತಿ ಲಿಂಗಮ್ಮಾಜಿ ಮಗನಾದ ಇಮ್ಮಡಿ ಹಿರಿಯ ಕೆಂಪೇಗೌಡ ಕುಣಿಗಲ್‌ನಲ್ಲಿ ಆಡಳಿತ ನಡೆಸಿದನು. ಮುಮ್ಮಡಿ ಕೆಂಪೇಗೌಡನ ಮತ್ತೊಬ್ಬ ಮಗವಾದ ದೊಡ್ಡ ವೀರಪ್ಪಗೌಡ ಮಾಗಡಿ ಸೀಮೆಯ ಎಲಿಯೂರು ಹೋಬಳಿಯ ಕಲ್ಲಿಕೆರೆ, ಮತ್ತು ಡೊಂಕಣಾಪುರ ಗ್ರಾಮವನ್ನು ಹದಿನೈದು ಜನ ಬ್ರಾಹ್ಮಣರಿಗೆ ದಾನ ನೀಡಿದನು[೪೯]. ತನ್ನ ಮಾತಾ ಪಿತೃಗಳಿಗೆ ಪುಣ್ಯವಾಗಲೆಂದು ಅಗಳುಕೋಟೆ, ನೇರಳವಾಡಿ, ಕಲ್ಲುದೇವನಹಳ್ಳಿ, ಚಕ್ರಭಾವಿ, ಹುಣಸೆ ಕುಪ್ಪೆಯಲ್ಲಿ ಹೊಲಮನೆ ದಾನ ನೀಡಿದ್ದಾನೆ. ಕೆರೆ ಕಟ್ಟುವಾಗ ಸಾತನೂರನ್ನೂ, ಕಾಶಿ ಮಠಕ್ಕೆ ಅಳಲು ಕುಪ್ಪೆಯನ್ನೂ, ಶೃಂಗೇರಿ ಮಠಕ್ಕೆ ಸೀಗೆಕುಪ್ಪೆಯನ್ನು ಕುಕ್ಕೆಸುಬ್ರಮಣ್ಯಸ್ವಾಮಿಗೆ ಅರೆ ಬೇಡರಹಳ್ಳಿ[೫೦]ಯನ್ನು ದಾನವಾಗಿ ನೀಡಿದ್ದಾನೆ.

ಇವನ ಮಗನಾದ ಕೆಂಪವೀರಪ್ಪ ಗೌಡನ ಕಾಲದಲ್ಲಿ "ಹುತ್ರಿದುರ್ಗ ಉಪ ರಾಜಧಾನಿಯಂತೆ ಕಂಗೊಳಿಸಿ, ದೇವಗಿರಿಯೆಂದು ಪ್ರತಿನಾಮಧೇಯವಾಯಿತು. ತನ್ನ ತಂದೆ ಈಗಾಗಲೆ ದಾನವಾಗಿ ನೀಡಿದ್ದ ಕಲ್ಲಿಕೆರೆ, ಡಂಕಣಾಪುರದ ಉಪಗ್ರಾಮಗಳೆಲ್ಲಾ 'ಮುಮ್ಮಡಿ ದೊಡ್ಡವೀರ ಸಾಗರ ಎಂದು ಕರೆದು, ಮಾತಾ ಪಿತೃಗಳಿಗೆ ಪುಣ್ಯವಾಗಲೆಂದು ೧೫ ಮಂದಿ ಬ್ರಹ್ಮಣರಿಗೆ ಸರ್ವಮಾನ್ಯವಾಗಿ ಕೊಡಲಾಗಿದೆ. ಕಡಸಿಂಗನಹಳ್ಳಿ, ಕ್ಯಾಗಲ (ಕೋಗಟ್ಟಿ) ತಟ ಸಮುದ್ರ (ತಟ ಸಂದ್ರ) ಗ್ರಾಮಗಳನ್ನು ಸೇರಿಸಿ ಮುಮ್ಮಡಿ ಕೆಂಪವೀರ ಸಾಗರವೆಂದು ಹೆಸರಿಸಿ, ೧೬ಮಂದಿಗೆ ಶಿವಾರ್ಪಿತವಾಗಿ ಕೊಟ್ಟಿದ್ದಾನೆ. ತನ್ನ ತಂದೆಯ ಹರಕೆಯ ಫಲಕ್ಕಾಗಿ ಹೊನ್ನಪ್ಪ ಬೇಡರಹಳ್ಳಿಗೆ ಸುಬ್ಬರಾಯಪುರವೆಂದು ಹೆಸರಿಟ್ಟು ದಾನ ಕೊಟ್ಟಿರುವ ದಾನಶಾಸನ ಹಾಗೂ ಮಾತಾಪಿತೃಗಳಿಗೆ ಪುಣ್ಯಬಯಸಿ ಕೆಂಪನಹಳ್ಳಿಗೆ ಶ್ರೀನಿವಾಸಪುರವೆಂದು ಹೆಸರಿಟ್ಟು ದಾನ ನೀಡಲಾಗಿದೆ"[೫೧]. ಹೀಗೆ ಹಲವಾರು ದಾನ ಧರ್ಮಗಳಿಗೆ ದೊಡ್ಡವೀರಪ್ಪ ಗೌಡನು ಪ್ರಸಿದ್ಧಿ ಪಡೆದಿದ್ದನು. ಇಂಥ ಕೊಡುಗೆ ದಾನಿ ಅರಸನ ಮೇಲೆ ಮೈಸೂರಿನ ದೊಡ್ಡ ಕೃಷ್ಣರಾಜ ಒಡೆಯರ ಸೇನೆ ದಳವಾಯಿ ದೇವರಾಜನ ನಾಯಕತ್ವದಲ್ಲಿ ನೆಲಪಟ್ಟಣ (ಸಾವನದುರ್ಗ) ಮುತ್ತಿಗೆ ಹಾಕಿ, ರಾಮನಗರದ ಅಚ್ಚಲು ದುರ್ಗದಿಂದ ಹಿಂದಿರುಗಿದ್ದ ಕೆಂಪ ವೀರಪ್ಪ

ಗೌಡನನ್ನು ೧೭೨೮ರಲ್ಲಿ ಬಂಧಿಸಿ ಶ್ರೀರಂಗಪಟ್ಟಣದ ಸೆರೆಯಲ್ಲಿಡಲಾಯಿತು. ಹೀಗೆ ಮಾಗಡಿ ಸೀಮೆ ಮೈಸೂರು ಆಳ್ವಿಕೆಗೊಳಪಟ್ಟಿತು.

ಕಾನಕಾನಹಳ್ಳಿ (ಕನಕಪುರ)ಯ ಪ್ರಭುಗಳು

ಮೈಸೂರಿನ ೯ನೇ ಚಾಮರಾಜ ಒಡೆಯರು (೧೬೧೭-೧೬೩೭) ೧೬೩೪ರಲ್ಲಿ ಚನ್ನರಾಯಪಟ್ಟಣವನ್ನು ಬೇಲೂರು ವೆಂಕಟಪ್ಪ ನಾಯಕನಿಂದ ಸ್ವಾಧೀನಪಡಿಸಿಕೊಂಡ ಮೇಲೆ ಮೈಸೂರಿನ ವಾಯುವ್ಯಭಾಗದ ಗಡಿಯಾಗಿ ಚನ್ನರಾಯಪಟ್ಟಣವು ಪರಿಣಮಿಸಿತು. ಇವನ ನಂತರ ಅಧಿಕಾರಕ್ಕೆ ಬಂದ ೧ನೆಯ ಕಂಠೀರವ ನರಸರಾಜ ಒಡೆಯರ ಚನ್ನರಾಯಪಟ್ಟಣ ಸೀಮೆಯ ವ್ಯವಹಾರವನ್ನೂ ನೋಡಿಕೊಳ್ಳುವಂತೆ ಕಾನಕಾನಹಳ್ಳಿಯ ದೊಡ್ಡಯ್ಯನೆಂಬ ಪಾಳೆಯಗಾರನನ್ನು ನೇಮಿಸಿದ ಸಂಗತಿ ಚನ್ನರಾಯಪಟ್ಟಣದ ಶಾಸನದಲ್ಲಿ[೫೨] "ಬಿರುದೆಂತೆಂಬರ ಗಂಡ ಮೈಸೂರ ಕಂಠೀರವ ನರಸರಾಜ ವೊಡೆರೈಯನವರು ಸುಖರಾಜ್ಯಂಗೈವಲ್ಲಿ ಚೆನ್ನಪಟ್ಟಣ ಸೀಮೆಯ ತುಂಗಣಿನಾಡ ಸ್ಥಳದ ಕಾನಕಾಜನಹಳ್ಳಿಯ ಪ್ರಭು ಚೆನ್ನವೀರಯ ಗೌಡನವರ ಕುಮಾರ ದೊಡ್ಡಯ್ಯನವರಿಗೆ ಈ ಚೆನ್ನಪಟ್ಟಣವ ಕೊಟ್ಟುಯಿದ್ದಲ್ಲಿ" ಹಾಗೂ ಚನ್ನರಾಯಪಟ್ಟಣದ ಶಾ.ಸಂ.೩೮ರಲ್ಲೂ ಇದೇ ರೀತಿಯ ಅಭಿಪ್ರಾಯವಿದೆ.

ಪ್ರಸ್ತುತ ಕನಕಪುರ ತಾಲೂಕಿನ ಸಣ್ಣಗ್ರಾಮ ತುಂಗಣಿ. ೧೭ನೇ ಶತಮಾನದ ವೇಳೆಯಲ್ಲಿ ಚೆನ್ನಪಟ್ಟಣ ತುಂಗಣಿ ಸೀಮೆಯ ನಾಡಾಗಿತ್ತು. ಕಾನಕಾನಹಳ್ಳಿಯಲ್ಲಿ ತುಂಗಣಿ; ನಾಡಿನ ಒಂದು ಸಣ್ಣ ಪಾಳೆಯಪಟ್ಟು ಆಗಿರಬಹುದು. ದೊಡ್ಡಯ್ಯನನ್ನು ಕಾನಕಾನಹಳ್ಳಿಯ ಪ್ರಭು ಎಂಬುದಾಗಿ ಸ್ಪಷ್ಟವಾಗಿ ಶಾಸನಗಳಲ್ಲಿ ಹೇಳಿದ್ದರೂ ಕನಕಪುರದಲ್ಲಿ ಸುತ್ತಮುತ್ತ ಇವನ ಪ್ರಭುತ್ವ ಸೂಚಕವಾದ ಯಾವುದೇ ದಾಖಲೆಗಳು (ಶಾಸನಗಳು) ದೊರೆಯುತ್ತಿಲ್ಲ. ಅಲ್ಲದೇ ಇವನ ಅಧಿರಾಜನಾದ ೧ನೆಯ ಕಂಠೀರವ ನರಸರಾಜ ಒಡೆಯರ ಕಾಲದ ಶಾಸನಗಳೇ ಲಭ್ಯವಿಲ್ಲ.

ಕಾನಕಾನಹಳ್ಳಿ ಪ್ರಭುಗಳ "ಪೀಳಿಗೆಯನ್ನು ಶಾಸನಾಧಾರದಿಂದ ಗುರುತಿಸಬಹುದಾದರೆ ಚೆನ್ನವೀರಯ ಗೌಡ-ದೊಡ್ಡಯ್ಯ-ಚನ್ನ ಒಡೆಯ, ಬಸವಯ್ಯ ಎಂದು ತಿಳಿಯುವುದು. ದೊಡ್ಡಯ್ಯನ ಅನಂತರದಲ್ಲಿಯೂ ಆತನ ಮಕ್ಕಳಿಗೂ ಚನ್ನರಾಯಪಟ್ಟಣದ ಮೇಲಾಳಿಕೆ ಮುಂದುವರೆದಂತೆ ತೋರುತ್ತದೆ"[೫೩].

ದೊಡ್ಡಯ್ಯನಿಗಿಂತಲೂ ಬಸವಯ್ಯ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆದಿರಬಹುದು. ಇದಕ್ಕೆ ನಿದರ್ಶನವಾಗಿ 'ಚನ್ನರಾಯ ಪಟ್ಟಣದ ಹಲವು ದೇವರುಗಳಿಗೆ ಸೇವೆ ಮಾಡಿರುವಂತೆ ಶಾಸನಗಳು ಸಿಗುತ್ತವೆ. (ಶಾಸನ ಸಂಖ್ಯೆ. ೨, ೧೧, ೧೨, ೨೩, ೪೩) ಅಲ್ಲದೆ "ಐಪಿರಿಯಾ ಪಟ್ಟಣ ತಾಲೂಕು ಬೆಟ್ಟದಪುರದ ಬೆಟ್ಟದ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಗೋಪುರ ಮಹಾದ್ವಾರದ ಎದುರಿನ ನಂದಿ ಮಂಟಪದಲ್ಲಿನ ಸುಂದರ ನಂದಿ ವಿಗ್ರಹವನ್ನು ಮಾಡಿಸಿದವಳು ಬಸವಯ್ಯನ 'ಪುಣ್ಯಸ್ತ್ರಿ', (ಉಪಪತ್ನಿ/ಸೂಳೆ) ವಿಗ್ರಹದ ಪೀಠದ ಮೇಲೆ "ಶ್ರೀ ಶುಭಮಸ್ತು ಕಾನಿಕಾರನಹಳಿಯ ಪ್ರಭು ದೊಡ್ಡೈಯನವರ ಕೊಮಾರರು ಬಸವೈಯನವರ ಪುಣ್ಯಸ್ತ್ರೀ ಮುದ್ದುಮಲ್ಲಾಜಮ್ಮನವರ ಮಂಟಪಕ್ಕೆ ಮಂಗಳ ಮಹಾಶ್ರೀ" ಎಂಬುದಾಗಿದೆ[೫೪].

ಕನಕಪುರ ಪರಿಸರದಲ್ಲಿ ಕಾನಕಾನಹಳ್ಳಿಯ ಪ್ರಭುಗಳ ಯಾವುದೇ ಆಧಾರಗಳು ಸಿಗದಿರುವುದು ಕನಕಪುರ ಸ್ಥಳೀಯ ಚರಿತ್ರೆಯನ್ನು ಕಟ್ಟಲು ಹಿನ್ನಡೆ ಉಂಟಾಗಿರುವುದು ಅಷ್ಟೇ ಸತ್ಯ.

೫.೨. ಪ್ರಾದೇಶಿಕ ವಿಭಾಗಗಳು ಮತ್ತು ಸ್ಥಳನಾಮಗಳು

ರಾಮನಗರ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಗಂಗರು, ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೊದಲಾದ ಹಲವಾರು ಪ್ರಖ್ಯಾತ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿರುವುದನ್ನು ರಾಜಕೀಯ ಚರಿತ್ರೆ ಮತ್ತು ಸ್ಥಳನಾಮಗಳ ಅಧ್ಯಾಯದಲ್ಲಿ ನೋಡಿದ್ದೇವೆ.

ಈ ರಾಜವಂಶಗಳು ವಿಶಾಲವಾದ ಭೂಪ್ರದೇಶವನ್ನು ತಮ್ಮ ಏಕಚಕ್ರಾಧಿಪತ್ಯದ ಕೆಳಗೆ ಆಡಳಿತ ನಡೆಸಲು ಅನುಕೂಲವಾಗುವಂತೆ ಹಲವಾರು ಆಡಳಿತ ವಿಭಾಗಗಳನ್ನು ಮಾಡಿಕೊಂಡಿದ್ದರು. ವಿಶಾಲ ಸಾಮ್ರಾಜ್ಯಕ್ಕೆ ರಾಜನು ಅಧಿಪತಿಯಾಗಿದ್ದರೂ, ಅವನ ಅಡಿಯಲ್ಲಿ ಅನೇಕ ಸಾಮಂತ ಅರಸರು, ಮಾಂಡಲೀಕರು, ಪಾಳೆಯಗಾರರು, ನಾಡ ಪ್ರಭುಗಳು ಸ್ಥಳೀಯ ಆಡಳಿತವನ್ನು ನೋಡಿಕೊಂಡು, ರಾಜ್ಯಕ್ಕೆ ಸಂದಾಯವಾಗಬೇಕಾಗಿದ್ದ ಹಲವಾರು ತೆರಿಗೆಗಳನ್ನು ವಸೂಲಿ ಮಾಡಿ ರಾಜನ ಬೊಕ್ಕಸಕ್ಕೆ ಸಂದಾಯ ಮಾಡುತ್ತಿದ್ದರು. ಇಂಥ ವಿಶಿಷ್ಟ ಕಾಣಿಕೆಯನ್ನು ನೀಡುತ್ತಿದ್ದ ಪ್ರಾದೇಶಿಕ ವಿಭಾಗಗಳು ಈಗ ಪ್ರಚಲಿತದಲ್ಲಿಲ್ಲ. ಆದರೆ ಈ ಅರಸರ ಆಳ್ವಿಕೆಗೆ ಸೇರಿದ ಪ್ರದೇಶಗಳಲ್ಲಿನ ಶಾಸನಗಳನ್ನು ಗಮನಿಸಿದಾಗ ಈ ಪ್ರಾಚೀನ ಆಡಳಿತ ವಿಭಾಗಗಳ ಹೆಸರುಗಳು ಗಮನ ಸೆಳೆಯುತ್ತವೆ. ಅಲ್ಲದೇ ಯಾವ ಯಾವ ಪ್ರದೇಶಗಳು ಈ ಪ್ರಾಚೀನ ಆಡಳಿತ ವಿಭಾಗಗಳಿಗೆ ಸೇರಿತ್ತು ಎಂಬುದನ್ನು ಹಾಗೂ ಆ ವಿಭಾಗಗಳ ನಿರ್ದಿಷ್ಟವಾದ ಗಡಿ, ಎಲ್ಲೆಯನ್ನು ಗುರುತಿಸಬೇಕಾದರೆ ಸ್ಥಳನಾಮಗಳೇ ಪ್ರಮುಖ ಆಕರಗಳಾಗಿ ನಿಲ್ಲಬಲ್ಲವು. ಅಲ್ಲದೆ "ಪ್ರಾಚೀನತಮ ಸ್ಥಳನಾಮಗಳು, ಆ ಎಡೆಯ ಭೌಗೋಳಿಕ ನೈಸರ್ಗಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ರೂಪು ಗೊಂಡಿರುತ್ತವೆ ಎಂಬುದು ಸ್ಥಳನಾಮ ವಿದ್ವಾಂಸರು ಕಂಡುಕೊಂಡಿರುವ ಸತ್ಯ ಸಂಗತಿ. ಈ ಸಂಗತಿ ಪ್ರಾಚೀನ ಪ್ರಾದೇಶಿಕ ವಿಭಾಗಗಳಿಗೂ ಅನ್ವಯವಾಗುತ್ತದೆ"[iii] ಎಂಬುದರಿಂದ ಪ್ರಾದೇಶಿಕ ವಿಭಾಗಗಳ ಭೌಗೋಳಿಕ ಮತ್ತು ನೈಸರ್ಗಿಕ ವೈಶಿಷ್ಟ್ಯತೆಯ ಜೊತೆಗೆ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನಕ್ಕೆ ಎಡೆಮಾಡಿಕೊಡುತ್ತದೆ ಎಂಬುದು ನಿಸ್ಸಂಶಯ ಹಾಗೂ ಸ್ಥಳನಾಮಗಳ ಪ್ರಾಚೀನತೆಯನ್ನು ತಿಳಿಯಲು ಸಹಕಾರಿಯಾಗಬಲ್ಲದು. ಪ್ರಾಚೀನ ನಾಡಿನ ನಾಮನಿಷ್ಪತ್ತಿ ಹಾಗೂ ಪ್ರಾದೇಶಿಕ ವ್ಯಾಪ್ತಿಯನ್ನು ನಿರ್ಧರಿಸುವುದರಿಂದ ಆ ನಾಡಿನ ಶಾಸನಗಳಿಂದ ವ್ಯಕ್ತವಾಗುವ ಸ್ಥಳೀಯ ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳ ಸ್ಥೂಲವಾದ ವಿವರಗಳು ಲಭ್ಯವಾಗುತ್ತದೆ.

ರಾಮನಗರ ಜಿಲ್ಲೆಯ ಪರಿಸರದಲ್ಲಿ ಗಂಗರಿಂದ ಪ್ರಾರಂಭಗೊಂಡು ವಿಜಯನಗರದ ಅರಸರ ಕಾಲಾವಧಿಯಲ್ಲಿದ್ದ ನಾಡು, ಸೀಮೆಗಳ ಪಟ್ಟಿ ಇಂತಿದೆ.

೧. ಕಿಟಿಲೆನಾಡು

೨. ಕೆಟ್ಗಿಲಿನಾಡು

೩. ಸಿಗಲನಾಡು

೪. ಮಣ್ಣೆನಾಡು

೫. ಕುಕ್ಕಲನಾಡು

೬. ತುಂಗಣಿನಾಡು

೭. ಅಚಲನಾಡು

ಮುಂತಾದ ನಾಡುಗಳಿದ್ದು ಈ ಪ್ರದೇಶದ ದಟ್ಟವಾದ ಇತಿಹಾಸವನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದೆ. ಈ ನಾಡು, ಸೀಮೆಗೆ ಬರುವ ಗ್ರಾಮಗಳ ಇತಿಹಾಸವೂ ಕೂಡ ಕುತೂಹಲಭರಿತವಾಗಿದೆ ಹಾಗೂ ಅಧ್ಯಯನಯೋಗ್ಯವಾಗಿದೆ.

ಕಿಟಿಲೆನಾಡು

'ಕಿವಿಲೆನಾಡಿ'ನ ತಮಿಳುರೂಪ 'ಕಿವಿಲೈನಾಡು' ಎಂದೂ, ಕ್ರಿ.ಶ.ಸುಮಾರು ೭೯೦ರ ಗಂಗರ ಶಿವಮಾರನ ಕಾಲದ ಮಣಲೆ ಅರಸರ ಕೂಮ್ಬುಡಿಯ ಶಾಸನ ಹಾಗೂ ಕ್ರಿ.ಶ.೯೫೦ರ ಆತಕೂರು ವೀರಗಲ್ಲು ಶಾಸನದಲ್ಲಿ ಕ್ರಿ.ಶ.೧೦೦೭ ರಿಂದ ಚೋಳ ಹಾಗೂ ಕ್ರಿ.ಶ.೧೧೫೦ ರಿಂದ ೧೨೬೦ರ ವರೆಗಿನ ಹೊಯ್ಸಳರ ಶಾಸನಗಳಲ್ಲಿ ಕಂಡುಬರುತ್ತದೆ. ಈ ಶಾಸನಗಳು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಾಲೂರು, ಮಳೂರು ಪಟ್ಟಣ, ಹೊಂಗನೂರು, ತಾಳವಾಡಿ, ಕನ್ನಮಂಗಲ ಕೂಡಲೂರು, ಬ್ಯಾಡರಹಳ್ಳಿ, ಹೊನ್ನನಾಯಕನಹಳ್ಳಿ, ಬೇವೂರು, ಹರೂರು, ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಆತಕೂರು, ಮಳವಳ್ಳಿ ತಾಲೂಕಿನ ಹುಸ್ಕೂರು, ಅಂತರವಳ್ಳಿ ಗ್ರಾಮಗಳ ಶಾಸನದಲ್ಲಿ ಕಂಡು ಬಂದಿದೆ.

ಕ್ರಿ.ಶ.೧೧೫೦ರ ನಂತರದಲ್ಲಿ, ಮದ್ದೂರು ತಾಲೂಕಿನ ವೈದ್ಯನಾಥಪುರ, ಬೊಪ್ಪಸಂದ್ರ, ಬೆಳ್ಳೂರು, ಮದ್ದೂರು, ಬಳಗರಹಳ್ಳಿ, ಕೌಡ್ಲೆ, ಮಳವಳ್ಳಿ ತಾಲೂಕಿನ ಹುಲ್ಲಹಳ್ಳಿ ಮತ್ತು ಹುಲ್ಲೇಗಾಲ, ಚನ್ನಪಟ್ಟಣ ತಾಲೂಕಿನ ಮಳೂರುಪಟ್ಟಣ. ಹರೂರು, ಅಬ್ಬೂರು, ಚಕ್ಕರೆ, ನಾಗೋಹಳ್ಳಿ ಮತ್ತು ಇಗ್ಗಲೂರು ಗ್ರಾಮಗಳ ಶಾಸನಗಳಲ್ಲಿ 'ಕೆಳಲೆನಾಡು' ಎಂಬ ಪ್ರಯೋಗ ಬಂದಿದೆ.

ಕಿಟಿಲೆ-ಕೆಳಲೆ ನಾಡಿನ ಭೌಗೋಳಿಕ ಪ್ರಾದೇಶಿಕ ವ್ಯಾಪ್ತಿಯನ್ನು "ಇಂದಿನ ಬೆಂಗಳೂರು ನಗರದ ನೈರುತ್ಯಕ್ಕೆ ಬರುವ ಚನ್ನಪಟ್ಟಣದ ಬಹುಭಾಗ ಮದ್ದೂರು, ಮಂಡ್ಯ, ಮಳವಳ್ಳಿ ತಾಲೂಕಿನ ಕೊಂಚಭಾಗ ಹಾಗೂ ತಿರುಮಕೂಡ್ಲು, ನರಸೀಪುರ ತಾಲೂಕಿನ ಉತ್ತರ ಭಾಗಗಳು ಈ ಭೌಗೋಳಿಕ ವಿಭಾಗದಲ್ಲಿ ಅಂತರಗತವಾಗಿದ್ದು, ಸಾಕಷ್ಟು ವಿಸ್ತಾರವಾಗಿತ್ತೆನ್ನಬಹುದು" [೨೪೬]

'ಕಿಟಿಲೆ' ಎಂಬುದು ಭೌಗೋಳಿಕ ವೈಶಿಷ್ಟ್ಯತೆಯನ್ನು ಸೂಚಿಸುವ ಸ್ಥಳನಾಮ ಎಂಬುದು ಡಾ.ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯ. "ಕಿಟಿಲೆ ಪದವು ಕೀಟ್+ಉಟಿ ಎಂಬ ಎರಡು ಪದಗಳು ಸೇರಿ ರೂಪುಗೊಂಡಿರಬೇಕು. 'ಕೀಟ್' ಅಥವಾ 'ಕಿಟ್' ಎಂದರೆ ತಗ್ಗಾದ ಅಥವಾ ಕೆಳಗೆ ಎಂಬರ್ಥವಿದೆ. 'ಉಟಿ' ಎಂದರೆ ಸ್ಥಳ ಎಂದರ್ಥ (ಶಬ್ದಮಣಿ ದರ್ಪಣ, ಸೂತ್ರ ೩೩, ಅನೇ ಅರ್ಥದ ಪ್ರಯೋಗ-"ಸ್ಥಾನ

ವ್ಯಕ್ತಿಯಂ ಪೇಟ್ಯೊಡೆ ಉಟಿ" (ತ) ಉಟಿ=ಸ್ಥಳ) ಕೀಮ್+ಉಟೆ=ಕೀಟಿಟೆ>ಕಿಮಿಟೆ>ಕಿಟಿಲೆ>ಕೆಳಲೆ. 'ಕಿಮಿಟಿ' ಎಂಬುದನ್ನು ತಗ್ಗಾದ ಪ್ರದೇಶ ಅಥವಾ ಕೆಳಗಿನ ಸೀಮೆ ಎಂದು ಅರ್ಥೈಸಬಹುದು. 'ಟಿ' ಕಾರ 'ಲ' ಕಾರವಾಗಿ ಹಾಗೂ 'ಇ' ಕಾರ 'ಎ' ಕಾರವಾಗಿ ಕಾಲಾಂತರದಲ್ಲಿ ಮಾರ್ಪಾಡುಗೊಂಡು ಬಳಕೆಯಾಗುವುದು ಸಾಮಾನ್ಯ.[೫೭] 'ಕಿಟಿಲೆ' ಎಂಬ ಸಂಯುಕ್ತ ಪದದ ಅರ್ಥವನ್ನೇ ಹೋಲುವ ರೀತಿಯಲ್ಲಿ, ಉತ್ತರದಿಂದ ದಕ್ಷಿಣಕ್ಕೆ ಪ್ರವಹಿಸುವ ಅರ್ಕಾವತಿ, ಕಣ್ವಾ ಹಾಗೂ ಶಿಂಷಾನದಿಗಳ ಕಣಿವೆಯ ಪ್ರದೇಶವಿದ್ದು ಗಮನ ಸೆಳೆಯುತ್ತದೆ".[೫೮] ಶಾಸನಗಳು ದೊರೆಯುವ ಕಿಟಿನಾಡು ಪ್ರದೇಶವು ಬಹುಮಟ್ಟಿಗೆ ಶಿಂಷಾನದಿ, ಅದರ ಉಪನದಿ ಕಣ್ವಾನದಿ ಹಾಗೂ ಅರ್ಕಾವತಿ ನದಿಗಳ ತಗ್ಗು ಪ್ರದೇಶವಾಗಿರುವುದು ಇದಕ್ಕೆ ಪುಷ್ಟಿಯನ್ನು ನೀಡಬಲ್ಲದು. 'ಇದರ ನೆರೆಹೊರೆಯ ಪ್ರದೇಶಗಳಾದ ಪೂರ್ವಕ್ಕಿರುವ 'ಕನಕಪುರದ ಪೂರ್ವಭಾಗ, ಉತ್ತರಕ್ಕಿರುವ ಬೆಂಗಳೂರು, ಮಾಗಡಿ; ಪಶ್ಚಿಮದ ಮಂಡ್ಯ ತಾಲೂಕು ಪ್ರದೇಶಗಳು ದಿಢೀರನೆ ೮೮೪ರಿಂದ ೯೧೫ ಮೀಟರ್‌ಗಳಷ್ಟು ಎತ್ತರವಿರುವುದು ಕಂಡುಬರುತ್ತದೆ. ಈ ರೀತಿ ವಿಶಿಷ್ಟವಾಗಿ ಸರಾಸರಿ ೧೮೩ ರಿಂದ ೨೧೩ ಮೀಟರ್‌ಗಳಷ್ಟು ತಗ್ಗಿನಲ್ಲಿರುವ ಪ್ರದೇಶವನ್ನು ಪ್ರಾಚೀನ ಕಾಲದಲ್ಲೇ ತಗ್ಗು ಪ್ರದೇಶವೆಂದು ಶಾಸನಗಳಲ್ಲಿ ದಾಖಲಿಸಿರುವುದು ನಮ್ಮ ಪೂರ್ವಿಕರ ನಿಸರ್ಗ ನಿಷ್ಠತೆಯನ್ನು, ಭೌಗೋಳಿಕ ಪರಿಜ್ಞಾನವನ್ನು ವಸ್ತುನಿಷ್ಠವಾಗಿ ಬಿಂಬಿಸಿರುವುದು"[೫೯]

ಕ್ರಿ.ಶ.೧೧೩೦ರ ನಂತರದಲ್ಲಿ ಮದ್ದೂರು ತಾಲೂಕಿನ ವೈದ್ಯನಾಥಪುರ, ಬೊಪ್ಪಸಂದ್ರ, ಬೆಳ್ಳೂರು, ಮದ್ದೂರು, ಬಳಗರಹಳ್ಳಿ, ಕೌಡ್ಲೆ ಗ್ರಾಮಗಳಲ್ಲಿ ಮಳವಳ್ಳಿ ತಾಲೂಕಿನ ಹುಲ್ಲಹಳ್ಳಿ, ಹುಲ್ಲೇಗಾಲ ಹಾಗೂ ಚನ್ನಪಟ್ಟಣ ತಾಲೂಕಿನ ೧೩೬೯ರ ಮಳೂರು ಪಟ್ಟಣ, ೧೩೯೫ರ ಹರೂರು, ೧೫೨೩ರ ಅಬ್ಬೂರು, ೧೫೩೪ರ ಚಕ್ಕೆರೆ, ೧೬೬೦ರ ನಾಗೋಹಳ್ಳಿ ಹಾಗೂ ಇಗ್ಗಲೂರು ಗ್ರಾಮಗಳಲ್ಲಿ ದೊರೆತ ಶಾಸನಗಳಲ್ಲಿ 'ಕೆಳಲೆನಾಡು' ಎಂಬ ಪ್ರಯೋಗ ಕಂಡುಬಂದಿದ್ದು, ಕಿಟಿಲೆ ನಾಡಿಗೆ ಪರ್ಯಾಯವಾಗಿ ಕೆಳಲೆನಾಡು ಎಂಬುದಾಗಿ ೧೪ನೇ ಶತಮಾನದ ನಂತರದಲ್ಲಿ ಕರೆಯಲ್ಪಡುತ್ತಿರಬೇಕು. ಕೈಟಿಲೆ, ಕಲೆಳಿ, ಕೈಲ ಎಂಬ ಪರ್ಯಾಯ ರೂಪಗಳೂ ಕಿಟಿಲೆ ಶಬ್ದರೂಪಗಳಿಗೆ ಸಮಾನಾಂತರವಾಗಿ ಬಳಸುತ್ತಿದ್ದ ಪ್ರಯೋಗಗಳಾಗಿ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಕಿಟಿಲೆ ನಾಡಿನಲ್ಲಿ ಈ ಮೇಲ್ಕಾಣಿಸಿದ ಎಲ್ಲ ಸ್ಥಳನಾಮಗಳು ಉಕ್ತವಾಗಿದ್ದವು ಎಂದು ತಿಳಿದು ಬರುತ್ತದೆ.

ಕೆಟ್ಗಿಲಿನಾಡು

ಕೆಟ್ಗಿಲಿನಾಡಿನ ವಿವರವು ಮೊದಲಿಗೆ ರಾಮನಗರದ ವಿಸ್ತರಣವಾದ ಐಜೂರಿನ ಕ್ರಿ.ಶ.೭೫೦ರ ವೀರಗಲ್ಲು ಶಾಸನವೊಂದರಲ್ಲಿ 'ಕೆಟ್ಗಿಲಿ ನಾಡರ್ಗಲ್ಲೂರು' ಎಂದು ಉಲ್ಲೇಖಿಸಲ್ಪಟ್ಟಿದೆ. ರಣಪಾರನೆಂಬುವನು 'ಕೆಟ್ಗಿಲಿನಾಡ'ನ್ನು ಆಳುತ್ತಿದ್ದನು. 'ಚನ್ನಪಟ್ಟಣ ತಾಲೂಕಿನ ಚನ್ನಮಾನಹಳ್ಳಿ, ಮಾಗೇನಹಳ್ಳಿ ಗ್ರಾಮಗಳ ಶಾಸನಗಳಲ್ಲಿ ಕಲುವಳಿನಾಡು, ಕೆಳವಲನಾಡು ಎಂದು ಕರೆಯಲ್ಪಟ್ಟಿದೆ'. ರಾಮನಗರ ತಾಲೂಕಿನ ವಡವಟ್ಟದ ಕ್ರಿ.ಶ.೧೩೩೫ರ ಶಾಸನದಲ್ಲಿ 'ಕುಲುವೊಳೆ ನಾಡು' ಎಂದೂ ಕ್ರಿ.ಶ.೧೩೫೧ರ ಐಜೂರಿನ ಶಾಸನದಲ್ಲಿ 'ಕಲುವಳಿ ನಾಡು' ಎಂಬ ಪ್ರಯೋಗಗಳು ಬಂದಿವೆ.

"ಕಲುವಳಿ>ಕಲುವೊಳೆ ಎಂಬುವು ಕೆಟ್ಗಲಿ ಎಂಬುದರಿಂದಲೇ ರೂಪಾಂತರಗೊಂಡಿರಬೇಕು. ಇದರ ಮೂಲ ರೂಪವಾದ ಕೀಟ್+ಕಲ್+ಉಟಿ=ಕೀಟ್ಕಿಲುಟಿ ಎಂಬುದರಿಂದ; ಅಂದರೆ ಕಿಟ್ಕಿಲುಟಿ> ಕಟ್ಗಿಟಿ>ಕೆಟ್ಗಲಿ ಎಂಬುದಾಗಿ ನಂತರದಲ್ಲಿ ಕಲವೊಳೆ, ಕೆಲುವಳಿ, ಕಲುವಳಿ, ಕೆಳವಲ ಎಂಬ ಪ್ರಯೋಗಗಳು ಕ್ರಮವಾಗಿ ಬೆಳತೂರು, ವಡವಟ್ಟ, ಅಕ್ಕೂರು, ಮಾಗೇನಹಳ್ಳಿ, ಗ್ರಾಮಗಳಲ್ಲಿ ದೊರೆತ ಶಾಸನಗಳಲ್ಲಿ ಬಂದಿದೆ".[೬೦] ಕೆಟ್ಗಲಿನಾಡಿನ ಅರ್ವಾಚೀನ ರೂಪ ಕಲುವಳಿ ಅಥವಾ ಕೆಳವಲ ನಾಡಾಗಿದೆ. ಈ ನಾಡಿನಲ್ಲಿ ಚಂದಿ ಮಾದಿಯಹಳ್ಳಿ, ಮಡುಗಟ್ಟೆ, ವೀರಂಗಣಿಗನಹಳ್ಳಿ, ಹೊಂಗನೂರು, ತಾಳವಾಡಿ, ಗಂಗವಾಡಿ, ಮಿಳೆಹಳ್ಳಿ, ಜೀಯಗೊಂಡನಹಳ್ಳಿ, ಅರೆಗೊಳಲು, ಐಜೂರು, ಮಗುವನಹಳ್ಳಿ, ಮಾರಪ್ಪನಕುಪ್ಪೆ, ಬೆಳತೂರು ಮುಂತಾದ ಗ್ರಾಮಗಳು ಶಾಸನೋಕ್ತವಾಗಿವೆ. ಈ ಗ್ರಾಮಗಳೆಲ್ಲವೂ ಅರ್ಕಾವತಿ ನದಿಯ ಬಲದಂಡೆ ಹಾಗೂ ಕಣ್ವಾ ನದಿಯ ಎಡದಂಡೆಯ ಕಡೆಗಿದ್ದು ಕಿಟಿಲೆನಾಡಿನಂತೆ ಸಾಕಷ್ಟು ಪ್ರದೇಶವಾಗಿದ್ದು ಇದರ ಜೊತೆಗೆ ಹೆಚ್ಚಿನ ಕಲ್ಲು ಬಂಡೆಗಳಿಂದ, ಬೆಟ್ಟಗುಡ್ಡಗಳಿಂದ ಕೂಡಿರುವುದು ಕಂಡುಬರುತ್ತದೆ.

"ಚನ್ನಪಟ್ಟಣ, ರಾಮನಗರ ತಾಲೂಕಿನ ಬಹುಭಾಗ ಈ ನಾಡಿನಲ್ಲಿ ಅಂತರ್ಗತವಾಗಿದ್ದಿರಬೇಕೆಂದು ತೋರುತ್ತದೆ"[೬೧] ಡಾ.ಎಂ.ಜಿ.ಮಂಜುನಾಥ ಅವರು 'ಬಂಡೆಗಳ ನಾಡು ಕಲುವಳಿನಾಡು' ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಕೆಟ್ಗಲಿನಾಡು-ಭೌಗೋಳಿಕ ಲಕ್ಷಣವನ್ನು ಹೊಂದಿರುವ ಸ್ಥಳನಾಮವಾಗಿದೆ.

ಸಿಗಲನಾಡು

"ಚೋಳರ, ಹೊಯ್ಸಳರ ಆಡಳಿತ ಕಾಲದಲ್ಲಿ ಸಿಗಲನಾಡು, ಮೂಲನಾಡು, ತುಂಗಣಿನಾಡು, ಕೆಳಲೆನಾಡು, ಹೊಮ್ಮಳಿಗೆನಾಡು, ಎಳವಲೆನಾಡು, ದೇಸಿಗಜಿನಾಡು, ಅಚಲನಾಡು, ಚೊಕ್ಕನಾಡು, ಮಹಾನಾಡು ಈ ಮೊದಲಾದ ಪ್ರದೇಶಗಳು ಗ್ರಾಮ ಸಮುಚ್ಚಯ ಕೇಂದ್ರಗಳಾಗಿ ಆಡಳಿತ ನಿರ್ವಹಿಸಿದಂತೆ ತೋರುವುದು"[೬೨] ಕ್ರಿ.ಶ.೧೩೩೭ರ ಚಿಕ್ಕಕೊಪ್ಪ ಗ್ರಾಮದ ಹೊಯ್ಸಳ ವೀರಬಲ್ಲಾಳನ ಕಾಲದ ಶಾಸನದಲ್ಲಿ "ಸ್ವಸ್ತಿ ಶ್ರೀ .... ಲ ನಾಡ ಸಾವಿರಮುಂ...." ಎಂಬ ತ್ರುಟಿತ ಉಲ್ಲೇಖವಿದೆ. ತ್ರುಟಿತವಾಗಿರುವ ಭಾಗವನ್ನು 'ಸಿಗ' ಎಂದು ಸೇರಿಸಿ ಪೂರ್ಣಗೊಳಿಸಿಕೊಂಡರೆ, ಆಗ ಸಿಗಲನಾಡು ಒಂದು ಸಾವಿರ ಪ್ರಮಾಣ ವ್ಯಾಪ್ತಿಯುಳ್ಳ ಪ್ರದೇಶವಾಗುತ್ತದೆ. ಅಂದರೆ ಕಿಟಿಲೆನಾಡಿನಂತೆ ಈ ನಾಡೂ ಕೂಡ ಒಂದು ಸಾವಿರ ಪ್ರಮಾಣದ ಪ್ರಾದೇಶಿಕ ವಿಭಾಗವಾಗಿದ್ದಿತ್ತೆಂದು ಹೇಳಬಹುದು"[೬೩] ಹೀಗೆ ಸಿಗಲ ನಾಡಿನ ವ್ಯಾಪ್ತಿ ಎಷ್ಟಿದ್ದರೂ ಕೂಡ ರಾಮನಗರ ಜಿಲ್ಲೆಯ ಪರಿಸರದಲ್ಲಿ ಪ್ರಾಚೀನ ಪ್ರಾದೇಶಿಕ ಆಡಳಿತ ವಿಭಾಗವಾಗಿ ಸಿಗಲ ನಾಡಿನ ಪ್ರಸ್ತಾಪ ಮಹತ್ವದ್ದೆಂದೇ ಭಾವಿಸಬಹುದು.

ಸಿಗಲನಾಡಿನ ಪ್ರಾದೇಶಿಕ ವ್ಯಾಪ್ತಿಯು ಕಾವೇರಿ ನದಿಯ ಉತ್ತರಕ್ಕೆ ಅಂದರೆ ಎಡದಂಡೆಯಲ್ಲಿರುವ ಅರ್ಕಾವತಿ ನದಿಯ ಕಣಿವೆ ಪ್ರದೇಶದಲ್ಲಿ ಅಂದರೆ ಬಾಣಂತಿ ಮಾರಿಬೆಟ್ಟ, ಪಿಟ್ಟನಕೆರೆಬೆಟ್ಟ, ಮುದುವಾಡಿಬೆಟ್ಟ, ಶಿವಾಲದಪ್ಪನಬೆಟ್ಟ, ಮಲ್ಲದೇವರ ಬೆಟ್ಟ ಮತ್ತು ಕೊಪ್ಪ ಬೆಟ್ಟ ಗುಡ್ಡಗಳಿಂದ ಕೂಡಿರುವ ಪ್ರದೇಶವನ್ನು ಸಿಗಲ್‌ನಾಡು ಎಂದು ಕರೆದಿರಬಹುದೆಂದು ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯವಾದರೆ, ಚನ್ನಪಟ್ಟಣ

ಪ್ರಾಂತ್ಯದ ಕೆಲವು ಹಳ್ಳಿಗಳು ಹಾಗೂ "ಕಾನಕಾನಹಳ್ಳಿಯ ದಕ್ಷಿಣ ದಿಗ್ಭಾಗದ ಸಾತನೂರು, ಕೋಡಿಹಳ್ಳಿ, ಉಯ್ಯಂಬಳ್ಳಿ, ಮುಳ್ಳಹಳ್ಳಿ, ದೊಡ್ಡಕೊಪ್ಪ, ನಾಯಕನಹಳ್ಳಿ, ಅರುಳಹಳ್ಳಿ, ಈ ಕೆಲವು ಹಳ್ಳಿಗಳ ಸಮುಚ್ಚಯ ಬಹುಶಃ ಸಿಗಲನಾಡು ಎನಿಸಿದಂತೆ ತೋರುತ್ತದೆ"[೬೪] ಸ್ವಾಭಾವಿಕವಾದ ಬೆಟ್ಟ, ಗುಡ್ಡಗಳಿಂದ ಕೂಡಿರುವ ಈ ಪ್ರದೇಶವನ್ನು ಶಾಸನಗಳಲ್ಲಿ ಸಿಯಲ್‌ನಾಡು, ಚಿಗಲ್‌ನಾಡು, ಸಿಗಲನಾಡು ಎಂದು ಕಾಲಾನುಕ್ರಮದಲ್ಲಿ ಉಲ್ಲೇಖಿಸಲಾಗಿದೆ.

ಸಿಗಲನಾಡಿನ ಸ್ಥಳನಾಮ ನಿಷ್ಪತ್ತಿ ಕುರಿತಂತೆ 'ಸೀ+ಅಲ್, ಚಿ/ಸಿ+ಕಲ್ ಎಂದು ಇವನ್ನು ಬಿಡಿಸಿಕೊಳ್ಳಬಹುದಾಗಿದೆ. ಸೀ>ಚಿ/ಸಿಗಳಿಗೆ ದ್ರಾವಿಡ ಭಾಷೆಗಳಲ್ಲಿ ಸೀವು, ಹರಿ, ವಿಂಗಡಿಸುವ, ಬೇರೆಮಾಡು (DED 2601) ಎಂಬ ಅರ್ಥಗಳಿವೆ. 'ಅಲ್' ಎಂಬುದು ಜಲವಾಚಕವಾಗಿದೆ. ಹಾಗೇ ಕಲ್ ಎಂಬುದು ಶಿಲಾವಾಚಕವಾಗಿದೆ. ಶಾಸನೋಕ್ತ 'ಸಿಯಲ್‌ನಾಡು' ಎಂಬುದು ಪ್ರಧಾನತಃ ಜಲಸೂಚಿ ವಾಚಕವಾಗಿದ್ದರೆ ಸಿಗಲ್ ಎಂಬುದು ಪ್ರಧಾನತಃ ಶಿಲಾಸೂಚಿ ವಾಚಕವಾಗಿರುತ್ತದೆ. ವಾಸ್ತವವಾಗಿ ಈ ಎರಡೂ ಅರ್ಥಗಳಲ್ಲಿ ಈ ಪ್ರದೇಶ ಪ್ರಾಮುಖ್ಯತೆಯನ್ನು ಪಡೆದಿರುವ ಅಂಶ ಮೇಲೆ ವಿವರಿಸಿದ ಭೌಗೋಳಿಕ ವಿವರಣೆಯಿಂದ ಮನಗಾಣಬಹುದಾಗಿದೆ. ಲಭ್ಯ ಶಾಸನಾಧಾರಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ನಾಡು ಮೊದಲಿಗೆ ಜಲಸೂಚಿಯಾದ 'ಸಿಯಲ್‌ನಾಡು' ಎಂದಿದ್ದುದು ನಂತರದಲ್ಲಿ ಶಿಲಾಸೂಚಿಯಾದ 'ಸಿಗಲ್‌ನಾಡಾಗಿ' ಪ್ರಸಿದ್ಧಿ ಪಡೆಯಿತೆನ್ನಬಹುದು. ಆದರೆ ಈ ಎರಡೂ ಹೆಸರುಗಳು ತೀರ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದಿರಬಹುದು ಎಂದು ಅನುಮಾನ ಪಡುವುದರಲ್ಲಿ ತಪ್ಪಿಲ್ಲವೆನಿಸುತ್ತದೆ. 'ಚೀಕ್' ಎಂಬ ಪದಕ್ಕೆ ತುಂಡುಮಾಡು, ನುಣುಪು, ನಯ, ಸಣ್ಣದಾಗಿ ಕತ್ತರಿಸು, ಸಿಪ್ಪೆಸುಲಿ (DED 2600) ಎಂಬರ್ಥಗಳಿಗೆ ಅಂದರೆ ನುಣುಪಾದ, ತುಂಡು ತುಂಡಾದ, ಹರಿದಿರುವ ಕಲ್ಲುಗಳನ್ನೇ ಪ್ರಧಾನವಾಗಿ ಹೊಂದಿರುವ ನಾಡೇ ಸಿಗಲನಾಡು' ಎಂದು ಅರ್ಥೈಸಬಹುದು"[೬೫] ಎಂದರೆ "ಕನಕಪುರ ತಾಲ್ಲೂಕಿನ ದಟ್ಟ ಅರಣ್ಯ ಪ್ರದೇಶಗಳು, ಬೆಟ್ಟಗುಡ್ಡಗಳಿಂದಾವೃತ್ತವಾಗಿರುವುದರಿಂದ ಇಲ್ಲಿ ಸೀಗೆಮೆಳೆಗಳು ಹೆಚ್ಚಾಗಿ ಬೆಳೆಯುತ್ತಿದ್ದಿರಬಹುದೆಂದು ಹೇಳಬಹುದು"[೬೬] ಎಂಬ ಎಂ.ಭೈರೇಗೌಡರ ಮಾತು ಸಿಗಲನಾಡು ಸಸ್ಯಸೂಚಿ ವಾಚಕವಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಗಂಗರ ಶ್ರೀಪುರುಷನ ಮಗನಾದ 'ಸಿಯಗಲ್ಲ' ಮರುಗೆರೆನಾಡು, ಮುನ್ನೂರಿನ ರಾಜ್ಯಪಾಲನಾಗಿದ್ದನು. ಅಲ್ಲದೇ ಶ್ರೀ ಪುರುಷನ ದಂಡ ನಾಯಕನಾಗಿದ್ದನು. ಈ "ಸಿಯಗಲ್ಲನ ಹೆಸರಿನಲ್ಲಿಯೇ 'ಸಿಗಲನಾಡು' ಅಸ್ತಿತ್ವಕ್ಕೆ ಬಂದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು"[೬೭] ಎಂಬ ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿದಾಗ, 'ಸಿಗಲನಾಡು' ಭೌಗೋಳಿಕ ಹಿನ್ನೆಲೆಯ ಸ್ಥಳನಾಮ ಎಂಬುದರಲ್ಲಿ ಎರಡು ಮಾತಿಲ್ಲ ಎಂಬುದನ್ನು ಒಪ್ಪಬಹುದಾಗಿದೆ.

ಗಂಗರ ಕಾಲದ ವೀರಗಲ್ಲು ಮತ್ತು ಚೋಳಕಾಲದ ವೀರಮಾಸ್ತಿ ಶಾಸನಗಳಲ್ಲಿ ಮಾತ್ರ ಸಿಗಲನಾಡಿನ ಪ್ರಸ್ತಾಪವಿದ್ದು, ೧೧೭೧ರ ಕಾಲದಲ್ಲಿ ಸಿಗಲನಾಡು ಹೊಯ್ಸಳರ ವಶವಾದರೂ ಶಾಸನಗಳಲ್ಲಿ "ಮುಡಿಗೊಂಡ ಚೋಳ ಮಂಡಲದ ರಾಜೇಂದ್ರ ಚೋಳ ವಳನಾಡಿನ ಸಿಗಲನಾಡು ಎಂದು ಹೆಸರಿಸಿರುವ ಪದ್ಧತಿ

ಮುಂದುವರೆದಿತ್ತು"[೧೮] ಕ್ರಿ.ಶ.೧೧೭೧ರ ಮುಳ್ಳಹಳ್ಳಿ ಮತ್ತು ೧೧೭೮ರ ಅಲಹಳ್ಳಿ ಗ್ರಾಮ ಶಾಸನಗಳಲ್ಲಿ 'ಮಾದೇವ' ಎಂಬುವನು ಸಿಗಲನಾಡನ್ನು ಆಳುತ್ತಿದ್ದ ಎಂದು ಉಲ್ಲೇಖಗಳಿವೆ.

ಕ್ರಿ.ಶ.೧೨೦೭ರ ನಂತರದ ಹಲವು ಶಾಸನಗಳಲ್ಲಿ ವೀರಬಲ್ಲಾಳ ಸಿಗಲನಾಡು, ಹೊಯ್ಸಳಚ್ಚಿಗಲನಾಡು, ವೀರಬಲ್ಲಾಳ ಹೊಯ್ಸಳ ಸಿಗಲನಾಡು ಎಂದು ಕರೆದಿರುವುದನ್ನು ಗಮನಿಸಿದರೆ ಹೊಯ್ಸಳ ವೀರಬಲ್ಲಾಳನ ಕಾಲಕ್ಕಷ್ಟೇ ಸಿಗಲನಾಡಿನ ಮೇಲೆ ಅವರು ತಮ್ಮ ಪೂರ್ಣಾಧಿಕಾರವನ್ನು ಪ್ರತಿಷ್ಠಾಪಿಸಿದರೆಂದು ಗ್ರಹಿಸಬಹುದು. ಕ್ರಿ.ಶ.೧೩೫೧ರ ಎಡಮಾರನಹಳ್ಳಿ ಗ್ರಾಮದ ವೀರಬುಕ್ಕಣ್ಣ ಒಡೆಯನ ಶಾಸನದ ಕಾಲಕ್ಕೆ ಈ ಪ್ರದೇಶದ ಮೇಲೆ ವಿಜಯನಗರ ಅರಸರ ಆಳ್ವಿಕೆಗೆ ಸ್ಥಿರಗೊಂಡಿತು. ಶಾಸನಗಳಲ್ಲಿ ಕ್ರಿ.ಶ.೧೬೩೩ರ ವರೆಗೂ ಸಿಗಲನಾಡಿನ ಪ್ರಸ್ತಾಪ ಮುಂದುವರೆದಿರುವುದು ಕಂಡುಬರುತ್ತದೆ. "ಸಿಗಲನಾಡಿಗೆ ಅರಳಾಳು ರಾಜಧಾನಿಯಾಗಿತ್ತೆಂಬುದಕ್ಕೆ ಶಾಸನಾಧಾರಗಳಿವೆ"[೧೯] "ಸಿಗಲನಾಡಾಳುವ ಮಾರದೇವರು.....ಕಾಣಿಕಾಚಿನಹಳ್ಳಿಯ ಚಂಚೇಗೌಡ...." ಎಂಬ ಉಲ್ಲೇಖ ಗಮನಿಸಿದಾಗ ಕನಕಪುರ ತಾಲೂಕಿನ ಪ್ರಾಚೀನ ರೂಪ ಕಾಣಿಕಾಚಿಹಳ್ಳಿ ಎಂದು ತಿಳಿದು ಬರುವುದು ಕೂಡ ಸ್ಥಳನಾಮ ಅಧ್ಯಯನದಲ್ಲಿ ಬಹುಮುಖ್ಯವಾದುದಾಗಿದೆ.

ಮಣ್ಣೆನಾಡು

ಮಾಗಡಿ ಸೀಮೆಯು ರಾಜೇಂದ್ರ ಚೋಳ ಒಳನಾಡು ಮತ್ತು ಮಣ್ಣೇನಾಡಿನಲ್ಲಿ ಅಂತರ್ಗತವಾಗಿತ್ತೆಂಬುದಕ್ಕೆ ಗಂಗರ ಕಾಲದ ಶಾಸನವೊಂದರಿಂದ[೨೦] ತಿಳಿದು ಬಂದರೆ, ಈ ಮಣ್ಣೆನಾಡು ವಿಕ್ರಮ ಚೋಳ ಮಂಡಲದ ಭಾಗವೆಂದು ನೆಲಮಂಗಲ ತಾಲೂಕಿನ ಸೋಲದೇವನಹಳ್ಳಿ, (ಕ್ರಿ.ಶ.೧೦೨೯) ಮಂಡಿಕೆರೆ ಶಾಸನಗಳಲ್ಲಿ ಉಕ್ತಗೊಂಡಿದೆ.

ಮಾಗಡಿ ತಾಲೂಕಿನ ಉದುಗುಂಟೆಯ ಮಜರೆ, ಮೂಡ್ಲುಪಾಳ್ಯದ ಕ್ರಿ.ಶ.೯೬೬ರ ಶಾಸನದಲ್ಲಿ ಮಣ್ಣೆನಾಡು-೩೦೦ ಮತ್ತು ಮಣ್ಣೆಸೀಮೆ ಎಂಬ ಉಲ್ಲೇಖಗಳಿವೆ. ಇದರಿಂದ ನೆಲಮಂಗಲ ತಾಲೂಕಿನ ಕೆಲವು ಗ್ರಾಮಗಳು ಮತ್ತು ಮಾಗಡಿ ತಾಲೂಕಿನ ಕೆಲವು ಗ್ರಾಮಗಳು ಈ ಮಣ್ಣೆ ನಾಡಿನಲ್ಲಿ ಅಂತರ್ಗತವಾಗಿತ್ತೆಂಬುದು ತಿಳಿದುಬರುತ್ತದೆ.

ಕುಕ್ಕಲನಾಡು

ಕುಕ್ಕಲ ನಾಡನ್ನು ಕ್ರಿ.ಶ.ಸು.೭೫೦ರ ಗಂಗರ ಶ್ರೀಪುರುಷನ ಶಾಸನಗಳಲ್ಲಿ 'ಕುಕ್ಕನರೆನಾಡು' 'ಕುಕ್ಕರ ಪಾಟಿಕ್ಕಾಜೆನಾಡು' ಎಂದು ಉಲ್ಲೇಖಿಸಿದೆ. ೧೧ನೇ ಶತಮಾನದ ಆದಿಯಲ್ಲಿ ಚೋಳರ ದಾಳಿಗೆ ಒಳಗಾಗಿ 'ಕುಕ್ಕನೂರ್ನ್ನಾಡು' ಎಂದು ಕರೆಸಿಕೊಂಡು, ಕ್ರಿ.ಶ.೧೧೧೬ರ ನಂತರ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಆಗ 'ಕುಕ್ಕಲನಾಡು' ಎಂದು ಪ್ರಚಲಿತವಾಗಿ ನಂತರ ವಿಜಯನಗರದ ಅರಸರ ಆಳ್ವಿಕೆಯ ಕಾಲಾವಧಿಯವರೆಗೂ ಉಳಿದಿತ್ತು. "ಒಟ್ಟಾರೆ ಕುಕ್ಕನರೆನಾಡು>ಕುಕ್ಕನೂರುನಾಡು>ಕುಕ್ಕಲನಾಡು ಎಂಬ ಅಂಕಿತಗಳಿಂದ ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೂ ಈ ನಾಡು ಅಸ್ತಿತ್ವ ಪಡೆದಿತ್ತು"[೨೧]

ಈ ನಾಡಿಗೆ ರಾಮನಗರ ತಾಲೂಕಿನ ಪೂರ್ವಭಾಗ. ಮಾಗಡಿ ತಾಲೂಕಿನ ಪೂರ್ವಭಾಗದ ಹಲವಾರು ಗ್ರಾಮಗಳು, ನೆಲಮಂಗಲ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಂತೆ ಈ ಕುಕ್ಕಲನಾಡು ಎಂಬ ಪ್ರಾದೇಶಿಕ ವಿಭಾಗ ಅಸ್ತಿತ್ವದಲ್ಲಿತ್ತು.

ಡಾ.ಪಿ.ವಿ.ಕೃಷ್ಣಮೂರ್ತಿ ಅವರು ಕುಕ್ಕಲ ಪದದ ನಿಷ್ಪತ್ತಿಯ ಬಗ್ಗೆ ಹೇಳುತ್ತಾ 'ಕುಕ್ಕಲ ಎಂಬುದು ಕುಕ್+ಅಲ ಎಂಬ ಎರಡು ಪದಗಳನ್ನೊಳಗೊಂಡಿದೆ. 'ಕುಕ್' ಎಂಬುದು ಪರ್ವತದ ತುದಿ, ಶಿಖರ, ಕೊಂಕು, ಅಂಕುಡೊಂಕು ಎಂದು ಅಭಿಪ್ರಾಯ ಪಡುತ್ತಾರೆ. "ಅಲ ಎಂಬುದು ತಗ್ಗಾದ ಸ್ಥಳದಲ್ಲಿ ನೀರು ನಿಂತಿರುವ ಜಾಗ. ನದಿಯ ಮುಖಜ ಭೂಮಿ ಎಂದು ಅರ್ಥೈಸಿದ್ದಾರೆ. ಅರ್ಕಾವತಿ ನದಿಗೆ ನೀರೊದಗಿಸುವ ಅಂಕುಡೊಂಕಾದ ಹಳ್ಳಕೊಳ್ಳಗಳ ಸಮೂಹವನ್ನು ಇದು ನಿರ್ದೇಶಿಸುತ್ತದೆ. ಮಳೆಯ ನೀರಿನಿಂದ ಉಂಟಾದ ಹಳ್ಳಕೊಳ್ಳಗಳನ್ನು ಇಂದಿಗೂ ನಾವು ಕೊರಕುಗಳೆಂದೇ ಕರೆಯುತ್ತೇವೆ. ಅಂತೆಯೇ ಕುಕ್ಕಲ ನಾಡು ತನ್ನ ನೈಜ ಭೌಗೋಳಿಕ ವೈಲಕ್ಷಣಗಳನ್ನು ಅನುಸರಿಸಿಯೂ ಹೆಸರನ್ನು ಪಡೆದಿರುವುದು ತಿಳಿಯುತ್ತದೆ"[೨೨] "ಕೊರಕಲುಗಳಿಂದ ಕೂಡಿದ ಅಂಕುಡೊಂಕಾದ ಚಿಕ್ಕ ಚಿಕ್ಕ ಬೆಟ್ಟಗುಡ್ಡಗಳಿರುವ ವಿಶಾಲವಾದ ನೀರಿರುವ ಸ್ಥಳದಲ್ಲಿ ಅನೇಕ ಗ್ರಾಮ, ಹಳ್ಳಿಗಳಿರುವ ಪ್ರದೇಶ ಎನ್ನಬಹುದು"[೨೩] ಈ ಪ್ರದೇಶವನ್ನು ಗಂಗ, ಹೊಯ್ಸಳ, ವಿಜಯನಗರದ ಸಾಮಂತ ನಾಯಕರು, ಪ್ರಭುಗಳು, ಗೌಡರು, ಅಧಿಕಾರಿಗಳು ಆಳ್ವಿಕೆ ನಡೆಸಿದ್ದಾರೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಹಾಗಲಹಳ್ಳಿಯ ಕ್ರಿ.ಶ.೧೩೩೪ರ ಶಾಸನ ಹಾಗೂ ಮಾಗಡಿ ತಾಲೂಕಿನ ಕ್ರಿ.ಶ.೧೩೪೦ರ ಬೈಚಗುಪ್ಪೆ ಶಾಸನದಲ್ಲಿ ಕುಕ್ಕಲನಾಡಿನ ಪ್ರಸ್ತಾಪವಿದೆ. ಮಾಗಡಿ ತಾಲೂಕಿನ ಬಾಣವಾಡಿಯ ಕ್ರಿ.ಶ.೧೫೪೭ರ ಶಾಸನದಲ್ಲಿ ವಿಜಯನಗರದ ಅರಸು ಸದಾಶಿವರಾಯನ ಆಡಳಿತಾಧಿಕಾರಿಯಾಗಿ ಕುಕ್ಕಲನಾಡನ್ನು ಚಂನೆಯದೇವ ಮಹಾ ಅರಸು ಆಳುತ್ತಿದ್ದ ಬಗ್ಗೆ ಉಲ್ಲೇಖವಿದೆ. "ಕುಕ್ಕಲನಾಡಿನ ಪ್ರದೇಶವು ಒಂದನೇ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡನ ಆಡಳಿತದಲ್ಲಿ ಸೇರಿತು. (ಕ್ರಿ.ಶ.೧೫೮೫-೧೬೩೮) ಈತನ ಆಡಳಿತ ಪ್ರದೇಶವು ಬೆಂಗಳೂರಿನಿಂದ ಮಾಗಡಿ, ರಾಮನಗರ ಮತ್ತು ಕುಣಿಗಲ್‌ಗಳವರೆಗೆ ವಿಸ್ತರಿಸಿತ್ತು"[೨೪]

ಹೀಗೆ ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಈಗ ಇಲ್ಲವಾದರೂ ಶಾಸನಗಳಲ್ಲಿ ದೊರೆಯುವ ಈ ನಾಡುಗಳ ಹೆಸರುಗಳನ್ನು ಕುರಿತಾದ ಪ್ರತ್ಯೇಕ ಅಧ್ಯಯನ ಮಾಡಲು ಸಾಧ್ಯವಿದೆ. ಇಂದು ಈ ನಾಡುಗಳ ವ್ಯಾಪ್ತಿಯನ್ನು, ಎಲ್ಲೆಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸ್ಥಳನಾಮಗಳು ಮುಖ್ಯ ಆಕರಗಳಾಗಿ ನಿಂತಿರುವುದನ್ನು ಪ್ರಮುಖವಾಗಿ ಗುರುತಿಸಬಹುದು. ಸ್ಥಳೀಯ ಚರಿತ್ರೆಯನ್ನು ರಚಿಸಲು, ಕಟ್ಟಲು ಈ ನಾಡುಗಳು ಎಷ್ಟು ಮುಖ್ಯವೋ ಹಾಗೆ ಸ್ಥಳನಾಮಗಳು ಕೂಡ ಅಷ್ಟೇ ಮುಖ್ಯ ಎಂಬುದನ್ನು ಮರೆಯಕೂಡದು.

೫.೩. ಐತಿಹಾಸಿಕ ಮಹತ್ವದ ಸ್ಥಳನಾಮಗಳು

ಹೀಗಾಗಲೇ ಗಮನಿಸಿದಂತೆ ರಾಮನಗರ ಜಿಲ್ಲೆಯ ಪ್ರದೇಶವನ್ನು ಗಂಗರಿಂದ ಹಿಡಿದು ವಿಜಯನಗರದ ಅರಸರು ಮತ್ತು ಅವರ ಪ್ರಾಂತ್ಯಾಧಿಕಾರಿಗಳು ಆಳ್ವಿಕೆ ಮಾಡಿರುವುದನ್ನು ನೋಡಿದ್ದೇವೆ. ಆದರೆ ಕೆಲವು

ಊರುಗಳಿಗೆ ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಊರಿನ ಪ್ರಾಚೀನತೆ, ಊರಿಗೆ ಸಂಬಂಧಿಸಿದಂತೆ ಇರುವ ಕತೆ, ಐತಿಹ್ಯ, ಹಾಡುಗಳನ್ನು ಕೇಳಿದಾಗ ಜನರ ಸ್ಪಂದನೆ ಕತೆಗಳಿಗೆ ಮತ್ತು ಐತಿಹ್ಯಗಳಿಗೆ ಹೆಚ್ಚಿನ ಒಲವು, ಒತ್ತುಗಳಿದ್ದವೇ ಹೊರತು, ಗ್ರಾಮದ ಪ್ರಾಚೀನತೆ ಹಾಗೂ ಇತಿಹಾಸದ ಅರಿವು ಇಲ್ಲದಿರುವುದು ಗೊತ್ತಾಯಿತು. ಆ ಸಂದರ್ಭದಲ್ಲಿ ಆಯಾಯ ಗ್ರಾಮಗಳ ಐತಿಹಾಸಿಕ ವಿಚಾರಗಳನ್ನು ಹೇಳಿ ಆ ಗ್ರಾಮದ ಐತಿಹಾಸಿಕ ಮಹತ್ವವನ್ನು ಗ್ರಾಮಸ್ಥರಿಗೆ ತಿಳಿಸಿಕೊಟ್ಟರೆ ನಮ್ಮ ಗ್ರಾಮವೂ ಕೂಡ ಇಂಥ ರಾಜ, ಮಹಾರಾಜರ, ಮಾಂಡಲೀಕರ ಆಳ್ವಿಕೆಗೆ ಸೇರಿತ್ತು ಎಂಬ ಅಭಿಮಾನ ಮೂಡುವುದು ಖಂಡಿತವೆಂದು ಭಾವಿಸಿ, ಗ್ರಾಮಗಳ ಐತಿಹಾಸಿಕ ಮಹತ್ವವನ್ನು ತಿಳಿಸಿಕೊಡುವ ಆಶಯದಿಂದ ಈ ಅಧ್ಯಯನ ಕೈಗೊಳ್ಳಲಾಗಿದೆ.

ಅಚ್ಚಲು (ಕ)

ಕನಕಪುರದಿಂದ ೧೦ ಕಿ.ಮೀ. ದೂರದಲ್ಲಿರುವ ಈ ಗ್ರಾಮ ಹೊಯ್ಸಳರ ೩ನೇ ಬಲ್ಲಾಳನ ಕಾಲದಿಂದಲೂ ಪರಿಚಿತವಾದ ಸ್ಥಳ. ಹೊಯ್ಸಳರ ಕಾಲದಲ್ಲಿ ಇದು ಚಿಕ್ಕ ಗಂಗವಾಡಿಯ ಪ್ರದೇಶಗಳಿಗೆ ಒಳಪಟ್ಟು ಅಚ್ಚಲು ನಾಡು, ಕಳಲೆನಾಡು, ಹೊಮ್ಮಳಿಗೆ ನಾಡು, ಚೊಕ್ಕನಾಡು, ಸಿಗಲನಾಡು, ಹನಿಯೂರನಾಡು ಎಂಬ ಸಣ್ಣ ವಿಭಾಗಗಳ ಕೆಳಗೆ ಸೇರಿದ್ದವೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಕಾನಕಾನಹಳ್ಳಿಯ ಪ್ರಭುಗಳು ಮತ್ತು ಸಿಗಲನಾಡು ಪ್ರಭುಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದ್ದು ಅದು ಸಣ್ಣ ಆಡಳಿತದ ವಿಭಾಗವಾಗಿತ್ತು.

ಅಬ್ಬೂರು (ಚ)

ಚನ್ನಪಟ್ಟಣದಿಂದ ೬.ಕಿ.ಮೀ. ದೂರದ ಪವಿತ್ರ ವೈಷ್ಣವಕೇಂದ್ರ ಅಬ್ಬೂರು. ಊರಿನಲ್ಲಿ ದೊರೆತ ಕ್ರಿ.ಶ.೧೦೬೦ರ ಚೋಳರ ಶಾಸನದ ಪ್ರಕಾರ ಇದು ದೊಡ್ಡ ಮಳೂರಿನ ಅಪ್ರಮೇಯ ದೇವಾಲಯಕ್ಕೆ ನೀಡಿದ ಸ್ಥಳವಾಗಿದ್ದು, 'ಅಪ್ಪಿಯೂರು' ಎಂದು ಕರೆಯಲಾಗಿದೆ.

ಅಬ್ಬೂರು ಬೆಟ್ಟವಿದ್ದು; ಈ ಬೆಟ್ಟದ ತಪ್ಪಲಿನಲ್ಲಿಯೇ ಕಣ್ವ ಋಷಿಗಳು ನೆಲೆಸಿದ್ದರೆಂಬ ನಂಬಿಕೆ ಇದೆ. ಬ್ರಾಹ್ಮಣ್ಯ ತೀರ್ಥರ ಮಠದಲ್ಲಿ; ಬ್ರಾಹ್ಮಣ್ಯ ತೀರ್ಥರ ಬೃಂದಾವನ ಇಲ್ಲಿದೆ. ಇವರ ಗುರುಗಳಾದ ಪುರುಷೋತ್ತಮ ತೀರ್ಥರು ಸಶರೀರವಾಗಿ ಗುಹಾಪ್ರವೇಶ ಮಾಡಿದರೆಂಬ ಹೇಳಿಕೆಯಿದೆ. ಹಾಗೂ ಇವರ ಬೃಂದಾವನವೂ ಇದೆ. ವಿಜಯನಗರದ ಪ್ರಖ್ಯಾತ ಅರಸ ಕೃಷ್ಣದೇವರಾಯನು ವ್ಯಾಸತೀರ್ಥರಿಗೆ ಕ್ರಿ.ಶ.೧೫೨೩ರಲ್ಲಿ ನೀಡಿದ ದತ್ತಿಶಾಸನವೂ ಸೇರಿದಂತೆ ಹಲವು ತಾಮ್ರಶಾಸನಗಳು ಈ ಮಠದಲ್ಲಿವೆ.

ಅರಳಾಳು (ಕ)

ಕನಕಪುರದಿಂದ ಮೂರು ಕಿ.ಮಿ. ದೂರದಲ್ಲಿ ಹರಿಯುವ ಅರ್ಕಾವತಿ ನದಿಯ ದಂಡೆಯ ಮೇಲಿನ ಇತಿಹಾಸ ಪ್ರಸಿದ್ಧ ಸ್ಥಳ ಅರಳಾಳು. ಇದನ್ನು ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ (೧೨೯೨-೧೩೪೩) ಕೆಲವು ಶಾಸನಗಳಲ್ಲಿ ಸಿಗಲನಾಡು ಪ್ರಭುಗಳ ವಿಚಾರ ಹೆಚ್ಚಾಗಿ ಕಾಣಸಿಕೊಳ್ಳುತ್ತದೆ. ಅರಳಾಳು ಎಂದು ಕರೆಯಲ್ಪಡುವ ಅಂದಿನ ಅರಳ ಹಳ್ಳಿ ಸಿಗಲನಾಡಿನ

ಒಂದು ಭಾಗವಾಗಿತ್ತು. ನಾಯಕನಹಳ್ಳಿಯಲ್ಲಿ ದೊರೆತ ಶಾಸನದಲ್ಲಿ[೨೫] (೧೨೯೫)ಸಿಗಲನಾಡಳ್ವ ಮಾರದೇವರು ಶ್ರೀಮತು ಸಿಗಲನಾಡ ಮಹಾಪ್ರಭು. ಅರಳಹಳ್ಳಿ ಮಾರಪ್ಪ, ವೀರಪ್ಪಗೌಡ, ಮಾಳಗೌಡ, ಸಿಂಗನಾಯಕ, ಅಚ್ಚಪ್ಪರಾಯ, ಚಂಚಗೌರ ಮೊದಲಾದ ನಾನಾ ದೇಶಮುಖ್ಯರು ಅರಳಾಳಹಳ್ಳಿ, ಚತುಃ ಸೀಮೆಯಾಳಾಗಿರುವ ಗದ್ದೆ ಬೆದ್ದಾಲುಗಳಲ್ಲಿ ಸರ್ವಮಾನ್ಯವಾಗಿ ಕೊಟ್ಟ ವಿಚಾರಗಳಿವೆ.

ಸಾತನೂರಿನಲ್ಲಿ ಲಭ್ಯವಾದ ಶಾಸನದಲ್ಲಿಯೂ ಕೂಡ[೨೧] (೧೩೧೯) ಸಿಗಲನಾಡಾಳುವ ಮಾರದೇವರು ಎಂಬ ಉಲ್ಲೇಖ ಹಾಗೂ ಶಾ.ಸ.೩೭ರಲ್ಲಿ ಅರಳಹಾಳ ಮಾರಪ್ಪನೊಂದಿಗೆ ಕಾಣಿಕಾಜಿನಹಳ್ಳಿಯ ಚಂಚೇಗೌಡನ ಹೆಸರೂ ಬಂದಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅರಳಹಳ್ಳಿ>ಅರಳಹಾಳ> ಅರಳಾಳು ಹೀಗೆ ಈ ಅರಳಹಳ್ಳಿ ಸ್ಥಳನಾಮವು ರೂಪಾಂತರ ಹೊಂದಿರುವುದನ್ನು ಗಮನಿಸಬಹುದು. ಕನಕಪುರದ ಪ್ರಾಚೀನ ರೂಪ ಕಾಣಿಕಾಜಿನಹಳ್ಳಿ ಎಂಬ ಸ್ಥಳನಾಮ ಉಲ್ಲೇಖಗೊಂಡಿರುವುದರಿಂದ ಇದು ಮಹತ್ವದ ಶಾಸನವಾಗಿದೆ. ತುಂಗಣೆಯಲ್ಲಿ ದೊರೆತ ಶಾಸನ (ನಂ. ೧೦೪)ದಲ್ಲಿಯೂ ಸಿಗಲನಾಡ ಮಾರದೇವರು ಕಾಣಿಸಿಕೊಂಡಿದ್ದಾರೆ. "ಹೊಸದುರ್ಗದ ತಮಿಳು ಶಾಸನದಲ್ಲಿ (೧೩೨೦) ಹೊಯ್ಸಳ ಅಧಿಕಾರತ್ವದ ಸಿಗಲನಾಡು ಆಳುವ ಮಾರದೇವರು ಕೆಲವು ಗ್ರಾಮಗಳನ್ನು ಚತುರ್ವೇದಿ ಮಂಗಲವೆಂಬ ಹೆಸರಿನಿಂದ ಅಗ್ರಹಾರಕ್ಕಾಗಿ ತಿರುವುದ್ಯೆಯಾಟ್ಟಂ ವೇದವೃತ್ತಿ ಇವನ್ನು ಹೊರತುಪಡಿಸಿ ಪ್ರಯಾಗ್ಯೆ ಶ್ರೀರಂಗ ನಾಥಭಟ್ಟ, ವೆಂಕಟಭಟ್ಟ ಮಂಡಲ ಪೊಡ್ಯೆತನ್ ಮತ್ತು ಇತರ ಬ್ರಾಹ್ಮಣರಿಗೆ ಅನುಭೋಗಿಸಲು ಆತ ನೀಡಿದ್ದು ಹೇಳಿದೆ"[೨೨] ಅಲ್ಲದೆ, ಅಗರದ ಬ್ರಹ್ಮೇಶ್ವರ ದೇವರಿಗೆ ಅಂದಿಗನವ್ರೋಲು ಗ್ರಾಮವನ್ನು ೧೨ ಮಂದಿ ಊರಗೌಡರ ಉಸ್ತುವಾರಿಗೆ ವಹಿಸಿ ದತ್ತಿ ನೀಡಿದ್ದನ್ನು ಹೇಳಿದೆ[೨೩](೧೩೨೪) ಈ ಸಿಗಲನಾಡನ್ನು ಆಳ್ವಿಕೆ ಮಾಡುತ್ತಿದ್ದ ಪಾಳೇಗಾರ ಮಾರದೇವರು ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಪ್ರಸಿದ್ಧವಾದ ಪಾಳೇಗಾರನಾಗಿದ್ದ. ಹಲವಾರು ಅಗ್ರಹಾರಗಳನ್ನು ನಿರ್ಮಿಸಿ, ಹಲವು ದೇವಾಲಯಗಳಿಗೆ ಜೀರ್ಣೋದ್ಧಾರ ಮಾಡಿ ಅವುಗಳ ಪೂಜಾಕಾರ್ಯಕ್ಕಾಗಿ ಶ್ರಮಿಸಿದ್ದು, ಧರ್ಮಿಷ್ಟನಾಗಿದ್ದ ವಿವರ ಶಾಸನಗಳಿಂದ ತಿಳಿದು ಬರುತ್ತದೆ. ಅಲ್ಲದೆ ಆತನಿಗೆ ಹಲವು ನಾಡ ಪ್ರಭುಗಳ ಗಣ್ಯರ ವಿಶ್ವಾಸವನ್ನುಗಳಿಸಿ ಉತ್ತಮ ಪ್ರಜಾನುರಾಗಿಯಾಗಿ ಕಾರ್ಯನಿರ್ವಹಿಸಿದ ಸಂಗತಿ ತಿಳಿದು ಬರುತ್ತದೆ.

ಕನಕಪುರದ ಒಂದು ಶಾಸನದಲ್ಲಿ[೨೯]. ಅರಳಹಾಳು ರಾಜ್ಯವೆಂದೇ ಉಲ್ಲೇಖಗೊಂಡಿದೆ. ಒಂದು ವೀರಗಲ್ಲಿನಲ್ಲಿ ಭೀಕರವಾದ ಯುದ್ಧದ ದೃಶ್ಯವಿದೆ. ವೀರ ಪರಂಪರೆಗೆ ಹೆಸರಾದ ಈ ಊರಿನಲ್ಲಿರುವ ವೀರ ಗಲ್ಲುಗಳು ಗ್ರಾಮದ ಹೊಲಗಳಲ್ಲಿ ಚದುರಿ ಹೋಗಿವೆ. ಒಂದು ವೀರಗಲ್ಲಿನಲ್ಲಿ ಈಟಿಯನ್ನು ಹಿಡಿದ ಕುದುರೆ ಸವಾರನೊಬ್ಬನ ಸುಂದರವಾದ ಉಬ್ಬುಶಿಲ್ಪವಿದೆ. ಈ ವೀರಗಲ್ಲು ದೊರೆತ ಹೊಲದಲ್ಲಿಯೇ ಸುಮಾರು ೪ ಅಡಿ ಎತ್ತರದ ದೊಡ್ಡ ಶಿವಲಿಂಗವಿದ್ದ ದೇವಾಲಯವೊಂದರ ಅವಶೇಷಗಳು ಕಂಡುಬಂದಿವೆ. ಇದನ್ನು ಗಮನಿಸಿದಾಗ ಬಹುಶಃ ಗಂಗರ ಕಾಲಕ್ಕೆ ಸೇರಿರಬಹುದು. ಇದರಿಂದಾಗಿ ಈ ಸ್ಥಳದ ಪ್ರಾಚೀನತೆ ಗಂಗರ ಕಾಲಕ್ಕೆ (೯ನೇ ಶತಮಾನ) ಹೋಗುವುದು.

ಇಲ್ಲಿ ಪ್ರಾಚೀನವಾದ ಇನ್ನೊಂದು ವಿಷ್ಣು ದೇವಾಲಯವಿದ್ದು, ವಿಶಾಲವಾಗಿದೆ. ಹೊರಗಿನ ಮಂಟಪದ ಉಬ್ಬು ಶಿಲ್ಪಗಳ ರಚನೆ, ಸುಂದರ ಶಿಲಾಸ್ತಂಭಗಳಿಂದ ಕೂಡಿ ವಿಜಯನಗರ ಶೈಲಿಯನ್ನು ಹೊಂದಿದೆ. ಸಿಗಲನಾಡು ಶಂಗ ಅಪ್ಪ ಎಂಬುವನ ಕಾಲದಲ್ಲಿ ಅರಳಹಾಳ ಮಾರಗೌಡನಮಗ ಚಿಕ್ಕ ಐವಣ್ಣನು ನಾರಾಯಣದೇವರಿಗೆ ಭೂದಾನ ಮಾಡಿದ ವಿವರಗಳಿವೆ(೧೫೩). ಅರಳಾಳು ಮತ್ತು ಕನಕಪುರಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಪಾಳು ಮಂಟಪ ಅರಳಾಳು ಐತಿಹಾಸಿಕತೆಯ ಮೂಕ ಸಾಕ್ಷಿಯಂತೆ ನಿಂತಿದೆ.

ಕನಕಪುರ (ಕ)

ಇದು ಗಂಗವಾಡಿ ೯೬,೦೦೦ದ ಒಂದು ಭಾಗವಾಗಿತ್ತು. ಹೊಯ್ಸಳರ ಕಾಲದ ೧೩೧೭ರ ನಾಯಕನಹಳ್ಳಿ ಶಾಸನ ಮತ್ತು ೧೩೧೯ರ ಅಚ್ಚಲು ಶಾಸನದಲ್ಲಿ ಕಾಣಿಕಾಜನಹಳ್ಳಿ ಎಂಬ ಉಲ್ಲೇಖವಿದೆ.

ಫ್ರಾನ್ಸಿಸ್ ಬುಕನಾನ್ ಕಾಣಿಕಾರಹಳ್ಳಿಯ ನಾಮ ವಿವೇಚನೆ ಮಾಡುತ್ತಾ 'ಕಾಣಿ' ಎಂಬ ಪದವು ತಮಿಳು ಮೂಲದಿಂದಾಗಿದ್ದು, 'ಗದ್ದೆ' ಎಂಬರ್ಥ ಹೊಂದಿದೆ. ಕಾಣಿಕಾರ ಎಂದರೆ ಭೂಮಾಲಿಕ ಎಂದಿದ್ದಾರೆ. ಕನಕಪುರ ತಾಲ್ಲೂಕಿನ ಶಾಸನಗಳನ್ನು ಕುರಿತು ವಿಶ್ಲೇಷಣೆ ಮಾಡಿರುವ ಕೊ.ವೆ.ರಾಮಕೃಷ್ಣಗೌಡರು ಕಾಣೆ ಒಂದು ಬಗೆಯ ಸುಂಕ, ಕಾಣೆಕಾರ ಎಂದರೆ, ಕುಲ ಪರಂಪರೆಯಿಂದ ಬಂದ ಊರೊಟ್ಟಿನ ಜಮೀನಿನ ಸಮಾನಹಕ್ಕು ಅಥವಾ ಪಾಲುಗಾರಿಕೆ, ಆದ್ದರಿಂದ ಇದನ್ನು ಸುಂಕಕಾರನಹಳ್ಳಿ ಅಥವಾ ನೆಲ ದೊಡೆಯನಹಳ್ಳಿಯೆಂದು ಅರ್ಥೈಯಿಸಬಹುದೆಂದಿದ್ದಾರೆ.

'ಕಾಣಿ' ಎಂಬುದಕ್ಕೆ ಕನ್ನಡ ಮತ್ತು ದ್ರಾವಿಡ ಜ್ಞಾತಿ ಭಾಷೆಗಳಲ್ಲಿ ಒಂದು ಚಿಕ್ಕ ನಾಣ್ಯ, ಒಂದು ಬಗೆಯ ಸುಂಕ, ಭೂಮಿಯ ಒಂದು ಅಳತೆ, ಆಸ್ತಿ, ಅನುವಂಶಿಕ ಹಕ್ಕುದಾರಿಕೆ, ಸಂಪತ್ತು, ಹಣ, ಕಾವಲುಗಾರ, ಬೇಸಾಯ ಮುಂತಾದ ಅರ್ಥಗಳಿವೆ. 'ಕಾಣಿ' ಎಂಬುದು ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ ಐದು ರತಿ ತೂಕದ ತಾಮ್ರದ ನಾಣ್ಯ. ಹೊಯ್ಸಳರ ಕಾಲದಲ್ಲಿ ಗದ್ಯಾಣ, ಪಣ, ಹಾಗ ಎಂಬ ಚಿನ್ನದ ಇಂತಹ ನಾಣ್ಯಗಳು ವಿಜಯನಗರ ಕಾಲಕ್ಕೂ ಮುಂದುವರೆದಿರಬಹುದು. ಹೊಯ್ಸಳ ಕಾಲದಲ್ಲಿ ಹದಿನೆಂಟು ವೃತ್ತಿಯನ್ನು ಅನುಸರಿಸುತ್ತಿದ್ದ ಶ್ರೇಣೀಕೃತ ಸಮಾಜದಲ್ಲಿದ್ದ ಕಂಚುಗಾರ, ಲೋಹಕಾರ, ಚರ್ಮಗಾರ, ಗಜಗಾರ, ಮಾಲೆಕಾರ, ರಥಕಾರ, ತೈಲಕಾರ, ಸ್ವರ್ಣಕಾರರಂತೆ ಕಾಣಿಕಾರ ವೃತ್ತಿಶ್ರೇಣಿಯನ್ನು ತಳ್ಳಿಹಾಕುವಂತಿಲ್ಲ. ಇಂತಹ ಶ್ರೇಣಿಗಳ ಹೆಸರಿನಲ್ಲಿ ಸ್ಥಳನಾಮಗಳು ಸಿಗುತ್ತಿರುವುದಕ್ಕೆ ಸಾಕ್ಷಿಯುಂಟು. ಹೀಗೆ ಕಾಣಿ ಎಂಬ ತಾಮ್ರದ ನಾಣ್ಯ ತಯಾರಿಸುವ ವೃತ್ತಿಯವನ ಊರೆ ಕಾಣಿಕಾರಹಳ್ಳಿಯಾಗಿರಲು ಸಾಧ್ಯ.

ಅಂದಿನ ಕಾಣಿಕಾರರಾದ ಓಜ, ವಾಜರನ್ನು ವಿಶ್ವಕರ್ಮ ಜನಾಂಗದವರಲ್ಲಿ ಗುರುತಿಸಬಹುದು. ಇದಕ್ಕೆ ಪೂರಕವೆಂಬಂತೆ ಕನಕಪುರದ ಮಧ್ಯ ಭಾಗದಲ್ಲಿರುವ ಪ್ರಾಚೀನ ಪುಷ್ಕರಣಿಯ ಮುಂಭಾಗದಲ್ಲಿ ವಿಶ್ವಕರ್ಮರ ಅಧಿದೇವತೆ ಕಾಳಿಕಾಂಬ ಗುಡಿ ಈಗ ನಾಶವಾಗಿದ್ದರೂ ಹೊಸಗುಡಿಯೊಂದು ಅದೇ ಜಾಗದಲ್ಲಿ ಕಟ್ಟಲ್ಪಟ್ಟಿದೆ. ವಿಶ್ವಕರ್ಮ ಜನಾಂಗದವರಿಗೆ ಸೇರಿದ ಭೂ ಹಿಡುವಳಿಗಳು ಈಗ ಸಾಗುವಳಿಕಾರರ

ಹಿಡಿತದಲ್ಲಿದ್ದರೂ ಅದರ ಹಿಂದಿನ ಮಾಲೀಕರು ವಿಶ್ವಕರ್ಮ ಜನಾಂಗದವರೇ ಆಗಿದ್ದರು. ತಾಲೂಕಿನ ಜನಪ್ರಿಯ ಧಾರ್ಮಿಕ ಕ್ಷೇತ್ರವಾಗಿರುವ ಕಬ್ಬಾಳಮ್ಮನನ್ನು 'ಮಹಾಕಾಳಿ' ಎಂದು ಕರೆದಿರುವುದು ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ ಕಾಣಿಕಾರನಹಳ್ಳಿ ಎಂಬುದು ಓಜ, ವಾಜರ ಸಮುದಾಯದೊಂದಿಗೆ ಬೆಸೆದುಕೊಂಡಿರುವುದು ಕಂಡುಬರುತ್ತದೆ.

ಹೊಯ್ಸಳರ ಅನುವಂಶೀಯ ಸಾಮಂತರಾದ ಸಿಗಲನಾಡಿನ ಪ್ರಭುಗಳು ಕನಕಪುರದಿಂದ ಚನ್ನಪಟ್ಟಣದ ಪ್ರದೇಶಗಳನ್ನು ಆಳ್ವಿಕೆ ಮಾಡಿದ್ದಾರೆ. ವಿಜಯನಗರ ಕಾಲಕ್ಕೆ ಚನ್ನಪಟ್ಟಣದ ಪಾಳೆಯಗಾರನಾದ ಜಗದೇವರಾಯ ಕಾಣಿಕಾರನಹಳ್ಳಿ ಪ್ರಾಂತ್ಯದ ಮೇಲೆ ನಿಯಂತ್ರಣ ಹೊಂದಿದ್ದು, ಕನಕಪುರದ ಅರ್ಕಾವತಿ ನದಿ ಸಮೀಪದ ಕೋಟೆ ಇವನಿಂದ ನಿರ್ಮಾಣವಾಯಿತು.

ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ಕಾನಕಾನಹಳ್ಳಿಯು ಪ್ರಮುಖ ಸೈನಿಕ ನೆಲೆಯಾಗಿತ್ತು. ೧೭೯೩-೧೭೯೯ರಲ್ಲಿ ಬ್ರಿಟೀಷ್ ಸೇನೆ ಕಾನಕಾನಹಳ್ಳಿ ಮೂಲಕ ಶ್ರೀರಂಗಪಟ್ಟಣಕ್ಕೆ ತೆರಳಿತ್ತು. ಬ್ರಿಟಿಷ್ ಸೈನ್ಯಕ್ಕೆ ತೊಂದರೆ ಕೊಡುವ ದೃಷ್ಟಿಯಿಂದ ಟಿಪ್ಪು ಸುಲ್ತಾನ್ ಎರಡು ಬಾರಿ ಕಾನಕಾನಹಳ್ಳಿಗೆ ಬೆಂಕಿ ಇಟ್ಟನೆಂದು ಇತಿಹಾಸದಿಂದ ತಿಳಿದು ಬಂದಿದೆ.

ಶ್ರೀದೇಗುಲ ಮಠದಲ್ಲಿನ ಶಾಸನದಂತೆ, ಮೈಸೂರು ಅರಸು ದೇವರಾಜ ಒಡೆಯರ ದಳವಾಯಿ ವಿರುಪಸಂದ್ರದ ಕೊಮಾರಯ್ಯನ ತಾಯಿ ತಿಮ್ಮಮ್ಮ ಕಾನಕಾನಹಳ್ಳಿಯ ನಿರ್ವಾಣದೇವರ ಮಠಕ್ಕೆ ದಾನ ಮಾಡಿದ ವಿವರಗಳಿವೆ. ೧೬೭೭ರಲ್ಲಿ ಶ್ರೀಮಠ ಅರ್ಕಾವತಿ ಪ್ರವಾಹದಲ್ಲಿ ಕೊಚ್ಚಿ ಹೋದರಿಂದ ೧೬೭೮ರಲ್ಲಿ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ಶ್ರೀದೇಗುಲ ಮಠ ಪುನರುಜ್ಜೀವನಗೊಂಡಿತು.

ಭಾರತ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಮಹಾತ್ಮಗಾಂಧೀಜಿಯವರು ಆಗಸ್ಟ್ ೭, ೧೯೨೭ರಲ್ಲಿ ಹಾಗೂ ೬ನೇ ಜನವರಿ ೧೯೩೪ರಲ್ಲಿ ಕನಕಪುರಕ್ಕೆ ಭೇಟಿನೀಡಿ, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಕರೆ ನೀಡಿರುವುದು ಅವಿಸ್ಮರಣೀಯ ಘಟನೆಯಾಗಿದೆ.

ಕಬ್ಬಾಳು (ಕ)

ಕಬ್ಬಾಳು ದುರ್ಗದ ಇತಿಹಾಸ ಹೊಯ್ಸಳರ ಕಾಲದಿಂದಲೂ ಪ್ರಸಿದ್ಧವಾಗಿದೆ. ಶಾಸನವೊಂದರಲ್ಲಿ ಕಬ್ಬಹಾಳ ಎಂಬ ಹೆಸರಿನಿಂದ ಉಲ್ಲೇಖಗೊಂಡಿದೆ. ಸಮುದ್ರಮಟ್ಟದಿಂದ ೧೦೭೯ ಮೀಟರ್ ಎತ್ತರವಿರುವ ಶಂಕಾಕೃತಿಯಿಂದ ಕೂಡಿದ ಗಿರಿದುರ್ಗ. ದುರ್ಗದ ಮೇಲೆ ಶಿಥಿಲವಾದ ಕೋಟೆಯಿದೆ. ಈ ದುರ್ಗವನ್ನು ಒಂದು ಕಡೆಯಿಂದ ಮಾತ್ರ ಹತ್ತಲು ಸಾಧ್ಯ. ಬಂಡೆಯಲ್ಲಿಯೇ ಮೆಟ್ಟಿಲುಗಳನ್ನು ಅತಿ ಚಿಕ್ಕದಾಗಿ ಕೊರೆದು ನಿರ್ಮಿಸಲಾಗಿರುವುದರಿಂದ ಹತ್ತಲು ತುಂಬಕಷ್ಟ. ಈ ಕೋಟೆಯು ಶತ್ರುಗಳ ಆಕ್ರಮಣಕ್ಕೆ ತುತ್ತಾಗುವ ಸಾಧ್ಯತೆ ಕಡಿಮೆ. ಏಕೆಂದರೆ ಇದೊಂದು ಕಡಿದಾದ ಮತ್ತು ಕಿರು ಮೆಟ್ಟಿಲು ಇರುವುದರಿಂದ ಒಬ್ಬೊಬ್ಬರೆ ನಿಧಾನವಾಗಿ ಎಚ್ಚರಿಕೆಯಿಂದ ಸಾಗಬೇಕಾದದ್ದರಿಂದ ಶತ್ರುಗಳ ಪಾಲಿಗೆ ದುರ್ಭೇಧ್ಯವಾದ

ಕೋಟೆಯಾಗಿತ್ತು. ರಾಜದ್ರೋಹಿಗಳನ್ನು, ತಮಗೆ ಆಗದವರನ್ನು ಸೆರೆ ಹಿಡಿದು ಕೊಲ್ಲುವುದಕ್ಕಾಗಿ ಸುಮಾರು ೧೮ನೇ ಶತಮಾನದವರೆಗೂ ಈ ದುರ್ಗವನ್ನು ಬಳಸುತ್ತಿದುದ್ದು ಕಂಡುಬಂದಿದೆ.

ಕಬ್ಬಾಳಮ್ಮನ ಗುಡಿಯ ಹತ್ತಿರದ ಶಾಸನದಲ್ಲಿ[೮೧](೧೨೯) ಕಜಂತರ ಕುಲದ ಕಬ್ಬಹಾಳು ಸೋಮಗೌಡನ ಮಗ ಶೌರಣ್ಣನೂ ಸಾದನೆಂಬುವನೂ ಹನಿಯೂರ ಸಹನೆಯೂರ ಸಂತೆಗೆ ಹೋಗಿ ಬರುತ್ತಿದ್ದಲ್ಲಿ ಕಳ್ಳರು ಮೇಲೆಬಿದ್ದು ಅವರೊಂದಿಗೆ ಶೌರಣ್ಣನು ತಾಗಿ ಸ್ವರ್ಗಸ್ಥರಾದನೆಂದಿದೆ. ಸ್ಥಳನಾಮವನ್ನು 'ಕಬ್ಬಹಾಳು' ಎಂದಿರುವುದನ್ನು ಗಮನಿಸಬಹುದು. ಈ ಶಾಸನವು ಮುಮ್ಮಡಿ ವೀರ ಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸೇರಿದುದಾಗಿದೆ. ಇದು ಹಿಂದೆ ವ್ಯಾಪಾರ ಕೇಂದ್ರವಾಗಿದ್ದಂತೆ ತೋರುವುದು.

ಇಲ್ಲಿನ ಗ್ರಾಮದೇವತೆಯಾದ ಕಬ್ಬಾಳಮ್ಮನ ದೇವಾಲಯವಿದೆ. ಇದು ವಿಜಯನಗರ ಕಾಲದ ವಾಸ್ತು ಶೈಲಿಯನ್ನು ಒಳಗೊಂಡ ಸಾಮಾನ್ಯ ರಚನೆಯ ದೇವಾಲಯ. ದೇವಿಯ ಗುಡಿ ಶಿಲ್ಪಗಳಿಲ್ಲದ ಚೌಕಾಕಾರದ ಕಂಬಗಳಿಂದ ಕೂಡಿದೆ. ಗರ್ಭಗೃಹದ ಮೇಲಿನ ಶಿಖರ ಇಟ್ಟಿಗೆ, ಗಾರೆಗಚ್ಚುಗಳಿಂದ ಆದ ಈಚಿನ ಕಾಲದ ರಚನೆಯಲ್ಲಿದೆ. ವಿಜಯನಗರ ಸಮಕಾಲೀನವಾದ ಶಾಸನವೊಂದರಲ್ಲಿ ಕಬ್ಬಾಳಮ್ಮನನ್ನು 'ಮಹಾಕಾಳಿಕಾದೇವಿ' ಎಂದು ಉಲ್ಲೇಖಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಇದು ಕರಿ ನೀರಿನ ಶಿಕ್ಷೆ ವಿಧಿಸುವ ಕೇಂದ್ರವಾಗಿತ್ತು. ದೇವಚಂದ್ರನ 'ರಾಜಾವಳಿ ಕಥೆ', ವಂಶ ರತ್ನಾಕರ ಕೃತಿಯಲ್ಲಿಯೂ ಸಿ.ಹಯವದನ ರಾಯರ 'ಮೈಸೂರು ಚರಿತ್ರೆ'ಯಲ್ಲಿಯೂ ಹಾಗೂ ಕರ್ನಲ್ ವಿಲ್ಕ್ಸ್‌ನ ಬರವಣಿಗೆಯಲ್ಲಿ ಕಬ್ಬಾಳು ದುರ್ಗದ ಕರಿನೀರಿನ ಶಿಕ್ಷೆಯ ಇತಿಹಾಸ ದಾಖಲಾಗಿರುವುದು ಕಂಡುಬರುತ್ತದೆ.

೧ನೇ ಕೃಷ್ಣ ರಾಜ ಒಡೆಯನ (೧೭೧೪-೩೨) ಜ್ಯೇಷ್ಠಪತ್ನಿ ಕಳಲೆ ಮನೆತನದ ದೇವಾಜಮ್ಮಣ್ಣಿಯವರಿಗೆ ಸಂತಾನಪ್ರಾಪ್ತಿಯಿಲ್ಲದ್ದರಿಂದ ಅಂಕನಹಳ್ಳಿಯ ದೇವರಾಜು ಅರಸು ಅವರ ಪುತ್ರನನ್ನು ದತ್ತು ಪುತ್ರಕನಾಗಿ ಮಾಡಿಕೊಂಡರು ಇವನೇ ಚಾಮರಾಜ ಒಡೆಯರ (೧೭೩೨-೩೪). ಇವರ ಆಳ್ವಿಕೆಯ ಕಾಲಾವಧಿಯಲ್ಲಿ ದಳವಾಯಿ ದೇವರಾಜಯ್ಯ, ಇವನ ತಮ್ಮ ಕರಾಚೂರಿ ನಂಜರಾಜಯ್ಯ, ಸ್ವಲ್ಪಕಾಲ ದಳವಾಯಿತನ ಮಾಡುತ್ತಿದ್ದರು. ಆದರೆ ತಮ್ಮ ಸ್ವೇಚ್ಛೆಯ ವ್ಯವಹಾರಕ್ಕೆ ಹೆಚ್ಚು ಅವಕಾಶವಿಲ್ಲದ್ದು ಹಾಗೂ ದೊರೆಯು ತಮ್ಮನ್ನು ಅಧಿಕಾರದಿಂದ ಕೆಳಗಿಳಿಸಿ ತನಗೆ ಆಪ್ತರಾದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರಿಂದ ದೇವರಾಜಮ್ಮಣ್ಣಿಯವರಲ್ಲಿ ಚಾಡಿ ಹೇಳುತ್ತ ಪಿತೂರಿ ಮಾಡಲು ಆರಂಭಿಸಿದರು.

ಚಾಮರಾಜ ಒಡೆಯರ ಸೈನ್ಯದಲ್ಲಿ ಮುಖ್ಯಸ್ಥನಾಗಿದ್ದ ಮದ್ದಗಿರಿ ಮಲ್ಲರಾಜಯ್ಯನ ಹತ್ತಿರ ಚಾಕರಿಯಲ್ಲಿದ್ದ ಗುಲಾಂ ಹೈದರ್ ಎಂಬ ಜಮಾದಾರರನ್ನು ಲಂಚಕೊಟ್ಟು ತನ್ನ ಕಡೆ ಮಾಡಿಕೊಂಡು, ದೊರೆಯ ಸೈನ್ಯವು ದಳವಾಯಿ ದೇವಯ್ಯನ ಮೇಲ್ವಿಚಾರಣೆಯಲ್ಲಿ ಕೋಟೆಯ ಹೊರಗೆ ಕವಾಯತಿಗೆಂದು ಹೋದ ಸಂದರ್ಭದಲ್ಲಿ ಪದಚ್ಯುತಗೊಂಡ ದಳವಾಯಿಗಳಲ್ಲಿ ಒಬ್ಬನಾದ ದೇವರಾಜಯ್ಯನು ತನ್ನ ಜನರನ್ನು ಅರಮನೆಗೆ ನುಗ್ಗಿಸಿದನು. 'ರಾಮಬಾಣ' ಎಂಬ ಆನೆಯ ಸಹಾಯದಿಂದ ಅರಮನೆಯ ಮುಖ್ಯ ದ್ವಾರವನ್ನು ಮುರಿಸಿ, ತನ್ನ ಜನರನ್ನು ಸುತ್ತಲು ಪಹರೆ ನಿಲ್ಲಿಸಿ, ತನ್ನ ಕಡೆಯ

ನಾಗೋಜಿರಾಯನೆಂಬ ಜಮಾದಾರನನ್ನು ಸಂಧಾನಕ್ಕಾಗಿ ದೊರೆಯ ಬಳಿ ಕಳುಹಿಸಿಕೊಟ್ಟನು. ದೊರೆ ಮತ್ತು ದೇವರಾಜಯ್ಯನ ನಡುವೆ ಸಂಧಾನ ವಿಫಲಗೊಂಡಾಗ ಒತ್ತಾಯ ಪೂರ್ವಕವಾಗಿ ದೊರೆಯ ರಾಜಲಾಂಛನ, ಪಟ್ಟದ ಕತ್ತಿಯನ್ನು ಸಿಂಹಾಸನದ ಮೇಲಿರಿಸುವಂತೆ ಮಾಡಿದ ಮೇಲೆ, ರಾಜನ ಸಕುಟುಂಬ ಸಹಿತವಾಗಿ ಸೆರೆ ಹಿಡಿದು ಪಹರೆಯಲ್ಲಿ ಬಲಾತ್ಕಾರವಾಗಿ ಕಬ್ಬಾಳು ದುರ್ಗಕ್ಕೆ ಸಾಗಿಸಿದನು. ರಾಜ ಚಾಮರಾಜ ಒಡೆಯರನ ಕಡೆಯ ದಳವಾಯಿ ದೇವಯ್ಯ, ಸರ್ವಾಧಿಕಾರಿ ವೀರಶೆಟ್ಟಿ, ಪ್ರಧಾನ ಗೋಪಿನಾಥಯ್ಯ ಮೊದಲುಗೊಂಡು ರಾಜರ ಆಪ್ತರಾಗಿದ್ದ ಏಳು ಮಂದಿಯನ್ನು ಸಹ ಸರ್ವಾಧಿಕಾರಿಯಾದ ದಳವಾಯಿ ದೇವರಾಜಯ್ಯನು ಸೆರೆಯಲ್ಲಿಡಿಸಿದನು.

ಚಾಮರಾಜ ಒಡೆಯರು ಮತ್ತು ಅವರ ಕುಟುಂಬ ವರ್ಗದವರು ಕಬ್ಬಾಳು ದುರ್ಗದ ಅಹಿತಕರ ವಾತಾವರಣ, ಕರಿನೀರಿನಶಿಕ್ಷೆ ಮತ್ತು ಸನ್ನಿವೇಶಗಳ ಫಲವಾಗಿ ಬಹಳಬೇಗ ಅವರೆಲ್ಲ ತೀರಿಕೊಂಡರು. ಈ ಶಿಕ್ಷೆ ಕುರಿತು ಕರ್ನಲ್‌ವಿಲ್ಕ್ಸ್ ಹೀಗೆಂದಿದ್ದಾರೆ.

"An imprisonment at all times equivalent to sentance of death, where the dreadful insalubrity of the climate was marcifully aided by unhole some food to shorten the sufferings of the victims".

ಈ ಶಿಕ್ಷೆಯ ಕುರಿತ ಕಥನ ಇನ್ನು ವಿಸ್ತೃತವಾಗಿ 'ವಂಶರತ್ನಾಕರ'ದಲ್ಲಿಯೂ (ಪು.೧೫೫-೧೬೨) ಸಿ.ಹಯವದನರಾಯರ ಮೈಸೂರು ಚರಿತ್ರೆಯಲ್ಲಿಯೂ ನಿರೂಪಿತಗೊಂಡಿದೆ. ಈ ಸಂಗತಿಯನ್ನು ದೇವಚಂದ್ರನು ೧ನೆಯ ಕೃಷ್ಣ ರಾಜನು ೧೮ವರ್ಷ ರಾಜ್ಯದಲ್ಲಿದ್ದು ಶಕ ೧೬೫೪ರಲ್ಲಿ ಕಾಲವಾದ ಮೇಲೆ ಆತ ಅಪುತ್ರಕನಾದ್ದರಿಂದ "ಆ ವಂಶದಲ್ಲಿಯ ಹದಿನೆಂಟು ವರ್ಷದ ಚಾಮರಾಜನೆಂಬಂಗೆ ಪಟ್ಟಮಂ ಕಟ್ಟೆ ಮೂರುವರ್ಷ ನಡೆವಾಗ ದಳವಾಯಿಗಳೊಳ್ ವಿರುದ್ಧಮಾಗೆ ಆತನಂ ಕಬ್ಬಾಳು ದುರ್ಗಕ್ಕೆ ಹಾಕಲಲ್ಲಿಯೆ ತೀರಿ ಹೋದ ಎಂದು ತನ್ನ "ರಾಜಾವಳಿ ಕಥೆ"ಯಲ್ಲಿ ನಿರೂಪಿಸಿದ್ದಾನೆ.

ಕರ್ನಲ್ ವಿಲ್ಕ್ಸನು; ಹೈದರ್ ಮತ್ತು ಟಿಪ್ಪುಗಳು ಈ ಕರಿ ನೀರಿನ ಶಿಕ್ಷೆಗೆ ಕಬ್ಬಾಳು ದುರ್ಗವನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ತಮ್ಮ ಗ್ರಂಥದಲ್ಲಿ ಅಲ್ಲಲ್ಲಿ ತಿಳಿಸಿದ್ದಾನೆ. ಕ್ಯಾಪ್ಟನ್ ರೂಮ್ಲೆ, ಲೆಫ್ಟಿನೆಂಟ್ ಫ್ರೇಸರ್, ಲೆಫ್ಟಿನೆಂಟ್ ಸ್ಯಾಮ್ಸನ್, ಕಮಾಂಡರ್ ಬ್ರೆಡ್‌ವೈಟ್, ಬ್ರಿಗೇಡಿಯರ್ ಜನರಲ್ ಮ್ಯಾಥೂಸ್ ಮತ್ತು ಬೇರೆ ಬೇರೆ ಕಾಲಗಳಲ್ಲಿ ಸೆರೆ ಹಿಡಿದ ಇನ್ನೂ ಹಲವರನ್ನೆಲ್ಲ ಕಬ್ಬಾಳು ದುರ್ಗಕ್ಕೆ ಕಳಿಸಿ ವಿಷಪ್ರಾಶನಮಾಡಿ ಕೊಲ್ಲುವುದೋ, ಕಾಡಿಗೆ ಕಳುಹಿಸಿ ಚಿತ್ರವಧೆ ಮಾಡಿಸುವುದೋ, ಮಾಡುವಲ್ಲಿ ಟಿಪ್ಪುವಿನ ಪಾತ್ರವನ್ನು ಹೃದಯ ವಿದ್ರಾವಕವಾಗಿ ವರ್ಣಿಸಿದ್ದಾರೆ.

ಬೆಟ್ಟದ ಚಾಮರಾಜ ಒಡೆಯರ ಕಾಲದಲ್ಲಿ (೧೭೭೦-೧೭೭೬) ಹೈದರ್ ಅಲಿಖಾನ್ ಸರ್ವಾಧಿಕಾರಿಯಾಗಿದ್ದನು. ಆತನು ಬಳ್ಳಾರಿ, ಗುತ್ತಿ ಮೊದಲಾದ ಗಡಿಗಳ ಪ್ರದೇಶಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡ ವೇಳೆಯಲ್ಲಿ ಗುತ್ತಿಯ ಮುರಾರಿರಾವ್ ಘೋರ್ಪಡೆ ಎಂಬ ಸರದಾರನು ಹೈದರನ ಕೈಸೆರೆಯಾದನು. ಅವನ ಸಮಸ್ತ ಸಂಪತ್ತನ್ನೆಲ್ಲ ದೋಚಿಕೊಂಡ ಹೈದರ್ ಅಲಿ; ಸರದಾರನನ್ನು

ಶ್ರೀರಂಗಪಟ್ಟಣಕ್ಕೆ ಸೆರೆಯಲ್ಲಿಯೇ ರವಾನಿಸಿ, ತನ್ನ ದಾಳಿ ಮುಗಿಸಿ ಶ್ರೀರಂಗಪಟ್ಟಣಕ್ಕೆ ಹಿಂದುರುಗಿದ ಮೇಲೆ ಮುರಾರಿರಾಯನನ್ನು, ಅವನ ಸಂಸಾರದವರನ್ನು ಇದೇ ಕಬ್ಬಾಳು ದುರ್ಗದಲ್ಲಿ ಸೆರೆಯಲ್ಲಿಟ್ಟನು. ಅಲ್ಲಿ ಹೈದರನ ಅಪ್ಪಣೆಯಂತೆ ಮೇ ೧೭೭೯ರಲ್ಲಿ ಅವನನ್ನು ವಧಿಸಲಾಯಿತು. ಅಲ್ಲಿಂದ ಮುಂದೆ ೧೫ವರ್ಷಕಾಲ ನಿಸ್ಸಹಾಯಕರಾಗಿ ಸೆರೆಯಲ್ಲಿದ್ದ ಸರದಾರನ ಸಂಸಾರದವರನ್ನು ಹೈದರ್‌ನ ಮಗ ಟಿಪ್ಪು ಸುಲ್ತಾನನು ೧೭೬೧ರಲ್ಲಿ ಸಾಮೂಹಿಕವಾಗಿ ಕೊಲ್ಲಿಸಿದನು.

ಈ ವಿದ್ಯಮಾನದ ಕಥಾನಕವು ವಂಶಾವಳಿ ಭಾಗ ೧ (ಪು. ೨೧೩-೨೧೪) ಸಿ.ಹಯವದನರಾಯರ ಮೈಸೂರು ಚರಿತ್ರೆ (Vol-II-216-218)ಯಲ್ಲಿ ವಿಸ್ತಾರವಾಗಿ ಬಂದಿದೆ. ಎಚ್.ಅಪ್ಪಣ್ಣ ಶೆಟ್ಟಿಯ ಹೈದರ್ ನಾಮಾ ಅಥವಾ ಹೈದರ್ ಅಲಿಯ ಚರಿತ್ರೆ (ಮೈಸೂರು-೧೯೭೭, ಪು.೪೯-೫೨)ಯಲ್ಲಿ "ಸರದಾರನು ಪಟ್ಟಣದಿಂದ ಕೆಲವು ದಿನಗಳ ಅನಂತರ ಕಬ್ಬಾಳು ದುರ್ಗಕ್ಕೆ ಸಾಗಿಸಲ್ಪಟ್ಟನು. ಅಲ್ಲಿನ ಅನಾರೋಗ್ಯವಾದ ಗಾಳಿಯು ಅವನನ್ನು ಮರಣ ಹೊಂದಿಸಿತು" ಎಂಬುದಾಗಿ ಸ್ವಲ್ಪ ಭಿನ್ನವಾಗಿ ಅವನ ಸಾವನ್ನು ವಿವರಿಸಿದ್ದರೆ, ವಿಲ್ಕ್ಸನು "ಬೇಗ ತೀರಿಕೊಂಡನು" ಎಂದು ಹೇಳಿದ್ದಾರೆ. ಒಟ್ಟಾರೆ ಕಬ್ಬಾಳು ದುರ್ಗದ ಅಸಹನೀಯವಾದ ವಾತಾವರಣ, ಅತೃಪ್ತಿಕರವಾದ ಆಹಾರವೂ ಸೆರೆಯಾಳಿನ ಬಂಧನದ, ಸೋಲಿನ ಸಂಕಟದ ಅವಧಿಯನ್ನು ಮೊಟಕು ಮಾಡಿ ಬೇಗ ಅವರನ್ನು ಪರಲೋಕಕ್ಕೆ ಅಟ್ಟುತ್ತಿದ್ದುದ್ದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಇಂಥ ಸಾವಿನ ಕಹಿ ಸತ್ಯವನ್ನು ತನ್ನ ಒಡಲಿನಲ್ಲಿ ಬಚ್ಚಿಟ್ಟುಕೊಂಡಿರುವ ಕಬ್ಬಾಳು ದುರ್ಗದ ಕರಿ ನೀರಿನ ಶಿಕ್ಷೆಯ ರಕ್ತಸಿಕ್ತವಾದ ಇತಿಹಾಸ ಇಷ್ಟಕ್ಕೆ ನಿಲ್ಲುವುದಿಲ್ಲ.

ಖಾಸಾ ಚಾಮರಾಜ ಒಡೆಯರ್ ಕಾಲದಲ್ಲಿ (೧೭೭೬-೧೭೯೬) ಟಿಪ್ಪುವಿನ ಸರ್ವಾಧಿಕಾರತ್ವದ ಪ್ರಾಬಲ್ಯದ ದಿನಮಾನಗಳು. ಮಂಗಳೂರಿನ ವಿಜಯದಿಂದ ಹಿಂದುರುಗಿದ ಮೇಲೆ ಪೂಣೆಯ ಮರಾಠಿ ಪೇಶ್ವೆಗಳ ಸೀಮೆಯನ್ನು ಆಕ್ರಮಿಸುವ ಪ್ರಯತ್ನವನ್ನು ಮುಂದುವರೆಸಿದನು. ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಣ ಮರಾಠಿ ಸೀಮೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬುದು ಅವನ ಅಪೇಕ್ಷೆಯಾಗಿತ್ತು. ಹೀಗಾಗಿ ದೇಸಾಯಿ ಕಾಳಾಪಂಡಿತನ ವಶದಲ್ಲಿದ್ದ ನರಗುಂದದ ಕೋಟೆಯ ಮೇಲೆ ಅವನ ಕಣ್ಣು ಹೋಯಿತು. ಆ ಕೋಟೆಯನ್ನು; ಅಂಥ ಇನ್ನಿತರ ಪ್ರದೇಶಗಳನ್ನು ಗೆದ್ದರೆ ಮರಾಠರನ್ನು ಎದುರಿಸುವುದು ಸುಲಭವೆಂದು ಬಗೆದು, ಗಡಿ ತಂಟೆಯ ನೆಪ ತೆಗೆದು ನರಗುಂದದ ಮೇಲೆ ದಾಳಿ ಮಾಡಿದನು. ದೇಸಾಯಿ ಕಾಳಾಪಂಡಿತನು ಟಿಪ್ಪುವಿನ ದಾಳಿಯನ್ನು ದಿಟ್ಟತನದಿಂದ ಎದುರಿಸಿದನಾದರೂ ಕೊನೆಯಲ್ಲಿ ಶರಣಾಗತನಾಗಬೇಕಾದ ಸಂದರ್ಭ ಒದಗಿಬಂತು. ಅವನಿಗೆ ರಕ್ಷಣೆ ಕೊಡುವ ವಂಚನೆಯ ಮಾತುಗಳನ್ನಾಡಿ ಅವನನ್ನು ಮತ್ತು ಅವನ ರಾಜ ಪರಿವಾರದವರನ್ನು ಸೆರೆಹಿಡಿದನು, ಪಹರೆಯಲ್ಲಿ ಕೋಳಹಾಕಿ ಬಂಧಿಗಳನ್ನಾಗಿ ಮಾಡಿ ಮೊದಲು ಶ್ರೀರಂಗಪಟ್ಟಣಕ್ಕೆ ಸಾಗಿಸಿ ಅಲ್ಲಿಂದ ಕಬ್ಬಾಳು ದುರ್ಗಕ್ಕೆ ಸಾಗಿಸಲಾಯಿತು. ಅಲ್ಲಿ ಕಾಳಾಪಂಡಿತನು ಸು.೧೭೮೫ರ ವೇಳೆಗೆ ಅಲ್ಲಿಯೇ ನವೆದು ಸತ್ತನು. ಮುಂದೆ ನರಗುಂದ ಸಂಸ್ಥಾನವು ಟಿಪ್ಪುವಿನ ಆಪ್ತನಾದ. ಒಬ್ಬ ಮಹಮ್ಮದೀಯ ಅಧಿಕಾರಿಯ ಕೈಸೇರಿತು. (HOM.Vol-3, p.686-912 Vol-II p-284-87).

ಖಾಸ ಚಾಮರಾಜ ಒಡೆಯನ ಕಾಲದಲ್ಲಿಯೇ ಪುಣೆಯ ಪೇಶ್ವೆಗಳ ಮೇಲೆ ಮುನ್ನಡೆದ ಟಿಪ್ಪು ಹರಪನಹಳ್ಳಿ ಮತ್ತು ರಾಯದುರ್ಗಗಳ ನಡುವೆ ಬಂದು ಬೀಡು ಬಿಟ್ಟಿದ್ದಾಗ ಅವನೊಂದಿಗೆ ಸಂದರ್ಶನಕ್ಕಾಗಿ ಆ ಸ್ಥಳದ ಇಬ್ಬರು ಸರದಾರರು ಅಪೇಕ್ಷಿಸಿದರು. ಆದರೆ ಟಿಪ್ಪು ವಂಚನೆಯಿಂದ ಅವರಿಬ್ಬರನ್ನು ಸೆರೆಹಿಡಿದು ಮೊದಲು ಬೆಂಗಳೂರಿಗೆ ಸಾಗಿಸಿ, ಬಳಿಕ ಕಬ್ಬಾಳು ದುರ್ಗಕ್ಕೆ ರವಾನಿಸಿ ಬಂಧಿಗಳನ್ನಾಗಿ ಮಾಡಿದನು. ಅಲ್ಲಿ ಅವರು ಅಲ್ಲಿಯೇ ನವೆದು ಸಾಯುವಂತೆ ಮಾಡಿದ ಘಟನೆ ೧೭೮೭ರಲ್ಲಿ ನಡೆಯಿತೆಂಬ ವಿವರಗಳು ದಾಖಲಾಗಿವೆ. (HOM Vol-III p-716-17. Wilks Vol-II 309-10).[೮೨]

ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ತನ್ನ ವಿರೋಧಿಗಳನ್ನು ಅಂತ್ಯಗೊಳಿಸುವುದಕ್ಕಾಗಿ ಕಬ್ಬಾಳು ದುರ್ಗವನ್ನು ಆಶ್ರಯಿಸಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಕಬ್ಬಾಳು ದುರ್ಗದ ಮಹತ್ವವನ್ನು ಕಂಡು "ಕಬ್ಬಾಳು ದುರ್ಗದ ಕೋಟೆಯನ್ನು ದುರಸ್ತಿಗೊಳಿಸಿ ಅದಕ್ಕೆ 'ಜಾಫರ್‌ಬಾದ್' ಎಂದು ಪ್ರತಿ ನಾಮಕರಣ ಮಾಡಿದರು. ಆದರೆ ಆ ಹೆಸರು ಪ್ರಚಾರಕ್ಕೆ ಬರಲಿಲ್ಲ. ೧೮೬೪ರಲ್ಲಿ ಇಲ್ಲಿಯ ಫಿರಂಗಿಗಳನ್ನು ಮದ್ದನ್ನು ನಾಶಗೊಳಿಸಿ ಇಲ್ಲಿದ್ದ ಸಿಬ್ಬಂದಿಯನ್ನು ಸ್ಥಳಾಂತರಿಸಲಾಯಿತು. ಇಲ್ಲಿಗೆ ಮೈಸೂರು ಒಡೆಯರ ಆಡಳಿತಾವಧಿಯಲ್ಲಿ, ಹೈದರ್ ಮತ್ತು ಟಿಪ್ಪು ಕಾಲದಲ್ಲಿ ವಿರೋಧಿಗಳ, ರಾಜದ್ರೋಹಿಗಳ ಸಾವಿನ ಕಣಜವಾಗಿದ್ದ ಕಬ್ಬಾಳು ದುರ್ಗ ಇತಿಹಾಸದ ಪುಟಗಳಲ್ಲಿ ಮರೆಯಾಗಿರುವುದು ಕಂಡುಬಂದರೂ, ಬೆಟ್ಟದ ಬುಡದ ಪ್ರದೇಶವನ್ನು 'ಕೋಟೇಶ್ವರ ಕಟ್ಟೆ' ಎಂದೂ, ಕೋಟೆಯ ನಾಲ್ಕನೇ ಗೋಡೆಯಲ್ಲಿ ಕಲ್ಲು ಹಾಸುಗಳ ಪ್ರವೇಶದ್ವಾರ 'ಗೊಲ್ಲನ ಬಾಗಿಲು' ತೊಟ್ಟಿಲು ಆಕಾರದ ಮೆಟ್ಟಿಲುಗಳ 'ತೊಟ್ಟಿಕಲ್ಲು', ದುರ್ಗದ ಮೇಲುಭಾಗದಲ್ಲಿ ಶಿಥಿಲ ಸ್ಮಾರಕಗಳ ನಡುವೆ ಭಾರಿಯಾದೊಂದು 'ರಾಗಿಯ ಕಣಜ' ದಕ್ಷಿಣ ತುದಿಯಲ್ಲಿ 'ಹೆಣ ತಳ್ಳುವ ಮೂಲೆ' ಇವೆಲ್ಲ. ಇಲ್ಲಿಯ ವಾಸ್ತು ವಿಶೇಷಣಗಳು ಮಾತ್ರವಲ್ಲದೆ ಬೆಟ್ಟದ ಮೇಲಿನ ಅರಮನೆಯೊಂದರ ಅವಶೇಷಗಳಿವೆ. ಈ ಅವಶೇಷಗಳ ಈಶಾನ್ಯಭಾಗಕ್ಕೆ ಸರೋವರ, ಆಗ್ನೇಯ ಮೂಲೆಯಲ್ಲಿ ತುಂಡಾದ ಕಬ್ಬಾಳಮ್ಮನ ಶಿಲ್ಪದ ಹಾಸುಗಲ್ಲು, ಅರಮನೆಯ ಅವಶೇಷಗಳ ನೈರುತ್ಯ ದಿಕ್ಕಿನಲ್ಲಿ 'ಮದ್ದಿನ ಮನೆ' ಇದೆ. ಚರಿತ್ರೆಯ ಪುಟದಲ್ಲಿ ದಾಖಲಿಸಿಕೊಂಡು ಮೂಕಸಾಕ್ಷಿಯಂತೆ ಕಬ್ಬಾಳುದುರ್ಗವು ನಿಂತಿದೆ.

ಕಲ್ಯ (ಮಾ)

ಮಾಗಡಿಯಿಂದ ವಾಯುವ್ಯಕ್ಕೆ ೫ ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಗ್ರಾಮ. ಶಾಸನ ಮತ್ತು ಕಾವ್ಯಗಳಲ್ಲಿ ಇದನ್ನು 'ಕಲ್ಲೆಹ' ಎಂದು ಕರೆಯಲಾಗಿದೆ. 'ಕಲ್ಯವು ಜೈನ, ವೈಷ್ಣವ, ವೀರ (ಶೈವ) ಕೇಂದ್ರವಾಗಿದ್ದುದಲ್ಲದೆ ಬೌದ್ಧ ಕೇಂದ್ರವೂ ಆಗಿತ್ತು. ಕ್ರಿ.ಶ. ೧೫೩೩ರಷ್ಟು ಈಚೆಗೆ"[೮೩] ಕ್ರಿ.ಶ.೧೩೬೮ರ ಒಂದು ಶಾಸನದಲ್ಲಿ[೮೪] ಒಂದನೇ ಬುಕ್ಕರಾಯ; ಜೈನರು ಮತ್ತು ವೈಷ್ಣವರಲ್ಲಿ ಘರ್ಷಣೆಗಳುಂಟಾಗಿ ಈ ಎರಡು ಸಮುದಾಯದವರಿಗೂ ರಾಜಿ ಮಾಡಿಸಿದ ಪ್ರಸ್ತಾಪವಿದೆ.

ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಸಣ್ಣ ಬೆಟ್ಟದ ಮೇಲೆ ವೀರಶೈವರ ಮಠ, ಕಲ್ಲೇಶ್ವರ ದೇವಸ್ಥಾನವಿದೆ. ಮಠದ ವಿಶಾಲವಾದ ಪ್ರಾಂಗಣ ಮತ್ತು ಒಂದು ಗುಹಾಕೋಣೆ ಇರುವ ಕಟ್ಟಡ, ಮಠದ ಹೊರಗೆ

ಗದ್ದುಗೆಗಳಿರುವ ೩ ಮಂಟಪಗಳಿವೆ. ಒಂದರ ಮೇಲೆ ಬಸವನ ಪ್ರತಿಮೆ ಇದೆ. ಆ ಗದ್ದುಗೆ ಪಾಲ್ಕುರಿಕೆ ಸೋಮನಾಥನದೆಂದು ಪ್ರಸಿದ್ಧವಾಗಿದೆ. ೧೩ನೇ ಶತಮಾನದ ಅಂತ್ಯದಲ್ಲಿ ಅರವತ್ನಾಲ್ಕು ಶೀಲಾಚರಣೆಯಿಂದ ಸರ್ವಶೀಲೆ ಎಂದೇ ಖ್ಯಾತಿಗಳಿಸಿದ್ದ ಶಿವಶರಣೆ ಚೆನ್ನಮ್ಮನ ಶಿವಭಕ್ತಿಗೆ ಮಾರು ಹೋಗಿ "ಆಕೆಯ ದರ್ಶನಕ್ಕಾಗಿ ಮೇಲ್ಭಾಗವನನು ಪೂರ್ತಿ ಮುಚ್ಚಿದ ಎತ್ತಿನ ಬಂಡಿಯಲ್ಲಿ ಕಲ್ಯಕ್ಕೆ ಸೋಮನಾಥ ಬರುತ್ತಾನೆ. ದಾರಿಯಲ್ಲಿ ಭವಿಗಳ ಮುಖವನ್ನು ನೋಡಬಾರದು ಎಂಬ ಶೀಲಾಚರಣೆಗಾಗಿ ಬಂಡಿಯ ಅಕ್ಕಪಕ್ಕ ಮೇಲ್ಭಾಗವನ್ನು ಪೂರ್ತಿ ಮರೆಮಾಡಲಾಗಿತ್ತು. ಕಲ್ಯದಲ್ಲಿ ಚೆನ್ನಮ್ಮನ ಜೊತೆ ಕೆಲಕಾಲ ಕಳೆದು ಚೆನ್ನಮ್ಮನ ಇಷ್ಟಕ್ಕೆ ವಿರುದ್ಧವಾಗಿ ತನ್ನ ಊರಿಗೆ ಹೊರಟಾಗ ಬಂಡಿಗೆ ಕಟ್ಟಿದ ಎತ್ತುಗಳು ಮುಂದೆ ಹೆಜ್ಜೆ ಇಡಲು ನಿರಾಕರಿಸಿದವು. ಅವನು ಅಲ್ಲೇ ಉಳಿದು, ಕೆಲ ಕಾಲದಲ್ಲೇ ಅನಾರೋಗ್ಯ ಪೀಡಿತನಾಗಿ ಶಿವೈಕ್ಯನಾದಾಗ ಅವನನ್ನು ಕಲ್ಮೇಶ್ವರ ಗುಡಿಯ ಮುಂದೆ ಸಮಾಧಿಮಾಡಿ ಅವನ ಮಗ ಚತುರ್ಮುಖ ಬಸವಿ ದೇವನಿಗೆ ಗುರುಪಟ್ಟ ಕಟ್ಟಿದರು"[೮೫] ಚತುರ್ಮುಖ ಗೋವಿದೇವ, ಚಕ್ರಪಾಣಿ ರಂಗನಾಥ ಮುಂತಾದ ಶಿವಶರಣರ ಗದ್ದುಗೆಗಳು ಕಲ್ಯ ಬೆಟ್ಟದಲ್ಲಿವೆ.[೮೬] ೧೨ನೇ ಶತಮಾನದಲ್ಲಿದ್ದು ಜ್ಞಾನಿ ಚೆನ್ನ ಬಸವಣ್ಣ ಇಲ್ಲಿ ಸಾಯುಜ್ಯ ಹೊಂದಿದನೆಂದು ಚೆನ್ನಬಸವ ಪುರಾಣದಿಂದಲೂ ತಿಳಿದು ಬರುತ್ತದೆ.

ಕಲ್ಲೇಶ್ವರ ದೇವಾಲಯ ಪ್ರದಕ್ಷಣ ಪಥವನ್ನೊಳಗೊಂಡಿದ್ದು ಇದು ಬೌದ್ಧರ ವಿಹಾರವಾಗಿತ್ತು. ಕಾಲಾನಂತರದಲ್ಲಿ ಶಿವಾಲಯವಾಗಿರಬಹುದು. ಕಲ್ಯದಲ್ಲಿ ಶ್ರೀ ವೈಷ್ಣವ ದೇವಾಲಯಗಳು ಇದ್ದ ಬಗ್ಗೆ ಕೆಲವು ಸುಳಿವುಗಳಿವೆ. ಇಲ್ಲಿ ಒಂದು ವರದರಾಜ ದೇವಾಲಯವಿತ್ತು. ಈಗ ಅದರ ಮುಂದಿನ ಗರುಡ ಗಂಬ ಮಾತ್ರ ನಿಂತಿದೆ.

೧೫೩೩ರ ಶಾಸನವೊಂದು "ಬೌದ್ಧವಾಸಾ ಮಹಾಪುರೀ ಕಲವತೀತ ವಿಖ್ಯಾತವೆತ್ತ ಹರಿಣಾಟವಿ' ಎಂದು ಉಲ್ಲೇಖಿಸುತ್ತದೆ. ಕಲಾವತಿ ಪಟ್ಟಣವೇ ಈಗಿನ ಕಲ್ಯವಾಗಿದೆ. ಜೈನ ಪೂರ್ವಾಚಾರ್ಯರಲ್ಲೊಬ್ಬರಾದ ಕಲ್ಲೆಹದ ಸುಮಂತಭದ್ರ ಸ್ವಾಮಿಯನ್ನು ಸಿರಿಭೂವಲ ಉಲ್ಲೇಖಿಸುತ್ತದೆ. ಸುಮಂತಭದ್ರ ಸ್ವಾಮಿ ಶಿವಕೋಟ್ಯಾಚಾರನ ಗುರುವೆಂದು ವರ್ಧಮಾನ ಪುರಾಣ ತಿಳಿಸುತ್ತದೆ. ಹೀಗೆ ಕಲ್ಯವು ಪ್ರಾಚೀನ ಕಾಲದಲ್ಲಿ ಬೌದ್ಧ, ಜೈನ, ವೈಷ್ಣವ, ವೀರಶೈವ ಧರ್ಮಗಳ ಕೇಂದ್ರವಾಗಿತ್ತು.

ಕಲ್ಮೇಶ್ವರ ಗುಡಿಯ ಮುಂಭಾಗದ ಒಂದು ಕಂಬದ ಮೇಲೆ ಕುಂಬಳ ಕಾಯಜ್ಜಿಯದು ಎನ್ನುವ ಶಿಲ್ಪವಿದೆ. ಈ ಊರು ಹಿಂದೆ ಕಲಾವತಿ ಎಂಬ ಪಟ್ಟಣವಾಗಿತ್ತು. ಇಲ್ಲಿಗೆ ಮುದುಕಿಯೊಬ್ಬಳು ಕುಂಬಳಕಾಯಿಯನ್ನು ಮಾರಲು ಬಂದಾಗ ಅದನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ಕಲಹ ಉಂಟಾಗಿ ಕೊನೆಗೆ ಈ ಊರು ಹಾಳಾಯಿತೆಂಬ ಸ್ಥಳಪುರಾಣವಿದೆ.

ಕ್ಯಾಸಾಪುರ (ರಾ)

'ಕೇಶವಪುರ ಎಂಬುದು ಈ ಊರಿನ ಮೂಲ ಹೆಸರು. ಜನರ ಬಳಕೆಯಲ್ಲಿ 'ಕ್ಯಾಸಾಪುರ'ವಾಗಿದೆ. ಈ ಪ್ರದೇಶವು ಕಳ್ಳಕಾಕರಿಂದ ಕೂಡಿದ್ದು ದರೋಡೆ-ಕಳ್ಳತನಗಳು ಹೆಚ್ಚಾದ್ದರಿಂದ ಇದನ್ನು ನಿಯಂತ್ರಿಸಲು

ಮೈಸೂರನ್ನು ಆಳುತ್ತಿದ್ದ ಚಿಕ್ಕದೇವರಾಜ ಒಡೆಯರ್, ಬಿಜಾಪುರದ ಆದಿಲ್‌ಷಾಹಿ ದೊರೆಗಳಲ್ಲಿ ಸಹಾಯ ಕೋರಿದಾಗ, ಆ ಸಂದರ್ಭದಲ್ಲಿ ದರೋಡೆಕೋರರನ್ನು ನಿಗ್ರಹಿಸಲು ಮುಸಲ್ಮಾನ, ಮರಾಠ ಸೈನಿಕರು ಮತ್ತು ರಜಪೂತ ಸರದಾರರು ಈ ಪ್ರದೇಶದಲ್ಲಿ ಬಂದು ನೆಲೆಸಿದರು. ರಜಪೂತ ಸರದಾರರಾದ ಬಹದ್ದೂರ್ ಸಿಂಗ್ ಮತ್ತು ಪ್ರಕಾಶ್‌ಸಿಂಗ್ ತಮ್ಮ ಗುರುಗಳಾದ ಕೇಶವ ದಾಸರನ್ನು ಸಹ ಕರೆ ತಂದಿದ್ದರು. ಕೇಶವ ದಾಸರು ಭಿಕ್ಷೆಕಾಯಕದಿಂದ ಹಣ ಸಂಪಾದಿಸಿ; ಲೋಕ ಕಲ್ಯಾಣಕ್ಕಾಗಿ ಕೆರೆಯನ್ನು ನಿರ್ಮಿಸಿದರು. ಅವರ ಹೆಸರಿನಲ್ಲಿ 'ಕೇಶವಪುರ' ಎಂಬ ಊರನ್ನು ಕಟ್ಟಿಸಿದರು.

ಕುಪ್ಪೆಮಾಳ (ಮಾ)

ಗಂಗರ ಕಾಲದ ಪ್ರಾಚೀನಪಟ್ಟಣ. ಇದನ್ನು ಜನರು ಮಿಷ್ಕರಿಪಟ್ಟಣ ಅಥವಾ ಕುಬೇರನ ಪಟ್ಟಣವೆಂದು ಕರೆಯುತ್ತಿದ್ದರಂತೆ. ಜೈನರ ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಆದರೆ ಇಂದು ಯಾವ ಜಿನಾಲಯಗಳ ಕುರುಹುಗಳೂ ದೊರೆತಿಲ್ಲವಾದರೂ, ಇತ್ತೀಚಿಗೆ ಹೊಲದಲ್ಲಿ ದೊರೆತ ವೃಷಭನಾಥಮೂರ್ತಿಯಿಂದ ಜೈನರ ಅತಿಶಯಕ್ಷೇತ್ರವೆಂಬುದು ಸಾಬೀತಾಯಿತು. ಸದ್ಯ ಈ ಮೂರ್ತಿ ಸಂಕೀಘಟ್ಟದ ಬಸದಿಯಲ್ಲಿದೆ. ಉತ್ಖನನ ಮಾಡಿದ್ದಲ್ಲಿ ಖಂಡಿತವಾಗಿ ಒಂದು ಹೊಸ ಇತಿಹಾಸವನ್ನು ಕಟ್ಟಿಕೊಡುವ ಸಾಮರ್ಥ್ಯ ಕುಪ್ಪೆಮಾಳಕ್ಕಿದೆ. ಇಂದಿನ ಕುಪ್ಪೆಮಾಳವೇ ಅಂದಿನ ಕುಪ್ಪೆಪಾಳ್ಯವಾಗಿದೆ.

ಕೂಡ್ಲೂರು (ಚ)

ಇದು ಚನ್ನಪಟ್ಟಣಕ್ಕೆ ೬.ಕಿ.ಮೀ. ದೂರದಲ್ಲಿ ಕಣ್ವ ನದಿಯ ದಡದಲ್ಲಿ ಚೋಳರ ಪುರಾತನ ರಾಜಧಾನಿಯಾದ ಚಿಕ್ಕಮಳೂರು ಬಳಿಯಿದೆ. ಚೋಳರ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತು. ಇದಕ್ಕಿಂತಲೂ ಹಿಂದೆ "ತಲಕಾಡಿನ ಗಂಗರ ವಂಶಾವಳಿಯನ್ನು ತಿಳಿಸಿಕೊಡುವ ಗಂಗರ ಕಾಲದ ಕ್ರಿ.ಶ.೯೬೩ ತಾಮ್ರಶಾಸನ ಕೂಡ್ಲೂರಿನಲ್ಲಿ ದೊರೆತಿದೆ"[೮೭] ಎಂದ ಮೇಲೆ ಈ ಗ್ರಾಮದ ಪ್ರಾಚೀನತೆ ಗಂಗರ ಆಳ್ವಿಕೆಯ ಕಾಲಕ್ಕೆ ಸೇರಿದೆಂಬುದು ಗೊತ್ತಾಗುತ್ತದೆ. ಹಾಗೂ ಚಲ್ಲಮ್ಮನ ಗುಡಿ ಗಂಗರ ಕಾಲದ ಕಂಬಗಳುಳ್ಳ ಚಿಕ್ಕ ದೇವಾಲಯ ಇದರ ಮುಂಭಾಗದಲ್ಲಿ ಎರಡು ವೀರಗಲ್ಲುಗಳಿವೆ. ರಾಮ ದೇವಾಲಯದ ಆವರಣದಲ್ಲಿ ಗಂಗರ ವಾಸ್ತುಶೈಲಿಯ ಸುಮಾರು ಒಂದುವರೆ ಮೀಟರ್ ಎತ್ತರವಿರುವ ವಿಷ್ಣುವಿನ ವಿಗ್ರಹವಿದೆ. ಇದರ ನವರಂಗವನ್ನು ವಿಜಯನಗರ ಕಾಲದ ಅರಸರು ಜೀರ್ಣೋದ್ಧಾರ ಮಾಡಿಸಿದ್ದಾರೆ.

ಕೂಡ್ಲೂರಿನಲ್ಲಿ ಒಟ್ಟು ೧೮ ಶಿಲಾ ಶಾಸನಗಳು ದೊರೆತಿವೆ. ಅವುಗಳಲ್ಲಿ ಎರಡು ಕನ್ನಡ ಶಾಸನಗಳಾದರೆ, ೧೬ ತಮಿಳುಶಾಸನಗಳು, ಕೂಡ್ಲೂರನ್ನು ೧೧೯೫ರ ಶಾಸನದಲ್ಲಿ 'ರಾಜರಾಜ ಚತುರ್ವೇದಿ ಮಂಗಲ' ಎಂದರೆ ೧೨೦೦ರ ನಂತರ ಶಾಸನವು ಕೂಡಲೂರು ಮತ್ತು ರಾಜರಾಜ ಚತುರ್ವೇದಿ ಮಂಗಲ ಎಂದು ಕರೆದಿದೆ. ೧೧೮೦ರ ಶಾಸನ ಹೊಯ್ಸಳ ಅರಸ ೨ನೇ ಬಲ್ಲಾಳನ ಕಾಲಕ್ಕೆ ಸೇರಿದ್ದು, ಶಾಂತರ ಬಸದಿಯ ಉಲ್ಲೇಖ ಹಾಗೂ ಬಸದಿಯೊಂದಕ್ಕೆ ತೋಟವನ್ನು ಕೊಟ್ಟ ದತ್ತಿಯ ಉಲ್ಲೇಖವಿದೆ.

೧೭೬೭ರಲ್ಲಿ ಹೈದರಾಲಿಯು ಈ ಗ್ರಾಮವನ್ನು ಸೈಯದ್ ಮಹ್ಮದ್ ಅಖಿಲ್ ಷಾ ಖಾದ್ರಿ ಎಂಬ ಫಕೀರನಿಗೆ ದಾನಕೊಟ್ಟ ಸಂಗತಿ ಇದೆ. ೧೮೨೮ರ ಕನ್ನಡ ಭಾಷೆಯ ಶಾಸನವೊಂದು ಕಾನಕಾನಹಳ್ಳಿಯ

ವೆಂಕಟಲಕ್ಷ್ಮಿಯು ಕೂಡ್ಲೂರು ಶಾನುಭೋಗ ಕಪನಿಪತಯ್ಯನಿಂದ ತೆಂಗಿನ ತೋಟವನ್ನು ಕ್ರಯಕ್ಕೆ ತೆಗೆದುಕೊಂಡು, ಶ್ರೀರಾಮಸ್ವಾಮಿ ದೇವಸ್ಥಾನಕ್ಕೆ ವಾರ್ಷಿಕ ಕಟ್ಲೆ ನಡೆಸುವ ಉದ್ದೇಶಕ್ಕಾಗಿ ಕೊಟ್ಟಳೆಂದು ಹೇಳಿದೆ. ಹೀಗೆ ಕೂಡ್ಲೂರು ಐತಿಹಾಸಿಕವಾಗಿ ಗಂಗರು, ಹೊಯ್ಸಳರು, ಚೋಳರು, ಮೈಸೂರು ಅರಸರ ಆಳ್ವಿಕೆಗೆ ಸೇರಿದ ಗ್ರಾಮವಾಗಿದೆ.

ಕೆಂಪಸಾಗರ (ಮಾ)

ಮಾಗಡಿಯಿಂದ ನೈರುತ್ಯ ದಿಕ್ಕಿಗೆ ೫.ಕಿ.ಮೀ. ದೂರದ ಕೆಂಪಸಾಗರ ಗ್ರಾಮವಿದೆ. ಇಲ್ಲಿ ಒಂದು ವೀರಶೈವ ಮಠವಿದ್ದು, ಈ ಮಠದ ನವರಂಗವೊಂದರ ಕಂಬದ ಮೇಲೆ ಒಂದು ಲಿಂಗ ಮಡಿಕೆಯಿಂದ ಹೊರಬರುತ್ತಿರುವಂತೆ ಕೆತ್ತಿದೆ. ಇದನ್ನು 'ಸುರಭಾಂಡೇಶ್ವರ' ಎಂದು ಕರೆಯುತ್ತಾರೆ. ಮುಂದಿನ ಒಂದು ಕಂಬದಲ್ಲಿ ಕೆಂಪೇಗೌಡನ ವಿಗ್ರಹವನ್ನು ಕೆತ್ತಲಾಗಿದೆ. ಈ ಮಠವನ್ನು ಕೆಂಪೇಗೌಡನೇ ಕಟ್ಟಿಸಿದನೆಂಬ ಐತಿಹ್ಯವಿದೆ.

ಕೊತ್ತಿಪುರ (ರಾ)

'ಕೊತ್ತಿಪುರ'ದ ಪ್ರಾಚೀನ ಹೆಸರು 'ಕತ್ತಿಪುರ'. ಕತ್ತಿಪುರ ದಂಡನಾಯಕನಹಳ್ಳಿ, ರಟ್ಟರಹಳ್ಳಿ ಇವು ೧೦ನೇ ಶತಮಾನದಲ್ಲಿ ರಾಷ್ಟ್ರಕೂಟರ ಆಳ್ವಿಕೆಗೆ ಸೇರಿದ ಪ್ರದೇಶವಾಗಿತ್ತು. ದಂಡನಾಯಕನಹಳ್ಳಿ ಮತ್ತು ರಟ್ಟರಹಳ್ಳಿ ಈಗ ಬೇಚಾರಕ್ ಗ್ರಾಮಗಳಾಗಿವೆ. ಆದರೆ ರಾಷ್ಟ್ರಕೂಟರ ಕೊನೆಯ ಅರಸ ಇಂದ್ರನ ನಂತರ (ಕ್ರಿ.ಶ.೯೮೩) ಅವರ ಮನೆತನದವರು ಹಳ್ಳಿಗಳಲ್ಲಿ ಹಂಚಿಹೋದಂತೆ ಕಂಡುಬರುತ್ತದೆ. ಬಹುಶಃ ಇವರಲ್ಲಿ ದೊಡ್ಡ ರಟ್ಟನಾಯಕ, ಚಿಕ್ಕರಟ್ಟನಾಯಕ ಎಂಬುವರು ಸೋಮೇಶ್ವರ ದೇವಾಲಯದ ಬೆಟ್ಟದ ಬಳಿ ನೆಲೆಸಿ, ರಟ್ಟರಹಳ್ಳಿ ಎಂಬ ಊರನ್ನು ಕಟ್ಟಿರಬೇಕು. ಈ ಬೆಟ್ಟಕ್ಕೆ ರಟ್ಟಬೆಟ್ಟ ಎಂಬ ಹೆಸರು ಹಳ್ಳಿಗರ ಬಾಯಲ್ಲಿ ಈಗಲೂ ಇದೆ. ದಂಡನಾಯಕನಹಳ್ಳಿ ನೈರುತ್ಯಕ್ಕೆ ಕೊತ್ತಿಪುರವಿದೆ. 'ದಂಡನಾಯಕನು' ರಟ್ಟನಾಯಕರಲ್ಲಿ ದಂಡ ನಾಯಕನಾಗಿದ್ದಿರಬೇಕು. (ಇಲ್ಲವೆ ೧೪ನೇ ಶತಮಾನದ ಪೂರ್ವಭಾಗದಲ್ಲಿ ಇದ್ದು; ಕತ್ತಿ ತಯಾರಿಕೆಯ ಮುಖ್ಯಾಧಿಕಾರಿಯಾಗಿದ್ದಿರಬೇಕು) ಕತ್ತಿಪುರ; ಮಾಗಡಿ ಕೆಂಪೇಗೌಡನಿಗೆ ಹಾಗೂ ಟಿಪ್ಪುವಿಗೆ ಕತ್ತಿಯ ಸರಬರಾಜು ಮಾಡುವ ಕೇಂದ್ರವಾಗಿತ್ತು. ಆ ಬಗ್ಗೆ ಲೋಹಾವಶೇಷಗಳು ಇಂದಿಗೂ ಕಂಡು ಬರುತ್ತವೆ. ಟಿಪ್ಪುವಿನ ಸೈನ್ಯಕ್ಕೆ ಕತ್ತಿ ಸರಬರಾಜು ಮಾಡುತ್ತಿದ್ದವರು. ಕೆಂಪಹಳ್ಳಿ-ಹೊಸಹಳ್ಳಿಯಲ್ಲಿದ್ದ ಶಿಂಪಿಸಿದ್ದ ನಾಯಕರ ವಂಶೀಕರು. ಈ ಕತ್ತಿಗಳ ಕಾರ್ಯಾಗಾರದ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸುತ್ತಿದ್ದರು. ಹಾಗೂ ಟಿಪ್ಪುವಿನ ಸೈನ್ಯದಲ್ಲಿಯೂ ಈ ಶಿಂಪಿಸಿದ್ದ ನಾಯಕರ ವಂಶೀಕರಿದ್ದರು. ಟಿಪ್ಪುವಿನ ಕಾಲಕ್ಕೆ ಈ ಹಳ್ಳಿಯು ಸ್ವಲ್ಪಕಾಲ, 'ಷಹನ್ ಶಹಾಬಾದ್' ಎಂಬ ಹೆಸರಿದ್ದು ನಂತರ ಮೊದಲಿನ ಹೆಸರೆ ಉಳಿಯಿತು. ಈಗ ಅದು ಐತಿಹಾಸಿಕ ಕತ್ತಿಪುರ ಹೋಗಿ ಕೊತ್ತಿಪುರ ಎಂಬ ಹೆಸರನ್ನು ಪಡೆದುಕೊಂಡಿದೆ.

ಚನ್ನಪಟ್ಟಣ (ಚ)

'ಚಂದಾಪುರ' ಎಂದು ಕರೆಯಲ್ಪಡುತ್ತಿದ್ದ ಈ ಊರು ನಂತರದಲ್ಲಿ ಚನ್ನಪಟ್ಟಣ ಎಂದು ಹೆಸರು

ಪಡೆದಿದೆ. 'ಚಂದಪಟ್ಟಣ'ವೆಂದು ವ್ಯಾಸತೀರ್ಥರ ಕಾಲದಲ್ಲಿ ತನ್ನ ಆವರಣ ಸೌಂದರ್ಯದಿಂದ ಪ್ರಖ್ಯಾತವಾಗಿದ್ದು; ಚಂದಾಪುರ, ಪಂಚಕೋಶ ಚತುರ್ವೇದಪುರ, ಜ್ಞಾನಕ್ಷೇತ್ರ, ತೆಂಕಣ ಅಯೋಧ್ಯಾ ಎಂದು ವಿವಿಧ ಹೆಸರುಗಳಿಂದ ವರ್ಣಿಸಲ್ಪಟ್ಟಿದೆ"[೮೮]. ಚನ್ನಪಟ್ಟಣವನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಆಳಿದವರಲ್ಲಿ ಚನ್ನಪಟ್ಟಣದ ಪಾಳೆಯಗಾರರು ಪ್ರಮುಖರು. ಚನ್ನಪಟ್ಟಣ ರಾಜ್ಯವು ಈಗಿನ ಚನ್ನಪಟ್ಟಣ, ಕನಕಪುರ ತಾಲೂಕುಗಳನ್ನೊಳಗೊಂಡಂತೆ ನಾಗಮಂಗಲ ಮತ್ತು ಮದ್ದೂರು ತಾಲೂಕಿನ ಕೆಲವು ಭಾಗಗಳನ್ನು ಒಳಗೊಂಡಿತ್ತು. ಚನ್ನಪಟ್ಟಣದ ಪಾಳೆಯಗಾರರು ವಿಜಯನಗರದ ಸಾಮಂತರಾಗಿ ೧೬-೧೭ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದಾರೆ.

ಚನ್ನಪಟ್ಟಣ ಪಾಳೆಯಗಾರರು ಮೂಲತಃ ಬಾರಾಮಹಲ್ ಪ್ರದೇಶಕ್ಕೆ ಸೇರಿದ ತೆಲುಗು ಬಣಜಿಗರು. ಈ ವಂಶದ ಮೂಲಪುರುಷ ರಾಣೋಜಿರಾಯ. ಆದರೆ ೧೬೨೩ಕ್ಕೆ ಸೇರಿದ ಶಾಸನವೊಂದರಲ್ಲಿ ರಾಣಪೆದ್ದ ಜಗದೇವರಾಯ, ಜಗದೇವರಾಯ, ಕುಮಾರ ಜಗದೇವರಾಯ ಆಳ್ವಿಕೆ ನಡೆಸಿದರೆಂಬ ವಂಶಾವಳಿ ಇದೆ. ಈ ಪಾಳೆಯಗಾರರು ಕ್ರಿ.ಶ.೧೫೭೦ ರಿಂದ ೧೬೩೦ರ ವರೆಗೆ ಸುಮಾರು ೩೦ ವರ್ಷಗಳ ಕಾಲ ಮಾತ್ರ ಚನ್ನಪಟ್ಟಣದ ಪಾಳೆಯಗಾರರಾಗಿದ್ದರು.

ಪೊನ್ನಟೋಟಿ ಓಬಳಕವಿಯ 'ಓಬಳಪುರಾಣ' ಕೃತಿಯಲ್ಲಿ ೧೫೭೦ರಲ್ಲಿ ಇಮ್ಮಡಿ ಜಗದೇವರಾಯನು ಮಾಗಡಿಯ ಪ್ರಥಮ ಆಡಳಿತಗಾರನೆಂದು ಉಲ್ಲೇಖಿಸಿದೆ. ಇವನ ತಂದೆ ಮತ್ತು ಅಜ್ಜ ತಿಮ್ಮನಾಯಕ ವಿಜಯನಗರ ಅರಸರ ಅಧಿಕಾರಿಗಳಾಗಿದ್ದರು. "ತಿಮ್ಮನಾಯಕ ಅಥವಾ ಜಗದೇವರಾಯ ಎಂಬುವನು ನಾಗಮಂಗಲ ಪ್ರದೇಶದ ಅಧಿಕಾರಿಯಾಗಿ ೧೫೬೩ರಲ್ಲಿ ಇದ್ದುದನ್ನು ನಾಗಮಂಗಲ ಶಾಸನ ಉಲ್ಲೇಖಿಸುತ್ತದೆ. ಪೆದ್ದ ಜಗದೇವರಾಯ ಎಂಬುವನು ಮಂಡ್ಯ ಪ್ರದೇಶದ ಮೇಲ್ವಿಚಾರಣೆಗೆ ವಿಜಯನಗರದ ಅರಸರು ನೇಮಿಸಿದ್ದರು. ಈತನ ಸಹೋದರ ಇಮ್ಮಡಿ ಜಗದೇವರಾಯ, ಇವನೆ ಚನ್ನಪಟ್ಟಣ ರಾಜ್ಯದ ಸ್ವತಂತ್ರ ಪಾಳೆಯಗಾರನಾಗಿ ಆಳ್ವಿಕೆ ನಡೆಸಿದ".[೮೯]

ಇಮ್ಮಡಿ ಜಗದೇವರಾಯ (ಕ್ರಿ.ಶ.೧೫೭೦-೧೫೮೫) ಗೋಲ್ಕಂಡ ಮತ್ತು ಅಹ್ಮದನಗರದ ಸೈನಿಕರು ಪೆನುಗೊಂಡೆಯ ಮೇಲೆ ದಾಳಿ ಮಾಡಿದಾಗ ಧೈರ್ಯದಿಂದ ಹೋರಾಡಿ ಹಿಮ್ಮೆಟ್ಟಿಸಿದ. ಆಗ ವಿಜಯನಗರದ ಅರಸ ತಿಮ್ಮರಾಯ ೯ಲಕ್ಷ ಪಗೋಡಗಳ ಆದಾಯವುಳ್ಳ ದೊಡ್ಡ ಪ್ರದೇಶವನ್ನು ಜಗದೇವರಾಯನಿಗೆ ಕೊಟ್ಟನು. ಇದು ಬಾರಾ ಮಹಲ್‌ನಿಂದ ಪಶ್ಚಿಮ ಘಟ್ಟದವರೆಗೆ ವ್ಯಾಪಿಸಿದ್ದು, ಪಿರಿಯಾಪಟ್ಟಣ, ಕಾನಕಾನಹಳ್ಳಿ ಮತ್ತು ಬೂದಿಹಾಳು ಪ್ರದೇಶಗಳು ಸೇರಿದ್ದವು. ಈ ಹೊಸ ಭೂಪ್ರದೇಶದ ಆಡಳಿತವನ್ನು ನಿರ್ವಹಿಸಲು ಚನ್ನಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಇಲ್ಲಿಂದಲೇ ಆಡಳಿತ ನಡೆಸಲು ಕೋಟೆ ಕಟ್ಟಿಸಿದನು.

ಜಗದೇವರಾಯ ಚನ್ನಪಟ್ಟಣ ರಾಜ್ಯಕ್ಕೆ ಒಂದು ಸುವ್ಯವಸ್ಥೆಯಿಂದ ಆಡಳಿತ ನಡೆಸಿ ಭದ್ರ ಬುನಾದಿ ಹಾಕಿದ. ಇವನ ನಂತರ; ಇವನ ಮಗ ಜಗದೇವ ಅಧಿಕಾರಕ್ಕೆ ಬಂದು ೧೦ವರ್ಷಗಳ ಕಾಲ ಆಳ್ವಿಕೆ

ನಡೆಸಿದ. ಇವನ ನಂತರ ವೆಂಕಟಪತಿ ಎಂಬುವನು ಆಳ್ವಿಕೆ ನಡೆಸಿದನೆಂಬ ಶಾಸನೋಲ್ಲೆಖವಿದೆ. ಇಮ್ಮಡಿ ಕುಮಾರ ಜಗದೇವರಾಜ ೧೬೨೦ ರಿಂದ ೧೬೨೫ರ ವರೆಗೆ ಆಳ್ವಿಕೆ ನಡೆಸಿದ. ಈತ ಕನಕಪುರ ತಾಲೂಕಿನ ಅರಳಾಳು ಸಂದ್ರದ ಶಿವ ದೇವಾಲಯಕ್ಕೆ ದತ್ತಿಕೊಟ್ಟ ವಿಚಾರ ಶಾಸನದಲ್ಲಿದೆ. ೧೬೩೦ರಲ್ಲಿ ಮೈಸೂರಿನ ಚಾಮರಾಜ ಒಡೆಯರ್ ಚನ್ನಪಟ್ಟಣವನ್ನು ಮುತ್ತಿ ವಶಪಡಿಸಿಕೊಂಡ ನಂತರ ಚನ್ನಪಟ್ಟಣ ಮೈಸೂರು ಸಂಸ್ಥಾನದಲ್ಲಿ ವಿಲೀನಗೊಂಡಿತು. ೧೭೫೪ರಲ್ಲಿ ಗೋಪಾಲಹರಿಯ ಮುಖಂಡತ್ವದಲ್ಲಿ ಮರಾಠ ಸೇನೆ ಇಲ್ಲಿನ ಕೋಟೆಯನ್ನು ನಾಶಪಡಿಸಿತಾದರೂ ದಿವಾನ್ ಪೂರ್ಣಯ್ಯ ಕೋಟೆಯನ್ನು ದುರಸ್ತಿಗೊಳಿಸಿದರು. ನಂತರ ಹೈದರಾಲಿ ವಶಕ್ಕೆ ಸೇರಿತೆಂದು; ಟಿಪ್ಪು ಸುಲ್ತಾನ್ ೧೭೯೦ರಲ್ಲಿ ಕೋಟೆಯನ್ನು ನೆಲಸಮಗೊಳಿಸಿದನೆಂಬ ಇತಿಹಾಸವಿದೆ.

೧೮೭೩ರಲ್ಲಿ ಚನ್ನಪಟ್ಟಣ ಕ್ಲೋಸ್‌ಪೇಟೆಯ ಉಪ ತಾಲೂಕು ಎನಿಸಿತು. ೧೮೯೨ರಲ್ಲಿ ಕ್ಲೋಸ್‌ಪೇಟೆಯೇ ಚನ್ನಪಟ್ಟಣದ ಉಪ ತಾಲೂಕಾಗಿ ಪರಿಗಣಿಸಲ್ಪಟ್ಟಿತು.

ಚನ್ನಮಾನಹಳ್ಳಿ (ರಾ)

ಕ್ರಿ.ಶ.೧೩೧೯ರಲ್ಲಿ ಈ ಗ್ರಾಮವು ಚಂದಿ-ಮಾದಿಯರಹಳ್ಳಿ[೯೦] ಎಂದಿತ್ತು. ಹೊಯ್ಸಳವೀರ ಬಲ್ಲಾಳನ ಕಾಲದ ಈ ಶಾಸನದಲ್ಲಿ ಹಳ್ಳಿಯನ್ನು ಪುನರುಜ್ಜೀವನಗೊಳಿಸಿ ರಾಮಲಿಂಗ ಭಟ್ಟರಿಗೆ ದತ್ತಿಕೊಟ್ಟ ವಿಚಾರವಿದೆ. ಅಂದರೆ ಚಂದಿ ಮತ್ತು ಮಾದಿಯ ಎಂಬ ವೀರಮಹಿಳೆಯರ ಹೆಸರಿನಲ್ಲಿ ಗ್ರಾಮವು ಪಾಳು ಬಿದ್ದಿತು ಎನ್ನುವಲ್ಲಿ ಆ ಪ್ರದೇಶದ ವೀರ ಸ್ತ್ರೀಯರ ಬಗ್ಗೆ ತಿಳಿಸಿ ಕೊಡುವುದಲ್ಲದೇ, ಭಟ್ಟರಿಗೆ ದಾನಕೊಟ್ಟಾಗ ಅದು ಅಗ್ರಹಾರವಾಗಿ ಬೆಳೆದು ವಿದ್ವತ್ತಿನ ಬೆಳವಣಿಗೆಗೆ ಅವಕಾಶ ಮಾಡಿ ಕೊಡಲಾಯಿತು ಎಂಬುದಾಗಿ ಭಾವಿಸಬಹುದು.

ಚನ್ನಮಾನಹಳ್ಳಿಯ ಮತ್ತೊಂದು ಶಾಸನದ ರೀತ್ಯ, ವೀರನರಸಿಂಹ ದೇವರು ರಾಜ್ಯಭಾರ ಮಾಡುವಾಗ "ಹದಿನಾಲ್ಕು ನಾಡದೊರೆ ಕೇತಯ್ಯ ದಂಡನಾಯಕನನ್ನು ಕ್ರಿ.ಶ.೧೩೫೧ರಲ್ಲಿ ಗ್ರಾಮದ ಕಂಚಿನಾಯ್ಕರ ಮಗ ಚೆಲುವಯ್ಯ ಎಂಬುವನು ಹೊಂಗನೂರಿನಲ್ಲಿ ಎದುರಿಸುತ್ತಾನೆ. ಆ ಯುದ್ಧದಲ್ಲಿ ಕೇತಯ್ಯನು ಬಾಣತಾಗಿ ಅಸುನೀಗುತ್ತಾನೆ"[೯೧] ಈ ಶಾಸನದಲ್ಲಿ 'ಚಂನಮಾಡಿಹಳ್ಳಿ' ಎಂದು ಈ ಗ್ರಾಮಕ್ಕೆ ಹೆಸರಿದೆ. ಇಂದಿನ ಚನ್ನಮಾನಹಳ್ಳಿಯು ಅಂದಿನ ಗತವೈಭವವನ್ನು ಮರೆದಿರುವುದು ಮಾತ್ರ ಸತ್ಯಸಂಗತಿ.

ಚಿಕ್ಕ ಮಾಳೂರು (ಚ)

ಚನ್ನಪಟ್ಟಣದಿಂದ ೩ ಕಿ.ಮಿ. ಅಂತರದಲ್ಲಿ ಕಣ್ವಾನದಿಯ ಎಡದಂಡೆಯ ಮೇಲಿರುವ ಚೋಳರ ಕಾಲದ ಅಗ್ರಹಾರವಾಗಿತ್ತು. ಇಲ್ಲಿ ಅರ್ಕೇಶ್ವರ, ಗೋಪಾಲಸ್ವಾಮಿ, ಕಲ್ಲೇಶ್ವರ ದೇವಾಲಯಗಳಿವೆ.

ಅರ್ಕೇಶ್ವರ ದೇವಾಲಯ, ಚೋಳ-ಹೊಯ್ಸಳ ಶೈಲಿಯ ಕಿರಿದಾದ ಗರ್ಭಗೃಹದಲ್ಲಿ ಎತ್ತರವಾದ ಪಾಣಿ ಪೀಠದ ಮೇಲೆ ಚೋಳ-ಗಂಗ ಶೈಲಿಯ ಬಾಣಲಿಂಗವಿದೆ. ನವರಂಗದಲ್ಲಿ ಸಪ್ತಮಾತೃಕೆಯರು, ವೀಣಾಧರ ಶಿವ, ಷಣ್ಮುಖ, ವರದರಾಜ ಮತ್ತು ಸೂರ್ಯನ ಸುಂದರ ಶಿಲಾಮೂರ್ತಿಗಳಿವೆ.

ಗೋಪಾಲಸ್ವಾಮಿ ದೇವಾಲಯವು ಚೋಳ-ಹೊಯ್ಸಳ ಶೈಲಿಯ ರಚನೆ, ಮುಖಮಂಟಪ ಮತ್ತು ನವರಂಗದ ಬಾಗಿಲುವಾಡಗಳು ವಿಜಯನಗರ ಶೈಲಿಯವು. ಗರ್ಭಗೃಹದ ಗೋಡೆಯಲ್ಲಿ ಚೋಳರ ಶೈಲಿಯ ಕಿರುಸ್ತಂಭಗಳಿವೆ. ಹೊಯ್ಸಳ ಶೈಲಿಯ ವೇಣುಗೋಪಾಲ ಮೂರ್ತಿಯು ಸುಮಾರು-ಒಂದು ಮೀಟರ್ ಎತ್ತರವಿದೆ. ಈ ಶಿಲಾಮೂರ್ತಿಯ ಪ್ರಭಾವಳಿಯಲ್ಲಿ ಮಕರತೋರಣ ಹಾಗೂ ದಶಾವತಾರಗಳನ್ನು ಹೇಳುವ ಕಿರು ಶಿಲ್ಪಗಳಿವೆ. ದೇವಾಲಯದ ಹೊರಗೋಡೆಗಳ ಮೇಲೆ ಮತ್ತು ತಳಹದಿಯ ಮೇಲೆ ತಮಿಳು ಶಾಸನಗಳಿವೆ. ಕ್ರಿ.ಶ.೧೧೦೦ರ ಒಂದು ಶಾಸನದಲ್ಲಿ ತಿರುಮಾಯಿಲಾಪುರದ ತಿರುವಿರುಂಡ ಪೆರುಮಾಳ್ ದೇವಾಲಯಕ್ಕೆ ನೀಡಿದ ದಾನದ ವಿವರಗಳನ್ನು ಉಲ್ಲೇಖಗೊಂಡಿದೆ.

ಕಲ್ಮೇಶ್ವರ ದೇವಾಲಯ ಚೋಳರ ಕಾಲದ್ದಾಗಿದ್ದು, ಹಲವಾರು ತಮಿಳು ಶಾಸನಗಳಿವೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಪ್ರಾಚೀನ ಕಾಲದ ವಿಶಾಲವಾದ ಪುಷ್ಕರಣಿ ಇದೆ. ನವರಂಗ ಮತ್ತು ಅರ್ಧಮಂಟಪದ ಬಾಗಿಲುವಾಡಗಳಲ್ಲಿ ರುದ್ರಾಕ್ಷಿಮಣಿಗಳ ಮಾಲೆಯ ಅಲಂಕಾರದಿಂದ ಕೂಡಿದೆ.

ಜಾಲಮಂಗಲ (ರಾ)

ಈ ಊರು ೧೧ನೇ ಶತಮಾನದಲ್ಲಿ ಕಾಳಾಮುಖರ ಶಕ್ತಿ ಆರಾಧಕರ ಪ್ರಭಾವವಿರುವುದನ್ನು ಇಲ್ಲಿನ ಸೋಮೇಶ್ವರ ದೇವಾಲಯದ ಶಾಸನದಲ್ಲಿ 'ಕಲಿದೇವರ' ಹಾಗೂ 'ಕಾಳಿಕಾದೇವರ' ಪ್ರಸ್ತಾಪವಿದೆ. ಈ ದೇವಾಲಯದ ಮೇಲ್ಛಾವಣಿಯ ಶಾಸನದ ರೀತ್ಯಾ ೧೩ನೇ ಶತಮಾನದಲ್ಲಿ ನುಡಯನಾಯಕ ಮತ್ತು ಇತರರು ಕಲಿ ದೇವರಿಗೆ ದತ್ತಿಬಿಟ್ಟ ಸಂಗತಿ ಇದೆ. ವೀರ ಬುಕ್ಕಣ್ಣ ಒಡೆಯನ ಆಳ್ವಿಕೆಯ ಉಲ್ಲೇಖವೂ ಇದೆ. ಈ ಶಾಸನ ಮತ್ತು ಐಜೂರು ಶಾಸನಗಳನ್ನು ಹೋಲಿಸಿದರೆ ವಿಜಯನಗರ ಸ್ಥಾಪನೆಗಿಂತ ಮೊದಲು ಬುಕ್ಕನ ಆರಂಭ ದೆಸೆಯ ಆಡಳಿತ ಇಲ್ಲಿ ತೋರಿದಂತಿದೆ.

೧೬ನೇ ಶತಮಾನದಲ್ಲಿ ಅಣ್ಣಪ್ಪ ನಾಯಕನೆಂಬ ಜನಪ್ರಿಯ ಸಾಮಂತ ದೊರೆಯ ಆಳ್ವಿಕೆ ಕಂಡುಬರುತ್ತದೆ. ಅಣ್ಣಪ್ಪನ ಕಲ್ಲುದುರ್ಗ, ಲಕ್ಷ್ಮೀಪತಿದುರ್ಗ, ಲಕ್ಷ್ಮೀನಾರಾಯಣ ಸ್ವಾಮಿಬೆಟ್ಟ, ನಾರಾಯಣಗಿರಿ ಎಂಬ ವಿವಿಧ ಹೆಸರುಗಳಿಂದ ಕರೆಸಿಕೊಳ್ಳುವ ಗಿರಿದುರ್ಗವಿದೆ. ಈ ದುರ್ಗದ ಅಧಿಪತಿಯಾಗಿದ್ದ ಅಪ್ಪಣ್ಣ ನಾಯಕ; ಚನ್ನಪಟ್ಟಣ, ಹುಲಿಯೂರು ದುರ್ಗದ ಪಾಳೇಗಾರರನ್ನು ಸೋಲಿಸಿದನಂತೆ, ಶತ್ರು ಸೈನಿಕರು ರಾಮಗಿರಿ, ಕೂಟಗಲ್ ಮುಖಾಂತರ ಬಂದು ಜಾಲಮಂಗಲ ಬಳಿ ಇರುವ ತಡಕವಾಗಿಲು ಬಳಿ ನಿಂತು ಮುಂದೆ ಮುತ್ತಿಗೆಗೆ ಹೋಗದಂತೆ ಸೈನ್ಯವನ್ನು ತಡೆಯುತ್ತಿದ್ದ ಬಾಗಿಲಿನಂತೆ ಅಪ್ಪಣ್ಣ ನಾಯಕ ಕಾರ್ಯ ನಿರ್ವಹಿಸುತ್ತಿದ್ದರಿಂದ ತಡಿಕವಾಗಿಲು ಎಂಬ ಹೆಸರಾಯಿತು ಎನ್ನುವ ಕತೆಯೂ ಇದೆ.

ಈ ಅಣ್ಣಪ್ಪನಾಯಕನು 'ಅಣ್ಣನ ಕೆರೆ' ನಿರ್ಮಿಸಿದನು. ಸೋಮೇಶ್ವರ ದೇವಾಲಯ ದುರಸ್ತಿಗೊಳಿಸಿ, ಬೆಟ್ಟದ ಈಶಾನ್ಯದ ಮೂರು ಗುಡ್ಡೆ ಹೊಲದಲ್ಲಿ ಕೆಳ ಅರಮನೆ ಕಟ್ಟಿಸಿದನು. ಬೆಟ್ಟದ ಮೇಲೆ ಕೋಟೆ ಬತೇರಿ ಹಾಗೂ ತಟ್ಟೆಯ ಬಾಗಿಲು ಅವನ ನೆನಪಿಗಾಗಿ ಇನ್ನು ಉಳಿದುಬಂದಿದೆ. ದುರ್ಗದ ಯುದ್ಧವೊಂದರಲ್ಲಿ ಸೊಣೆಯ ಬಳಿ ಏಳುವೀರರನ್ನು ಒಂದೇ ಬಾರಿಗೆ ಎದುರಿಸಿ ಕೊನೆಗೆ ಅವರೊಡನೆ ತಾನು ಸೊಣೆಯಲ್ಲಿ ಮುಳುಗಿ ಹೋದನೆಂಬ ವಿವರಗಳಿವೆ.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಚಾಮರಾಜ ಒಡೆಯರು ರಾಜಮನೆತನದ ದೇವರಾಜಮ್ಮಣ್ಣಿಯವರಿಗೆ ಈ ಗ್ರಾಮವನ್ನು ಅರಿಶಿನ ಕುಂಕುಮಕ್ಕೆ ಬಳುವಳಿ ನೀಡಿದ್ದರಂತೆ, ಸಾಂಸಾರಿಕ ವೈಮನಸ್ಸಿನ ಕಾರಣವೋ, ಮತ್ತೇನೋ ಈ ಗ್ರಾಮ ಸರ್ಕಾರಕ್ಕೆ ಸೇರಿಕೊಂಡಿತು.

ದೊಡ್ಡ ಮಳೂರು (ಚ)

ಸುಮಾರು ಕ್ರಿ.ಶ.೧೦೦೦ ದಲ್ಲಿ ಚೋಳ ಅಧಿಕಾರಿಯೊಬ್ಬ ಇದನ್ನು ಅಗ್ರಹಾರವಾಗಿ ಸ್ಥಾಪಿಸಿ 'ಪೆರಿಯ ಮಳೂರು' ಎಂದು ಕರೆದನು. ಚೋಳರ ಶಾಸನಗಳಲ್ಲಿ ಈ ಸ್ಥಳವನ್ನು ಮಳಲೂರ, ಮಳವೂರು, ರಾಜೇಂದ್ರ ಸಿಂಹ ಚತುರ್ವೇದಿ ಮಂಗಳ ಎಂಬುದಾಗಿ ಕರೆದಿದ್ದಾರೆ. ಮಳೂರು ಒಂದು ಪ್ರಮುಖ ವೈಷ್ಣವ ಕೇಂದ್ರವಾಗಿತ್ತು. ವಿಶಿಷ್ಟಾದ್ವೈತ ಸ್ಥಾಪನಾಚಾರ್ಯ ರಾಮಾನುಜಾಚಾರ್ಯರು ಇಲ್ಲಿ ಹಲವು ದಿನಗಳ ಕಾಲ ಇದ್ದರೆಂಬ ಪ್ರತೀತಿ ಇದೆ. ಭಾರತದ ಹಿಂದೂ ಕಾನೂನಿನ ಮೂಲಾಧಾರವಾಗಿರುವ ಮಿತಾಕ್ಷರವನ್ನು ವಿಜ್ಞಾನೇಶ್ವರರು ಬರೆದಿದ್ದು ಇಲ್ಲಿಯೇ ಎಂಬ ಅಭಿಪ್ರಾಯಗಳಿವೆ.

ಇಲ್ಲಿ ಕೈಲಾಸ ಮತ್ತು ಅಪ್ರಮೇಯ ದೇವರುಗಳ ಎರಡು ಆಲಯಗಳಿವೆ. ಕೈಲಾಸೇಶ್ವರ ದೇವಾಲಯವನ್ನು ಅಗ್ರಹಾರವನ್ನು ಸ್ಥಾಪಿಸಿದ ಸಂದರ್ಭದಲ್ಲಿಯೇ ನಿರ್ಮಿಸಿರಬಹುದು. ಈ ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ ಇವೆ. ಗರ್ಭಗೃಹ, ಸುಕನಾಸಿ ಚೋಳರ ಶೈಲಿಯವು. ನವರಂಗವೂ ಸೇರಿದಂತೆ ಈ ಭಾಗಗಳ ಹೊರ ಗೋಡೆಯ ಮೇಲೆ ಅನೇಕ ತಮಿಳು ಶಾಸನಗಳಿವೆ. ನವರಂಗದಲ್ಲಿರುವ ನಾಲ್ಕು ಕಂಬಗಳು ಮತ್ತು ಆರು ಅಂಗಣಗಳ ಮುಖ ಮಂಟಪವು ಬಹುಶಃ ಮುಮ್ಮಡಿ ಬಲ್ಲಾಳನು ನಿರ್ಮಿಸಿರುವ ಸಾಧ್ಯತೆ ಇದೆ.

ಅಪ್ರಮೇಯ ದೇವಾಲಯ ಊರಿನ ಮುಖ್ಯ ದೇವಾಲಯ. ತಲಕಾಡಿನಲ್ಲಿದ್ದ ಚೋಳ ಅಧಿಕಾರಿ ಅಪ್ರಮೇಯ ನಿರ್ಮಿಸಿದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ.[೯೨] ದೇವಾಲಯದ ಮಹಾದ್ವಾರವು ವಿಜಯನಗರ ಶೈಲಿಯ ರಚನೆ ಹೊಂದಿದೆ. ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಒಳಭಾಗದಲ್ಲಿ ಸುತ್ತಲೂ ೩ ಅಂಕಣ ಆಳದ ಕೈಸಾಲೆ ಇದೆ. ಕೈಸಾಲೆಯ ಹಿಂಭಾಗವನ್ನು ಕೆಲವೆಡೆ ಕೋಣೆಗಳಾಗಿ ವಿಂಗಡಿಸಿ, ಅಲ್ಲಿ ಜೀಯರ್, ನಮ ಆಳ್ವಾರ್, ಮದಪಳ್ಳಿನಾಚಾರ್, ತಿರುಮಂಗೈ ಆಳ್ವಾರ್, ದೇಶಿಕ, ಕೂರತ್ತಾಳ್ವರ್, ಪಿಳ್ಳೈಲೋಕಾಚಾರ್ಯ ಮತ್ತು ಬಾಲಕೃಷ್ಣನ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಅಂಬೆಗಾಲಿಟ್ಟುಕೊಂಡು, ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಸುಂದರ ಬಾಲಕೃಷ್ಣನ ಶಿಲಾಕೃತಿಯಿದೆ. ಈ ದೇವರಿಗೆ ಮಕ್ಕಳಿಲ್ಲದ ಹೆಂಗಸರು ತೊಟ್ಟಿಲು ಸೇವೆ ಮಾಡಿದರೆ ಮಕ್ಕಳಾಗುತ್ತನೆಂಬುದು ಸ್ಥಳೀಯರ ನಂಬಿಕೆ. ಅಪ್ರಮೇಯ ದೇವಾಲಯದ ಮೂಲ ಕಟ್ಟಡವು ಚೋಳರ ಕಾಲದ ಸುಂದರ ರಚನೆಯಾದರೂ ನಂತರ ಕಾಲದಲ್ಲಿ ದುರಸ್ತಿಗೆ ಒಳಗಾಗಿ ನವೀಕೃತಗೊಂಡಿದೆ. ಮುಂದಿನ ಸುಕನಾಸಿ ಮತ್ತು ನವರಂಗಗಳಲ್ಲಿನ ಕಂಬಗಳು ಮತ್ತು ಶಿಲ್ಪಗಳು ೧೬ನೇ ಶತಮಾನದ ವಿಜಯನಗರ ಶೈಲಿಯವು. ಈ ದೇವಾಲಯವು ಸುತ್ತಲಿನ ಪ್ರದೇಶದಲ್ಲೇ ದೊಡ್ಡ ಗುಡಿಯಾಗಿದೆ.

ಬಿಸಗೂರು (ಮಾ)

ಬಿಸನೂರು ಗಂಗರ ಕಾಲದಲ್ಲಿ ಜೈನರ ಪವಿತ್ರ ಸ್ಥಳವಾಗಿತ್ತು. "ಎಪ್ಪತ್ತೈದು ಬಸದಿಗಳಿದ್ದ ಬಿಸ್ಕೂರಿಗೆ

ಬಸ್ತೂರು ಎಂಬ ಹೆಸರಿತ್ತು. ಜಿನಾಲಯಗಳು ಶಿವಾಲಯಗಳಾಗಿರುವ ಪ್ರಾಕ್ಚಾರಿತ್ರ ಕುರುಹುಗಳನ್ನುಳಿದು ಯಾವ ಬಸದಿಯೂ ಉಳಿದಿಲ್ಲ”[೯೩] ಮಾಗಡಿ ತಾಲೂಕಿನ ಕುಪ್ಪೆಪಾಳ್ಯದಲ್ಲಿ ಸಿಕ್ಕಿರುವ ಶಾಸನದಲ್ಲಿ ಗಂಗರ ಸೈಗೊಟ್ಟ ಶಿವಮಾರನು “ಶಿವಮಾರ ಜೇರ್ರೊ ಕುಣಿಗಿಲ್ನಾಡಾಳೆ ಬಿಸಿಗೂರೊಳೆ ಬಾಳ್ವ ಪ್ರಜೆಗೆಲ್ಲಾಂ ಕೊಟ್ಟುದು ಕಟ್ಟಾಣಿ ಮರ್ಯಾದೆ” ಎಂದು ತಿಳಿಸುತ್ತದೆ. ಬಿಸ್ಕೂರಿನಲ್ಲಿ ಬಾಳುವ ಪ್ರಜೆಗಳಿಗೆಲ್ಲ ಕೊಟ್ಟಿರುವ ಶ್ರೇಷ್ಠ ಮರ್ಯಾದೆ ಯಾವುದು? ಎಂಬುದು ಕಾಲ ಗರ್ಭದಲ್ಲಿ ಮುಚ್ಚಿಹೋಗಿದೆ.

ಬೇವೂರು (ಚ)

ಚನ್ನಪಟ್ಟಣ ತಾಲೂಕಿನ ಪುರಾತನ ಜೈನಕೇಂದ್ರವಾಗಿದ್ದು ಇದನ್ನು ಸ್ಥಳೀಯವಾಗಿ ‘ಕುಡಿಕೆ ಬೇವೂರು’ ಎಂದು ಕರೆಯುತ್ತಾರೆ. ಊರಿನ ತಿಮ್ಮಪ್ಪನ ಬೆಟ್ಟದಲ್ಲಿರುವ ಕ್ರಿ.ಶ.೯೦೦ರ ಶಾಸನವು ಈ ಊರನ್ನು ‘ನಿಂಬಗ್ರಾಮ’ವೆಂದು ಕರೆದಿದೆ. “ನಿಂಬ ಗ್ರಾಮವೆಂಬ ಉಲ್ಲೇಖವು ಈ ಊರಿನ ಸ್ಥಳನಾಮ, ಬೇವಿನಮರದಿಂದ ಬಂದಿರಬೇಕೆಂದು ಸ್ಪಷ್ಟವಾಗಿ ತಿಳಿಸುತ್ತದೆ”.[೯೪] ಅನಂತರ ೧೩೩೧ರ ಹೊಯ್ಸಳ ೩ನೇ ಬಲ್ಲಾಳನ ಶಾಸನದಲ್ಲಿ ಇದನ್ನು ‘ಬೆಹೂರ’ ಎಂದು ಕರೆದಿವೆ. ಈ ಸ್ಥಳದಲ್ಲಿ ಹಿಂದಿನ ಕಾಲದಿಂದಲೂ ಕುಂಬಾರರಿದ್ದು, ಮಣ್ಣಿನ ಮಡಿಕೆ-ಕುಡಿಕೆಗಳನ್ನು ತಯಾರಿಸುತ್ತಿದುದ್ದರಿಂದ ಈ ಸ್ಥಳಕ್ಕೆ ‘ಕುಡಿಕೆ ಬೇವೂರು’ ಎಂದು ಹೆಸರಿಸಿದೆ. ಹಾಗೂ ಇದು ಜೈನರ ಕೇಂದ್ರವಾಗಿತ್ತು ಎಂಬ ಉಲ್ಲೇಖವಿದೆ. ಜೈನ ಮುನಿಗಳ ಸಮೂಹ ಇಲ್ಲಿ ಸಿದ್ಧಿಪಡೆದರೆಂದು, ಶಾಂತಿಸೇನ, ಚಂದ್ರಸೇನ ಮೊದಲಾದ ಜೈನಮುನಿಗಳು ಸಂಧಿಕಾವಟ ಗ್ರಾಮದಿಂದ ಬಂದವರೆಂದು ತಿಳಿಸುತ್ತದೆ.

ತಿಮ್ಮಪ್ಪನ ದೇವಾಲಯವು ಕ್ರಿ.ಶ.೧೫೭೯ರಲ್ಲಿ ಮಹತ್ತು ಮಲ್ಲಿಕಾರ್ಜುನದೇವನೆಂಬುವರ ಶಿಷ್ಯ ಬೆಟ್ಟದ ಒಡೆಯನಿಂದ ನಿರ್ಮಾಣಗೊಂಡಿರುವ ಮಾಹಿತಿ ಶಾಸನದಲ್ಲಿದೆ. ಸಿದ್ಧರಾಮೇಶ್ವರ ಬೆಟ್ಟದ ಸಿದ್ಧರಾಮೇಶ್ವರ ದೇವಾಲಯವು ಸಾಧಾರಣ ಕಟ್ಟಡ ಹೊಂದಿದೆ. ದೇವಾಲಯ ದಕ್ಷಿಣಕ್ಕಿರುವ ಭಗ್ನವಾದ ವೀರಗಲ್ಲು ಶಾಸನವು ಕ್ರಿ.ಶ. ೧೧೯೬ರಲ್ಲಿ ವೀರಬಲ್ಲಾಳನ ಆಳ್ವಿಕೆಯಲ್ಲಿ ಕಿಳೈನಾಡಿನ ಕೆಲವು ಅಧಿಕಾರಿಗಳಿಗೆ ನೀಡಿದ ಸೈನಿಕ ಸಹಾಯವನ್ನು ಉಲ್ಲೇಖಿಸುತ್ತದೆ. ಗ್ರಾಮದಲ್ಲಿ ಉಸಾಲಮ್ಮ, ಚೌಡೇಶ್ವರಿ, ಶ್ರೀರಾಮ, ಮಾರಮ್ಮ ಮತ್ತು ಕೆಂಪಮ್ಮನ ದೇವಾಲಯಗಳಿವೆ.

ಮಳೂರು ಪಟ್ನ (ಚ)

ಚನ್ನಪಟ್ಟಣದಿಂದ ೮.ಕಿ.ಮೀ. ದೂರದ ಮಳೂರು ಪಟ್ಟಣವು ಗಂಗರ ಕಾಲದಿಂದಲೂ ಪ್ರಸಿದ್ಧವಾದ ಸಾಂಸ್ಕೃತಿಕ ಸ್ಥಳವಾಗಿದೆ. ಗಂಗರು, ಚೋಳರು, ಹೊಯ್ಸಳರ ಕಾಲಗಳಲ್ಲಿ ಪ್ರಮುಖ ಅಗ್ರಹಾರವಾಗಿದ್ದಂತೆ ಕಂಡುಬರುತ್ತದೆ. ಚೋಳರ ಶಾಸನಗಳಲ್ಲಿ ರಾಜೇಂದ್ರಸಿಂಹ ಚತುರ್ವೇದಿ ಮಂಗಳಂ ಮತ್ತು ನಿಗರಿಲಿ ಚೋಳಪುರಂನ ಅಧೀನದಲ್ಲಿರುವ ಮಣಲೂರು ಎಂದು ಉಲ್ಲೇಖಿಸಲಾಗಿದೆ.

ಇಲ್ಲಿನ ಅಮೃತೇಶ್ವರ ದೇವಾಲಯವು ಗಂಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗಗಳನ್ನು ಈ ದೇವಾಲಯವು ಹೊಂದಿದೆ. ಚೋಳರ ಶಾಸನಗಳಲ್ಲಿ

ಈ ದೇವಾಲಯವನ್ನು 'ಅರುಮೋಳಿದೇಶ್ವರ' ಎಂದು ಕರೆದಿದ್ದು; ನಂತರದಲ್ಲಿ ಅಮೃತೇಶ್ವರ ಎಂದು ಕರೆದಿರಬಹುದು. ನವರಂಗವನ್ನು ಹೊಯ್ಸಳ ಮೊದಲನೇ ನರಸಿಂಹನ ಕಾಲದಲ್ಲಿ ರಚನೆಗೊಂಡಿರಬೇಕೆನ್ನುವ ಅಭಿಪ್ರಾಯವಿದೆ. ಈ ದೇವಾಲಯದ ಪಕ್ಕದಲ್ಲಿಯೇ ನಾರಾಯಣಸ್ವಾಮಿ ದೇವಾಲಯದ್ದು; ಚೋಳರ ರಚನೆಯಾಗಿದೆ. ಕ್ರಿ.ಶ.೧೦೦೭ರಲ್ಲಿ ರಾಜರಾಜ ಚೋಳನು ಜಯಗೊಂಡ ಚೋಳ ವಿನ್ನಾಗರ್ ಎಂಬ ದೇವರನ್ನು ನಿಗರಿಲಿ ಚೋಳಪುರಂನಲ್ಲಿ ಪ್ರತಿಷ್ಠಾಪಿಸಿದ ಬಗ್ಗೆ ಶಾಸನೋಲ್ಲೇಖವಿದೆ. ಗರ್ಭಗೃಹ, ಅರ್ಧಮಂಟಪ, ನವರಂಗಗಳು ಚೋಳರ ಶೈಲಿಯನ್ನು ಹೊಂದಿವೆ. ಗರ್ಭಗೃಹದಲ್ಲಿನ ವಿಷ್ಣು ಅಥವಾ ಜನಾರ್ಧನನ ವಿಗ್ರಹ ವಿಜಯನಗರ ಶೈಲಿಯನ್ನು ಹೋಲುತ್ತದೆ.

ವರದರಾಜ ದೇವಾಲಯ, ಚೌಡೇಶ್ವರಿ ದೇವಾಲಯ, ಈಶ್ವರ ದೇವಾಲಯ ಹಾಗೂ ಪುರಾತನವಾದ ಆಂಜನೇಯ ದೇವಾಲಯಗಳಿವೆ.

ಮಂಕುಂದ (ಚ)

ಚನ್ನಪಟ್ಟಣದಿಂದ ೧೦ ಕಿ.ಮಿ. ದೂರದ ಮಂಕುಂದ ಗಂಗರ ದ್ವಿತೀಯ ರಾಜಧಾನಿಯಾಗಿತ್ತು. ಗಂಗರ ಭೂವಿಕ್ರಮ ಮತ್ತು ಸೈಗೊಟ್ಟ ಶಿವಮಾರರು ಮಂಕುಂದವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇಲ್ಲಿ ದೊರೆತಿರುವ ಕ್ರಿ.ಶ.೯೦೭ರ ನೀತಿಮಾರ್ಗನ ಶಾಸನದಲ್ಲಿ ಈ ಊರನ್ನು 'ಮುಂಕುಂದ' ಎಂದೇ ಉಲ್ಲೇಖಿಸಲಾಗಿದೆ. ಇದು ನೇಗಿಲು ಹಾಗೂ ಕೃಷಿ ತೆರಿಗೆಗಳಿಗಾಗಿ ಕಡಲೂರು ಮತ್ತು ಭೋಲರಿಯೂರು ಗ್ರಾಮಗಳನ್ನು ದಾನವಾಗಿ ನೀಡಿದ ಬಗ್ಗೆ ತಿಳಿಸುತ್ತದೆ. ಇಲ್ಲಿ ವೀರಭದ್ರ, ಆಂಜನೇಯ, ಮಾರಮ್ಮ, ಸೋಮೇಶ್ವರನ ದೇವಾಲಯವಿದ್ದು, ಸೋಮೇಶ್ವರ ದೇವಾಲಯವು ಗಂಗರ ವಾಸ್ತುಶೈಲಿಯನ್ನು ಒಳಗೊಂಡ ದೇವಾಲಯವಾಗಿದೆ.

ಮಾಗಡಿ (ಮಾ)

ಬೆಂಗಳೂರಿನಿಂದ ೫೧ ಕಿ.ಮೀ. ಹಾಗೂ ಜಿಲ್ಲಾಕೇಂದ್ರ ರಾಮನಗರದಿಂದ ಉತ್ತರಕ್ಕೆ ೩೩.ಕಿ.ಮೀ. ಇರುವ ಮಾಗಡಿ ಇತಿಹಾಸ ಪ್ರಸಿದ್ಧ ಸ್ಥಳ. ಸುಮಾರು ಕ್ರಿ.ಶ.೧೧೩೯ರಲ್ಲಿ ಚೋಳ ರಾಜನೊಬ್ಬನು ಮಾಗಡಿಯನ್ನು ಸ್ಥಾಪಿಸಿದನೆಂದು ಹೇಳುವ ಪ್ರತೀತಿ ಇದೆ. ನಂತರ ಹೊಯ್ಸಳರ ಆಳ್ವಿಕೆಗೆ ಒಳಪಟ್ಟು ನಂತರದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತು. ವಿಜಯನಗರದ ಅರಸ ಅಚ್ಯುತರಾಯನು ಸಾಮಂತರಾಯನನ್ನು ಈ ಭಾಗದ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು. ಇವನು ನಗರವನ್ನು ವಿಸ್ತರಿಸಿ ಸಾವನದುರ್ಗದ ಬೆಟ್ಟದ ಮೇಲೆ ಕೋಟೆ ಕಟ್ಟಿಸಿ ಬಲಪಡಿಸಿದ್ದರಿಂದ ಸಾಮಂತ ರಾಯನಿಗೆ ಜಹಗೀರಾಗಿ ದೊರೆಯಿತು. ಇವನು ಕ್ರಿ.ಶ.೧೫೪೩ರಿಂದ ೧೫೭೧ರ ವರೆಗೆ ಆಳಿ; ಅವನ ಮಗ ಸಂಪರಾಜ ೧೭ವರ್ಷ ಆಳ್ವಿಕೆ ಮಾಡಿದ. ಇವನು ತಿರುಮಲೆಯ ರಂಗಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ. ಇವನ ಮಗ ಚಿಕ್ಕರಾಯ ೧೬ವರ್ಷ ಆಳ್ವಿಕೆ ಮಾಡಿದ. ಇವನಿಗೆ ಮಕ್ಕಳಿರಲಿಲ್ಲವಾದ್ದರಿಂದ ವಿಜಯನಗರದ ಸಾಮ್ರಾಟನು ತನ್ನ ಪ್ರತಿನಿಧಿಯನ್ನಿರಿಸಿದ್ದನು. ಆದರೆ; ೧೬೨೩ರಲ್ಲಿ ಗುಡೇಮಾರನಹಳ್ಳಿಯ ತಳಾರಿ

ಗಂಗಪ್ಪನಾಯಕನು ವಿಜಯನಗರದ ಪ್ರತಿನಿಧಿಯನ್ನು ಸದೆ ಬಡಿದು ಮಾಗಡಿ, ಸಾವನದುರ್ಗವನ್ನು ವಶಪಡಿಸಿಕೊಂಡರೂ, ವಿಜಯನಗರದ ನಿರೂಪದಂತೆ ಬೆಂಗಳೂರಿನ ಇಮ್ಮಡಿ ಕೆಂಪೇಗೌಡನು ತಳಾರಿ ಗಂಗಪ್ಪನನ್ನು ಕೊಂದು ಮಾಗಡಿಯನ್ನು ವಶಪಡಿಸಿಕೊಂಡನು. ಇಮ್ಮಡಿ ಕೆಂಪೆಗೌಡ ೧೪ವರ್ಷ ಕಾಲ ಬೆಂಗಳೂರು ಮತ್ತು ಮಾಗಡಿಯನ್ನು ಆಳಿದ. ಅಲ್ಲಿ ಇವನು ಬಲವಾದ ಕೋಟೆಕಟ್ಟಿಸಿ ಕಂದಕಗಳನ್ನು ತೋಡಿಸಿ ದೇಗುಲ, ಕೆರೆಕಟ್ಟೆಗಳನ್ನು ಕಟ್ಟಿಸಿ ಜನರು ನೆಲೆಸುವಂತೆ ಮಾಡಿದನು. ೧೬೩೮ರಲ್ಲಿ ಬೆಂಗಳೂರನ್ನು ರಣದುಲ್ಲಾಖಾನನು ಆಕ್ರಮಿಸಿದ ತರುವಾಯ ಇಮ್ಮಡಿ ಕೆಂಪೇಗೌಡ ಮಾಗಡಿಯಿಂದಲೇ ತನ್ನ ಆಡಳಿತ ನಡೆಸಿದ್ದರಿಂದ ಇವನ ನಂತರ ಮಾಗಡಿ ಕೆಂಪೆಗೌಡರೆಂಬ ಹೆಸರು ಪ್ರಾಪ್ತವಾಯಿತು. ೧೭೨೮ರ ವರೆಗೆ ಮಾಗಡಿ ಕೆಂಪೇಗೌಡರ ವಂಶಸ್ಥರ ಕೈಯಲ್ಲಿದ್ದ ಮಾಗಡಿ ಪ್ರಾಂತ್ಯವು ಅನಂತರ ಮೈಸೂರಿನ ದಳವಾಯಿ ದೇವರಾಜ ಸಾವನದುರ್ಗವನ್ನು ವಶಪಡಿಸಿಕೊಂಡಾಗ ಆಗ ಅರಸನಾಗಿದ್ದ ಮುಮ್ಮಡಿ ಕೆಂಪವೀರಗೌಡನನ್ನು ಸೋಲಿಸಿ ಅವನನ್ನು ಶ್ರೀರಂಗಪಟ್ಟಣದಲ್ಲಿ ಬಂಧಿಯಾಗಿಟ್ಟು, ಕೆಂಪಗೌಡ ಅಲ್ಲಿಯೇ ಕೊನೆಯುಸಿರೆಳೆದನು. ೧೭೯೧ರಲ್ಲಿ ಮಾಗಡಿ ಬ್ರಿಟೀಷರ ವಶವಾಯಿತು. ಮುಂದೆ ೧೮೦೮ರಲ್ಲಿ ಹುಸೇನಖಾನ ಮಾಗಡಿಯ ಕಿಲ್ಲೇದಾರನಾಗಿದ್ದು, ೧೮೪೧-೧೮೪೪ರ ವರೆಗೆ ಅವನ ಮಗ ಫಕ್ರುದ್ದೀನ್‌ಖಾನ್ ಕಿಲ್ಲೇದಾರನಾಗಿದ್ದನು.

ರಾಮನಗರ (ರಾ)

ರಾಮನಗರವನ್ನು ೧೭೯೯-೧೮೦೦ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು; ಮೈಸೂರು ಸಂಸ್ಥಾನದ ಮೊದಲ ಆಂಗ್ಲ ರೆಸಿಡೆಂಟ್ ಆದ ಕರ್ನಲ್ ಕ್ಲೋಸ್‌ನ ಮೇಲಿನ ವಿಶ್ವಾಸಕ್ಕಾಗಿ ಮೈಸೂರಿನ ದಿವಾನರಾದ ಭಕ್ಷಿ ಬಾಲಾಜಿ ರಾಯರ ನೇತೃತ್ವದಲ್ಲಿ ಕ್ಲೋಸ್ ಪೇಟೆಯನ್ನು ನಿರ್ಮಿಸಿದರು. ಕ್ಲೋಸ್‌ಪೇಟೆಯೇ ಇಂದಿನ ರಾಮನಗರ. ೧೯೪೯ರಲ್ಲಿ ಕ್ಲೋಸ್‌ಪೇಟೆಯನ್ನು ರಾಮನಗರವೆಂದು ನಾಮಕರಣ ಮಾಡಲಾಯಿತು.

ಐತಿಹಾಸಿಕವಾಗಿ ರಾಮನಗರ ಪ್ರದೇಶವನ್ನು "ಕೆಳಗಲಿ ನಾಡರ್ಗಲ್ಲು, ಕೆಳ್ಗಲಿನಾಡು, ಕಿಳಲೈನಾಡು, ಕಲುವಳಿನಾಡು, ಕಲುವೊಳೆನಾಡು, ಕೆಲಳಿನಾಡು, ಶಿವರಾಮಗಿರಿ, ರಾಮಗಿರಿ, ರಾಮಗಿರಿದುರ್ಗ, ಹೊಸಪೇಟೆ, ನವೀನಪೇಟೆ ಇತ್ಯಾದಿ ಹೆಸರುಗಳಿದ್ದ ಉಲ್ಲೇಖಗಳಿವೆ"[೯೫]. ರಾಮಗಿರಿ ಪ್ರದೇಶವನ್ನು ಐಜೂರಿನ ೭೫೦ರ ಶಾಸನದಲ್ಲಿ ಗಂಗರು ಆಳುತ್ತಿದ್ದ ಉಲ್ಲೇಖವಿದೆ.

೯ನೇ ಶತಮಾನದಲ್ಲಿಯೂ ಗಂಗರ ನೀತಿಮಾರ್ಗನು ರಾಮಗಿರಿ ಪ್ರದೇಶವನ್ನು ಆಳಿದ ಬಗ್ಗೆ ಐಜೂರಿನಲ್ಲಿ ದೊರೆತ ಒಂದನೇ ನೀತಿಮಾರ್ಗನ ಶಾಸನದಿಂದ ತಿಳಿಯುತ್ತದೆ. "ಐದೂರು (ಐಜೂರು) ಆಗ ಪ್ರಸಿದ್ಧಗ್ರಾಮ ಸಂಕೀರ್ಣವಾಗಿ ಬೆಳೆದ ಪಟ್ಟಣವಾಗಿರಬಹುದು. ಕಲ್ಲೂರು, ಜಿಗೇನಹಳ್ಳಿ, ಓಜೂರು (ಅರ್ಚಕರಹಳ್ಳಿ), ಕೆಂಪನಹಳ್ಳಿ ಹಾಗೂ ಇನ್ನೊಂದು ಗ್ರಾಮಸೇರಿ 'ಐದೂರು' ಎನಿಸಿಕೊಂಡಿರುವಂತಿದೆ ಅದೊಂದು ಗ್ರಾಮಸಂಕೀರ್ಣವಾಗಿತ್ತು. ಕ್ರಿ.ಶ.೧೦೦೧ರಲ್ಲಿ ಗಂಗರನ್ನು ಚೋಳರು ಸೋಲಿಸಿದಾಗ ಚನ್ನಪಟ್ಟಣ ರಾಜೇಂದ್ರ ಚೋಳನ ಮುಖ್ಯಪಟ್ಟಣವಾಯಿತು. ಐದೂರು ಪ್ರದೇಶ ತನ್ನ ಪ್ರಾಮುಖ್ಯತೆಯನ್ನು ಚೋಳರ ಅವಧಿಯಲ್ಲಿ ಕೆಲಕಾಲ ಕಳೆದುಕೊಂಡಂತೆ ತೋರುತ್ತದೆ"[೯೬].

ನಂತರ ೧೩ನೇ ಶತಮಾನದಲ್ಲಿ ಹೊಯ್ಸಳರ ಆಳ್ವಿಕೆಗೆ ಸೇರಿದ ಪ್ರದೇಶವಾಗಿತ್ತು. ವಿಜಯನಗರ ಸಾಮ್ರಾಜ್ಯವನ್ನು ಹರಿಹರ-ಬುಕ್ಕರು ಸ್ಥಾಪಿಸುವುದಕ್ಕೂ ಮೊದಲು ಹರಿಹರ-ಬುಕ್ಕರಾಯರು ರಾಮಗಿರಿ ಪ್ರದೇಶದ ಪಾಳೆಯಗಾರರಿರಬೇಕೆನ್ನುವ ರಾಮದೇವರ ಬೆಟ್ಟದ ಕೋಟೆಯ ಚಪ್ಪಡಿ ಶಾಸನ ಮತ್ತು ಜಾಲಮಂಗಲ ಸೋಮೇಶ್ವರ ಗುಡಿಯ ೧೩೦೫ರ ಶಾಸನವು ಹಕ್ಕಬುಕ್ಕರು ಈ ಪ್ರದೇಶದಲ್ಲಿದ್ದರು ಎಂಬುದಕ್ಕೆ ಪುಷ್ಟಿ ನೀಡಿದಂತಾಗುತ್ತದೆ.

“ಓರಂಗಲ್ಲಿನ ಪ್ರತಾಪರುದ್ರನ ಆಳ್ವಿಕೆಗೆ ಕ್ರಿ.ಶ.೧೩೧೬ರ ಸಮಯದಲ್ಲಿ ಮಾಗಡಿ ಪ್ರದೇಶ ಸೇರಿತ್ತು. ಹಕ್ಕಬುಕ್ಕರು ಈ ಪ್ರತಾಪರುದ್ರನಲ್ಲಿ ಭಂಡಾರಿಗಳಾಗಿದ್ದನ್ನು ಇತಿಹಾಸ ಹೇಳುತ್ತದೆ. ಹಾಗೆ ಅವನಲ್ಲಿಗೆ ಹೋಗುವ ಮುನ್ನ ರಾಮನಗರ-ಮಾಗಡಿ ಪ್ರದೇಶದಲ್ಲಿದ್ದ ಜನಪ್ರಿಯ ನಾಯಕರಾಗಿದ್ದ ಹಕ್ಕ-ಬುಕ್ಕರು ಪ್ರತಾಪರುದ್ರನ ಕಣ್ಣಿಗೆ ಬಿದ್ದು ಓರಂಗಲ್ಲಿಗೆ ಭಂಡಾರಿಗಳಾಗಿ ಹೋಗಿ (ಕ್ರಿ.ಶ.೧೩೧೬-೧೩೨೩) ಅದರ ಪತನವಾಗುವವರೆಗೂ ಅಲ್ಲಿದ್ದು; ಕ್ರಿ.ಶ.೧೩೦೫-೧೩೨೩ರ ಅವಧಿಯಲ್ಲಿ ಕಾಳಾಮುಖ ಶೈವ ಪ್ರಭಾವದಲ್ಲಿ ಬಂದ ಹಕ್ಕಬುಕ್ಕರು ‘ಕ್ರಿಯಾಶಕ್ತಿ’ಯನ್ನು ತಮ್ಮ ಕುಲಗುರುವನ್ನಾಗಿಸಿಕೊಂಡು ತ್ರಿಯಂಬಕ ಹೆಸರಿನ ಮೂಲದ ‘ಬುಕ್ಕ’ಶಬ್ದವನ್ನು ತಮ್ಮ ಮನೆತನದ ವ್ಯಕ್ತಿಗಳಿಗೆ ಬಳಕೆಗೊಳಿಸಿದರೆನಿಸುತ್ತದೆ. ವಿಜಯನಗರ ಸ್ಥಾಪನೆಯ ಸಂದರ್ಭಕ್ಕೆ ಈ ಕ್ರಿಯಾಶಕ್ತಿಯ ನೆರವನ್ನು ಮುಖ್ಯವಾಗಿ ಬಳಸಿಕೊಂಡರು. ಬಲವಂತ ಮತಾಂತರಗೊಂಡಿದ್ದ ಹಕ್ಕಬುಕ್ಕರನ್ನು ವೀರಶೈವ ಧರ್ಮದೀಕ್ಷೆ ನೀಡಿ ಹಿಂದೂಧರ್ಮಕ್ಕೆ ಮತ್ತೆ ೧೩೩೬ರ ಸಮಯದಲ್ಲಿ ಒಳಗು ಮಾಡಿದವನು ಈ ಕ್ರಿಯಾಶಕ್ತಿಯೆ, ನಂತರ ವಿದ್ಯಾರಣ್ಯರ ನೆರವು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಹಕ್ಕಬುಕ್ಕರಿಗೆ ಒದಗಿತು. ಕ್ರಿಯಾಶಕ್ತಿ ಹಾಗೂ ವಿದ್ಯಾರಣ್ಯರ ನೆರವಿನಿಂದ ಕನ್ನಡಿಗ ಹರ-ಹರಿಗಳು ವಿಜಯನಗರ ಸಾಮ್ರಾಜ್ಯ ಸ್ಥಾಪಿಸಲು ಅನುವಾಯಿತು”.[೯೭] ವಿಜಯನಗರ ಸಂಸ್ಥಾಪಕರ ಮೂಲ ಸ್ಫೂರ್ತಿಯ ನೆಲೆ, ರಾಮನಗರ-ಮಾಗಡಿ ಪ್ರದೇಶವಾಗಿತ್ತು; ಈ ಕಾರಣಕ್ಕೆ ರಾಮದೇವರ ಬೆಟ್ಟದಲ್ಲಿ ಅವರ ಕುಲಗುರುವಿನ ಆರಾಧ್ಯದೇವರ ಮಠದ (ತ್ರಿಯಂಬಕ ಮಠ) ನಿರ್ಮಾಣವಾಯಿತು. ಇದರಿಂದ ಸಂಗಮ ವಂಶದ ಮೊದಲ ಪಾಳೆಪಟ್ಟು ರಾಮಗಿರಿ ಪ್ರದೇಶವಾಗಿದೆ.

೧೩೫೧ರ ವೇಳೆಗೆ ವಿಜಯನಗರದ ಅಧೀನ ಪಾಳೆಯಗಾರನಾಗಿ ಬೆಟ್ಟದ ಬೊಮ್ಮಯ್ಯನಾಯಕ ಕೋಟೆಕಟ್ಟಿ ರಾಮಗಿರಿಯ ಮೇಲಿದ್ದಿರಬೇಕು. ಆಯಕಟ್ಟಿನ ವ(ಧ)ನ ಕುಂಬಿಯ ನೆಲೆಯಲ್ಲಿ ಒಂದು ಕೋಟೆ ಕಟ್ಟಿಕೊಂಡು ನಿಧಿ ಕೂಡಿಟ್ಟುಕೊಂಡು ಬಲಶಾಲಿಯಾಗಿದ್ದ ಅವನು ಬಚ್ಚಿಟ್ಟಿದ್ದ ಹಣ ಮುಂದೆ ಮಾಗಡಿಯ ಹಿರಿಯ ಕೆಂಪೇಗೌಡನಿಗೆ ದೊರೆತಾಗ ಈ ನೆಲೆಗೆ ‘ಧನಕುಂಬಿ’ ಎಂಬ ಹೆಸರು ಬಂದಿರಬಹುದು. ಆ ಕಾಲಕ್ಕೆ ರಾಮಗಿರಿಯು ದಟ್ಟ ಕಾಡಿನಿಂದ ಕೂಡಿದ್ದರಿಂದ ‘ವನಕುಂಬಿ’ ಎಂದು ಹೆಸರು ಬರಲು ಕಾರಣವಿರಬಹುದು.

ರಾಮಗಿರಿಯಲ್ಲಿ ಹಿರಿಯ ಕೆಂಪೇಗೌಡನಿಗೆ ದ್ರವ್ಯಸಿಕ್ಕಿದ್ದರಿಂದ ಏಳುಸುತ್ತಿನ ಕೋಟೆ ಕಟ್ಟಿಸಿ, ಶಿವಾಲಯ ಪ್ರತಿಷ್ಠಾಪಿಸಿದ ಹಾಗೂ ಸೀತಾರಾಮ ಲಕ್ಷ್ಮಣರ ಉತ್ಸವ ವಿಗ್ರಹ ಪ್ರತಿಷ್ಠಾಪಿಸಿದ. ಬೆಂಗಳೂರು ಭಾಗದಲ್ಲಿ ಹೊಸಪಟ್ಟಣ ಕಟ್ಟಲಾರಂಭಿಸಿದರಿಂದ ಸೋದರ ಬಸವಯ್ಯನನ್ನು ರಾಮಗಿರಿಯ ರಕ್ಷಣೆಗಿತ್ತನು. ಚನ್ನಪಟ್ಟಣದ

ಜಗದೇವರಾಯ ರಾಮಗಿರಿಗೆ ಮುತ್ತಿಗೆ ಹಾಕಿದಾಗ ಬಸವಯ್ಯ ಜಯಗಳಿಸಿದನು. ಮುಂದಿನ ರಕ್ಷಣೆಗೆ ಬಸವಯ್ಯನನ್ನೇ ಸೈನ್ಯ ಸಮೇತ ಅಲ್ಲಿ ರಕ್ಷಣೆಗಿರಿಸಿದನು. ಹಿರಿಯ ಕೆಂಪೇಗೌಡನು ಕೋಟೆ ಕಟ್ಟಿದ್ದರಿಂದ ರಾಮಗಿರಿ 'ರಾಮಗಿರಿ ದುರ್ಗ' ಎನಿಸಿರಬೇಕು. ಇಂತಹ ಆಯಕಟ್ಟಿನ ನೆಲೆಯಾದ ರಾಮಗಿರಿದುರ್ಗವನ್ನು ಕ್ರಿ.ಶ.೧೬೩೮-೩೯ರಲ್ಲಿ ರಣದುಲ್ಲಾಖಾನನು ಕೆಂಪೇಗೌಡನನ್ನು ಸೋಲಿಸಿ ರಾಮಗಿರಿದುರ್ಗವನ್ನು ವಶಪಡಿಸಿಕೊಂಡನು. ಕ್ರಿ.ಶ.೧೬೪೫ರಲ್ಲಿ ಇಮ್ಮಡಿ ಕೆಂಪೆಗೌಡನು ಈ ಗಿರಿದುರ್ಗವನ್ನು ಮತ್ತೆ ತನ್ನ ವಶಕ್ಕೆ ಪಡೆದುಕೊಂಡನು.

ಕ್ರಿ.ಶ.೧೬೭೭ರ ಹೊತ್ತಿಗೆ ಚಿಕ್ಕ ದೇವರಾಜ ಒಡೆಯರು ಮಾಗಡಿ ಪ್ರಾಂತ್ಯವನ್ನು ವಶಪಡಿಸಿಕೊಂಡಾಗ ರಾಮಗಿರಿದುರ್ಗ ಸೀಮೆಯು ಅವರ ಅಧೀನಕ್ಕೆ ಬಂದಿರಬೇಕು. ಚಿಕ್ಕದೇವರಾಜ ಒಡೆಯರು ತೀರಿದ ನಂತರ ಇಮ್ಮಡಿ ಕೆಂಪವೀರಪ್ಪಗೌಡ (ಕ್ರಿ.ಶ.೧೬೯೭೧-೭೧೦) ನಂತರ, ಮಾಗಡಿ ಅರಸ ಮುಮ್ಮಡಿ ಕೆಂಪವೀರಪ್ಪಗೌಡ (ಕ್ರಿ.ಶ.೧೭೧೦-೧೭೨೮) ಅವರ ಸ್ವತಂತ್ರಾಧಿಕಾರಕ್ಕೆ ಈ ಪ್ರದೇಶ ಒಳಪಟ್ಟು, ಕ್ರಿ.ಶ.೧೭೧೪ರಲ್ಲಿ ಮೈಸೂರಿನ ದಳವಾಯಿ ಕಳಲೆ ದೇವರಾಜಯ್ಯನಿಂದಾಗಿ ಸೋತರೂ ೧೭೧೫ರಲ್ಲಿ ಮೈಸೂರಿನ ಅರಸರಿಂದ ಪಡೆದು, ನಂತರ ಕೆಂಪವೀರಪ್ಪಗೌಡ ರಾಮಗಿರಿದುರ್ಗ, ಅಚ್ಚಲುದುರ್ಗವನ್ನು, ರಾಮನಗರ ಬಳಿಯ ಶಿವನಗಿರಿಯನ್ನು ಭದ್ರಗೊಳಿಸಿದನು. ಆದರೂ ಕ್ರಿ.ಶ.೧೭೨೮ರಲ್ಲಿ ಮೈಸೂರಿನ ದಳವಾಯಿ ದೇವರಾಜಯ್ಯನು ಕೆಂಪವೀರಪ್ಪಗೌಡನನ್ನು ಬಂಧಿಯಾಗಿ ಶ್ರೀರಂಗಪಟ್ಟಣದಲ್ಲಿರಿಸಿದನು. ೧೭೨೮ ರಿಂದ ಈ ರಾಮಗಿರಿ ಪ್ರದೇಶ ಪೂರ್ಣವಾಗಿ ಮೈಸೂರು ಆಡಳಿತಕ್ಕೆ ಒಳಪಟ್ಟಿತು.

ಲಕ್ಷ್ಮೀಪುರ (ರಾ)

ಈ ಗ್ರಾಮದ ಮೊದಲ ಹೆಸರು 'ಪೊಡವಂಟ'. ಮಾಗಡಿಯ ಕೊನೆಯರಸು ಕೆಂಪವೀರಪ್ಪಗೌಡನು ತನ್ನ ಸೋದರಿ ಮುದ್ದುವೀರಮ್ಮಾಜಿಗೆ ಅರಿಶಿನ-ಕುಂಕುಮಕ್ಕೆ ಪುದುವಟ್ಟಾಗಿ ಕೊಟ್ಟ ಗ್ರಾಮ. ಈ ಗ್ರಾಮಕ್ಕೆ ಆ ಹೆಸರು ಬಂದಿತು.[೯೮] ಈ ಪುದುವಟ್ಟು, ಕೆಂಪವೀರಪ್ಪಗೌಡನ ತನ್ನ ಸೋದರಿ ಮುದ್ದು ವೀರಮಾಂಬೆಗೆ ನೀಡಲಾಗಿತ್ತಂತೆ ಕೆಂಪವೀರಪ್ಪಗೌಡನನ್ನು ೧೭೨೮ರಲ್ಲಿ ಮೈಸೂರು ದಳವಾಯಿ ದೇವರಾಜಯ್ಯನು ಬಂಧಿಸಿ ಪಂಜರದಲ್ಲಿ ಈ ಗ್ರಾಮದ ಮೂಲಕ ಒಯ್ಯುತ್ತಿರುವ ಸ್ಥಿತಿಯನ್ನು ಕಂಡು ಮುದ್ದುವೀರಮಾಂಬೆಯು ಅಗ್ನಿ ಪ್ರವೇಶ ಮಾಡಿದಳಂತೆ ಇದರ ಕರುಹಾಗಿ ಇಂದಿಗೂ ಶಿರಸ್ತಮ್ಮ ಎಂಬ ಬರಿ ಶಿರವುಳ್ಳ ಗ್ರಾಮದೇವತೆಯ ಪೂಜೆಯನ್ನು ಮಾಡುವ ಆಚರಣೆ ಮಾಡುತ್ತಿದ್ದಾರೆ. ಈ ಪುದುವಟ್ಟು ಗ್ರಾಮ ಅಪಭ್ರಂಶವಾಗಿ 'ವಡವಟ್ಟ' ಎಂದು ಜನರು ಕರೆಯುತ್ತಿದ್ದರು. ಆಗ ೧೯೩೫ರಲ್ಲಿ ಸ್ಥಳೀಯ ಶಾನುಭೋಗರು ಮಗಳ ಜಯಲಕ್ಷ್ಮಿ ಹುಟ್ಟಿದ ನೆನಪಿಗಾಗಿ ಲಕ್ಷ್ಮೀಪುರವೆಂದು ಸಂಸ್ಕೃತೀಕರಣಗೊಳಿಸಿ ಪ್ರತಿನಾಮಕರಣದಿಂದ ಕರೆಯಲ್ಪಡುತ್ತಿದೆ.

೧೭ನೇ ಶತಮಾನಕ್ಕಿಂತಲೂ ಹಿಂದೆ ಈ ಗ್ರಾಮಕ್ಕೆ 'ಮಲಣಕಲ್ಲು' ಎಂದು ಹೆಸರಿತ್ತು. ಹಳೆಯ ಕೋಟೆಯ ಅವಶೇಷ, ಬತೇರಿಯ ಅಳಿದುಳಿದ ಭಾಗ ಇಂದಿಗೂ ಕಾಣ ಸಿಗುತ್ತವೆ. ಗುಡ್ಡ ಹಿಂಭಾಗದಲ್ಲಿ 'ಮಳೆಹಳ್ಳಿ' ಎಂಬ ಕೋಟೆಯ ಅವಶೇಷವೂ ಇದೆ. ಆ ಕಲ್ಲಿನ ದಕ್ಷಿಣ ಭಾಗಕ್ಕೆ 'ಜೇಡಿತಿಕಲ್ಲು' ಎಂಬ

ಗುಡ್ಡವಿದೆ. ಇಲ್ಲಿ ಹೆಗ್ಗಡಿತಿಯೊಬ್ಬಳು ಆಳ್ವಿಕೆ ಮಾಡುತ್ತಿದ್ದಳಂತೆ, ಇದಕ್ಕೆ ಪೂರಕವಾಗಿ ಗ್ರಾಮದಲ್ಲಿನ 'ವೀರಶಾಸನವು ಕ್ರಿ.ಶ.೧೩೧೪-೧೮ರ ಸುಮಾರಿನಲ್ಲಿ ಒಡೆಯ ನಾಯಕನ ಮಗ ಅಲಪ್ಪ ನಾಯಕನು ವೀರಬಲ್ಲಾಳನ ಅಂಗರಕ್ಷಕ ಪಡೆಯಲ್ಲಿದ್ದ. ಬೆಳತೂರುಕಲ್ಲು' ಎಂಬಲ್ಲಿ ನಡೆದ ಯುದ್ಧದಲ್ಲಿ (ಮಲ್ಲಿಕಾಫರನ ದಂಡೆಯಾತ್ರೆಯ ಸಮಯದಲ್ಲಿ) ವೀರ ಸ್ವರ್ಗವೇರಿದ ಎಂದು ತಿಳಿಸುತ್ತದೆ. ಆ ಕಾಲಕ್ಕೆ 'ಮಲ್ಲನಾಯಕನ ಕಲ್ಲು' ಎಂದು ಹೆಸರು ಬಂದಿರಬೇಕು ಈ ಊರಿಗೆ. ಅಲ್ಲಿದ್ದ ಮಲ್ಲೇಶ್ವರ ಲಿಂಗವನ್ನು ಈಗ ಲಕ್ಷ್ಮೀಪುರದಲ್ಲಿ ದೇಗುಲ ಕಟ್ಟಿಸಿ ಪ್ರತಿಷ್ಠಾಪಿಸಿದ್ದಾರೆ'.[೯೯] ಎನ್ನುವುದಾದರೆ ಈ ಗ್ರಾಮವು ಹೊಯ್ಸಳ ಕಾಲಮಾನದ ಪ್ರಾಚೀನತೆಯನ್ನು ಹೊಂದಿದೆ. ಪೊಡವಂಟ>ಪೊಡವಟ್ಟು> ಪುಡವಟ್ಟ> ಪುದುವಟ್ಟ> ವಡವಟ್ಟು> ವಡವಾಟ>ಯಡವಟ್ಟು ಆಗಿರಬೇಕು.

ಸಂಕಿಘಟ್ಟ (ಮಾ)

ಪ್ರಾಚೀನ ಸಂಕೇತಪುರವಾಗಿದ್ದ ಸಂಕೀಘಟ್ಟ, ಪುರಾತನ ಜೈನಕೇಂದ್ರವಾಗಿತ್ತು. ಸಂಕೀಘಟ್ಟದ ಪುರಾತನ ವರ್ಧಮಾನ ಬಸದಿಯಲ್ಲಿರುವ ವರ್ಧಮಾನ ವಿಗ್ರಹದ ಹಿಂಭಾಗದಲ್ಲಿರುವ ಶಾಸನ ಹೊಯ್ಸಳ ದೊರೆಗಳಾದ ವಿನಯಾದಿತ್ಯನಿಂದ ಒಂದನೇ ನರಸಿಂಹನವರೆಗಿನ ಹೊಯ್ಸಳ ವಂಶಾವಳಿಯನ್ನು ಹೇಳುವುದರಿಂದ ಈ ಸ್ಥಳವು ಹೊಯ್ಸಳ ಕಾಲಕ್ಕೆ ಹಾಗೂ ಆಡಳಿತಕ್ಕೆ ಒಳಪಟ್ಟಿದ್ದು ದೃಢವಾಗುತ್ತದೆ.

ಪದ್ಮಕವಿಯು ಗುಮ್ಮಣಾಂಕನ ಆಶ್ರಯ ಪಡೆದು ಕ್ರಿ.ಶ.೧೫೨೮ರಲ್ಲಿ 'ವರ್ಧಮಾನ ಚರಿತಂ' ಕೃತಿಯನ್ನು ಈ ಗ್ರಾಮದಲ್ಲಿಯೇ ರಚಿಸಿದ್ದಾನೆ. ಹನ್ನೆರಡು ಸಂಧಿ, ಒಂದುಸಾವಿರದ ಮೂರುನೂರತ್ತೊಂಬತ್ತು ಪದ್ಯವನ್ನೊಳಗೊಂಡ ಈ ಕೃತಿ ಸಾಂಗತ್ಯದಲ್ಲಿದೆ. ಚಿಕ್ಕ ಪದ್ಮಣಸೆಟ್ಟಿಯೆಂಬ ಮತ್ತೊಬ್ಬ ಜೈನ ಕವಿಯು ಆ ಊರಿನ ವರ್ಧಮಾನ ಬಸದಿಯಲ್ಲೇ ಕ್ರಿ.ಶ.೧೫೮೧ರಲ್ಲಿ ಮೂರುಸಾವಿರದ ನಾನೂರು ಪದ್ಯಗಳಿರುವ 'ಅನಂತನಾಥ ಚರಿತೆ'ಯನ್ನು ಏಳುತಿಂಗಳು ಹತ್ತು ದಿನಗಳಲ್ಲಿ ಬರೆದಿರುವುದಾಗಿ ಗ್ರಂಥದಲ್ಲೇ ಹೇಳಿಕೊಂಡಿದ್ದಾನೆ. ಜೈನ ಕವಿ-ಕಾವ್ಯಗಳಿಗೆ ನೆಲೆಬೀಡಾದ ಸಂಕೀಘಟ್ಟವು ಭವ್ಯ ಸೌಧಗಳಿಂದಲೂ, ಮಂಟಪ, ನಾಟಕಶಾಲೆ, ರತ್ನಕಳಸವನ್ನು ಹೊಂದಿದ್ದ ಜಿನಭವನದಿಂದಲೂ, ವಿಶಾಲ ಬೀದಿಗಳಿಂದಲೂ ಮೆರೆದಿತ್ತೆಂದು ಪದ್ಮಕವಿಯು ಸಂಕಿಘಟ್ಟ ಸ್ಥಳವನ್ನು ವರ್ಣಿಸುತ್ತಾನೆ.

ಸಾತನೂರು (ಮಾ)

ಮೊಗಲ್ ಸಾಮ್ರಾಟ ಅಕ್ಬರನ ಆಸ್ಥಾನದಲ್ಲಿ ಕರ್ನಾಟಕದ ಕೀರ್ತಿಯನ್ನು ಬೆಳಗಿದ ಪುಂಡಲೀಕ ವಿಠಲ ಸಾತನೂರಿನವನು. 'ಹುಟ್ಟೂರು ಕುರಿತಂತೆ ತನ್ನ ಕೃತಿ 'ಸದ್ರಾಗ ಚಂದ್ರೋದಯ'ದಲ್ಲಿ "ಕರ್ಣಾಟೇಶೈವ ಗಂಗಾಭಿದನಗನಿ ಕಟೇ ಸಾತನೂರಾಹ್ವಯೊಯೋ ಗ್ರಾಮಃ ತತ್ರಾಗಜನ್ಮ:" ಎಂದು ಸ್ಪಷ್ಟಪಡಿಸಿದ್ದಾನೆ".[೧೦೦] ಪುಂಡಲೀಕ ವಿಠಲನು ಸಾತನೂರಿನ ವಿಠಲಾರ್ಯ ಮತ್ತು ದೇಮಕ್ಕರ ಪುತ್ರ. ವಿಠಲಾರ್ಯ ಅಚ್ಯುತರಾಯನ ಜಹಗೀರುದಾರನಾದ ಸಾಮಂತರಾಯನ (ಸಾಮಂತದುರ್ಗ ಈಗಿನ ಸಾವನದುರ್ಗ) ಆಸ್ಥಾನದ ವಿದ್ವಾಂಸನೆಂದು ತಿಳಿದುಬರುತ್ತದೆ. ಪುಂಡಲೀಕ ವಿಠಲ, ನೃತ್ಯ ಮತ್ತು ಸಂಗೀತಶಾಸ್ತ್ರ ಪ್ರಯೋಗಗಳಲ್ಲಿ ಅದ್ವಿತೀಯ ಸಾಧನೆ

ಮಾಡಿದ್ದನು. ಇಂಥ ಸಾಧಕರಿಗೆ ತನ್ನ ಆಸ್ಥಾನದಲ್ಲಿ ಗೌರವವನ್ನು ಕೊಟ್ಟಿದ್ದ ಅಕ್ಬರ್; ಪುಂಡಲೀಕ ವಿಠಲನನ್ನು ತನ್ನ ಆಸ್ಥಾನದಲ್ಲಿರಿಸಿಕೊಂಡಿದ್ದನು. "ಪುಂಡಲೀಕವಿಠಲ ಸದ್ರಾಗ ಚಂದ್ರೋದಯ, ರಾಗಮಾಲ, ರಾಗಮಂಜರಿ ನರ್ತನ ನಿರ್ಣಯ ಮುಂತಾದ ಪಾಂಡಿತ್ಯಪೂರ್ಣ ಕೃತಿ ರಚಿಸಿ ಭಾರತೀಯ ಸಂಸ್ಕೃತಿಗೆ ಅಮೂಲ್ಯ ಕೊಡುಗೆಯಿತ್ತಿದ್ದಾನೆ. ಇವನ ಪಾಂಡಿತ್ಯಕ್ಕೆ ಮೆಚ್ಚಿದ ಅಕ್ಬರ್ ಮಹಾಶಯ ಪುಂಡಲೀಕವಿಠಲನಿಗೆ "ಅಕ್ಬರೀಯ ಕಾಳಿದಾಸ" ಎಂಬ ಬಿರುದು ನೀಡಿ ಗೌರವಿಸಿದ್ದಾನೆ".[೧೦೦] ಇದು ರಾಮನಗರ ಜಿಲ್ಲೆಯ ಸಾತನೂರಿಗಷ್ಟೇ ಅಲ್ಲ ಕನ್ನಡ ನಾಡು ನುಡಿಗೆ ಸಂದ ಹಿರಿಮೆಯಾಗಿದೆ.

ಸಾವನದುರ್ಗ (ಮಾ)

ಮಾಗಡಿಯಿಂದ ಹನ್ನೊಂದು ಕಿ.ಮೀ.ದೂರದಲ್ಲಿದೆ. ಸಮುದ್ರಮಟ್ಟದಿಂದ ೪೦೨೪ ಅಡಿ ಎತ್ತರದ ಕರಿಬೆಟ್ಟ ಮತ್ತು ಬಿಳಿಬೆಟ್ಟವೆಂಬ ಎರಡು ಶಿಖರಗಳಿರುವ ಇದು; ಏಷ್ಯಾ ಖಂಡದ ಬೃಹತ್ ಏಕಶಿಲಾಪರ್ವತ. ಪ್ರಾಕ್ಚಾರಿತ್ರ ಕಾಲದ ಬೃಹತ್ ಶಿಲಾಯುಗದ ಮಾನವನ ನೆಲೆಯಾಗಿತ್ತೆಂಬುದಕ್ಕೆ ಇಲ್ಲಿನ ಕಲ್ಲಿನ ಗೋರಿಗಳೇ ಸಾಕ್ಷಿಯಾಗಿವೆ. ಕ್ರಿ.ಶ.೧೫೪೩ರಲ್ಲಿ ವಿಜಯನಗರದ ಅರಸ ಅಚ್ಯುತರಾಯನ ಕಾಲದಲ್ಲಿ ಈ ಭಾಗವನ್ನು ಆಳ್ವಿಕೆ ಮಾಡುತ್ತಿದ್ದ ಸಾಮಂತರಾಯ, ಕೋಟೆಕಟ್ಟಿಸಿದ್ದರಿಂದ ಈ ದುರ್ಗಕ್ಕೆ ಸಾವನದುರ್ಗ ಎಂದು ಹೆಸರು ಬಂದಿದೆಯಾದರೂ ಕ್ರಿ.ಶ.೧೧೫೦ರ ಹೊಯ್ಸಳರ ಕಾಲದ ಶಾಸನದಲ್ಲಿ[೧೦೨] ಸಾವಂತ ಕೇಸರಿ ಈರಯ್ಯನ ಊರಳವಿನ ಪ್ರಸ್ತಾಪವಿರುವುದರಿಂದ ಹಾಗೂ ಕ್ರಿ.ಶ.೧೩೪೦ರ ಹೊಯ್ಸಳರ ಕಾಲದ ಶಾಸನದಲ್ಲಿ ಈ ದುರ್ಗದ ಹೆಸರು ಸಾವಂದಿ[೧೦೩] ಎಂದಿರುವುದರಿಂದ ಹೊಯ್ಸಳ ಕಾಲಕ್ಕಾಗಲೇ ಈ ಹೆಸರಿತ್ತೆಂಬುದು ಸ್ಪಷ್ಟವಾಗುತ್ತದೆ.

ಸಾಮಂತರಾಯನು ೧೫೭೧ರಲ್ಲಿ ಮರಣ ಹೊಂದಿದ ನಂತರ ಅವನ ಮಗ ಸಂಪರಾಜ ಮತ್ತು ಚಿಕ್ಕರಾಯ ಆಳ್ವಿಕೆ ನಡೆಸಿದರು. ಚಿಕ್ಕರಾಯನಿಗೆ ಪುತ್ರ ಸಂತಾನವಿಲ್ಲದ್ದರಿಂದ ಮೂಲೆಗುಂಪು ಮಾಡಿದ ಗುಡೇಮಾರನಹಳ್ಳಿಯ ತಳಾರಿ ಗಂಗಪ್ಪ ನಾಯಕ ಆಳತೊಡಗಿದನು. ವಿಜಯನಗರದ ಅರಸರ ಆದೇಶದಂತೆ ಕ್ರಿ.ಶ.೧೬೨೩ರಲ್ಲಿ ಇಮ್ಮಡಿ ಕೆಂಪೇಗೌಡ ಗಂಗಪ್ಪನಾಯಕನನ್ನು ಕೊಂದು ಮಾಗಡಿ, ಸಾವನದುರ್ಗವನ್ನು ವಶಪಡಿಸಿಕೊಂಡನು. ಇಮ್ಮಡಿ ಕೆಂಪೇಗೌಡನು ಸಾವನದುರ್ಗವನ್ನು ಬಲಪಡಿಸಿ ಮಾಗಡಿಯಿಂದ ಆಳ್ವಿಕೆ ಮಾಡಿದ ೧೭೨೮ರವರೆಗೂ ಯಲಹಂಕ ಪ್ರಭುಗಳ ರಾಜಧಾನಿ ಹಾಗೂ ಪ್ರಮುಖ ಸೈನಿಕ ನೆಲೆಯಾಗಿ ಗುರುತಿಸಿಕೊಂಡಿತು. ಮೈಸೂರಿನ ದಳವಾಯಿ ದೇವರಾಜನು ಅಲ್ಲಿ ಆಳ್ವಿಕೆ ನಡೆಸುತ್ತಿದ್ದ ಮುಮ್ಮಡಿ ಕೆಂಪೇಗೌಡನನ್ನು ಸೋಲಿಸಿ ದುರ್ಗವನ್ನು ವಶಪಡಿಸಿಕೊಂಡನು. ಕೆಂಪೇಗೌಡನನ್ನು ಶ್ರೀರಂಪಟ್ಟಣಕ್ಕೆ ಬಂಧಿಯನ್ನಾಗಿ ಮಾಡಿ ಕರೆದೊಯ್ಯಲಾಯಿತು. ಮುಂದೆ ಕೆಂಪೇಗೌಡ ಅಲ್ಲಿಯೇ ಮರಣವನ್ನಪ್ಪಿದನು. ಸಾವನದುರ್ಗ ಮೈಸೂರಿನ ಒಡೆಯರ ವಶದಲ್ಲಿದ್ದಾಗ 'ಕೃಷ್ಣರಾಜಗಿರಿ' ಎಂದು ಹೆಸರಿಟ್ಟರೂ ಕೂಡ ಮುಂದೆ ಬಹಳ ದಿನ ಉಳಿಯಲಿಲ್ಲ. ೧೭೯೧ರಲ್ಲಿ ಸಾವನದುರ್ಗ ಬ್ರಿಟೀಷರ ಲಾರ್ಡ್ ಕಾರ್ನ್‌ವಾಲೀಸ್‌ನು ನಿಜಾಮನ ಸಹಾಯ ಪಡೆದು ಟಿಪ್ಪುವಿನಿಂದ ವಶಪಡಿಸಿಕೊಂಡನು. ದುರ್ಗದ ಮೇಲೆ ಮದ್ದಿನ ಮನೆ, ಕಾವಲುಗೋಪುರ, ಬಸವ ಇರುವ ಕಲ್ಲಿನ ಮಂಟಪ, ಸೊಣೆಗಳು ಹಾಗೂ ಆನೆ ಮತ್ತು ಗಣೇಶ ಶಿಲ್ಪಗಳಿವೆ.

ಸೋಲೂರು (ಮಾ)

ಆಡಳಿತದ ಅನುಕೂಲಕ್ಕಾಗಿ ಹೊಯ್ಸಳರು ತಮ್ಮ ರಾಜ್ಯವನ್ನು ನಾಡುಗಳಾಗಿ, ಈ ನಾಡುಗಳೇ ಸೀಮೆಗಳಾಗಿ, ಸೀಮೆಯ ಕೆಳಸ್ಥರದಲ್ಲಿ ಸ್ಥಳ ಮತ್ತು ಗ್ರಾಮಗಳಿದ್ದವು. ಸೀಮೆಗಳ ಆಡಳಿತವನ್ನು ದಣ್ಣಾಯಕ ನಿರ್ವಸಿದ್ದರು. ಈ ಆಡಳಿತ ವ್ಯವಸ್ಥೆ ವಿಜಯನಗರ ಕಾಲಕ್ಕೂ ಮುಂದುವರೆದಿತ್ತು. ವಿಜಯನಗರ ಕಾಲದಲ್ಲಿ ಸೋಲೂರು ಒಂದು ಸೀಮೆಯಾಗಿ ಆಡಳಿತಕ್ಕೆ ಒಳಪಟ್ಟಿತ್ತು. ಅಚ್ಯುತರಾಯನ ಅಧಿಕಾರಿಯಾದ ತಿಮ್ಮನಾಯಕನು ಸೋಲೂರಿನ ಆಡಳಿತಗಾರನಾಗಿದ್ದನು. ಇವನು ಕ್ರಿ.ಶ. ೧೫೩೭ರಲ್ಲಿ ಸೋಲೂರು ಸೀಮೆಯಲ್ಲಿ ವಿವಾಹ ತೆರಿಗೆಯನ್ನು ರದ್ದುಪಡಿಸಿದ್ದಾನೆ.[೧೦೪] ಇದೊಂದು ಜನಮುಖಿಯಾದ ಕ್ರಾಂತಿಕಾರಿಯಾದ ನಿರ್ಧಾರವೆನ್ನಬಹುದು. ಕೃಷ್ಣದೇವರಾಯನ ಮಂತ್ರಿ ಸಾಳ್ವ ತಿಮ್ಮರಸನ ಅಳಿಯ ಅಪ್ಪರಸಯ್ಯನೂ[೧೦೫] ಈ ಸೀಮೆಯ ನಾಯಕನಾಗಿದ್ದ ವಿವರಗಳು ದೊರೆಯುತ್ತವೆ. ಹೀಗೆ ಇದು ಸ್ಥಳೀಯ ಆಡಳಿತದ ಕೇಂದ್ರ ಸ್ಥಾನವಾಗಿತ್ತು.

ಹುತ್ತರಿಕಲ್ಲು (ಮಾ)

ಯಲಹಂಕ ವಂಶದ ಕೊನೆಯ ದೊರೆ ಕೆಂಪವೀರಪ್ಪಗೌಡನ ಕಾಲದಲ್ಲಿ ಹುತ್ರಿದುರ್ಗ ಉಪ ರಾಜಧಾನಿಯಂತೆ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಇದು ಆಯಕಟ್ಟಿನ ರಕ್ಷಣಾ ನೆಲೆಯಾಗಿ ಇವನ ಕಾಲದಲಿ ಅಭಿವೃದ್ಧಿಗೊಂಡು 'ದೇವಗಿರಿ' ಎಂದು ಪ್ರತಿನಾಮಧೇಯವಾಯಿತು. ಇಲ್ಲಿ ಏಳು ಸುತ್ತಿನ ಕೋಟೆ, ಬಂಡೆಯಲ್ಲಿ ಕೊರೆದಿರುವ ಎಣ್ಣೆಕುಳಿ, ಮದ್ದಿನಮನೆಗಳು ಈ ದುರ್ಗದಲ್ಲಿವೆ.

ಹುಲಿಕಲ್ಲು (ಮಾ)

ಮಾಗಡಿಯ ವಾಯುವ್ಯ ಭಾಗದಲ್ಲಿರುವ ಹುಲಿಕಲ್ಲಿನಲ್ಲಿ ಅನೇಕ ಶಿಥಿಲಾವಸ್ಥೆಯ ದೇವಾಲಯಗಳು, ಮಂಟಪಗಳೂ, ಶಾಸನಗಳೂ, ವೀರಗಲ್ಲುಗಳೂ ಇವೆ. ಹುಲಿಕಲ್ಲು ಗ್ರಾಮದ ರಾಮಲಿಂಗಬೆಟ್ಟದ ಮೇಲೆ ಇದ್ದ ಯತಿಯ ಆಕಳೊಂದು ಹುಲಿಯೊಂದಿಗೆ ಹೋರಾಡಿ ಅದನ್ನು ಕೊಂದಿತಂತೆ. ಇದನ್ನು ತಿಳಿದ ಹೊಯ್ಸಳ ದೊರೆ ಬಲ್ಲಾಳನು ಸುಮಾರು ಕ್ರಿ.ಶ.೧೩೧೦ರಲ್ಲಿ ಬೆಟ್ಟದಲ್ಲಿ ಕೋಟೆಯನ್ನು ಕಟ್ಟಿಸಿ ಅದಕ್ಕೆ ಹುಲಿಕೊಲ್ಲು ಎಂದು ಹೆಸರಿಟ್ಟನೆಂದೂ, ನಂತರದಲ್ಲಿ ಅದು 'ಹುಲಿಕಲ್ಲು' ಆಯಿತೆಂದು ಐತಿಹ್ಯವಿದೆ.

ಮಾಗಡಿಯ ಇಮ್ಮಡಿ ಕೆಂಪೇಗೌಡನ ಆಳ್ವಿಕೆಯಲ್ಲಿ ತನ್ನ ಮಕ್ಕಳಾದ ಮುಮ್ಮಡಿ ಕೆಂಪವೀರಗೌಡ ಮತ್ತು ಹೊನ್ನಪ್ಪ ಗೌಡರಿಗೆ ಮನಸ್ತಾಪದ ಕಾರಣವಾಗಿ ಮಾಗಡಿ ಅರವತ್ತು ಸಾವಿರ ಸೀಮೆಯಲ್ಲಿ ಹುಲಿಕಲ್ಲು ಮತ್ತು ಭೈರವನ ದುರ್ಗದ ಐದು ಸಾವಿರ ಸೀಮೆಯನ್ನು ಹೊನ್ನಪ್ಪಗೌಡನಿಗೆ ನೀಡಲಾಗಿ ಇಲ್ಲಿಂದ ಹುಲಿಕಲ್ಲು ಸಂಸ್ಥಾನ ಪ್ರತ್ಯೇಕವಾಗಿ ಹೊನ್ನಪ್ಪಗೌಡನಿಂದ ಆಳ್ವಿಕೆ ಮಾಡಲಾರಂಭಿಸಿತು. ಮಾಗಡಿ ಕೆಂಪೇಗೌಡನ ವಂಶಸ್ಥರು ಹಾಗೂ ದೊರೆಮನೆಯೆಂದು ಹೇಳುವ ಅರಮನೆಯು ಈಗಲೂ ಹುಲಿಕಲ್ಲಿನಲ್ಲಿದೆ.

೫.೪. ಸ್ಥಳನಾಮಗಳ ಪ್ರತಿನಾಮಕರಣ

ಸ್ಥಳನಾಮಗಳ ಪ್ರತಿನಾಮಕರಣವು ಈಗಲೂ ನಡೆಯುತ್ತಿದ್ದರೂ, ರಾಜಪ್ರಭುತ್ವದ ಕಾಲಮಾನದಲ್ಲಿ ಹೆಚ್ಚಾಗಿ ನಡೆದಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಒಂದು ರಾಜಾಧಿಪತ್ಯವು ಕೊನೆಗೊಂಡು ಮತ್ತೊಂದು

ರಾಜಪ್ರಭುತ್ವವು ಬಂದಾಗ ಸ್ಥಳೀಯರು ತಮ್ಮ ನೆಲೆಗೆ ಇಟ್ಟುಕೊಂಡಿದ್ದ ಹೆಸರುಗಳನ್ನು ಬದಲಾಯಿಸಿ ರಾಜನ ಹೆಸರನ್ನೋ, ಅಥವಾ ಅವರ ಪ್ರೀತಿ ಪಾತ್ರರಾದವರ ಕುಟುಂಬ ವರ್ಗದವರ ಹೆಸರನ್ನೋ; ಭೂಸುರರನ್ನು ಮೆಚ್ಚಿಸಲು ಅಗ್ರಹಾರಗಳನ್ನು ನಿರ್ಮಿಸಿದಾಗ ಇಲ್ಲವೇ ಯುದ್ಧ ವಿಜಯದ ನೆನಪಿಗಾಗಿ ಒಂದು ಗ್ರಾಮಕ್ಕೆ ಪ್ರತಿಯಾಗಿ ಪುನರ್‌ನಾಮಕರಣ ಮಾಡಿರುವುದು ಹಲವಾರು ಶಾಸನಗಳಿಂದ ನಮಗೆ ತಿಳಿದು ಬರುತ್ತದೆ. “ರಾಜರ ದಾನ ಮತ್ತು ಯುದ್ಧ ವಿಜಯ, ಕರ್ನಾಟಕದಲ್ಲಿ ಒಂದು ಹಳ್ಳಿಯನ್ನು ಅಗ್ರಹಾರವಾಗಿ ಬ್ರಾಹ್ಮಣರಿಗೆ ಕೊಡುವಾಗ ಇಲ್ಲವೆ ದೇವರ ಉಪಭೋಗಕ್ಕೆ ಕೊಡುವಾಗ ದಾನಿ, ಆ ಊರ ಹೆಸರನ್ನು ತೆಗೆದುಹಾಕಿ, ತನ್ನ ಇಲ್ಲವೇ ತನ್ನ ಸಂಬಂಧಿಕರ ಇಲ್ಲವೆ ದೇವರ ಹೆಸರನ್ನಿಡುತ್ತಿದ್ದನು”[೧೦೬] ಇಲ್ಲಿ ಪ್ರಜೆಗಳ ಇಷ್ಟಾನಿಷ್ಟಗಳಿಗೆ ಬೆಲೆ ಇರಲಿಲ್ಲ. ಖಡ್ಗದ ಮೂಲಕ ರಾಜ್ಯವಾಳುವ ಪ್ರಭುವಿನ ರಾಜಾಜ್ಞೆಗೆ ಹೆದರಿ ರಾಜನು ನೀಡುತ್ತಿದ್ದ ಪುನರ್ ನಾಮಕರಣವನ್ನು ಪ್ರೀತಿಯಿಂದಲೋ ಅಥವಾ ಒತ್ತಾಯಪೂರ್ವಕವಾಗಿಯೋ ಒಪ್ಪಿಕೊಳ್ಳಲೇಬೇಕಾಗಿತ್ತು. ಆದರೂ ಆ ರಾಜಸತ್ತೆ ಮುಗಿದ ನಂತರ ಒತ್ತಾಯಪೂರ್ವಕವಾಗಿ ಹೇರಲ್ಪಟ್ಟ ಹೆಸರುಗಳು ಜನರ ಮಾನಸದಿಂದ ಮರೆಯಾಗಿ ಮೊದಲಿದ್ದ ಹೆಸರುಗಳೇ ರಾರಾಜಿಸುತ್ತಿರುವುದು ಕೂಡ ಈ ನಾಡಿನಲ್ಲಿವೆ. ಹೀಗೆ ಪ್ರತಿನಾಮಕರಣ ಮಾಡಿದಾಗಲೆಲ್ಲ ರಾಜಪ್ರಭುತ್ವಕ್ಕನುಗುಣವಾಗಿ ಪುನರ್‌ನಾಮಕರಣಗೊಂಡ ಹಲವಾರು ಸ್ಥಳನಾಮಗಳು ನಮಗೆ ಸಿಗುತ್ತವೆ.

ರಾಮನಗರ ಜಿಲ್ಲೆಯ ಪರಿಸರದಲ್ಲಿರುವ ಹಲವು ಸ್ಥಳಗಳಿಗೆ ಪ್ರತಿನಾಮಕರಣದ ಸಂದರ್ಭ ಸನ್ನಿವೇಶಗಳನ್ನು ಆ ಪ್ರದೇಶದಲ್ಲಿ ಸಿಗುವ ಶಾಸನಗಳು, ಕೈಫಿಯತ್ತುಗಳ, ಬಖೈರುಗಳ, ಸಾಹಿತ್ಯಾಧಾರಗಳ ಮೂಲಕ ನೋಡಲಾಗಿದೆ. ಇಂಥ ಕೆಲವು ಪ್ರತಿನಾಮಕರಣಕ್ಕೊಳಗಾದ ಸ್ಥಳನಾಮಗಳು ಈ ಕೆಳಗಿನಂತಿವೆ.

೧. “ಕುಲೂಸ ಪೇಟೆಯೂ ರಾಜೆಮಹಾರಾಜೆ ಸಾಹೇಬರವರ‍್ರು ತಂಮ್ಮ ದೋಸ್ತರಾದ ಕರ್ನಲ್ ಕುಲೂಸ ಸಾಹೇಬರವರ ಹೆಸರ‍್ರಿನಲ್ಲಿ ಶಾಲಿವಾಹನ ಶಕೆ ೧೭೦೧ನೇ ಸಿದ್ಧಾರ್ಥಿ ಸಂವತ್ಸರದಲ್ಲಿ ಕಟ್ಟಿಸಿದರು”.[೧೦೭]

೨. “.....ಶ್ರೀಮದನಾದಿ ಅಗ್ರಹಾರಂ ಹಿರಿಯ ಮಳವೂರಾದ ಶ್ರೀ ರಾಜೇಂದ್ರ ಸಿಂಹ್ಮ ಚತುರ್ವೇದಿ ಮಂಗಲದ ಶ್ರೀಮದಶೇಷ ಮಹಾಜನಂಗಳು......”[೧೦೮]

೩. “.........ಶ್ರೀ ಮತು ಕೆಳಲೆಯ ನಾಡ ಶ್ರೀ ರಾಜರಾಜ ಚೋಳ ಚತುರ್ವೇದಿ ಮಂಗಲವಾದ ಕೂಡಲೂರ ಸ್ಥಳದೊಳಗಣ ಚಕ್ಕಜೆಯ ಗ್ರಾಮದಲ್ಲಿ.....”[೧೦೯]

೪. “.......ಬೈರವ ಪಟ್ಟಣದ ಜನಾರ್ಧನ ದೇವರ ಅಮ್ರುತಪಡಿ ನೈವೇದ್ಯಕ್ಕೆ ಮಕರ ಸಂಕ್ರಾಂತಿ ಪುಣ್ಯ ಕಾಲದಲ್ಲೂ ನರಸಿಂಹನಾಯಕರಿಗೆ ಪುಣ್ಯವಾಗಿ ವಾಣಿಯಗೆಜೆಗೆ ಪ್ರತಿನಾಮವಾಗಿ ಸೋಮಸಮುದ್ರವೆಂಬ ಪ್ರತಿನಾಮ ಮಾಡಿಸಹಿರಂಣ್ಯೋದಕ.......”[೧೧೦]

೫. “..... ಮಾಗಡಿಯ ಬಳಿಯಲ್ಲು ಹಾರಂಗಹಳ್ಳಿಯಂಬುವ ಗ್ರಾಮಕ್ಕೆ ಪ್ರತಿನಾಮಧೇಯವಾದ ಮುಂಮಡಿ ಕೆಂಪಸಾಗರ ಕೆರೆಗೆ.......”[೧೧೧]

೬. “.......ಮಾಗಡಿ ಹೋಬಳಿ ಹೆರಳಿಗನಹಳ್ಳಿ ಅಂಬೋ ಗ್ರಾಮಕ್ಕೆ ಪ್ರತಿನಾಮಧೇಯವಾಗಿದಂಥ ಮುಂಮಡಿ ಕೆಂಪಸಾಗರದಲ್ಲಿ ಕ್ಷೇತ್ರಂಗಳು....”[೧೧೨]

೭. "....ಮಾಗಡೀ ಹೋಬಳಿಯಲು ಹೊರಳಿಗನಹಳ್ಳಿಯೆಂಬೋ ಗ್ರಾಮಕೆ ಪ್ರತಿನಾಮಧೇಯವಾದಂತ ಮುಮುಂಡಿ ಕೆಂಪಸಾಗರದ ಕೆರೆಗೆ ಬಾವಲದ....." [೧೧೩]

೮. "......ಯಲಹಂಕ ನಾಡಪ್ರಭು ಮುಂಮಡಿ ಕೆಂಪೇಗೌಡರಯ್ಯನವರು ತಮಗೆ ಸಲುವಂಥಾ ಮಾಗಡಿ ಸೀಮೆಯ ಹಾರಂಗಹಳ್ಳಿಯೆಂಬ ಗ್ರಾಮಕ್ಕೆ ಪ್ರತಿನಾಮಧೇಯವಾದಂತಾ ಮುಂಮಡಿ ಕೆಂಪಸಾಗರದ ನೀರುಗಂಟಿ......."[೧೧೪]

೯. "...... ಚಿಕ್ಕ ಗಂಗವಾಡಿನಾಡವಾಳ ಗವಿ ಮದ್ದೂರಾದ ಶ್ರೀನಾರಸಿಂಹ ಚತುರ್ವೇದಿ ಮಂಗಲದ ಸಿವಪುರದ ಸ್ವಯಂಭು......"[೧೧೫]

೧೦. "......ಶ್ರೀಮತು ಚಿಕ್ಕ ಗಂಗವಾಡಿಯಾದ ಕಿಳೆನಾಡ ನಿಟ್ಟೂರ........."[೧೧೬]

೧೧. ಮಾಗಡಿ ಸೀಮೆಗೆ ಸಲ್ಲುವ ಮಾಯಕನಹಳ್ಳಿ, ಮುತ್ತನಪಾಳ್ಯ, ಹನುಮಂತನ ಪಾಳ್ಯ, ಕೆಂಪಸಾಗರದ ಕೆರೆಯ ಕೆಳಗೆರೆ ತೋಟದಲ್ಲಿ ೭೨೦೦ ಮರದ ಸ್ಥಳದ ತೋಟದ ಸಹ ಪ್ರತಿನಾಮಧೇಯವಾದ ಮುಮ್ಮಡಿ ಕೆಂಪವೀರ ಸಾಗರ ಅಗ್ರಹಾರದಲ್ಲಿ ಗಣಸಂಖ್ಯೆ.

೧೨. "ಕಷ್ಣದೇವರಾಯನಿಗೆ ಗಂಗಜಲವನ್ನು ತರುತ್ತಿದ್ದ ಕೋಣಪ್ಪ ನಾಯಕನೆಂಬುವನು, ಮಾರಯ್ಯನಹಳ್ಳಿಯನ್ನು ದಾನಾಯಕಪುರವೆಂದು ಪ್ರತಿನಾಮಕರಣಮಾಡಿ......"[೧೧೭]

೧೩. "......ಹೆಬ್ಬಾರೈಯ್ಯನವರ ಮಗ ಶೇಷ್ಮಯ್ಯಂಗಾರ್ರಿಗೆ ಸಾವಂದುರ್ಗದ ಶ್ರೀವೀರಭದ್ರಸ್ವಾಮಿ ಸನ್ನಿಧಿಯಲ್ಲಿ ಕೊಟಗೂರ ಶಿದ್ಧಪ್ಪನಹಳ್ಳಿಯನ್ನು ಶ್ರೀನಿವಾಸಪುರವೆಂದು ಹೆಸರಿಟ್ಟು ಶಿವಾರ್ಪಿತವಾಗಿ ಕೊಟ್ಟು......"[೧೧೮]

೧೪. "......ಚನ್ನಪಟ್ಟಣ ಸಮೀಪದ ಮಣಲೂರು ಅಥವಾ ಮಳೂರಿಗೆ ನಿಕರಿಲಿ ಚೋಳಪುರಂ ಎಂಬ ಹೆಸರಿತ್ತು.[೧೧೯]

೧೫. ವಿರುಪಾಪುರ-ವೀರೇಶ್ವರ ದೇವರಪುರ[೧೨೦]

೧೬. "ಹುತ್ರಿದುರ್ಗಕ್ಕೆ ದೇವಗಿರಿಯೆಂದು ಪ್ರತಿನಾಮಧೇಯವಾಗಿತ್ತು"[೧೨೧]

೧೭. "....೧೬೦೩ನೇ ದುರ್ಮತಿ ನಾಮ ಸಂವತ್ಸರದಲ್ಲಿ ಕೊಟ್ಟಿರುವ ಗ್ರಾಮಗಳು ಆಳಲ್ಲಹಳ್ಳಿ ಗ್ರಾಮಕ್ಕೆ ಪ್ರತಿನಾಮಧೇಯ ಕಲಿಕೆರೆ ಗ್ರಾಮ ಎಂದು ಡೊಂಕಣಪುರದ ಗ್ರಾಮ ಎಂದು ಇದಕ್ಕೆ ಶೇರಿದ ಉಪಗ್ರಾಮಗಳು ಸಹಾ ಯಿದಕ್ಕೆ ಪ್ರತಿನಾಮಧೇಯ ಮುಮ್ಮಡಿ ದೊಡವೀರ ಸಾಗರವೆಂಬ ಗ್ರಾಮವಂನ್ನು ಹದಿನೈದು ವೃತ್ತಿ...."[೧೨೨]

೧೮. "......ಸೋಮಯಾಜಿಗಳಿಗೆ ಕಡಶಿಂಗನಹಳಿ ಶಿವಾರ್ಪಿತವಾಗಿ ಕೊಟ್ಟುಯಿದೆ ಶ್ರೀವತ್ಸ ಗೋತ್ರ ಆಪ ಸೂತ್ರದ ದೊಡ್ಡೈಯಂಗಾರಿಗೆ ಕ್ಯಾಗಲ ಗ್ರಾಮವಂನು ಶಿವಾರ್ಪಿತವಾಗಿ ಕೊಟ್ಟುಯಿದೆ ಯೀಗಾ ನಂಮಿಂದಾ ಚತುರ ಗ್ರಾಮದ ಯಲೆ ಶೇರಿಶಿ ತಟಸಮುದ್ರವೆಂದು ಹೆಸರಿಟ್ಟುಯಿದಕೆ ಪ್ರತಿನಾಮಧೇಯ ಮುಂಮಡಿ ಕೆಂಪವೀರ ಸಾಗರವೆಂಬ ಗ್ರಾಮಕೆ ವೃತಿ......"[೧೨೩]

೧೯. "....... ಮಾಗಡಿ ಸೀಮೆಗೆ ಸಲುವ ಹೊಂನಪ್ಪನ ಬೇಡ್ರಹಳಿಗೆ ಪ್ರತಿನಾಮಧೇಯ ಸುಬ್ಬರಾಯಪುರ....."[೧೨೪]

೨೦. "...... ಮುಂಮಡಿ ಕೆಂಪವೀರಪ್ಪ ಗವುಡರೈಯ್ಯನವರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲಿಯೆಂದು ತಮ್ಮ ಆಳುವಿಕೆಗೆ ಸಲ್ಲುವ ಮಾಗಡಿ ಸೀಮೆಗೆ ಸೇರಿದ ಚಕ್ರಭಾವಿ ಹೋಬಳಿ ಕೆಂಪನಹಳ್ಳಿಗೆ ಪ್ರತಿನಾಧೇಯವಾದ ಶ್ರೀನಿವಾಸಪುರವನ್ನು....[೧೨೫]

೨೧. "..... ನಮ್ಮ ಮಾಗಡಿ ಶೀಮೆಗೆ ಸಲುವ **ಮಾಯಿನಾಯಕನಹಳ್ಳಿ, ಮಾದನಹಳ್ಳಿ**, ಹನುಮಾಪುರ **ಕೆಂಪಸಾಗರದ** ಕೆರೆಯ ಕೆಳಗಣ **ಏಳಗೆರೆಯ ತೋಟ**ದಲ್ಲಿ ಸಂ.೨೦೦ ವರಸ್ಥಳ ತೋಟ ಸಹ... ನಾಮಧೇಯವಾದ **ಮುಂಮ್ಮಡಿ ಕೆಂಪಸಾಗರ** ಅಗ್ರಹಾರದಲ್ಲಿ....[೧೨೬]

೨೨. "**ಹೊಂಗನೂರಿಗೆ ತ್ರೈಲೋಕ್ಯ ಮಹಾದೇವಿ ಚತುರ್ವೇದಿ ಮಂಗಲ** ಎಂಬ ಹೆಸರಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ"[೧೨೭]

೨೩. "**.....ಶ್ರೀ ಕೃಷ್ಣ ರಾಜನಗರದ (ಮಾಗಡಿ)** ಯಲಗಲವಾಡಿ ಹೋಬಳಿಯಾದ **ಹೊಸಹಳ್ಳಿ** ಗ್ರಾಮಕೆ ಪ್ರತಿನಾಮಧೇಯವಾದ **ಲಿಂಗ ಸಾಗರಾಗ್ರಹಾರ**ದಲ್ಲಿ...."[೧೨೮]

೨೪. "ಶಾಲಿವಾಹನ ಶಕ ೧೫೫೩ರ ಪ್ರಜೋತ್ಪತ್ತಿ ಸಂವತ್ಸರದಲ್ಲಿ **ಮಂಚಹಳ್ಳಿ** ಎಂಬ ಗ್ರಾಮವನ್ನು **ವಿರುಪಂಚಪುರ** ಎಂದು ಹೆಸರಿಟ್ಟು ಬ್ರಾಹ್ಮಣಶ್ರೇಷ್ಠರಿಗೆ ಅಗ್ರಹಾರವನ್ನಾಗಿ ಪುನರ್ದತ್ತಿಯಾಗಿಕೊಟ್ಟನು.[೧೨೯]

೨೫. "ಶಾಲಿವಾಹನ ಶಕ ೧೫೭೮ರ ದುಂದುಭಿ ಸಂವತ್ಸರದಲ್ಲಿ '**ಕೊತ್ತಗೆರೆ ಸಿದ್ದಪ್ಪನಹಳ್ಳಿ**'ಯನ್ನು **ಶ್ರೀನಿವಾಸಪುರ**ವೆಂದು ಪುನರ್‌ನಾಮಕರಣಮಾಡಿ"[೧೩೦].

೨೬. "ಶಾಲಿವಾಹನ ಶಕ ೧೫೬೭ರ ವ್ಯಯ ಸಂವತ್ಸರದಲ್ಲಿ '**ಬೊಮ್ಮನಹಳ್ಳಿ**' ಎಂಬ ಗ್ರಾಮವನ್ನು '**ಮುಮ್ಮಡಿ ಕೆಂಪಸಾಗರ** ಎಂದು ಪುನರ್ ನಾಮಕರಣ ಮಾಡಿ"[೧೩೧].

೨೭. "**ರಾಚನಹಳ್ಳಿ** ಹೋಬಳಿಯ **ತಿಪ್ಪಗೊಂಡನಹಳ್ಳಿ**ಗೆ '**ದೊಡ್ಡವೀರ ಸಮುದ್ರ**'ವೆಂದು ಹೆಸರಿಟ್ಟು ಅಗ್ರಹಾರವನ್ನಾಗಿ ಪರಿವರ್ತಿಸಿ"[೧೩೨]

೨೮. "ಶಾಲಿವಾಹನ ಶಕ ೧೬೪೬ರ ಕ್ರೋಧಿ ಸಂವತ್ಸರದಲ್ಲಿ' ವಿದ್ಯಾಶಂಕರಪುರವೆಂಬ ಪ್ರತಿನಾಮಧೇಯವುಳ್ಳ **ಸೀಗೆಕುಪ್ಪೆ** ಎಂಬ ಗ್ರಾಮವನ್ನು"[೧೩೩]

೨೯. "ಶಾಲಿವಾಹನ ಶಕ ೧೬೫೦ರ ಕೀಲ ಸಂವತ್ಸರದಲ್ಲಿ '**ಸಾಮಂತಿದುರ್ಗ**'ಕ್ಕೆ **ಕೃಷ್ಣರಾಜಗಿರಿ** ಮತ್ತು '**ಮಾಗಡಿ**'ಗೆ **ಕೃಷ್ಣರಾಜನಗರ**ವೆಂಬ ಹೊಸ ಹೆಸರುಗಳನ್ನು ಇಟ್ಟರು".[೧೩೪]

ಹೀಗೆ ರಾಮನಗರ ಜಿಲ್ಲೆಯ ಪರಿಸರದಲ್ಲಿ ಆಳ್ವಿಕೆ ನಡೆಸಿದ ಚೋಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಹಾಗೂ ಯಲಹಂಕನಾಡ ಪ್ರಭುಗಳ ಕಾಲದಲ್ಲಿ ಸ್ಥಳನಾಮಗಳ ಪ್ರತಿನಾಮಕರಣ ವಿಫುಲವಾಗಿ ನಡೆದು ನಾಮಾಂತರ ಕ್ರಿಯೆಗೆ ಒಳಗಾಗಿರುವುದನ್ನು ನೋಡಬಹುದು. ಪ್ರತಿನಾಮಕರಣಕ್ಕೆ ಒಳಗಾಗಿರುವ ಸ್ಥಳಗಳನ್ನು ಗಮನಿಸಿದಾಗ ಬಹುತೇಕವಾಗಿ ದಾನ ಸಂದರ್ಭದಲ್ಲಿ ಆದ ಪ್ರತಿನಾಮಧೇಯಗಳೇ ಹೆಚ್ಚಾಗಿವೆ. ಆದರೂ "ಅರಸರು ತಮ್ಮ ಆಡಳಿತ ಮತ್ತು ಯುದ್ಧವಿಜಯ ಸಂದರ್ಭದಲ್ಲಿಯೂ ತಮ್ಮ ಹೆಸರನ್ನು, ಬಿರುದನ್ನು ಗ್ರಾಮಗಳಿಗೆ ಇಡುತ್ತಿದ್ದರು".[೧೩೫] ಈ ಬಗೆಯ ಪ್ರತಿನಾಮಕರಣಕ್ಕೆ ಆಳರಸರು,

ಆಡಳಿತ ವರ್ಗದವರು ಕಾರಣವಾದರೂ "ಸ್ವನಾಮದಿಂದ ನೀಡಿದ ದಾನ ಶ್ರೇಷ್ಠವೆಂಬ ವಿಚಾರವನ್ನು ಅವರ ತಲೆಯಲ್ಲಿ ಹಾಕಿದವರು ಪುರೋಹಿತರೆಂಬುದನ್ನು ಇಲ್ಲಿ ಮರೆಯಲಾಗದು" ಎಂಬ ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯ ಒಪ್ಪತಕ್ಕದ್ದಾಗಿದೆ. ಇದರಿಂದ ಸ್ಥಳನಾಮಗಳ ಪ್ರತಿಕರಣಕ್ಕೆ ಧಾರ್ಮಿಕತೆಯ ಅಂಶ ಅಂಟಿಕೊಂಡಿರುವುದು ಸ್ಪಷ್ಟ.

ಸ್ಥಳನಾಮಗಳಲ್ಲಿ ಉಂಟಾಗಿರುವ ಪ್ರತಿನಾಮಕರಣಗಳನ್ನು ಗಮನಿಸಿದಾಗ ಸಾಮಾಜಿಕರ, ಸಾಮಾನ್ಯರ ಹೆಸರಿನಲ್ಲಿ ಪ್ರತಿನಾಮಕರಣಗಳು ನಡೆದಿರುವುದು ಕಂಡುಬರುವುದಿಲ್ಲ. ಇದಕ್ಕೆ ಸಾಮಾನ್ಯರ ಹೆಸರು ಸ್ಥಳಗಳಿಗೆ ಇಡುವಾಗ ಸ್ಥಳೀಯ ಊರಿನ ಪ್ರಮುಖರಿರಬಹುದು. ಅಥವಾ ರಾಜಸತ್ತೆ ಇರಬಹುದು. ಒಮ್ಮತ ಸೂಚಿಸುತ್ತಿರಲಿಲ್ಲವೇನೋ ಎಂಬ ಸಂಶಯ ಬರುವುದು ಖಂಡಿತ. ಇದೇ ಪ್ರತಿನಾಮಕರಣವನ್ನು ರಾಜಪ್ರಭುತ್ವವವು ಮಾಡಿದ್ದರೆ ಅದನ್ನು ಒಪ್ಪಿಸಲು ರಾಜಪ್ರಭುತ್ವ ಒತ್ತಾಯಪೂರ್ವಕವಾಗಿಯಾದರೂ, ಅಥವಾ ಕಾನೂನಿನ ಬಲವನ್ನು ಪಡೆಯುತ್ತಿದ್ದ ಅಂಶಗಳು ಇತಿಹಾಸದಲ್ಲಿ ಕಂಡುಬರುತ್ತವೆ. ಆದ್ದರಿಂದ ಪ್ರತಿನಾಮಕರಣಕ್ಕೆ ಸ್ಥಳೀಯ ವ್ಯಕ್ತಿಗಳ ಹೆಸರುಗಳು ಆರೋಪಿತವಾಗಿಲ್ಲವೆಂಬುದು ಮಾತ್ರ ನಿತ್ಯ ಸತ್ಯವಾಗಿದೆ.

ಅಡಿ ಟಿಪ್ಪಣಿಗಳು

೧. ಶಂ.ಬಾ.ಜೋಷಿ, ಎಡೆಗಳು ಹೇಳುವ ಕಂನಾಡಕತೆ, ಪುಟ.೫, ೨೦೦೫

೨. ಅದೇ. ಪು.೫

೩. ಎಚ್.ಎಸ್.ಗೋಪಾಲರಾವ್. ವೈ.ಜಿ., ಅಬ್ದುಲ್ ಬಷೀರ್, (ಸಂ). ಕನಕ ಸಿರಿ, ಪುಟ.೮೪, ೧೯೯೯

೪. ಅಭಿಶಂಕರ್.ಕೆ, ತುಮಕೂರು ಜಿಲ್ಲಾ ಗೆಜೆಟಿಯರ್, ಬೆಂಗಳೂರು-ಕರ್ನಾಟಕ ಸರ್ಕಾರ. ಪುಟ.೨೯, ೧೯೬೯.

೫. ಎಂ.ಲೋಕೇಶ್ ಪಿ.ಗೋಪಿ.ಎಂ.ಲೋಕೇಶ್ (ಲೇ.), ಇತಿಹಾಸ ದರ್ಶನ ಸಂ.೧೨, ಪುಟ.೧೬, ೧೯೯೭

೬. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂಪುಟ.೨, ಕರ್ನಾಟಕ ಸ್ಥಳನಾಮಗಳು, ಪುಟ.೨೧, ೨೦೦೨

೭. ಟಿ.ವಿ. ವೆಂಕಟಾಚಲಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೨೧, ೨೦೦೭.

೮. ಮುತ್ತುರಾಜು, ಇತಿಹಾಸ ದರ್ಶನ ಸಂ.೧೦. ಸೂಳೆಕಲ್ ಮಠದ ಗುಹಾ ಚಿತ್ರಗಳು, ಪುಟ.೭೧-೭೩, ೧೯೯೫.

೯. ಎಂ.ಜಿ.ಮಂಜುನಾಥ, ಇತಿಹಾಸ ದರ್ಶನ, ಸಂ.೧೦, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನವಶೋಧಿತ ಬೃಹತ್ ಶಿಲಾ ನಿವೇಶನಗಳು, ಪುಟ.೧೯, ೧೯೯೫

೧೦. ಎ.ಕ.೯, ಕನಕಪುರ.೪೮

೧೧. ಟ.ವಿ.ವೆಂಕಟಚಲಾಶಾಸ್ತ್ರಿ, ಕಾನಕಾನಹಳ್ಳಿ ಎಂಬ ಕನಕಪುರ ಚರಿತ್ರೆ, ಪು.೨೩, ೨೦೦೭.

೧೨. ಮುನಿರಾಜಪ್ಪ, ಹರಿಣಾಟವಿ, ಪುಟ.೬೪, ೨೦೧೦

೧೩. ಎಂ.ಬೈರೇಗೌಡ, ತಾ.ಸಿ.ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೧೯, ೧೯೯೯

೧೪. ಎ.ಕ.೯, ಮಾಗಡಿ.೭೫

೧೫. ಟಿ.ವಿ.ವೆಂಕಟಾಚಲಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ, ಪುಟ.೨೫, ೨೦೦೭

೧೬. ಮುನಿರಾಜಪ್ಪ, ಹರಿಣಾಟವಿ, ಪುಟ.೬೫, ೨೦೧೦

೧೭. ಎ.ಕ.೯, ಮಾಗಡಿ.೪೭

೧೮. ಎ.ಕ.೯. ಬೆಂಗಳೂರು ಅನುಬಂಧ. ಮಾಗಡಿ ೧೧೦

೧೯. ಎ.ಕ.೯, ಕನಕಪುರ. ೮೭

೨೦. ಎ.ಕ.೯, ಬೆಂಗಳೂರು, ಅನುಬಂಧ, ಮಾ.೧೧೭

೨೧. ಎ.ಕ.೯, ಕನಕಪುರ. ೧೦೭

೨೨. ಎ.ಕ.೯, ಕನಕಪುರ. ೭೬

೨೩. ಎ.ಕ.೯, ಕನಕಪುರ. ೬೪

೨೪. ಎ.ಕ.೯, ಕನಕಪುರ. ೨೮

೨೫. ಎ.ಕ.೯, ಮಾಗಡಿ. ೫೫

೨೬ ಎ.ಕ.೪, ಅರುಹನಹಳ್ಳಿ.೧೨ ಮಳವಳ್ಳಿ ತಾಲೂಕು

೨೭ ಎ.ಕ.೯, ಮಾಗಡಿ. ೩೯

೨೮. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಪುಟ.೩೦, ೨೦೦೫

೨೯. ಮುನಿರಾಜಪ್ಪ, ಹರಿಣಾಟವಿ, ಪುಟ. ೬೬, ೨೦೧೦

೩೦. ಎ.ಕ.೯, ಮಾಗಡಿ. ೪೮

೩೧. ಎ.ಕ.೯, ಮಾಗಡಿ. ೧೮

೩೨. ಎ.ಕ.೯, ಬೆಂಗಳೂರು ಅನುಬಂಧ ಮಾಗಡಿ-೧೦೮

೩೩. ಎ.ಕ.೯, ಮಾಗಡಿ. ೨೦

೩೪. ಎ.ಕ.೯, ಕನಕಪುರ. ೬೫

೩೫. ಎ.ಕ.೯, ಮಾಗಡಿ.೮೨

೩೬. ಎ.ಕ.೯, ಮಾಗಡಿ. ೬

೩೭. ಎ.ಕ.೯, ಕನಕಪುರ. ೭೩

೩೮. ಎ.ಕ.೯, ಕನಕಪುರ. ೧೦೮

೩೯. ಎ.ಕ.೯, ಚನ್ನಪಟ್ಟಣ. ೧೮೨

೪೦. ಕೃಷ್ಣರಾವ್, ಎಂ.ವಿ, ಬೆಂಗಳೂರು ಕೆಂಪೇಗೌಡ, ಪುಟ.೧೮೨, ೧೯೬೪

೪೧. ಜವರೇಗೌಡ ದೇ, ಬೆಂಗಳೂರು ಕೆಂಪೇಗೌಡ, ಪುಟ.೩೯-೪೦, ೧೯೫೦-೫೨

೪೨. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಪುಟ.೪೪, ೨೦೦೫

೪೩. ಎ.ಕ.೯, ಮಾಗಡಿ.೧

೪೪. ಎ.ಕ.೯, ಬೆಂಗಳೂರು ಅನುಬಂಧ, ಮಾಗಡಿ.೮೪, ೧೯೫೦

೪೫. ಮುನಿರಾಜಪ್ಪ, ಹರಿಣಾಟವಿ, ಪುಟ.೬೯, ೨೦೧೦

೪೬. ಶ್ರೀಕಂಠಯ್ಯ ಕರ್ಲಮಂಗಲ (ಸಂ.), ಮುನ್ನುಡಿ, ಕೆಂಪೇಗೌಡ ಜಯ ಪ್ರಶಸ್ತಿ, ಪುಟ.೬೦, ೧೯೬೧

೪೭. ಎ.ಕ.೯, ಮಾಗಡಿ.೩೫

೪೮. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಪುಟ.೪೭. ೨೦೦೫

೪೯. ಎ.ಕ್.೯, ಮಾಗಡಿ.೮

೫೦. ಎ.ಕ್.೯, ಬೆಂಗಳೂರು, ಅನುಬಂಧ ಮಾಗಡಿ.೮೩

೫೧. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಪುಟ.೫೨, ೨೦೦೫

೫೨. ಎ.ಕ.೧, ಚನ್ನರಾಯಪಟ್ಟಣ.೧೪

೫೩. ಟಿ.ವಿ.ವೆಂಕಟಾಚಲಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೫೪, ೨೦೦೭

೫೪. ಟಿ.ವಿ.ವೆಂಕಟಚಲಾಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೬೦, ೨೦೦೭

೫೫. ಇತಿಹಾಸದರ್ಶನ, ಸಂ.೧೨, ಪುಟ.೧೫೪, ೧೯೯೭

೫೬. ಅದೇ ಪುಟ. ೧೫೫,

೫೭. ಅದೇ ಪುಟ. ೧೫೫,

೫೮. ಅದೇ ಪುಟ. ೧೫೫

೫೯. ಅದೇ ಪುಟ. ೧೫೫-೧೫೬

೬೦. ಅದೇ ಪುಟ.೧೫೬

೬೧. ಸಂ.ಎಂ.ಎಂ.ಕಲಬುರ್ಗಿ, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ.೧, ಪುಟ.೧೯೧, ೧೯೯೯

೬೨. ಟಿ.ವಿ. ವೆಂಕಟಚಲಶಾಸ್ತ್ರೀ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೩೪, ೨೦೦೭

೬೩. ಇತಿಹಾಸ ದರ್ಶನ, ಸಂ.೧೩, ಪುಟ.೧೩೬, ೧೯೮೯

೬೪. ಟಿ.ವಿ.ವೆಂಕಟಲಶಾಸ್ತ್ರಿ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಟ.೩೫, ೨೦೦೭

೬೫. ಇತಿಹಾಸ ದರ್ಶನ, ಸಂ.೧೩, ಪುಟ.೧೩೬, ೧೯೮೯

೬೬. ಎಂ.ಬೈರೇಗೌಡ, ತಿಮ್ಮಯ್ಯ ತಾ.ಸಿ. (ಸಂ.), ಅರ್ಕಾವತಿ, ಪುಟ.೧೫೩, ೧೯೯೯

೬೭. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ.೨೨, ೨೦೦೫

೬೮. ಇತಿಹಾಸ ದರ್ಶನ, ಸಂ.೧೩ ಪುಟ.೧೩೬, ೧೯೯೭

೬೯. ಎ.ಕ್.೯, ಕನಕಪುರ, ೩೭ ಮತ್ತು ೪೭

೭೦. ಎ.ಕ್.೯, ಕನಕಪುರ, ೩೭ ಮತ್ತು ೪೭, ಮಾಗಡಿ.೭೫

೭೧. ಕುಕ್ಕಲೂರು-ಇತಿಹಾಸ ದರ್ಶನ, ಸಂ. ೭, ಪುಟ.೧೪೪, ೧೯೯೨

೭೨. ಎಂ.ಎಂ.ಕಲಬುರ್ಗಿ (ಸಂ.)., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂ.೧, ಪುಟ.೪೦-೪೧, ೧೯೯೯

೭೩. ನಿರಂಜನ ರಾ.ನ, ಕುಕ್ಕಲನಾಡು, ಪುಟ.೧೫, ೨೦೦೯

೭೪. ಅದೇ, ಪುಟ.೫೮

೭೫ ಎ.ಕ್.೯, ಕನಕಪುರ, ೪೭

೭೬ ಎ.ಕ್.೯, ಕನಕಪುರ, ೬೮

೭೭. ಟಿ.ವಿ. ವೆಂಕಟಚಲಶಾಸ್ತ್ರೀ, ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ,ಪುಟ.೩೭, ೨೦೦೭

೭೮. ಎ.ಕ್.೯, ಕನಕಪುರ, ೪೧

೭೯. ಎ.ಕ್.೯, ಕನಕಪುರ, ೯೭

೮೦. ಎ.ಕ್.೯, ಕನಕಪುರ, ೧೦೦

೮೧. ಎ.ಕ್.೯, ಕನಕಪುರ, ೬೪

೮೨. ಟಿ.ವಿ.ವೆಂಕಟಾಚಲಶಾಸ್ತ್ರಿ,ಉಧೃತ. ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ, ಪುಟ.೧೧೫, ೨೦೦೭

೮೩. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂಪುಟ.೬, ಪುಟ.೩೮೪, ೨೦೦೨

೮೪. ಎ.ಕ.೯, ಮಾಗಡಿ.೧೮

೮೫. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೬, ಪುಟ.೩೮೧, ೨೦೦೨

೮೬. ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ, ಸಂಸ್ಕೃತಿ, ಪುಟ.೧೬೨, ೨೦೦೫

೮೭. ಕೂಡ್ಲೂರು ವೆಂಕಟಪ್ಪ, ಗೊಂಬೆ ಚಿತ್ತಾರದ ಮಡೆಕಡೆದೊ, ಪುಟ.೧೪, ೨೦೦೯

೮೮. ಎಂ.ಬೈರೇಗೌಡ ತಾ.ಸಿ. ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೭೬, ೧೯೯೯

೮೯. ಎಂ.ಬೈರೇಗೌಡ, ತಾ.ಸಿ.ತಿಮ್ಮಯ್ಯ (ಸಂ.), ಅರ್ಕಾವತಿ, ೨೭೯, ಅದೇ, ೧೯೯೯

೯೦. ಎ.ಕ.೯, ಚನ್ನಪಟ್ಟಣ. ೧೨

೯೧. ಎಂ.ಬೈರೇಗೌಡ ತಾ.ಸಿ. ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೩೩-೨೩೪, ೧೯೯೯

೯೨. ಗೋಪಾಲರಾವ್ ಎಚ್.ಎಸ್., ಅಬ್ದುಲ್ ಬಷೀರ್, (ಸಂ.), ಕನಕಸಿರಿ, ಪುಟ.೧೮೯, ೧೯೯೯

೯೩. ಮುನಿರಾಜಪ್ಪ, ಮಾಗಡಿ-ಸೀಮೆ-ಇತಿಹಾಸ-ಸಂಸ್ಕೃತಿ, ಪುಟ.೧೫೭, ೨೦೦೫

೯೪. ಗೋಪಾಲರಾವ್ ಎಚ್.ಎಸ್., ಅಬ್ದುಲ್ ಬಷೀರ್, (ಸಂ.), ಕನಕಸಿರಿ, ಪುಟ.೧೯೩, ೧೯೯೯

೯೫. ಎಂ.ಬೈರೇಗೌಡ, ಹೋಗುವಾ.....ನಮ್ಮ ದೇಸಕೆ, ಪುಟ.೨, ೨೦೦೪

೯೬. ಎಂ.ಬೈರೇಗೌಡ, ತಾ.ಸಿ.ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೧೯, ೧೯೯೯

೯೭. ಎಂ.ಬೈರೇಗೌಡಾ, ತಾ.ಸಿ.ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೨೧-೨೨೨ ಅದೇ

೯೮. ಎಂ.ಬೈರೇಗೌಡ ತಾ.ಸಿ., ತಿಮ್ಮಯ್ಯ (ಸಂ.), ಅರ್ಕಾವತಿ, ಪುಟ.೨೩೫, ೧೯೯೯

೯೯. ಅದೇ, ಪುಟ.೨೩೬, ೧೯೯೯

೧೦೦. ಮುನಿರಾಜಪ್ಪ, ಹರಿಣಾಟವಿ, ಪುಟ.೨೪, ೨೦೧೦

೧೦೧. ಅದೇ, ಪು.೨೫, ೨೦೧೦

೧೦೨. ಎ.ಕ.೯. ಮಾಗಡಿ.೧೪

೧೦೩. ಎ.ಕ.೯, ಮಾಗಡಿ.೧೩

೧೦೪. ಎ.ಕ.೯, ಮಾಗಡಿ.೬೨

೧೦೫. ಎ.ಕ.೯, ಮಾಗಡಿ.೧೧

೧೦೬. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೮೨-೮೩, ೧೯೮೯.

೧೦೭. ಎ.ಕ.೯, ಚನ್ನಪಟ್ಟಣ, ೫

೧೦೮. ಎ.ಕ.೯, ಚನ್ನಪಟ್ಟಣ, ೯೮

೧೦೯. ಎ.ಕ.೯, ಚನ್ನಪಟ್ಟಣ, ೧೫೫

೧೧೦ ಎ.ಕ.೯, ಚನ್ನಪಟ್ಟಣ, ೧೬೪

೧೧೧. ಎ.ಕ.೯, ಮಾಗಡಿ, ೫

೧೧೨. ಎ.ಕ.೯, ಮಾಗಡಿ, ೨೯

೧೧೩. ಎ.ಕ.೯, ಮಾಗಡಿ., ಶಾ.ಸಂ.೩೦

೧೧೪. ಎಂ.ಜಿ.ಮಂಜುನಾಥ (ಸಂ)., ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ, ಪುಟ.೧೩೨, ೨೦೦೬.

೧೧೫. ಎ.ಕ.೯, ಕನಕಪುರ, ಶಾ.ಸಂ.೭೨

೧೧೬. ಎ.ಕ.೯, ಕನಕಪುರ. ೮೨

೧೧೭. ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ, ಸಂಸ್ಕೃತಿ, ಪುಟ.೩೧, ೨೦೦೫

೧೧೮. ಎಂ.ಜಿ.ಮಂಜುನಾಥ (ಸಂ)., ಯಲಹಂಕನಾಡ ಪ್ರಭುಗಳ ಶಾಸನ ಸಂಪುಟ, ಪುಟ.೧೧೮, ೨೦೦೬

೧೧೯. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ. ೨೪, ೨೦೦೫

೧೨೦. ಎ.ಕ.೯, ಬೆಂಗಳೂರು, ಅನುಬಂಧ, ಮಾಗಡಿ.೧೧೭

೧೨೧. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ.೫೨, ೨೦೦೫

೧೨೨. ಎ.ಕ.೯, ಮಾಗಡಿ.೮೩

೧೨೩. ಎಂ.ಜಿ.ಮಂಜುನಾಥ (ಸಂ) ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಪುಟ.೧೪೫, ೨೦೦೬

೧೨೪. ಅದೇ ಪುಟ.೧೫೦

೧೨೫. ಅದೇ ಪುಟ.೧೫೫

೧೨೬. ಅದೇ ಪುಟ.೧೬೬

೧೨೭. ಬೊಮ್ಮೇಗೌಡ, ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳು, ಪುಟ.೧೮, ೧೯೯೮

೧೨೮. ಎಂ.ಜಿ.ಮಂಜುನಾಥ, (ಸಂ), ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ, ಪುಟ.೧೯೨, ೨೦೦೬

೧೨೯. ಎಂ.ಜಿ.ಮಂಜುನಾಥ (ಸಂ). ಬೆಂಗಳೂರಿನ ಬಖೈರಗಳು, ಪುಟ.೯೩, ೨೦೦೬.

೧೩೦. ಅದೇ ಪುಟ.೯೩

೧೩೧. ಅದೇ ಪುಟ.೯೩

೧೩೨. ಅದೇ ಪುಟ.೯೪

೧೩೩. ಅದೇ ಪುಟ.೯೫

೧೩೪. ಅದೇ ಪುಟ.೯೫

೧೩೫. ಎಂ.ಎಂ.ಕಲಬುರ್ಗಿ, ಕನ್ನಡ ನಾಮವಿಜ್ಞಾನ, ಪುಟ.೮೪, ೧೯೮೯

ಅಧ್ಯಾಯ - ೬

ಸ್ಥಳನಾಮಗಳ ಸಾಮಾಜಿಕ ಅಧ್ಯಯನ

೬.೧. ಧರ್ಮಾಧಾರಿತ ಸ್ಥಳನಾಮಗಳು

೬.೨. ಸಮುದಾಯ ಆಧಾರಿತ ಸ್ಥಳನಾಮಗಳು

೬.೩. ವೃತ್ತಿ ಆಧಾರಿತ ಸ್ಥಳನಾಮಗಳು

೬.೪. ವ್ಯಕ್ತಿನಾಮಾಧಾರಿತ ಸ್ಥಳನಾಮಗಳು

ಅಧ್ಯಾಯ ೬

ಸ್ಥಳನಾಮಗಳ ಸಾಮಾಜಿಕ ಅಧ್ಯಯನ

ಸ್ಥಳನಾಮಗಳು ಮೂಲತಃ ಭಾಷಿಕ ರಚನೆಗಳು. ಭಾಷಿಕ ರಚನೆಗಳಾದ ಸ್ಥಳನಾಮಗಳಲ್ಲಿ ಸಾಮಾಜಿಕ ಅಂಶಗಳು ಮಿಳಿತವಾಗಿವೆ. ಆದ್ದರಿಂದ ಇವನ್ನು ಸಾಮಾಜಿಕ ಸ್ಥಳನಾಮಗಳೆನ್ನಲು ಅಡ್ಡಿಯಿಲ್ಲ. ಸ್ಥಳನಾಮಗಳಲ್ಲಿ ಪ್ರತಿಫಲಿಸುವ ಸಾಮಾಜಿಕ ಸಂರಚನೆಯನ್ನು ಸಮಾಜಮುಖಿ ಅಧ್ಯಯನಕ್ಕೆ ಒಳಪಡಿಸಿದಾಗ ಹಲವಾರು ಸಾಮಾಜಿಕ ಸಂಗತಿಗಳು ಹೊಳೆಯುತ್ತವೆ. ಇದನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಿದಾಗ ಭಾರತದ ಸಾಮಾಜಿಕ ವ್ಯವಸ್ಥೆಯ ಒಳನೋಟಗಳು ಹಾಗೂ ಸಮಾಜದಲ್ಲಿನ ಸೌಹಾರ್ದಯುತವಾದ ಜೀವನ ರಹಸ್ಯವನ್ನು ಭೇದಿಸಲು ಸಹಕಾರಿಯಾಗಬಲ್ಲದು.

ನಮ್ಮ ಭಾರತದ ಸಾಮಾಜಿಕ ವ್ಯವಸ್ಥೆಯ ಎರಡು ವಿಶಿಷ್ಟ ಲಕ್ಷಣಗಳೆಂದರೆ ಧರ್ಮದೊಂದಿಗೆ ವ್ಯವಸ್ಥೆಯ ನಿಕಟ ಸಂಪರ್ಕ ಮತ್ತು ವ್ಯಕ್ತಿಗಳಿಗಿಂತ ಸಮುದಾಯಗಳ ಸಮನ್ವಯಕ್ಕೆ ಮಹತ್ವ. ಸಮಾಜವು ಪ್ರಧಾನವಾಗಿ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯನ್ನು ಒಳಗೊಂಡ ಎರಡು ಮುಖದ ಒಂದು ನಾಣ್ಯವಿದ್ದಂತೆ. ಇಲ್ಲಿನ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಜಾತಿ, ವೃತ್ತಿಗಳಿಗೆ ಧಾರ್ಮಿಕ ಆಧಾರವಿದೆ. ಇಂಥ ಸಾಮಾಜಿಕ ನಿಯಮಗಳಿಗೆ ಧಾರ್ಮಿಕ ಮನ್ನಣೆ ಇರುವುದು; ಧರ್ಮದೊಂದಿಗೆ ಮನುಷ್ಯನು ಸುಗಮವಾಗಿ ಬದುಕನ್ನು ಸಾಗಿಸಲು ತಾನು ರೂಪಿಸಿಕೊಂಡ ವ್ಯವಸ್ಥೆಯನ್ನು ನಾವು ಸಮಾಜ ಎನ್ನುತ್ತೇವೆ. ಕುಟುಂಬ, ಜಾತಿ, ವೃತ್ತಿ ಮತ್ತು ವೃತ್ತಿಯನ್ನವಲಂಭಿಸಿರುವ ವ್ಯಕ್ತಿಯು ಸಮಾಜದ ಆಧಾರ ಸ್ತಂಭಗಳಾಗಿವೆ. ಸಮಾಜದಲ್ಲಿ ಸಾಮಾನ್ಯವಾಗಿ ಕಂಡುಬರುವ ಜಾತಿ, ವರ್ಗ ಮತ್ತು ವೃತ್ತಿಯನ್ನವಲಂಭಿಸಿ ಜೀವನ ನಡೆಸುತ್ತಿರುವ ನೆಲೆಗಳು ಕಡಿಮೆ ಇಲ್ಲ.

ಸ್ಥಳನಾಮಗಳು ಸಮಾಜದಲ್ಲಿನ ವೈವಿಧ್ಯಪೂರ್ಣ ಸಾಮಾಜಿಕ, ಸಾಂಸ್ಕೃತಿಕ ಚಿತ್ರಣವನ್ನು ಒದಗಿಸುತ್ತವೆ. ಪ್ರಾಚೀನ ಪರಂಪರೆ ಮತ್ತು ಆಧುನಿಕ ಚಿಂತನೆಯನ್ನು ಒಳಗೊಂಡ ಇಂದಿನ ಸಮಾಜದಲ್ಲಿ ವೇಷಭೂಷಣ, ಆಚಾರ-ವಿಚಾರ, ನಂಬಿಕೆ ಸಂಸ್ಕಾರಗಳಲ್ಲಿ ಸಾಕಷ್ಟು ವೈವಿಧ್ಯತೆಯನ್ನು ಗಮನಿಸಬಹುದು. ಧರ್ಮದಿಂದ ಧರ್ಮಕ್ಕೆ, ಜಾತಿಯಿಂದ ಜಾತಿಗೆ, ಭಾಷೆಯಿಂದ ಭಾಷೆಗೆ ಮತ್ತು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವ್ಯತ್ಯಾಸಗಳಾಗುವುದನ್ನು; ನಾವು ಪ್ರಾದೇಶಿಕತೆಗನುಗುಣವಾಗಿ ಸ್ಥಳನಾಮಗಳ ಅಧ್ಯಯನ ಕೈಗೊಂಡಾಗ ಮಾತ್ರ ತಿಳಿಯಲು ಸಾಧ್ಯವಾಗುತ್ತದೆ. ಜಾತಿ, ಮತ, ಪಂಥ, ವ್ಯಕ್ತಿ, ಜನಾಂಗಗಳ ವಲಸೆ ಮತ್ತು ಮೂಢನಂಬಿಕೆ.

ಮೊದಲಾದ ಸಾಮಾಜಿಕ ಸ್ಥಿತಿಗಳಲ್ಲದೇ ಭೌಗೋಳಿಕ ವಿವರಣೆಗಳೆಲ್ಲವೂ ಸ್ಥಳನಾಮಗಳ ಮುಖೇನ ಲಭ್ಯವಾಗುತ್ತವೆ.

ಊರುಗಳ ನಾಮಕರಣ ಕ್ರಿಯೆಯಲ್ಲಿ ಸಮಾಜದ ಅತಿ ಚಿಕ್ಕ ಘಟಕ ಕುಟುಂಬ ಅಥವಾ ಕುಟುಂಬದಲ್ಲಿನ ಏಕ ವ್ಯಕ್ತಿಯ ಪಾತ್ರವಿರಬಹುದು. ಇಲ್ಲವೇ ಇಡೀ ಒಂದು ಸಮುದಾಯದ ಶಕ್ತಿ ಪ್ರವಹಿಸಿರಬಹುದು. ಊರುಗಳ ಬೆಳವಣಿಗೆಯೊಂದಿಗೆ ಭಾಷೆಯೂ ಕೂಡ ಬೆಳವಣಿಗೆ ಹೊಂದಿದೆ. ಜ್ಞಾನ -ವಿಜ್ಞಾನ ವಿಚಾರ-ಪ್ರಚಾರಗಳೊಡನೆ ಅಂತೆಯೇ ಭಿನ್ನ ಭಿನ್ನ ಜನಾಂಗಗಳ ಸಂಪರ್ಕಗೊಂಡು, ಕಸಿಯಾಗಿ ಬೆಳೆದು ಕಾಲಾನಂತರದಲ್ಲಿ ಊರುಗಳ ಹೆಸರುಗಳೂ ಸಹ ಸ್ಥಿತ್ಯಂತರಗೊಂಡಿರಲು ಸಾಧ್ಯ. ಜನರ ಏಳು ಬೀಳುಗಳು, ಇತಿಹಾಸ, ಸಂಸ್ಕೃತಿ, ಆಚಾರ-ವಿಚಾರ, ಭಾವನಾ ಸಂಘರ್ಷಗಳೆಲ್ಲವೂ ಸ್ಥಳನಾಮಗಳಲ್ಲಿ ವ್ಯಕ್ತವಾಗಲು ಸಾಧ್ಯವಿದೆ.

ಸಾಮಾಜಿಕ ವ್ಯವಸ್ಥೆಯ ಪ್ರಮುಖ ಜಾತಿಗಳಾದ "ಒಕ್ಕಲಿಗರು ಫಲವತ್ತಾದ ನದೀ ತೀರದಲ್ಲಿ, ಕ್ಷತ್ರಿಯರು ಅರಣ್ಯಪರ್ವತಗಳಂಥ ಇಕ್ಕಟ್ಟಾದ ಪ್ರದೇಶಗಳಲ್ಲಿ, ಬ್ರಾಹ್ಮಣರು ಪವಿತ್ರ ಕ್ಷೇತ್ರಗಳಲ್ಲಿ ನಿಂತ ನೆಲೆಗಳೇ ಬೇರೆ ಬೇರೆ ವಾತಾವರಣದ ಗ್ರಾಮಗಳಾಗಿ ಬೆಳೆದವು. ತರುವಾಯ ಉದ್ಯೋಗದ ಅನುಕೂಲಕ್ಕಾಗಿ ಒಂದೊಂದು ವೃತ್ತಿಯನ್ನು ಅವಲಂಭಿಸಿದವರು ಒಂದೊಂದು ಕಡೆಗೆ, ಸಾಮಾಜಿಕ ಸಂರಕ್ಷಣೆ ದೃಷ್ಟಿಯಿಂದ ಒಂದೊಂದು ಪಂಥದವರು ಒಂದೊಂದು ಕಡೆಗೆ ಒಟ್ಟಾಗಿ ಬಾಳುವಲ್ಲಿ ಇನ್ನೂ ಬೇರೆ ಬೇರೆ ಸ್ವರೂಪದ ಗ್ರಾಮಗಳು ಹುಟ್ಟಿಕೊಂಡವು"[7]. ಹೀಗೆ ಒಂದೊಂದು ಜನಾಂಗದವರು ತಮ್ಮ ವೃತ್ತಿಗನುಗುಣವಾಗಿ ಒಂದೊಂದು ಭೌಗೋಳಿಕ ಪ್ರದೇಶದಲ್ಲಿ ನೆಲೆಯಾಗಿ ಗ್ರಾಮಗಳು ಉದಯವಾದವು. ರೈತರ ಒಕ್ಕಲುತನಕ್ಕೆ ಬೇಕಾದ ಸಾಮಾಗ್ರಿಗಳನ್ನು, ಉಪಕರಣಗಳನ್ನು, ಬಟ್ಟೆ ಬರೆಗಳನ್ನು ಒದಗಿಸುವ ಕಾಯಕದಲ್ಲಿ ನಿರತರಾದ ಕಮ್ಮಾರ, ಕಂಚುಗಾರ, ಅಗಸ ಮೊದಲಾದ ಹದಿನೆಂಟು ವರ್ಣಗಳ ಜನರು ವಾಸಿಸುವ ನೆಲೆಗಳಾಗಿ ಅಲ್ಲಿಯೇ ವಾಸಿಸುತ್ತಿದ್ದರು. ಹೀಗೆ ಒಟ್ಟಾರೆಯಾಗಿ ಸಾಮಾಜಿಕವಾಗಿ ಆಯಗಾರ ಪರಂಪರೆಗೆ ನಾಂದಿಯಾಗಿರಬಹುದು.

ಸಮುದಾಯಗಳಲ್ಲಿ ಕೆಳವರ್ಗ ಮತ್ತು ಮೇಲ್ವರ್ಗದ ಜನರು ಗ್ರಾಮಗಳಲ್ಲಿ ವಾಸಿಸುತ್ತಿರುವುದು ಸಾಮಾನ್ಯ ಸಂಗತಿ. ಈ ಎರಡು ವರ್ಗಗಳಲ್ಲಿರುವ ಅಕ್ಷರಸ್ಥ ಸಮುದಾಯ ಮತ್ತು ಅನಕ್ಷರಸ್ಥರ ನಡುವಿನ ಉಚ್ಛರಣಾ ನಿಯಮಗಳೆಲ್ಲವೂ ತಮ್ಮ ವಾಸದ ನೆಲೆಗಳಿಗೆ ಅಂಟಿಕೊಂಡಿರುವುದನ್ನು ಗಮನಿಸಬಹುದು. (ಉದಾ. ಮಾಗಡಿ ತಾಲೂಕಿನಲ್ಲಿ ಬರುವ ನೇತೇನಹಳ್ಳಿ,. ಸರ್ಕಾರಿ ದಾಖಲೆ ಮತ್ತು ಅಕ್ಷರಸ್ಥರಲ್ಲಿ ನೇತೇನಹಳ್ಳಿ ಎಂದು ಕರೆಯಲ್ಪಟ್ಟರೆ, ಅನಕ್ಷರಸ್ಥ ಸಮುದಾಯದವರು 'ಮೇತೇನಹಳ್ಳಿ' ಎಂದು ಕರೆಯುವರು) ಈ ಎರಡು ವರ್ಗಗಳ ಜೀವನ ಶೈಲಿಯನೆಲೆ, ವ್ಯವಹಾರ, ಭಾಷೆ ಮೊದಲಾದ ಅಂಶಗಳೆಲ್ಲವೂ ಸ್ಥಳನಾಮಗಳ ಮೇಲೆ ಪರಿಣಾಮ ಬೀರಿವೆ. ಸಮಾಜದಲ್ಲಿನ ವಿಭಿನ್ನ ಸಮುದಾಯದವರ ರೀತಿ ರಿವಾಜುಗಳು, ಆಚರಣೆ ಮೊದಲಾದ ಸಾಂಸ್ಕೃತಿಕ ಚಹರೆಗಳನ್ನು ಸ್ಥಳನಾಮಗಳು ಹೇಗೆ ಗುರುತಿಸುತ್ತವೆ? ಗುರುತಿಸುವುದಕ್ಕಾಗಿ ಹೇಗೆ ಮಾರ್ಗ ನಿರ್ಮಾಣವಾಗುತ್ತದೆ? ಪ್ರಮಾಣಗಳಿಗೆಲ್ಲಾ ಪ್ರತಿನಿಧಿಯಾಗಿ, ಮೂಲಾಧಾರವಾಗಿ ಹೇಗೆ ನಿಲ್ಲುತ್ತವೆ? ಎಂಬುದನ್ನು ಸ್ಥಳನಾಮಗಳ ಮೂಲಕ ಚರ್ಚಿಸಬಹುದಾಗಿದೆ.

ಹೆಸರಿಸುವಿಕೆಯ ಹಿನ್ನೆಲೆಯಲ್ಲಿ ಪ್ರತಿಯೊಂದು ಸಮಾಜವು ತನ್ನ ಭಾಷೆ, ಸಂಸ್ಕೃತಿ, ಧರ್ಮ, ಜಾತಿ, ನಂಬಿಕೆಗಳನ್ನು ಅವಲಂಬಿಸಿರುತ್ತವೆ. ತಾಯಿಯ ಹೊಟ್ಟೆಯಲ್ಲಿ ಮಗು ರೂಪ ತಳೆದ ನಂತರ ತಂದೆ - ತಾಯಿಗಳು ಗಂಡಾದರೆ ಎಂಥ ಹೆಸರನ್ನು ಇಡಬೇಕು. ಹೆಣ್ಣಾದರೆ ಎಂಥ ಹೆಸರನ್ನು ಇಡಬೇಕೆಂದು ಯೋಚಿಸುತ್ತಾರೆ ಹಾಗೂ ತಾಯಿ-ತಂದೆ, ಬಂಧು ಬಾಂಧವರು ಅದಕ್ಕೊಂದು ಹೆಸರಿಡುತ್ತಾರೆ. ಈ ಹೆಸರುವಿಕೆಯ ಕಾರ್ಯಕ್ರಮದೊಂದಿಗೆ ಮಗುವನ್ನು ಸೀಮಿತವಾದ ಕೌಟುಂಬಿಕ ನೆಲೆಯಿಂದ ವಿಸ್ತೃತವಾದ ಸಾಮಾಜಿಕ ನೆಲೆಗೆ ಪರಿಚಯಿಸುವರು. ಒಬ್ಬ ವ್ಯಕ್ತಿಯನ್ನು ಮತ್ತೊಬ್ಬನಿಂದ ಬೇರ್ಪಡಿಸಲು ಹಾಗೂ ಆ ವ್ಯಕ್ತಿಯ ಅನುಪಸ್ಥಿತಿಯಲ್ಲಿ ಆತನನ್ನು ಸ್ಮರಿಸಲು ವ್ಯಕ್ತಿ ನಾಮ ನಿರ್ದೇಶನ ಮಾಡುವುದು ಸಾಮಾಜಿಕವಾಗಿ ಮಹತ್ತರ ಕೆಲಸವಾದರೂ ವ್ಯಕ್ತಿನಾಮಗಳು ನಿರ್ದಿಷ್ಟ ಧರ್ಮ, ಸಂಸ್ಕೃತಿ, ಜಾತಿ, ಲಿಂಗ ಮತ್ತು ದೇವರ ಹೆಸರನ್ನು ಸೂಚಿಸಬಹುದು. ಇಂತಹ ವ್ಯಕ್ತಿ ನಾಮಗಳನ್ನು ಸ್ಥಳನಾಮ ನಿರ್ದೇಶನ ಮಾಡಲು ಬಳಸಿಕೊಂಡಿರುವುದನ್ನು ಸಹ ಗಮನಿಸಬಹುದು. ಉದಾ.ಶಿವನಹಳ್ಳಿ, ಕೇಶವಪುರ ಮೊದಲಾದವು.

ಒಂದು ನಿರ್ದಿಷ್ಟವಾದ ಸಮಾಜದಲ್ಲಿ ಜನಾಂಗಗಳ ನೆಲೆಸುವಿಕೆಯ ಚಹರೆಯನ್ನು ಗುರುತಿಸುವಾಗ ತಾವು ಭೌಗೋಳಿಕ ಪರಿಸರದಲ್ಲಿ ಬದುಕುತ್ತಿರುವ ಸಮುದಾಯಗಳಿಗೆ ಇರುವ ಭೌಗೋಳಿಕ ಅಂತರ ಸಂಬಂಧ ಅತ್ಯಂತ ಮಹತ್ವದ್ದಾಗುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಊರಿನ ಹೊರಗೆ ಹೊಲಗೇರಿ ಇರುವುದು. ಅಂದರೆ ಜಾತಿ ಅಥವಾ ವರ್ಗದ ನೆಲೆಯಲ್ಲಿ ಆಲೋಚಿಸುವಾಗ ವೃತ್ತಿಯನ್ನವಲಂಬಿಸಿ ಬದುಕುತ್ತಿದ್ದ ಸಮುದಾಯಗಳು ಪರಸ್ಪರ ವೃತ್ತಿಯಲ್ಲಿ ಕೊಡು-ಕೊಳೆ ಸಂಬಂಧವಿರುತ್ತಿತ್ತು. ಒಂದೊಂದು ವಿಶಾಲವಾದ ಪ್ರದೇಶದಲ್ಲಿ ವಾಸಿಸುತ್ತಿದ್ದಂಥ ಕುರುಹುಗಳು, ಸ್ಥಳಗಳ ಹೆಸರುಗಳಿಂದ ಅವು ಹೊಂದಿರುವ ಭೌಗೋಳಿಕ ಸಾಮೀಪ್ಯತೆಯಿಂದ ಕೂಡಿರುವುದು ತಿಳಿದು ಬರುತ್ತದೆ.

ಆಧುನಿಕತೆಯು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದ ಹತ್ತು ಹಲವು ಕ್ಷೇತ್ರಗಳ ಮೇಲೆ ತನ್ನದೇ ಆದ ಗಾಢ ಪರಿಣಾಮವನ್ನು ಬೀರಿದೆ. ಅಂತೆಯೇ ಸ್ಥಳನಾಮ ಕ್ಷೇತ್ರದ ಮೇಲೆಯೂ ತನ್ನ ಪ್ರಭಾವವನ್ನು ಬೀರಿದೆ. ಆಧುನಿಕ ಜೀವನ ಕ್ರಮ ಮತ್ತು ಒತ್ತಡದ ಬದುಕು ಮಾನವನ ಮೇಲಷ್ಟೇ ಏಕೆ? ಗ್ರಾಮಗಳ ಹೆಸರುಗಳು ಕೂಡ ಸ್ಥಿತ್ಯಂತರಗೊಳ್ಳುತ್ತಿರುವುದು ತಿಳಿದು ಬರುತ್ತಿದೆ. ಆಧುನಿಕತೆಯ ಪ್ರಭಾವ ಮತ್ತು ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಗ್ರಾಮೀಣ ಪರಿಸರದಲ್ಲಿರುವ ಜನರು ನಗರಗಳತ್ತ ಮುಖ ಮಾಡಿರುವುದು ಕಂಡುಬರುತ್ತದೆ. ಇದರಿಂದ ಬಹುಬೇಗನೆ ಊರು ಬೃಹದಾಕಾರವಾಗಿ ಬೆಳೆದು ಊರುಗಳ, ಬಡಾವಣೆಗಳ ಸಂಖ್ಯೆ ಮಿತಿ ಮೀರಿ ಬೆಳೆದದ್ದರಿಂದ ಹೆಚ್ಚು ಹೆಚ್ಚು ಹೆಸರುಗಳ ಅಗತ್ಯತೆ ತಲೆದೋರಿ ಆ ಪರಿಸರದಲ್ಲಿ ಪ್ರಸಿದ್ಧನಾದ ವ್ಯಕ್ತಿಯೋ ಅಥವಾ ಸಮುದಾಯವೋ, ಇಲ್ಲವೋ ಬಹುಸಂಖ್ಯಾತ ಜನರು ಅವಲಂಭಿಸಿರುವ ವೃತ್ತಿಯನ್ನೋ ತಮ್ಮ ನೆಲೆಗಳಿಗೆ ಅಂಟಿಸಿರುವುದನ್ನು ಕಾಣಬಹುದು. ಉದಾ. ಇಂದಿರಾನಗರ, ಗೊಲ್ಲಹಳ್ಳಿ, ಹೆಚ್.ಎಂ.ಟಿ. ಲೇಔಟ್.

ಸಮುದಾಯಗಳು ವಾಸಿಸುವ ಎಷ್ಟೋ ನೆಲೆಗಳು ಆ ಸಮುದಾಯದವರ ಸ್ಥಿತಿಗತಿಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಒಂದು ಜನ ಸಮುದಾಯದ ಹಣೆ ಬರಹಕ್ಕೂ ಅವರು

ವಾಸಿಸುವ ಅಥವಾ ವ್ಯವಹಾರ ನಡೆಸುವ ಸ್ಥಳಕ್ಕೂ ನಿಕಟ ಸಂಬಂಧವಿರುತ್ತದೆ. ಫಲವತ್ತಾದ ಪ್ರದೇಶದಲ್ಲಿ ಅಥವಾ ನದಿಯ ತೀರದಲ್ಲಿ ಬದುಕು ನಡೆಸುವ ಜನ ಜಲಕ್ಷಾಮವಿರುವ ಕಡೆ, ಇಲ್ಲವೆ ಮರಳುಗಾಡಿನಲ್ಲಿ ವಾಸಿಸುವ ಜನಕ್ಕಿಂತ ಅಧಿಕತರ ಸುಖದಿಂದ ಇರುತ್ತಾರೆ. ವ್ಯಾಪಾರ, ವಾಣಿಜ್ಯಗಳಿಗೆ ಅಪಾರ ಸೌಕರ್ಯವಿರುವುದರಿಂದ ಸಮುದ್ರ ತೀರದ ಊರುಗಳು ಬಹುಬೇಗನೆ ಅಭ್ಯುದಯದ ಶಿಖರ ಮುಟ್ಟುತ್ತವೆ. ಲೋಹ ಸಂಪತ್ತು ಮತ್ತು ಜಲ ಸಂಪತ್ತುಗಳಿರುವ ಕಡೆ ಕಾರ್ಖಾನೆಗಳು ಸ್ಥಾಪನೆಗೊಳ್ಳಬಹುದಾದ ಪ್ರಯುಕ್ತ ಜನ ಜೀವನಕ್ಕೆ ಅನುಕೂಲಕರವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಒಂದು ಜನಸಮುದಾಯ ಹಣೆಬರಹಕ್ಕೂ, ಅವರು ವಾಸಿಸುವ ಅಥವಾ ವ್ಯವಹಾರ ನಡೆಸುವ ಸ್ಥಳಗಳಿಗೂ ನಿಕಟವಾದ ಸಂಬಂಧವಿರುತ್ತದೆ ಎಂಬ ದೇ.ಜವರೇಗೌಡರ ಮಾತು ಔಚಿತ್ಯಪೂರ್ಣವಾಗಿದೆ ಎಂದೆನಿಸಿದರೂ ಇದನ್ನು ಸ್ಥಳನಾಮ ಅಧ್ಯಯನ, ವಿವರಣೆಯಿಂದ ಮಾತ್ರ ತಿಳಿಯಲು ಸಾಧ್ಯ.

ಪ್ರಸ್ತುತ; ಜಾಗತೀಕರಣ, ಕೈಗಾರೀಕರಣ, ಉದಾರೀಕರಣವೆಂಬ ಈ ತ್ರಿಕರಣಗಳು ಹಲವು ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದಂತೆ ಸಾಮಾಜಿಕ ಜೀವನ ಹಾಗೂ ಅದನ್ನು ಅವಲಂಬಿಸಿರುವ ಸ್ಥಳನಾಮಗಳ ಮೇಲೂ ಪ್ರಭಾವ ಬೀರಿದೆ. ಈ ತ್ರಿಕರಣಗಳ ಪರಿಣಾಮದಿಂದ ಸ್ಥಳನಾಮಗಳು ಸ್ಥಿತ್ಯಂತರಗೊಂಡಿರುವುದನ್ನು ಗಮನಿಸಬಹುದು. ಸ್ವಾತಂತ್ರ್ಯಪೂರ್ವದಲ್ಲಿ ಈ ಮುಂಚೆ ಇದ್ದ ಪ್ರಾಚೀನ ಸ್ಥಳನಾಮಗಳ ಮೇಲೆ ಉರ್ದು ಮತ್ತು ಆಂಗ್ಲ ಆಡಳಿತದ ಪ್ರಭಾವ ಬೀರಿದೆ. ಉದಾ. ಕಬ್ಬಾಳು ಗ್ರಾಮಕ್ಕೆ ಟಿಪ್ಪುಸುಲ್ತಾನನ ಕಾಲದಲ್ಲಿ 'ಜಾಫರಾಬಾದ್' ಎಂದು, ರಾಮನಗರಕ್ಕೆ ಮೈಸೂರು ಕಮೀಷನರ್ ಬ್ಯಾರಿಕ್ಲೋಸ್‌ನ ಸಂತೃಪ್ತಿಗಾಗಿ ಕ್ಲೋಸ್‌ಪೇಟೆ ಎಂದು ಮರುನಾಮಕರಣ ಮಾಡಿದ ಇತಿಹಾಸ ನಮ್ಮ ಕಣ್ಣ ಮುಂದಿದೆ. ಇಂಥ ಪ್ರಭಾವದಿಂದಾಗಿ ಕನ್ನಡ ಭಾಷೆ ಮತ್ತು ಪದಗಳ ವ್ಯತ್ಯಾಸಗಳು ಕಂಡುಬರುತ್ತವೆ. ಇವು ಸ್ವಾತಂತ್ರ್ಯಪೂರ್ವದಲ್ಲಿ ಆದ ಸ್ಥಿತ್ಯಂತರವಾದರೆ, ಇಂದು ಈ ತ್ರಿಕರಣಗಳ ಮುಖ್ಯ ಪಾಲುದಾರರು ಎಂದರೆ ಬಂಡವಾಳಶಾಹಿಗಾರರು, ಮತ್ತು ಅದಕ್ಕೆ ಬೆನ್ನೆಲುಬಾಗಿ ನಿಂತಿರುವ ಸಮಕಾಲೀನ ರಾಜಕಾರಣದಿಂದ ಪ್ರೇರಿತಗೊಂಡ ಶಕ್ತಿಗಳು. ರಾಜಸತ್ತೆಯ ಕಾಲದಲ್ಲಿ ಸ್ಥಳನಾಮಗಳ ಮೇಲೆ ನಿರಂಕುಶ ಪ್ರಭುತ್ವ, ಆಡಳಿತ ದಬ್ಬಾಳಿಕೆ ಹಾಗೂ ಅವರ ಸಾಮಾಜಿಕ ಕಳಕಳಿಯ ದ್ಯೋತಕವೆಂಬಂತೆ ಪ್ರತಿನಾಮಕರಣ, ಸಂಸ್ಕೃತಾನುಕರಣೆಗೊಂಡಿರುವುದು ತಿಳಿದುಬಂದಿದೆ. ಆದರೆ ಇಂದು ಸಮಕಾಲೀನವಾದ ರಾಜಕಾರಣದಲ್ಲಿ ಪ್ರಜಾಸತ್ತೆಯ ಒಪ್ಪಿಗೆ ಇಲ್ಲವೆ ಒಪ್ಪಿಗೆಯನ್ನು ಪಡೆಯದೇ ಸ್ಥಳನಾಮಕರಣಗೊಳಿಸಿದ ಉದಾಹರಣೆಗಳು ಸಾಕಷ್ಟಿವೆ. ಒಂದರ್ಥದಲ್ಲಿ ಗಮನಿಸಿದಾಗ ನಿರಂಕುಶಾಧಿಕಾರಿಗಳ ಮತ್ತು ಪ್ರಸ್ತುತ ರಾಜಕಾರಣ ಶಕ್ತಿಗಳೆರಡೂ ಸ್ಥಳನಾಮಕರಣದಲ್ಲಿ ತಮ್ಮ ಹಸ್ತಕ್ಷೇಪ ಮಾಡಿರುವುದು ಸ್ಪಷ್ಟವಾಗಿ ಗೊತ್ತಿರುವ ಸಂಗತಿ. ಇದರಿಂದಾಗಿ ಒಂದು ಸಮುದಾಯದ, ರಾಷ್ಟ್ರದ ಸಂಸ್ಕೃತಿಯನ್ನೇ ತನ್ನ ಒಡಲಿನಲ್ಲಿ ತುಂಬಿಕೊಂಡು, ಸಂಸ್ಕೃತಿಯ ವಾಹಕಗಳಾದ ಸ್ಥಳನಾಮಗಳು ತಮ್ಮ ಮೂಲಗುಣಗಳಿಂದ ವಿಮುಖವಾಗುತ್ತಿರುವುದು ಸಂಸ್ಕೃತಿ ಪ್ರಿಯರಿಗೆ ಆದ ದ್ರೋಹವೆಂಬುದನ್ನು ಮರೆಯಬಾರದು.

ಒಂದು ಸಾಮಾಜಿಕ ಪರಿಸರದಲ್ಲಿ ಗ್ರಾಮನಾಮಗಳು ಬೀರುವ ಒಟ್ಟು ಪ್ರಭಾವವನ್ನು ಸಮಾಜಮುಖಿಯಾಗಿ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಬಳಸಿದಾಗ ಸ್ಥಳನಾಮಗಳ ಶ್ರೇಷ್ಠತೆಯ ಅರಿವು ನಮಗಾಗದೆ ಇರದು.

೬.೧. ಧರ್ಮಾಧಾರಿತ ಸ್ಥಳನಾಮಗಳು

ಮಾನವನು ತನ್ನ ನಿತ್ಯ ಜೀವನವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಕೆಲವು ವಿಧಾನಗಳನ್ನು ರೂಪಿಸಿಕೊಂಡಿದ್ದಾನೆ. ತನ್ನ ಆರ್ಥಿಕ ಬೇಡಿಕೆಯನ್ನು ಪೂರೈಸಿಕೊಳ್ಳಲು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾನೆ. ತನ್ನ ದೈಹಿಕ ಅಗತ್ಯಗಳನ್ನು ತಣಿಸಿಕೊಳ್ಳಲು ವಿವಾಹ ಹಾಗೂ ಕುಟುಂಬ ವ್ಯವಸ್ಥೆ ಇದೆ. ಈ ಸಂಘ ಸಂಸ್ಥೆಗಳು ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬರಲು ರಾಜ್ಯ ಸಂಸ್ಥೆಗಳಿವೆ. ಅದೇ ರೀತಿಯಾಗಿ ಆತನು ತನ್ನ ಮಾನಸಿಕ ಬೇಡಿಕೆಗಳನ್ನು ದಿವ್ಯಶಕ್ತಿಯಿಂದ ಈಡೇರಿಸಿಕೊಳ್ಳಲು ಮತ್ತು ತನ್ನ ಆತ್ಮವಿಶ್ವಾಸಕ್ಕಾಗಿ ಧರ್ಮ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾನೆ. ಮಾನವನು ತನ್ನ ಕಣ್ಣಿಗೆ ಗೋಚರವಾಗದ ಕೈಗೆ ನಿಲುಕದ ಅಲೌಕಿಕ ಶಕ್ತಿಯ ಬಗ್ಗೆ ಹೊಂದಿರುವ ಭಾವನೆಗೆ ಧರ್ಮವೆಂದು ಕರೆಯಲಾಗುವುದು.

"ಧರ್ಮವು ವಿಶ್ವಶಕ್ತಿಗಳೊಂದಿಗೆ ಬೌದ್ಧಿಕ ಮತ್ತು ಭೌತಿಕ ಸಮನ್ವಯವನ್ನು ಸಾಧಿಸಲು ರೂಪಿಸಲಾದ ನಂಬಿಕೆ ಮತ್ತು ರೂಢಿಗಳ ವ್ಯವಸ್ಥೆಯಾಗಿದೆ. ದೇವತಾ ಸ್ವರೂಪಗಳೊಡನಿರುವ ಮಾನವ ಸಂಬಂಧವೇ ಧರ್ಮ. ಯಾವುದು ಧರಿಸಿ ನಿಲ್ಲುತ್ತದೆಯೋ ಅದೇ ಧರ್ಮ. ಪರರಿಗೆ ಉಪಕಾರ ಮಾಡುವುದು, ನ್ಯಾಯದಿಂದ ಬಾಳುವುದು, ದೇವರನ್ನು ಪೂಜಿಸುವುದು ಮೊದಲಾದ ನೀತಿ ನಿಯಮಗಳು, ಧರ್ಮದ ಆಧಾರ ಸ್ತಂಭಗಳು, ಒಳ್ಳೆಯ ಜೀವನಕ್ಕೆ ಧರ್ಮವೇ ಆಧಾರ. ಮಾನವೀಯ ಮೌಲ್ಯಗಳನ್ನು ಮೂಡಿಸಿ ಮಾನವೀಯತೆಯ ಔನ್ನತ್ಯವನ್ನು ಸಾರುವುದೇ ಧರ್ಮ"[೨] ಪ್ರಪಂಚದಲ್ಲಿ ಯಾವುದೇ ಧರ್ಮವಿಲ್ಲದ ವ್ಯಕ್ತಿಯು ಇರಲು ಸಾಧ್ಯವಿಲ್ಲವೋ ಅದೇ ರೀತಿ ಎಷ್ಟು ಊರುಗಳಿವೆಯೋ ಅಷ್ಟು ಹೆಸರುಗಳಿವೆ. ಧರ್ಮವು ಸಮಾಜಕ್ಕೆ ಅತಿ ಅವಶ್ಯಕವಾದದ್ದು. ಧರ್ಮವು ಸಮಾಜ ಮತ್ತು ಸಮುದಾಯದವರನ್ನು ತನ್ನ ಕದಂಬಬಾಹುಗಳಿಂದ ಅಪ್ಪಿಕೊಂಡಿದೆ. ಅಂದ ಮೇಲೆ ಧಾರ್ಮಿಕವಾದ ಅಂಶಗಳೂ ಕೂಡ ಸ್ಥಳನಾಮಗಳ ಮೇಲೆ ಪ್ರಭಾವ ಬೀರದೆ ಇರಲು ಸಾಧ್ಯವೇ?

ಪ್ರಪಂಚದಲ್ಲಿನ ಧರ್ಮಗಳೆಲ್ಲವೂ ಒಬ್ಬ ದೇವನನ್ನು ಒಪ್ಪಿಕೊಂಡಿವೆ; ಅದೇ ಏಕತೆಯ ಸೂತ್ರ. 'ದೇವನೊಬ್ಬ ನಾಮ ಹಲವು' ಎಂಬಂತೆ ವಿವಿಧ ಧರ್ಮ ಸಂಸ್ಥಾಪಕರ ವಿವಿಧ ಬೋಧನೆಗಳಿಗನುಸಾರವಾಗಿ ಪ್ರಪಂಚದಲ್ಲಿ ಅನೇಕ ಧರ್ಮಗಳು ಉದಯವಾದವು. ಧರ್ಮಕ್ಕನುಗುಣವಾದ ಸ್ಥಳನಾಮಗಳು ಸಹ ಪ್ರಚುರಗೊಂಡಿರಲು ಸಾಧ್ಯ. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಸ್ಥಳನಾಮಗಳ ಮೇಲೆ ಧರ್ಮಗಳು ಯಾವ ರೀತಿ ಪ್ರಭಾವ ಬೀರಿದೆ ಎಂದು ನೋಡಿದಾಗ,

೧. ಹಿಂದೂ ಧರ್ಮ

ಹಿಂದೂ ಧರ್ಮವನ್ನು ಸನಾತನ ಧರ್ಮವೆಂದು ಕರೆಯಲಾಗುತ್ತದೆ. ಸನಾತನ ಧರ್ಮವೆಂದರೆ ಯಾವ ಕಾಲಕ್ಕೂ ಬದಲಾವಣೆ ಹೊಂದದ ಶಾಶ್ವತವಾದ ಧರ್ಮ ಎಂದರ್ಥ. 'ಹಿಂದೂ' ಪದದ ನಿಷ್ಪತ್ತಿಯನ್ನು

ನೋಡಿದಾಗ “ಹಿಂದೂ ಎನ್ನುವ ಶಬ್ದ ಸಿಂಧೂ ಸಂಸ್ಕೃತಿಯನ್ನು ನಿರ್ದೇಶಿಸುವುದಕ್ಕೆ ಪಾರಸೀಕರು ಪ್ರಾಯೋಗಿಸಿದ ಶಬ್ದವೆಂದೂ, ‘ಸಿಂದೂ’ ಎಂಬುದನ್ನು ಅವರ ಭಾಷೆಯಲ್ಲಿ ‘ಹೆಂದೂ’ ಎಂದು ಕರೆದರೆಂದೂ, ಅದರಿಂದ ‘ಹಿಂದೂ’ ಎಂಬ ಪದ ಬಳಕೆಗೆ ಬಂದಿತು. ಗ್ರೀಕರು ತಮ್ಮ ‘ಸಿಂದೂ’ ಎಂಬುದನ್ನು ‘ಇಂಡಾಯ್’ ಎಂದು ಕರೆದರೆಂದೂ ಅದರಿಂದ ‘ಇಂಡಿಯಾ’ ಎಂಬ ಪದ ಬಳಕೆಗೆ ಬಂದಿತೆಂದೂ ಇತಿಹಾಸ ತಜ್ಞರ ಅಭಿಪ್ರಾಯ”.[೩] ಎಂದರೆ “ಹಿಂದೂ ಎಂಬುದು ಪರ್ಷಿಯನ್‌ರು ಸಿಂಧೂ ನದಿಯನ್ನು ಉದ್ದೇಶಿಸಿ ಹೇಳುತ್ತಿದ್ದ ಶಬ್ದ. ಕ್ರಿ.ಪೂ. ೬ನೇ ಶತಮಾನದಲ್ಲಿ ಸಿಂಧೂ ನದಿಯ ಸುತ್ತಲಿನ ಪರ್ಷಿಯನ್ ಸಾಮ್ರಾಜ್ಯದ ಭಾಗಕ್ಕೆ ಸಿಂಧೂ ಎಂದು ಕರೆಯಲಾಗುತ್ತಿತ್ತು”[೪] ಸಿಂಧೂ ನದಿ ತೀರದ ನಿವಾಸಿಗಳ ಧರ್ಮವಾಗಿ ಹಿಂದೂಧರ್ಮ ಜನ್ಮ ತಾಳಿತು. ಹಿಂಧೂ ಜನರ ಧರ್ಮವೇ ಹಿಂದೂ ಧರ್ಮ.

ಹಿಂದೂ ಧರ್ಮ; ಪ್ರಪಂಚದ ಎಲ್ಲ ಧರ್ಮಗಳಿಗಿಂತ ತುಂಬಾ ಪ್ರಾಚೀನವಾದ ಧರ್ಮ. ಕುರಾನ್ ಬೈಬಲ್‌ನಂತೆ ಒಬ್ಬ ವ್ಯಕ್ತಿಯ ಉಪದೇಶವಲ್ಲ ಹಾಗೂ ಒಬ್ಬ ವ್ಯಕ್ತಿ ನಿರ್ಮಾಣಮಾಡಿದ ಧರ್ಮವಲ್ಲ. ಹಿಂದೂ ಧರ್ಮದ ತತ್ವಗಳನ್ನು ತಿಳಿಸುವ ಪುರಾತನ ಗ್ರಂಥಗಳೆಂದರೆ ವೇದಗಳು. ಆದ್ದರಿಂದ ಇದನ್ನು ವೈದಿಕ ಧರ್ಮವೆಂದು ಕರೆಯುವರು. ಆಗಿನ ಕಾಲದ ಅನೇಕ ಋಷಿಗಳ ಆತ್ಮಾನುಭವದ ಉಕ್ತಿಗಳು. ಆಗಮಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಮಹಾಕಾವ್ಯಗಳು ಕಾಲಕಾಲಕ್ಕೆ ರೂಪುಗೊಂಡು ಹಿಂದೂ ಧರ್ಮಕ್ಕೆ ಒಂದು ಹೊಸ ರೂಪ ಕೊಟ್ಟಿವೆ.

ಹಿಂದೂ ಧರ್ಮದಲ್ಲಿ ೩ ಮುಖ್ಯ ಶಾಖೆಗಳಿವೆ. ೧. ವೈಷ್ಣವ ಮತ ೨. ಶೈವ ಮತ ೩. ಶಾಕ್ತಮತ. ಈ ಮತಗಳಿಗನುಗುಣವಾಗಿ ಸಮಾಜದಲ್ಲಿ ವ್ಯಕ್ತಿಗಳು, ಸಮುದಾಯದವರು ಅನೇಕ ದೇವತೆಗಳನ್ನು ಆರಾಧಿಸುತ್ತಾ ಬಂದಿದ್ದಾರೆ. ತಮ್ಮ ದೈವಗಳ ಹೆಸರನ್ನು ತಾವು ನೆಲೆಸಿದ ಸ್ಥಳಗಳಿಗೂ ನೀಡಿ ಪುನೀತ ಭಾವದಿಂದ ಯಾತ್ರೆ ಹೊರಡುವುದನ್ನು ಸಮಾಜದಲ್ಲಿ ಕಾಣಲು ಸಾಧ್ಯ. ಅಂಥ ಮತಕ್ಕನುಗುಣವಾದ ದೈವಗಳ ಹೆಸರಿನಲ್ಲಿರುವ ಗ್ರಾಮನಾಮಗಳನ್ನು ಅಧ್ಯಯನ ಮಾಡಿದ್ದೇ ಆದಲ್ಲಿ ಆ ಮತದವರ ಪ್ರಭಾವ ಆ ಸ್ಥಳಗಳ ಮೇಲೆ ಆಗಿರುವುದನ್ನು ಕಾಣಬಹುದು. ರಾಜಸತ್ತೆಯ ಕಾಲಮಾನದಲ್ಲಿ ಪ್ರಬಲವಾದ ಅರಸನೊಬ್ಬನ ಮತವನ್ನು ಒತ್ತಡದ ಹಿನ್ನೆಲೆಯಲ್ಲಿಯೋ ಅಥವಾ ಹಲವಾರು ಆಸೆ ಆಮಿಷಗಳಿಗೆ ಒಳಗಾಗಿಯೋ, ಖಡ್ಗದ ಮೂಲಕವಾಗಿಯೋ ಹಿಂದಿದ್ದ ದೈವದ ನೆಲೆಯನ್ನು ಬದಲಾಯಿಸುವ ಪ್ರಯತ್ನಗಳು, ದಾಳಿಗಳು ನಡೆದರೂ ಹಿಂದಿದ್ದ ಸ್ಥಳದಲ್ಲಿನ ಮತ, ಪಂಥವನ್ನು ಸ್ಥಳನಾಮಗಳು ಬಿಟ್ಟು ಕೊಡದಿರುವುದು ಸ್ಥಳನಾಮ ಅಧ್ಯಯನದ ಮೂಲಕ ತಿಳಿಯಲು ಸಾಧ್ಯವಾಗಿದೆ.

ಅ. ವೈಷ್ಣವ ಮತ

ವೈಷ್ಣವ ಧರ್ಮವು ಮಹಾಭಾರತದಲ್ಲಿ ಉಲ್ಲೇಖಿತವಾಗಿದೆ. ಇದನ್ನು ಭಾಗವತ ಧರ್ಮವೆಂದೂ ಕರೆಯುತ್ತಾರೆ. ಶ್ರೀವಿಷ್ಣುವಿನ ವಿವಿಧ ನಾಮಗಳಾದ ನಾರಾಯಣ, ಹರಿ, ವೆಂಕಟರಮಣ, ವಿಠಲ, ಅಲ್ಲದೇ ವಿಷ್ಣುವಿನ ದಶಾವತಾರದ ಕೃಷ್ಣ, ನರಸಿಂಹ, ರಾಮ ಮೊದಲಾದ ಹೆಸರುಗಳಿರುವ ಮತ್ತು ವಿಷ್ಣುವಿನ

ಕಿಂಕರರಾದ ಗರುಡ, ಹನುಮಂತ, ಮಾರುತಿ ಮೊದಲಾದ ಹೆಸರುಗಳಿರುವ ನೆಲೆಗಳು ಸಾಮಾನ್ಯವಾಗಿ ವೈಷ್ಣವ ಮತ ಪ್ರಭಾವವಿರುವ ಅಥವಾ ವೈಷ್ಣವ ಧರ್ಮಾವಲಂಭಿಗಳಿರುವ ನೆಲೆಗಳಾಗಿವೆ. ಶಾತವಾಹನ ಕಾಲದಲ್ಲಿ ಇದು ದಕ್ಷಿಣ ಭಾರತಕ್ಕೆ ಹರಡಿದೆ.

ವೈಷ್ಣವ ಧರ್ಮವನ್ನು ಪ್ರಚಾರಕ್ಕೆ ತಂದ ಕೀರ್ತಿ ತಮಿಳುನಾಡಿನ ಆಳ್ವಾರರಿಗೆ ಸಲ್ಲುತ್ತದೆ. "ಇಂತಹ ಚಕ್ರೋಕ್ತಳ್ವಾರ್ ಮೂರ್ತಿ ಕಲ್ಯದಲ್ಲಿತೆಂಬ ಮೈಗೂರು ಪುರಾತತ್ವ ವರದಿಯಿದೆ. ಇದರಿಂದ ವೈಷ್ಣವಧರ್ಮ ಮಾಗಡಿ ಸೀಮೆಯಲ್ಲಿ ರಾಮಾನುಜಾಚಾರ್ಯರಿಗೂ ಮೊದಲೇ ಪ್ರಚಾರ ಪಡೆದಿತ್ತೆಂದು ಸ್ಪಷ್ಟವಾಗುತ್ತದೆ"[೯]. ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ಪಂಥಕ್ಕೆ ಹೊಯ್ಸಳರಾಜ ವಿಷ್ಣುವರ್ಧನನನ್ನು ವೈಷ್ಣವ ಧರ್ಮಾವಲಂಬಿಯಾಗಿ ಮಾಡಿದ ಪರಿಣಾಮವಾಗಿ ನಂತರದಲ್ಲಿ ವಿಜಯನಗರ ಸಾಮ್ರಾಜ್ಯಾಧಿಪತಿಗಳ ಹಾಗೂ ಮೈಸೂರು ಅರಸರ ಕೊಡುಗೆಗಳಿಂದ ಸುತ್ತಲೂ ಹಬ್ಬಿದ ವೈಷ್ಣವ ಧರ್ಮಕ್ಕೆ ಗುಡಿಗೋಪುರಗಳು, ದಾನದತ್ತಿಗಳು ದೊರೆತವು. "ವೈಷ್ಣವ ನೆಲೆಯಾಗಿದ್ದ ಕಲ್ಯ, ಕಾಳಾರಿ, ಕರ್ಲಮಂಗಲ, ಹುಲಿಕಲ್ಲು, ಅಗಳಕೋಟೆ ಮುಂತಾದ ಸ್ಥಳಗಳಲ್ಲಿದ್ದ ವರದರಾಜ ಗುಡಿಗಳು ನಾಮಾವಶೇಷಗೊಂಡಿವೆ"[೬]. ಇದರಿಂದ ಜಿಲ್ಲೆಯಾದ್ಯಂತ ವೈಷ್ಣವ ಸಂಬಂಧಿಯಾದ ದೇವಾಲಯಗಳಷ್ಟೇ ಅಲ್ಲದೇ ಸ್ಥಳನಾಮಗಳು ಸಿಗುತ್ತವೆ.

(ಕ)	ಅನಮನಹಳ್ಳಿ	ನಾರಾಯಣಪುರ	ರಾಮಪುರ
	ಹನುಮನಹಳ್ಳಿ	ಹರಿಹರ	
(ರಾ)	ಅನುಮನಹಳ್ಳಿ	ಕ್ಯಾಸಾಪುರ	ಕೇಶವಪುರ
	ರಾಮನಗರ		
(ಚ)	ಕೃಷ್ಣಪುರ	ರಾಮನರಸಿಂಹಪುರ	ರಾಮಪುರ
(ಮಾ)	ಕೃಷ್ಣಾಪುರ	ತಿರುಮಲೆ	ತಿರುಮಾಲಾಪುರ
	ನಾರಾಯಣಪುರ	ರಘುನಾಥಪುರ	ರಾಮನಹಳ್ಳಿ
	ವರದೋಹಳ್ಳಿ	ವಿಠಲಪುರ	ವೆಂಗಳಪ್ಪನಹಳ್ಳಿ
	ಶ್ರೀನಿವಾಸಪುರ	ಶ್ರೀಪತಿಹಳ್ಳಿ	ಶೇಷಗಿರಿಪುರ

ಹನುಮನಹಳ್ಳಿ>ಅನಮನ ಹಳ್ಳಿಯಾಗಿದೆ

ಆ. ಶೈವ ಮತ

ಕರ್ನಾಟಕದಲ್ಲಿ ೧೨ನೇ ಶತಮಾನಕ್ಕಿಂತಲೂ ಹಿಂದೆ ಅನೇಕ ಶೈವಮತ ರೂಪಗಳಿದ್ದವು. ಕಾಪಾಲಿಕ, ಕಾಳಾಮುಖ, ಲಾಕುಳಶೈವ, ಗಾಣಪತ್ಯ ಮುಂತಾದ ಉಪ ಶಾಖೆಗಳಿದ್ದವು. ಇವುಗಳ ಮೂಲ ದೈವ ಶಿವ. ಸಂಸ್ಕೃತ ಪರಂಪರೆಯ ವೇದ-ಆಗಮಗಳನ್ನು ಇವರು ಒಪ್ಪುತ್ತಾರೆ. ಇವರು ಗುಡಿಯಲ್ಲಿ ಸ್ಥಾಪಿಸಿದ ಸ್ಥಾವರ ಲಿಂಗದ ಪೂಜೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಶೈವ ಪಂಥದ ದೈವಗಳಾದ ವೀರಭದ್ರ, ಶಿವ-ಶಿವನಿಗಿರುವ ನಾಮಗಳಿಂದ, ಪರಮೇಶ್ವರ, ಲಿಂಗ, ನಂದಿ ಮುಂತಾದ ಹೆಸರುಗಳನ್ನೊಳಗೊಂಡ ಶೈವ ಸ್ಥಳಗಳಿದ್ದರೆ

ಖಂಡಿತವಾಗಿಯೂ ಆ ಸ್ಥಳಗಳಲ್ಲಿ ಒಂದಾನೊಂದು ಕಾಲದಲ್ಲಿ ವೀರಶೈವ ಮತದ ಪ್ರಭಾವ ಬೀರಿರಲು ಸಾಧ್ಯ. ವೀರಶೈವ ಮತದವರು ತನ್ನ ನೆಲೆಗೆ ಇಷ್ಟ ದೈವದ ಹೆಸರುಗಳನ್ನೇ ತಮ್ಮ ಸ್ಥಳಗಳಿಗೆ ಇಟ್ಟಿರಲು ಸಾಧ್ಯ.

(ಕ)	ಲಿಂಗನಪುರ	ಶಿವನಹಳ್ಳಿ	ಸೋಮನಾಥಪುರ
(ಚ)	ಸೋಮನಾಥಪುರ		
(ಮಾ)	ಮಲ್ಲಿಕಾರ್ಜುನಪುರ	ಲಿಂಗೇನಹಳ್ಳಿ	ಶಂಭುದೇವನಹಳ್ಳಿ
	ಶಿವನಸಂದ್ರ		

೨. ಬೌದ್ಧ ಧರ್ಮ

ಭಾರತವು ಬೌದ್ಧಧರ್ಮದ ತವರೂರು. ಬೌದ್ಧಧರ್ಮದ ಸ್ಥಾಪಕ ಬುದ್ಧ. ಇದು ವಿಶ್ವದ ಪ್ರಾಚೀನ ಧರ್ಮಗಳಲ್ಲಿ ಒಂದು. ಕ್ರಿ.ಪೂ.೩ನೇ ಶತಮಾನದಲ್ಲಿ ಭಾರತವನ್ನು ಆಳ್ವಿಕೆ ಮಾಡಿದ ಅಶೋಕನ ಕಾಲದಲ್ಲಿ ಉನ್ನತ ಸ್ಥಾನ ಪಡೆದ ಧರ್ಮವಾಗಿತ್ತು. ಬೌದ್ಧಧರ್ಮವು ಕರ್ನಾಟಕದಲ್ಲಿಯೂ ಪ್ರಬಲವಾಗಿತ್ತು ಎಂಬುದಕ್ಕೆ ಮೌರ್ಯ ಸಾಮ್ರಾಜ್ಯ ಅಧಿಪತಿ ಅಶೋಕನ ಶಾಸನಗಳು, ಸಿದ್ದಾಪುರ, ಜಟಿಂಗ ರಾಮೇಶ್ವರ, ಬ್ರಹ್ಮಗಿರಿ, ಮಸ್ಕಿ ಮತ್ತು ಕೊಪ್ಪಳದಲ್ಲಿ ಸಿಕ್ಕಿವೆ.

ಬೌದ್ಧ ಧರ್ಮದ ಮಹಾಗ್ರಂಥಗಳಾದ ಮಹಾವಂಶ ಮತ್ತು ದೀಪವಂಶಗಳ ಪ್ರಕಾರ ಮೊಗ್ಗಲಿಪುತ್ರ ತಿಸ್ಸನು ಥೇರನಾದ ಮಹಾದೇವನನ್ನು ಮಹಿಷಮಂಡಲಕ್ಕೂ (ಈಗಿನ ಮೈಸೂರು) ರಕ್ಷಿತವನ್ನು ಬನವಾಸಿಗೂ ಬೌದ್ಧಧರ್ಮ ಪ್ರಚಾರಕ್ಕೆ ಕಳುಹಿಸಿಕೊಟ್ಟ ವಿವರಗಳಿವೆ.

ಬೌದ್ಧ ಧರ್ಮದಲ್ಲಿ ಹೀನಯಾನ, ಮಹಾಯಾನ ಮತ್ತು ವಜ್ರಯಾನವೆಂಬ ಶಾಖೆಗಳಿದ್ದು, ಬುದ್ಧನು ಬೋಧಿಸಿದ ಧರ್ಮಕ್ಕೆ ಮುಂದೆ ಹೀನಯಾನವೆಂಬ ಹೆಸರು ಬಂದಿತು. ಇದರಲ್ಲಿ ವ್ಯಕ್ತಿಯ ಶವ, ದಮ, ಕರುಣೆ ಮುಂತಾದ ಶೀಲಗಳನ್ನು ಒತ್ತಿ ಹೇಳಿದ್ದರೂ, ವ್ಯಕ್ತಿ ತನ್ನ ಸ್ವಂತ ಮೋಕ್ಷವನ್ನು ಪಡೆಯುವ ವಿಷಯದಲ್ಲಿ ಧರ್ಮದ ಆಕ್ಷೇಪಣೆಯೇನೂ ಇಲ್ಲ ಎಂಬುದನ್ನು ಪ್ರತಿಪಾದಿಸಿತ್ತು. ಕ್ರಿ.ಶ.೧-೨ನೇ ಶತಮಾನದ ಕಾನಿಷ್ಕನ ಕಾಲದಲ್ಲಿ ಈ ಪಂಥದವರ ತತ್ವಗಳನ್ನು ಒಪ್ಪದೇ ಮಹಾಯಾನ ಎಂಬ ಹೊಸ ಪಂಥ ಹುಟ್ಟಿಕೊಂಡಿತು. ಈ ಪಂಥವು ಆದರ್ಶವ್ಯಕ್ತಿ, ಬೋಧಿಸತ್ವ, ಮೋಕ್ಷವನ್ನು ಪಡೆದು ಬುದ್ಧನಾಗುವ ಮುನ್ನಿನ ಸ್ಥಿತಿಯೇ ಬೋಧಿಸತ್ವ ಸ್ಥಿತಿ, ಜಗತ್ತಿನ ಜೀವಿಗಳ ವಿಷಯದಲ್ಲಿ ಕರುಣೆಯಿದ್ದು ದುಃಖವನ್ನು ತಡೆಯಲು ಮೋಕ್ಷವೇ ಬೇಡವೆಂದು ತಿರಸ್ಕರಿಸಿರುವ ಕರುಣಾಮೂರ್ತಿಯೇ ಬೋಧಿಸತ್ವ ಎನ್ನುವ ವಿಚಾರಗಳಿವೆ. ಮಹಾಯಾನವು ಜಗತ್ತಿನ ವಿಷಯದಲ್ಲಿ ಕರುಣೆ ಸ್ವಾತಂತ್ರ್ಯವಿಚಾರ, ಉದಾರ ದೃಷ್ಟಿಕೋನಗಳು ಮೂಡಿ ಅದೊಂದು ಉದಾತ್ತ ಧರ್ಮವಾಯಿತು. ಐತಿಹಾಸಿಕ ಪುರುಷ ಬುದ್ಧನನ್ನು ಅವತಾರಪುರುಷನೆಂದು ಪರಿಗಣಿಸಿ ಅವನಿಗೆ ದೈವತ್ವ ಪಟ್ಟಕಟ್ಟಿದ್ದು ಮಹಾಯಾನ.[೭]

ಭಾರತದಲ್ಲಿ ಬೌದ್ಧಧರ್ಮ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಜನಪ್ರಿಯತೆಗಾಗಿ ಮಂತ್ರ, ತಂತ್ರಾದಿ ಗುಪ್ತ ಹಾಗೂ ವಾಮ ಮಾರ್ಗಗಳನ್ನು ಅಳವಡಿಸಿಕೊಂಡು ವಜ್ರಯಾನ ಅಥವಾ ತಾಂತ್ರಿಕ ಬೌದ್ಧಧರ್ಮವು ಮೈತಳೆಯಿತು. ಬೌದ್ಧಧರ್ಮಕ್ಕೆ ಶೈವಧರ್ಮದ ಸಂಸ್ಕಾರವನ್ನು ನೀಡಿ ಹೊಸರೂಪವನ್ನು ಕೊಟ್ಟುದ್ದರ ಪರಿಣಾಮವಾಗಿ ನಾಥಪಂಥವು ಹುಟ್ಟಿಕೊಂಡಿತು. ಈ ಪಂಥದಲ್ಲಿ ಅನೇಕರು ಸಿದ್ಧರು ಎನಿಸಿಕೊಂಡರು. ಕ್ರಿ.ಶ.ಸು.೯-೧೦ನೇ ಶತಮಾನದಲ್ಲಿ ಬಂಗಾಳದಲ್ಲಿ ಹುಟ್ಟಿಕೊಂಡ ನಾಥಪಂಥದ ಸ್ಥಾಪಕರು ಶ್ರೀಮಚ್ಛೇಂದ್ರ ನಾಥ ಹಾಗೂ ಇವರ ಶಿಷ್ಯ ಗೋರಕ್ಷನಾಥರು. ತಾಂತ್ರಿಕ ಸಾಧನೆಗಳ ಮೂಲಕ ಈ ಪಂಥವನ್ನು ಅಲ್ಪಸಮಯದಲ್ಲೇ ಭಾರತದ ಎಲ್ಲಾ ಪ್ರದೇಶಗಳಿಗೂ ಪ್ರಚಾರ ಮಾಡಿದರು. “ಬಹುಶಃ ೭ನೇ ಶತಮಾನದಲ್ಲಿ ನಾಗಾರ್ಜುನನೆಂಬ ಬೌದ್ಧ ತಾಂತ್ರಿಕನ ಮೂಲಕ ತಾಂತ್ರಿಕ ಬೌದ್ಧಧರ್ಮವು ದಕ್ಷಿಣ ಭಾರತದಲ್ಲಿ ಪ್ರಸಾರವಾಯಿತು”.[೮] ಕರ್ನಾಟಕದಲ್ಲಿಯೂ ಬೌದ್ಧಧರ್ಮವು ನೆಲೆಸಿತ್ತು. ರಾಮನಗರ ಜಿಲ್ಲೆಯ ಪರಿಸರದಲ್ಲಿ “ಮಾಗಡಿ ಸಮೀಪದ ಕಲ್ಯದಲ್ಲಿ ೧೬ನೇ ಶತಮಾನದಲ್ಲಿ ಬೌದ್ಧರಿದ್ದರು”[೯] ಎಂಬುದಾಗಿ ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಮಾಗಡಿ ತಾಲೂಕಿನ ‘ಕಲ್ಯ’ವನ್ನು ಶಾಸನಗಳು ತಾರಕಾಚಲ, ಕಲವತೀಪಟ್ನ, ಕಲ್ಲೆಹ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿತ್ತು.

೧೫೫೩ರ ತುರುವೇಕೆರೆ ಶಾಸನವು ‘ಬೌದ್ಧವಾಸ ಮಹಾಪುರಿ ಕಲವತೀ’ ಎಂದು ಉಲ್ಲೇಖಿಸಿರುವುದು ಗಮನಾರ್ಹ. ಬೌದ್ಧಧರ್ಮದವರ ನೆಲೆ ಎಂಬುದಾಗಿ ಕರೆದಿದೆ. ಅಲ್ಲದೇ “ಬೌದ್ಧವಾಸ ಮಹಾಪುರಿ (ಕಲ್ಯ)ದಿಂದ ಉತ್ತರಕ್ಕೆ ‘ಹರಿಣಾಟವಿ’ ಎಂಬ ಗ್ರಾಮವನ್ನು ಈ ಶಾಸನವು ಉಲ್ಲೇಖಿಸುತ್ತದೆ. ಹರಿಣಾಟವಿ ಎಂದರೆ ಜಿಂಕೆವನ. ಬೌದ್ಧಧರ್ಮದೊಂದಿಗೆ ಸಾಂಪ್ರದಾಯಿಕ ಸಂಬಂಧ ಹೊಂದಿದೆ”[೧೦] ಎಂಬಲ್ಲಿ ‘ಹರಿಣಾಟವಿ’ ಎಂಬ ಶಾಸನೋಲ್ಲೇಖ ಬೇಚರಾಕ್ ಗ್ರಾಮವೂ ಕೂಡ ಬೌದ್ಧರ ನೆಲೆಯಾಗಿತ್ತು ಎಂಬುದು ಸಿದ್ಧವಾಗುತ್ತದೆ. ಅಲ್ಲದೇ ಬೌದ್ಧ ಧರ್ಮಸಂಬಂಧಿಯಾದ ಸ್ಥಳಗಳು ಇಂತಿವೆ.

‘ಬೌದ್ಧವಾಡಿಗೆ’ ಎಂಬ ಹೆಸರಿನ ಬಡಾವಣೆ ಏಳಾಪುರ ಎಂಬ ಅಗ್ರಹಾರದಲ್ಲಿದ್ದ ಸಂಗತಿಯನ್ನು ಒಂದು ಶಾಸನ ತಿಳಿಸುತ್ತದೆ. ಅಲ್ಲಿ ಬೌದ್ಧರೇ ವಿಶೇಷವಾಗಿ ವಾಸಿಸುತ್ತಿದ್ದಾರೆಂದು ಕಾಣುತ್ತದೆ”[೧೧] ಎಂಬ ಸ್ಥಳನಾಮ ಸೂಚಿ ಮಹತ್ವದ್ದಾಗಿದೆ. ಇದಕ್ಕೆ ಪೂರಕವೆಂಬಂತೆ

(ರಾ)	ಸುಗ್ಗನಹಳ್ಳಿ		
(ಕ)	ಮಂಜುನಾಥ		
(ಚ)	ಮೈಲನಾಥಪುರ	ಸಿದ್ಧನಹಳ್ಳಿ	ಸಿದ್ಧಾಪುರ
(ಮಾ)	ರಘುನಾಥಪುರ	ವಿಶ್ವನಾಥಪುರ	ಸಿದ್ಧಾಪುರ
	ಸಿದ್ಧದೇವರಬೆಟ್ಟ		

ಸುಗತನಹಳ್ಳಿ<ಸುಗ್ಗನಹಳ್ಳಿಯಾಗಿದೆ. ಬೌದ್ಧ ಧರ್ಮದ ವಜ್ರಯಾನದ ತಾಂತ್ರಿಕ ಪಂಥದವರನ್ನು ಸಿದ್ಧರು, ನಾಥ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿರುವುದರಿಂದ ಬೌದ್ಧಸಿದ್ಧ ಮತ್ತು ನಾಥ ಪಂಥದ

ಮೂಲ ಬೌದ್ಧಧರ್ಮವೇ ಆಗಿರುವುದರಿಂದ ಸಿದ್ಧ ಮತ್ತು ನಾಥ ಬಂದಿರುವ ಸ್ಥಳನಾಮಗಳು ಬೌದ್ಧ ಧರ್ಮಾಧಾರಿತ ಸ್ಥಳನಾಮಗಳೆಂದು ಪರಿಗಣಿಸಬಹುದು.

೩. ವೀರಶೈವ/ಲಿಂಗಾಯತ ಧರ್ಮ

ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರಿಂದ ಪ್ರಚುರಗೊಂಡ ಧರ್ಮ ವೀರಶೈವ ಅಥವಾ ಲಿಂಗಾಯತ ಧರ್ಮ. ವೀರಶೈವರು ಸ್ಥಾವರಲಿಂಗಕ್ಕಿಂತ, ಗುರುವಿನಿಂದ ದೀಕ್ಷೆಪಡೆದ ಇಷ್ಟ ಲಿಂಗವನ್ನು ವಿಶೇಷವಾಗಿ ಆರಾಧಿಸುತ್ತಾರೆ. "ಇಷ್ಟ ಲಿಂಗಧಾರಣೆ, ಗುರುಲಿಂಗ-ಜಂಗಮರಿಗೆ ಆದ್ಯತೆ, ಪಾದೋದಕ ಪ್ರಸಾದ ಸೇವಿಸುವುದು ವಿಭೂತಿ, ರುದ್ರಾಕ್ಷಿ ಧರಿಸುವುದು, ಮಂತ್ರ ಹೇಳುವುದು ಇದರ ಲಕ್ಷಣಗಳು. ಧರ್ಮ ಕೇಂದ್ರಿತ ಪರಂಪರೆಗೆ ಸಮಾಜ ಕೇಂದ್ರಿತ ಸ್ವರೂಪ ಕೊಟ್ಟಿದ್ದು ಶರಣರ ವಿಶೇಷತೆ. ಇದರಿಂದ ವರ್ಗ, ವರ್ಣ, ಲಿಂಗ ಭೇದಗಳನ್ನು ನಿರಾಕರಿಸುವ ಧರ್ಮವೊಂದು ಕರ್ನಾಟಕದಲ್ಲಿ ಆಕಾರ ಪಡೆಯಿತು"[೨]. ಇಂಥ ಮಾನವತೆಯ ಧರ್ಮದ ಪ್ರಭಾವ ಸ್ಥಳನಾಮಗಳ ಮೇಲೆ ಬೀರಿವೆ. ವೀರಶೈವ ಪ್ರಭಾವದಿಂದಾಗಿ ಗ್ರಾಮ ನಾಮಗಳಲ್ಲಿ ಅಯ್ಯ, ಜಂಗಮ, ಒಡೆಯ, ಮಠ, ಬಸವ ಮುಂತಾದ ಹೆಸರುಗಳನ್ನೊಳಗೊಂಡ ಹಲವು ಗ್ರಾಮನಾಮಗಳು ಜಿಲ್ಲೆಯಲ್ಲಿ ಸಿಗುತ್ತವೆ.

(ಕ) ಬಸವನಹಳ್ಳಿ,	ಬಸವಾಪಟ್ಟಣವೀರಸಂದ್ರ	ಬಸವನಪುರ
(ಮಾ)ಬಸವಾಪಟ್ಟಣ	ಬಸವೇನಹಳ್ಳಿ	

೪. ಇಸ್ಲಾಂ ಧರ್ಮ

ಭಾರತದ ಒಟ್ಟು ಜನ ಸಂಖ್ಯೆಯ ೧/೫ ಭಾಗ ಜನರು ಮುಸ್ಲಿಂರಾಗಿದ್ದಾರೆ. ದಕ್ಷಿಣ ಭಾರತಕ್ಕೂ, ಪಶ್ಚಿಮ ಏಷ್ಯಕ್ಕೂ ಇತಿಹಾಸ ಪೂರ್ವ ಕಾಲದಲ್ಲಿಯೇ ವ್ಯಾಪಾರ ಸಂಬಂಧ ಬೆಳೆದಿತ್ತು. ೭ನೇ ಶತಮಾನದ ವೇಳೆಗೆ 'ಮಹಮ್ಮದ್' ಎಂಬುವನು ಭಾರತದ ಮೇಲೆ ದಂಡೆತ್ತಿ ಬಂದು 'ಸಿಂಧ್' ಪ್ರದೇಶವನ್ನು ಮುತ್ತಿಗೆ ಹಾಕಿ ಅಲ್ಲಿಯ ರಾಜನನ್ನು ಸೋಲಿಸಿ ತನ್ನ ಆಳ್ವಿಕೆಯನ್ನು ನೆಲೆಗೊಳಿಸಿದನು. ೯ನೇ ಶತಮಾನದ ಕೊನೆಗೆ ಅರಬ್ಬರ ಚಕ್ರಾಧಿಪತ್ಯವು ಇತರ ಭಾಗಗಳಲ್ಲಿಯೂ ಸ್ವತಂತ್ರ ರಾಜ್ಯಗಳು ಹುಟ್ಟಿಕೊಂಡವು. ಇವುಗಳಲ್ಲಿ ಘುಜ್ನಿ ಮಹಮ್ಮದ್ ಭಾರತಕ್ಕೆ ಬಂದು ಪಂಜಾಬನ್ನು ಮುತ್ತಿ ಅಲ್ಲಿಯ ರಾಜರನ್ನು ಸೋಲಿಸಿದನು. ಅವನ ವಿಜಯ, ಮಿತಿ ಇಲ್ಲದ ಕೊಳ್ಳೆಗಳೆಲ್ಲವೂ ವಿಗ್ರಹಾರಾಧಕರ ಮೇಲೆ ಹೂಡಿದ ಪವಿತ್ರ ಯುದ್ಧದ ನೆಪ ಇವೆಲ್ಲವೂ ಸೇರಿ ಅನೇಕರು ಘುಜ್ನಿ ಮಹಮದನ ಸೈನ್ಯ ಸೇರಿಕೊಂಡರು. ಇವನು ಆರಂಭಿಸಿದ ಕೆಲಸವನ್ನು ಆಫ್ಘನ್ನರು-ಮೊಗಲರು ಮುಂದುವರಿಸಿದರು. ಕೆಲವರು ದಾಳಿ ಮಾಡಿ ಕೊಳ್ಳೆ ಹೊಡೆದು ಹಿಂದಿರುಗಿದರೆ ಮತ್ತೆ ಕೆಲವರು ಚಕ್ರಾಧಿಪತ್ಯವನ್ನು ಕಟ್ಟಿದರು.

೧೪ನೇ ಶತಮಾನದ ವೇಳೆಗೆ ಭಾರತದಲ್ಲಿ ಮುಸ್ಲಿಮರ ರಾಜ್ಯಭಾರ ಪ್ರಾರಂಭವಾದಾಗ ದೇಶದ ಅನೇಕ ಪ್ರಮುಖ ಸ್ಥಳಗಳಲ್ಲಿ ಮಸೀದಿಗಳನ್ನು ಕಟ್ಟಲು ಪ್ರಾರಂಭಿಸಿದರು. ಈ ಮಸೀದಿಗಳು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಮುಸ್ಲಿಂ ಚಕ್ರವರ್ತಿಗಳು ಪರ್ಷಿಯಾ, ಅರೇಬಿಯಾ,

ಮೊದಲಾದೆಡೆಗಳಿಂದ ವಿದ್ವಾಂಸರು ಬಂದು ಭಾರತದಲ್ಲಿ ನೆಲೆಸುವುದಕ್ಕೆ ಪ್ರೇರಣೆಯನ್ನು ನೀಡಿದರು. ಹೀಗೆ ನೆಲೆಸಿದ ವಿದ್ವಾಂಸರು ದೇಶದ ಭಾಷೆ, ಆಚಾರ-ವಿಚಾರ, ವ್ಯವಹಾರಗಳನ್ನು ಅನುಸರಿಸಿ ತಮ್ಮ ಇಸ್ಲಾಂ ತತ್ವಗಳನ್ನು, ಇಲ್ಲಿಯ ಸಂಸ್ಕೃತಿ ದರ್ಶನಗಳೊಡನೆ ಹೊಂದಿಸಿಕೊಂಡರು. ಒಂದು ಹೊಸದಾದ ಮಾರ್ಗವನ್ನು ಸ್ಥಾಪಿಸಿ, ಸಾವಿರಾರು ಜನರನ್ನು ಅದರಲ್ಲೂ ಮುಖ್ಯವಾಗಿ ಕೆಳವರ್ಗದವರನ್ನು ಇಸ್ಲಾಂ ಮತಕ್ಕೆ ಸೇರಿಸಿಕೊಂಡರು.

೧೭ನೇ ಶತಮಾನದ ವೇಳೆಗೆ ಮುಸ್ಲಿಂರು ಈ ದೇಶವನ್ನು ಕೊಳ್ಳೆ ಹೊಡೆಯುವುದನ್ನು ಬಿಟ್ಟು, ಅವರ ದೇಶದ ಸಂಬಂಧವನ್ನು ಕಡಿದುಕೊಂಡು, ಇಲ್ಲಿಯ ರಾಜಕೀಯ, ಆರ್ಥಿಕ, ಔದ್ಯೋಗಿಕ ವಿಷಯಗಳಲ್ಲಿ ಭಾರತೀಯರೊಡನೆ ಏಕರೂಪವಾಗಿ ಕಾಣಿಸಿಕೊಳ್ಳಲು ತೊಡಗಿ ಇದೇ ದೇಶದವರಾದರು. ಹೀಗೆ ಮುಸ್ಲಿಂ ಧರ್ಮ, ಆಚಾರ, ವ್ಯವಹಾರಗಳು ಭಾರತೀಯ ಸಮಾಜದಲ್ಲಿ ಬೇರೂರಲು ಕಾರಣವಾಯಿತು. ಇವರ ಧಾರ್ಮಿಕ ಅಂಶಗಳು ಸ್ಥಳನಾಮಗಳ ಮೇಲೂ ಪ್ರಭಾವ ಬೀರಿರುವುದು. ವಿಶೇಷವಾಗಿ ಹೈದರ್ ಮತ್ತು ಟಿಪ್ಪುವಿನ ಆಡಳಿತಾವಧಿಯಲ್ಲಿ ರಾಮನಗರ ಜಿಲ್ಲೆಯಲ್ಲಿ ಕಾಣಿಸಿಕೊಂಡಿರುವುದು ಇತಿಹಾಸದಿಂದ ತಿಳಿದು ಬರುತ್ತದೆ.

(ಕ) ಅಲ್ಲಿಸಾಬರದೊಡ್ಡಿ   ತುರುಕರಹೊಸಹಳ್ಳಿ   ಬಡೆಸಾಬರದೊಡ್ಡಿ

೬.೨. ಸಮುದಾಯ ಆಧಾರಿತ ಸ್ಥಳನಾಮಗಳು

ಭಾರತೀಯ ಸಮಾಜವು ಅತ್ಯಂತ ಪ್ರಾಚೀನವೂ ಹಾಗೂ ಸಂಕೀರ್ಣವೂ ಆಗಿರುವ ಸಮಾಜ. ಅಲ್ಲದೆ ಸಾಮಾಜಿಕವಾಗಿ ಭಾರತ ಹೆಚ್ಚಿನ ವೈವಿಧ್ಯತೆಯನ್ನು ಪಡೆದಿರುವ ರಾಷ್ಟ್ರವಾಗಿದೆ. ಅದರಲ್ಲಿ ನಾನಾ ಬಗೆಯ ಪದ್ಧತಿಗಳು, ಸಂಪ್ರದಾಯಗಳು, ಲೋಕರೂಢಿಗಳು, ನೈತಿಕ ನಿಯಮಗಳು, ಆಚಾರ-ವಿಚಾರಗಳು, ಆಹಾರಾಭ್ಯಾಸಗಳು, ಉಡುಗೆ ತೊಡುಗೆ, ವೇಷಭೂಷಣಗಳು, ಊಟೋಪಚಾರಗಳು ಮತ್ತು ವೈವಾಹಿಕ ಪದ್ಧತಿಗಳು ವ್ಯಾಪಕವಾಗಿ ಕಂಡುಬರುತ್ತವೆ. ಸ್ಥಳನಾಮಗಳು ಹಲವು ರೂಢಿಗಳ, ಆರಾಧನಾ ಪದ್ಧತಿಗಳ, ಧಾರ್ಮಿಕ ಪಂಥಗಳ, ಸಂಸ್ಕೃತಿಗಳ, ನಂಬಿಕೆಗಳ ಭಾಷೆಗಳ, ಜನಾಂಗಿಕ ಪ್ರಕಾರಗಳ ಮತ್ತು ಸಾಮಾಜಿಕ ವ್ಯವಸ್ಥೆಗಳ ವಸ್ತುಸಂಗ್ರಹಾಲಯವಾಗಿದೆ.

"ಗ್ರಾಮನಾಮಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಒಂದು ವೇಳೆ ಜನಾಂಗ ಸ್ಥಳಾಂತರಗೊಂಡರೂ ಆ ಬೇರುಗಳು ಅದರ ಮೂಲ ಅಸ್ತಿತ್ವವನ್ನು ಎತ್ತಿ ಹೇಳುತ್ತವೆ"[೧೩] ಒಂದು ಜನಾಂಗದ ಸಮಗ್ರವಾದ ಜೀವನ ವಿಧಾನವನ್ನು ಈ ಸ್ಥಳನಾಮಗಳು ಅರುಹುತ್ತಿರುತ್ತವೆ. ಅವು "ಜನತೆಯ ಜೀವನ ನಿಷ್ಠತೆಯ ದಟ್ಟವಾದ ದಾಖಲೆಗಳು. ಅಭೌತಿಕವೆನಿಸುವ, ಕಲ್ಪನಾರಮ್ಯವಾದ ಅಂಶಗಳು ಸ್ಥಳನಾಮದಲ್ಲಿರಲು ಸಾಧ್ಯವಿಲ್ಲ. ನಮ್ಮ ಜನ ಯಾವತ್ತು ಮಾಯಾ ಸಿದ್ಧಾಂತವನ್ನು, ಪಲಾಯನ ಪ್ರವೃತ್ತಿಯನ್ನು ನಿಜ ಜೀವನದಲ್ಲಿ ಅನುಸರಿಸಿದವರಲ್ಲ ಎಂಬುದಕ್ಕೆ ಜೀವನದ ಹೋರಾಟದ ಯಥಾವತ್ತಾಗಿ ಎದುರಿಸುವ ಅರ್ಥಪೂರ್ಣ ಜೀವನ ದೃಷ್ಟಿ, ಹೊಂದಿದವರು ಎಂಬುದಕ್ಕೆ ಸ್ಥಳನಾಮಗಳು ಅತ್ಯಂತ ಜ್ವಲಂತ ನಿದರ್ಶನಗಳಾಗಿವೆ"[೧೪]

ಹೀಗೆ ಸ್ಥಳನಾಮಗಳು ಒಂದು ಸಮುದಾಯದ ಸಂಸ್ಕೃತಿಯನ್ನು ತನ್ನಲ್ಲಡಗಿಸಿಕೊಂಡಿರುವ ಸಾಂಸ್ಕೃತಿಕ ದಾಖಲೆಯಾಗಿವೆ.

"ಲಿಖಿತ ಆಧಾರಗಳ ಕೊರತೆಯಿದ್ದಲ್ಲಿ ಒಂದು ಜನಾಂಗ ನೆಲೆಸಿದ್ದ ಒಂದು ಪ್ರದೇಶದ ಸ್ಥಳನಾಮಗಳಲ್ಲಿನ ಸಮಾನರೂಪಗಳನ್ನು ಪರಿಶೀಲಿಸಬೇಕು"[೧೫]. ಹೊಟ್ಟೆಹೊರೆದುಕೊಳ್ಳುವ ಉದ್ದೇಶದಿಂದಲೋ, ಉದ್ಯೋಗಕ್ಕಾಗಿಯೇ, ಸಾಹಸಪ್ರಿಯತೆಗಾಗಿಯೋ, ಊರಿಂದ ಊರಿಗೆ ಅಲೆದಾಡುತ್ತಿರುತ್ತಾನೆ. ಅಂದ ಮೇಲೆ ಅವನು ನಡೆದಾಡಿರುವ ಸ್ಥಳಗಳಲ್ಲಿ ಅವನ ಹೆಜ್ಜೆಗುರುತುಗಳು ನಾನಾ ಕ್ಷೇತ್ರಗಳ ಮೇಲಾಗಿರುವಂತೆ ಸ್ಥಳನಾಮಗಳ ಮೇಲೂ ಅಚ್ಚೊತ್ತಿರುತ್ತವೆ. ಅದೇ ರೀತಿ ಬೇರೆ ಜನಾಂಗಗಳ ಪ್ರಭಾವವನ್ನು ಸೂಚಿಸುವ ಹೆಸರುಗಳು ಪ್ರಪಂಚದಾದ್ಯಂತ ಕಂಡುಬಂದಿವೆ. ಜಾತಿ, ವೃತ್ತಿ, ಮತ ಮುಂತಾದ ಪ್ರಾಚೀನ ಸಮಾಜದ ಮೂಲಭೂತ ಅಂಶಗಳನ್ನು ಅರಿಯಲು ಸ್ಥಳನಾಮಗಳು ನಮಗೆ ಆಕರವಾಗಿ ನಿಲ್ಲಬಲ್ಲವು. ಸ್ಥಳನಾಮಗಳ ಅಧ್ಯಯನ "ಒಂದು ಸಮಾಜದಲ್ಲಿನ ವರ್ಣವ್ಯವಸ್ಥೆ, ನಾಗರಿಕತೆ, ಸಂಸ್ಕೃತಿಯನ್ನು ತಿಳಿಯಲು ಉಪಯೋಗವಾಗುತ್ತದೆ"[೧೬] ಒಂದು ಭೌಗೋಳಿಕವಾದ ಪ್ರದೇಶದಲ್ಲಿ ಯಾವ ಯಾವ ಜಾತಿ ವರ್ಗಗಳು, ಕೋಮುಗಳು ಒಟ್ಟೊಟ್ಟಿಗೆ ಜೀವನ ನಡೆಸುತ್ತಾ ಸಮಾಜದ ಒಂದು ಅಂಗವಾಗಿ ಬಂದರೆಂಬುದನ್ನು ಪ್ರಾಮಾಣೀಭೂತವಾಗಿ ಹೇಳುವ ಒಂದು ಚೈತನ್ಯ ಸ್ಥಳನಾಮಗಳಿಗಿವೆ. ಭಿನ್ನ ಭಿನ್ನ ಜಾತಿ, ಕುಲ, ಕೋಮುಗಳು ಪರಸ್ಪರ ಸೌಹಾರ್ದಯುತದಿಂದ ಸಮರಸವಾಗಿ ಬದುಕಿರುವುದನ್ನು ಸ್ಥಳನಾಮಗಳು ದಾಖಲಿಸುತ್ತವೆ. ಇದರೊಂದಿಗೆ "ಒಂದೊಂದು ಪ್ರದೇಶದಲ್ಲಿ ಕಂಡುಬರುವ ಸ್ಥಳನಾಮಗಳು ವರ್ಗ ವರ್ಣಗಳನ್ನು ಸೂಚಿಸುವ ಸಂಕೇತಗಳಾಗಿಯೂ ಕಾಣಿಸಿಕೊಂಡಿವೆ. ಮೇಲು ವರ್ಗದ ಆಡಳಿತಕ್ಕೆ ಸಂಬಂಧಿಸಿದ ರಾಜರು, ವಿದ್ವಾಂಸರು, ಬ್ರಾಹ್ಮಣರು ಆ ಪ್ರದೇಶದಲ್ಲಿ ಪ್ರಧಾನವಾಗಿದ್ದರೆ, ಸಂಸ್ಕೃತ ಮೂಲದ, ಕೆಳವರ್ಗದ ಶೂದ್ರರು ಪ್ರಧಾನರಾಗಿದ್ದರೆ. ದ್ರಾವಿಡ ಮತ್ತು ಕನ್ನಡ ಮೂಲದ ಹೆಸರುಗಳಿದ್ದುದು ಕಂಡುಬರುತ್ತದೆ"[೧೭] ಹೀಗೆ ಸಾಮಾಜದಲ್ಲಿನ ಶ್ರೇಣೀಕೃತವಾದ ಜಾತಿ ವ್ಯವಸ್ಥೆಯನ್ನು ಕೂಡ ತನ್ನ ಮಡಲಿನಲ್ಲಿ ಸ್ಥಳನಾಮಗಳು ಇಟ್ಟುಕೊಂಡಿವೆ. "ಸಮಾಜದಲ್ಲಿ ವರ್ಣ, ವರ್ಗಗಳು ಶ್ರೇಣಿಯನ್ನು ಕಲ್ಪಿಸುತ್ತವೆ. ಇಲ್ಲಿ ಮೇಲುವರ್ಣ-ಮೇಲುವರ್ಗ, ಕೀಳುವರ್ಣ-ಕೀಳುವರ್ಗಗಳ ನಾಮ ನಿರ್ದೇಶನ ಪದ್ಧತಿ ನಿರ್ದಿಷ್ಟ ಮತ್ತು ವಾರ್ಗಿಕ ದೃಷ್ಟಿಯಿಂದಲೂ ಭಿನ್ನವಾಗಿರುತ್ತದೆ"[೧೮] ಎಂದಾಗ ಸಮುದಾಯದಲ್ಲಿನ ಇಂಥ ಸಂಕೀರ್ಣ ವಿಚಾರಗಳೆಲ್ಲವೂ ಕೂಡ ಸ್ಥಳನಾಮಗಳಲ್ಲಿ ಮಡುಗಟ್ಟಿರುತ್ತದೆ.

ವೇದ ಕಾಲದಲ್ಲಿ ಜಾತಿಯು ವರ್ಣ ಅಥವಾ ಬಣ್ಣವಾಗಿತ್ತು. ಮಧ್ಯಯುಗೀನ ಭಾರತದಲ್ಲಿ ಅದು ಜಾತಿ ಅಥವಾ ಜನ್ಮ ಲಕ್ಷಣವಾಯಿತು. ವಂಶ ಪಾರಂಪರ್ಯವಾಗಿ ಬಂದ ಸ್ಥಾನಮಾನ ಮತ್ತು ಧರ್ಮದ ಸ್ವೀಕಾರ ಅಂದರೆ ಒಬ್ಬ ವ್ಯಕ್ತಿಯ ಹುಟ್ಟು ಜಾತಿಯ ಸಾಂಪ್ರದಾಯಿಕ ಕರ್ತವ್ಯಗಳು ಮತ್ತು ವೃತ್ತಿಗಳ ಸ್ವೀಕಾರವಾಗಿತ್ತು. ಒಂದು ಕಸುಬಿಗೆ ಅಂಟಿಕೊಂಡ, ಒಂದೇ ಆಹಾರ ವಿಚಾರಕ್ಕಂಟಿದ ಅಥವಾ ಒಂದೇ ಜಾತಿಯ ಜನ ಒಂದೆಡೆ ವಾಸವಾಗುಳ್ಳ ಸ್ಥಳಗಳಿಗೆ ಅವರವರ ಜಾತಿ ಜನಾಂಗದ ಹೆಸರೇ ಅವರವರ ಸ್ಥಳಗಳಿಗೆ ಬಂದುದರಲ್ಲಿ ಯಾವುದೇ ಅತಿಶಯೋಕ್ತಿ ಇರಲಾರದು.

ಗ್ರಾಮನಾಮಗಳ ಇತಿಹಾಸದ ಕಾಲಘಟ್ಟವನ್ನು ಗಮನಿಸಿದಾಗ ನಿಸರ್ಗವಾಚಿಯಾದ ಹೆಸರುಗಳು "ಕಾಲಕ್ರಮದಲ್ಲಿ ನಿಸರ್ಗಕ್ಕಿಂತ ತಮ್ಮ ತಮ್ಮ ಗುಂಪುಗಳ ಬಗೆಗೆ ವಿಶೇಷ ಮೋಹ ಬೆಳೆಸಿಕೊಂಡವು. ಜನಾಂಗನಿಷ್ಠೆ ಗಟ್ಟಿಗೊಂಡ ಈ ಎರಡನೆ ಘಟ್ಟದಲ್ಲಿ ನಿಸರ್ಗವಾಚಿಗೆ ಬದಲು ಕ್ರಮೇಣ 'ಜನಾಂಗವಾಚಿ' ಗ್ರಾಮಗಳು ತಲೆ ದೋರಲಾರಂಭಿಸಿದವು"[೧೯] ಹೀಗಾಗಿ ರಾಮನಗರ ಜಿಲ್ಲೆಯಲ್ಲಿನ ಸಮುದಾಯ ಅಥವಾ ಜಾತಿ ಹಿನ್ನೆಲೆಯಲ್ಲಿ ನಿರ್ದೇಶನಗೊಂಡಿರುವ ಸ್ಥಳನಾಮಗಳನ್ನು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನದ ಜೊತೆಗೆ ಒಂದು ಕಾಲದಲ್ಲಿ ಜಿಲ್ಲೆಯಲ್ಲಿರಬಹುದಾದ ಪ್ರಾಚೀನ ಜನಾಂಗದ ಕುರುಹುಗಳು ಇರಬಹುದಾದ ಸಂಗತಿಗಳನ್ನು ಹುಡುಕುವ ಪ್ರಯತ್ನವನ್ನು ಸಹ ಮಾಡಲಾಗಿದೆ.

೧. ಬ್ರಾಹ್ಮಣರು

ಶ್ರೇಣಿಯಾಧಾರಿತ ಭಾರತೀಯ ಸಮಾಜದಲ್ಲಿ ಬ್ರಾಹ್ಮಣರಿಗೆ ಪ್ರಪ್ರಥಮ ಸ್ಥಾನ. ಬ್ರಹ್ಮನನ್ನು ಅರಿತವನೇ ಬ್ರಾಹ್ಮಣ. ನಿರ್ವಿಕಾರ ಭಾವನೆಯಿಂದ, ನಿಷ್ಕಲ್ಮಷ ಮನೋಭಾವದಿಂದ ಸರ್ವರ ಶ್ರೇಯಸ್ಸನ್ನು ಕೋರುತ್ತಾ, ವೇದಾಧ್ಯಯನ ಮಾಡುತ್ತಾ, ಧಾರ್ಮಿಕ ಆಚರಣೆಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾ, ರಾಜನಿಗೆ ಮತ್ತು ಸಮಾಜಕ್ಕೆ ಬೇಕಾದ ಸಲಹೆ-ಸೂಚನೆಗಳನ್ನು ನೀಡುತ್ತಾ ಮನುಕುಲದ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಸಮಾಜದಲ್ಲಿನ ಎಲ್ಲ ವರ್ಣಗಳ ಸಮುದಾಯಗಳಿಂದ ಗೌರವಾದರಕ್ಕೆ ಪಾತ್ರನಾದವನು. ನೀತಿ ಕಾಪಾಡುವವನು ಎಂಬುದಾಗಿ ಇತಿಹಾಸ ಗ್ರಂಥಗಳಿಂದ ತಿಳಿದು ಬರುತ್ತದೆ. ಸಮಾಜದಲ್ಲಿ ಇವರ ಪ್ರಾಮುಖ್ಯತೆ ಎಷ್ಟಿತ್ತು ಎಂದರೆ 'ಭೂಸುರರು' ಎಂಬುದಾಗಿ ಕರೆಸಿಕೊಂಡು ರಾಜ್ಯವನ್ನು ಪರಿಪಾಲಿಸುವ ಅರಸನೂ ಕೂಡ ಇವನ ಸಲಹೆಯನ್ನು ಪಡೆದು ಇವನ ಮಾತಿಗೆ ಗೌರವವನ್ನು ಕೊಡುತ್ತಿದ್ದನೆಂದರೆ ಸಮಾಜದಲ್ಲಿನ ಇನ್ನಿತರ ಸಾಮಾನ್ಯ ವ್ಯಕ್ತಿಗಳ ಮನಸ್ಸಿನಲ್ಲಿ ಅವನ ಸ್ಥಾನ ಎಷ್ಟೆಂಬುದು ತಿಳಿದು ಬರುತ್ತದೆ. "ಮನುವಿನ ಪ್ರಕಾರ, ದಿಟದಲ್ಲಿ ಈ ಬ್ರಹ್ಮಾಂಡದಲ್ಲಿ ಅಸ್ತಿತ್ವದಲ್ಲಿರುವುದೆಲ್ಲ ಬ್ರಾಹ್ಮಣನ ಸ್ವತ್ತು. ಬ್ರಾಹ್ಮಣರನ್ನು ಸಾರ್ವಜನಿಕವಾಗಿ ಮತ್ತು ಖಾಸಗಿ ಕೊಡುಗೆಗಳಿಂದ ಪಾಲಿಸಬೇಕು. ದಾನವಾಗಿ ಅಲ್ಲ, ಆದರೆ ಪವಿತ್ರ ಹೊಣೆಯಾಗಿ, ಬ್ರಾಹ್ಮಣರಿಗೆ ಮಾಡುವ ಆತಿಥ್ಯವು ಅತ್ಯುನ್ನತ ಧಾರ್ಮಿಕ ಕರ್ತವ್ಯಗಳಲ್ಲಿ ಒಂದು"[೨೦] ಈ ಭಾವನೆಯಿಂದಾಗಿ ಅರಸನು ಇವರಿಗಾಗಿ ಪ್ರತ್ಯೇಕವಾದ ಅಗ್ರಹಾರಗಳನ್ನು ನಿರ್ಮಿಸಿ, ಅವರಿಗೆ ಬೇಕಾದ ಸೌಕರ್ಯಗಳನ್ನು ನೀಡುತ್ತಿದ್ದನು. "ಅಗ್ರಹಾರದ ಮಹಾಜನ ನಿರಂತರ ಧರ್ಮಕಾರ್ಯಗಳಿಗಾಗಿ ನೀಡಿದ ಭೂ ದಾನವೇ ಬ್ರಹ್ಮದೇಯ ಅಥವಾ ಭಟವತ್ತಿ. ಇದು ಸರ್ವ ತೆರಿಗೆಗಳಿಂದ ಮುಕ್ತವಾದ್ದರಿಂದ ಸರ್ವಮಾನ ಭೂಮಿಯೆಂದು ಕರೆಲಾಗುತ್ತಿತ್ತು"[೨೧] ಇಂಥ ದತ್ತಿ ದಾನಗಳನ್ನು ಉದಾರವಾಗಿ ಅರಸರು ಕೊಡುತ್ತಿದ್ದರೆಂಬುದಕ್ಕೆ ಶಾಸನಗಳ ಉಲ್ಲೇಖಗಳು ದೊರಕುತ್ತವೆ. "'ಅಗ್ರ' ಅಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. ಅಗ್ರಹಾರದಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ. ಬೇರೆ ಜಾತಿಯ ಜನಾಂಗಗಳೂ ಇರಬಹುದು. ಆದರೆ ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸಲ್ಲಪತ್ತದೆ ಎಂದರೆ, ಆ ಊರಿನಿಂದ ರಾಜಾದಾಯಕ್ಕೆ ಸಲ್ಲಬೇಕಾಗಿದ್ದ ಐಶ್ವರ್ಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು.[೨೨] ಅಗ್ರಹಾರ ಮತ್ತು ಮಂಗಲಗಳು ಬ್ರಾಹ್ಮಣರಿಗಾಗಿಯೇ ನಿರ್ಮಿಸಿದ ಊರುಗಳಾಗಿದ್ದವು. ಅದ್ದರಿಂದ "ಮಂಗಲ, ಗಾಲ ಎಂಬ ವಾರ್ಗಿಕಗಳುಳ್ಳ, ಮಹಾಜನ,

ಬ್ರಾಹ್ಮಣ, ಶ್ರೋತ್ರಿಯ, ಹಾರೋ, ಹಾರನ, ಪಾರ್ವನ ಎಂಬ ನಿರ್ದಿಷ್ಟಗಳುಳ್ಳ, ಅಗ್ರಹಾರ, ಅಗರ, ಅರಗ ಎಂಬ ನಿರ್ದಿಷ್ಟ ಅಲ್ಲವೆ ವಾರ್ಗಿಕ ಇಲ್ಲವೆ ಸ್ವತಂತ್ರ ರೂಪವುಳ್ಳ ಗ್ರಾಮಗಳು ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳಾಗಿರುತ್ತವೆ"[೨೨] ಎಂದರೆ "ಅಗ್ರಹಾರ, ಆಗರ, ಮಂಗಳಗಳು ಬ್ರಾಹ್ಮಣರಿಗೆ ಕೊಟ್ಟ ಊರುಗಳನ್ನು ಸೂಚಿಸುವಂತೆ ಬೊಮ್ಮ, ಹಾರುವ ಪದಗಳೂ ಅಂತಹ ಅಗ್ರಹಾರ ಸೂಚಕಗಳಾಗಿವೆ"[೨೩] ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಬ್ರಾಹ್ಮಣೇತರರು ಅಗ್ರಹಾರಗಳಲ್ಲಿ ವಾಸಿಸುತ್ತಿರಲಿಲ್ಲ ಎಂಬುದು ಸ್ಪಷ್ಟ. 'ಅಗ್ರಹಾರ'ದಲ್ಲಿ ಬ್ರಾಹ್ಮಣರೇ ವಾಸಿಸಬೇಕೆಂಬ ನಿಯಮಗಳೇನು ಇರಲಿಲ್ಲ, ಬೇರೆ ಸಮುದಾಯದವರೂ ವಾಸಿಸಬಹುದು. ಅನ್ಯ ಸಮುದಾಯದವರು ಆಡಳಿತಾಂಗ ವ್ಯವಸ್ಥೆಯನ್ನು ನೋಡಿಕೊಂಡರೆ, ಬ್ರಾಹ್ಮಣರು ವಿದ್ಯಾದಾನ ನೀಡವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಪ್ರಾಚೀನ ಕಾಲದ ಪ್ರಮುಖ ವಿದ್ಯಾಕೇಂದ್ರಗಳಾಗಿ ದೇವಸ್ಥಾನ ಅಥವಾ ಮಠ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ಅಗ್ರಹಾರಗಳಾಗಿದ್ದವು. ವಾಸ್ತವಿಕವಾಗಿ ಅಗ್ರಹಾರಗಳು ವೈದಿಕ ಸಂಪ್ರದಾಯದ ವಿದ್ಯಾಕೇಂದ್ರಗಳಾಗಿ ತಪೋನಿಷ್ಠರಾದ ವೇದ, ವೇದಾಂಗ ಪಾರಂಗತ ಮಹಾಜನರೆಂಬ ವಿದ್ವಾಂಸರು ಮತ್ತು ವಿದ್ಯೆಯನ್ನು ಕಲಿಸಬಯಸುವ ವಿದ್ಯಾರ್ಥಿಗಳ ವಾಸ್ತವ್ಯದ, ಅಭ್ಯಸಿಸುವ ನೆಲೆಯಾಗಿತ್ತು. "ಒಂದು ಊರನ್ನು ಅಗ್ರಹಾರವಾಗಿ ಮಾಡಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟರೆ ಬಹಳ ಪುಣ್ಯ ಬರುತ್ತದೆಂದು ರಾಜರು ನಂಬಿದ್ದರು"[೨೪] ಆದ್ದರಿಂದ ರಾಜರು ಅಗ್ರಹಾರಗಳ ಮೇಲೆ ಯಾವುದೇ ರೀತಿಯಾದ ತೆರಿಗೆಯನ್ನು ವಿಧಿಸದೇ ಉದಾರವಾಗಿ ದಾನಕೊಡುತ್ತಿದ್ದರು. "ಅಗ್ರ ಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ "ಮಹಾಜನ"ಗಳು, ಅವರೇ ಆ ಅಗ್ರಹಾರದ ಪ್ರಭುಗಳು"[೨೫] ಪ್ರಭು ಗಾವುಂಡಗಳು ಊರಿನ ಮೇಲ್ವಿಚಾರಕರೇ ಹೊರತು ಊರಿನ ಒಡೆಯರಲ್ಲ. ಮಹಾಜನಗಳು ಅಗ್ರಹಾರ 'ಒಡೆಯರಾಗಿದ್ದರು'[೨೬]

ಸ್ಥಳನಾಮಗಳಲ್ಲಿ ಅಗ್ರಹಾರಗಳನ್ನಲ್ಲದೇ ಬ್ರಾಹ್ಮಣ ಎಂಬ ಪದ ಸಂವಾದಿಯಾಗಿ ಬ್ರಹ್ಮ, ಬೊಮ್ಮ, ಹಾರುವ, ಪಾರುವ, ಭಟ್ಟ, ಪಂಡಿತ, ಪುರೋಹಿತ, ಶಾಸ್ತ್ರಿ ಮುಂತಾದ ಪದಗಳು ಬಳಕೆಗೊಂಡಿವೆ. ಬ್ರಹ್ಮ ಪದವು ಸಂಸ್ಕೃತದಿಂದ ತದ್ಭವಗೊಂಡು 'ಬೊಮ್ಮ' ಆಗಿರಬೇಕು. ಶಾಸ್ತ್ರಿ ಎಂದರೆ ಶಾಸ್ತ್ರ ತನ್ನ ತಿಳಿದವ, ಹೇಳುವವನೆಂದು. ಭಟ್ಟ ವೃತ್ತಿಸೂಚಕ ಪದ. ಪುರೋಹಿತ ವೇದೋಪನಿಷತ್ತಿನ ಕರ್ಮವನ್ನು ಮಾಡುವವನೆಂದು, ಹೀಗೆ ಇವೆಲ್ಲವೂ ವೃತ್ತಿ ಸೂಚಕವಾದರೂ ಕೂಡ ಇವೆಲ್ಲವೂ ಬ್ರಾಹ್ಮಣರ ವೃತ್ತಿಗಳನ್ನೇ ಸೂಚಿಸುವುದರಿಂದ ಬ್ರಾಹ್ಮಣ ಸಮುದಾಯದವನ್ನು ನಿರ್ದೇಶಿಸುವಂತಿವೆ. ಈ ಎಲ್ಲ ಪದಗಳು ಕರ್ನಾಟಕದ ಸ್ಥಳನಾಮಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಜಾತಿಯ ಜನರ ವೃತ್ತಿನಾಮವಾಗಿ ಬಳಕೆ ಗೊಂಡಿರುವುದನ್ನು ಕಾಣಬಹುದು. ರಾಜ, ಮಂತ್ರಿ, ಸಾಮಂತಾದಿ ಅಧಿಗಳು ಅಗ್ರಹಾರಗಳಾಗಿ ನಿರ್ಮಿಸಿ ದಾನವಾಗಿ ಕೊಡುವ ಊರುಗಳಿಗೆ ಆಯಾ ರಾಜ, ಮಂತ್ರಿ, ಸಾಮಂತಾದಿ ಅಧಿಕಾರಿ ವರ್ಗದವರ ಹೆಸರುಗಳೊಂದಿಗೆ ಅಗ್ರಹಾರಗಳು ಉಲ್ಲೇಖಗೊಂಡಿರುವುದನ್ನು ಶಾಸನಗಳಿಂದ ತಿಳಿದು ಬರುತ್ತದೆ. ಅದರಂತೆ ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿ ಅಗ್ರಹಾರ, ಮಂಗಲಗಳು ನಿರ್ದೇಶಿಸುವ ಸ್ಥಳಗಳು ಇಂತಿವೆ.

(ಕ)	ಅಗರ	ಅಗ್ರಹಾರ	
(ಚ)	ಅಗ್ರಹಾರವಳಗೆರೆಹಳ್ಳಿ	ಕನ್ನಮಂಗಲ	ಕದರಮಂಗಲ
(ರಾ)	ಜಾಲಮಂಗಲ	ಬೈರಮಂಗಲ	ಶಾನುಮಂಗಲ

(ಮಾ) ಕರ್ಲಮಂಗಲ ಕೋರಮಂಗಲ (೨)

ಬ್ರಾಹ್ಮಣ ಸಮುದಾಯವನ್ನು ನಿರ್ದೇಶಿಸುವ ಹೆಸರುಗಳ ಊರುಗಳು ಇಂತಿವೆ.

(ಕ) ಬೊಮ್ಮನಹಳ್ಳಿ ಬೊಮ್ಮಸಂದ್ರ ಹಾರೋಶಿವನಹಳ್ಳಿ
ಹಾರೋಹಳ್ಳಿ

(ರಾ) ಬೊಮ್ಮಚಾನಹಳ್ಳಿ

(ಚ) ಬ್ರಾಹ್ಮಣಿಪುರ ಬೊಮ್ಮನಹಳ್ಳಿ ಹಾರೋಕೊಪ್ಪ
ಹಾರೋಹಳ್ಳಿದೊಡ್ಡಿ

(ಮಾ) ಬೊಮ್ಮನಹಳ್ಳಿ ಹಾರೋಹಳ್ಳಿ

ಬ್ರಾಹ್ಮಣರು ನಿರ್ವಹಿಸುವ ವೃತ್ತಿಯನ್ನಾಧರಿಸಿ ಹಾಗೂ ವ್ಯಕ್ತಿನಾಮಗಳನ್ನನುಸರಿಸಿ ನೆಲೆಗಳನ್ನು ಸಹ ಸಮುದಾಯವಾಚಿಯಲ್ಲಿ ಸೇರಿಸಲಾಗಿದೆ.

(ಮಾ) ಅಣ್ಣಯ್ಯಶಾಸ್ತ್ರಿಪಾಳ್ಯ ಸುಬ್ಬಾಶಾಸ್ತ್ರಿಪಾಳ್ಯ ಅಯ್ಯಂದಹಳ್ಳಿ
ಪಾಪಶಾಸ್ತ್ರಿಪಾಳ್ಯ

ಬ್ರಾಹ್ಮಣ ಸಮುದಾಯ ಮತ್ತು ಬ್ರಾಹ್ಮಣ ವೃತ್ತಿ ಸೂಚಕ ಬೊಮ್ಮ, ಹಾರೋ, ಅಗ್ರಹಾರ, ಮಂಗಲ, ಅಯ್ಯ, ಶಾಸ್ತ್ರಿ ಪದಗಳಾದ ಇವು ಈ ಜಿಲ್ಲೆಯ ಸ್ಥಳನಾಮಗಳಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲೂ ಬಳಕೆಗೊಂಡಿರುವುದನ್ನು ನೋಡಬಹುದು.

ಶಾಸನೋಕ್ತವಾದ 'ಮಂಗಲ'ಗಳು ಇಂದು ಅದೇ ಹೆಸರಿನಿಂದ ಕರೆಯಲ್ಪಡುತ್ತಿಲ್ಲ. ಅರಸನ ಹಿತಕ್ಕೋಸ್ಕರದ ಹಿನ್ನಲೆಯಿಂದ ಬಂದ ಇವುಗಳು ಜನಸಾಮಾನ್ಯರ ಅಪೇಕ್ಷೆಗೆ ಒಳಪಟ್ಟಿರದೇ ಇರುವ ಸಂಭವಿರುವುದರಿಂದ ರಾಜಸತ್ತೆಯ ಆಜ್ಞೆಗೆ ಹೆದರಿ ಒಂದು ನಿರ್ದಿಷ್ಟ ಕಾಲಮಾನದಲ್ಲಿ ರಾಜನ ಅಂಕಿತವನ್ನು ಒಪ್ಪಿಕೊಂಡರೂ, ಬಹು ಜನತೆಯ ಅಪೇಕ್ಷೆ ಮತ್ತು ಆ ರಾಜನ ಅಧಿಕಾರ ಮುಗಿದ ತರುವಾಯ ಆ ಗ್ರಾಮದ ಹಳೆಯ ಹೆಸರೇ ಚಾಲ್ತಿಗೆ ಬಂದಿರುವ ಸಂಭವವನ್ನು 'ರಾಜರಾಜ ಚತುರ್ವೇದಿ ಮಂಗಲ'ವೆಂದು ಮರುನಾಮಕರಣ ಹೊಂದಿದ್ದ ಕೂಡಲೂರನ್ನು ಇಲ್ಲಿ ಉಲ್ಲೇಖಿಸಬಹುದು. ಇಂಥ ಮರುನಾಮಕರಣ ಹೊಂದಿರುವ ಹಲವಾರು ಗ್ರಾಮಗಳು ಕರ್ನಾಟಕದ ಇತಿಹಾಸದಲ್ಲಿ ಕಂಡುಬಂದಿವೆ.

೨. ಕ್ಷತ್ರಿಯರು

ಭಾರತೀಯ ಪ್ರಾಚೀನ ವರ್ಣದ ೨ನೇ ಸ್ಥಾನದಲ್ಲಿರುವ ಕ್ಷತ್ರಿಯರು ಕ್ಷಾತ್ರ ಗುಣದ ಬಲದಿಂದ ಸಮಾಜದ ಇನ್ನಿತರ ಜನರನ್ನು ರಕ್ಷಣೆ ಮಾಡುವುದು ಅವನ ಕರ್ತವ್ಯವಾಗಿತ್ತು. "ಕ್ಷತ್ರಿಯರು ಅರಣ್ಯ, ಪರ್ವತಗಳಂಥ ಇಕ್ಕಾಟದ ಪ್ರದೇಶಗಳಲ್ಲಿ"[೨೮] ಆಯ ಕಟ್ಟಿನ ಸ್ಥಳಗಳಲ್ಲಿ ತಮ್ಮ ರಾಜ್ಯ, ಕೋಟೆಗಳನ್ನು ಕಟ್ಟಿ, ಶತ್ರು ರಾಜರಿಂದ ತಮ್ಮ ಪ್ರಜೆಗಳ ರಕ್ಷಣೆಯನ್ನು ಮಾಡುವ ನಿಟ್ಟಿನಲ್ಲಿ ತಮ್ಮ ಕಾರ್ಯವನ್ನು

ನಿರ್ವಹಿಸುತ್ತಿದ್ದರು. ಹೀಗೆ ನಿರ್ಮಿಸಿದ ಹೊಸನಗರ ಅಥವಾ ಕೋಟೆ ಮೊದಲಾದ ನೆಲೆಗಳಿಗೆ ತಮ್ಮ ಹೆಸರನ್ನು ನೀಡುವ ಪರಿಪಾಟವನ್ನು ಇರಿಸಿಕೊಂಡಿದ್ದಾರೆ. ಇಂಥ ಸ್ಥಳನಾಮಗಳು ರಾಮನಗರ ಜಿಲ್ಲೆಯಲ್ಲಿದೆ.

(ಕ) ನಾಗರಸನಕೋಟೆ ಕೋಟೆಕೊಪ್ಪ

೩. ವೈಶ್ಯರು

ಭಾರತದ ಪ್ರಾಚೀನ ವರ್ಣ ಪದ್ಧತಿಯಲ್ಲಿ ಇವರನ್ನು ಗುರುತಿಸಲಾಗಿದೆ. ವ್ಯಾಪಾರ ಮತ್ತು ವಾಣಿಜ್ಯಗಳು ವೈಶ್ಯವರ್ಣಕ್ಕೆ ಸಂಬಂಧಿಸಿದವು. ಧರ್ಮಮಾರ್ಗದಿಂದ ಧನ ಸಂಪಾದನೆ ಮಾಡುವುದು. ಅದನ್ನು ಉಪಯೋಗಕರ ರೀತಿಯಲ್ಲಿ ಖರ್ಚು ಮಾಡುವುದು. ಸಮಾಜ ಸೇವಾ ಮನೋಭಾವದಿಂದ ವ್ಯಾಪಾರ ವ್ಯವಹಾರ ನಡೆಸುವುದು ಅವರ ಧರ್ಮವಾಗಿತ್ತು.

ವೈಶ್ಯ ಸಮುದಾಯದವು ಇಡೀ ಭಾರತದಾದ್ಯಂತ ವಾಸಿಸುತ್ತಿರುವ ಸಮುದಾಯ. ಸಮಾಜದಲ್ಲಿ ವರ್ಣ ವ್ಯವಸ್ಥೆ ಜಾತಿ ವ್ಯವಸ್ಥೆಗೆ ತಿರುಗಿದಾಗ ವೈಶ್ಯರನ್ನು ಶೆಟ್ಟಿಗಳೆಂದು ಗುರುತಿಸಲಾಯಿತು. ವ್ಯಾಪಾರ ವಹಿವಾಟಿನಲ್ಲಿ ಶೆಟ್ಟಿಗಳು ಪ್ರಮುಖ ಪಾತ್ರವಹಿಸಿದ್ದಾರೆ. ಶೆಟ್ಟಿ ಎಂಬುದು ಸಂಸ್ಕೃತದ ಶ್ರೇಷ್ಠಿಯ ತದ್ಭವ ರೂಪ, ಅರ್ಥಾತ್ ವ್ಯಾಪಾರಿ. ಪ್ರಾಚೀನ ಕರ್ನಾಟಕದಲ್ಲಿ 'ಅಯ್ಯಾವೊಳೆ ಐನೂರ್ವರ್' ವರ್ತಕರ ಸಂಘವಿದ್ದ ಬಗ್ಗೆ ಉಲ್ಲೇಖವಿದೆ. 'ಸಂಘ'ದ ಮುಖ್ಯಸ್ಥನನ್ನು 'ಪಟ್ಟಣ ಸ್ವಾಮಿ' ಎಂಬುದಾಗಿ ಕರೆಯುತ್ತಿದ್ದರು. ಈ ಪಟ್ಟಣ ಸ್ವಾಮಿಯು ವರ್ತಕರಲ್ಲಿ ಅತಿ ಶ್ರೀಮಂತನೂ, ವೃದ್ಧನೂ ಆಗಿರಬಹುದು. ಪಟ್ಟಣದ ರಾಜನು ತನಗೆ ವಿವೇಕಿಯೆಂದು ಕಂಡುಬಂದ ವ್ಯಕ್ತಿಗೆ ಪಟ್ಟಣ ಸ್ವಾಮಿ ಪಟ್ಟವನ್ನು ಕೊಡುತ್ತಿದ್ದನು".[೯] ಉಭಯ ನಾನಾದೇಶಿ, ಪಟ್ಟಣಸ್ವಾಮಿ, ಮಹಾವಡ್ಡ ವ್ಯವಹಾರಿಗಳು ಶ್ರೇಣಿಗಳ ಮುಖಂಡರಾಗಿದ್ದರು. ವರ್ತಕರ ಸಂಘದ ಬಗ್ಗೆ ಉಲ್ಲೇಖ 'ಅಯ್ಯಾವೊಳೆ ಐನೂರ್ವರ್ ವೀರವಬಣಂಜು (ವೀರ ವಣಿಗ), ಗಾತ್ರಿಗ, ಬೀರ, ಬೀರವಣಿಗಿ, ಸೆಟ್ಟಿ, ಸೆಟ್ಟಿಗುತ್ತ, ವೇಳೆಕಾಜ' ಮುಂತಾದ ವರ್ತಕ ಶ್ರೇಣಿಯ ವಿವರವನ್ನು ಡಾ.ಎಂ.ಎಂ.ಚಿದಾನಂದಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ ವಿವರಿಸುತ್ತಾ ಇವೆಲ್ಲವೂ ವ್ಯಾಪಾರ ಮಾಡುವ ವಿಧಾನಗಳೆಂಬಂತೆ ಊಹೆ ಮಾಡಿದ್ದಾರೆ. ಸಮಾಜಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದ ಈ ಸಮುದಾಯ ದೇಶದ ಸಮಸ್ತ ವ್ಯಾಪಾರವೂ ಇವರ ಕೈಯಲ್ಲಿದ್ದುದರಿಂದ ಇವರು ಶ್ರೀಮಂತ ಜನಾಂಗವಾಗಿದ್ದರು. ಇವರು ರಾಜನ ಮೇಲೆ ವರ್ಚಸ್ಸನ್ನು ಬೀರಬಲ್ಲವರಾಗಿದ್ದರು. ಅನೇಕರು ರಾಜ ಪುರುಷರ ಸ್ನೇಹಿತರಾಗಿದ್ದರೆಂಬುದಕ್ಕೆ ಶಾಸನಧಾರಗಳಿವೆ. ಸಮಾಜದಿಂದ ಬಂದ ಈ ಶ್ರೀಮಂತಿಕೆಯ ಕೊಡುಗೆಯಾಗಿ ಸಮಾಜಕ್ಕೆ, ಜನರಿಗೆ ಉಪಯೋಗಿಯಾದ ಕೆಲಸ ಕಾರ್ಯವನ್ನು ಮಾಡುತ್ತಿದ್ದರು. ಅಷ್ಟೇ ಅಲ್ಲದೇ ರಾಮನಗರ ಜಿಲ್ಲೆಯನ್ನು ಒಳಗೊಂಡ "ಯಲಹಂಕ ನಾಡಿನಲ್ಲಿ ವೀರಬಣಜಿಗ, ಐಯ್ಯಾವೊಳೆಯ ಐನೂರು ಮುಂತಾದ ಸಂಘ ಸಂಸ್ಥೆಗಳು ಭೂ ಕೊಡುಗೆ ನೀಡುವಷ್ಟು ಪ್ರಬಲವಾಗಿದ್ದವು. ಇಮ್ಮಡಿ ಕೆಂಪೇಗೌಡ ಐಯ್ಯಾವೊಳೆ ವರ್ತಕರ ಸಂಘಕ್ಕೆ ಸುಂಕ ರಿಯಾಯಿತಿ ನೀಡಿದ್ದಾನೆ"[೧೦] ಎಂದರೆ ಸಮಾಜದಲ್ಲಿ ಇವರ ಪ್ರಭಾವ ಎಷ್ಟಿತೆಂಬುದು ಮನವರಿಕೆಯಾಗದೇ ಇರದು.

"ಬಾಣವಾಡಿಯ ಕಲ್ಲಿನಾಥಶೆಟ್ಟಿ, ನಿಜಗಲ್‌ನಾಡಿನ ಎಣ್ಣೆಗೆರೆ ಸ್ಥಳದ ಮಹಾವಡ್ಡ ವ್ಯವಹಾರಿಯಾಗಿದ್ದು, ಹೊಯ್ಸಳರ ಕಾಲಕ್ಕೆ ಈ ಸ್ಥಳ (ಕಲ್ಯ) ಮಹಾವರ್ತಕರಿಂದ ಕೂಡಿದ ವ್ಯಾಪಾರಕೇಂದ್ರವಾಗಿತ್ತು. ಇವರ ಸಂಘಗಳು ಹುಂಡಿ, ಸಾಲ, ಅಡವು ಮುಂತಾದ ಹಣಕಾಸಿನ ಚಟುವಟಿಕೆಗಳಲ್ಲಿ ತೊಡಗಿದ್ದವು. ಸಂತೆ, ಪೇಟೆ, ಜಾತ್ರೆ ನಡೆಸುವುದರೊಂದಿಗೆ ಮಾರಾಟ, ಬೆಲೆ ಹಾಗೂ ಕೂಲಿಕಾರರ ವೇತನ ನಿರ್ಧರಿಸುತ್ತಿದ್ದವು"[೨೦].

ಶ್ರೀಮಂತರಾದ ಶೆಟ್ಟಿಗಳು ತಾವು ನೆಲೆನಿಂತ ಸ್ಥಳಗಳಿಗೆ ಅಥವಾ ತಾವೇ ನಿರ್ಮಿಸಿದ ಗ್ರಾಮಗಳಿಗೆ ತಮ್ಮ ಹೆಸರಿನಿಂದ ಕರೆಯಲ್ಪಡುತ್ತಿರುವುದನ್ನು ಸ್ಥಳನಾಮಗಳ ಮೂಲಕ ತಿಳಿಯಬಹುದು.

(ಚ)	ಬೈರಸೆಟ್ಟಿಹಳ್ಳಿ	ಸೆಟ್ಟಿಹಳ್ಳಿ	
(ಮಾ)	ಆಲಸೆಟ್ಟಿಹಳ್ಳಿ	ನಾಗಶೆಟ್ಟಿಹಳ್ಳಿ,	ಹಾಲಶೆಟ್ಟಿಹಳ್ಳಿ

ಶಾಸನದಲ್ಲಿ ನಾಗಶೆಟ್ಟಿಹಳ್ಳಿಯನ್ನು ಸೆಟ್ಟಿಹಳ್ಳಿ ಎಂದೂ, ಹಾಲಸೆಟ್ಟಿ ಹಳ್ಳಿಯನ್ನು ಭೂಮಿಹಾಲಶೆಟ್ಟಿಹಳ್ಳಿ ಎಂದು ಕರೆಯಲಾಗಿದೆ. ಶೆಟ್ಟಿಹಳ್ಳಿ>ನಾಗಶೆಟ್ಟಿಹಳ್ಳಿ ಎಂದು ವ್ಯಕ್ತಿವಾಚಿಯನ್ನು ಶಾಸನದ ಕಾಲಾನಂತರದಲ್ಲಿ ಅವನ ಧರ್ಮೋಪಕಾರವನ್ನು ಮರೆಯದೇ ಚಿರಸ್ಥಾಯಿಗೊಳಿಸಲು ವ್ಯಕ್ತಿಯ ಹೆಸರನ್ನು ಗ್ರಾಮಕ್ಕೆ ಅಂಟಿಸಿರಲು ಸಾಧ್ಯವಾದರೆ, ಅದೇ ಭೂಮಿ ಹಾಲಸೆಟ್ಟಿಹಳ್ಳಿ ಎಂಬ ಶಾಸನೋಕ್ತ ಸ್ಥಳನಾಮವನ್ನು ಜನರ ಸೌಲಭ್ಯಕಾಂಕ್ಷೆಗಾಗಿ ಹಾಲಸೆಟ್ಟಿ ಹಳ್ಳಿ ಎಂದು ಕರೆದಿರುವುದು ಕಂಡುಬರುತ್ತದೆ. ಇಲ್ಲಿನ ನಿರ್ದಿಷ್ಟಕ್ಕೆ ವಾರ್ಗಿಕವಾಗಿ 'ಹಳ್ಳಿ'ಮಾತ್ರ ಬಂದಿದೆ.

೪. ಒಕ್ಕಲಿಗರು

ಒಕ್ಕಲುತನವನ್ನು ವೃತ್ತಿಯನ್ನಾಗಿ ಮಾಡಿಕೊಂಡವರೇ ಒಕ್ಕಲಿಗರು. ಒಕ್ಕಲು ಎಂಬುದು ಜನಪದ ಮೂಲದ ಪದ. ಒಕ್ಕು ಎಂದರೆ, ಬೆಳೆದ ಫಸಲನ್ನು ಕಣದಲ್ಲಿ ದನಕರುಗಳ ಸಹಾಯದಿಂದ ತುಳಿಸಿ, ಗುಂಡು ಹೊಡೆದು ಕಾಳುಗಳನ್ನು ಬೇರ್ಪಡಿಸಿ ರಾಶಿಮಾಡುವ ವಿಧಾನ. ಇಂತಹ ಜನ ಸಮೂಹವನ್ನು ಒಕ್ಕಲಿಗ ಎಂದೇ ಗುರುತಿಸಲಾಗಿದೆ. ಇವರನ್ನು ತೆಲುಗು ನಾಡಿನಲ್ಲಿ ರೆಡ್ಡಿಗಳೆಂದು, ತಮಿಳುನಾಡಿನಲ್ಲಿ ಗೌಂಡರ್ ಎಂದೂ, ಕೇರಳದಲ್ಲಿ ನಾಂಗುಲ್ ಎಂದು ಗುರುತಿಸಲಾಗಿದೆ.

ಒಕ್ಕಲಿಗರು ಎಂಬ ಪದದ ಅರ್ಥ ಬೇಸಾಯಗಾರರು ಎಂದು. ಒಕ್ಕಲಿಗರು ಎಂಬ ಶಬ್ದ ಮೊದಲು ವೃತ್ತಿವಾಚಕವಾಗಿ ಪ್ರಯೋಗವಾಗಿದೆ. ಕಾಲಾನುಕ್ರಮದಲ್ಲಿ ಜಾತಿವಾಚಕವಾಗಿ ಪ್ರಯೋಗಗೊಂಡಿದೆ. ವಡ್ಡಾರಾಧನೆಯಲ್ಲಿ "ಓರ್ವನೊಕ್ಕಲಿಗನೊಂದು ಪೇರುಮಣ್ಣಂ ತಂದು ಶ್ರೀಪರ್ವತದ ಮೇಗೊಟ್ಟಿದೊಡೆ" ಎಂದು, ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ "ಒಕ್ಕಲಿಗ ಚಿಕ್ಕಯ್ಯನಿಗೆ ಕುಲಜರು ಕಾಲ್ತೊಳೆಯಲಿಲ್ಲವೇ?" ೧೨ನೇ ಶತಮಾನದ ವಚನಕಾರ ಒಕ್ಕಲ ಮುದ್ದಯ್ಯ ತನ್ನ ವಚನದಲ್ಲಿ

"ವೇದಶಾಸ್ತ್ರನೋದುವುದಕೆ ಹಾರುವನಲ್ಲ
ಇರಿದು ಮೆರೆವುದಕೆ ಕ್ಷತ್ರಿಯನಲ್ಲ

ವ್ಯವಹರಿಸುವುದಕ್ಕೆ ವೈಶ್ಯನಲ್ಲ

ಒಕ್ಕಲುಮಗನ ತಪ್ಪು ನೋಡದೆ ಒಪ್ಪುಗೊಳಯ್ಯ

ಕಾಮಭೀಮ ಜೀವನದೊಡೆಯ ನೀನೆಬಲ್ಲೆ"

ಇಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ನಾಲ್ಕು ವರ್ಣಗಳ ವಿವರ ನೇರವಾಗಿಯೇ ಬಂದಿದೆ.

ಒಕ್ಕಲಿಗ; ವೃತ್ತಿವಾಚಿ ಜಾತಿವಾಚಿಯಾಗಿ ಬಳಕೆಯಾದಂತೆ ಇದಕ್ಕೆ ಸಮಾನಾರ್ಥವಾಗಿ, ಪರ್ಯಾಯಪದವಾಗಿ ಬಳಕೆಯಾಗಿರುವುದು 'ಗೌಡ' ಪದ. 'ಗೌಡ' ಪದದ ಅರ್ಥ ಮುಖಂಡ, ನಾಯಕ, ಮುಂದಾಳು ಎಂದು. ಗ್ರಾಮ ಮಟ್ಟದಲ್ಲಿ ನಾಯಕತ್ವ ಗುಣಗಳಿಂದ ಪ್ರಬಲ ಗ್ರಾಮ ಮುಖಂಡನೇ 'ಗೌಡ'. ಒಕ್ಕಲಿಗ, ಗೌಡರ ಮೂಲ ವೃತ್ತಿ ಕೃಷಿಯಾಗಿದೆ. "ಭೂಮಿಯ ಒಡೆತನವುಳ್ಳ ಈ ಜನ ಸಹಜವಾಗಿಯೇ ಸಮಾಜದಲ್ಲಿ ಪಡೆದುಕೊಂಡ ಗೌರವದ ಪ್ರತೀಕವಾಗಿ 'ಗೌಡ' ಎಂಬುದು ಒಕ್ಕಲಿಗರ ಹೆಸರುಗಳಿಗೆ ಸೇರಿಕೊಂಡಿದೆ"[೩೨]

(ಚ)	ಗೌಡಗೆರೆ		
(ಕ)	ಅಜ್ಜಗೌಡನವಲಸೆ	ಯಡಗೊಂಡನಹಳ್ಳಿ	ಕೂತಗೊಂಡನಹಳ್ಳಿ
	ಕೊಳಗೊಂಡನಹಳ್ಳಿ	ಪುರುಷಗೊಂಡನಹಳ್ಳಿ	ಬಾಲಗೌಡನಹಳ್ಳಿ
(ಮಾ)	ಕೆಂಪುಗೊಂಡನಹಳ್ಳಿ	ಕೊತ್ತಗೊಂಡನಹಳ್ಳಿ	ಮಾದಿಗೊಂಡನಹಳ್ಳಿ
	ಮೋಟಗೊಂಡನಹಳ್ಳಿ		

ಗೌಡ>ಗೌಂಡ>ಗೊಂಡನಾಗಿ ಬಳಸಲ್ಪಟ್ಟಿದೆ. ಸಾಮಾನ್ಯವಾಗಿ ವ್ಯಕ್ತಿವಾಚಕದ ಮುಂದೆ 'ಗೌಡ' ಎಂಬ ಪದವಿದ್ದಲ್ಲಿ ಒಕ್ಕಲಿಗ ಸಮುದಾಯದ ವ್ಯಕ್ತಿಯಾಗಿರಲು ಸಾಧ್ಯವಿದೆ. ಇವುಗಳೆಲ್ಲ ವ್ಯಕ್ತಿವಾಚಕಗಳಾಗಿವೆ. ಆದರೂ ವ್ಯಕ್ತಿಗಳ ಸಮುದಾಯವನ್ನು ಗುರುತಿಸುವಾಗ ಒಕ್ಕಲಿಗರ ಸಮುದಾಯಕ್ಕೆ ಸೇರಿದವರು ಎಂಬುದಾಗಿ ರಾಮನಗರ ಜಿಲ್ಲೆಯ ಪ್ರದೇಶದಲ್ಲಿ ಗುರುತಿಸುತ್ತಾರೆ. ಕೆರೆ, ವಲಸೆ, ಹಳ್ಳಿ ವಾರ್ಗಿಕಗಳಿಗೆ ಗೌಡ ಎಂಬ ಪದದ ಮೂಲಕ ಒಕ್ಕಲಿಗ ಸಮುದಾಯವನ್ನು ನಿರ್ದೇಶಿಸುವ ನಿರ್ದಿಷ್ಟಗಳು ಹೊಂದಿಕೆಯಾಗಿವೆ.

೫. ಕುರುಬರು

ಕುರುಬ ಎಂಬ ಪದವು 'ಕುರಿ' ಎಂಬ ಪದದಿಂದ ಬಂದಿದೆ. ಮೂಲತಃ ಇದು ಕುರಿ ಸಾಕಾಣಿಕೆ ಮತ್ತು ಕುರಿಗಳ ಉಣ್ಣೆಯಿಂದ ಮಾಡಿದ ಉತ್ಪನ್ನಗಳನ್ನು ಸೂಚಿಸುವ ವೃತ್ತಿ ಸೂಚಕಪದವಾಗಿದೆ. ಕಾಡುಕುರುಬ ಮತ್ತು ಜೇನುಕುರುಬ ಇವು ಕರ್ನಾಟಕದ ಬುಡಕಟ್ಟುಗಳು. ಹಾಲು ಕುರುಬ, ಹಂಡೆಕುರುಬ, ಹೊಸಕುರುಬ, ಹಳೆಕುರುಬ, ಕಂಬಿ ಕುರುಬ, ಸಾದಕುರುಬ, ಮಲ್ಲಿಕುರುಬ ಮುಂತಾದ ಒಳಪ್ರಬೇಧಗಳಿವೆ.

ಹಟ್ಟಿಕಾರರು; ಕುರುಬರು ಈ ನಾಡಿನ ಮೂಲ ನಿವಾಸಿಗಳು. ಕುರುಬರು ಗುಡ್ಡಗಾಡುಗಳಲ್ಲಿ, ಬೆಟ್ಟದ ಬುಡದಲ್ಲಿ ಹಟ್ಟಿ, ಹಾಡಿಗಳನ್ನು ನಿರ್ಮಿಸಿಕೊಂಡು ಜೀವನೋಪಾಯಕ್ಕಾಗಿ ಕುರಿ ಸಾಕಾಣಿಕೆ

ಮಾಡುತ್ತಿದ್ದರು. ಹಟ್ಟಿ ಮತ್ತು ಹಾಡಿಗಳೆಂಬ ವಾರ್ಗಿಕಗಳು ತುಂಬಾ ಪ್ರಾಚೀನವಾದವುಗಳೆಂಬುದು ಶಂಬಾ ಅವರ ಅಭಿಪ್ರಾಯವಾಗಿದೆ. 'ಉತ್ತರ ಮಲಬಾರಿನ ಕುರುಂಬನಾಡು ಎಂಬ ಹೆಸರಿನ ತಾಲೂಕು ಜನಾಂಗವನ್ನು ಪ್ರತಿನಿಧಿಸುವಲ್ಲಿ ಪ್ರಮುಖ ಸಾಕ್ಷಿಯಾಗಿದೆ'[೩೩] ಎಂದರೂ ಕುರು, ಕುರುಬ ಎಂಬ ನಿರ್ದಿಷ್ಟವನ್ನು ಹೊಂದಿರುವ ಸ್ಥಳನಾಮಗಳು ಇಡೀ ಕರ್ನಾಟಕದಾದ್ಯಂತ ಪ್ರಚಲಿತವಿರುವುದರಿಂದ ಶಂಬಾ ಅಭಿಪ್ರಾಯಪಟ್ಟಂತೆ ಕುರುಬರು ಈ ಮಣ್ಣಿನ ಮಕ್ಕಳು ಎಂಬುದರಲ್ಲಿ ಬೇರೊಂದು ಮಾತಿಲ್ಲ. ರಾಮನಗರ ಜಿಲ್ಲೆಯು ಬೆಟ್ಟ ಗುಡ್ಡಗಳಿಂದಲೇ ಆವರಿಸಿರುವ ಭೌಗೋಳಿಕ ಲಕ್ಷಣದಿಂದ ಕೂಡಿರುವುದರಿಂದ ಹಾಗೂ ಹಟ್ಟಿಕಾರರು, ಕುರುಬರ ನೆಲೆಯು ಬೆಟ್ಟ ಗುಡ್ಡಗಳ ಆಶ್ರಯತಾಣವಾದುದ್ದರಿಂದ ಈ ಜಿಲ್ಲೆಯಲ್ಲಿ ಕುರು ಅಥವಾ ಕುರುಬರನನ್ನು ನಿರ್ದೇಶಿಸುವ ಸ್ಥಳನಾಮಗಳಿರುವುದನ್ನು ನೋಡಬಹುದು.

(ಕ)	ಕುರುಬರಹಳ್ಳಿ	
(ರಾ)	ಕುರುಬರಹಳ್ಳಿ	ಕುರುಬರಕರೇನಹಳ್ಳಿ
(ಮ)	ಕುರುಬರಹಳ್ಳಿ	ಕುರುಬರಪಾಳ್ಯ

ಕನಕಪುರ ತಾಲೂಕಿನ ಕುರುಬರಹಳ್ಳಿಯಲ್ಲಿ ಕುರುಬ ಸಮುದಾಯದ ಒಂದು ಮನೆಯೂ ಸದ್ಯಕ್ಕಿಲ್ಲ. ಆದರೆ ಈ ಊರಿನ ಸಮೀಪವೇ ಇರುವ 'ಚೂಡಹಳ್ಳಿ' ಎಂಬ ನಿರ್ವಸತಿ ಸ್ಥಳವಿದ್ದು. ಹಾಳಾಗಿರುವ ಒಂದು ಊರಿನ ಅವಶೇಷಗಳಿವೆ. ಸ್ಥಳೀಯರ ಮೌಖಿಕ ಕಥೆಯಂತೆ ಸುತ್ತಮುತ್ತಲಿನ ಹೊಲಗಳನ್ನು ಉಳುಮೆ ಮಾಡುವಾಗ ಚಿನ್ನ, ಬೆಳ್ಳಿಯ ನಾಣ್ಯ ಮತ್ತಿತರ ವಸ್ತುಗಳು ಸಿಕ್ಕ ಮಾಹಿತಿಯನ್ನು ಕೊಡುತ್ತಾರೆ. ಅಂದಮೇಲೆ ಈ ಸ್ಥಳದಲ್ಲಿ ಹಿಂದೊಮ್ಮೆ ಬಹುಸಂಖ್ಯಾತರಾಗಿ ಕುರುಬ ಸಮುದಾಯ ಬದುಕಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕುರುಬ ಸಮುದಾಯದ ನಿರ್ದಿಷ್ಟಕ್ಕೆ ಹಳ್ಳಿ ಮತ್ತು ಪಾಳ್ಯ ಎಂಬ ವಾರ್ಗಿಕಗಳು ಬಂದಿವೆ. ಈ ಜಿಲ್ಲೆಯ ಪರಿಸರದಲ್ಲಿ ಕುರುಬ ಸಮುದಾಯದ ಪಾಳೆಯಪಟ್ಟು ಇದ್ದ ಬಗ್ಗೆ 'ಪಾಳ್ಯ'ವಾರ್ಗಿಕ ಸೂಚಿಸುವಂತಿದೆ. ಅದಕ್ಕೆ ಸಂಶೋಧನೆಯ ಕುಲುಮೆಯಲ್ಲಿ ಗಟ್ಟಿಗೊಳಿಸಬೇಕಾದ ಅವಶ್ಯಕತೆ ಇದೆ.

೬. ಗೊಲ್ಲರು

ಪಶುಪಾಲನೆಯನ್ನು ತಮ್ಮ ಮೂಲ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಿರುವವರೇ ಗೊಲ್ಲ. ಸಮುದಾಯ ಹಿಂದೂ ಧಾರ್ಮಿಕ ಪುರಾಣಗಳಲ್ಲಿ ಗೋವುಗಳನ್ನು ಕಾಯುವವನೇ ಗೋಪಾಲ ಅಥವಾ ಗೊಲ್ಲನೆಂಬ ಉಲ್ಲೇಖಗಳಿವೆ. "ವಾಲ್ಮೀಕಿ ರಾಮಾಯಣದಲ್ಲಿ ಘೋಷ್ ಮತ್ತು ಗ್ರಾಮ ಎಂಬ ಎರಡು ಘಟಕಗಳ ಉಲ್ಲೇಖವಿದೆ. ಒಂದನೆಯದು 'ಘೋಷ್' ಸಣ್ಣ ಗಾತ್ರದ್ದಾದರೆ, ಎರಡನೆಯದು 'ಗ್ರಾಮ' ದೊಡ್ಡದು. ಈ ಗ್ರಾಮಗಳು ಅರಣ್ಯಕ್ಕೆ ಸಮೀಪದಲ್ಲಿರುತ್ತದೆಂದು ಹೇಳಲಾಗಿದೆ. ಆದ್ದರಿಂದ ಇಲ್ಲಿ ಒಂದು ಸಮುದಾಯ ವಾಸಿಸುತ್ತದೆ"[೩೪] ಗೊಲ್ಲರಲ್ಲಿ ಕಾಡುಗೊಲ್ಲರೆಂಬ ಪ್ರತ್ಯೇಕ ಸಮುದಾಯವಿದೆ. ಆ ಚಿಕ್ಕ

ಗ್ರಾಮ ನಿವಾಸಿಗಳನ್ನು ಗೋಪರು ಎಂದು ಕರೆಯಲಾಗಿದೆ. ಈ ಗೋಪರೆ ಕಾಡುಗೊಲ್ಲರೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ದನಗಾರಿಕೆ ಇವರ ಪಾರಂಪರಿಕ ವೃತ್ತಿಯಾದರೂ, ಇದರ ಜೊತೆಗೆ ಹೈನುಗಾರಿಕೆಯನ್ನು ಮಾಡುತ್ತಾರೆ.

ತಮ್ಮ ಸಂಪ್ರದಾಯಗಳಿಗೆ ಕಟ್ಟು ಬಿದ್ದು ಪಶುಗಳ ಪೋಷಣೆ ಮತ್ತು ಸಂರಕ್ಷಣೆಗಾಗಿ ಕಾಡಿನಲ್ಲೇ ವಾಸಿಸುತ್ತಿದ್ದ ಇವರನ್ನು ಅಡವಿ ಗೊಲ್ಲರು, ಕರಡಿಗೊಲ್ಲರು, ಕಲ್ಲಿ ಗೊಲ್ಲರು, ಕಳ್ಳಿ ಗೊಲ್ಲರು, ಹಟ್ಟಿಗೊಲ್ಲ ಎಂದು ಕರೆಯುವ ವಾಡಿಕೆ ಇದೆ. ಸ್ವಾತಂತ್ರ್ಯ ನಂತರದಲ್ಲಿ ಕಾಡಿನಲ್ಲಿ ವಾಸಿಸುತ್ತಿಲ್ಲವಾದರೂ ಪ್ರತ್ಯೇಕ ಹಟ್ಟಿಗಳಲ್ಲಿ ತಮ್ಮೆಲ್ಲ ಸಂಪ್ರದಾಯಗಳೊಂದಿಗೆ ವಾಸಿಸುತ್ತಿದ್ದಾರೆ. “ಹಲವು ಗೊಲ್ಲ ಕುಟುಂಬಗಳ ಸಮೂಹವೇ ಹಟ್ಟಿ ಅರ್ಥಾತ್ ‘ದೇವರ ಹಟ್ಟಿ’, ಮಾಗಡಿ ಸೀಮೆಯಲ್ಲಿ ಇಂತಹ ದೇವರ ಹಟ್ಟಿಗಳಿವೆ. ಇಂತಹ ಹಲವು ಹಟ್ಟಿಗಳ ಸಮೂಹಕ್ಕೆ ಕಣತಿಯೆಂದೂ, ಹಲವು ಕಣತಿಗಳ ಗುಂಪನ್ನು ಅಂಬು ಎಂದೂ, ಅನೇಕ ಅಂಬುಗಳ ಸಮೂಹವನ್ನು ‘ಗುಡಿಕಟ್ಟು’ ಎಂದೂ, ಹಲವು ಗುಡಿಕಟ್ಟುಗಳ ಗುಂಪನ್ನು ‘ಕಟ್ಟೆಮನೆ’ಯೆಂದೂ ಸಾಂಪ್ರದಾಯಿಕವಾಗಿ ಗುರುತಿಸುತ್ತಾರೆ. ಈ ಹಟ್ಟಿಯ ಯಜಮಾನನೇ ಕುಲಪೂಜಾರಿ. ಇವನ ಮಾತೇ ವೇದವಾಕ್ಯ”[೩೬] ಹೀಗೆ ಇನ್ನಿತರ ಸಮುದಾಯಗಳಿಗಿಂತ ಭಿನ್ನವಾದ ಸಾಮಾಜಿಕ ಕಟ್ಟುಪಾಡುಗಳೊಂದಿಗೆ ಬದುಕುತ್ತಿರುವ ಈ ಸಮುದಾಯದ ಆರಾಧ್ಯದೈವ ‘ಜುಂಜಪ್ಪನಾಗಿದ್ದಾನೆ. ಕುಟಿ>ಕುಡಿ>ಕುಡ>ಕುಳ: ಪಟ್ಟಿ>ಹಟ್ಟಿ: ಪಾಡಿ>ಹಾಡಿ ಇವುಗಳೆಲ್ಲಾ ಗೋವಳಿಗರ ವಸತಿಗಳೆಂದು ಶಂಬಾಜೋಷಿ ಅಭಿಪ್ರಾಯಪಟ್ಟಿದ್ದಾರೆ. ರಾಮನಗರ ಜಿಲ್ಲೆಯ ಪರಿಸರದಲ್ಲಿ ಊರುಗೊಲ್ಲರು ಮತ್ತು ಕಾಡು ಗೊಲ್ಲರೆಂಬ ಎರಡು ಪಂಗಡಗಳಿವೆ. ಹಾಗೆ ಗೊಲ್ಲ ಸಮುದಾಯವನ್ನು ಹೊಂದಿರುವ ಸ್ಥಳನಾಮಗಳಿಗೇನು ಕಡಿಮೆ ಇಲ್ಲ.

(ಕ)	ಗುಂಡಿನಗೊಲ್ಲಹಳ್ಳಿ	ಗೋಪಸಂದ್ರ	ಗೊಲ್ಲಹಳ್ಳಿ (೨)
	ತಿಟ್ಟಮೇಲಿನಗೊಲ್ಲಹಳ್ಳಿ		
(ರಾ)	ಗೊಲ್ಲರ ದೊಡ್ಡಿ	ಗೊಲ್ಲರಪಾಳ್ಯ	ಗೋಪಹಳ್ಳಿ
(ಚ)	ಗೊಲ್ಲರಪಾಳ್ಯ	ಗೊಲ್ಲಹಳ್ಳಿ (೨)	

‘ಗೊಲ್ಲ’ ಎಂಬ ಜಾತಿ ವಾಚಕ ನಿರ್ದಿಷ್ಟಕ್ಕೆ ಹಳ್ಳಿ, ಸಂದ್ರ, ಪಾಳ್ಯ, ದೊಡ್ಡಿ ಎಂಬ ವಾರ್ಗಿಕಗಳು ಸೇರಿಕೊಂಡಿವೆ. ಈ ಸಮುದಾಯ ವಾಸ್ತವ್ಯವಿರುವ ಈ ನೆಲೆಗಳಲ್ಲಿ ಈಗ ಜನಸಂಖ್ಯೆಯ ಬಾಹುಳ್ಯ ಇಲ್ಲದಿರಬಹುದು. ಆದರೆ ಊರು ನಿರ್ಮಾಣವಾದ ಕಾಲದಲ್ಲಿ ಖಂಡಿತ ಈ ಸಮುದಾಯದ ಜನಸಂಖ್ಯೆಯು ಬಾಹುಳ್ಯತೆಯಿಂದ ಕೂಡಿತ್ತು ಎಂಬುದನ್ನು ಈ ಊರುಗಳ ಹೆಸರುಗಳು ಸ್ಪಷ್ಟಪಡಿಸುತ್ತವೆ.

೭. ತಿಗಳರು

ತಿಗಳ ಜನಾಂಗದವರ ಮೂಲ ನೆಲೆ ತಮಿಳುನಾಡು ಅಥವಾ ಕೊಂಗದೇಶ. ಇವರನ್ನು ಕೊಂಗರು ಎಂದೂ ಕರೆಯುವುದುಂಟು. ಇವರು ವ್ಯವಸಾಯ, ಪಶುಪಾಲನೆಯ ಜೊತೆಗೆ ತೋಟದ ಬೆಳೆಗಳಾದ ಹಣ್ಣು, ತರಕಾರಿ, ಹೂವನ್ನು ವ್ಯಾಪಾರ ಮಾಡುವ ವೃತ್ತಿಯನ್ನು ಮಾಡುತ್ತಾರೆ.

"ತಿಗಳ ಜನಾಂಗಕ್ಕೆ ಪ್ರಾಚೀನ ಇತಿಹಾಸವಿದೆ. ತಮಿಳುನಾಡಿನಿಂದ ವಲಸೆ ಬಂದ ತಿಗಳರು ತಮ್ಮನ್ನು ಅಗ್ನಿಕುಲ, ಶಂಭುಕುಲ, ಪಾಂಡವಕುಲ ಮತ್ತು ಕ್ಷತ್ರಿಯ ಕುಲದವರೆಂದು ಹೇಳಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಇವರು ಬಹುಪಾಲು ವಹ್ನಿಕುಲ ಕ್ಷತ್ರಿಯರು ಅಥವಾ ಪಳ್ಳಿಗರೆಂದು ಗುರುತಿಸಿಕೊಂಡಿದ್ದಾರೆ"[೩೬] ಅಗ್ನಿಪುತ್ರಿಯಾದ ದ್ರೌಪದಿಯ ವಂಶಸ್ಥರು; ದ್ರೌಪದಿ ಶಕ್ತಿ ದೇವತೆಯ ಪ್ರತೀಕವೆಂದು 'ದ್ರೌಪದಿ ಕರಗ'ವನ್ನು ಹೊರುವ ಧಾರ್ಮಿಕ ಆಚರಣೆ ತಮಗೆ ಒಲಿದು ಬಂದಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಇವರು; ದಕ್ಷಿಣ ಕರ್ನಾಟದ ಜಿಲ್ಲೆಗಳಾದ ಕೋಲಾರ, ಬೆಂಗಳೂರು, ತುಮಕೂರು ಮತ್ತು ರಾಮನಗರ ಜಿಲ್ಲೆಯಲ್ಲಿ ಹೆಚ್ಚು ವಾಸಿಸುತ್ತಾರೆ.

ತಮಿಳು ನಾಡಿನಿಂದ ವಲಸೆ ಬಂದ ಜನರಾದ ಇವರನ್ನು ಕನ್ನಡಿಗರ ಬಾಯಲ್ಲಿ ತಿಗಳರೆಂದಾಗಿದ್ದಾರೆ. ತಮಿಳರು ಕನ್ನಡ ನಾಡಿಗೆ ವಲಸೆ ಬಂದದ್ದನ್ನು ಮೂರು ಘಟ್ಟಗಳಲ್ಲಿ ಗುರುತಿಸಬಹುದು. "ಹನ್ನೊಂದನೆಯ ಶತಮಾನದಲ್ಲಿ ಚೋಳರು ಮೈಸೂರಿನ ಸ್ವಲ್ಪ ಭಾಗವನ್ನು ಆಕ್ರಮಿಸಿ, ವಿಕ್ರಮ ಚೋಳ ಮಂಡಲವನ್ನು ಸ್ಥಾಪಿಸಿದಾಗಲೇ ತಮಿಳರು ಇಲ್ಲಿಗೆ ಬಂದಿದ್ದಾರೆ. ಹದಿಮೂರನೆ ಶತಮಾನದ ಶಬ್ದಮಣಿ ದರ್ಪಣದಲ್ಲಿ 'ತಿಗುಳ' ಶಬ್ದದ ಉಲ್ಲೇಖ ಇದೆ. ಕುಮಾರವ್ಯಾಸ ಭಾರತದಲ್ಲಿ ತಿಗುಳ ರಾವುತರ ಪ್ರಸ್ತಾಪವಿದೆ. ಧರ್ಮರಾಯ ಸ್ವಾಮಿ ಕರಗದ ಆರಾಧಕರಾದ ವಹ್ನಿಕುಲ ಕ್ಷತ್ರಿಯರೂ ತಮಿಳುನಾಡಿನ ಕಂಚಿಯ ಪ್ರದೇಶದಿಂದಲೇ ಬಂದವರು"[೩೭] ಇದು ಮೊದಲ ಘಟ್ಟವಾದರೆ, "ಕ್ರಿ.ಶ.೧೬ನೆಯ ಶತಮಾನದಲ್ಲಿ ಅಂದರೆ ಕೆಂಪೇಗೌಡನ ಆಳ್ವಿಕೆಯ ಕಾಲದಲ್ಲಿ ಬೆಂಗಳೂರಿಗೆ ಬಂದವರೆಂಬುದು ಮತ್ತು ಕ್ರಿ.ಶ.೧೮ನೇ ಶತಮಾನದಲ್ಲಿ ಅಂದರೆ ಹೈದರಾಲಿಯ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ ಬಂದು ನೆಲೆಸಿದರೆಂಬ ಎರಡೂ ಅಭಿಪ್ರಾಯಗಳಿವೆ"[೩೮] ಇದು ಎರಡನೇ ಘಟ್ಟ. "ಕ್ರಿ.ಶ.೧೮ನೇ ಶತಮಾನದ ಮಧ್ಯ ಭಾಗದಲ್ಲಿ ಹೈದರಾಲಿಯು ಮೈಸೂರಿನ ನವಾಬನಾಗಿದ್ದನು. ಆತನು ತಿರುಚನಾಪಳ್ಳಿ ಮತ್ತು ಆರ್ಕಾಟ್ ಪ್ರಾಂತ್ಯಗಳನ್ನು ಗೆದ್ದು ತನ್ನದಾಗಿಸಿಕೊಂಡಿದ್ದನು. ಹೀಗೆ ಹೋರಾಟಕ್ಕೆ ಹೋದ ಹೈದರಾಲಿಯು ವಿಜಯಶಾಲಿಯಾಗಿ ಹಿಂದಿರುಗುವಾಗ ಸುಂದರವಾಗಿ ತೋಟಗಾರಿಕೆ ಮಾಡುತ್ತಿದ್ದ. ತಿಗುಳ ಜನಾಂಗದ ಕುಟುಂಬಗಳನ್ನು ಕರೆತಂದನು"[೩೯] ಹೀಗೆ ಕರೆ ತಂದ ಇವರನ್ನು ಶ್ರೀರಂಗಪಟ್ಟಣದ ಗಂಜಾಂನಲ್ಲೂ, ಬೆಂಗಳೂರಿನಲ್ಲೂ ಆಶ್ರಯನೀಡಿದನೆಂದೂ, ಅವರಿಂದ ಬೆಂಗಳೂರಿನಲ್ಲಿ ಲಾಲ್‌ಬಾಗ್, ಶ್ರೀರಂಗಟಪಟ್ಟಣದಲ್ಲಿ, ದರಿಯಾದೌಲತ್‌ಬಾಗ್ ಉದ್ಯಾನವನಗಳನ್ನು, ಹೂವಿನ ತೋಟ, ಹಣ್ಣುಗಳ ತೋಟಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ತಿಗಳರು ನೆಲೆ ನಿಂತ ಸ್ಥಳಗಳಿಗೆ ತನ್ನ ಸಮುದಾಯದ ಹೆಸರಿನಿಂದ ಕರೆದಿರುವ ಸಂಭವವಿದೆ.

(ಕ) ತಿಗಳರ ಹೊಸಹಳ್ಳಿ ತಿಗಳರಹಳ್ಳಿ

'ಹಳ್ಳಿ' ಎಂಬ ವಾರ್ಗಿಕಕ್ಕೆ ತಿಗಳ ಸಮುದಾಯವಾಚಿಯಾದ ನಿರ್ದಿಷ್ಟಕ್ಕೆ ಸರಿಹೊಂದಿದೆ. ಈ ಎರಡು ಗ್ರಾಮಗಳಲ್ಲಿ ತಿಗಳ ಸಮುದಾಯದ ಜನತೆಯು ಸಂಖ್ಯಾಬಾಹುಳ್ಯದಿಂದ ಕೂಡಿದೆ.

೮. ನಾಯಕ/ಬೇಡರು

ಕರ್ನಾಟಕದಲ್ಲಿ ಮಾತ್ರವಲ್ಲದೆ; ಇಡೀ ಭಾರತದಲ್ಲಿ ವಾಸವಾಗಿರುವ ಆದಿಯ ಜನಾಂಗಗಳಲ್ಲಿ ಬೇಡ ಜನಾಂಗವೂ ಒಂದು. ಅಂಥ ಬುಡಕಟ್ಟು ಜನರಾದ ಬೇಡರಿಗೆ ಬೇಟೆಯೇ ಮೂಲ ಕಸುಬಾಗಿತ್ತು.

ಬೇಡರನ್ನು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಾಗಿ ಕಿರಾತ, ಶಬರ, ಕಂತ, ನಿಷಾದ, ತಳವಾರ, ನಾಯಕ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಬೇಡರಿಗೆ ಮುಖ್ಯವಾಗಿ ವಾಲ್ಮೀಕಿ ಮತ್ತು ನಾಯಕರೆಂದು ಕರೆಯುತ್ತಾರೆ. "ಬೇಡರು ಪಂಜಾಬಿನ ಗಿರಿಶಿಖರಗಳಿಂದ ಕರ್ನಾಟಕಕ್ಕೆ ಬಂದರೆಂದು, ಇವರಿಗೆ ಬಿಲ್ಲರು, ನಾಯಕರು, ಬೇರಾರ್ ಎಂದು ಕರೆಯುತ್ತಿದ್ದಾರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ"[೬೦]. ಆದರೂ ಬುಡಕಟ್ಟು ಜನಗಳಾದ ಇವರು ಈ ನಾಡಿನ ಮೂಲ ನಿವಾಸಿಗಳು.

ಬೇಡ ಜನಾಂಗದ ಮೂಲ ಪುರುಷ ವಾಲ್ಮೀಕಿ ಎಂಬುದು ಹಲವರ ಅಭಿಪ್ರಾಯ. ಧೈರ್ಯ, ಸಾಹಸ, ಪರಾಕ್ರಮಕ್ಕೆ ಹೆಸರಾದ ಇವರು ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡಿದ್ದಲ್ಲದೇ, ತಮ್ಮ ಸ್ವಸಾಮರ್ಥ್ಯದಿಂದ ಹಲವಾರು ಪಾಳೆಪಟ್ಟುಗಳನ್ನು ಕಟ್ಟಿಕೊಂಡು ಪಾಳೆಯಗಾರರಾಗಿ ಮೆರೆದಿರುವುದು ಕರ್ನಾಟಕದ ಇತಿಹಾಸ ಪುಟಗಳಲ್ಲಿ ಕಂಡುಬರುತ್ತದೆ. ರಾಮನಗರ ಜಿಲ್ಲೆಯ ಪರಿಸರದಲ್ಲಿದ್ದ ವಿಜಯನಗರದ ಪ್ರತಿನಿಧಿಗಳನ್ನೇ ಸದೆಬಡಿದು, ಮಾಗಡಿ, ಸಾವನದುರ್ಗ ಪ್ರಾಂತ್ಯಗಳ ಮೇಲೆ ತನ್ನ ನಿಯಂತ್ರಣ ಸ್ಥಾಪಿಸಿದ ಗುಡೇಮಾರನಹಳ್ಳಿ, ಗಂಗ, ಒಬ್ಬ ಸಾಮಾನ್ಯ ತಳಾರಿಯಾಗಿದ್ದನು. ಬೇಡರು ಸೈನಿಕ ವೃತ್ತಿಯ ಜೊತೆಗೆ ಊರಿನ ತಳಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಈ ಸಮುದಾಯದವರು "ಊರುಳಿವು ಗೋಗ್ರಹಣ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡಿ ಮಡಿದು, ವೀರಗಲ್ಲಿನ ಸ್ಮಾರಕವಾಗಿದ್ದಾರೆ. ಬಿಲ್ಲು ಹಿಡಿದ ವೀರಗಲ್ಲುಗಳು ಬೇಡ ಜನಾಂಗದವರೆಂಬುದಕ್ಕೆ ದುಮ್ಮನಕಟ್ಟೆ ತಳಾರಿಗಳ ಹೊಲದಲ್ಲಿರುವ ವೀರಗಲ್ಲು ಗುಡ್ಡಗಳೇ ಸಾಕ್ಷಿ"[೬೧] ಊರ ರಕ್ಷಣೆಗಾಗಿ, ನಾಡ ರಕ್ಷಣೆಗಾಗಿ ಹಾಗೂ ಕಲಿತನಕ್ಕೆ ಹೆಸರಾದ ಬೇಡ ಸಮುದಾಯದವರ ಹೆಸರಿನಲ್ಲಿ ಸ್ಥಳನಾಮಗಳು ಅವರು ನೆಲೆಸಿದ ನೆಲೆಗಳನ್ನು ನಿರ್ದೇಶಿಸುತ್ತವೆ.

(ಚ) ಬ್ಯಾಡರಹಳ್ಳಿ ೨ **(ಮಾ)** ಬ್ಯಾಡರಹಳ್ಳಿ ೨

ಚನ್ನಪಟ್ಟಣ ಮತ್ತು ಮಾಗಡಿ ತಾಲೂಕಿನಲ್ಲಿ 'ಬ್ಯಾಡರಹಳ್ಳಿ' ಎಂಬುದಾಗಿ ತಲಾ ಎರಡು ಇವೆ. ಬೇಡರ್ ಎಂಬ ಪದವು 'ಬ್ಯಾಡರು' ಪದದಿಂದ ಬಂದಿದೆ. ಸಂಸ್ಕೃತದಲ್ಲಿ 'ಭಾಧ್ಯ' ಎಂದು, ಇದರ ಅರ್ಥ ಬೇಟೆಗಾರ ಎಂದು, ಬೇಡ ಸಮುದಾಯದವರ ಮೂಲ ವೃತ್ತಿಯನ್ನೇ ತಿಳಿಸುವುದು. ಬ್ಯಾಡ ಎಂಬ ಸಮುದಾಯವಾಚಕಕ್ಕೆ 'ಹಳ್ಳಿ' ಎಂಬ ವಾರ್ಗಿಕ ಬಂದಿದೆ.

೯. ಉಪ್ಪಾರರು

ಜೀವನಾವಶ್ಯಕ ಲವಣವಾದ ಉಪ್ಪು ಸಾಗರೋತ್ಪನ್ನವಾಗಿದೆ. ಪ್ರಾಚೀನ ಕರ್ನಾಟಕದಲ್ಲಿ; ಜನರಿಗೆ ಬೇಕಾದ ಉಪ್ಪನ್ನು ತಂದು ಸರಬರಾಜುಮಾಡಿ ವಸ್ತು ವಿನಿಮಯ ಪದ್ಧತಿ ಮೂಲಕ ತಮಗೆ ಬೇಕಾದ ದವಸಧಾನ್ಯವನ್ನು ಪಡೆಯುವ ವೃತ್ತಿಯನ್ನು ಅನುಸರಿಸಿಕೊಂಡು ಬಂದವರೆ ಉಪ್ಪಾರರು. ಇವರ ಮೂಲವೃತ್ತಿ ಉಪ್ಪು ಮಾರಾಟ ಮಾಡುವುದು. ಉಪ್ಪು ಸಾಗರೋತ್ಪನ್ನವಾದರೂ ಭೂಮಿಯಿಂದ ಅಗೆದು ತೆಗೆದ ಮಣ್ಣನ್ನು ಮಾಳಿಗೆ ಮೇಲೆ ಹರಡಿ ಹದವಾಗಿ ನೀರು ಕಟ್ಟಿ ಉಪ್ಪು ತಯಾರಿಸುವ ವಿಧಾನ ಮಾಗಡಿ ಪರಿಸರದಲ್ಲಿ ರೂಢಿಯಲ್ಲಿತ್ತು. ಉಪ್ಪುಗಾರರ ಉಪ್ಪಿನ ಮಾಳಗಳ[೬೨] ಮೇಲೆ ಸುಂಕ ವಿಧಿಸಲಾಗುತ್ತಿತ್ತು. ಅವರೆ ಬಪಲಾವ

ಕಾಲಮಾನದಲ್ಲಿ ಉಪ್ಪಾರರು ತಮ್ಮ ಮೂಲ ವೃತ್ತಿಯಾದ ಉಪ್ಪುಮಾರುವುದನ್ನು ಬಿಟ್ಟು ಬದಲಾಗಿ ಪರ್ಯಾಯ ವೃತ್ತಿಯನ್ನು ಆಶ್ರಯಿಸಬೇಕಾಯಿತು. ಆದರೂ ತಮ್ಮ ಮೂಲ ವೃತ್ತಿಗನುಗುಣವಾದ ಸಮುದಾಯವಾಚಿಯಾದ 'ಉಪ್ಪಾರ' ಎಂಬ ಪದ ಸ್ಥಳನಾಮಗಳಲ್ಲಿ ಗುರುತಿಸಬಹುದು.

ಮಾಗಡಿ ಪರಿಸರದಲ್ಲಿ ಉಪ್ಪಿನ ಮಾಳದ ಮೇಲೆ ವಿಧಿಸುತ್ತಿದ್ದ ತೆರಿಗೆ ಹಾಗೂ ಉಪ್ಪಾರ ಸಮುದಾಯದವರ ಪ್ರಾಬಲ್ಯವನ್ನು ಸೂಚಿಸುವ ಗ್ರಾಮ ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನಲ್ಲಿದೆ.

(ಮಾ) ಉಪ್ಪಾರತಿ.

೧೦. ವಡ್ಡರು

ವಡ್ಡರನ್ನು ಬೋವಿಗಳೆಂದು ಕರೆಯುತ್ತಾರೆ. ವಡ್ಡರು ಕಲ್ಲು ಒಡೆಯುವುದು. ಬಂಡೆ ಸೀಳುವುದು, ಬಾವಿ ತೋಡಿಸುವುದು, ಕೆರೆ ಕಟ್ಟುವುದು ಮತ್ತು ರಸ್ತೆ ನಿರ್ಮಿಸುವುದು ಮೊದಲಾದ ಸಾಂಪ್ರದಾಯಿಕ ವೃತ್ತಿಯನ್ನು ಮಾಡುತ್ತಾರೆ.

ವಡ್ಡರಲ್ಲಿ ಕಲ್ಲು ವಡ್ಡರು, ಮಣ್ಣು ವಡ್ಡರು ಮತ್ತು ಉಪ್ಪು ವಡ್ಡರು ಎಂಬ ಪಂಗಡಗಳಿವೆ. ಹಿಂದಿನ ಕಾಲದಲ್ಲಿ ರಾಜರು ಕೋಟೆ ಮತ್ತು ಅರಮನೆ ಕಟ್ಟುವ ಕೆಲಸವನ್ನು ಇವರಿಂದ ಮಾಡಿಸುತ್ತಿದ್ದರು. ರಾಜ್ಯದ ಎಲ್ಲ ಕಡೆ ಈ ಸಮುದಾಯದವರು ವಾಸಿಸುತ್ತಿದ್ದಾರೆ. ಇವರ ಸಮುದಾಯದ ಜನಸಂಖ್ಯೆಯ ಬಾಹುಳ್ಯತೆಯನ್ನು ಅವಲಂಭಿಸಿ ರಾಮನಗರ ಜಿಲ್ಲೆಯ ಪರಿಸರದಲ್ಲಿ ಸ್ಥಳನಾಮಗಳಿರುವುದು ಕಂಡುಬರುತ್ತದೆ.

(ಮಾ) ವಡ್ಡರ ಪಾಳ್ಯ ವಡ್ಡರಹಳ್ಳಿ

(ಚ) ವಡ್ಡರಗುಪ್ಪೆ

(ಕ) ವಡ್ಡರಕುಪ್ಪೆ

'ವಡ್ಡರು' ಸಮುದಾಯವನ್ನು ಹೊಂದಿರುವ ನಿರ್ದಿಷ್ಟ ಭಾಗಕ್ಕೆ ಪಾಳ್ಯ, ಹಳ್ಳಿ, ಕುಪ್ಪೆ ಎಂಬ ವಾರ್ಗಿಕಗಳು ಸರಿಹೊಂದುತ್ತವೆ.

೧೧. ಅಕ್ಕಸಾಲಿಗರು/ವಿಶ್ವಕರ್ಮರು

ಕೈ ಕಸಬನ್ನು ಮಾಡುವ ಕೆಲವು ಕುಶಲಕರ್ಮಿಗಳನ್ನು, ಒಟ್ಟಿಗೆ ಪಾಂಚಾಳರು ಎಂದು ಕರೆಯುತ್ತಾರೆ. ಅಕ್ಕಸಾಲಿಗ, ಓಜರು, ಆಚಾರಿ, ಸೊನೆಗಾರರು, ಪತ್ತಾರ, ಸುತಾರ, ಕಮ್ಮಾರ, ಚಿನಿವಾರರು, ರಥಕಾರರು ಎಂಬಿತ್ಯಾದಿ ವಿವಿಧ ಪಂಗಡಗಳಿವೆ.

ಬಂಗಾರ ಮತ್ತು ಬೆಳ್ಳಿ ಆಭರಣಗಳನ್ನು ತಯಾರಿಸುವ ಕುಶಲ ಕರ್ಮಿಯೇ ಅಕ್ಕ ಸಾಲಿಗ. ವಿಗ್ರಹಗಳ ಕೆತ್ತನೆಕಾರ್ಯ, ಶಿಲ್ಪಗಳ ಕೆತ್ತನೆಯ ಕೆಲಸ ಹಾಗೂ ಸೂಕ್ಷ್ಮವಾದ ಕುಸುರಿಯ ಕೆಲಸ ಮಾಡುವವರನ್ನು ಆಚಾರರು ಎನ್ನುತ್ತಾರೆ. ಜಗತ್ತನ್ನು ಸೃಷ್ಟಿಸಿದ 'ವಿಶ್ವಕರ್ಮ' ಅಕ್ಕಸಾಲಿಗರ ವಂಶದ ಮೂಲ ಪುರುಷ. "ಪ್ರಾಚೀನ ಕಾಲದ ನಾಗರಿಕತೆಯನ್ನು ಗುರುತಿಸುವಾಗ ಅಕ್ಕಸಾಲಿಗರು ರಚಿಸಿರುವ ಆಭರಣಗಳ ವಿನ್ಯಾಸವನ್ನು

ಪರಿಗಣಿಸಲ್ಪಡುತ್ತದೆ. ಸಿಂಧೂ ಬಯಲಿನ ನಾಗರಿಕತೆಯಲ್ಲಿ ಅಕ್ಕಸಾಲಿಗರು ಬೆಳ್ಳಿ, ಬಂಗಾರವನ್ನು ಕಾಯಿಸುವುದು, ಎರಕ ಹುಯ್ಯುವುದು, ಅಚ್ಚೊತ್ತುವುದು, ಆಭರಣ ತಯಾರಿಸುವುದು ಮುಂತಾದ ಕೆಲಸ ಮಾಡುತ್ತಾರೆ ಎಂಬ ಉಲ್ಲೇಖವಿದೆ"[೪೩] ಇವರನ್ನು ವೀರಪಾಂಚಾಲರೆಂದೇ ಶಾಸನಗಳಲ್ಲಿ ಕರೆಯಲಾಗಿದೆ. ಇವರು ಪುರಾಣ ಇತಿಹಾಸಗಳ ಕಥಾ ಸಾರವನ್ನು ತಮ್ಮ ಕುಶಲಕಲೆಯಲ್ಲಿ ಬಿಂಬಿಸಿ ಸಾಂಸ್ಕೃತಿಕ ಹಿರಿಮೆಗೆ ನೆರವಾಗಿದ್ದರು. ವೀರ ಪಂಚಾಲರಿಗೆ ಸರ್ವಮಾನ್ಯ ಭೂಮಿ ನೀಡಿರುವುದಕ್ಕೆ ಶಾಸನಾಧಾರಗಳಿವೆ. ಇವರ ವೃತ್ತಿಗೌರವಕ್ಕೆ ತಕ್ಕ ಉದಾಹರಣೆಯಾಗಿ ರಾಮನಗರ ಜಿಲ್ಲೆಯ ನಾಗಶೆಟ್ಟಿಹಳ್ಳಿ ಶಾಸನದ ಲಿಪಿಕಾರನನ್ನು ಕುರಿತು "ಶ್ರೀ ಶ್ರೀ ಶ್ರೀ ಸೋಲೂರ ಕಲ್ಲು ಕುಟಿಗ ತಿಮ್ಮಯ್ಯ ಹೊಯಿದನು ಎಂದಿದೆ" ಹೀಗೆ ಸಮಾಜದಲ್ಲಿ ವೃತ್ತಿಯಿಂದಲೇ ಗೌರವನ್ನು ಪಡೆದವರು ಅಕ್ಕಸಾಲಿಗರು. ಇವರಿಗೆ ಸಂಬಂಧಿಸಿದ ಸ್ಥಳನಾಮಗಳು ಈ ಪರಿಸರದಲ್ಲಿ ಒಂದೇ ಇದೆ.

(ರಾ) ವಾಜರಹಳ್ಳಿ.

೧೨. ದೊಂಬರು

ದೊಂಬರು ಅಲೆಮಾರಿ ಸಮುದಾಯಕ್ಕೆ ಸೇರಿದವರು. ದೊಂಬರಾಟ ಇವರ ಸಾಂಪ್ರದಾಯಕ ವೃತ್ತಿ. ಊರೂರು ಅಲೆಯುತ್ತಾ ತಮ್ಮ ಸಾಂಪ್ರದಾಯಿಕ ಕುಶಲತೆ, ಕಸರತ್ತುಗಳನ್ನು ಪ್ರದರ್ಶಿಸುತ್ತಾ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಮರ ಮತ್ತು ಪ್ರಾಣಿಗಳ ಕೊಂಬುಗಳಿಂದ ಬಾಚಣಿಗೆ ತಯಾರಿಸುತ್ತಾರೆ. ಇವರು ತಮ್ಮನ್ನು ಡೋಮ, ಡೊಂಬ, ದೊಮ್ಮರ ಎಂದು ಕರೆದುಕೊಳ್ಳುತ್ತಾರೆ. ಇವರನ್ನು ಉತ್ತರ ಭಾರತದ ಡೋಮ ಕುಲಸಂಜಾತರೆಂದು ನಂಬಲಾಗುತ್ತದೆ. ರಾಜ್ಯದ ಎಲ್ಲ ಕಡೆಯೂ ಇವರು ವಾಸಿಸುತ್ತಾರೆ. ಬದಲಾದ ಪರಿಸರದಿಂದಾಗಿ ತಮ್ಮ ವೃತ್ತಿಗೆ ತಿಲಾಂಜಲಿ ಹೇಳಿ, ಒಂದು ಕಡೆ ನೆಲೆ ಊರಿ ಕುರಿ, ಹಂದಿ ಸಾಕಾಣಿಕೆ ಹಾಗೂ ಕೂಲಿಯ ಜೊತೆಗೆ ಕೃಷಿಯನ್ನು ಮಾಡಿಕೊಂಡಿದ್ದಾರೆ. ಇವರು ನೆಲೆಸಿದ ಊರಿಗೆ ತನ್ನ ಸಮುದಾಯದ ಹೆಸರನ್ನೇ ಇಟ್ಟುಕೊಂಡಿರುವುದು ಕಂಡುಬರುತ್ತದೆ.

(ಕ) ದೊಂಬರ ದೊಡ್ಡಿ.

೧೩. ಲಂಬಾಣಿಗಳು

ಭಾರತದಾದ್ಯಂತ ಕಂಡು ಬರುವ ಬುಡಕಟ್ಟು ಸಮುದಾಯ ಲಂಬಾಣಿ. ಪ್ರಾಂತ್ಯಕ್ಕನುಗುಣವಾಗಿ ಬಂಜಾರಾ, ಬಂಜಾರಿ, ಬಣಜಾರಾ, ಬ್ರಂಜಾರಿ, ಬಂಜಾರೆ, ಬ್ರಜವಾಸಿ, ಲಮಾಣಿ, ಲಮಾನ, ಲಂಬಾಡ, ಲಂಬಾಡಿ, ಲಬಾನಾ, ಬಳದಿಯಾ, ಲದೇಣಿಯಾ, ಸುಗಾಲಿ, ಗವಾರ, ಗವಾರಿಯಾ, ಕಾಂವಸಿಯಾ, ಶಿರರೆಬಂದ, ಶಿರಕಿವಾಲಾ ಮುಂತಾದ ಹೆಸರುಗಳಿಂದ ಗುರುತಿಸಲಾಗಿದೆ. ಒಂದೇ ಸಮುದಾಯದವರಾದರೂ ಅವರು ಮಾಡುವ ಕಸುಬುಗಳು ಬೇರೆ ಬೇರೆಯಾದ್ದರಿಂದ ಕಸುಬುಗಳ ಆಧಾರದ ಮೇಲಿಂದ ಬೇರೆ ಬೇರೆ ಹೆಸರುಗಳು ಬಂದಿವೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಲಂಬಾಣಿಗರು ಆರ್ಯ ಮೂಲದ ರಾಜಸ್ಥಾನದ ಕ್ಷತ್ರಿಯರಾಗಿದ್ದು; ತಮ್ಮ ರಾಸುಗಳ ಮೇಲೆ ಖಾದ್ಯ ಪದಾರ್ಥವನ್ನು ಹೇರಿಕೊಂಡು ವ್ಯಾಪಾರಗಾರರಾಗಿದ್ದರು. ಲವಣದ ವ್ಯಾಪಾರ ಮಾಡುವ ಉದ್ಯೋಗಿಗಳಾದ ಇವರಿಗೆ 'ಲಂಬಾಣಿ'ಯೆಂಬ ಹೆಸರು ಬಂದಿರಲು ಸಾಧ್ಯ. ಕರ್ನಾಟಕಕ್ಕೆ ಇವರ ವಲಸೆಯು "೧೬೩೦ರ ಸುಮಾರಿಗೆ ಶಾಹಜಾನನ ಕಾಲದಲ್ಲಿ ಅವನ ವಜೀರ ಆಸಫ್‌ಖಾನನು ದಕ್ಷಿಣದ ವಿಜಾಪುರದ ಆದಿಲ್‌ಷಾಹಿಯ ಮೇಲೆ ಆಕ್ರಮಣ ಮಾಡಲು ಬಂದಾಗ ಅವನ ಸೈನ್ಯದೊಂದಿಗೆ ಲಂಬಾಣಿಗರು, ದಕ್ಷಿಣಕ್ಕೆ ಬಂದರು. ಕಾಲಾನಂತರದಲ್ಲಿ ಇಲ್ಲಿಯೇ ನೆಲೆಯಾದರು"[೪೫]. ಮೊಗಲ ಅರಸರ ಮತ್ತು ಅವರ ಸರದಾರರ ಪ್ರೀತಿ, ವಿಶ್ವಾಸವನ್ನು ಗಳಿಸಿದ್ದ ಲಂಬಾಣಿಗರು ಮೊಗಲ ಸಾಮ್ರಾಜ್ಯ ಪತನದ ತರುವಾಯ ಬ್ರಿಟಿಷ್ ಸರ್ಕಾರವು ಇವರನ್ನು ಅಪರಾಧಿ ಜನಾಂಗವೆಂದು ಘೋಷಿಸಿದ ಮೇಲೆ ಸರ್ಕಾರದ ಆಕ್ರಮಣಕ್ಕೆ ಹೆದರಿ ನಾಗರಿಕ ಜೀವನದಿಂದ ದೂರವಾಗಿ ಕಾಡನ್ನು ಸೇರಿದರು. ಕಾಡಿನ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮದೇ 'ತಾಂಡೆ'ಗಳನ್ನು ಕಟ್ಟಿಕೊಂಡು ವಾಸಿಸತೊಡಗಿದರು. ನಗರ, ಗ್ರಾಮ ಸಂಸ್ಕೃತಿಯಲ್ಲಿ ಬೆರೆಯದೆ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯ ಸಂರಕ್ಷಣೆಗಾಗಿ ದೂರ ಉಳಿದಿರುವ ಸಾಧ್ಯತೆ ಇದೆ. ಊರ ಹೊರಗಡೆ ತಮ್ಮದೇ ಆದ ಮನೆಗಳನ್ನು ಗುಂಪಾಗಿ ಕಟ್ಟಿಕೊಂಡು ವಾಸಿಸುತ್ತಾರೆ. ಅದನ್ನು 'ತಾಂಡ' ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ತಮ್ಮ 'ತಾಂಡೆ'ಗಳಿಗೆ ಸಮೀಪದ ಊರುಗಳ ಹೆಸರನ್ನು ಅಥವಾ ತಾಂಡೆಯ ನಾಯಕನ ಇಲ್ಲವೇ ತಾಂಡದ ಪೂಜಾರಿಯ ಹೆಸರಿನಿಂದ ಗುರುತಿಸಿಕೊಳ್ಳುತ್ತಾರೆ. ಹೀಗೆ ಲಂಬಾಣಿಗಳು ತಮ್ಮ ಬಗ್ಗೆ, ತಮ್ಮ ಜೀವನ ವಿಧಾನ, ಸಂಸ್ಕೃತಿ, ಇತಿಹಾಸ ಬಗ್ಗೆ ಅವರು ತಾಳಿರುವ ಅಭಿಮಾನದ ಸಂಕೇತಗಳೆಂದರೆ ತಪ್ಪಾಗುವುದಿಲ್ಲ ಎಂಬ ಎಂ.ಚಿದಾನಂದಮೂರ್ತಿಯವರ ಮಾತು ಅವರ ಸಂಸ್ಕೃತಿಯ ಆರಾಧನೆಗೆ ಹಿಡಿದ ಕನ್ನಡಿಯಂತಿದೆ. ಈ ಸಮುದಾಯವನ್ನು ಸೂಚಿಸುವ ಸ್ಥಳನಾಮಗಳ ಕೊನೆಯಲ್ಲಿ 'ತಾಂಡ್ಯ' ಎಂಬ ಪದವಿರುವುದರಿಂದ ಇದು ಲಂಬಾಣಿ ಸಮುದಾಯದವರ ನೆಲೆ ಎಂಬುದಾಗಿ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಪರಿಸರದಲ್ಲಿರುವ ಲಂಬಾಣಿ ಸಮುದಾಯದವರ ಸ್ಥಳನಾಮಗಳು ಇಂತಿವೆ.

(ಕ) ಅರ್ಜುನಹಳ್ಳಿತಾಂಡ್ಯ ಲೋಕನಾಯ್ಕನತಾಂಡ್ಯ ನಾಯ್ಕರತಾಂಡ್ಯ
ವಡ್ಡರಕುಪ್ಪೆತಾಂಡ್ಯ

ಲಂಬಾಣಿ ಸಮುದಾಯದವರು ತಮ್ಮ ತಾಂಡ್ಯಗಳಿಗೆ ತಾಂಡೆಯನಾಯಕ ಅಥವಾ ಪೂಜಾರಿಯ ಹೆಸರು, ಸಮೀಪಗ್ರಾಮ; ತಮ್ಮದೇ ಸಮುದಾಯ ಸೂಚಿಸುವ ಘಟಕಗಳು ನಿರ್ದಿಷ್ಟ ಸ್ಥಾನದಲ್ಲಿ ಬಂದಿವೆ. ಮೊದಲ ಎರಡು ಸ್ಥಳನಾಮಗಳು ವ್ಯಕ್ತಿವಾಚಿ ಸ್ಥಳನಾಮಗಳಾದರು ಲಂಬಾಣಿ ಸಮುದಾಯವನ್ನು ಸೂಚಿಸುವ ವಾರ್ಗಿಕ (ತಾಂಡ್ಯ) ಬಂದಿರುವುದರಿಂದ ಇದು ಸಮುದಾಯವಾಚಿ ಎಂದು ಗುರುತಿಸಬಹುದು.

೧೪. ಮಾದಿಗರು

ಮಾದಿಗ ಸಮುದಾಯದವರು ತಮ್ಮನ್ನು ಮಾತಂಗಿಯ ಮಕ್ಕಳು, ಆದಿ ಜಾಂಬವರು, ಜಾಂಬವ

ಕುಲದವರೆಂದು ಕರೆದುಕೊಳ್ಳುತ್ತಾರೆ. ಮಹಾಭಾರತದ ಜಾಂಬವ ಮಹಾಮುನಿ ಮತ್ತು ಅಂದಿನ ಕಾಡುಗುಡ್ಡ ಜನರ ಸಂತತಿಯವರು ಎಂಬುದಾಗಿ ಇವರ ನಂಬಿಕೆ.

"ಮಾದಿಗ ಸಮುದಾಯದವರು ಮೂಲತಃ ಆಂಧ್ರಪ್ರದೇಶದವರಾದರೂ",[೪೬] ಕನ್ನಡ ಮಾತನಾಡುವವರಿದ್ದಾರೆ. ಗಂಗಾಧರಂಗೆ ಗಜಚರ್ಮ ಪಾದುಕಿಯನ್ನು ಕೊಟ್ಟಿದುದರಿಂದ, ಮಾತಂಗನೆಂಬ ಹೆಸರು ಬಂದಿರುವುದನ್ನು ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ ತಿಳಿಸುತ್ತದೆ, ಮಾತಂಗನೆಂದರೆ ಚಂಡಾಲ ಎಂಬರ್ಥವಿದೆ. "ಕ್ರಿ.ಶ.ನಾಲ್ಕನೇ ಶತಮಾನದಲ್ಲಿ ಬಂದ ಫಾಯಿಯಾನನು ಅಂದು ಭಾರತದಲ್ಲಿ ಏಳು ಜಾತಿಗಳಿದ್ದವೆಂದು ಹೇಳುತ್ತಾನೆ. ಚಾಂಡಾಲರು ಪಟ್ಟಣ ಪ್ರವೇಶಿಸಬೇಕಾದರೆ ಕೋಲಿನಿಂದ ತಮ್ಮ ಬರುವಿಕೆಯನ್ನು ಸೂಚಿಸಬೇಕೆಂಬ ನಿಯಮವಿತ್ತು"[೪೭] ಎಂದಾಗ ಹೊಲೆಯರಂತೆ, ಮಾದಿಗರು ಸಹ ಅಸ್ಪೃಶ್ಯರಾಗಿದ್ದರು. ಚಂಡಾಲರನ್ನು ಬಾಡಿಗೆ ಕೊಲೆಗಾರನ್ನಾಗಿ ಬಳಸುತ್ತಿದ್ದ ವಿಚಾರವನ್ನು ಕಲ್ಹಣ ತನ್ನ ರಾಜತರಂಗಿಣಿಯಲ್ಲಿ ತಿಳಿಸಿದ್ದಾನೆ. ಇದಕ್ಕೆ ಪೂರಕವೆಂಬಂತೆ 'ಹೊಲಸು ತಿಂಬುವವನೇ ಹೊಲೆಯ, ಕೊಲುವವನೇ ಮಾದಿಗ' ಎಂಬರ್ಥದಲ್ಲಿ ಬಳಕೆಗೊಂಡಿರುವಂತಿದೆ.

ಮಾದಿಗರನ್ನು ರಾಮನಗರ ಜಿಲ್ಲೆಯಲ್ಲಿ ಆದಿ ದ್ರಾವಿಡ, ಎಡೈನವರೆಂದು ಕರೆಯುತ್ತಾರೆ. ಮಾತಂಗಿ, ಮಾರೀಚ, ಜಾಂಬವ, ಕಸೆ, ಮಲ್ಲಿ ಇತ್ಯಾದಿ ಕುಲಗಳಿವೆ. ಚರ್ಮದ ಕೆಲಸ, ಚರ್ಮ ಹದಮಾಡುವುದು. ಚಪ್ಪಲಿ ಹೊಲೆಯುವುದು ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಕಷ್ಟಕರ ದುಡಿಮೆಗೆ ಹೆಸರಾದ ಇವರು ಊರುಗಳಲ್ಲಿ ತೋಟಿಗಳಾಗಿ, ಶವ ಸಂಸ್ಕಾರ ಮತ್ತು ದೇವರ ಉತ್ಸವಗಳಲ್ಲಿ ತಮಟೆ ಬಾರಿಸುವ, ಸಾಂಪ್ರದಾಯಿಕ ಕಸುಬುಗಳಲ್ಲೂ ಬೆಸೆದು ಹೋಗಿರುವ ಈ ಸಮುದಾಯವು ತಾವು ನೆಲೆಸಿರುವ ಊರುಗಳಿಗೆ ಸಂಖ್ಯಾಬಾಹುಳ್ಯದ ಹಿನ್ನೆಲೆಯಲ್ಲಿ ತಮ್ಮದೇ ಸಮುದಾಯದ ಹೆಸರನ್ನು ಊರುಗಳಿಗೆ ನೀಡಿರುವುದು ಗಮನಾರ್ಹ.

(ಕ) ಮಾದರಹಳ್ಳಿ

(ರಾ) ಮಾದಿಗನಹಳ್ಳಿ

(ಚ) ಮಾದಾಪುರ

(ಮಾ) ಮಾದಾಪುರ

ಕರ್ನಾಟಕದ ಪ್ರಸಿದ್ಧಯಾತ್ರಾ ಸ್ಥಳವಾದ ಮಲೆ ಮಹದೇಶ್ವರ ಬೆಟ್ಟದಲ್ಲಿ ನೆಲೆಗೊಂಡಿರುವ ಮಹದೇಶ್ವರರು ಮಾದಿಗ ಸಮುದಾಯದ ವ್ಯಕ್ತಿಯಾಗಿದ್ದಾರೆ. 'ಮಾದಾಪುರ' ಇದು ವ್ಯಕ್ತಿನಾಮವಾದರೂ ಆಗಬಹುದು.

ಸಾಮಾಜಿಕ ವ್ಯವಸ್ಥೆಯಲ್ಲಿ ಹೊಲೆಯ-ಮಾದಿಗರನ್ನು ಅಸ್ಪೃಶ್ಯವಾಗಿ ಕಂಡರೂ ಕೂಡ ಸ್ಥಳನಾಮಗಳ ದೃಷ್ಟಿಯಲ್ಲಿ ಮಾತ್ರ ಅಸ್ಪೃಶ್ಯತೆ ಕಾಣದಿರದು. ತಮ್ಮ ಊರುಗಳಿಗೆ ಮಾದರಹಳ್ಳಿ, ಎಂದು ಕರೆಯಲ್ಪಡುತ್ತಿದ್ದರೂ ಉನ್ನತ ಸಮುದಾಯದವರು ಈ ಸ್ಥಳಗಳಲ್ಲಿ ಸಾಮರಸ್ಯದಿಂದ ಬದುಕುತ್ತಿದ್ದಾರೆ.

ಅಲ್ಲದೇ ಸಾಮಾಜಿಕ ಸ್ಥಳನಾಮಗಳನ್ನು ಅಸ್ಪೃಶ್ಯತೆ ದೃಷ್ಟಿಯಿಂದ ಮಾತ್ರ ನೋಡದಿರುವುದು ಸಾಮಾಜಿಕ ಸ್ಥಳನಾಮದ ಮಹತ್ವವೆಂದರೆ ತಪ್ಪಾಗಲಾರದು.

೧೫. ಜೋಗಿಗಳು

ಜೋಗಿಗಳು ರಾಜ್ಯದ ಎಲ್ಲ ಕಡೆ ಕಂಡುಬರುತ್ತಾರೆ. ಜೋಗಿಗಳು ನಾಥ ಪಂಥದವರು. ಪಂಥದ ಹೆಸರಿನಲ್ಲಿ ಬೈರಾಗಿ, ಭಿಕ್ಷುಕರಾಗಿ ಅಲೆಯುತ್ತಾರೆ. ಉತ್ತರ ಭಾರತದ ನೇಪಾಳದ ಪರಿಸರದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಮಚ್ಚೇಂದ್ರನಾಥ ಮತ್ತು ಗೋರಕ್ಷನಾಥರ ಶಿಷ್ಯರು; ದಕ್ಷಿಣ ಭಾಗದ ಆದಿವಾಸಿ ಸಮುದಾಯದವರನ್ನು ಈ ಪಂಥಕ್ಕೆ ಸೇರಿಸಿಕೊಂಡರು. ಈ ಪಂಥದಲ್ಲಿ ೧೨ ಪಂಗಡಗಳಿವೆ. ಅದರಲ್ಲಿ ಒಂದು ಜೋಗಿ. ಜೋಗಿಗಳಲ್ಲಿ ಮಣಿಜೋಗಿ ಮತ್ತು ಹಂದಿ ಜೋಗಿಗಳೆಂಬ ಎರಡು ಪಂಗಡಗಳಿವೆ. ಭಿಕ್ಷುಕರಾಗಿ ಮತ್ತು ಕೃಷಿ ಕೂಲಿಕಾರರಾಗಿ ಕೆಲಸ ಮಾಡುತ್ತಾರೆ. ಜೋಗಿ ಪಂಥ ಪ್ರಭಾವವಿರುವ ರಾಮನಗರ ಜಿಲ್ಲೆಯ ಪ್ರದೇಶದ ಈ ಸಮುದಾಯದ ಸ್ಥಳನಾಮವಿದೆ.

(ಮಾ) ಜೋಗೇರಹಳ್ಳಿ

೧೬. ಮೇದರು

ಬಿದಿರಿನಿಂದ ಬುಟ್ಟಿ ಹೆಣೆಯುವುದು, ಜರಡಿ, ತೊಟ್ಟಿಲು ಮೊದಲಾದ ವಸ್ತುಗಳನ್ನು ತಯಾರಿಸುವುದು ಇವರ ಪಾರಂಪರಿಕ ವೃತ್ತಿ. ಗವರಿಗ, ಗವರಿ ಮಕ್ಕಳು ಮುಂತಾಗಿ ಕರೆಸಿಕೊಳ್ಳುವ ಇವರಲ್ಲಿ ಬೆಳ್ಳಿಕುಲ, ನಾಗರ ಕುಲಗಳಿವೆ. ತಮ್ಮ ಕಸುಬಿಗೆ ಆಧಾರವಾದ ಮಚ್ಚು ಅವರ ಆಸ್ತಿಯಾಗಿದೆ. ದವಸ, ಧಾನ್ಯಗಳನ್ನು ಸಂಗ್ರಹಿಸಲು ಬಿದಿರಿನ ಬುಟ್ಟಿ, ಗೂಡೆ ಮತ್ತು ಬೀಸಣಿಗೆ ಚಾಪೆ ಮುಂತಾದ ವಸ್ತುಗಳನ್ನು ತಯಾರಿಸಿದರೆ, ಅವರ ಹೆಂಗಸರು ಇವುಗಳನ್ನು ಮಾರಾಟ ಮಾಡುತ್ತಾರೆ. ಇನ್ನೂ ಕೆಲವರು ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೈಸೂರು, ಕೊಡಗು, ಹಾಸನ, ಶಿವಮೊಗ್ಗ ಜಿಲ್ಲೆಯ ಪ್ರದೇಶಗಳಲ್ಲದೆ ಈ ಪರಿಸರದಲ್ಲಿ ಜನಸಂಖ್ಯೆಯಲ್ಲಿ ಕಡಿಮೆ ಇರುವ ಈ ಸಮುದಾಯದವರ ನೆಲೆಯನ್ನು ಸೂಚಿಸುವ ಒಂದೇ ಒಂದು ಸ್ಥಳನಾಮ ಈ ಪರಿಸರದಲ್ಲಿ.

(ಕ) ಮೇದ ಮಾರನಹಳ್ಳಿ

ಮೇಡಮಾರನಹಳ್ಳಿಯ 'ಮೇದ' ಜಾತಿಸೂಚಕ ಪದ. ಇಂದು ಜನರ ಬಾಯಲ್ಲಿ 'ಮೇಡ' ಎಂದು ತಪ್ಪಾಗಿ ಉಚ್ಚರಣೆಗೊಳ್ಳುತ್ತಿರುವ ಸಂಭವವಿದೆ.

೧೭. ಸೋಲಿಗರು

ಸೋಲಿಗರ ಬುಡಕಟ್ಟು ಹೆಚ್ಚಾಗಿ ಮೈಸೂರು, ಕೊಳ್ಳೆಗಾಲ, ಚಾಮರಾಜನಗರ, ಬಿಳಿಗಿರಿ ರಂಗನಬೆಟ್ಟ, ಮಹದೇಶ್ವರಬೆಟ್ಟ, ಎಳಂದೂರು, ಹೆಗ್ಗಡದೇವನಕೋಟೆ, ಹುಣಸೂರು ತಾಲೂಕಿನಲ್ಲಿ ಕಂಡುಬರುತ್ತಾರೆ. ಸಾಮಾನ್ಯವಾಗಿ ಇವರು ಕಾಡಿನಲ್ಲಿ ಪೋಡುಗಳನ್ನು ನಿರ್ಮಿಸಿಕೊಂಡು, ಕಾಡಿನ ಉತ್ಪನ್ನಗಳನ್ನಷ್ಟೇ ನಂಬಿ

ಬದುಕುವ ಇವರು ಶ್ರಮ ಜೀವಿಗಳು ಮತ್ತು ಬಡವರಾಗಿದ್ದಾರೆ. ಇವರಲ್ಲಿ ಊರಾಳಿ ಸೋಲಿಗ, ಮಲೆ ಸೋಲಿಗ, ಕಾಡು ಸೋಲಿಗ, ಊರುಬತ್ತಿ ಮತ್ತು ಬುರುಡೆ ಸೋಲಿಗ ಎಂದು ಐದು ಪಂಗಡಗಳಿವೆ.

ಇವರು ಮಲೆ ಮಾದೇಶ್ವರ ಮತ್ತು ಬಿಳಿಗಿರಿರಂಗನನ್ನು ಆರಾಧಿಸುತ್ತಾರೆ. ರಾಗಿಯ ಹಿಟ್ಟು, ಅಂಬಲಿ, ಕಾಳು, ಗೆಡ್ಡೆ ಗೆಣಸು, ಸೊಪ್ಪು ಇವೇ ಅವರ ಆಹಾರಗಳಾಗಿವೆ. ಸೋಲಿಗರ ಪೋಡಿನಲ್ಲಿ ೧೦ ರಿಂದ ೧೫ ಸಂಸಾರಗಳಿರುತ್ತವೆ. ಪೋಡಿಗೆ ಒಬ್ಬ ಯಜಮಾನನಿರುತ್ತಾನೆ. ತಮ್ಮ ನೆಲೆಗೆ 'ಪೋಡು'ಗಳೆಂದು ಕರೆದುಕೊಳ್ಳುತ್ತಾರೆ.

(ಕ) ಸೋಲಿಗೇರಿ

(ಮಾ) ಸೋಲೂರು.

ಸೋಲಿಗೇರಿ ಬಸವನ ಬೆಟ್ಟ, ಮತ್ತು ಬನ್ನಾರೆ ಅರಣ್ಯ ಪ್ರದೇಶ ನಡುವೆ ಇರುವ ಗಿರಿಧಾಮವಾದ್ದರಿಂದ ಸೋಲಿಗರ ನೆಲೆಯಾಗಿರಲು ಸಾಧ್ಯವಾಗಿದೆ ಹಾಗೂ ಸೋಲಿಗ ಸಮುದಾಯ ವಾಸಿಸುತ್ತಿದೆ. ನಿರ್ದಿಷ್ಟವಾಗಿರುವ ಸೋಲಿಗ ಸಮುದಾಯ ಪದಕ್ಕೆ ಕೇರಿ, ಊರು ಎಂಬ ವಾಚಕಗಳು ಬಂದಿವೆ.

ಒಂದು ಜನಾಂಗದ ಜೀವನ ವಿಧಾನವನ್ನು ಸ್ಥೂಲವಾಗಿ ಸಂಸ್ಕೃತಿ ಎಂದು ಹೇಳಬಹುದು. ಸಂಸ್ಕೃತಿಯು ಯಾವುದೇ ಒಂದು ಜಾತಿ, ಮತ, ಸ್ಥಳಕ್ಕಾಗಲಿ ಸೀಮಿತವಾಗುವುದಿಲ್ಲ. ಪ್ರತಿಯೊಂದು ಸಮುದಾಯವು ಒಂದೊಂದು ದೈವದ ಹಿನ್ನೆಲೆಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಆಚರಣೆಯನ್ನು ಆರಾಧಿಸಿಕೊಂಡು ಬಂದಿದೆ. ಆಚರಣೆಯ ಹಿನ್ನೆಲೆಯ ವೈಶಿಷ್ಟ್ಯತೆಗನುಗುಣವಾಗಿ ಹಲವಾರು ಪಂಥಗಳು ಬೆಳೆದು ಬಂದಿರುವುದನ್ನು ಕಾಣಬಹುದು. ಅಂಥ ಪಂಥಗಳು ಪ್ರತ್ಯೇಕ ಸಮುದಾಯಗಳಿಗೆ ಮಾತ್ರ ಸೀಮಿತವಾಗಿರುವುದನ್ನು ಸಹ ಗುರುತಿಸಬಹುದಾಗಿದೆ. ಅಂಥ ಪಂಥಗಳನ್ನು ಸಮುದಾಯದ ಹಿನ್ನೆಲೆಯಲ್ಲಿ ಇಲ್ಲಿ ಗಮನಿಸಲಾಗಿದೆ.

೧೮. ಗೊರವರು

ಗೊರವ ಸಂಪ್ರದಾಯದ ಆದಿ ದೈವ ಮಲ್ಲಯ್ಯ. ಕುರುಬ ಸಮುದಾಯದ ಸಾಂಸ್ಕೃತಿಕ ನಾಯಕನಾದ ಮಲ್ಲಯ್ಯ ಅಥವಾ ಮೈಲಾರಲಿಂಗನು ಅನೇಕ ಸಮುದಾಯಗಳ ಮನೆಯ ದೈವನಾಗಿದ್ದಾನೆ. ಸಂಖ್ಯಾ ದೃಷ್ಟಿಯಿಂದ ಕುರುಬ ಸಮುದಾಯದವರೆ ಗೊರವರಾಗಿದ್ದಾರೆ. ಪಶುಪಾಲ ಸಂಸ್ಕೃತಿಯ ಹಂತದಲ್ಲಿ ಬುಡಕಟ್ಟು ಜನರು ತಮ್ಮ ದನ, ಕರು, ಕುರಿಗಳಿಗೆ ಆಸರೆಯಾದ ಬೆಟ್ಟ, ಗುಡ್ಡ, ಕಾನನಗಳ ಬಗ್ಗೆ ಅತಿಯಾದ ಭಯ, ಗೌರವಾದರ, ಭಕ್ತಿಯನ್ನು ಒಳಗೊಂಡಿದ್ದರು. ಆದ್ದರಿಂದ ಪ್ರಕೃತಿಯ ಅಂಗವಾದ ಬೆಟ್ಟಕ್ಕೆ, ಮಲೆ ಎಂದೂ ಮಲೆಯ ಅಯ್ಯ, ಮಲ್ಲಯ್ಯ; ಇವನೇ ಗೊರವರ ಅಧಿದೈವನಾಗಿದ್ದಾನೆ. ಬಳ್ಳಾರಿ ಜಿಲ್ಲೆಯ 'ಮೈಲಾರ' ಮಲ್ಲಯ್ಯನ ನೆಲೆ ಅದರಂತೆ ಮಲ್ಲಯ್ಯ ಹೆಸರಿನ ನೆಲೆಗಳು ಕರ್ನಾಟಕದಲ್ಲಿ ಕಂಡಬರುತ್ತವೆ. ಇವುಗಳು ಗೊರವ ಸಮುದಾಯದ ಮೂಲ ನೆಲೆಗಳಾಗಿವೆ. ರಾಮನಗರ ಜಿಲ್ಲೆಯ ಪರಿಸರದಲ್ಲಿ ಗೊರವ ಸಂಪ್ರದಾಯವನ್ನು ಸೂಚಿಸುವ ಸ್ಥಳನಾಮವೊಂದಿದೆ.

(ಕ) ಗೊರವನಪುರ

೧೯. ದಾಸರು

ದಾಸರು ವೆಂಕಟರಮಣ ಸ್ವಾಮಿಯ ಪರಮಭಕ್ತರು. ಕೆಲವು ಸಮುದಾಯಗಳಲ್ಲಿ ಒಳಪಂಗಡವಾಗಿ ದಾಸಜನಾಂಗವಿದೆ. ಆ ಸಮುದಾಯದವರ ಮದುವೆಕಾರ್ಯ, ಮೈನೆರೆಯುವಿಕೆ, ಕೆಲವು ಹಬ್ಬ ಹರಿದಿನಗಳಲ್ಲಿ, ಸಾವಿನ ಉತ್ತರ ಕ್ರಿಯಾದಿಗಳ ಪೂಜಾ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ವೆಂಕಟರಮಣ ಸ್ವಾಮಿಯ ಭಕ್ತರಾಗಿರುವುದರಿಂದ ಶ್ರಾವಣ ಮಾಸದಲ್ಲಿ ದಾಸಯ್ಯನ ವೇಷ ಧರಿಸಿ, ಕೈಯಲ್ಲಿ ಶಂಖ, ಜಾಗಟೆ, ಭಿಕ್ಷಾಚೀಲವನ್ನು ಹೆಗಲಿಗೆ ನೇತು ಹಾಕಿಕೊಂಡು 'ಶಿವನಾರಾಯಣ ಗೋವಿಂದ ಗೋವಿಂದಾ' ಎಂದು ಮನೆ ಮನೆಗೆ ಹೋಗಿ ಭಿಕ್ಷೆ ಬೇಡುವ ಆಚರಣೆ ಇಂದಿಗೂ ಈ ಪರಿಸರದಲ್ಲಿ ಜೀವಂತವಾಗಿದೆ. ದಾಸ ಸಂಪ್ರದಾಯವನ್ನು ಹೊಂದಿರುವ ಸ್ಥಳನಾಮಗಳು ಈ ಜಿಲ್ಲೆಯಲ್ಲಿವೆ. ಚ ದಾಸವಾ ದಸಾವರ ದಾಸವಾರ

(ಚ) ದಾಸವಾ

(ರಾ) ದಾಸರಹಳ್ಳಿ

(ಮಾ) ಬೆಟ್ಟದಾಸಿಪಾಳ್ಯ

'ದಾಸ' ಪುಲ್ಲಿಂಗ ವಾಚಕವಾಗಿ ಸೇವಕ, ಭಕ್ತ ಎಂಬರ್ಥ ನೀಡಿದರೆ, ದಾಸಿ ಸ್ತ್ರೀಲಿಂಗವಾಚಿಯಾಗಿದೆ. ದಾಸಿ-ಸೇವಕಿ ಎಂಬರ್ಥವನ್ನು ಕೊಡುತ್ತದೆ. ಆಗ ಇದು ವೃತ್ತಿ ವಾಚಕವಾಗುವ ಸಂಭವವೂ ಇದೆ.

೨೦. ರಾಮನಗರ ಜಿಲ್ಲೆ ಪರಿಸರದ ಪ್ರಾಚೀನ ಮೂಲ ಜನಾಂಗಗಳು*

(*ಪ್ರಾಚೀನ ಮೂಲ ಜನಾಂಗಗಳ ಅಧ್ಯಯನಕ್ಕೆ ಎಸ್.ಎಲ್.ದೇಶಪಾಂಡೆ ಅವರ ಕರ್ನಾಟಕ ಸ್ಥಳನಾಮಗಳು ಪುಸ್ತಕವನ್ನು ಬಹಳಷ್ಟು ಮಟ್ಟಿಗೆ ಬಳಸಿಕೊಳ್ಳಲಾಗಿದೆ).

ಕೆಲವು ಪ್ರಾಚೀನ ಮೂಲ ಜನಾಂಗಗಳು ಪ್ರಸ್ತುತ ಇಲ್ಲದಿರಬಹುದು. ಆದರೆ ಭಾರತವು ಅತಿ ಪ್ರಾಚೀನ ಕಾಲದಿಂದಲೂ ಅನೇಕ ಜನಾಂಗಗಳ ಹಾಗೂ ಸಮುದಾಯಗಳ ನೆಲೆಯಾಗಿತ್ತು ಎಂಬುದಕ್ಕೆ ರಾಮಾಯಣ, ಮಹಾಭಾರತ, ಮಾರ್ಕಂಡೇಯಪುರಾಣ, ಸ್ಕಂದ ಪುರಾಣಗಳಲ್ಲಿ ಉಲ್ಲೇಖಗೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಇವುಗಳಲ್ಲಿ ಭಾರತದ ಮೂಲ ಜನಾಂಗ ಹಾಗೂ ಬಾಹ್ಯ ಆಕ್ರಮಣಕಾರರ ನಡುವೆ ನಡೆದ ಘರ್ಷಣೆಗಳ ಚಿತ್ರಣ, ವರ್ಣನೆ ಕಂಡುಬರುತ್ತದೆ. "ಮಾನವ ಶಾಸ್ತ್ರಜ್ಞರು ಭಾರತೀಯ ಸಮುದಾಯವನ್ನು ಆರು ಮುಖ್ಯ ಬುಡಕಟ್ಟುಗಳಲ್ಲಿ ವಿಂಗಡಿಸಿದ್ದಾರೆ. ...ಈ ಸಮುದಾಯಗಳು ಹಿಮಾಲಯದ ಅಡಿಭಾಗದಲ್ಲಿ ಹಾಗೂ ಭಾರತದ ವಾಯುವ್ಯ ಭಾಗದಲ್ಲಿ ವಾಸಿಸುತ್ತಿದ್ದವು. ಬಾಹ್ಯ ಆಕ್ರಮಣ, ಕುಲ ಸಂಘರ್ಷ, ಹೆಚ್ಚುತಿರುವ ಜನಸಂಖ್ಯೆ, ಗೋ ಸಂಗೋಪನೆಗೆ ಅವಶ್ಯವಾದ ಹೊಸ ಹೊಸ ಹುಲ್ಲುಗಾವಲು ಈ ಎಲ್ಲ ಕಾರಣಗಳಿಂದಾಗಿ ಈ ಜನಾಂಗಗಳು ಸಾವಿರಾರು ವರ್ಷಗಳಲ್ಲಿ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಸರಿಯಲಾರಂಭಿಸಿದವು. ಈ ಸಂಚಲನೆಯಲ್ಲಿ ಈಗಾಗಲೇ ಅಲ್ಲಿ ನೆಲೆಸಿದ ಆದಿ ಜನಾಂಗಗಳ ಜೊತೆಗೆ ಮೈತ್ರಿ ಅಥವಾ ಘರ್ಷಣೆ

ನಡೆದಿವೆ. ಇವರು ನೆಲೆಸಿದಲ್ಲೆಲ್ಲ ಇವರ ನೆಲೆವೀಡುಗಳು ಆಯಾ ಸಮುದಾಯಗಳ ಹೆಸರನ್ನು ಪಡೆದಿವೆ”[೪೭] ಈ ಅಂಶವನ್ನು ಗಮನಿಸಿದಾಗ ಪ್ರಾಚೀನ ಜನಾಂಗಗಳ ಕುರುಹು ದೊರೆಯಬಹುದು. ಅಲ್ಲದೆ “ಗ್ರಾಮನಾಮಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು ಒಂದು ವೇಳೆ ಜನಾಂಗ ಸ್ಥಳಾಂತರಗೊಂಡರೂ ಆ ಬೇರುಗಳು ಅದರ ಮೂಲ ಅಸ್ತಿತ್ವವನ್ನು ಎತ್ತಿ ಹೇಳುತ್ತದೆ”[೪೮] ಹೀಗಾಗಿ ಈ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ರಾಮನಗರ ಜಿಲ್ಲೆಯು ಮೊದಲೇ ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದೆ. ಪ್ರಾಚೀನ ಮಾನವರಿಗೆ ಬದುಕಲು ಅವಶ್ಯಕವಾದ ನಿಸರ್ಗದಿಂದ ಕೂಡಿರುವುದರಿಂದ ಇಂಥ ಪ್ರಾಚೀನ ಜನಾಂಗಗಳ ಇರುವಿಕೆ ನೆಲೆಯ ಶೋಧಗಳನ್ನು ಸ್ಥಳನಾಮಗಳ ಮೂಲಕ ಹುಡುಕಲು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಎಸ್.ಎಲ್. ದೇಶಪಾಂಡೆಯವರು ತಮ್ಮ ‘ಕರ್ನಾಟಕದ ಸ್ಥಳನಾಮಗಳು ಒಂದು ಅಧ್ಯಯನ’ ಎಂಬ ಕೃತಿಯಲ್ಲಿ ಕರ್ನಾಟಕದ ಸುಮಾರು ೨೮,೦೦೦ಕ್ಕೂ ಹೆಚ್ಚು ಸ್ಥಳನಾಮಗಳನ್ನು ವಿಶ್ಲೇಷಣೆ ಮಾಡಿ, ಪ್ರಾಚೀನ ಕರ್ನಾಟಕದಲ್ಲಿ ನೆಲೆಸಿದ ೨೮ ಮೂಲ ಜನಾಂಗಗಳನ್ನು ಗುರುತಿಸುತ್ತಾರೆ. ಈ ೨೮ ಮೂಲ ಜನಾಂಗಗಳಲ್ಲಿ ರಾಮನಗರ ಜಿಲ್ಲೆಯ ಪರಿಸರದಲ್ಲಿ ಸುಮಾರು ೧೫ ಜನಾಂಗಗಳಿವೆ ಎಂಬ ಪಟ್ಟಿ ನೀಡಿ ಅವುಗಳ ಸ್ಥಳನಾಮಗಳ ಪಟ್ಟಿಯನ್ನು ಸಹ ನೀಡುತ್ತಾರೆ. ಆದರೆ ಇವರು ಕೊಡುವಾಗ ಕೆಲವೊಂದು ಸ್ಥಳಗಳು ಆ ಮೂಲ ಜನಾಂಗಗಳ ನೆಲೆಯಾಗದಿರಲು ಸಾಧ್ಯವಿರಬಹುದು. ಕಾಲದ ದೃಷ್ಟಿಯಿಂದ ಸ್ಥಳನಾಮಗಳ ಇತಿಹಾಸವನ್ನು ಅಧ್ಯಯನ ಮಾಡಿದಾಗ ಭೌಗೋಳಿಕ ಪರಿಸರದ ಸ್ಥಳನಾಮಗಳು ಅತಿಪ್ರಾಚೀನವಾದರು ನಂತರದಲ್ಲಿ “ಜನಾಂಗಗಳು ನಿಸರ್ಗಕ್ಕಿಂತ ತಮ್ಮ ತಮ್ಮ ಗುಂಪುಗಳ ಬಗೆಗೆ ವಿಶೇಷ ಮೋಹ ಬೆಳೆಸಿಕೊಂಡವು. ಜನಾಂಗನಿಷ್ಠೆ ಗಟ್ಟಿಗೊಂಡ ಈ ಎರಡನೆಯ ಘಟ್ಟದಲ್ಲಿ ‘ನಿಸರ್ಗವಾಚಿ’ಗೆ ಬದಲು ಕ್ರಮೇಣ ‘ಜನಾಂಗವಾಚಿ’ ಗ್ರಾಮನಾಮಗಳು ತಲೆ ದೋರಲಾಂರಭಿಸಿದವು. ಈ ಮನೋಧರ್ಮಕ್ಕೆ ತಕ್ಕಂತೆ ಕನ್ನಡ ನಾಡಿನಲ್ಲಿ ಸಾವಿರಾರು ಊರುಗಳು ಹುಟ್ಟಿಕೊಂಡಿದ್ದು, ಅವುಗಳ ಸಹಾಯದಿಂದ ಒಂದು ಕಾಲಕ್ಕೆ ನೆಲೆ ನಿಂತಿದ್ದ ಪ್ರಾಚೀನ ಜನಾಂಗಗಳ ದೊಡ್ಡ ಯಾದಿಯನ್ನೇ ಸಿದ್ಧಪಡಿಸಬಹುದಾಗಿದೆ”[೫೦] ಆದ್ದರಿಂದ ಈ ಪರಿಸರದಲ್ಲಿ ವಾಸಿಸುತ್ತಿದ್ದ ಜನಾಂಗ/ ಸಮುದಾಯಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ನಾಗರು

ಮಹಾಭಾರತದಲ್ಲಿ ವರ್ಣಿತವಾಗಿರುವ ನಾಗರು ವಿದಿಶಾ, ಕಾಂತಿಪುರಿ, ಮಥುರಾ ಮತ್ತು ಪದ್ಮಾವತಿ ಈ ನಗರಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದರು. ಕಂದರೆಂಬ ಮೂಲಜನಾಂಗಗಳ ವನವನ್ನು ಈ ನಾಗರು ಆಕ್ರಮಿಸಿಕೊಂಡ ನಂತರ ಅರ್ಜುನ, ‘ಖಾಂಡನ ವನ’. (ಕಂದರ ವನ) ಸುಟ್ಟು ಹಾಕಿ, ತೆರವು ಮಾಡಿ ಕೊಟ್ಟ ಬಳಿಕ ಅಳಿದುಳಿದ ನಾಗರು ಖಾಂಡವನದಿಂದ ದಕ್ಷಿಣಕ್ಕೆ ಬಂದಿರಬೇಕು. ಹೀಗೆ ಬಂದ ಇವರು ಕಗ್ಗಾಡಿನಿಂದ ಕೂಡಿದ ಕರ್ನಾಟಕದಲ್ಲಿ ಮತ್ತು ಇನ್ನಿತರ ಸುರಕ್ಷಿತ ಪ್ರದೇಶದಲ್ಲಿ ನೆಲೆಯಾಗಿರಬಹುದು. ದಾರುಣವಾದ ನಾಗಮೇಧದಿಂದ ವ್ಯಾಕುಲತೆಗೆ ಒಳಗಾದ ಕಂದರು ತಮ್ಮ ಸಂತಾನವಿಹೀನತೆಗೆ ನಾಗಮೇಧವೇ ಕಾರಣವಿರಬಹುದೆಂದು ಭಾವಿಸಿ, ಪಶ್ಚಾತ್ತಾಪ ಭಾವನೆ ಮತ್ತು ಪಾಪ

ಪ್ರಜ್ಞೆಯ ಪ್ರಾಯಶ್ಚಿತ್ತಕ್ಕಾಗಿ ನಾಗ ಪ್ರತಿಷ್ಠಾಪನೆ ಮತ್ತು ನಾಗಾರಾಧನೆಯಲ್ಲಿ ತೊಡಗಿರುವ ಸಂಭವವಿದೆ. ಅದೇ ರೀತಿ ಅರ್ಜುನ ನಾಗರ ಕನ್ಯೆ 'ಉಲೂಪಿ'ಯನ್ನು ಗಾಂಧರ್ವ ರೀತಿಯಲ್ಲಿ ವಿವಾಹವಾಗಿ ವರ್ಣಸಂಕರವೇರ್ಪಟ್ಟಿರುವ ಸಂಭವವು ಮಹಾಭಾರತದಲ್ಲಿ ಬಂದಿರುವುದನ್ನು ಕಾಣಬಹುದು. ಮೂಲ, ಪ್ರಾಚೀನ ಜನಾಂಗವಾದ ಇಂಥ ನಾಗರ ಅಸ್ತಿತ್ವವನ್ನು ಹೇಳುವ ಸ್ಥಳನಾಮಗಳು ಈ ಪರಿಸರದಲ್ಲಿವೆ.

(ಕ) ನಾಗರಸನ ಕೋಟೆ

(ರಾ) ನಾಗೋಹಳ್ಳಿ

(ಮಾ) ನಾಗನಹಳ್ಳಿ

(ಚ) ನಾಗಾಪುರ ನಾಗಾವರ

ನಾಗರಸನ ಕೋಟೆ ಮತ್ತು ನಾಗನಹಳ್ಳಿ ಜನಾಂಗವಾಚಿಯಾಗಿರದೇ ವ್ಯಕ್ತಿವಾಚಿಯಾಗಿರುವ ಸಂಭವವೂ ಇದೆ.

ಮಲ್ಲರು

ಮಹಾಭಾರತದಲ್ಲಿ ಬರುವ ಭೀಮಸೇನ ಮತ್ತು ಅರ್ಜುನರು ಉತ್ತರಮಲ್ಲ ಮತ್ತು ದಕ್ಷಿಣ ಮಲ್ಲರನ್ನು ಯುದ್ಧದಲ್ಲಿ ಸೋಲಿಸಿದ ವಿವರಗಳಿವೆ. ಮನುಸ್ಮೃತಿಯಲ್ಲಿ ಮಲ್ಲರನ್ನು ವ್ರಾತ್ಯ ಕ್ಷತ್ರಿಯರೆಂದು ಕರೆಯಲಾಗಿದೆ. ಕ್ರಿ.ಪೂ.೬ನೆಯ ಶತಮಾನದಿಂದ ಕ್ರಿ.ಪೂ.೪ನೇ ಶತಮಾನದವರೆಗೆ 'ಪಾವಾ' ಮತ್ತು 'ಕುಶೀನಗರ'ಗಳಲ್ಲಿ ಮಲ್ಲರ ಗಣರಾಜ್ಯಗಳಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ೧೨ನೆಯ ಶತಮಾನದಲ್ಲಿ ಖಾಸಮಲ್ಲರು ನೇಪಾಳದಲ್ಲಿ ರಾಜರಾಗಿದ್ದರು. ೧೬ನೆಯ ಹಾಗೂ ೧೮ನೆಯ ಶತಮಾನದಲ್ಲಿ ಬಂಗಾಲದ ಭಾಗವನ್ನು ಆಳಿದ ಮಲ್ಲರಾಜನ ರಾಜಧಾನಿ ಬಂಕೂರು; ವಿಷ್ಣುಪುರ ಜಿಲ್ಲೆಯಲ್ಲಿದೆ. ಅಲ್ಲಿ 'ಮಲ್ಲೇಶ್ವರ'ನ ಗುಡಿಯೂ ಇರುವುದು.

ಉತ್ತರ ಪ್ರದೇಶದಲ್ಲಿರುವ ಈಗಿರುವ ಮಲ್ಲರು ಶೂದ್ರ ಕುಲದವರು. ಆರ್ಯರೊಂದಿಗಿನ ಹೋರಾಟದಲ್ಲಿ ಸೋತು ದಸ್ಯುಗಳಾಗಿರುವ ಸಂಭವವಿದೆ. ದಕ್ಷಿಣದಲ್ಲಿ ನೆಲೆಯೂರಿದ ಮಲ್ಲರು ಉನ್ನತ ಮಟ್ಟದಲ್ಲಿ ಬಾಳಿ ಬದುಕಿದವರು. ಆದ್ದರಿಂದ ಕನ್ನಡದಲ್ಲಿ ಮಲ್ಲ ಪದದ ಅರ್ಥ ಶೂರ, ಜಟ್ಟಿ ಎಂದಾಗುತ್ತದೆ.

ಖಂಡೋಬಾನು ಮಲ್ಲಾಸುರನ ಸಂಹಾರಕ ಎಂದು ಹೇಳಲಾಗಿದೆ. ಕರ್ನಾಟಕದ ಕೆಲವೆಡೆ ಮೈಲಾರ (ಮಲ್ಲಾರಿ) ದೇವರ ದೇವಾಲಯಗಳೂ ಸಿಗುತ್ತವೆ. ಹೀಗೆ ಮಲ್ಲ ಜನರ ನೆಲೆಸೂಚಿಸುವ. ಸ್ಥಳಗಳು ಈ ಪರಿಸರದಲ್ಲಿವೆ.

(ಚ) ಮಲಗಾಳು ಮಲ್ಲಮಗೆರೆ

(ಕ) ಮಲ್ಲಾಪುರ ಮಲ್ಲಸಂದ್ರ ಮಲ್ಲಾಪುರ ಮಲ್ಲಿಗುಂಟೆ

ಮಲ್ಲಮಗೆರೆ, ಮಲ್ಲಿಗುಂಟೆ ಇವು ಸ್ತ್ರೀ ವ್ಯಕ್ತಿವಾಚಿಯಾಗಿರಲೂಬಹುದು.

ಕೋಲ/ಕೋರ

ದೇವಿ ಪುರಾಣದಲ್ಲಿ ಕೋಲ ಜನಾಂಗಗಳ ಉಲ್ಲೇಖ ದೊರೆಯುತ್ತದೆ. ಇಂದ್ರನು 'ಕೋಲಾಸುರ ಭಯಂಕರಿ' ಎಂದು ದೇವಿಯನ್ನು ಸ್ತುತಿಸುವ ವರ್ಣನೆಯಿದೆ. ವೈದಿಕ ದೇವತೆ ಇಂದ್ರ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಒಳಗೊಂಡ ಆರ್ಯ ಜನಾಂಗಕ್ಕೆ ಸೇರಿದವನು. ಪೌರಾಣಿಕ ದೇವತೆಯಾದ 'ದೇವಿ' ಬಹುಶಃ ಮಾತೃ ಪ್ರಧಾನ ಕುಟುಂಬ ಪದ್ಧತಿಯ ಕುಲ ಪ್ರಮುಖಳಿರಬಹುದು. ಭಾರತದ ಈಶಾನ್ಯ ಭಾಗದಲ್ಲಿ ಪ್ರಮೀಳಾ ರಾಜ್ಯವಿದ್ದ ಉಲ್ಲೇಖ ಮಹಾಭಾರತದಲ್ಲಿ ಬಂದಿದೆ. ಅಶ್ವಮೇಧಯಾಗದ ಸಂದರ್ಭದಲ್ಲಿ ಮಣಿಪುರದ ಚಿತ್ರಾಂಗದೆಯನ್ನು ಸೋಲಿಸಿ, ಗಾಂಧರ್ವ ಪದ್ಧತಿಯಲ್ಲಿ ವಿವಾಹವಾದ ಚಿತ್ರಣವಿದೆ. ಮಣಿಪುರವೂ ಸಹ ಮಾತೃ ಪ್ರಧಾನ ಜನಾಂಗದ ನೆಲೆಯಾಗಿರಬಹುದು. ಭಾರತದಲ್ಲಿದ್ದ ಮಾತೃಪ್ರಧಾನ ಜನಾಂಗಗಳು ಪಿತೃಪ್ರಧಾನ ಆರ್ಯ ಜನಾಂಗಕ್ಕೆ ಅಸುರರ ವಿರುದ್ಧ ಯುದ್ಧದಲ್ಲಿ ಸಹಕರಿಸಿ ಯುದ್ಧಗಳನ್ನು ಗೆದ್ದುಕೊಟ್ಟಿರಬಹುದು.

ಕೋಲರು ಈಗ ತಮಿಳುನಾಡಿನ ನೀಲಗಿರಿ ಪ್ರದೇಶದಲ್ಲಿ ವಾಸವಾಗಿದ್ದಾರೆ. ಕನ್ನಡ ಮತ್ತು ತಮಿಳು ಮಿಶ್ರಿತ ಭಾಷೆಯನ್ನಾಡುತ್ತಾರೆ. ಒರಿಸ್ಸಾದಲ್ಲಿ 'ಕೋಲ' ಎನ್ನುವ ಸಮುದಾಯವಿದೆ. ಕುಂಟಮ್, ಕುಡ, ಶೋರ, ಮಿಂರ್ಧ, ಮಾರ್ಥ, ಬಿಹೋರ ಮತ್ತು ನಾಗೇಶಿ ಎಂಬುದಾಗಿ ಕರೆಯುತ್ತಾರೆ. ಕೋಲರ ಮತ್ತೊಂದು ಹೆಸರು ನಾಗೇಶಿ ಎನ್ನುವುದರಿಂದ ನಾಗ ಜನಾಂಗಕ್ಕೂ ಕೋರ ಜನಾಂಗಕೂ ಇರುವ ಸಂಬಂಧವನ್ನು ನೋಡಿದಾಗ ಈ ಎರಡು ಜನಾಂಗಗಳ ನಡುವೆ ಕೊಡು ಕೊಳ್ಳುವ ಸಂಬಂಧವಿರಬೇಕೆನಿಸುತ್ತದೆ. ರಾಮನಗರ ಜಿಲ್ಲೆಯ ಪರಿಸರದಲ್ಲಿ ಕೋಲ-ಕೋರ ಜನಾಂಗಗಳ ಅಸ್ತಿತ್ವವನ್ನು ಹೇಳುವ ಸ್ಥಳನಾಮಗಳಿವೆ.

(ಮಾ) ಕೋರಮಂಗಲ

(ರಾ) ಕೋಲಮಾರನಕುಪ್ಪೆ

(ಚ) ಕೋಲೂರು

ಇಲ್ಲಿ ಬರುವ ಕೋಲಮಾರ ವ್ಯಕ್ತಿವಾಚಕವಾದರೂ 'ಕೋಲ' ಎಂಬುದು ಮಾರ ಎಂಬ ವ್ಯಕ್ತಿಯ ಜನಾಂಗದ ಹೆಸರಿರಬಹುದು. ಕರ್ನಾಟಕದಲ್ಲಿ ಕೋಲ ಹೆಸರುಳ್ಳ ೪೫ ಸ್ಥಳನಾಮಗಳು ಹಾಗೂ ಕೋರ ಹೆಸರುಳ್ಳ ೨೨ ಸ್ಥಳನಾಮಗಳು ದೊರೆಯುವುದರಿಂದ ಈ ಪ್ರಾಚೀನ ಜನಾಂಗದ ನೆಲೆ ಅಥವಾ ವಲಸೆಯು ಈ ಜಿಲ್ಲೆಯಲ್ಲಿ ಆಗಿರುವುದು ಗೋಚರಿಸುತ್ತದೆ.

ಕೊಂಡ-ಗೊಂಡ

ಗೊಂಡ ಸಮುದಾಯವು ಅತ್ಯಂತ ದೊಡ್ಡದಾದ ಆದಿವಾಸಿ ಸಮುದಾಯ. ಇವರು ಕೇರಳ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಮಧ್ಯಪ್ರದೇಶ, ಒಡಿಸ್ಸಾ, ಚತ್ತೀಸಗಡ, ಬಿಹಾರ, ಜಾರ್ಖಂಡ, ಬಂಗಾಲ, ಗುಜರಾತ ರಾಜ್ಯಗಳಲ್ಲಿ ಈ ಜನಾಂಗವು ಹರಡಿಕೊಂಡಿದೆ. 'ಗೊಂಡಾರಣ್ಯ' ಎಂಬುದು ಈ ಜನರ ಮೂಲ ನೆಲೆಯಾಗಿರಲು ಸಾಧ್ಯವಿರಬಹುದು. ಗೊಂಡರಿಗೂ ಹಾಗೂ ಬಾಹ್ಯ ಆಕ್ರಮಣಕಾರರಾದ ಆರ್ಯರಿಗೂ

ಘರ್ಷಣೆಗಳಾದ ಬಗ್ಗೆ ಎಲ್ಲಿಯೂ ದಾಖಲೆಗಳು ಸಿಗುವುದಿಲ್ಲ. ಬಾಹ್ಯ ಆಕ್ರಮಣಕಾರರು ಭಾರತದ ಹಿಮಾಲಯ ತಪ್ಪಲಿನ ಪ್ರದೇಶ ಹಾಗೂ ನದಿ ತೀರದಲ್ಲಿ ನೆಲೆಸಿದ ಇತರ ಮೂಲ ನಿವಾಸಿಗಳನ್ನು ಬಯಲು ಪ್ರದೇಶಗಳಲ್ಲಿ ಎದುರಿಸಿ ಸೋಲಿಸಿರಬಹುದು. ಗೊಂಡಾರಣ್ಯ ಹಾಗೂ ದಂಡಕಾರಣ್ಯದ ನಿವಾಸಿಗಳಾದ ಗೊಂಡ, ವಾನರ, ಜಾಂಬವ ಸಮುದಾಯದವರ ಸಹಾಯ, ಸಹಕಾರವಿಲ್ಲದೇ ಮುನ್ನೆಡೆಯಲು ಸಾಧ್ಯವಿರದ ಹಿನ್ನೆಲೆಯಲ್ಲಿ ಆರ್ಯರಿಗೂ ಇವರಿಗೂ ಸ್ನೇಹ ಒಪ್ಪಂದ ಏರ್ಪಟ್ಟಿರುವುದು ರಾಮಾಯಣದಿಂದ ತಿಳಿದುಬರುತ್ತದೆ. ರಾಮಾಯಣ ಬರೆದ ವಾಲ್ಮೀಕಿ ಹಾಗೂ ಶಬರಿ ಈ ನೆಲದ ಆದಿವಾಸಿಗಳಾದ ಬೇಡ ಬುಡಕಟ್ಟಿನವರು. ಸುಗ್ರೀವ, ಹನುಮಂತ ವಾನರ ಕುಲದವರು ಹಾಗೂ ಕರ್ನಾಟಕಕ್ಕೆ ಹರಿದು ಬಂದ ಇತರ ಜನಾಂಗಗಳಾದ ಕಂದ, ಕನ್ನ, ನಾಗ ಮೊದಲಾದ ಜನಾಂಗಗಳ ಒತ್ತಡದಿಂದಾಗಿ ಗೊಂಡ ಜನಾಂಗವು ಕರ್ನಾಟಕದಲ್ಲಿ ತನ್ನ ನೆಲೆಯನ್ನು ಕಳೆದುಕೊಂಡಿರಲೂಬಹುದು.

ಪ್ರಸ್ತುತ ಉತ್ತರ ಕನ್ನಡ, ಬೀದರ್, ಗುಲಬರ್ಗಾ ಜಿಲ್ಲೆಯಲ್ಲಿ ಕಂಡುಬರುವ ಗೊಂಡರಲ್ಲಿ ಕುಲಪದ್ಧತಿಯು ಮಾತೃಮೂಲದ್ದಾಗಿದೆ. ಅಂದರೆ ನಮ್ಮ ಪ್ರಾಚೀನ ಭಾರತೀಯ ಮೂಲ ನಿವಾಸಿಗಳ ಕುಲಪದ್ಧತಿಯೇ ಆಗಿರುವುದರಿಂದ ಈ ಗೊಂಡರು ಪ್ರಾಚೀನ ಮೂಲ ಜನಾಂಗವಾದ ಗೊಂಡರೇ ಇರಬಹುದು. ಕೊಂಡ ಅಥವಾ ಗೊಂಡ ಜನಾಂಗ ಸೂಚಿ ಸ್ಥಳನಾಮಗಳು ಈ ಪರಿಸರದಲ್ಲಿ ಇಂತಿವೆ.

(ಮಾ) ಕೊಂಡಹಳ್ಳಿ

(ಚ) ಕೊಂಡಾಪುರ

ಮೂಕ-ಮೂಗರು

ಕರ್ನಾಟಕದಲ್ಲಿ ನೆಲೆಸಿದ್ದ ಮತ್ತೊಂದು ಜನಾಂಗ ಮೂಕ ಅಥವಾ ಮೂಗರು. ಮೂಗರ ಆರಾಧ್ಯ ದೇವಿ ಮೂಕಾಂಬಿಕೆ, ಕೊಲ್ಲೂರಿನ ಪ್ರಸಿದ್ಧ ದೇವತೆಯಾಗಿದ್ದಾಳೆ.

ಮಹಾರಾಷ್ಟ್ರದಲ್ಲಿ ಮುಖೇರ ಎಂಬ ಊರಿದ್ದರೆ, ಆಂಧ್ರಪ್ರದೇಶದಲ್ಲಿ 'ಮುಖ' ಎನ್ನುವ ಆದಿವಾಸಿ ಜನಾಂಗವಿದೆ. ಇವರೆ ಕರ್ನಾಟಕದಲ್ಲಿ ಮೂಗರಿರಬಹುದು. ಮುಗಳಿ, ಮುಕ್ಕಳಿ ಇವು ಜನಾಂಗವಾಚಿ ಗ್ರಾಮಗಳಿರಬಹುದು. ಇಂತಹ ೩೫ ಹಳ್ಳಿಗಳು ಕರ್ನಾಟಕದಲ್ಲಿವೆ. ಪ್ರಸ್ತುತ ಭಾರತದ ಇತರ ಪ್ರದೇಶಗಳಲ್ಲಿ ಮತ್ತು ಕರ್ನಾಟಕದಲ್ಲಿಯೂ ಸಹ ಈ ಸಮುದಾಯ ಕಂಡುಬರುತ್ತಿಲ್ಲ. ಆದರೂ ಈ ಜನಾಂಗಗಳ ಅಸ್ತಿತ್ವವನ್ನು ಹೇಳುವ, ಇವರ ನೆಲೆಯನ್ನು ಹೇಳುವ ಸ್ಥಳನಾಮ ಈ ಪರಿಸರದಲ್ಲಿದೆ.

(ಮಾ) ಮೂಗನಹಳ್ಳಿ

'ಮೂಗನ'ಹಳ್ಳಿ- ಈ ಸ್ಥಳನಾಮ ವ್ಯಕ್ತಿವಿಶೇಷಣವಾಚಿಯಾಗುವ ಸಂಭವವೂ ಇರಬಹುದು.

ಅಂಕರು

ಮಹಾಭಾರತದಲ್ಲಿ ಬರುವ 'ಅಂಗ'ದೇಶವು ಅಂಕರ ನೆಲೆಯಾಗಿರಲು ಸಾಧ್ಯ. ದುರ್ಯೋಧನನು

ಕರ್ಣನನ್ನು ಅಂಗರಾಜ್ಯದ ಅಧಿಪತಿಯನ್ನಾಗಿ ಮಾಡಿ ಅವನ ಸ್ನೇಹವನ್ನು ಗಳಿಸಿರುವುದು ತಿಳಿದು ಬರುತ್ತದೆ. ಓರಿಸ್ಸಾದಲ್ಲಿ 'ಅಂಗುಲ' ಎನ್ನುವ ಪಟ್ಟಣವಿದೆ. ಕರ್ನಾಟಕ ಮತ್ತು ಭಾರತದ ಇತರ ರಾಜ್ಯಗಳಲ್ಲಿ ಈ ಜನಾಂಗಗಳ ಸುಳಿವು ಸಿಗುವುದಿಲ್ಲ. ಹಿಂದೆಯೇ ಈ ಜನಾಂಗ ನಿರ್ನಾಮವಾಗಿರಬೇಕು. ಆದರೂ ಇವರ ಅಸ್ಥಿತ್ವವನ್ನು, ಮೂಲವನ್ನು ಸ್ಥಳಗಳು ಈ ಪರಿಸರದಲ್ಲಿವೆ.

(ಠಾ) ಅಂಕನಹಳ್ಳಿ-೨

(ಚ) ಅಂಕುಶನಹಳ್ಳಿ

ಈ ಎರಡು ಸ್ಥಳನಾಮಗಳು ವ್ಯಕ್ತಿವಾಚಿ ಸ್ಥಳನಾಮಗಳೂ ಆಗಿರಬಹುದು. ಈ ಪರಿಸರದಲ್ಲಿ ಅಂಕಪ್ಪ, ಅಂಕಯ್ಯ ಎಂಬ ವ್ಯಕ್ತಿನಾಮಗಳು ದೊರೆಯುತ್ತವೆ.

ಮುರರು

ಭಾಗವತದಲ್ಲಿ ಶ್ರೀಕೃಷ್ಣನು 'ಮುರ' ಎನ್ನುವ ಅಸುರನನ್ನು ಸಂಹರಿಸಿ 'ಮುರಾರಿ' ಎನ್ನುವ ಬಿರುದು ಪಡೆದ ವಿವರ ಸಿಗುತ್ತವೆ. ಕುಲಸಂಘರ್ಷದಲ್ಲಿ ಸೋತು ದಕ್ಷಿಣದ ಭಾಗಕ್ಕೆ ಪಲಾಯನ ಹೊಂದಿರುವ ಸಾಧ್ಯತೆ ಇದೆ. ಕರ್ನಾಟಕದಲ್ಲಿ ಸುಮಾರು ೪೭ ಸ್ಥಳನಾಮಗಳು ಈ ಜನಾಂಗಗಳ ಹೆಸರಿನಲ್ಲಿ ದೊರೆಯುತ್ತವೆ. ಆದ್ದರಿಂದ ಕರ್ನಾಟಕದಲ್ಲಿಯೂ ಸಹ ಈ ಜನಾಂಗ ಉಳಿದಿರುವ ಸಂಭವವಿರಬಹುದು ಎಂಬುದನ್ನು ದೃಢೀಕರಿಸಲು ಈ ಪರಿಸರದಲ್ಲಿ ಒಂದು ಸ್ಥಳನಾಮವಿದೆ.

(ಕ) ಮುರಕಣಿ

ಮನ-ಮನ್ನರು

ದಕ್ಷಿಣ ಭಾರತ ಪ್ರದೇಶಗಳಾದ ಕೇರಳ, ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ಮಾತ್ರ ಕಂಡುಬರುವ ಜನಾಂಗ. ತಮಿಳುನಾಡಿನಲ್ಲಿ 'ಮನ್ನಾರಗುಡಿ', ಕೇರಳದಲ್ಲಿ 'ಮನ್ನಾರಕ್ಕಾಡ', ಮಹಾರಾಷ್ಟ್ರದಲ್ಲಿ 'ಮನೋರ' ಎನ್ನುವ ಸ್ಥಳಗಳಿವೆ. ಆಂಧ್ರದಲ್ಲಿ ಮನ್ನೇರವರ್ಲು ಹಾಗೂ ಮನ್ನಾದೋರ್ಲಾ ಎನ್ನುವ ಪರಿಶಿಷ್ಟ ಪಂಗಡವೆಂದರೆ ಬುಡಕಟ್ಟು ಜನಾಂಗವಿದೆ. ಇವರೂ ಕೂಡ ದಕ್ಷಿಣ ಭಾರತದಲ್ಲಿದ್ದ ಮೂಲ ನಿವಾಸಿಗಳಾಗಿರಬಹುದು. ಅಂತೆಯೇ ಕರ್ನಾಟಕದಲ್ಲೂ ೮೪ ಸ್ಥಳಗಳು ಈ ಜನಾಂಗಸೂಚಿಯಾಗಿವೆ. ಮನ-ಮನ್ನರು ಸಮುದಾಯವನ್ನು ಸೂಚಿಸುವ ಸಮುದಾಯವಾಚಿ ಪದ.

ಈ ಪರಿಸರದಲ್ಲಿ ಬರುವ ಮಾಗಡಿ ತಾಲೂಕಿನ 'ಮಾನಗಲ್ಲು' ಇದರ ಮೂಲ ರೂಪ 'ಮನಗಲ್ಲು' ಆಗಿರಬಹುದು.

ಕನ್ನ (ಕಣ, ಕಣ್ಣ)

ಕನ್ನರಿಂದಲೇ 'ಕಂನಾಡು' ಬಂದಿದೆ. 'ಕನ್ನಾರ'-ದನಗಾಹಿ ಅವಸ್ಥೆಯ ಕಾಲವನ್ನು ತೋರಿಸುತ್ತದೆ. ಈ ನಾಡಿನ ಮೂಲ ಜನ ಕಣ್ಣರು, ಅವರು ನೆಲೆಸಿದ ನೆಲ ಕಂನಾಡು.

ಸಂಸ್ಕೃತ ಸಾಹಿತ್ಯದಲ್ಲಿ 'ಕಣ್ಣ'ವೆಂಬುದು ಕರ್ಣವೆಂದು ವ್ಯವಹರಿಸುತ್ತದೆ. ಕರ್ಣರ ಉಲ್ಲೇಖವು ಮತ್ಸ್ಯಪುರಾಣದಲ್ಲಿ ಬರುತ್ತದೆ. ಅಲ್ಲಿ ಇವರು ತುರ್ವಸುವಿನ ಪೀಳಿಗೆಯವರೆಂದು ಹೇಳಿದೆ. ಕರ್ಣರು, ಚೋಳ, ಪಾಂಡ್ಯ, ಕೇರಳರ ನೆರೆಯಲ್ಲಿ ನೆಲೆಸಿದವರೆಂದೂ ವರ್ಣಿಸಿದ್ದುಂಟು. ಕರ್ಣವೆಂಬ ಪದವನ್ನು ಮನುಸ್ಮೃತಿಯಲ್ಲಿ 'ಕರಣ' ಎಂಬುದಾಗಿ ಕರೆಯಲಾಗಿದೆ ಎಂಬುದು ಶಂಬಾ ಅಭಿಪ್ರಾಯ. "ಆದ ಕಾರಣ ಸಂಸ್ಕೃತದಲ್ಲಿ ದೊರೆವ ಕರಣ ಮತ್ತು ಕರ್ಣ ಎಂಬ ಎರಡೂ ಪದಗಳೂ ಮೂಲದಲ್ಲಿ ಕಣ್ಣ ಎಂಬ ಒಂದರ ರೂಪಗಳೇ ಆಗಿವೆಯೆಂದು ನಿರ್ಧರಿಸಬಹುದು. ಮನುಸ್ಮೃತಿಯಲ್ಲಿ ಕರಣರೊಡನೆ ನಟರು, ಝಲ್ಲರು, ಮಲ್ಲರು, ದ್ರಾವಿಡರುಗಳ ಉಲ್ಲೇಖವೂ ಇದೆ. ಇವರೆಲ್ಲ ವ್ರಾತ್ಯ ಕ್ಷತ್ರಿಯರೆಂದು ಅಲ್ಲಿ ಹೇಳಿದೆ."[೫೧]

ಮಹಾರಾಷ್ಟ್ರದಲ್ಲಿ ಕನ್ನಡ, ಕಾನ್ಹೇರಿ ಮೊದಲಾದ ಸ್ಥಳನಾಮಗಳು ದೊರೆಯುತ್ತವೆ. ಈ ಪರಿಸರದಲ್ಲಿ ಕನ್ನ ಸಮುದಾಯವನ್ನು ಸೂಚಿಸುವ ಸ್ಥಳಗಳೆಂದರೆ

(ಚ) ಕನ್ನಮಂಗಲ ಕನ್ನಸಂದ್ರ

(ಮಾ)ಕನ್ನಸಂದ್ರ ಕಣ್ಣಾನೂರ

'ಕನ್ನ' ಅಥವಾ ಕಣ್ಣ ವ್ಯಕ್ತಿವಾಚಕವಾಗಿರಲೂಬಹುದು.

ಗಂಗ

ಗಂಗ ಕುಲವು ಕರ್ನಾಟಕವನ್ನಾಳಿದ ಪ್ರಮುಖ ಹಾಗೂ ಪ್ರಾಚೀನ ರಾಜವಂಶಗಳಲ್ಲಿ ಒಂದು.

(ರಾ) ಚಿಕ್ಕ ಗಂಗವಾಡಿ ದೊಡ್ಡಗಂಗವಾಡಿ

(ಕ) ಗಂಗನಹಳ್ಳಿ ಗಂಗೇನಪುರ ಗಂಗೇನಹಳ್ಳಿ

'ಗಂಗ' ವ್ಯಕ್ತಿವಾಚಿಯಾಗಿರಲೂ ಸಾಧ್ಯ. ಆದರೆ ಆ ವ್ಯಕ್ತಿವಾಚಕಕ್ಕೆ ಮೂಲ 'ಗಂಗ' ವಂಶವೇ ಇರಬಹುದು.

ಸಿಂಗರು

ಮಹಾಭಾರತದಲ್ಲಿ ಅರ್ಜುನನ ದಿಗ್ವಿಜಯದ ಸಂದರ್ಭದಲ್ಲಿ 'ಸಿಂಹಪುರ'ದ ವರ್ಣನೆ ಬರುತ್ತದೆ. ಹಾಗೂ ಬೌದ್ಧರ 'ಮಹಾವಂಶ'ದಲ್ಲಿ ವರ್ಣಿಸಲಾಗಿರುವಂತೆ ಸಿಂಹಪುರದ ರಾಜ ವಿಜಯ ಸಿಂಹನು ತನ್ನ ೭೦೦ ಜನ ಸಹಚರರೊಡನೆ ತಾಮ್ರಪರ್ಣಿ ದ್ವೀಪಕ್ಕೆ ತೆರಳಿದನು (ಕ್ರಿ.ಪೂ.೫೪೩) ಇವನಿಂದಲೇ ಆ ದ್ವೀಪಕ್ಕೆ 'ಸಿಂಹಳ' ಎನ್ನುವ ಹೆಸರು ಪ್ರಾಪ್ತವಾಯಿತು. ಇವನಂತೆ ಪೂರ್ವ ಏಶಿಯಾಕ್ಕೆ ತೆರಳಿದ ತಂಡವೊಂದು 'ಸಿಂಗಾಪುರ' ಸ್ಥಾಪಿಸಿತು. ಹೀಗೆ ಸಿಂಗರು ಸಂಚರಿಸಿದ ಸ್ಥಳಗಳೆಲ್ಲೆಲ್ಲ ಒಂದೊಂದು ಸ್ಥಳಗಳನ್ನು ಸ್ಥಾಪಿಸಬಹುದು. ಅಂತೆಯೇ ಈ ಸಿಂಗರು ಕರ್ನಾಟಕಕ್ಕೆ ಹಾಗೂ ಇತರ ಪ್ರದೇಶಗಳಿಗೆ ಯಾಕೆ ವಲಸೆ ಬಂದರೆಂಬುದಕ್ಕೆ ಯಾವ ಆಧಾರಗಳೂ ಸಿಗುವುದಿಲ್ಲ. ಆದರೂ ಅವರು ಸಂಚರಿಸಿದ ಸ್ಥಳಗಳ ನೆಲೆಗಳು ಸಿಗುತ್ತವೆ. ಇದಕ್ಕೆ ರಾಮನಗರ ಜಿಲ್ಲೆಯೂ ಹೊರತಾಗಿಲ್ಲ.

(ಕ) ಸಿಂಗಸಂದ್ರ

(ಮಾ) ಸಿಂಗ್ರಿಪಾಳ್ಯ

ಈ ಪರಿಸರದಲ್ಲಿ ಸಿಂಗ, ಸಿಂಗ್ರಿ ಎಂಬ ವ್ಯಕ್ತಿನಾಮಗಳೂ ಕಂಡುಬರುವುದರಿಂದ ವ್ಯಕ್ತಿವಾಚಿ ಸ್ಥಳನಾಮಗಳೂ ಕೂಡ ಆಗಿರಬಹುದು. ಅಲ್ಲದೆ ಇನ್ನೂ ಹಲವು ಸಮುದಾಯಗಳನ್ನು ಸೂಚಿಸುವ ಸ್ಥಳನಾಮಗಳು ಈ ರಾಮನಗರ ಜಿಲ್ಲೆಯಲ್ಲಿವೆ.

೧. ಕಂಸಾಗರ: ಕನಕಪುರ ತಾಲೂಕಿನಲ್ಲಿರುವ ಗ್ರಾಮ. 'ಕಂಬರು' ಎಂಬ ಸಮುದಾಯದಿಂದ ಬಂದಿರಬಹುದು.

೨. ತೂಬರಪಾಳ್ಯ: ಮಾಗಡಿ ತಾಲೂಕಿನಲ್ಲಿರುವ ಒಂದು ಗ್ರಾಮ. 'ತೂಬರು' ಎಂಬ ಸಮುದಾಯದಿಂದ ಬಂದಿರಬಹುದು.

೩. ಕದರಮಂಗಲ: ಚನ್ನಪಟ್ಟಣ ತಾಲೂಕಿನ ಒಂದು ಗ್ರಾಮ. 'ಕದರು' ಎಂಬ ಸಮುದಾಯದಿಂದ ಬಂದಿರಬೇಕು.

೪. ವಂದರಗುಪ್ಪೆ: ಚನ್ನಪಟ್ಟಣ ತಾಲೂಕಿನಲ್ಲಿರುವ ಒಂದು ಗ್ರಾಮ. 'ವಂದರು' ಎಂಬ ಸಮುದಾಯದಿಂದ ಬಂದಿರಬಹುದು.

೫. ಕುತರಬಾವಿ: ರಾಮನಗರ ತಾಲೂಕಿನ ಒಂದು ಗ್ರಾಮ. 'ಕುತರು' ಎಂಬ ಸಮುದಾಯದಿಂದ ಬಂದಿರಬಹುದು.

೬. ಕೆಂಜೀಗರಹಳ್ಳಿ: ರಾಮನಗರ ತಾಲೂಕಿನ ಒಂದು ಗ್ರಾಮನಾಮ. 'ಕೆಂಜಿಗರು' ಎಂಬ ಸಮುದಾಯದಿಂದ ಬಂದಿರಬಹುದು.

೭. ಮರಸರಹಳ್ಳಿ: ಕನಕಪುರ ತಾಲೂಕಿನ ಒಂದು ಗ್ರಾಮ. 'ಮೊರಸರು' ಎಂಬ ಸಮುದಾಯದಿಂದ ಬಂದಿರಬಹುದು. ಮೊರಸ ಒಕ್ಕಲಿಗ ಎಂಬ ಉಪಪಂಗಡ ಒಕ್ಕಲಿಗರಲ್ಲಿದೆ. ಮೊರಸರು>ಮರಸರು ಆಗಿರುವ ಸಾಧ್ಯತೆ ಇದೆ.

ಸಾಮಾನ್ಯವಾಗಿ ಗ್ರಾಮನಾಮಗಳ ಮಧ್ಯದಲ್ಲಿ ಬರುವ 'ರ'ಕಾರ ಜನಾಂಗವನ್ನು ಸೂಚಿಸುತ್ತದೆ ಎಂಬುದಾಗಿ ಡಾ.ಎಂ.ಎಂ.ಕಲಬುರ್ಗಿ ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಸ್ಥಳನಾಮಗಳ ಮೂಲಕ ಒಂದು ಸಮುದಾಯದ ಮೂಲ ಪ್ರದೇಶ ಅಥವಾ ಆ ಸಮುದಾಯಗಳ ಚಲನವಲನವನ್ನು ಹಾಗೂ ಜಿಲ್ಲೆಯೊಡನೆ ಅವುಗಳಿರುವ ಸಂಬಂಧವನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕೆಲವೊಂದು ಸಮುದಾಯಗಳು ನಾವು ಕೇಳಿರದ ಸಮುದಾಯಗಳಿರಬಹುದು. ಆದರೆ ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ಈಗಿನ ನಮ್ಮ ಕರ್ನಾಟಕ ರಾಜ್ಯಕ್ಕೆ ಆಗಲಿ ಅಥವಾ ರಾಮನಗರ ಜಿಲ್ಲೆಯ ಪರಿಸರಕ್ಕೆ ಬಂದು, ಆ ಸಮುದಾಯದ ಹೆಸರನ್ನು ಸ್ಥಳನಾಮಗಳಲ್ಲಿ ಹುದುಗಿಸಿ ಹೋದವರೆಷ್ಟೋ? ನೆಲೆ ನಿಂತವರ್‍ಯಾರು? ಸಾಮರಸ್ಯದಿಂದ ಮೂಲ

ಬುಡಕಟ್ಟು ಇತರ ಸಮುದಾಯದವರೊಂದಿಗೆ ಬೆರೆತವರೆಷ್ಟೋ ಅಥವಾ ತಮ್ಮ ಅಸ್ತಿತ್ವಕ್ಕಾಗಿ ಹೊಡೆದಾಡಿ ಕಳೆದುಹೋದವರೆಷ್ಟೋ? ಈ ಎಲ್ಲ ವಿಚಾರಗಳು ಕಾಲಗರ್ಭದಲ್ಲಿ ಅಡಗಿಹೋಗಿದ್ದರೂ ಆ ಸಮುದಾಯದ ಹೆಸರು ಆಂಶಿಕ ರೂಪವೆಂಬಂತೆ ಸ್ಥಳನಾಮಗಳಲ್ಲಿ ಹುದುಗಿಕೊಂಡಿರುವುದು ವಿಸ್ಮಯವೇ ಸರಿ.

೬.೩. ವೃತ್ತಿ ಆಧಾರಿತ ಸ್ಥಳನಾಮಗಳು

ಮನುಷ್ಯ ತನ್ನ ಅಲೆಮಾರಿತನವನ್ನು ತೊರೆದು, ಒಂದೆಡೆ ನೆಲೆ ನಿಂತು ತಾನು ಬದುಕುತ್ತಿರುವ ಸಮಾಜದಲ್ಲಿ ಸಂತೃಪ್ತಿಯಿಂದ ಜೀವನ ನಡೆಸಲು ಬೇಕಾದ ಉಡುಗೆ-ತೊಡುಗೆ, ಆಹಾರ, ವಾಸಿಸಲು ಯೋಗ್ಯಮನೆ ಇವುಗಳ ಅವಶ್ಯಕತೆಯನ್ನು ಪೂರೈಸಿಕೊಳ್ಳಬೇಕಾದರೆ ಪ್ರತಿಯೊಬ್ಬರು ಒಂದೊಂದು ಕೆಲಸವನ್ನು ಮಾಡಬೇಕಾದ ಅನಿವಾರ್ಯತೆ ಇತ್ತು. ಅಲ್ಲದೇ ಒಬ್ಬ ವ್ಯಕ್ತಿಯೇ ತನ್ನ ಎಲ್ಲ ಅವಶ್ಯಕತೆಯನ್ನು ಈಡೇರಿಸಿಕೊಳ್ಳಲು ಅಸಮರ್ಥನಾದ ಹಿನ್ನೆಲೆಯಲ್ಲಿ ಒಬ್ಬೊಬ್ಬನು ಒಂದೊಂದು ವೃತ್ತಿಯನ್ನು ಆಯ್ಕೆಮಾಡಿಕೊಂಡು ಅದರಲ್ಲಿ ಪರಿಣತಿ ಪಡೆದು ಶೀಘ್ರವಾಗಿ ಮತ್ತು ಮೌಲ್ಯಯುತ ವಸ್ತುಗಳ ರಚನೆಯಲ್ಲಿ ತೊಡಗಬೇಕಾದಾಗ ಅದೇ ಅವನ ಮೂಲ ವೃತ್ತಿ, ಕಸುಬಾಗಿ ಮಾಡಿಕೊಂಡಿರಬಹುದು. ಹೀಗೆ ಸಮಾಜದಲ್ಲಿ ಪ್ರತಿಯೊಬ್ಬರು ಒಂದಲ್ಲ ಒಂದು ವೃತ್ತಿಯನ್ನು ಆಶ್ರಯಿಸಿಕೊಂಡು ಬಂದವರೇ ಆಗಿದ್ದರು. ಆಗ ಜನರು ಮಾಡುವ ವೃತ್ತಿ ಬೇರೆ ಬೇರೆಯಾಗಿದ್ದರೂ ವೃತ್ತಿ ಗೌರವವಿತ್ತೆ ಹೊರತು ಮೇಲು ಕೀಳೆಂಬ ಭಾವನೆಗಳಿರಲಿಲ್ಲ. ವಚನಕಾರರ ಪ್ರಕಾರ 'ಕಾಯಕ' ಕೇವಲ ದುಡಿಮೆ ಅಥವಾ ದೈಹಿಕ ಶ್ರಮ ಅಲ್ಲ. ಪೂಜ್ಯಭಾವನೆಯಿಂದ ಇದು ದೇವರ ಸೇವೆ ಎನ್ನುವ ಮನೋಧರ್ಮದಿಂದ ಮಾಡುವ ಕೆಲಸ ಎಂದು ಅರ್ಥ. ಇದು ಪೂಜ್ಯಭಾವನೆಯಿಂದ ಮಾಡುವ ಕಾರ್ಯವಾದುದ್ದರಿಂದ ಯಾರು ಯಾವ ಕೆಲಸವನ್ನು ಮಾಡಿದರೂ, ಅದನ್ನು ಒಂದೇ ಉದ್ದೇಶದಿಂದ ಮಾಡುವ ಕಾರಣ, ವೃತ್ತಿಗಳ ತರತಮಭಾವನೆ ತಾನಾಗಿಯೇ ಹೋಗುತ್ತದೆ. 'ಕಾಯಕವೇ ಕೈಲಾಸ' ಎಂಬ ವಚನಕಾರರ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ. ಜನತೆಗೆ ಅಥವಾ ಸಮಾಜಕ್ಕೆ ಅನುಕೂಲ ಕಲ್ಪಿಸುವ ವೃತ್ತಿಮನೋಭಾವನೆ ಮಾತ್ರ ಹೊಂದಿತ್ತು. ಕಸುಬುದಾರರ ಸಾಮಾಜಿಕ ಸ್ಥಾನಮಾನಗಳು ಗೌರವಾನ್ವಿತವಾಗಿದ್ದವು. ಕಾಯಕಕ್ಕೆ ಹೆಚ್ಚಿನ ಸಾಮಾಜಿಕ ಮನ್ನಣೆಯಿತ್ತು. "ರೈತರು ತಾವು ಬೆಳೆದುದರಲ್ಲಿ ಒಂದು ಭಾಗವನ್ನು ತಮ್ಮ ಉಪಕರಣಗಳನ್ನು ಸಿದ್ಧಪಡಿಸಿಕೊಟ್ಟ ಅಥವಾ ಸರಿ ಪಡಿಸಿಕೊಟ್ಟ ವೃತ್ತಿಕಾರರಿಗೆ ಕೊಡಬೇಕು. ಇದನ್ನು 'ಆಯ'ದ ಪದ್ಧತಿಯೆಂದು ಕರೆಯುತ್ತಾರೆ. ಈ ಪದ್ಧತಿಯು ಪ್ರಾಚೀನ ಕರ್ನಾಟಕದಲ್ಲಿತ್ತೆಂಬುದಕ್ಕೆ ಒಂದು ಶಾಸನಾಧಾರವಿದೆ"[೫೨] ಕಸುಬುಗಳ ಆಧಾರದ ಮೇಲೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿದ್ದವು. ಕಾಲಕ್ರಮೇಣ ಕಸುಬುಗಳ ಆಧಾರದ ಮೇಲೆ ಜಾತಿ ಪದ್ಧತಿ ಬೆಳೆಯಿತು. ಸಮಾಜದಲ್ಲಿ ಜನರ ಬೇಡಿಕೆಗಳು ಹೆಚ್ಚಾದಂತೆ ಹೆಚ್ಚೆಚ್ಚು ಕಸುಬುಗಳ ಅವಶ್ಯಕತೆ ಕಂಡು ಬಂದಿತು. ಅದಕ್ಕೆ ಅನುಗುಣವಾಗಿ ಜಾತಿಗಳ ಸಂಖ್ಯೆಯಲ್ಲಿ ಕ್ರಮೇಣ ಹೆಚ್ಚಾಗುತ್ತಾ ಬಂದಿತು. ಹೀಗೆ ವೃತ್ತಿ ಮತ್ತು ಜಾತಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ನಮ್ಮ ಸಮಾಜದಲ್ಲಿವೆ.

ಯಾವುದೋ ಒಂದು ಜನ ಸಮೂಹವು ಒಂದು ನಿರ್ದಿಷ್ಟವಾದ ಕಸುಬನ್ನು ಹೊಂದಿತು. ಇಡೀ ಊರಿನ ಜನರೆಲ್ಲ ಆರ್ಥಿಕತೆಯ ಸಫಲತೆಗಾಗಿ ಒಂದಲ್ಲ ಒಂದು ವೃತ್ತಿಯನ್ನು ಮಾಡುತ್ತಿತ್ತು. ಹೀಗೆ ಆ

ಊರಿನಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದ ವೃತ್ತಿಯವರು ಇದ್ದಲ್ಲಿ ತಾವು ನೆಲೆಸಿದ ಪ್ರದೇಶಕ್ಕೆ, ಊರಿಗೆ ತಮ್ಮ ವೃತ್ತಿಯ ಹೆಸರುಗಳನ್ನೇ ನೀಡಿದರು. ಎಲ್ಲ ಬಗೆಯ ವೃತ್ತಿಗಳು ತಮ್ಮ ಪಾರಂಪರಿಕ ಕುಲಕಸುಬನ್ನು ಹೊಂದಿರುವುದು ತಿಳಿದುಬರುತ್ತದೆ. ವೃತ್ತಿಯನ್ನು ಸೂಚಿಸುವ ಸ್ಥಳನಾಮಗಳು ಇದ್ದರೂ ಕಾಲಾನಂತರದಲ್ಲಿ ಆ ವೃತ್ತಿಗೆ ಉತ್ತೇಜನ ಸಿಗದಿರುವಾಗ, ಇಲ್ಲವೇ ಆ ವೃತ್ತಿಯನ್ನು ನಿರ್ವಹಿಸುತ್ತಿದ್ದ ಸಮುದಾಯ ಬೇರೆಡೆ ವಲಸೆ ಹೋಗಿರಬಹುದು. ಇಲ್ಲವೇ ಆ ಸಮುದಾಯ ಪ್ರಸ್ತುತ ಇಲ್ಲದೇ ಇರಬಹುದು. ಆದರೆ ಒಂದು ಕಾಲದಲ್ಲಿ ಸಮುದಾಯವು ಅವಲಂಭಿಸಿದ ವೃತ್ತಿಯು ಪ್ರಾಮುಖ್ಯತೆ ಪಡೆದಿತ್ತು. ಆ ಊರಿನ ಬಹುಪಾಲು ಜನರು ಆ ವೃತ್ತಿಯನ್ನು ಅವಲಂಭಿಸಿದ್ದರು ಎಂಬ ಸ್ಪಷ್ಟ ಚಿತ್ರಣ ಸ್ಥಳನಾಮಾಧ್ಯಯನದಿಂದ ಕಂಡುಬರುತ್ತದೆ. ವಿಶೇಷವಾಗಿ ಊರುಗಳು ರೂಪುಗೊಳ್ಳುವಾಗ ಜನರು ಮಾಡುತ್ತಿದ್ದ ವೃತ್ತಿಗಳು ಸ್ಥಳನಾಮಗಳಲ್ಲಿ ವಿಶಿಷ್ಟ ಭಾಗದಲ್ಲಿ ಬಳಕೆಯಾಗುತ್ತಿವೆ. ಹೀಗೆ ರಾಮನಗರ ಜಿಲ್ಲೆಯ ಪರಿಸರದಲ್ಲಿ ಕಂಡುಬರುವ ವೃತ್ತಿ ಆಧಾರಿತ ಸ್ಥಳನಾಮಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಅರ್ಚಕರಹಳ್ಳಿ

ಶಾಸನವೊಂದರಲ್ಲಿ 'ಅಚ್ಚಿಗರಹಳ್ಳಿ' ಎಂದು ಉಲ್ಲೇಖಗೊಂಡಿದೆ. ಅಚ್ಚಿಗ-ಅಚ್ಚಗನ್ನಡ ಪದ; ಪೂಜಾರಿ ಎಂಬರ್ಥವಿದೆ. ಅಚ್ಚಿಗ ಸಂಸ್ಕೃತೀಕರಣಗೊಂಡು 'ಅರ್ಚಕ' ಎನಿಸಿದೆ. ದೇವರ ಪೂಜೆಯನ್ನು ಮಾಡುವವ ಅರ್ಚಕ ಅಥವಾ ಪೂಜಾರಿ. ಇವನು ದೇವಾಲಯಗಳಲ್ಲಿ ನಿಷ್ಕಲ್ಮಷವಾದ ಭಾವನೆಯಿಂದ; ಭಕ್ತಿಯಿಂದ ವೃತ್ತಿಯನ್ನು ನಿರ್ವಹಿಸುವನು. ಪೂಜಾರಿ ವೃತ್ತಿಯು ವಂಶಪಾರಂಪರ್ಯವಾಗಿದ್ದು, ಪೂಜೆ ಮಾಡುವ ದೇವರ ಒಕ್ಕಲಿನವರಾಗಿರುತ್ತಾರೆ. ಇದು ಒಂದು ಮನೆತನಕ್ಕೆ ಸೀಮಿತವಾಗಿದ್ದು ಊರಿನಲ್ಲಿ ಅವರಿಗೆ ಪೂಜಾರಿಮನೆಯವರು ಅಥವಾ ಪೂಜಾರಿಮನೆತನದವರೆಂದೇ ಕರೆಯುತ್ತಾರೆ.

ಪೂಜಾರಿಯು ಗ್ರಾಮದಲ್ಲಿ ನಡೆಯುವ ಧಾರ್ಮಿಕ, ಪೂಜಾ ಕೈಂಕರ್ಯದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಊರಿನವರ ಪಾಲಿಗೆ ದೇವರ ಸಮಾನಾಂತರವಾದ ಗೌರವಕ್ಕೆ ಪಾತ್ರನಾಗಿರುತ್ತಾನೆ. ತನ್ನ ಸಚ್ಚಾರಿತ್ರ್ಯ, ಸತ್ಯವಂತಿಕೆ, ಪ್ರಾಮಾಣಿಕತೆಯಿಂದ ಪೂಜೆ ಪುರಸ್ಕಾರಗಳಿಂದ ಉನ್ನತಿಯನ್ನು ಪಡೆದು 'ಪೂಜಾರಪ್ಪ' ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಅರ್ಚಕ ವೃತ್ತಿ ಮಾಡುವ ಪೂಜಾರಿಗೆ ಪ್ರತಿತಿಂಗಳು ಅಥವಾ ಪ್ರತಿವರ್ಷ ವೇತನವನ್ನು ಕೊಡುತ್ತಿರಲಿಲ್ಲ. ಅವರಿಗೆ ಶಾಶ್ವತವಾಗಿ ಭೂಮಿಯನ್ನು ಬಿಟ್ಟು ಕೊಡುತ್ತಿದ್ದರು. ಆ ಜಮೀನಿಗೆ 'ಕೊಡುಗೆ ಜಮೀನು' ಎಂದು ಕರೆಯುವುದು ರೂಢಿಯಲ್ಲಿದೆ. ಬಹುಮಟ್ಟಿಗೆ ಆ ಭೂಮಿಯ ಆದಾಯದ ಮೇಲೆ ಅವರು ಬದುಕುತ್ತಿದ್ದರು. ಅಲ್ಲದೇ ಮಂಗಳಾರತಿಗೆ ಬೀಳುವ ನಾಣ್ಯಗಳೇ ಅವರ ಆದಾಯದ ಮೂಲಗಳಾಗಿದ್ದವು. ಹೀಗಾಗಿ ಇವರು ನಾವು ದೇವರ ಸಂಸಾರಕ್ಕೆ ಸೇರಿದವರು ಎಂಬ ಭಾವನೆಯಿಂದ ಸೇವೆ ಸಲ್ಲಿಸುತ್ತಿದ್ದರು. ಜನಮಾನಸದಲ್ಲಿ ದೇವರಂತೆ ಕಾಣುತ್ತಿದ್ದ ಈ ಅರ್ಚಕರ ನೆನಪಿನಲ್ಲಿಯೂ ಊರು ನಿರ್ಮಾಣವಾಗಿರುವ ಸಾಧ್ಯತೆ ಇದೆ.

(ರಾ) ಅರ್ಚಕರಹಳ್ಳಿ

೩. ಕಂಚುಗಾರಹಳ್ಳಿ

ತಾಮ್ರ, ಹಿತ್ತಾಳೆ, ಕಂಚಿನ ಲೋಹದ ಕೆಲಸಗಾರ ವೃತ್ತಿಯನ್ನು ಮಾಡುವವರು ಕಂಚುಗಾರರೆಂದು ಕರೆಯುತ್ತಾರೆ. "ಕಮ್ಮಾರರೂ, ಅಕ್ಕಸಾಲಿಗಳೂ, ಬಡಗಿಗಳೂ, ಕಂಚುಗಾರರೂ ಇದೇ ವಿಶ್ವಕರ್ಮ ಕುಲಕ್ಕೆ ಸೇರಿದವರು"[೫೩] ಆದರೆ "ಕಂಚುಗಾರರು ಕಂಚು ಮುಂತಾದ ಲೋಹಗಳಲ್ಲಿ ಪಾತ್ರೆಗಳನ್ನು ಮಾಡುತ್ತಿದ್ದರು. ಇವರು ವಿಶ್ವಕರ್ಮ ಜಾತಿಗೆ ಸೇರಿದವರಾದರೂ ಉಳಿದವರು ಇವರನ್ನು ಪ್ರತ್ಯೇಕಿಸಿದ್ದಂತೆ ಒಂದು ಶಾಸನವು ಸೂಚನೆಯನ್ನು ಕೊಡುತ್ತದೆ. ಬಡಗಿ, ಕಮ್ಮಾರ, ಅಕ್ಕಸಾಲಿಗಳು ಪರಸ್ಪರ ಕೊಳು-ಕೊಡುಗಳನ್ನಿಟ್ಟು ಕೊಂಡಿದ್ದರೂ ಆ ವಿಷಯದಲ್ಲಿ ಕಂಚುಗಾರರನ್ನು ಮಾತ್ರ ಬೇರೆ ಇಟ್ಟಿದ್ದಿರಬಹುದು. ಅವರು ಬೇರೊಂದು 'ಉಪಜಾತಿ'ಯೆಂದು ಭಾವಿಸಿರಬಹುದು"[೫೪] ಇಂಥ ಕಂಚುಗಾರ ವೃತ್ತಿ ಸಮುದಾಯದವರು ಇದ್ದರು ಎಂಬುದಕ್ಕೆ ಸಾಕ್ಷಿ ಎಂಬಂತೆ "ಮಾಗಡಿಯಲ್ಲಿ ಹಿತ್ತಾಳೆ ಕಾರ್ಖಾನೆಯಿತ್ತೆಂಬುದಕ್ಕೆ ತಾಲೂಕು ಕಛೇರಿ ದಾಖಲೆ ತಿಳಿಸುತ್ತದೆ"[೫೫] ಕಂಚಿನ ದಿನನಿತ್ಯದ ವಸ್ತುಗಳಾದ ತಣಿಗೆ (ತಟ್ಟೆ), ತಂಬಿಗೆ, ಹಂಡೆ, ಗುಂಡಿ ಮೊದಲಾದ ವಸ್ತುಗಳ ದುರಸ್ತಿಕಾರ್ಯ ಮತ್ತು ಕಲಾಯಿ ಮಾಡುವ ವೃತ್ತಿಯನ್ನು ಸಹ ಮಾಡುತ್ತಾರೆ. ರಾಮನಗರ ತಾಲೂಕಿನ ಶಾಸನವೊಂದರಲ್ಲಿ 'ಕಂಚುಗಾರ್ರಹಳ್ಳಿ' ಎಂದೇ ಉಲ್ಲೇಖಿಸುತ್ತದೆ. ಈ ವೃತ್ತಿಯನ್ನು ನಿರ್ವಹಿಸುತ್ತಿದ್ದ ಸಮುದಾಯವನ್ನು ಹೆಸರಿಸುವ ಸ್ಥಳನಾಮಗಳು ವುಸೆ ಈ ಪರಿಸರದಲ್ಲಿವೆ.

(ರಾ) ಕಂಚುಗಾರನಹಳ್ಳಿ   ಕಂಚಗಾರನಹಳ್ಳಿಕಾವಲು   ಕೇತಹಳ್ಳಿಕಂಚಗಾರನಹಳ್ಳಿ

(ಕ) ಕಂಚನಹಳ್ಳಿ

ಕನಕಪುರ ತಾಲೂಕಿನ ಕಂಚುಗಾರನಹಳ್ಳಿ>ಕಂಚಗಾರನಹಳ್ಳಿ>ಕಂಚನಹಳ್ಳಿ, ಎಂದಾಗಿರುವ ಸಾಧ್ಯತೆ ಇರಬಹುದು.

ಹಿಂದೆ ಈ ಗ್ರಾಮಗಳಲ್ಲಿ ಜನಸಂಖ್ಯೆಯ ಬಾಹುಳ್ಯದಿಂದ ಕಂಚುಗಾರರೇ ನೆಲೆಸಿರಬೇಕು. ಹಾಗೂ ಕಂಚುಲೋಹ ವೃತ್ತಿಯನ್ನು ಮಾಡುವವರೇ ನೆಲೆಸಿರುವ ನೆಲೆಯಾದ್ದರಿಂದ ವೃತ್ತಿವಾಚಕ 'ಕಂಚುಗಾರ' ನಿರ್ದಿಷ್ಟ ಭಾಗದಲ್ಲಿ ಬಂದಿದೆ.

೩. ಹೊನ್ನಿಗನಹಳ್ಳಿ

ಹೊನ್ನಿಗನೆಂದರೆ ಚಿನ್ನದ ಕೆಲಸವನ್ನು ಮಾಡುವವನು. "ಅಕ್ಕಸಾಲಿಗಳು ಚಿನ್ನದ ಕೆಲಸವನ್ನು ಮಾಡುವವರು; ಅಪರೂಪವಾಗಿ ಶಾಸನಗಳನ್ನೂ ಕೆತ್ತುತ್ತಿದ್ದುದ್ದೂ ಉಂಟು. ರಾಜರು ಇವರನ್ನು ಕಮ್ಮಟಗಳಲ್ಲಿ ನಾಣ್ಯಗಳನ್ನು ತಯಾರಿಸಲು ನೇಮಿಸಿಕೊಳ್ಳುತ್ತಿದ್ದರು. ರಾಜರು ಇವರಿಗೆ ವಾರ್ಷಿಕ ವೇತನವನ್ನು ಕೊಡುತ್ತಿದ್ದಂತೆ ಒಂದು ಶಾಸನದಿಂದ ಊಹಿಸಬಹುದು"[೫೬] "ಗದ್ಯಾಣ, ಪಣ, ಹಾಗ ಎಂಬ ಚಿನ್ನದ ನಾಣ್ಯಗಳು; ಕಾಣೆ ತಾಮ್ರದ ನಾಣ್ಯಗಳು ಚಲಾವಣೆಯಲ್ಲಿದ್ದವು. ಇಂತಹ ನಾಣ್ಯಗಳನ್ನು ಅಕ್ಕಸಾಲಿಗರು ಮುದ್ರಿಸಿ ಖಜಾನೆಗೆ ಕೊಡುವ ವ್ಯವಸ್ಥೆ ಇತ್ತು"[೫೭] ಹೀಗೆ ಸುವರ್ಣ ನಾಣ್ಯ ತಯಾರಿಕೆಯಲ್ಲಿ ಇವರ ಪಾತ್ರವಿರುವುದನ್ನು ಒಪ್ಪಬಹುದು. ಕನ್ನಡ ನಾಡಿನಲ್ಲಿ ಕಂಡುಬರುವ ಹೊನ್ನೂರು, ಹೊನ್ನೂಕುಂಟೆಯಂತೆ ರಾಮನಗರ ಜಿಲ್ಲೆಯ ಪರಿಸರದಲ್ಲಿ

(ಕ-೨)   ಹೊನ್ನಿಗನಹಳ್ಳಿ

(ಮಾ)   ಹೊನ್ನಾಪುರ   ಹೊನ್ನಿಗನಹಳ್ಳಿ

ಈ ಸ್ಥಳನಾಮಗಳು, ಬಂಗಾರದ ಕೆಲಸವನ್ನು ಮಾಡುವ ವೃತ್ತಿಯವರ ನೆಲೆಗಳೇ ಆಗಿರುವ ಸಂಭವವಿದೆ.

೪. ಶಾನುಭೋಗನಹಳ್ಳಿ

ಸೇನಬೋವ, ಶಾನಭಾಗ, ಶ್ಯಾನುಭೋಗ, ಶಾನುಭೋಗ ಎಂಬ ಅರ್ಥಗಳಿವೆ. ಇವನು ಗ್ರಾಮದ ಅಧಿಕಾರಿಯಾಗಿದ್ದು, ಆಡಳಿತದ ಕೊನೆಯ ಘಟಕವಾದ 'ಗ್ರಾಮ'ದಲ್ಲಿ ವಾಸವಿರುತ್ತಿದ್ದನು. ಗ್ರಾಮದ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಬರೆಯುವವನಾಗಿದ್ದನು. ಭೂದಾಖಲೆಗಳನ್ನು ಪರಿಶೀಲನೆಮಾಡಿ ತೆರಿಗೆಗಳನ್ನು ಸಂಗ್ರಹಿಸುವ ಕರಣಿಕ ವೃತ್ತಿಯನ್ನು ಮಾಡುತ್ತಿದ್ದನು. ಕಂದಾಯ ವಸೂಲಿಯ ಜವಾಬ್ದಾರಿ ಗೌಡ, ಶಾನುಭೋಗ, ಕರಣಿಕ, ಮಣೆಗಾರ ಮುಂತಾದವರಿಗಿತ್ತು. ಕಂದಾಯ ನಿಗದಿ ಮತ್ತು ವಸೂಲಿಯಲ್ಲಿ ಸ್ಥಳೀಯ ಆಡಳಿತಗಾರರಾದ ಈ ಶಾನುಭೋಗರಿಗೆ ಹೆಚ್ಚಿನ ಅಧಿಕಾರವಿತ್ತು. ಭೂಕಂದಾಯದಂತಹ ಮಾಮೂಲಿ ಆದಾಯವಲ್ಲದೆ ಹಳ್ಳಿಯ ಹುಟ್ಟುತ, ತಪ್ಪು, ತವಡಿ, ದಂಡ, ಕಾಣಿಕೆ, ಕಂದಾಯ, ಗ್ರಾಮಸುಂಕ, ಬಿಡಗೆ (ಬೀಳ್ಕೊಡುಗೆ ಸುಂಕ) ಮೊದಲಾದ ಆದಾಯಗಳನ್ನು ಈ ಶಾನುಭೋಗರೆ ವಿಧಿಸಿ ವಸೂಲಿ ಮಾಡುವ ಅಧಿಕಾರವಿತ್ತು. ಗ್ರಾಮದ ಸಂಪೂರ್ಣ ಅಧಿಕಾರವನ್ನು ಹೊಂದಿದ ಇವನು ವಾಸ ಮಾಡುತ್ತಿದ್ದ ನೆಲೆಯೇ ಈ ಗ್ರಾಮವಾಗಿರುತ್ತಿತ್ತು.

ರಾಮನಗರ ಜಿಲ್ಲೆಯ ಪರಿಸರದಲ್ಲಿ ಇಂಥ ಸ್ಥಳನಾಮ, **ಮಾಗಡಿ, ರಾಮನಗರ, ಚನ್ನಪಟ್ಟಣ**ದಲ್ಲಿದೆ. ಶಾನುಭೋಗನಹಳ್ಳಿ-ಇದರ ವಾರ್ಗಿಕ 'ಹಳ್ಳಿ'ಯು ಶಾನುಭೋಗನ ಆಡಳಿತದ ಪರಿಧಿ (ಎಲ್ಲೆ)ಯನ್ನು ಪ್ರತಿನಿಧಿಸುತ್ತದೆ.

೫. ಗೆಜ್ಜೆಗಾರಕುಪ್ಪೆ

ಮಾಗಡಿ ತಾಲೂಕಿನ ಹೊಯ್ಸಳ ಶಾಸನವೊಂದರಲ್ಲಿ 'ಗಜಗಾರಕುಪ್ಪೆ'[೫೮] ಎಂದು ಉಲ್ಲೇಖಿತಗೊಂಡಿದೆ. ಇದಕ್ಕೆ ಪ್ರಾಚೀನ ಗಜಪುರಿ ಪಟ್ಟಣವಾಗಿತ್ತೆಂಬ ಸ್ಥಳಪುರಾಣವಿದೆ. ಹಾಳಾದ ಪಟ್ಟಣದ ಜಾಗದಲ್ಲಿ ಬೂದಿಮಣ್ಣಿನ ದಿಬ್ಬವನ್ನು ಗುರುತಿಸಬಹುದಾಗಿದೆ. ಇದರಿಂದಾಗಿ ಹೊಯ್ಸಳರ ಕಾಲಕ್ಕೂ ಮುನ್ನ ಈ ಊರಿನಲ್ಲಿ ಗಜಗಾರ ವೃತ್ತಿಯವರಿರಬಹುದು. ಗಂಗರು ಆನೆಗಳ ವಿಷಯದಲ್ಲಿ ಹೊಯ್ಸಳರಿಗಿಂತ ಹೆಚ್ಚು ಆಸಕ್ತಿ ಹೊಂದಿದ್ದರು. ಕುಣಿಗಲ್ ನಾಡನ್ನ ಆಳಿದ ಗಂಗರ ಸೈಗೊಟ್ಟ ಶಿವಮಾರ ಗಜವಿದ್ಯೆಯಲ್ಲಿ ಪಾಂಡಿತ್ಯಗಳಿಸಿ 'ಗಜಾಷ್ಟಕ'ವೆಂಬ ಕೃತಿಯನ್ನು ರಚಿಸಿದ್ದಾನೆ.

ಕ್ರಿ.ಶ.೧೩೧೯ರಲ್ಲಿ ಮುಮ್ಮಡಿ ಬಲ್ಲಾಳರಾಯ ಕೀರ್ತಿಯರಸ ಮತ್ತು ವಿದ್ಯಾರಾಜಭಟ ಎಂಬ ಇಬ್ಬರು ಸಹೋದರರಿಗೆ ಮಳವಳ್ಳಿ ತಾಲೂಕಿನ ಅರುಹನಹಳ್ಳಿಯನ್ನು[೫೯] ಮಾಗಡಿ ತಾಲೂಕಿನ ಗಜಗಾರಕುಪ್ಪೆಯನ್ನು ತ್ಯಾಗದ ಕೊಡುಗೆಯಾಗಿ ನೀಡಲಾಗಿದೆ. ಈ ಶಾಸನದಲ್ಲಿ 'ಆನೆ ತಾ ಪಡೆದು ಬಲ್ಲಾಳ

ರಾಯ' ಎಂದಿದ್ದು ವಿನೂತನವಾಗಿ ಪಳಗಿಸಿದ ಗಜವನ್ನೇನಾದರೂ ಬಲ್ಲಾಳರಾಯನಿಗೆ ಕೊಟ್ಟಿರಬಹುದು. ಗಜಗಳನ್ನು ಪಳಗಿಸುವ ಕಸುಬುದಾರರು 'ಕೀರ್ತಿಯರಸ ಮತ್ತು ಗಜಗಾರರಾಗಿ ವಿದ್ಯಾರಾಜಭಟರಾಗಿರುವ ಸಾಧ್ಯತೆ ಇದೆ. ಗಜದಳ ಯುದ್ಧರಂಗದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದರಿಂದ ಸೈನ್ಯದಲ್ಲಿ ಆನೆಗಳಿಗೆ ತುಂಬಾ ಪ್ರಮುಖ ಸ್ಥಾನವಿತ್ತು. ಅದರ ಬಲ ಮತ್ತು ಗಾತ್ರದ ಹಿನ್ನೆಲೆಯಲ್ಲಿ ಸೈನ್ಯಕ್ಕೆ ಅತಿ ಅವಶ್ಯಕವಾದುದಾಗಿತ್ತು.

ಆನೆ ಪ್ರಾಣಿಗಳೆಲ್ಲೆಲ್ಲ ಪ್ರತಿಷ್ಠಿತವಾದ ಪ್ರಾಣಿಯಾದ್ದರಿಂದ ಗಂಗ ವಂಶವು ಆನೆಯನ್ನು ತನ್ನ ರಾಜಮುದ್ರೆಯಲ್ಲಿ ಬಳಸಿಕೊಂಡಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. "ಪಟ್ಟಣದ ಹೊರಭಾಗದಲ್ಲಿದ್ದ 'ವೈಹಾಳಿಯ ಬಯಲಿ'ನಲ್ಲಿ (ಸಂ.ವಾಹ್ಯಾಳಿ-ಕುದುರೆಗಳ ಸಾಲು ಅಥವಾ ಮೆರವಣಿಗೆ) ಕುದುರೆಗಳಿಗೆ ಮತ್ತು ಆನೆಗಳಿಗೆ ಶಿಕ್ಷಣವನ್ನು ಕೊಡುತ್ತಿದ್ದ ವಿಷಯವು ಹರಿಹರನ ಗಿರಿಜಾಕಲ್ಯಾಣದಲ್ಲಿ ಬಂದಿದೆ. ರಾಜ್ಯಾಡಳಿತದಲ್ಲಿ ಆನೆಗಳಿಗಾಗಿಯೇ ಪ್ರತ್ಯೇಕವಾದ ಶಾಖೆಯಿದ್ದಿತು. ಅದರ ಪ್ರಧಾನಾಧಿಕಾರಿಯ ಕರ್ತವ್ಯಗಳನ್ನು ಅರ್ಥಶಾಸ್ತ್ರವು ಒಂದು ಇಡೀ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಿದೆ. ಈ ಮುಖ್ಯಾಧಿಕಾರಿಯನ್ನೇ ಕನ್ನಡ ಶಾಸನಗಳು "ಗಜ ಸಾಹಣಿ" ಎಂದು ಕರೆಯುವಂತೆ ಕಾಣುತ್ತದೆ. (ಸಾಹಣಿ, ಮೇಲ್ವಿಚಾರಕ) ಅದೇ ಅರ್ಥಶಾಸ್ತ್ರವು ಗಜವೈದ್ಯರನ್ನು ಹೆಸರಿಸುತ್ತದೆ"[೬೦]. ಸೈನಿಕರನ್ನು ಕೊಲ್ಲುವ ವಧಕರ್ಮವನ್ನು ಆನೆಗೆ ಕಲಿಸುವುದು ಸಾಮಾನ್ಯವಾಗಿತ್ತು. ಗಜ ಶಿಕ್ಷಣಕ್ಕೆ ಪ್ರಾಮುಖ್ಯತೆ ಇದ್ದು ಆನೆಗಳನ್ನು ಹಿಡಿದು ಪಳಗಿಸಿ ಸೈನ್ಯಕ್ಕೆ ಬೇಕಾದ ಗಜಗಳನ್ನು ಪೂರೈಸುತ್ತಿರಬೇಕು. ಆದ್ದರಿಂದ ಕೀರ್ತಿಯರಸ ಮತ್ತು ವಿದ್ಯಾರಾಜಭಟರಿಗೆ ಗ್ರಾಮಗಳನ್ನು ಶಾಶ್ವತವಾಗಿ ನೀಡಿರುವ ವಿವರ ದೊರಕುತ್ತವೆ. ದಟ್ಟವಾದ ಅರಣ್ಯಕ್ಕೆ ಹೆಸರಾದ ಮಾಗಡಿ ತಾಲೂಕು ಗಜಶಿಕ್ಷಣ ತರಬೇತಿಗೆ ವಿಫುಲ ಅವಕಾಶಗಳಿದ್ದವು. ಈ ಹಿನ್ನೆಲೆಯಲ್ಲಿ ಗಜಗಾರ ಎಂಬುದು ಒಂದು ವೃತ್ತಿಯಾಗಿರಬಹುದು. ಮಾಗಡಿ ತಾಲೂಕಿನ ಗಜಗಾರಕುಪ್ಪೆ ಮತ್ತು ಮಳವಳ್ಳಿ ತಾಲೂಕಿನ ಅರುಹನಹಳ್ಳಿಯಲ್ಲಿ ವಿದ್ಯಾರಾಜಭಟ ವಂಶಸ್ಥರಿದ್ದು ಈಗಲೂ ಈ ಶಾಸನಗಳಿಗೆ ಆ ವಂಶಸ್ಥರಿಂದ ಪೂಜೆ ನಡೆಯುತ್ತಿದೆ. ಗಜಗಾರ ವೃತ್ತಿಯನ್ನು ಹೇಳುವ ಗಜಗಾರಕುಪ್ಪೆ ಈಗ ಗೆಜ್ಜೆಗಾರಕುಪ್ಪೆ ಎಂದು ಕರೆಯಲ್ಪಡುತ್ತಿದೆ.

೬. ಕೋಟಗಾರನಹಳ್ಳಿ

ಕೋಟಗಾಱ, ಕೊಟ್ಟಾಗಾರ, ಕೊಟಗಾರ ಎಂದರೆ ಕೋಟೆಯ ಕಾವಲಿನವನು, ಕೋಟೆಯ ರಕ್ಷಣೆಯನ್ನು ಮಾಡುವವನು. ದುರ್ಗಪಾಲಕ ವೃತ್ತಿಯನ್ನು ಅವಲಂಭಿಸಿರುವವರು ಎಂದರ್ಥ. ಕೋಟೆಯನ್ನು ರಕ್ಷಿಸುವವರ ವೀರತನವನ್ನು, ಕೋಟೆಕಾಳಗವನ್ನು ವರ್ಣಿಸುವ ವಿವರ ಜನ್ನನ ಅನಂತನಾಥ ಪುರಾಣದಲ್ಲಿ ದೊರೆಯುತ್ತದೆ. ಹೊರಗಿನಿಂದ ಕೋಟೆಗೆ ಲಗ್ಗೆ ಹತ್ತುವ ಮೊದಲು ಕೋಟೆಯ ನೀರಕಂಡಿ, ಕುದುರೆಗಂಡಿ ಮುಂತಾದ ಪ್ರವೇಶ ಸ್ಥಾನಗಳನ್ನು, ದುರ್ಬಲ ಸ್ಥಾನಗಳನ್ನು ಪರೀಕ್ಷಿಸುತ್ತಿದ್ದರು. ಕೋಟೆಯ ಒಳಭಾಗದಲ್ಲಿ ಕೋಟೆಯನ್ನು ರಕ್ಷಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಕೋಟೆಯ ಗೋಡೆಯ ಮೇಲ್ಭಾಗದ ಕೊತ್ತಳ, ಅಟ್ಟಣೆ ಮುಂತಾದುವನ್ನು ಪೂಜಿಸಿ ಅಲ್ಲಿ ಧ್ವಜಗಳನ್ನು ಎತ್ತಿ ನಿಲ್ಲಿಸುತ್ತಿದ್ದರು. ಕೋಟೆಯ ಗೋಡೆಯ

ಮೇಲೆ ಬೇಹಿನವರು, ಎಚ್ಚರದಿಂದ ಶತ್ರುಗಳ ಸುಳುಹನ್ನು ಕಾಯುತ್ತಿದ್ದರು. 'ಸಾರಮಾರಿ' ಮುಂತಾದ ಆಯುಧಗಳನ್ನು ಸಿದ್ಧಪಡಿಸಿಕೊಂಡಿರುತ್ತಿದ್ದರು. ಶತ್ರುಗಳ ಮೇಲೆ ಮೇಲಿನಿಂದ ಸುರಿಯಲು ಹಾವುಗಳು, ಕಾಸಿದ ಮರಳು, ಹಿಟ್ಟಿನ ಸರಿ ಮುಂತಾದುವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಕೋಟೆಯ ಹೊರಭಾಗದಲ್ಲಿ ಲಗ್ಗೆ ಹತ್ತುವವರು ಏಣಿ, ಸಾರ್ಚುಂಡೊಲೆ, ವೀರಸೇತು, ನಡೆಸಾರ, ಬದ್ಧರ, ಗಗ್ಗೆ, ಡೆಂಕಣಿಗುಮ್ಮ, ಪಡಿಗೋಂಟೆ ಮುಂತಾದ 'ಬಹು ಕೋಟಾಯಂತ್ರ ಸಾಮಾಗ್ರಿ'ಗಳ ಸಮೇತ ಕೋಟೆಯನ್ನು ಮುತ್ತುತ್ತಿದ್ದರು. ಮೇಲಿನಿಂದ ಸುಡುವ ಎಣ್ಣೆ, ಕಾಸಿದ ಮರಳು ಮುಂತಾದುವನ್ನು ಸುರಿಯುತ್ತಿದ್ದರು. ಅದರ ಜೊತೆಗೆ ಬಾಣಗಳು, ಕಲ್ಲುಗಳ ಸುರಿಮಳೆಯಾಗುತ್ತಿತ್ತು. ಇಷ್ಟನ್ನೂ ಸೈರಿಸಿಕೊಂಡು ಮೇಲೇರಿದ ಭಟರಿಗೂ, ಮೇಲಿದ್ದ ಭಟರಿಗೂ ಶಸ್ತ್ರಾಶಸ್ತ್ರಿ, ಖಡ್ಗಾಖಡ್ಗಿ, ದಂಡಾದಂಡಿ, ಕಚಾಕಚಿ (=ಕೇಶಾಕೇಶಿ, ಕಚ-ಕೇಶ) ಯುದ್ಧಗಳು ನಡೆಯುತ್ತಿದ್ದವು. ದುರ್ಗಗಳಿಗೆ ಮದ್ದಾನೆಗಳನ್ನು ನುಗ್ಗಿಸಿ ಬಾಗಿಲುಗಳನ್ನು ಭೇದಿಸುತ್ತಿದ್ದರು. ಈ ರೀತಿಯಾಗಿ ಕೋಟಗಾರರು ಕೋಟೆಯನ್ನು ರಕ್ಷಿಸುತ್ತಿದ್ದರು.

ಇಂಥ ಕೋಟೆಕಾಳಗದಲ್ಲಿ ಮಡಿದ ಕೋಟೆಗಾರರ, ವೀರರ ಹೆಸರನ್ನು ನೋಡಬಹುದು. "ಪೋಟಲ್ ಚೋರನೆಂಬ ಮಹಾ ಸಾಮಂತನು ಕೋಟೆಯನ್ನು ಹಿಡಿದಾಗ ಶಿಂಗವೆಣ್ಣ ಮುಂತಾದವರು ಮಡಿದ ವಿಷಯವು ಶಾಸನವೊಂದರಲ್ಲಿದೆ"[೬೧] "ಹೊಯ್ಸಳ ದೇವನ ಅಪ್ಪಣೆಯ ಪ್ರಕಾರ 'ಗಾಮುಂಡ' ಎಂಬಾತನು ಯಾವುದೋ ಕೋಟೆಯನ್ನು ಸುಟ್ಟು ಅಲ್ಲಿ ಅನೇಕರನ್ನು ಸಂಹರಿಸಿ ತಾನೂ ಮಡಿದ ವಿಷಯವು ೧೧೨೪ರ ಶಾಸನದಲ್ಲಿದೆ"[೬೨] ಅಲ್ಲದೆ ಕೋಟೆಯ ಮೇಲಿಂದ ಶತ್ರುಗಳ ಚಲನವಲನವನ್ನು ಗುರುತಿಸಿ, ತನ್ನ ಸೈನ್ಯಕ್ಕೆ ಶತ್ರುಗಳ ಆಕ್ರಮಣವನ್ನು ಸೂಚಿಸುವ ಕೆಲಸವನ್ನು ಸಹ ನಿರ್ವಹಿಸುತ್ತಿದ್ದವರು. 'ಇಟ್ಟ ಕಬ್ಬುವ ಕೋಲುಗಳ ಪಿಡಿದಟ್ಟಣೆಸ ಬಗ ಕೊಟ್ಟೆಗಾರರ ನೆಟ್ಟುನೇಕಾಂಗಿಗಳ ನೆಲ್ಲರನೊಟ್ಟಯಿಸಿ ನಡೆದು" ಎಂದು ಬಸವಪುರಾಣದಲ್ಲಿ ಕೋಟಗಾರರ ವಿವರ ಸಿಗುತ್ತದೆ. ಒನಕೆ ಓಬವ್ವನ ಗಂಡನ ವೃತ್ತಿಯೂ ಕೂಡ' ಕೋಟೆಯ ಕಾವಲಿನ ವೃತ್ತಿಯನ್ನು ಮಾಡುತ್ತಿದುದ್ದು ಇತಿಹಾಸದಿಂದ ತಿಳಿದು ಬರುತ್ತದೆ. ಕೋಟೆ ರಕ್ಷಿಸಿ, ತನ್ನ ರಾಜ್ಯ ಮತ್ತು ಜನರ ಪ್ರಾಣವನ್ನು ಕಾಪಾಡುತ್ತಿದ್ದವರ ಹೆಸರಿನಲ್ಲಿಯೂ ನೆಲೆಗಳಿರುವುದು ಜಿಲ್ಲೆಯ ಪರಿಸರದಲ್ಲಿ ಕಂಡುಬರುತ್ತವೆ.

(ಕ) ಕೊಟ್ಟಗಾಳು

(ಮಾ) ಕೋಟಗಾರನಹಳ್ಳಿ

೨. ಬಂಟರ ಕುಪ್ಪೆ

ಪ್ರಾಚೀನ ಕಾಲದ ರಾಜವ್ಯವಸ್ಥೆಯಲ್ಲಿ ಸೈನ್ಯ ಮತ್ತು ಅದರ ವೀರ ಪರಂಪರೆಯನ್ನು ಹೇಳುವ "ಸೈನ್ಯಾತ್ ವಿನಾ ನೈವ ರಾಜ್ಯಂ ನ ಧನಂ ನಪರಾಕ್ರಮಃ" (ಸೈನ್ಯವಿಲ್ಲದೆ ರಾಜ್ಯವಿಲ್ಲ, ಧನವಿಲ್ಲ, ಪರಾಕ್ರಮ ವಿಲ್ಲ) ನಾಡೊಂದಕ್ಕೆ ಎಷ್ಟರಮಟ್ಟಿಗೆ ಅನ್ವಯಿಸುವುದೋ ಅಷ್ಟರ ಮಟ್ಟಿಗೆ ರಾಜ ಮತ್ತು ಅವನ ಸಾರ್ವಭೌಮತೆಗೆ ಅಷ್ಟೇ ಬಲಿಷ್ಠವಾದ ಸೈನ್ಯದ ಅಗತ್ಯತೆಯನ್ನು ಎತ್ತಿ ತೋರಿರುವ ಮಾತು ಪ್ರಚುರದಲ್ಲಿತ್ತು.

ನಮ್ಮ ಪ್ರಾಚೀನ ಕನ್ನಡ ಶಾಸನಗಳಲ್ಲಿ ದಾನ ಶಾಸನಗಳನ್ನು ಬಿಟ್ಟರೆ, ಉಳಿದವು ವೀರಶಾಸನಗಳು. ನಾಡ ರಕ್ಷಣೆಗಾಗಿ ಗೋವು, ಸ್ತ್ರೀ ಸಮಾಜದ ಸಂಪತ್ತು.... ಹೀಗೆ ಹತ್ತು ಹಲವು ರಕ್ಷಣೆಯ ಹೊಣೆಗಾರಿಕೆ ಸೈನ್ಯದ್ದಾಗಿರುತ್ತಿತ್ತು. ಹೀಗೆ ನಾಡಿಗಾಗಿ ಬಲಿದಾನ ಮಾಡಿದ ವೀರ ಯೋಧರ ಸ್ಮಾರಕವಾಗಿ ಕಂಡರಿಸುತ್ತಿದ್ದ ಶಾಸನಗಳೇ ವೀರಗಲ್ಲುಗಳಾಗಿವೆ.

ಅಂದಿನ ಕಾಲದ ಸೈನಿಕರು ಜೀವನ ಮೌಲ್ಯಗಳಾಗಿ 'ತ್ಯಾಗ' ಮತ್ತು 'ವೀರ'ತನವನ್ನು ಮೈಗೂಡಿಸಿಕೊಂಡಿದ್ದರು. ರಾಜನೊಬ್ಬನು ಯುದ್ಧಕ್ಕೆ ಸಿದ್ಧನಾದರೆ ಸಾಕು, ಅವನ ಉಪ್ಪನ್ನುಂಡು ಬದುಕಿದ ಸೈನಿಕರು ಯುದ್ಧಕ್ಕೆ ಸಿದ್ಧರಾಗುತ್ತಿದ್ದರು. ಯುದ್ಧದಲ್ಲಿ ಹೋರಾಡಿ ರಾಜನ ಉಪಕಾರವನ್ನು ತೀರಿಸುವುದು ತಮ್ಮ ಆದ್ಯ ಕರ್ತವ್ಯವೆಂದೇ ಭಾವಿಸಿದ್ದರು. ಇದನ್ನೇ ಕಾವ್ಯಗಳಲ್ಲಿ 'ಜೋಳದಪಾಳಿ' ಎಂದು ಕರೆಯಲಾಗಿದೆ. ಜೋಳದ ಪಾಳಿಗೆ ಕಟ್ಟು ಬಿದ್ದ ಸೈನಿಕ ತನ್ನ ರಾಜನಿಗೆ ಜಯ ಸಂಪಾದಿಸಿ ಕೊಡುವುದೆ ತನ್ನ ಕರ್ತವ್ಯ ಎಂದು ನಂಬಿದ್ದರು. "ಯುದ್ಧದಲ್ಲಿ ಗೆದ್ದರೆ ಇಹಲೋಕದಲ್ಲಿ, ಸತ್ತರೆ ಪರಲೋಕದಲ್ಲಿ ಸುಖಿಸಬಹುದು ಎಂಬುದೇ ಆ ನಂಬಿಕೆ. ಆ ನಂಬಿಕೆಯ ಪ್ರಕಾರ ರಣರಂಗದಲ್ಲಿ ಸತ್ತ ವೀರನಿಗಾಗಿ ದೇವಲೋಕದ ಕನ್ನೆಯರು ಕಾದುಕೊಂಡಿರುತ್ತಿದ್ದರಷ್ಟೇ ಅಲ್ಲ, ಅವನನ್ನು ಪಡೆಯಲು ಅವರಲ್ಲಿ ಪೈಪೋಟಿಯು ನಡೆಯುತ್ತಿತ್ತು. ಅವನನ್ನು ದೇವಾಂಗನೆಯರು ಸ್ವರ್ಗಕ್ಕೋ, ಶಿವನೋಲಗಕ್ಕೋ ಕೊಂಡೊಯ್ಯುತ್ತಾರೆ ಎಂದು ಜನರು ನಂಬಿದ್ದರು"[೬೩] ಕೇವಲ ಅಂದಿನ ಪ್ರಾಚೀನ ವೀರ ಸಮಾಜದಲ್ಲಿ ಅಷ್ಟೇ ಅಲ್ಲದೇ "ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾಂ ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ||" ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ ದೊರಕುವಳು, ಸತ್ತರೆ (ಸ್ವರ್ಗದಲ್ಲಿ) ಸುರಾಂಗನೆಯರು ದೊರಕುವರು, ದೇಹವು ಕ್ಷಣದಲ್ಲಿ ವಿಧ್ವಂಸವಾಗುವ ವಸ್ತುವಾದ್ದರಿಂದ ರಣರಂಗದಲ್ಲಿ ಮಡಿಯುವ ವಿಷಯದಲ್ಲಿ ಚಿಂತೆ ಏಕೆ? ಈ ಭಾವನೆಗಳಿಂದ ಉತ್ತೇಜನಗೊಂಡ ಅವರು ಧೈರ್ಯದಿಂದ ರಣರಂಗದಲ್ಲಿ ಮುನ್ನುಗ್ಗಿ ದೇಹವನ್ನು ಹುಲ್ಲಿಗಿಂತ ಕಡೆಯಾಗಿ ಎಣಿಸಿ ಹೋರಾಡಿ, ಗೆದ್ದು ಹಿಂದಕ್ಕೆ ಬರುತ್ತಿದ್ದರು ಅಥವಾ ಸೋತು ಯುದ್ಧರಂಗದಲ್ಲಿ ಒರಗುತ್ತಿದ್ದರು"[೬೪]. ಹೀಗಾಗಿ ಮರಣಭಯವಾಗಲೀ, ಪ್ರಾಣಭಯವಾಗಲೀ ಎಂದೂ ಕಾಡುತ್ತಿರಲಿಲ್ಲ. ಇಂತಹ ಸ್ವಾಮಿನಿಷ್ಠೆ ಮೌಲ್ಯಗಳು ಕರ್ನಾಟಕದ ವೀರಸೈನಿಕರಲ್ಲಿ ಇದ್ದುದ್ದರಿಂದಲೇ "ಬಂಗಾಳದ ದೊರೆಗಳು ಕರ್ನಾಟಕದ ವೀರರನ್ನು ಕರೆಸಿಕೊಳ್ಳುತ್ತಿದ್ದರಂತೆ"[೬೫]. ಇಂತಹವೀರ ಯೋಧರ, ಬಂಟರ ಅಧ್ಯಯನಕ್ಕೆ ಪ್ರೇರಣೆ ನೀಡಲು ಸ್ಥಳನಾಮಗಳು ರಾಮನಗರ ಜಿಲ್ಲೆಯ ಪರಿಸರದಲ್ಲಿ

(ಕ) ಬಂಟವಾಳ

(ಮಾ) ಬಂಟರಕುಪ್ಪೆ

ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಆಯುಧ ಜೀವಿಗಳ ಸಂಘದ ಮೂಲಕ ಈ ಸ್ಥಳನಾಮಗಳ ಅಧ್ಯಯನ ಸಾಧ್ಯವಾಗುತ್ತದೆ.

ಸೈನ್ಯದ ತರಬೇತಿಯನ್ನು ಪಡೆದು; ಸ್ವಸ್ಥಳದಲ್ಲಿ ಇನ್ನಿತರ ಉದ್ಯೋಗ ಮಾಡಿಕೊಂಡಿದ್ದು ಯುದ್ಧದ ಸಂದರ್ಭದಲ್ಲಿ ಕರೆ ಬಂದಾಗ ಅಳರಸರ ಸೇವೆಗೆ ಮುಂದಾಗುತ್ತಿದ್ದ ಆಯುಧ ಜೀವಿಗಳ ಸಂಘಗಳಿದ್ದುದನ್ನು

ಶಾಸನಗಳು ದೃಢಪಡಿಸುತ್ತವೆ. ಅಂದಿದ್ದ ಆಯುಧ ಜೀವಿಗಳ ಸಂಘಗಳೆಂದರೆ ೧. ಲೆಂಕ ಸಾಸಿರ್ವರು ೨. ಬಂಟಸಾಸಿರ್ವರು ೩. ಬಿಲ್ಲ ಸಾಸಿರ್ವರು

"ಸೈನಿಕ ಶಿಕ್ಷಣ ಪಡೆದು ತಮ್ಮ ತಮ್ಮ ಊರುಗಳಲ್ಲಿ ವಾಸಿಸಿಕೊಂಡಿದ್ದು ಯುದ್ಧದ ಸಮಯದಲಿ ತಮ್ಮ ಆಳರಸ ಸೇವೆಯಲ್ಲಿ ಸೇರಿಕೊಂಡು, ಯುದ್ಧದಲ್ಲಿ ಕಾದಾಡುವ ಶೂರಯೋಧರಿಗೆ ಲೆಂಕರೆನ್ನುವರು"[೬೬] ಲೆಂಕರ ಪರಾಕ್ರಮ, ಸ್ವಾಮಿನಿಷ್ಠೆ, ತ್ಯಾಗವನ್ನು ಎಷ್ಟು ವರ್ಣಿಸಿದರು ಸಾಲದು, ಲೆಂಕರ ಸಹಜ ಗುಣಗಳನ್ನು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮೋರಿಗೆರೆ ಗ್ರಾಮದ ಶಾಸನವೊಂದು "ನುಡಿವುದು ನನ್ನಿ, ಮಾಡುವುದು ಕೀರ್ತನಂ, ಈವುದೇ ಸದ್ವಿನೋದಂ, ಒಯ್ಯನೆ ಮೊರೆವೊಕ್ಕರನು ಕಾವ ಗುಣಂ ಬ್ಯಸನಂ" ಎಂದಿದೆ.[೬೭] ಇಂಥ ಸ್ವಾಮಿನಿಷ್ಠಲೆಂಕರರು, ತಮ್ಮ ಸ್ವಾಮಿ ಯುದ್ಧದಲ್ಲಿ ಮಡಿದಾಗ ತಾವೂ ಪ್ರಾಣ ತ್ಯಾಗ ಮಾಡುತ್ತಿದ್ದರು. "ವೀರ ಬಲ್ಲಾಳನ ಸಾವಿನ ನಂತರ ಕುವರ ಲಕ್ಷ್ಮನೂ, ಅವನ ಹೆಂಡತಿಯೂ ಪ್ರಾಣ ತ್ಯಾಗ ಮಾಡುತ್ತಾರೆ; ಆಗ ಒಂದು ಸಾವಿರ ವೀರರೂ ಪ್ರಾಣತ್ಯಾಗವನ್ನು ತ್ಯಜಿಸುತ್ತಾರೆ. ಇವರನ್ನು ಶಾಸನವು 'ಲೆಂಕ'ರೆಂದು ಕರೆದಿದೆ. ಕ್ರಿ.ಶ.೧೨೫೭ರ ಶಾಸನದಲ್ಲಿಯೂ, ಕ್ರಿ.ಶ.೧೯೨ರ ಶಾಸನದಲ್ಲಿಯೂ ಬೇರೆ ಬೇರೆ ಹೊಯ್ಸಳ ದೊರೆಗಳು ಮಡಿದಾಗ ಅವರ ಜೊತೆಯಲ್ಲಿ ಅನೇಕ ಲೆಂಕರೂ, ಲೆಂಕಿಯರೂ, 'ಗಜಮಸ್ತಕ'ದಲ್ಲಿ ಅನೇಕ ಬಾರಿ ಗರುಡನಪ್ಪಿ 'ಬಾಸೆಯಿಂ ಪೂರಯ್ಸಿದ' ಎಂದರೆ, ಮಡಿದ ವಿಷಯವಿದೆ"[೬೮]

ಭಟ-ಸಂಸ್ಕೃತ ಶಬ್ದದ ತದ್ಭವ ರೂಪ ಬಂಟ. ಲೆಂಕ ಸಾಸಿರ್ವರು ಸಲ್ಲಿಸುತ್ತಿದ್ದ ಸೇವೆಯ ಬಗೆಯಂತೆ ಬಂಟ ಸಾಸಿರ್ವರದೂ ಆಗಿತ್ತು.

ದೇಶ ಸಂರಕ್ಷಣೆಯ ಜೊತೆಗೆ ಊರ ಸಂರಕ್ಷಣೆಯ ಹೊಣೆಯೂ ಇವರದಾಗಿರುತ್ತಿತ್ತು. ಬಂಟ ಸಾಸಿರ್ವರ ಸೇವೆಗಾಗಿ ಗ್ರಾಮನಿವಾಸಿಗಳಿಂದ ಗ್ರಾಮಾಧಿಕಾರಿಗಳು ವಂತಿಕೆಯನ್ನು ಸಂಗ್ರಹಿಸುತ್ತಿದ್ದರು. ಈ ವಂತಿಕೆಗೆ 'ಬಂಟವಣ' ಎಂದು ಕರೆಯಲಾಗುತ್ತಿತ್ತು. ಸಂಗ್ರಹಿಸಿದ ಬಂಟವಣವನ್ನು ಬಂಟಸಾಸಿರ್ವರ ಸಂಘಕ್ಕೆ ಜಮೆ ಮಾಡಲಾಗುತ್ತಿತ್ತು. ಸಂಘವು ತನ್ನ ಎಲ್ಲ ಬಂಟ ಸದಸ್ಯರಿಗೆ ಅವರವರ ಯೋಗ್ಯತಾನುಸಾರವಾಗಿ, ಅವಶ್ಯಕತೆಗನುಗುಣವಾಗಿ ಹಣವನ್ನು ವಿತರಿಸುತ್ತಿತ್ತು.

"ಗದಗ ತಾಲೂಕಿನ ಸೊರಟೂರು ಶಾಸನದಲ್ಲಿ ಮತ್ತು ಹಾನಗಲ್ಲ ತಾಲೂಕಿನ ತಿಳವಳ್ಳಿ ಗ್ರಾಮದ ವೀರಗಲ್ಲಿನಲ್ಲಿ ಬಂಟ ಸಾಸಿರ್ವರು ಗ್ರಾಮ ದೇವತೆಗೆ ಬಿಟ್ಟುಕೊಟ್ಟ ಬಂಟವಣ ಮತ್ತು ಸತ್ತವೀರ ಯೋಧರ ಮಕ್ಕಳಿಗೆ ಗದ್ದೆಯನ್ನು ಕೊಂಡುಕೊಟ್ಟ ಉಲ್ಲೇಖಗಳಿವೆ"[೬೯]. ಇಂಥ ಬಂಟರು ಅಥವಾ ಬಂಟ ಸಾಸಿರ್ವರ ಸಂಘ ರಾಮನಗರ ಜಿಲ್ಲೆಯ ಪರಿಸರದಲ್ಲಿ ಕ್ರಿಯಾತ್ಮಕವಾಗಿತ್ತು ಎಂದು ಊಹಿಸಲು ಅವಕಾಶವಿದೆ. ಈ ಸಂಘದ ಸದಸ್ಯರ ಕುರುಹಾಗಿ ಗ್ರಾಮಗಳಿವೆ.

(ಮಾ) ಬಂಟರಕುಪ್ಪೆ

(ಕ) ಬಂಟಗಾಳು

ಬಿಲ್ಲ ಮೂನೂರ್ವರು ಬಿಲ್ಲು ವಿದ್ಯೆಯನ್ನು ಕಲಿತು, ಅದರಲ್ಲಿ ನೈಪುಣ್ಯತೆಯನ್ನು ಸಂಪಾದಿಸಿ ಅರಸನಿಂದ ಕರೆ ಬಂದಾಗ ಬಿಲ್ಲು ಬಾಣಗಳಿಂದ ಶಸ್ತ್ರ ಸಜ್ಜಿತರಾಗಿ ಯುದ್ಧದಲ್ಲಿ ಭಾಗಿಯಾಗುತ್ತಿದ್ದರು.

ಹೀಗೆ ಬಿಲ್ಲು ಬಾಣಗಳ ಮೂಲಕ ಕಾದಾಡುತ್ತಿದ್ದ ಬಿಲ್ಲಾಳುಗಳ ಸಂಘವೇ ಬಿಲ್ಲ ಮೂನೂರ್ವರು. ಇವರ ಸೇವೆಯೂ ಲೆಂಕರು ಮತ್ತು ಬಂಟರಂತೆ ಭಿನ್ನವಾಗಿರಲಿಲ್ಲ.

"ಗದಗ ಕಾಲೂಕಿನ ಹೊಸೂರು, ಧಾರವಾಡ ತಾಲೂಕಿನ ಮನಗಂಡಿ, ಬಾದಾಮಿ ತಾಲೂಕಿನ ಎಂಡಿಗೇರಿ, ಸಾಗರ ತಾಲೂಕಿನ ನಾಡ ಮಂಚಸಾಲೆ ಮುಂತಾದ ಶಾಸನಗಳಲ್ಲಿ ಬಿಲ್ಲ ಮುನೂರ್ವರ ಬಗೆಗೆ ಮತ್ತು ಅವರ ಆರಾಧ್ಯ ದೈವವಾದ ಬಿಲ್ಲೇಶ್ವರ ದೇವರ ಬಗೆಗೆ ಉಲ್ಲೇಖಗಳಿವೆ"[೨೦] ರಾಮನಗರ ತಾಲೂಕಿನ 'ಬಿಲ್ಲ ಕೆಂಪನಹಳ್ಳಿ'ಯ ಕೆಂಪನು ಬಿಲ್ಲಮುನೂರ್ವರ್ ಸಂಘದ ಸದಸ್ಯನಾಗಿರುವ ಸಂಭವವಿದೆ. ಹೀಗೆ ಜಿಲ್ಲೆಯಲ್ಲಿ ಪ್ರಾಚೀನ ಸಮಾಜದಲ್ಲಿ ಬಂಟರು ಯಾರು? ಯಾವ ರಾಜನ ಯೋಧನಾಗಿದ್ದ? ಅವನ ಕಾಲವಾದರೂ ಯಾವುದು? ಅವನ ವಂಶಜರೇನಾದರೂ ಈ ಪರಿಸರದಲ್ಲಿದ್ದಾರೆಯೇ ಮೊದಲಾದ ಪ್ರಶ್ನೆಗಳಿಗೆ ಉತ್ತರ ಹುಡುಕುವಲ್ಲಿ ಪ್ರಯತ್ನಿಸಿದ್ದೇ ಆದರೆ ಅದೊಂದು ಹೊಸ ಸಂಶೋಧನೆಗೆ ಹಾದಿ ಮಾಡಿಕೊಟ್ಟಂತಾಗುತ್ತದೆ.

೮. ಬಂಡಿಗನಹಳ್ಳಿ

ಕನಕಪುರ ತಾಲೂಕಿನ ಗ್ರಾಮವಾದ ಇದು ಶಾಸನವೊಂದರಲ್ಲಿ 'ಬಂಡಿಗಾನಹಳ್ಳಿ' ಎಂದು ಉಲ್ಲೇಖಗೊಂಡಿದೆ. ಬಂಡಿಗಾರ, ಭಂಡಿಗಾರ, ಗಾಡಿಕಾರ, ಸಾರಥಿ ಎಂಬ ಹೆಸರುಗಳಿವೆ. ಪ್ರಾಚೀನ ಭರತ ಖಂಡದ ಸೇನೆಯಲ್ಲಿ ರಥ, ಗಜ, ಅಶ್ವ, ಪದಾತಿ ಇವನ್ನು ಚತುರಂಗ ಬಲವೆಂದು ಕರೆಯುತ್ತಿದ್ದರು. ಚತುರಂಗ ಸೇನೆಯೇ ಅತ್ಯುತ್ತಮವಾದುದು ಎಂಬುದನ್ನು ನೀತಿಶಾಸ್ತ್ರ, ಅಗ್ನಿಪುರಾಣದಲ್ಲಿ ಹೇಳಿದೆ. ಆದರೆ "ಕ್ರಿ.ಶ.ದ ಆರಂಭದಿಂದೀಚೆಗೆ ಯುದ್ಧಗಳಲ್ಲಿ ರಥಗಳ ಬಳಕೆಯು ತಪ್ಪಿತು. ಗುಪ್ತರ ಕಾಲಕ್ಕೆ ಅವು ಕೇವಲ ವಸ್ತುಗಳನ್ನು ಸಾಗಿಸಲು ಸಾಧನಗಳಾಗಿ ಪರಿಣಮಿಸಿದವು. ಕರ್ನಾಟಕವನ್ನಾಳಿದ ಪ್ರಮುಖ ರಾಜವಂಶಗಳ ವಶದಲ್ಲಿ ಈ ರಥಪಡೆಯು ಇದ್ದ ಉಲ್ಲೇಖಗಳು ಸಿಗುವುದಿಲ್ಲ. ಸೈನ್ಯವು ದಂಡೆತ್ತಿ ಹೋದ ಸಂದರ್ಭದಲ್ಲಿ ಶಿಬಿರಕ್ಕೆ ಸಾಮಾನುಗಳನ್ನು ಸಾಗಿಸಲು ಗಾಡಿಯನ್ನು ಬಳಸುತ್ತಿದ್ದ ವಿವರ ಸಿಗುತ್ತದೆ. ಹೀಗೆ ಬಂಡಿಯನ್ನು ಓಡಿಸುವವರ ವೃತ್ತಿಯನ್ನು ನಿರ್ವಹಿಸುವವರ ವಿವರ ಸ್ಥಳನಾಮದಲ್ಲಿ ಉಕ್ತವಾಗಿರುವುದು ವೃತ್ತಿಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದಂತಿದೆ. ಈ ವೃತ್ತಿಯ ಬಗೆಗೆ ಇನ್ನು ಹೆಚ್ಚಿನದಾದ ಸಂಶೋಧನೆಯನ್ನು ಅಪೇಕ್ಷಿಸುತ್ತದೆ ಎಂಬುದು ನನ್ನ ಭಾವನೆ. ಆದರೂ ಜಿಲ್ಲೆಯ ಪರಿಸರದಲ್ಲಿ ಹೇಳುವ ಗ್ರಾಮವೊಂದಿದೆ.

(ಕ) ಬಂಡಿಗನಹಳ್ಳಿ

೯. ಕೊಳ್ಳಿಗನಹಳ್ಳಿ

'ಕೊಳ್ಳಿ' ಎಂದರೆ ಉರಿಯುವ ಕಟ್ಟಿಗೆ ಎಂದರ್ಥ. ಪಂಜು, ದೀವಟಿಗೆ ಎಂಬರ್ಥವನ್ನು ಸಹ ಊಹಿಸಬಹುದು. ಪಂಜು, ದೀವಟಿಗೆಯನ್ನು ತಯಾರಿಸುವ ಹಾಗೂ ಅದನ್ನು ನಿರಂತರವಾಗಿ ಉರಿಸುವ ವೃತ್ತಿಯನ್ನು ಮಾಡುವವರಿರಬೇಕು. ಯುದ್ಧಕ್ಕೆ ಹೊರಡುವ ಸೈನ್ಯದಲ್ಲಿ ಎಲ್ಲ ಸಮುದಾಯದವರಲ್ಲದೆ, ವಿವಿಧ ಕಸುಬುದಾರರೂ ಇರುತ್ತಿದ್ದರು. "ನಂಜುಂಡ ಕವಿಯ ಪ್ರಕಾರ 'ಹೊಲೆಯರ ಹುಳ್ಳ, ಮಾದಿಗರ

ಹಂಪ, ಕಾಳಂಜಿಕಂಪ, ಅಕ್ಕಸಾಲೆಯ ಚಿಕ್ಕ, ಕೊಳ್ಳಿಯ ನಾಗ, ದೇವಿಶೆಟ್ಟಿಲಿಂಗ, ಹಡಪದ ಬಲ್ಲುಗ, ಗಿಂಡಿಯ ಲಕ್ಕ, ಒಕ್ಕಲಿಗರ ನಾಗಣ, ಭಂಡಾರಿ ಸಾವಣ್ಣ ಮುಂತಾದ ವೃತ್ತಿಯವರಿದ್ದರು"[೨೧] ಎನ್ನುವುದನ್ನು ಗಮನಿಸಿದಾಗ, ಸೈನ್ಯವು ರಾತ್ರಿಯಲ್ಲಿ ಬೀಡುಬಿಟ್ಟಾಗ ಬೆಳಕಿಗೆ ಕೊಳ್ಳಿಗ ವೃತ್ತಿಯನ್ನು ಮಾಡುವವರ ಪ್ರತ್ಯೇಕ ವೃತ್ತಿ ಸಮುದಾಯದವರು ಇರಬೇಕೆಂದು ಎನಿಸುತ್ತದೆ. ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗ ತನ್ನ ಪ್ರವಾಸಿ ಕಥನದಲ್ಲಿ ಮಹಾನವಮಿ ಹಬ್ಬದಲ್ಲಿ ನಡೆಯುವ ಉತ್ಸವಗಳನ್ನು ವರ್ಣಿಸುತ್ತಾ "ಸೂರ್ಯ ಕೆಳಗಿಳಿದ ತಕ್ಷಣ ಅನೇಕ ಪಂಜುಗಳನ್ನು ಮತ್ತು ಅರಿವೆಯಿಂದ ಮಾಡಿದ ದೊಡ್ಡ ಮಶಾಲುಗಳನ್ನು ಹೊತ್ತಿಸುತ್ತಾರೆ. ಇವುಗಳನ್ನು ಕಣದಸುತ್ತ ಯಾವ ರೀತಿ ಇಡಲಾಗುತ್ತದೆಂದರೆ ಅದೆಲ್ಲ ದಿನದಂತೆಯೇ ಬೆಳಕಾಗಿರುತ್ತದೆ. ಗೋಡೆಗಳ ಮೇಲೆ ಸಹ ಅವುಗಳನ್ನಿಡಲಾಗುತ್ತದೆ. ಕೋಟೆ ಗೋಡೆಯ ಕಂಡಿಗಳಲೆಲ್ಲ ಉರಿಯುವ ದೀಪಗಳನ್ನು ಇರಿಸುತ್ತಾರೆ. ಮತ್ತು ರಾಜ ಕೂಡುವ ಸ್ಥಳ ಪಂಜುಗಳಿಂದ ತುಂಬಿದೆ"[೨೨] ಹೀಗೆ ಇಡೀ ರಾತ್ರಿ ಕಾರ್ಯಕ್ರಮ ನಡೆಯುವವರೆಗೂ ಪಂಜುಗಳು ನಿರಂತರವಾಗಿ ಉರಿಯಲು ಅವುಗಳಿಗೆ ಎಣ್ಣೆಯನ್ನು ಹಾಕಲು ಅಷ್ಟೊಂದು ಕೊಳ್ಳಿ ಅಥವಾ ಪಂಜನ್ನು ತಯಾರಿಸುವ ಹಾಗೂ ವ್ಯವಸ್ಥಿತವಾಗಿ ನೋಡಿಕೊಳ್ಳುವ 'ಕೊಳ್ಳಿಗ' ವೃತ್ತಿಯನ್ನು ಮಾಡುವ ಪ್ರತ್ಯೇಕ ವೃತ್ತಿ ಸಮುದಾಯದವರಿರಬೇಕೆನಿಸುತ್ತದೆ. ಈ ವೃತ್ತಿಯವರ ನೆಲೆ ರಾಮನಗರ ಪರಿಸರದಲ್ಲಿತ್ತು.

(ಕ) ಕೊಳ್ಳಿಗನಹಳ್ಳಿ

೧೦. ದಣಾಯಕನಪುರ

'ದಣ್ಣಾಯಕ' ಎಂಬ ಹೆಸರೂ ಇದೆ. ಡಣ್ಣಾಯಕ ಎಂದರೆ ದಂಡನಾಯಕ ಅಥವಾ ಸೇನಾಪತಿ ಎಂಬರ್ಥವಿದೆ. ಪ್ರಾಂತೀಯ ಆಡಳಿತದ ಸೇನಾ ನಾಯಕರಾಗಿ ದಣ್ಣಾಯಕರನ್ನು ನೇಮಿಸಲಾಗುತ್ತಿತ್ತು. ದಣ್ಣಾಯಕ ರಾಜ ಪ್ರತಿನಿಧಿಯ ಅಧೀನಾಧಿಕಾರಿಯಾದ ಮಹಾಮಂಡಲೇಶ್ವರನ ಆಡಳಿತಕ್ಕೆ ಸಹಕರಿಸುವ ಕಾರ್ಯ ನಿರ್ವಹಿಸುತ್ತಿದ್ದರು. ದಣ್ಣಾಯಕರು ಸೈನಿಕ ಚಟುವಟಿಕೆ, ಆಕ್ರಮಣ ಹಾಗೂ ನಗರ ಮತ್ತಿತರ ರಕ್ಷಣೆಯನ್ನು ನಿರ್ವಹಿಸುವ ಮೇಲ್ವಿಚಾರಕ ವೃತ್ತಿಯನ್ನು ಮಾಡುತ್ತಿದ್ದರು. ಕೃಷ್ಣದೇವರಾಯನಿಗೆ ಗಂಗಾಜಲವನ್ನು ತರುತ್ತಿದ್ದ ಕೋನಪ್ಪನಾಯಕನೆಂಬುವನು ಮಾರೇನಹಳ್ಳಿಗೆ ದಣ್ಣಾಯಕಪುರವೆಂದು ಪುನರ್ ನಾಮಕರಣ ಮಾಡಿ ಕೃಷ್ಣದೇವರಾಯನ ಮಗ ತಿರುಮಲ ಮತ್ತು ಸಾಳ್ವತಿಮ್ಮನ ಹೆಸರಿನಲ್ಲಿ ಕಲ್ಲೂರಿನ ವರದರಾಜ ದೇವಾಲಯಕ್ಕೆ ದಾನ ಮಾಡಿದ್ದಾನೆ.[೨೩] ಇದು ದಣ್ಣಾಯಕ ಹುದ್ದೆಯ ವೃತ್ತಿಯ ಪ್ರಾಮುಖ್ಯತೆಯನ್ನು ತಿಳಿಸುವ ಮಹತ್ತರವಾದ ಉಲ್ಲೇಖವಾಗಿದೆ.

(ಮಾ) ದಣಾಯಕನಪುರ

೧೧. ಮಾವತೂರು

ಮಾವಂತ>ಮಾವತ>ಮಾವುತ ಎಂಬ ಅರ್ಥಗಳಿವೆ. ಆನೆಯನ್ನು ನಡೆಸುವವನು ಮಾವುತ. ಪ್ರಾಚೀನ ಕಾಲದಲ್ಲಿ ಗಜ ಸೈನ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ರಾಜರು ಕೊಟ್ಟಿರುವುದು ಅನೇಕ ಕಾವ್ಯ ಮತ್ತು ಶಾಸನಗಳಿಂದ

ತಿಳಿದುಬರುತ್ತದೆ. "ಬೇಗೂರಿನ ವೀರಗಲ್ಲಿರುವ ಚಿತ್ರದಲ್ಲಿ ಆನೆಯ ಕೊರಳ ಸುತ್ತ ಗಂಟೆಗಳ ಮಾಲಿಕೆಯಿದೆ. ಅದರ ಮೇಲೆ ಸವಾರನಲ್ಲದೆ ಇಬ್ಬರು ಯೋಧರು ಕುಳಿತಿದ್ದಾರೆ"[೨೪] ಇದರ ವಿವರಣೆ ನೋಡಿದರೆ ಮಾವುತನ ವೃತ್ತಿ ಕೇವಲ ಆನೆಯನ್ನು ನಡೆಸುವುದೇ ಹೊರತು ಯುದ್ಧವಲ್ಲ. ಮಾವುತನು ಆನೆಗೆ ತಾನು ಕೊಡುವ ಸಂಜ್ಞೆಯನ್ನು ಪಾಲಿಸುವಂತೆ ಹಾಗೂ ತನ್ನ ಆದೇಶಗಳನ್ನು ಪಾಲಿಸುವಂತೆ ಅವುಗಳಿಗೆ ತರಬೇತಿಯನ್ನು ಕೊಟ್ಟು ತನ್ನ ಹಿಡಿತದಲ್ಲಿಟ್ಟುಕೊಂಡಿರುತ್ತಾನೆ. ಆದ್ದರಿಂದ ಆನೆಯನ್ನು ನಡೆಸುವವರ ನೆಲೆ **ಈ ಕನಕಪುರ** ತಾಲೂಕಿನಲ್ಲಿ ಬರುವ **ಮಾವತೂರು** ಆಗಿರುವ ಸಾಧ್ಯತೆ ಇರಬಹುದು.

ಈ ಮೇಲಿನ ಸ್ಥಳನಾಮಗಳ ಮೂಲಕ ರಾಮನಗರ ಜಿಲ್ಲೆಯ ಪರಿಸರದಲ್ಲಿದ್ದ ಪ್ರಾಚೀನ ಮತ್ತು ಅರ್ವಾಚೀನ ಕಾಲದ ವೃತ್ತಿಯನ್ನವಲಂಬಿಸಿ ದುಡಿಯುತ್ತಿದ್ದ, ಕೆಲಸ ನಿರ್ವಹಿಸುತ್ತಿದ್ದ ಜನರ ಜೀವನವನ್ನು ತಿಳಿಯಲು ಸಾಧ್ಯವಾಗುತ್ತದೆ.

೬.೪. ವ್ಯಕ್ತಿನಾಮಾಧಾರಿತ ಸ್ಥಳನಾಮಗಳು

ಸ್ಥಳನಾಮಗಳಲ್ಲಿ ಕಂಡುಬರುವ ವ್ಯಕ್ತಿನಾಮಗಳ ಅಧ್ಯಯನ ಅತಿಮುಖ್ಯ ಎನಿಸುತ್ತದೆ. ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಮನುಷ್ಯ ತನ್ನದೇ ಆದ ಸಂಸ್ಕೃತಿಯನ್ನು ಹಾಗೂ ಆಲೋಚನಾ ವಿಧಾನವನ್ನು ಅನುಸರಿಸಿಕೊಂಡು ಬಂದಿದ್ದಾನೆ. ಅದೇ ರೀತಿ ಸ್ಥಿತ್ಯಂತರಗಳಿಗೂ ಒಳಗಾಗಿದ್ದಾನೆ. ಈ ಎಲ್ಲ ಅಂಶಗಳನ್ನು ಬಿಡಿಸಿ ನೋಡುವುದೇ ಈ ಅಧ್ಯಯನದ ಉದ್ದೇಶ.

ಮನುಷ್ಯ ಸಂಘಜೀವಿಯಾಗಿ ಒಟ್ಟೊಟ್ಟಿಗೆ ಬದುಕಲು ಪ್ರಾರಂಭಿಸಿದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯನ್ನು ಮತ್ತೊಬ್ಬನಿಂದ ಪ್ರತ್ಯೇಕಿಸಿ ಗುರುತಿಸಲು ತುಂಬಾ ಕಷ್ಟದಾಯಕವಾಗಿರಬೇಕೆನಿಸುತ್ತದೆ. ಅಂಥ ಸಂದರ್ಭದಲ್ಲಿ ಗುರುತಿಸುವ ಪ್ರಕ್ರಿಯೆಗಾಗಿ ವ್ಯಕ್ತಿನಾಮಕರಣ ಪ್ರಕ್ರಿಯೆ ಮೊದಲುಗೊಂಡಿರಬೇಕು ಎನಿಸುತ್ತದೆ. ಆಗ "ಜನರ ನಾಮಗಳು ಅವರು ವಾಸಿಸುವ ಭೌಗೋಳಿಕ ಪರಿಸ್ಥಿತಿ ಮತ್ತು ಆಯಾ ಭಾಷಿಕ ಸಮುದಾಯಗಳ ನಂಬಿಕೆ, ಆಚರಣೆ ಮತ್ತು ಸಂಪ್ರದಾಯ ಮುಂತಾದ ಅಂಶಗಳಿಂದ ನಿರ್ಧರಿತವಾಗಿರುತ್ತವೆ. ಹಾಗೆಯೇ ವ್ಯಕ್ತಿ ನಿರ್ವಹಿಸುವ ವೃತ್ತಿ, ಆಯಾ ಸಮುದಾಯದ, ಗ್ರಾಮದ ಚಾರಿತ್ರಿಕತೆ, ದೇವಾಲಯ, ನದಿ, ಬೆಟ್ಟ, ಅರಣ್ಯ, ಪ್ರವಾಹ, ಪ್ರಾಣಿ, ಪಕ್ಷಿ, ಋತುಮಾನ, ಪುರಾಣ, ದಂತಕಥೆ ಇತ್ಯಾದಿ ಅಂಶಗಳ ಪ್ರಭಾವದಿಂದ ಹುಟ್ಟಿವೆ"[೨೫] ಇಂಥ ಬಗೆಗಳಿಂದ ರೂಪುಗೊಂಡ ವ್ಯಕ್ತಿನಾಮಗಳು ಸ್ಥಳನಾಮ ನಿರ್ದೇಶನವನ್ನು ಮಾಡುವ ಹಂತಕ್ಕೆ ತಲುಪಿದವು. "ನಿಸರ್ಗ ನಿಷ್ಠತೆಯಿಂದ ಜನಾಂಗ ನಿಷ್ಠೆಗೆ ಸರಿದ ಮನುಷ್ಯ ಕಾಲಕ್ರಮದಲ್ಲಿ ವ್ಯಕ್ತಿ ನಿಷ್ಠತೆಯ ಅಂಚನ್ನು ತಲುಪಿದ. ಈ ಅವಧಿಯಲ್ಲಿ ಅವನು ಊರುಗಳಿಗೆ ಗತಿಸಿ ಹೋದ ತನ್ನ ಕುಟುಂಬದ ಹಿರಿಯರ ಪರೋಕ್ಷ ವಿನಯಕ್ಕೋಸ್ಕರ ಅವರ ಹೆಸರನ್ನು, ಆ ಮೇಲೆ ಜೀವಂತವಿರುವ ತನ್ನ ಸಂಬಂಧಿಕರ ಇಲ್ಲವೆ ತನ್ನ ಹೆಸರನ್ನು ಇಡತೊಡಗಿದ"[೨೬] ಹೀಗೆ ಅಂದಿನ ಸಮಾಜದಲ್ಲಿ ಯಾವುದೋ ಒಂದು ವಿಶೇಷವಾದ ಘಟನೆಯಿಂದ ಹೆಸರುವಾಸಿಯಾದ ವ್ಯಕ್ತಿಯ ನಾಮದಿಂದಲೇ ಒಂದೊಂದು ಗ್ರಾಮಕ್ಕೆ ಹೆಸರಿಸಿದರು. ಮುಂದೆ ಅದು ಲಿಂಗಭೇದವಿಲ್ಲದೇ ಸ್ತ್ರೀ ಪುರುಷರಾದಿಯಾಗಿ ಇಲ್ಲವೆ ಅವರ ಬಿರುದು ಬಾವಲಿಗಳನ್ನುಳ್ಳ ಐತಿಹಾಸಿಕ,

ಸಾಮಾಜಿಕ, ರಾಜಕೀಯ ಮೊದಲಾದ ಅಂಶಗಳಿಂದ ಪ್ರೇರಿತವಾಗಿ ಸ್ಥಳಗಳಿಗೆ ಹೆಸರುಗಳಾಗಿ ನಿಂತಿರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ತನ್ನ ವಂಶದ, ಮನೆತನದ ಹಾಗೂ ಅಹಂ ಮೂಲ ಧೋರಣೆಯಿಂದ ಸ್ಥಳನಾಮಕರಣ ಕ್ರಿಯೆಯಲ್ಲಿ ಈ ವ್ಯಕ್ತಿನಾಮಗಳು ಬಂದಿದೆ. ಇನ್ನು ಆಧುನಿಕವಾಗಿ ನಡೆದ ವ್ಯಕ್ತಿಯನ್ನಾಧರಿಸಿದ ಸ್ಥಳನಾಮ ನಿರ್ದೇಶನವು ವೈವಿಧ್ಯತೆಯ ನೆಲೆಯಲ್ಲಿದ್ದರೂ ಸಹ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಸೊರಗಿವೆ. “ಅಲ್ಲದೆ ಕಾಲದ ದೃಷ್ಠಿಯಿಂದ-ಈಚಿನವು ಇತ್ತೀಚಿಗೆ ಜನರ ಮನೋಧರ್ಮ ಬದಲಾಗಿ ವ್ಯಕ್ತಿ ಪೂಜೆಯ ಅಂಶ ಅವರ ಜೀವನದಲ್ಲಿ ಬೆರೆತಂತೆ ಕಂಡರೂ, ದೊಡ್ಡ ಊರಿಗೆ ಒಬ್ಬ ವ್ಯಕ್ತಿಯ ಹೆಸರು ಕೊಡದೆ, ಕೇರಿಗೆ ಅಥವಾ ಒಂದು ಮನೆಯಡಿಗೆ ಗುರುತಿಸಲಿಕ್ಕಾಗಿ ಹೆಸರು ಇಟ್ಟಿರುವುದೂ ಸಹ ಜನರ ಜೀವನ ದೃಷ್ಟಿಯನ್ನು ಬಿಂಬಿಸಬಲ್ಲದು”[೭೭] ಆದರೂ ಇಂದು ಅನೇಕ ನಗರ, ಪಟ್ಟಣ, ಹೊಸದಾಗಿ ನಿರ್ಮಾಣವಾಗುವ ಲೇಔಟ್‌ಗಳಿಗೂ ಹೆಸರನ್ನು ಸೂಚಿಸುತ್ತಿರುವುದು ಕಂಡುಬರುತ್ತದೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಸ್ಥಳಗಳಿಗೆ ನಾಮ ಇಡುವ ಪ್ರಕ್ರಿಯೆಯನ್ನು ಗಮನಿಸಿದಾಗ ಯಾವ ವ್ಯಕ್ತಿ ಸ್ಥಳ ನಿರ್ಮಿಸಿತ್ತಿರುವನೋ ಅವನ ಹೆಸರನ್ನೋ ಇಲ್ಲವೇ ಅವರ ತಂದೆ ತಾಯಿ ಹೆಸರಿನಿಂದ ಕರೆಯುವುದು ಮೊದಲ ಆದ್ಯತೆಯಾದರೆ, ನಂತರ ತನ್ನ ಕುಲದೈವವೋ ಇಲ್ಲವೇ ಆ ಊರಿನ ಆರಾಧ್ಯದೈವದ ಹೆಸರನ್ನೇ ಎರಡನೇ ಆದ್ಯತೆಯಾಗಿ ಪರಿಗಣಿಸಿದರೆ; ಇನ್ನು ಅದು ಸರ್ಕಾರದಿಂದ ನಿರ್ಮಾಣವಾಗುತ್ತಿರುವ ಊರಾದರೆ, ನಿರ್ಮಾಣಕ್ಕೆ ಕಾರಣನಾದ ತಮ್ಮ ರಾಜಕೀಯ ನಾಯಕನ ಇಲ್ಲವೇ ರಾಜ್ಯವಾಳುತ್ತಿರುವ ಮಂತ್ರಿಯ ಹೆಸರುಗಳು ನಂತರದ ಸ್ಥಾನವನ್ನು ಪಡೆದುಕೊಂಡಿರುವುದು ಕ್ಷೇತ್ರಕಾರ್ಯದ ಮಾಹಿತಿಯಿಂದ ಲಭ್ಯವಾಗಿದೆ.

ದಟ್ಟವಾದ ಅರಣ್ಯ, ಬೆಟ್ಟ, ಜಲ, ಪ್ರಾಣಿ, ಪಕ್ಷಿ ಮತ್ತು ಜಲ ಸಂಪತ್ತು ಮೊದಲಾದ ಭೌಗೋಳಿಕ ಅಂಶಗಳೂ ಸಹ ವ್ಯಕ್ತಿಯಾಧಾರಿತವಾದ ಸ್ಥಳನಾಮಗಳ ಮೇಲೆ ಪ್ರಭಾವ ಬೀರಿರುವುದರಿಂದ ಇವು ಪ್ರಾದೇಶಿಕತೆಗನುಗುಣವಾಗಿ ಬದಲಾಗುವ ಲಕ್ಷಣಗಳೂ ಕಂಡುಬರುತ್ತವೆ.

ಕನಕಪುರ ತಾಲೂಕು		ರಾಮನಗರ ತಾಲೂಕು		ಚನ್ನಪಟ್ಟಣ ತಾಲೂಕು		ಮಾಗಡಿ ತಾಲೂಕು	
ಒಟ್ಟು ಸ್ಥಳನಾಮಗಳು	ವ್ಯಕ್ತಿ ಆಧಾರಿತ ಸ್ಥಳನಾಮಗಳು	ಒಟ್ಟು ಸ್ಥಳ ನಾಮಗಳು	ವ್ಯಕ್ತಿ ಆಧಾರಿತ ಸ್ಥಳನಾಮಗಳು	ಒಟ್ಟು ಸ್ಥಳನಾಮಗಳು	ವ್ಯಕ್ತಿ ಆಧಾರಿತ ಸ್ಥಳನಾಮಗಳು	ಒಟ್ಟು ಸ್ಥಳ ನಾಮಗಳು	ವ್ಯಕ್ತಿ ಸ್ಥಳ ಆಧಾರಿತ ಸ್ಥಳನಾಮ
೨೯೭	೮೯	೧೪೨	೫೭	೧೫೪	೫೬	೩೫೦	೧೦೪

ರಾಮನಗರ ಜಿಲ್ಲೆಯ ಪರಿಸರದಲ್ಲಿ ದೊರೆಯುವ ವ್ಯಕ್ತಿಯಾಧಾರಿತ ಸ್ಥಳನಾಮಗಳನ್ನು ಮುಖ್ಯವಾಗಿ ಈ ಕೆಳಗಿನಂತೆ ವರ್ಗೀಕರಿಸಬಹುದು.

೧. ಪೌರಾಣಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು

ಅನೇಕ ಶತಮಾನಗಳಿಂದ ಈ ದೇಶದ ನಾಡಿನ ಜನರ ಮೇಲೆ ಪುರಾಣ, ದೈವಗಳು ಹಾಗೂ ರಾಮಾಯಣ, ಮಹಾಭಾರತ ಮತ್ತು ಭಾಗವತಾದಿಗಳಲ್ಲಿ ಬರುವ ಪುರಾಣ ಪುರುಷರು ತಮ್ಮ ಅದ್ಭುತವಾದ

ಪ್ರಭಾವವನ್ನು ಬೀರುತ್ತಾ ಬಂದಿದ್ದಾರೆ. ಆದ್ದರಿಂದಲೇ ಸುಮಾರು ೩೩ ಕೋಟಿ ದೇವರುಗಳ ಆವಾಸ ಸ್ಥಾನ ನಮ್ಮ ಭಾರತದ್ದಾಗಿದೆ. ಈ ಎಲ್ಲ ದೇವರುಗಳಿಗೂ ಭಕ್ತರಿರುವುದೂ ಕೂಡ ಅಷ್ಟೇ ಸತ್ಯ ಸಂಗತಿ. ಇವುಗಳು ಜನರು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಲು ಜನ ಸಾಮಾನ್ಯರ ಮನಸ್ಸಿನಲ್ಲಿ ವೇದೋಪನಿಷತ್ತುಗಳ ಬೋಧೆಯನ್ನು, ದೇವರ ಶಕ್ತಿ ಸಾಮಾರ್ಥ್ಯ, ದಯೇ, ಪ್ರೀತಿಗಳನ್ನು, ಶಾಪ-ವಿಶಾಪಗಳ ಪ್ರಭಾವವನ್ನು ಪ್ರತ್ಯಕ್ಷ ನಿದರ್ಶನಗಳಿಂದ ತಿಳಿಯಪಡಿಸಲು ಬಹುಮಟ್ಟಿಗೆ ಸಹಾಯಕವಾಗಿವೆ. ಮಾನವನು ತಿಳಿದಿರಬೇಕಾದ ತತ್ವವಿಚಾರಗಳನ್ನು, ಅವನ್ನು ಅನುಷ್ಠಾನದಲ್ಲಿ ತರಲು ಅನುದಿನದ ಬದುಕಿನಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ಈ ಪೌರಾಣಿಕ ಪುರುಷರ ಮುಖವಾಣಿಯಿಂದ ನುಡಿಸುತ್ತಿವೆ. ಇದರಿಂದ ಸಮಾಜದಲ್ಲಿ ಶಾಶ್ವತವಾದ ಸುಖ ಸಂತೋಷ, ಶಾಂತಿ ನೆಲೆಸಲು ಕಾರಣೀಭೂತರಾಗಿರುವ ದೇವತೆಗಳು, ಋಷಿಗಳು, ಗಂಧರ್ವ, ಕಿಂಪುರುಷಾದಿಯಾಗಿ, ದಶಾವತಾರದಲ್ಲಿ ಕಾಣಿಸಿಕೊಂಡ ವಿಷ್ಣುವಿನ ಹಲವು ರೂಪಗಳನ್ನು ಹೊಂದಿದ ದೈವಪುರುಷರ ಹೆಸರುಗಳನ್ನು ತಾವು ವಾಸಿಸುವ ನೆಲೆಗಳಿಗೆ ಇಟ್ಟರೆ, ದೇವರ ಕೃಪೆಗೆ ಪಾತ್ರರಾಗುತ್ತೇವೆ ಎಂದಲೋ, ಊರಿನ ಹೆಸರಿನಲ್ಲಿ ಸದಾ ದೈವಸ್ಮರಣೆ ಮಾಡಬಹುದೆಂಬ ನಂಬಿಕೆಯಿಂದಲೋ, ವಿಚ್ಛಿದ್ರಕಾರಿಯಾದ ಶಕ್ತಿಗಳು ಊರನ್ನು ಪ್ರವೇಶಮಾಡುವುದಿಲ್ಲವೆಂಬ ಭಾವನೆಯಿಂದಲೋ, ಇಲ್ಲವೇ ಶುಭವಾಗುತ್ತದೆಂಬ ನಂಬಿಕೆಯಿಂದ ಅನೇಕ ಸ್ಥಳಗಳಿಗೆ ಈ ಪೌರಾಣಿಕ ವ್ಯಕ್ತಿ ಸಂಬಂಧಿಯಾದ ಹೆಸರುಗಳು ಸ್ಥಳನಾಮಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಿರಬಹುದು. ಇಂಥ ಪೌರಾಣಿಕ ವ್ಯಕ್ತಿ ಪ್ರಧಾನವಾದ ಸ್ಥಳಗಳು ಈ ಕೆಳಗಿನಂತಿವೆ.

(ಕ)	ಅನಮನಹಳ್ಳಿ	ದೇವರಹಳ್ಳಿ	ದೇವರಕಗ್ಗಲಹಳ್ಳಿ
	ನಾರಾಯಣಪುರ	ಭೀಮಸಂದ್ರ ೨	ಮಂಜುನಾಥ
	ರಾಮನಹಳ್ಳಿ	ರಾಮಪುರ	ಲಿಂಗನಪುರ
	ಶಿವನಹಳ್ಳಿ	ಸಾಂಬಪುರ	ಸೋಮನಾಥಪುರ
	ಹರಿಹರ	ಹಾರೋಶಿವನಹಳ್ಳಿ	
(ರಾ)	ಅನುಮನಹಳ್ಳಿ	ರಾಮನಹಳ್ಳಿ	ಕೇಶವಪುರ
	ಚೌಡೇಶ್ವರಿಹಳ್ಳಿ (ಸ್ತ್ರೀ)	ಭೀಮೇನಹಳ್ಳಿ	ರಾಮನಗರ
	ಲಕ್ಷ್ಮಿಪುರ (ಸ್ತ್ರೀ)	ಲಕ್ಷ್ಮಿಸಾಗರ (ಸ್ತ್ರೀ)	
(ಮಾ)	ಕಲ್ಲುದೇವನಹಳ್ಳಿ	ಕಲ್ಯಾಣದೇವರಮಠ	ಕಾಡುರಾಮನಹಳ್ಳಿ
	ಕೇತೋಹಳ್ಳಿನರಸಿಂಹಪುರ	ಕೇತೋಹಳ್ಳಿರಾಮಪುರ	ಗರಗೇಶ್ವರ
	ಗಣಪತಿಹಳ್ಳಿ	ಚೌಡಿಬೇಗೂರು (ಸ್ತ್ರೀ)	ತಿರುಮಲೆ
	ತ್ರಿಪುರಾಂತಕ ಚನ್ನಾಪುರ	ತೊರೆರಾಮನಹಳ್ಳಿ	ದೇವಮಾಚೋಹಳ್ಳಿ
	ನಾರಾಯಣಪುರ	ದೊಡ್ಡಸೋಮನಹಳ್ಳಿ	ನಾರಾಯಣಪುರ
	ಮರುಳುದೇವರಕಟ್ಟೆ	ಮಲ್ಲಿಕಾರ್ಜುನಪುರ	ಮಾರಿಕುಪ್ಪೆ (ಸ್ತ್ರೀ)

(ಚ)	ಕೃಷ್ಣಾಪುರ	ಗೋವಿಂದನಹಳ್ಳಿ	ದೇವರಹಳ್ಳಿ
	ದೇವರಹೊಸಹಳ್ಳಿ	ನೀಲಕಂಠನಹಳ್ಳಿ	ರಾಮನರಸಿಂಹಪುರ
	ರಾಮಪುರ	ವಿರೂಪಾಕ್ಷಿಪುರ	ಸೋಮನಾಥಪುರ
	ರಘುನಾಥಪುರ	ರಾಮನಹಳ್ಳಿ ೨	ವರದೇನಹಳ್ಳಿ
	ವರದೋಹಳ್ಳಿ	ವಿಠಲಪುರ	ಶಂಭುದೇವನಹಳ್ಳಿ
	ವಿಶ್ವನಾಥಪುರ	ಶಿವನಸಂದ್ರ	ಶ್ರೀಗಿರಿಪುರ
	ಶ್ರೀನಿವಾಸಪುರ	ಶ್ರೀಪತಿಹಳ್ಳಿ	ಶೇಷಗಿರಿಪುರ
	ಸಿದ್ಧದೇವರಬೆಟ್ಟ	ಸೋಮದೇವನಹಳ್ಳಿ	ಹನುಮಾಪುರ

ಇವುಗಳು ಪೌರಾಣಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳಾದರೂ, ಕೆಲವು ಸಾಮಾನ್ಯ ವ್ಯಕ್ತಿಗಳು ಇಟ್ಟುಕೊಂಡ ಹೆಸರುಗಳೂ ಇರಬಹುದು. ಪೌರಾಣಿಕ ವ್ಯಕ್ತಿಪ್ರಧಾನ ಸ್ಥಳನಾಮಗಳಲ್ಲಿ ಹೆಚ್ಚು ಪುರುಷ ದೈವಗಳ ಸಂಖ್ಯೆ ಸಹಜವಾಗಿ ಹೆಚ್ಚೆ ಇವೆ. ಸ್ತ್ರೀ ದೈವಗಳ ಸಂಖ್ಯೆ ಕಡಿಮೆ. ಆದರೂ ಜನಪದ ದೈವಗಳಾದ ಚೌಡಿ ಮತ್ತು ಮಾರಿಯರು ಈ ಪರಿಸರದ ಒಂದೊಂದು ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷವೇ ಸರಿ.

೨. ಚಾರಿತ್ರಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು

ಚರಿತ್ರೆಯ ಪುಟಗಳಲ್ಲಿ ಬಾಳಿಹೋದ ಅನೇಕ ರಾಜವಂಶಗಳ ರಾಜ, ರಾಣಿ, ಮಂತ್ರಿ, ನಾಯಕ, ಸಾಮಂತ, ದಂಡನಾಯಕ, ಹೀಗೆ ಅನೇಕ ವ್ಯಕ್ತಿಗಳ ಹೆಸರುಗಳಲ್ಲದೆ ಶೂರ, ಧೀರತನದಿಂದ ಕೂಡಿದ, ಬುದ್ಧಿವಂತರ ಹಾಗೂ ಧೀಮಂತ ವ್ಯಕ್ತಿತ್ವವನ್ನು ಹೊಂದಿದ ಮತ್ತು ತಮ್ಮ ಜೀವನಮೌಲ್ಯಗಳಿಂದ ಮನುಷ್ಯತ್ವದಿಂದ ದೈವತ್ವಮಟ್ಟಕ್ಕೇರಿದ ಬುದ್ಧ, ಬಸವ, ಮಹಾವೀರ ಹಾಗೂ ಗಾಂಧಿ, ಸುಭಾಷ್‌ಚಂದ್ರಬೋಸ್, ಭಗತ್‌ರಂತ ದೇಶ ಪ್ರೇಮಿಗಳೆಲ್ಲರ ಹೆಸರಿನಿಂದ ಕರೆಯಲ್ಪಡುವ ಸ್ಥಳನಾಮಗಳಿವೆ. ಸಮಾಜದ ಹಿತಕ್ಕಾಗಿ ಬಲಿಯಾದ ಮಹಾಪುರುಷರ, ವೀರ, ಮಾಸ್ತಿ ಹೋದ ವ್ಯಕ್ತಿಗಳೂ ಸ್ಥಳಕ್ಕೆ ಹೆಸರುಗಳಾಗಿ ನಿಂತಿರುವ ಉದಾಹರಣೆಗಳು ನಾಡಿನಾದ್ಯಂತ ದೊರಕುತ್ತವೆ. ಅಂಥ ಚಾರಿತ್ರಿಕ ವ್ಯಕ್ತಿ ಪ್ರಧಾನ ಸ್ಥಳಗಳು ಈ ರಾಮನಗರ ಪರಿಸರದಲ್ಲಿವೆ.

(ಕ)	ಗುಡ್ಡೆವೀರನಹೊಸಹಳ್ಳಿ	ತೆಂಗನಾಯಕನಹಳ್ಳಿ	ನಾಗರಸನಕೋಟೆ
	ನಾಯಕನಹಳ್ಳಿ	ಬಸವನಹಳ್ಳಿ	ಬಸವಾಪಟ್ಟಣವೀರಸಂದ್ರ
	ಬಸವನಪುರ	ವಿರುಪಸಂದ್ರ ೨	ವೀರಸಂದ್ರ
	ಸಾತನೂರು		
(ರಾ)	ಚಿಕ್ಕಗಂಗವಾಡಿ	ತಮ್ಮನಾಯಕನಹಳ್ಳಿ	ದೊಡ್ಡಗಂಗವಾಡಿ
	ಬಸವನಪುರ	ಬಳೆವೀರನಹಳ್ಳಿ	ಬಿಲ್ಲಕೆಂಪನಹಳ್ಳಿ
	ಮಂಚನಾಯಕನಹಳ್ಳಿ		

(ಚ)	ಅಂಕುಶನಹಳ್ಳಿ	ಚೋಳಮಾರನಹಳ್ಳಿ	ನಾಗಲಾಪುರ (ಸ್ತ್ರೀ)
	ಬುಕ್ಕಸಾಗರ	ಭೈರನಾಯಕನಹಳ್ಳಿ	ಮೈಲನಾಯಕನಹಳ್ಳಿ
	ವಿರುಪಸಂದ್ರ	ಹೊನ್ನನಾಯಕನಹಳ್ಳಿ	
(ಮಾ)	ಕೆಂಪಾಪುರ ೩	ಕೆಂಪಸಾಗರ	ಕೆಂಪನಹಳ್ಳಿ
	ಚೋಳನಾಯಕನಹಳ್ಳಿ	ನಾಯಕನಪಾಳ್ಯ	ಬಸವನಪಾಳ್ಯ
	ಬಸವಾಪಟ್ಟಣ	ಬಸವೇನಹಳ್ಳಿ ೨	ಬಿಟ್ಟಸಂದ್ರ
	ವೀರಾಪುರ-೨	ವೀರಸಾಗರ	ಸಾವನದುರ್ಗ

ಇಲ್ಲಿನ ಪಟ್ಟಿಯಲ್ಲಿ ಚಾರಿತ್ರಿಯ ವ್ಯಕ್ತಿಗಳ ಜೊತೆ ಚಾರಿತ್ರಿಕ ವ್ಯಕ್ತಿಗಳ ಹೆಸರನ್ನೇ ಹೊಂದಿರುವ ಸಾಮಾನ್ಯ ವ್ಯಕ್ತಿಗಳ ಹೆಸರೂ ಸೇರ್ಪಡೆಗೊಂಡಿರಬಹುದು. ಇತಿಹಾಸದಲ್ಲಿ ಪ್ರಸಿದ್ಧತೆಯನ್ನು ಪಡೆದಿರುವ ಸಾಮ್ರಾಟರ ಹೆಸರುಗಳ ಜೊತೆಗೆ ಸ್ಥಳೀಯ ಆಡಳಿತ ಹಾಗೂ ಪ್ರಾಂತೀಯ ಆಡಳಿತಗಾರ, ವೀರ ವ್ಯಕ್ತಿಗಳ ಹೆಸರುಗಳು ಮಾತ್ರ ಸ್ಥಳನಾಮದಲ್ಲಿ ಬಂದಿವೆಯೇ ಹೊರತು ಕುಖ್ಯಾತಿಯನ್ನು ಪಡೆದ ಚಾರಿತ್ರ್ಯ ಹೀನರಾದವರ, ಚರಿತ್ರೆಯಲ್ಲಿ ಕೆಟ್ಟು ಹೆಸರು ಪಡೆದು ಖಳನಾಗಿ ಬಿಂಬಿಸುವ ಹೆಸರುಗಳು ಸ್ಥಳನಾಮಗಳಲ್ಲಿ ಕಂಡುಬರುವುದಿಲ್ಲ.

೩. ಸಾಮಾನ್ಯ ವ್ಯಕ್ತಿ ಪ್ರಧಾನ ಸ್ಥಳನಾಮಗಳು

ಸಾಮಾನ್ಯ ವ್ಯಕ್ತಿ ಪ್ರಧಾನ ಹೆಸರುಗಳೆಂದರೆ ಪೌರಾಣಿಕ ಮತ್ತು ಚರಿತ್ರೆಯ ಪುಟದಲ್ಲಿ ದಾಖಲಾಗದ ಜನ ಸಾಮಾನ್ಯರೆಂದು ಭಾವಿಸಬಹುದು. ಅಂದರೆ ಅವರು ಸಮಾಜದಲ್ಲಿ ಬದುಕುತ್ತಿರುವ ವ್ಯಕ್ತಿಗಳು. ಅವರು ಸಮಕಾಲೀನ ಸಂದರ್ಭದಲ್ಲಿ ಸುಪ್ರಸಿದ್ಧ ವ್ಯಕ್ತಿಗಳಾಗಿರಬಹುದು. ಅಂದರೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಕ್ರೀಡೆ, ಕಲೆ ಮೊದಲಾದ ಕ್ಷೇತ್ರಗಳಲ್ಲಿ ತಮ್ಮ ವಿಭಿನ್ನವಾದ ವ್ಯಕ್ತಿತ್ವದ ಮೂಲಕ ಜನಮನ್ನಣೆಯನ್ನು ಪಡೆದಿರುವ ಹೆಸರುಗಳಾಗಿರಬಹುದು. ಇಲ್ಲವೆ ತಮ್ಮ ಕುಟುಂಬದ ಹಿರಿಯರ ನೆನಪಿಗಾಗಿ ಸತ್ತ ವ್ಯಕ್ತಿಯ ಹೆಸರುಗಳನ್ನು ಇಡುವ ಪದ್ಧತಿ ಹಿಂದಿನಿಂದಲೂ ನಮ್ಮ ಸಮಾಜದಲ್ಲಿದೆ. ಇಂಥವರ ಹೆಸರುಗಳೆಲ್ಲವೂ ಕೂಡ ಸ್ಥಳನಾಮಗಳಲ್ಲಿ ನಿರ್ದೇಶನಗೊಂಡಿರುವುದನ್ನು ಕಾಣಬಹುದು. ಸಾಮಾನ್ಯ ವ್ಯಕ್ತಿ ಪ್ರಧಾನ ಸ್ಥಳನಾಮಗಳಲ್ಲಿ ಈ ಹೆಸರುಗಳು ಊರುಗಳ ನಿರ್ಮಾಣ ಅಥವಾ ಗ್ರಾಮವು ರಚನೆಯಾದ ಸಂದರ್ಭದಲ್ಲಿ ನೆಲೆಸಿದ ವ್ಯಕ್ತಿಯಾಗಿರಬಹುದು, ಇಲ್ಲವೇ ಆ ಗ್ರಾಮದ ಪ್ರಸಿದ್ಧ ವ್ಯಕ್ತಿಯಾಗಿರಬಹುದು. ಇಲ್ಲವೇ ಗ್ರಾಮಸಮುದಾಯಕ್ಕೆ ಒಳಿತನ್ನು ಮಾಡುವ, ಒಳಿತನ್ನು ಯೋಚಿಸುವ ಜನಪ್ರಿಯ ವ್ಯಕ್ತಿಯಾಗಿರಲು ಸಾಧ್ಯವಿರಬಹುದು.

(ಕ)	ಅಜ್ಜಬಸವನಹಳ್ಳಿ	ಅಜ್ಜೇಗೌಡನವಲಸೆ	ಅಲ್ಲಿಸಾಬರದೊಡ್ಡಿ
	ಅನುಮನಹಳ್ಳಿ	ಅರನಕುಪ್ಪೆ	ಅಳ್ಳಿಮಾರನಹಳ್ಳಿ
	ಅಂಜನಾಪುರ (ಸ್ತ್ರೀ)	ಕಚುವನಹಳ್ಳಿ	ಕಲ್ಲನಕುಪ್ಪೆ
	ಕೂನೂರು	ಗಣಗನಹಳ್ಳಿ	ಗಾದಾರನಹಳ್ಳಿ

	ಗೋಪಸಂದ್ರ	ಚನ್ನಸಂದ್ರ	ಚಿಕ್ಕಸಾದೇನಹಳ್ಳಿ
	ಚೀಲೂರು	ಚುಳಕನಕೆರೆಕಾವಲು	ಚೂಡಹಳ್ಳಿ
	ಜಕ್ಕಸಂದ್ರ	ಜಕ್ಕಸಂದ್ರ ಅರಣ್ಯ	ತಾಮಸಂದ್ರ
	ತಿಪ್ಪೂರು	ತೊಪ್ಪಗನಹಳ್ಳಿ	ತೋಕಸಂದ್ರ
	ದ್ಯಾವಸಂದ್ರ	ದುನ್ನಸಂದ್ರ	ದೊಡ್ಡಸಾದೇನಹಳ್ಳಿ
	ದೊಲ್ಲಹಳ್ಳಿ	ಪಿಚ್ಚನಕೆರೆ	ಬರಡನಹಳ್ಳಿ
	ಬಳೆಚನ್ನ ವಲಸೆ	ಬಾಚಹಳ್ಳಿ	ಬಾಲಗೌಡನಹಳ್ಳಿ
	ಬಿಜ್ಜಹಳ್ಳಿ	ಬಿಳ್ಳಿಗನಕುಪ್ಪೆ	ಬೀರನಕುಪ್ಪೆ
	ಬೇಲಿಕೊತ್ತನೂರು	ಮಣಿಯಂಬಾಳು (ಸ್ತ್ರೀ)	ಮಲ್ಲಪ್ಪನ ಹೊಸಹಳ್ಳಿ
	ಮಲ್ಲಪುರ ೨	ಮಾರ್ಗಯ್ಯನಗುಂದಿ	ಮಾದನಹಳ್ಳಿ
	ಮಾರಸಂದ್ರ ೨	ಮುಡೇನಹಳ್ಳಿ	ಮುನಿನಗರ
	ಮುಳ್ಳಹಳ್ಳಿ	ಎಡಮಾರನಹಳ್ಳಿ	ರಾಯಸಂದ್ರ
	ಸಿಂಗಸಂದ್ರ	ಸೂರನಹಳ್ಳಿ	ಸೋಮೇದ್ಯಾಪನಹಳ್ಳಿ
	ಹರವತಿಪಾಳ್ಯ (ಸ್ತ್ರೀ)	ಹುಯಲಪ್ಪನಹಳ್ಳಿ	ಹೆಗ್ಗನೂರು
	ಹೇರಂದ್ಯಾಪನಹಳ್ಳಿ	ಹೊನ್ನಹಳ್ಳಿ	ಹೊನ್ನಿಗನಹಳ್ಳಿ
(ರಾ)	ಅಬ್ಬನಕುಪ್ಪೆ	ಅಮ್ಮನಪುರದೊಡ್ಡಿ(ಸ್ತ್ರೀ)	ಅಮ್ಮನಹಳ್ಳಿ (ಸ್ತ್ರೀ)
	ಅಂಕನಹಳ್ಳಿ	ಅಂಕನಹಳ್ಳಿ-೨	ಇಬ್ಬಾಲಕನಹಳ್ಳಿ
	ಕಲ್ಲುಗೋಪಹಳ್ಳಿ	ಕಾಕಾರಾಮನಹಳ್ಳಿ	ಕುರುಬರಕರೇನಹಳ್ಳಿ
	ಕೆಂಚನಕುಪ್ಪೆ	ಕೆಂಪದ್ಯಾಪನಹಳ್ಳಿ	ಕೆಂಪನಹಳ್ಳಿ
	ಕೆಂಪಯ್ಯನಪಾಳ್ಯ	ಕೆಂಪವಡೇರಹಳ್ಳಿ	ಕೇತಿಗನಹಳ್ಳಿ
	ಕೇತೋಹಳ್ಳಿ	ಕೋಡಿಯಾಲ	ಕರೇನಹಳ್ಳಿ
	ಕೋಲಮಾರನಕುಪ್ಪೆ	ಗೋಪಹಳ್ಳಿ	ಚಂದಿಮಾದಿಯಳ್ಳಿ ಸ್ತ್ರೀ
	ಚಾಮನಹಳ್ಳಿ	ಚಿಕ್ಕಕುಂಟನಹಳ್ಳಿ	ಚಿಕ್ಕೇನಹಳ್ಳಿ
	ಜಕ್ಕನಹಳ್ಳಿ	ಜಡೇನಹಳ್ಳಿ	ಜೀಗನಹಳ್ಳಿ
	ನಾಗೇನಹಳ್ಳಿ	ಬಸವನಯ್ಯನದೊಡ್ಡಿ	ಬೈಚೋಹಳ್ಳಿ
	ಬೋಳಪ್ಪನಹಳ್ಳಿ	ಭೀಮೇನಹಳ್ಳಿ	ಮಂಚೇಗೌಡನಪಾಳ್ಯ
	ಮಾದಪುರ	ಮುದ್ದಾಪುರಕೆರೇನಹಳ್ಳಿ	ರಾಮನಹಳ್ಳಿ
	ಲಕ್ಕಪ್ಪನಹಳ್ಳಿ	ಲಕ್ಕಸಂದ್ರ	ಲಕ್ಕೋಜನಹಳ್ಳಿ
	ಸುಗ್ಗನಹಳ್ಳಿ	ಹರಿಸಂದ್ರ	

(ಚ)	ಅಜ್ಜನಹಳ್ಳಿ	ಅಬ್ಬೂರು	ಉಜ್ಜನಹಳ್ಳಿ
	ಕನ್ನಮಂಗಲ	ಕನ್ನಸಂದ್ರ ಕಲ್ಲಾಪುರ	ಕೃಷ್ಣಾಪುರ
	ಕಾಡುಕೊತ್ತನಹಳ್ಳಿ	ಕೋತನಹಳ್ಳಿ	ಚಿಕ್ಕೇನಹಳ್ಳಿ
	ತವಾತನಹಳ್ಳಿ	ತೆಂಕನಹಳ್ಳಿ	ದಾಬನಗುಂಡು
	ದೊಡ್ಡನಹಳ್ಳಿ	ನಾಗಲಾಪುರ (ಸ್ತ್ರೀ)	ನೀಲಕಂಠನಹಳ್ಳಿ
	ನೀಲಸಂದ್ರ	ನೆಲಮಾಕನಹಳ್ಳಿ	ಬನಂತನಹಳ್ಳಿ
	ಬೈಚಾಪುರ	ಭೈರಸೆಟ್ಟಿಹಳ್ಳಿ	ಮಲ್ಲಂಗೆರೆ (ಸ್ತ್ರೀ)
	ಮಾರ್ಚನಹಳ್ಳಿ	ಮಾದಾಪುರ	ಮೆಣಸಿನಗನಹಳ್ಳಿ
	ಮೋಗೇನಹಳ್ಳಿ	ಸಣಬನಹಳ್ಳಿ	ಸರಗೂರು
	ಸಂತೇಮೊಗೇನಹಳ್ಳಿ	ಸಾದಹಳ್ಳಿ	ಸಿದ್ದನಹಳ್ಳಿ
	ಸಿದ್ದಾಪುರ ಸೀಬನಹಳ್ಳಿ	ಹೊಟ್ಟಿಗನಹಳ್ಳಿ	ಹೊಂಗನೂರು
	ಹೊನ್ನಿಗನಹಳ್ಳಿ		
(ಮಾ)	ಅಜ್ಜನಹಳ್ಳಿ ೩	ಅಡಕಮಾರನಹಳ್ಳಿ	ಅಣ್ಣಯ್ಯಶಾಸ್ತ್ರಿಪಾಳ್ಯ
	ಅಂಗಜನಹಳ್ಳಿ	ಆಲಸೆಟ್ಟಿಹಳ್ಳಿ	ಉಂಬತನಕುಂಟೆ
	ಕಣ್ಣನೂರು	ಕನಕೇನಹಳ್ಳಿ	ಕನ್ನಸಂದ್ರ ೨
	ಕರಿಯಹಳ್ಳಿ	ಕಾಡುರಾಮನಹಳ್ಳಿ	ಕಾಮಸಾಗರ
	ಕುಟ್ಟನಗೆರೆ	ಕೆಂಚನಪುರ	ಕೆಂಚನಹಳ್ಳಿ
	ಕೇತೋಹಳ್ಳಿ	ಗಂಗಪ್ಪನಹಳ್ಳಿ	ಗಂಗೇನಹಳ್ಳಿ
	ಗಂಗೋನಹಳ್ಳಿ	ಗುಡೆಮಾರನಹಳ್ಳಿ	ಗೌರಾಪುರ (ಸ್ತ್ರೀ)
	ಚನ್ನಾಹಳ್ಳಿ ಚನ್ನಾಪುರ	ಚನ್ನೇನಹಳ್ಳಿ	ಚಂದುರಾಯನಹಳ್ಳಿ
	ಚಿಕ್ಕನಹಳ್ಳಿ	ಚಿಕ್ಕೇನಹಳ್ಳಿ	ಚೀಲೂರು
	ಚುಂಚನಕುಪ್ಪೆ	ಜುಟ್ಟನಹಳ್ಳಿ	ಡೊಳ್ಳೇನಹಳ್ಳಿ
	ತಮ್ಮೇನಹಳ್ಳಿ	ತಿಪ್ಪಗೊಂಡನಹಳಿ	ತಿಪ್ಪಸಂದ್ರ ೩
	ತೊರೆಚೆನ್ನೋಹಳ್ಳಿ	ತೊರೆರಾಮನಹಳ್ಳಿ	ದಂಡೇನಹಳ್ಳಿ
	ದೊಡ್ಡಮಾರನಹಳ್ಳಿ	ದೊಳ್ಳೇನಹಳ್ಳಿ	ದೊಮ್ಮನಕಟ್ಟೆ
	ದೊಡ್ಡಸೋಮೇನಹಳ್ಳಿ	ನರಸಂದ್ರ	ನರಸಾಪುರ
	ನಾಗನಹಳ್ಳಿ	ನೇತೇನಹಳ್ಳಿ	ಪನಕನಕಲ್ಲು
	ಪಾಲನಹಳ್ಳಿ	ಪುನಗುಮಾರನಹಳ್ಳಿ	ಪೆದ್ದನಪಾಳ್ಯ
	ಬಾಚೇನಹಳ್ಳಿ	ಬೋಳೇನಹಳ್ಳಿ	ಬಿಸಕೂರು

ಬಿಸಲಹಳ್ಳಿ	ಬೀಚನಹಳ್ಳಿ ೨	ಬೆಟ್ಟದಾಸಿಪಾಳ್ಯ
ಬೈಚಕುಪ್ಪೆ	ಬೈಚಾಪುರ	ಬೈರಪುರ
ಬಾಳೇನಹಳ್ಳಿ	ಮಲ್ಲಪ್ಪನಹಳ್ಳಿ	ಮಲ್ಲಿಕುಂಟೆ (ಸ್ತ್ರೀ)
ಮಲ್ಲೇನಹಳ್ಳಿ	ಮಂಚನಬೆಲೆ	ಮಾಚೋಹಳ್ಳಿ
ಮಣ್ಣಿಗನಹಳ್ಳಿ	ಮಾನಗಲ್ಲು	ಮಾಯಸಂದ್ರ
ಮಾರದೇವನಹಳ್ಳಿ	ಮಾರಯ್ಯನಹಳ್ಳಿ	ಮಾರಸಂದ್ರ
ಮರಿಸೋಮನಹಳ್ಳಿ	ಮಾದೇನಹಳ್ಳಿ-೨	ಮುತ್ತಸಾಗರ
ಮುದ್ದಯ್ಯನಪಾಳ್ಯ	ಮುಪ್ಪೇನಹಳ್ಳಿ	ಮುಮ್ಮೇನಹಳ್ಳಿ
ಮೂಗನಹಳ್ಳಿ	ಮೇಲನಹಳ್ಳಿ	ಮೈಲನಹಳ್ಳಿ
ಯಲ್ಲಾಪುರ (ಸ್ತ್ರೀ)	ರಘುವನಹಳ್ಳಿ	ರಂಗೇನಹಳ್ಳಿ ೨
ಲಕ್ಕಸಂದ್ರಲಕ್ಕೇನಹಳ್ಳಿ	ಲಿಂಗೇನಹಳ್ಳಿ	ವೀರೇಗೌಡನದೊಡ್ಡಿ
ವೆಂಗಳಪ್ಪನಹಳ್ಳಿ	ಶಂಕನಕಲ್ಲು	ಶಾಂತಾಪುರ (ಸ್ತ್ರೀ)
ಶಿರಗನಹಳ್ಳಿ	ಸಿಂಗದಾಸನಹಳ್ಳಿ	ಸಾದಮಾರನಹಳ್ಳಿ
ಸಿಡಗನಹಳ್ಳಿ	ಸುಗ್ಗನಹಳ್ಳಿ	ಸೂರಪ್ಪನಹಳ್ಳಿ
ಸೊಣ್ಣೇನಹಳ್ಳಿ	ಸೋಮಕ್ಕನಮುತ್ತ (ಸ್ತ್ರೀ)	ಹಲಿಗೇನಹಳ್ಳಿ
ಹಲಿಗೇನಹಳಿ	ಹಾಲಸಿಂಗನಹಳ್ಳಿ	ಹ್ಯಾಗನಹಳ್ಳಿ
ಹುಲುವೇನಹಳ್ಳಿ	ಹುಲ್ಲೇನಹಳ್ಳಿ	ಹೇಮಾಪುರ (ಸ್ತ್ರೀ)

ಸಾಮಾನ್ಯ ವ್ಯಕ್ತಿ ಪ್ರಧಾನ ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿರುವ ವ್ಯಕ್ತಿನಾಮಗಳಲ್ಲಿ ಕೆಲವೊಬ್ಬರು ಚಾರಿತ್ರಿಕ ವ್ಯಕ್ತಿಯಾಗಿರುವ ಸಂಭವವೂ ಇರಬಹುದು. ವ್ಯಕ್ತ್ಯಂಶಗಳುಳ್ಳ ಸ್ಥಳನಾಮ ವರ್ಗೀಕರಣದಲ್ಲಿ ಕೆಲವು ತೊಂದರೆಗಳಿವೆ. ಪುರಾಣ ಪುರುಷ, ಚಾರಿತ್ರಿಕ ವ್ಯಕ್ತಿ, ಸಾಮಾನ್ಯ ಎಂದು ಸ್ಪಷ್ಟವಾಗಿ ಗುರುತಿಸುವುದು ಕೆಲವೊಮ್ಮೆ ತೊಂದರೆಯಾಗುವುದು. ಆಯಾಯ ಊರುಗಳ ಸರಿಯಾದ ದಾಖಲೆಗಳು, ಚಾರಿತ್ರಿಕ ಘಟನೆಗಳನ್ನು ತಿಳಿಸುವ ವಿವರಗಳಿದ್ದರೆ ಚಾರಿತ್ರಿಕ ವ್ಯಕ್ತಿಗಳನ್ನು ಗುರುತಿಸಲು ತೊಂದರೆಯಾಗುವುದಿಲ್ಲ. ಚಾರಿತ್ರಿಕ ದಾಖಲೆಗಳನ್ನು ಒಳಗೊಂಡ ಶಾಸನಗಳು, ಕೈಫಿಯತ್ತುಗಳು ಅರಸನ, ಸಾಮ್ರಾಟನ ಹೆಸರನ್ನು ಒಳಗೊಂಡಿರುತ್ತವೆಯೇ ಹೊರತು ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುವ ಸ್ಥಳೀಯ ನಾಡಗೌಡರ, ಪ್ರಾಂತೀಯ ಅಧಿಕಾರಿಗಳ ವಿವರಗಳು ಸರಿಯಾಗಿ ಉಲ್ಲೇಖಗೊಂಡಿರುವುದಿಲ್ಲ. ಬಹಳಷ್ಟು ಸ್ಥಳನಾಮಗಳಲ್ಲಿರುವ ವ್ಯಕ್ತ್ಯಂಶಗಳ ವ್ಯಕ್ತಿಗಳು ಸ್ಥಳೀಯರೇ ಆಗಿರುತ್ತಾರೆ ಎಂಬುದನ್ನು ಮರೆಯಬಾರದು. ಇಂಥ ಸಂದರ್ಭದಲ್ಲಿ ಸಾಮಾನ್ಯ; ಚಾರಿತ್ರಿಕ ವ್ಯಕ್ತಿ ಎಂಬುದಾಗಿ ಗುರುತಿಸಲು ಸ್ವಲ್ಪ ಶ್ರಮದಾಯಕವೇ ಆಗಿದೆ. ಗೋವಿಂದಹಳ್ಳಿ ಅಥವಾ ಶ್ರೀನಿವಾಸಪುರದಲ್ಲಿರುವ ವ್ಯಕ್ತಿಯು ಪೌರಾಣಿಕ ಪುರುಷನೋ, ಚಾರಿತ್ರಿಕ ವ್ಯಕ್ತಿಯೋ ಅಥವಾ ಸಾಮಾನ್ಯ ವ್ಯಕ್ತಿಯೊಬ್ಬನ ಹೆಸರೋ ಎಂಬುದು ಸಾಮಾನ್ಯವಾಗಿ ಗುರುತಿಸಲು ಆಗದಿರಬಹುದು.

ವ್ಯಕ್ತ್ಯಂಶಗಳುಳ್ಳ ಸ್ಥಳನಾಮಗಳನ್ನು ಗಮನಿಸಿದಾಗ ಬಹುತೇಕ ಪುರುಷರ ಹೆಸರುಗಳೇ ಇಲ್ಲಿ ಬಂದಿವೆ. ರಾಮನಗರ ತಾಲೂಕಿನ ಚನ್ನಮಾರನಹಳ್ಳಿಯ ಪ್ರಾಚೀನ ರೂಪ ಚಂಟಿ ಮಾವಿಯ ಹಳ್ಳಿ ಎಂಬ ಸ್ತ್ರೀ ಹೆಸರನ್ನು ಹೊತ್ತ ಸ್ಥಳನಾಮ ಆದರೆ, ಕಾಲಾನಂತರದಲ್ಲಿ ಸ್ತ್ರೀವಾಚಿಯಾದ ಇದು ಪುರುಷವಾಚಿಯಾಗಿ ಬದಲಾಗಿದೆ. ಇದಕ್ಕೆ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣವೆಂದರೆ ತಪ್ಪಾಗುವುದಿಲ್ಲ. ಆದರೂ ಸ್ತ್ರೀಯನ್ನು ಪರಿಗಣಿಸದಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿಯೂ, ಸ್ಥಳನಾಮಗಳಲ್ಲಿ ಸ್ತ್ರೀ ನಿರ್ದೇಶನಗೊಂಡಿರುವುದನ್ನು ನೋಡಿದರೆ ಖಂಡಿತವಾಗಿ ಆ ಸ್ತ್ರೀ ಸಮಾಜವು ಮರೆಯಲಾರದ ಮಹತ್ತರವಾದ ಸೇವೆಯನ್ನು ಸಲ್ಲಿಸಿರಬೇಕೆಂದೆನಿಸುತ್ತದೆ. ಆರಂಭದಲ್ಲಿ ರಾಜಪ್ರಭುತ್ವ, ಅಧಿಕಾರಿವರ್ಗ ಹಾಗೂ ಮೇಲ್ವರ್ಗದ ಸ್ತ್ರೀಯರ ಹೆಸರುಗಳಿಗೆ ಸೀಮಿತವಾದ ಸ್ಥಳನಾಮಗಳು ನಂತರದಲ್ಲಿ: ಸಮಾಜಸೇವಾ ಮನೋವೃತ್ತಿಯನ್ನು ಒಳಗೊಂಡ ಸಾಮಾನ್ಯ ಸ್ತ್ರೀಯರ ಹೆಸರುಗಳು ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷವೇ ಎನ್ನಬೇಕು. ಸಮಾಜಮುಖಿಯಾದ ಕಾರ್ಯದಲ್ಲಿ ಅಥವಾ ಗ್ರಾಮದ ರಕ್ಷಣೆಗಾಗಿ, ಒಳಿತಿಗಾಗಿ ಪ್ರಾಣಾರ್ಪಣೆ ಮಾಡಿದ ಸ್ತ್ರೀ-ಪುರುಷರಾದಿಯಾಗಿ ಅವರ ಹೆಸರುಗಳು ಸ್ಥಳನಾಮಗಳಲ್ಲಿ ಚಿರಂತನವಾಗಿ ಉಳಿದುಕೊಂಡು ಬಂದಿರಲು ಸಾಧ್ಯವಿದೆ. ಇದೇ ಒಂದು ಬಗೆಯಾದ ವಿಶೇಷ ಅಧ್ಯಯನವಾಗುವುದರಲ್ಲಿ ಸಂಶಯವಿಲ್ಲ.

ಕೊನೆ ಟಿಪ್ಪಣಿಗಳು

೧. ಎಂ.ಎಂ. ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೫೯, ೧೯೯೫

೨. ಎಸ್.ಎನ್.ನಂಜಣ್ಣವರ, ಮಾನವ ಭೂಗೋಳಶಾಸ್ತ್ರ, ಪುಟ.೨೮೯, ೨೦೦೦

೩. ಎಂ.ನಂಜಮ್ಮಣ್ಣಿ, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪುಟ.೨೬, ೨೦೦೩

೪. ಎಸ್.ಎಸ್.ನಂಜಮ್ಮಣ್ಣಿ, ಮಾನವ ಭೂಗೋಳ ಶಾಸ್ತ್ರ, ಪುಟ.೨೯೪, ೨೦೦೦

೫. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ..೧೭೦, ೨೦೦೫

೬ ಅದೇ. ಪುಟ.೧೭೦

೭. ಎಂ.ಚಿದಾನಂದಮೂರ್ತಿ., ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೧೩೧-೧೩೨, ೨೦೦೨.

೮. ಅದೇ. ಪುಟ.೧೩೪

೯. ಅದೇ.ಪುಟ.೧೩೦

೧೦ ಮುನಿರಾಜಪ್ಪ, ಹರಿಣಾಟವಿ, ಪುಟ.೫, ೨೦೧೦

೧೧. ಎಂ.ಚಿದಾನಂದಮೂರ್ತಿ., ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೧೩೦, ೨೦೦೨.

೧೨. ಕರ್ನಾಟಕ-ಕನ್ನಡಿ, ಪ್ರಸಾರಾಂಗ, ಕ.ವಿ.ವಿ, ಹಂಪಿ, ಪುಟ.೧೨೨, ೧೯೯೯.

೧೩. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೯೧, ೧೯೯೫

೧೪. ಡಿ.ಲಿಂಗಯ್ಯ., ಚಕ್ಕೆರೆ ಶಿವಶಂಕರ (ಸಂ) ಸ್ಥಳನಾಮಗಳ ಅಧ್ಯಯನ, ಪುಟ.೩೩, ೨೦೦೮

೧೫. ಕೆಮ್ಮೂತ್ತೂರು ರಘುಪತಿ ಭಟ್ಟ, ತುಳುನಾಡಿನ ಸ್ಥಳನಾಮಗಳು, ಪುಟ.೩, ೧೯೭೭

೧೬. ವಿ.ವಿಶ್ವನಾಥ, ಸಕಲೇಶಪುರ ಪರಿಸರದ ಸ್ಥಳನಾಮಗಳು, ಪುಟ.೪೯, ೧೯೯೬

೧೭. ಪ್ರೊ.ಡಿ.ಲಿಂಗಯ್ಯ, ಡಾ.ಚಕ್ಕರೆ ಶಿವಶಂಕರ್ (ಸಂ) ಸ್ಥಳನಾಮಗಳ ಅಧ್ಯಯನ, ಪುಟ.೧೫೦, ೨೦೦೮

೧೮. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೨೦, ೧೯೯೫

೧೯. ಅದೇ. ಪುಟ.೬೩

೨೦. ವಿಲ್‌ಡ್ಯುರಾಂಟ್, ನಮ್ಮ ಪ್ರಾಚ್ಯ ಪರಂಪರೆ, ಸಂ.೧, ನಾಗರಿಕತೆಯ ಕಥೆ, ಪುಟ.೪೬೮, ೨೦೦೭

೨೧. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಪುಟ ೧೩೨, ೨೦೦೫

೨೨. ಎಂ.ಚಿದಾನಂದಮೂರ್ತಿ, ಚಿದಾನಂಗ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೨೩೦, ೨೦೦೨

೨೩. ಎಂ.ಎಂ.ಕಲ್ಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೮೭, ೧೯೯೫

೨೪. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೨ - ಕರ್ನಾಟಕ ಸ್ಥಳನಾಮಗಳು, ಪುಟ.೧೬-೧೭, ೨೦೦೨

೨೫ ಅದೇ. ಪುಟ.೨೩೧

೨೬. ಅದೇ. ಪುಟ.೨೩೨

೨೭. ಅದೇ. ಪುಟ.೨೩೩

೨೮. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೫೯, ೧೯೯೫

೨೯. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. ೪೨೭, ೨೦೦೨

೩೦. ಮುನಿರಾಜಪ್ಪ, ಮಾಗಡಿಯ ಇತಿಹಾಸ, ಸಂಸ್ಕೃತಿ, ಪುಟ.೧೪೫, ೨೦೦೫

೩೧ ಅದೇ. ಪುಟ.೧೪೫-೧೪೬

೩೨. ಡಾ.ನಲ್ಲೂರು ಪ್ರಸಾದ್, ಗಂಗಡಿಕಾರ ಒಕ್ಕಲಿಗರು, ಪುಟ.೩೭, ೨೦೦೧.

೩೩. ಎ.ಸಿ.ಲಲಿತ, ಕಾಡುಕುರುಬ ಮತ್ತು ಜೇನು ಕುರುಬರ ಸಂಸ್ಕೃತಿ, ಪುಟ.೦೯, ೧೯೯೩

೩೪. ಜಾಜಿ ದೇವೇಂದ್ರಪ್ಪ, ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಪುಟ.೨೩೧, ೨೦೦೪.

೩೫. ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ-ಸಂಸ್ಕೃತಿ, ಪುಟ.೧೧೦, ೨೦೦೫

೩೬. ಎಂ.ಸುಮಿತ್ರ, ಕರಗ ಸಂಪ್ರದಾಯ, ಪುಟ.೨೨, ೨೦೦೨

೩೭. ಉಧೃತ. ಅದೇ. ಪುಟ.೩೨

೩೮. ಉಧೃತ. ಅದೇ. ಪುಟ.೩೩

೩೯. ಉಧೃತ. ಅದೇ. ಪುಟ.೩೩

೪೦. ಮಂಜುನಾಥ ಬೇವಿನಕಟ್ಟಿ, ತಾರಿಹಳ್ಳಿ ಹನುಮಂತಪ್ಪ (ಸಂ), ವಾಲ್ಮೀಕಿ ಸಂಪದ, ಪುಟ.೬

೪೧. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪುಟ.೧೧೨, ೨೦೦೫.

೪೨. ಎ.ಕ.೯, ಬೆಂಗಳೂರು, ಅನುಬಂಧ, ಮಾಗಡಿ.೮೬

೪೩. ಡಾ.ದೇವೇಂದ್ರಕುಮಾರ, ಹಕಾರಿ, ಡಾ.ಕೆ.ಎಲ್.ಸಂಧ್ಯಾರೆಡ್ಡಿ (ಸಂ), ಗ್ರಾಮೀಣ ವೃತ್ತಿಗಳು, ಪು.೮೭, ೨೦೦೦,

೪೪. ಡಾ.ಡಿ.ಬಿ.ನಾಯಕ, ಲಂಬಾಣಿ ಸಂಸ್ಕೃತಿ, ಪುಟ.೨, ೧೯೯೪

೪೫. ಅದೇ. ಪುಟ.೧೦.

೪೬. ಎಚ್.ಡಿ.ಪ್ರಶಾಂತ ಸಂ., ಕರ್ನಾಟಕ ರಾಜ್ಯಕೋಶ, ೪, ಜನಸಮುದಾಯ ಸಂಪುಟ, ಪುಟ.೮೮, ೨೦೦೦

೪೭. ನಿಂಗಪ್ಪ ದೊಡ್ಡಮನಿ, ಮಾದಿಗ ಸಮುದಾಯ ಒಂದು ಅಧ್ಯಯನ, ಪುಟ.೧೦, ೨೦೦೭

೪೮. ಎಸ್.ಎಲ್.ದೇಶಪಾಂಡೆ, ಕರ್ನಾಟಕದ ಸ್ಥಳನಾಮಗಳು, ಪುಟ.೧, ೨೦೦೮.

೪೯. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೯೧, ೧೯೯೫

೫೦ ಅದೇ. ಪುಟ.೬೩

೫೧. ಶಂ.ಬಾ.ಜೋಷಿ, ಎಡೆಗಳು ಹೇಳುವ ಕಂನಾಡ ಕತೆ, ಪುಟ.೯೪, ೨೦೦೫

೫೨. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೪೮೭, ೨೦೦೨

೫೩. ಅದೇ. ಪುಟ.೪೮೭

೫೪. ಅದೇ. ಪುಟ.೪೮೮.

೫೫. ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ ಸಂಸ್ಕೃತಿ, ಪುಟ.೧೪೭, ೨೦೦೫

೫೬. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೪೮೭, ೨೦೦೨

೫೭. ಮುನಿರಾಜಪ್ಪ, ಹರಿಣಾಟವಿ, ಪುಟ.೨೮, ೨೦೧೦

೫೮. ಎ.ಕ.೯, ಮಾಗಡಿ.೩೬

೫೯. ಎ.ಕ.೪, ಅರುಹನಹಳ್ಳಿ ೧೨, ಮಳವಳ್ಳಿ ತಾಲೂಕು

೬೦. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೨೯೨, ೨೦೦೨.

೬೧. ಅದೇ.ಪುಟ.೩೨೧

೬೨. ಅದೇ. ಪುಟ.೩೨೨

೬೩. ಅದೇ. ಪುಟ.೨೭೬

೬೪. ಅದೇ. ಪುಟ.೩೩೦

೬೫. ಅದೇ. ಪು.೨೭೨

೬೬. ಆರ್.ಎನ್.ಗುರವ, ಕರ್ನಾಟಕ ಭಾರತಿ, ಸಂ.೧೦, ಸಂ.೦೧, ಪುಟ.೨, ೧೯೭೭

೬೭. ಅದೇ. ಪುಟ.೦೩

೬೮. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೩೪೧, ೨೦೦೨

೬೯. ಆರ್.ಎನ್.ಗುರವ, ಕರ್ನಾಟಕ ಭಾರತಿ, ಸಂ.೧೦, ಸಂ.೦೧, ಪುಟ.೫, ೧೯೭೭

೭೦. ಅದೇ. ಪುಟ.೭

೭೧. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ ಸಂಸ್ಕೃತಿ, ಪುಟ.೮೦, ೨೦೦೫.

೭೨. ಬಿ.ಎ.ವಿವೇಕ ರೈ, (ಸಂ). ಪ್ರವಾಸಿಕಂಡ ವಿಜಯನಗರ, ಪುಟ.೮೦, ೨೦೧೦

೭೩. ಎ.ಕ.೯, ಮಾಗಡಿ.೮೨

೭೪. ಎಂ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂ.೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೯೨-೯೩, ೨೦೦೨

೭೫. ಕೆ.ವಿ.ನಾರಾಯಣ ಸಂ, ವ್ಯಕ್ತಿನಾಮಗಳು-ಸ್ವರೂಪ ಮತ್ತು ವಿಶ್ಲೇಷಣೆ, ಪುಟ.೨೭, ೨೦೦೦

೭೬. ಎಂ.ಎಂ.ಕಲಬುರ್ಗಿ, ಕನ್ನಡ ನಾಮ ವಿಜ್ಞಾನ, ಪುಟ.೬೪, ೧೯೯೫

೭೭. ಕೆಮ್ತೂರು ರಘುಪತಿಭಟ್, ತುಳುನಾಡಿನ ಸ್ಥಳನಾಮಗಳು, ಪುಟ.೨೬, ೧೯೭೯

ಅಧ್ಯಾಯ - ೭

ಜಾನಪದ: ಸ್ಥಳನಾಮಗಳು

೭.೧. ಐತಿಹ್ಯ ಮತ್ತು ಸ್ಥಳನಾಮಗಳು

೭.೨. ಪುರಾಣ ಮತ್ತು ಸ್ಥಳನಾಮಗಳು

೭.೩. ಜನಪದ ಕಥೆ ಮತ್ತು ಸ್ಥಳನಾಮಗಳು

೭.೪. ಗಾದೆ ಮತ್ತು ಸ್ಥಳನಾಮಗಳು

೭.೫. ಒಗಟು ಮತ್ತು ಸ್ಥಳನಾಮಗಳು

೭.೬. ಜನಪದ ಗೀತೆ ಮತ್ತು ಸ್ಥಳನಾಮಗಳು

೭.೭. ಜನಪದ ಕಥನ ಕಾವ್ಯ ಮತ್ತು ಸ್ಥಳನಾಮಗಳು

ಅಧ್ಯಾಯ ೭

ಜಾನಪದ: ಸ್ಥಳನಾಮಗಳು

ನಾಮ ವಿಜ್ಞಾನವು ಭಾಷಾ ವಿಜ್ಞಾನದ ಒಂದು ಘಟಕವಾಗಿದೆ. ಜಾನಪದ ಮತ್ತು ಭಾಷಾ ವಿಜ್ಞಾನಗಳ ಸಂಬಂಧ ಬಹಳ ನಿಕಟವರ್ತಿಯಾಗಿದ್ದು; ಅವೆರಡರ ಅಧ್ಯಯನ ಕ್ಷೇತ್ರ ಆಡು ಮಾತನ್ನು ಅವಲಂಬಿಸಿವೆ. ಕ್ಷೇತ್ರ ಮಾಹಿತಿಯಿಲ್ಲದೇ ಇವೆರಡರ ಅಧ್ಯಯನಕ್ಕೆ ಯಾವುದೇ ಬೆಲೆ ಸಿಗಲಾರದು. "ಜಾನಪದ ಭಾಷಾ ವಿಜ್ಞಾನಗಳ ಸಂಬಂಧವೂ ಅಷ್ಟೇ ನಿಕಟವಾದುದು; ವಿವರಣಾತ್ಮಕ, ಐತಿಹಾಸಿಕ ಹಾಗೂ ತೌಲನಿಕ ಭಾಷಾ ವಿಜ್ಞಾನಕ್ಕೆ ಜನಪದಸಾಹಿತ್ಯ ಅಮೂಲ್ಯ ಸಾಮಾಗ್ರಿಯನ್ನೊದಗಿಸಬಲ್ಲದು. ಸಾಮಾನ್ಯ ಜನರ ಭಾಷೆ ಗ್ರಾಮ್ಯ, ಅಸಂಸ್ಕೃತವೆಂದು ಶಿಷ್ಟಜನ ಮೂಗು ಮುರಿಯುತ್ತಿದ್ದಾಗ ಭಾಷೆಯ ಮೂಲ ಸ್ವರೂಪ ಆಡುಮಾತಿನಲ್ಲಿ ಪ್ರತಿಬಿಂಬಗೊಳ್ಳುತ್ತದೆ. ಗ್ರಾಮ್ಯಭಾಷೆ ಅಸಂಸ್ಕೃತವಲ್ಲವೆಂದು ಹೇಳಿದ್ದು ಭಾಷಾ ವಿಜ್ಞಾನ. ಶಾಸನ ಭಾಷೆಯ ಅಧ್ಯಯನ ಎಷ್ಟು ಮುಖ್ಯವೋ, ಎಷ್ಟು ಉಪಯುಕ್ತವೋ ಈ ಸಾಹಿತ್ಯ ಭಾಷೆಯ ಅಧ್ಯಯನವೂ ಅಷ್ಟೇ ಪ್ರಯೋಜನಕಾರಿ. ಅಷ್ಟೇ ಅಲ್ಲ ಅದಕ್ಕಿಂತಲೂ ಇದು ಒಂದು ಕೈ ಮೇಲೆಂದು ಹೇಳಿದರೆ ಅತಿಶಯೋಕ್ತಿ ಯಾಗಲಾರದು. ಶಾಸನದ ಭಾಷೆ ಆಡುಮಾತಿಗೆ ಹತ್ತಿರವೆನ್ನಬಹುದಾದರೂ ಅದು ಆಡು ಮಾತಲ್ಲ. ಆಡು ಮಾತಿನ ವ್ಯಾಪಕತೆ ವೈವಿಧ್ಯವಾಗಲೀ ಅಥವಾ ಜೀವಂತಿಕೆಯಾಗಲಿ ಅಲ್ಲಿ ಕಾಣುವುದಿಲ್ಲ"[1] ಮೌಖಿಕ ಸಾಹಿತ್ಯ ಪರಂಪರೆಯ ದಾಸ್ತಾನಾದ ಜಾನಪದಕ್ಕೂ, ಭಾಷೆಯ ಮೂಲತತ್ವಗಳನ್ನು ತನ್ನೊಡಲಿನಲ್ಲಿ ಬಚ್ಚಿಟ್ಟುಕೊಂಡಿರುವ ಜನರ ಆಡುಮಾತಿಗೂ ಮಹತ್ವವೆಷ್ಟೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕೆಲವು ಭಾಷಾ ಮೂಲ ರೂಪಗಳನ್ನು, ಪದಗಳ ಅವಶೇಷಗಳನ್ನು, ಭಾಷೆಯ ವಿಶಿಷ್ಟ ಪದ ಪ್ರಯೋಗಗಳನ್ನು ಜಾನಪದದಲ್ಲಿ ಕಾಣಲು ಸಾಧ್ಯ. ಒಂದು ಭಾಷೆಯ ವಿಕಾಸಕ್ರಮವನ್ನು ಅರಿಯಲು ಜಾನಪದ ಅಧ್ಯಯನವು ಅಮೂಲ್ಯ ಸಾಮಾಗ್ರಿಯಾಗಿ ಪರಿಣಮಿಸುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಜಾನಪದ ಸಾಹಿತ್ಯ ಪ್ರಕಾರಗಳಾದ ಪುರಾಣ, ಐತಿಹ್ಯ, ಒಗಟು, ಕಥೆ, ಒಡಪು, ಗಾದೆ ಮತ್ತು ಹಾಡು ಮುಂತಾದುವುಗಳಲ್ಲಿ ದಾಖಲಾದ ಸ್ಥಳನಾಮಗಳನ್ನು ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಅಧ್ಯಯನಕ್ಕೆ ಒಳಪಡಿಸಬೇಕಾದ ಅವಶ್ಯಕತೆ ಇದೆ. ಅಲ್ಲದೆ ಸ್ಥಳನಾಮ ಅಧ್ಯಯನದಲ್ಲಿ ಮೌಖಿಕ ಪರಂಪರೆಯ ವಾರಸುದಾರರಾದ ನಮ್ಮ ಜನಪದರು ಹಾಗೂ ಅವರು ಬಳಸುವ ಆಡುಮಾತು ಕೂಡ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಸ್ಥಳನಾಮಕರಣ ಕ್ರಿಯೆಯಲ್ಲಿ ತಾವು ಬಳಸುವ ಜೀವಂತ ಆಡುಭಾಷೆಯ

ಪ್ರಯೋಗಗಳೆಲ್ಲವೂ ಅವರು ಹೆಸರನ್ನಿಟ್ಟಿರುವ ಸ್ಥಳನಾಮಗಳಿರುವ, [illegible] ಕಥೆಗಳಲ್ಲಿ ದಾಖಲಾಗಿರುತ್ತವೆ. "ಶಾಸನಗಳು, ಶಿಲಾ ಶಾಸನಗಳಿಗಿಂತ ಅತ್ಯಂತ ಪ್ರಾಚೀನವಾಗಿದ್ದು, ಅಷ್ಟೇ ಏಕೆ ಲಿಖಿತ ದಾಖಲೆಗಳಿಗಿಂತ ಹಳೆಯದಾಗಿದ್ದು ಭೂತಕಾಲದ ನಾನಾಸ್ತರಾಂತರ್ಗತವಾಗಿರುವ ರಹಸ್ಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಪೂರ್ವರೂಪಗಳ ತಪಾಸಣೆಗೆ ಅಥವಾ ಪುನರ್ರಚನೆಗೆ ಅಳಿದ ಶಬ್ದಗಳ ಶೋಧನೆಗೆ ಅವು ಸಹಾಯಕವಾಗುತ್ತವೆ. ಪದಗಳ ಮೂಲಾರ್ಥವನ್ನರಿಯಬೇಕಾದರೂ ಅವುಗಳಿಗೆ ಶರಣು ಹೋಗಬೇಕಾಗುತ್ತದೆ. ಆಯಾಯ ಯುಗದ ಸಂಪ್ರದಾಯ ರೂಢಿಗನುಗುಣವಾಗಿ ನಿಧಾನವಾಗಿಯಾದರೂ ವ್ಯತ್ಯಸ್ತವಾಗುವ ಹೆಸರುಗಳು ಭಾಷಾ ಚರಿತ್ರೆಯ ರಚನೆಗೆ ಅಪೂರ್ವ ಸಾಧನ ಸಾಮಾಗ್ರಿಗಳನ್ನೊದಗಿಸುತ್ತವೆ. ಕೆಲವಂತು ಭಾಷೆಯ ಪಳೆಯುಳಿಕೆಗಳೆಂದೇ ಹೇಳಬಹುದು. ವರ್ಣನಾತ್ಮಕ, ಚಾರಿತ್ರಿಕ ಹಾಗೂ ತುಲನಾತ್ಮಕ ಭಾಷಾವಿಜ್ಞಾನ ವಿಭಾಗಗಳ ಸೂತ್ರ ಸಮುದಾಯದ ಹಿನ್ನೆಲೆಯಲ್ಲಿ ಇವುಗಳ ಅಧ್ಯಯನ ನಡೆದಾಗ ವರ್ಣಪದ ಮತ್ತು ವ್ಯಾಕರಣ ಪ್ರಕ್ರಿಯೆಗಳ ಮೇಲೆ ಹಲವಾರು ಹೊಸ ಸಂಗತಿಗಳು ಗೋಚರವಾಗುತ್ತವೆ. ಉಪಭಾಷಾ ಪರಿವೀಕ್ಷಣೆಗೆ ಹಾಗೂ ನಿಘಂಟು ರಚನೆಗೆ ಈ ಅಧ್ಯಯನದಿಂದ ಅಪಾರ ಪ್ರಯೋಜನವೊದಗುತ್ತದೆ".[೨] ಭಾಷಾಶಾಸ್ತ್ರಜ್ಞರು ತಾವು ಮಂಡಿಸುವ ಸಿದ್ಧಾಂತಗಳನ್ನು, ಪರಿಣಾಮಕಾರಿಯಾಗಿ ವಿಶ್ಲೇಷಣೆ ಮಾಡಲು, ಭಾಷಾ ತತ್ವಗಳನ್ನು, ಸಿದ್ಧಾಂತಗಳನ್ನು ಒರೆಗೆ ಹಚ್ಚಲು ಹಿಂದಿನಿಂದಲೂ ಬಾಯಿಂದ ಬಾಯಿಗೆ ಮೌಖಿಕ ಪರಂಪರೆಯ ಮೂಲಕ ಉಳಿದು ಬಂದಿರುವ ಮೌಖಿಕ ಸಾಮಾಗ್ರಿಗಳ ಜೊತೆಗೆ ತುಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ನಿಖರವಾಗಿ ನಿರ್ವಚನಗಳನ್ನು ಕೊಡಲು ಸಾಧ್ಯವಾಗುತ್ತದೆ.

ನಾಮ ವಿಜ್ಞಾನವೂ ಕೂಡ ಭಾಷಾ ವಿಜ್ಞಾನದ ಒಂದು ಅಂಗವಾಗಿರುವುದರಿಂದ ಮೌಖಿಕ ಸಾಮಾಗ್ರಿಗಳಾದ ಕತೆ, ಒಗಟು, ಪುರಾಣ, ಐತಿಹ್ಯ ಮತ್ತು ಗಾದೆ ಮೊದಲಾದವುಗಳನ್ನು ಭಾಷಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸದೇ ಜಾನಪದೀಯ, ಚಾರಿತ್ರಿಕ, ಸಮಾಜಶಾಸ್ತ್ರೀಯ ಹಾಗೂ ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಬೇಕಾದ ಅವಶ್ಯಕತೆ ಇದೆ.

ಸಂಸ್ಕೃತ ಭಾಷೆಯಲ್ಲಿ 'ಜನಪದ' ಶಬ್ದ ಬಳಕೆಯಲ್ಲಿದೆ. ಕನ್ನಡದಲ್ಲಿ 'ಹಳ್ಳಿ', 'ಹಳ್ಳಿಗ' ಶಬ್ದಗಳು ಇದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿವೆಯಾದರೂ, 'ಹಳ್ಳಿ' ಎಂಬುದು ಸ್ಥಳನಾಮ ವಿಜ್ಞಾನದ ಅಧ್ಯಯನದಲ್ಲಿ ವಾರ್ಗಿಕವಾಗಿ ಬಳಕೆಗೊಳ್ಳುತ್ತಿರುವುದನ್ನು ಕಾಣಬಹುದು.

'ಜನಪದ' ಶಬ್ದವೂ ಸರಳವೂ ಹೌದು, ಸಂಕೀರ್ಣವೂ ಹೌದು. ಇದು ಜನರ ಭಾಷೆ, ಅವರ ಸ್ಥಳ ಅಥವಾ ದೇಶ, ಜಾತಿ, ಪಂಗಡ, ಆಚಾರ, ವಿಚಾರ, ಕಲೆ, ಸಾಹಿತ್ಯ ಮೊದಲಾದವುಗಳೆನ್ನೆಲ್ಲ ಅಡಕವಾಗಿವೆ. ಈ ಎಲ್ಲ ಅಂಶಗಳೂ ಕೂಡ ಸ್ಥಳನಾಮಕರಣದಲ್ಲಿ ಪ್ರಭಾವ ಬೀರಿರುವುದನ್ನು ಸ್ಥಳನಾಮ ಅಧ್ಯಯನದಲ್ಲಿ ಗಮನಿಸಬಹುದು. ಸ್ಥಳನಾಮಗಳು ಹೇಗೆ? ಪ್ರಾಚೀನ ಕಾಲದ; ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ತನ್ನ ಒಡಲಿನಲಿ ಬಚ್ಚಿಟ್ಟುಕೊಂಡಿರುತ್ತದೆಯೋ ಅದೇ ರೀತಿ ಜನಪದವೂ ಕೂಡ ಇದೆ. "ಜನಪದಕ್ಕೆ ಸಂಬಂಧಿಸಿದ್ದು ಜಾನಪದ, ಜಾನಪದ ಅಭ್ಯಾಸವೆಂದರೆ ಮನುಕುಲದ ಸಾಂಸ್ಕೃತಿಕ ಪರಂಪರೆಯ ಅಭ್ಯಾಸವೆಂದೇ ಅರ್ಥ".[೩]

[illegible]ಕುಲದ ಮೊದಲ [illegible] ಜನಪದವಾದರೆ, [illegible]ಗಳ ಇತಿಹಾಸವೇ ಮಾನವನ ನಾಗರಿಕತೆ[illegible] ಇತಿಹಾಸವಾಗುತ್ತದೆ.

ಭೂಮಿಯಲ್ಲಿ ಹುಟ್ಟಿದ ಪ್ರಾಣಿಗಳಿಗಿಂತ ತಾನು ಭಿನ್ನ ಎಂದು ಮನುಷ್ಯನಿಗೆ ಹೊಳೆದಾಗ ಜನಪದ ಸಂಸ್ಕೃತಿ ಪ್ರಾರಂಭವಾಯಿತು. ಈ ಸಂಸ್ಕೃತಿ ಬದುಕಿನ ಏನೆಲ್ಲ ಆಗುಹೋಗುಗಳನ್ನು ಒಳಗೊಂಡಿತು ಎಂದರೆ; ಬೇಸಾಯದ ಕಲೆಯನ್ನು ರೂಢಿಸಿಕೊಂಡ ಮನುಷ್ಯ ಹಲವು ಆಚಾರ-ವಿಚಾರ, ಕಟ್ಟು-ಪಾಡುಗಳನ್ನು ಹುಟ್ಟು ಹಾಕಿಕೊಂಡು ಸಾಮಾಜಿಕ ಜೀವಿಯಾದ; ಸಾಂಸ್ಕೃತಿಕ ಸಂತಾನವಾದ. ತನ್ನ ಅಲೆಮಾರಿ ಜೀವನಕ್ಕೆ ಅಂತ್ಯವಾಡಿ; ಅಲೆಮಾರಿ ಜೀವನದಲ್ಲಿ ಬೇರು ಬಿಟ್ಟಿದ್ದ ಸಾಂಘಿಕ ಜೀವನದಿಂದ ಸಾಮಾಜಿಕ ಜೀವಿಯಾದ ಮೇಲೆ ಮತ್ತಷ್ಟು ಮತ್ತಷ್ಟು ಗಟ್ಟಿಗೊಂಡಿತು. ಅದು ಬದುಕಿನ ಅವಿಭಾಜ್ಯ ಅಂಗವಾಯಿತು. ಆದಿ ಮಾನವನ ಪ್ರತಿಯೊಂದು ಚಟುವಟಿಕೆಯೂ ಜನಪದವಾಯಿತು. ಆದಿ ಕಾಲದಲ್ಲಿ ಜನಪದ ಸಂಸ್ಕೃತಿಗೆ ಬೆನ್ನೆಲುಬಾದ ಪ್ರಕೃತಿ, ದೇವರು, ಸಂಸಾರ, ಬಾಂಧವ್ಯ, ಜೀವನ ಮೌಲ್ಯಗಳೆಲ್ಲೆಲ್ಲ ಸಾಕಷ್ಟು ಬದಲಾವಣೆಯಾಯಿತು. ಜೀವನ ವಿಕಾಸದ ಅಂಶಗಳಾದ ವಸ್ತು, ಒಡವೆ, ವೇಷಭೂಷಣ, ಕಲೆ, ಕಸುಬು, ಜಾತಿ, ವೃತ್ತಿ ಇವೆಲ್ಲವೂ ಮಾನವ ಸಂಸ್ಕೃತಿಯನ್ನು ರೂಢಿಸಿಕೊಳ್ಳಲು ಪೂರಕ ಅಂಶಗಳಾಗಿ ಪರಿಣಮಿಸಿದವು. ತಾವು ವಾಸಮಾಡುವ ನೆಲೆಗಳಿಗೂ ಅವುಗಳನ್ನು ಪರಿಚಯಿಸಿ; ವಿಸ್ತರಿಸಿ ನಾಮಕರಣ ಮಾಡುವ ಸ್ಥಿತಿಗೆ ಮನುಷ್ಯ ತಲುಪಿದ್ದು ಮಾತ್ರ ಸುಳ್ಳಲ್ಲ.

ಜಾನಪದ ಮೂಲತಃ ದಟ್ಟವಾಗಿ ಕಂಡುಬರುವುದು ಗ್ರಾಮೀಣರಲ್ಲಿ; ಗ್ರಾಮಗಳು ಅದರ ಮೂಲ ನೆಲೆಯಾಗಿದೆ. ಗ್ರಾಮಗಳು ಹಲವು ಸಮುದಾಯಗಳ ಮೊತ್ತ. ಹಿಂದೂ, ಜೈನ, ಬೌದ್ಧ, ಸಿಖ್, ಇಸ್ಲಾಂ ಮೊದಲಾದ ಧರ್ಮೀಯರಿಂದ ಕೂಡಿರುವ ಸ್ಥಳಮಾತ್ರವಾಗಿರದೆ; ಬಹುಭಾಷೆ, ಬಹುಸಂಸ್ಕೃತಿಗಳ ಆಗರವಾಗಿರುತ್ತದೆ. ಅವರದೇ ಆದ ಜನಪದ ಸಾಹಿತ್ಯ, ಕಲೆ, ಆಚರಣೆ, ಸಂಸ್ಕೃತಿಯ ಮಿಳಿತವಾಗಿರುತ್ತದೆ. ಇಲ್ಲಿರುವ ಸಮುದಾಯದವರಲ್ಲಿ ಸ್ಥಳಪುರಾಣ, ಐತಿಹ್ಯ, ಸ್ಥಳನಾಮಕಥೆ, ನಂಬಿಕೆ, ಆಚರಣೆ, ಆರಾಧನೆ ಅಷ್ಟಿಷ್ಟಲ್ಲ. ಕ್ಷೇತ್ರಕಾರ್ಯ ಮಾಡಿದಷ್ಟು ಅಧ್ಯಯನಕ್ಕೆ ಪೂರಕವಾದ ಅಂಶಗಳು ಲಭ್ಯವಾಗುತ್ತವೆ. ಆದ್ದರಿಂದ ತಾವು ವಾಸಮಾಡುವ ಪ್ರತಿಯೊಂದು ಓಣಿಗೂ, ಕೇರಿ ಕೇರಿಗೂ ಅವರದೇ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸ್ಥಳನಾಮಕರಣಗಳನ್ನು ಮಾಡಿರುವುದನ್ನು ಕಾಣಬಹುದು. ಅವುಗಳಿಗೆ ಅದರದೇ ಆದ ವಿಶಿಷ್ಟವಾದ ಹಿನ್ನೆಲೆ ಇರುವುದನ್ನು ಮಾತ್ರ ಮರೆಯುವಂತಿಲ್ಲ. "ಕಲ್ಪನಾ ಸಾಮರ್ಥ್ಯವುಳ್ಳ ಗ್ರಾಮೀಣ ಜನ ತಂತಮ್ಮ ಊರುಗಳನ್ನು ಕುರಿತು ಐತಿಹ್ಯಗಳನ್ನು ಸೃಷ್ಟಿಸುವಲ್ಲಿ ದಂತಕಥೆಗಳನ್ನು ಹೆಣೆಯುವಲ್ಲಿ ನಿಸ್ಸೀಮರು. ಐತಿಹ್ಯಗಳಿಗೆ ಆಧಾರಗಳಿರಬಹುದಾದರೂ, ದಂತಕಥೆಗಳು ಸಾಧಾರಣವಾಗಿ ಅವರ ಸೃಜನಶೀಲ ಪ್ರತಿಭೆಗೆ ಸಾಕ್ಷಿಯಾಗಿರುತ್ತವೆ. ಇಂಥ ಕತೆಗಳನ್ನು ಸೃಷ್ಟಿಸುವಲ್ಲಿ ಅವರ ಐತಿಹಾಸಿಕ ಹಾಗೂ ಪೌರಾಣಿಕ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ"[1] ಆದರೂ ನಮ್ಮಲ್ಲಿ ಎಷ್ಟೋ ಸ್ಥಳಗಳ ನಿಷ್ಪತ್ತಿಯನ್ನು ಹಾಗೂ ಪ್ರಾಚೀನತೆಯನ್ನು ಖಚಿತವಾಗಿ ಗುರುತಿಸುವುದು ಕಷ್ಟಸಾಧ್ಯವಾಗಿದೆ.

ಸ್ಥಳನಾಮಗಳು ಒಂದು ಸಂಸ್ಕೃತಿಯ ಕೀಲಿಕೈಯಾಗಿರುವುದರಿಂದ ಜಾನಪದ ಅಧ್ಯಯನವಿಲ್ಲದೆ ಯಾವುದೇ ಸಂಸ್ಕೃತಿಯ ಅಧ್ಯಯನ ಪರಿಪೂರ್ಣವಾಗುವುದಿಲ್ಲ. "ಜಾನಪದ ದೃಷ್ಟಿಯಿಂದ ಗ್ರಾಮನಾಮಗಳ

[illegible] ಸ್ವಾರಸ್ಯಕರವಾಗಿರುತ್ತದೆ [illegible] ಧರ್ಮವನ್ನು, ಅವರ ಬುದ್ಧಿ ಸಾಮರ್ಥ್ಯವನ್ನು ಹಾಗೂ ಸಂಸ್ಕೃತಿಯನ್ನು ಅರಿಯುವ ಕಾರಣಕ್ಕಾಗಿಯೂ ಅದಕ್ಕೆ ಬೆಲೆಯಿದೆ. ಹಲವಾರು ಗ್ರಾಮಗಳಿಗೆ ಅಥವಾ ಸ್ಥಳಗಳಿಗೆ ಹೆಸರು ಕೊಟ್ಟವರು ಗ್ರಾಮೀಣರೆಂಬುದನ್ನು ಮರೆಯಲಾಗದು”.[೩೩] ಸಾಮಾನ್ಯ ಜನರೇ ಸೃಷ್ಟಿಸಿರುವ ಸ್ಥಳನಾಮಗಳನ್ನು ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಒಗಟು, ಒಡಪು, ಗಾದೆ-ಗೀತೆ ಮುಂತಾದ ಮೌಖಿಕ ದಾಖಲೆಗಳನ್ನು ಅಧ್ಯಯನ ಮಾಡಿ; ಸ್ಥಳನಾಮಗಳಲ್ಲಿರುವ ವೈವಿಧ್ಯಮಯ ಅಂಶಗಳನ್ನು ಹೊರಹಾಕುವ ನಿಟ್ಟಿನಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೭.೧. ಐತಿಹ್ಯ ಮತ್ತು ಸ್ಥಳನಾಮಗಳು

ನಮ್ಮ ಜನಪದರು ತಮ್ಮ ಕಣ್ಣಿಗೆ ಕಾಣುವ ಒಂದೊಂದು ವಸ್ತುವಿಗೂ ಒಂದೊಂದು ಹೆಸರಿಡುತ್ತಾರೆ. ಆ ಹೆಸರಿನ ಹಿನ್ನಲೆಯಲ್ಲಿ ಏನೋ ನಡೆದಿರುತ್ತದೆ ಎಂದು ಕಲ್ಪಿಸಿ ತಮ್ಮದೇ ಆದ ಧಾಟಿಯಲ್ಲಿ ಕಥೆ ಕಟ್ಟಿ ಹೇಳುತ್ತಾರೆ. ತಮ್ಮ ಕಲ್ಪನಾಶಕ್ತಿಯ ಮೂಲಕ ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳಾಗುತ್ತವೆ.[೧] ಜನಪದರಲ್ಲಿ ಐತಿಹ್ಯವೇ ಇತಿಹಾಸ ಎಂಬ ತಿಳುವಳಿಕೆಯಿದೆ. ಇವರ ದೃಷ್ಟಿಯಲ್ಲಿ ಇತಿಹಾಸವು ನಿಜವೇ ಆಗಿರುತ್ತದೆ. ಅಂದರೆ ನಡೆದ ಘಟನೆಗಳ ನಿರೂಪಣೆ; ಈ ಘಟನೆಗಳ ನಿರೂಪಣೆಯ ಉದ್ದೇಶ ಮನೋರಂಜನೆಯಾಗಿರುವುದಿಲ್ಲ. ಬದಲಾಗಿ ಬದುಕಿಗೆ ಹಿರಿದಾದ ಮಹತ್ವವನ್ನು ದೊರಕಿಸಿ ಕೊಡುವುದಾಗಿರುತ್ತದೆ.

ಐತಿಹ್ಯ ಇತಿಹಾಸಕ್ಕೆ ಸಮೀಪವಾಗಿರುವಂತದ್ದು. “ಇತಿಹಾಸವೆನ್ನುವುದು ನಡೆದ ಘಟನೆಗಳ, ಲಿಖಿತ ಆಧಾರಗಳ ದಾಖಲಾತಿ ನಿರೂಪಣೆ ಎಂದು ತಿಳಿಯಲಾಗುತ್ತದೆ. ಶಾಸನ, ಗ್ರಂಥಸ್ಥ ಸಾಹಿತ್ಯ, ವಿದೇಶಿ ಪ್ರವಾಸಿಗರ ಬರಹಗಳು, ಬಖೈರುಗಳು, ನಾಣ್ಯಗಳು, ಉತ್ಖನನದ ಮೂಲಕ ಸಂಗ್ರಹಿಸಿದ ಅವಶೇಷಗಳು, ಪಳೆಯುಳಿಕೆಗಳು ಮುಂತಾದವುಗಳ ಜೊತೆಗೆ ನಡವಳಿಕೆ ಸಂಪ್ರದಾಯಗಳೂ ಇದರ ರಚನೆಗೆ ಆಕರ ಸಾಮಾಗ್ರಿಗಳಾಗುತ್ತವೆ”.[೨] ಇತಿಹಾಸವು ಸಾಕ್ಷ್ಯಾಧಾರಗಳ ಮೂಲಕ ರಚಿಸಲ್ಪಟ್ಟಿರುವುದೆಂಬುದು ತಿಳಿದುಬರುತ್ತದೆ. ನಿರ್ದಿಷ್ಟವಾದ ಒಂದು ಭೌತಿಕವಾದ ದಾಖಲೆಯ ಅವಶ್ಯಕತೆ ಇತಿಹಾಸಕ್ಕಿದೆ. ‘ಐತಿಹ್ಯ’ವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ; ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ಗದ್ಯರೂಪದ ನಿರೂಪಣೆ. ಒಂದು ದೃಷ್ಟಿಯಲ್ಲಿ ಇದು ಜನಪದ ಇತಿಹಾಸ. ಇಲ್ಲಿ ಲಿಖಿತ ದಾಖಲೆಗಳೇನೂ ಇರುವುದಿಲ್ಲ”.[೩] ಪ್ರಾಚೀನ ಕಾಲದಲ್ಲಿ ಘಟಿಸಿರುವ ಚಾರಿತ್ರಿಕ ಸಂಗತಿಯೊಂದಕ್ಕೆ ವದಂತಿಗಳು ಸೇರಿ ಕ್ರಮೇಣ ಅಪೂರ್ವವೂ, ಅದ್ಭುತವೂ ಆದ ಸನ್ನಿವೇಶಗಳು ಒಳಗೊಳ್ಳುತ್ತಾ ತಲೆಮಾರುಗಳ ಮೂಲಕ ಹರಿದು ಬರುವಾಗಿನ ಒಂದು ಹಂತದಲ್ಲಿ ಐತಿಹ್ಯವು ನಿಧಾನವಾಗಿ ರೂಪುಗೊಳ್ಳುತ್ತದೆ. ಹೀಗೆ ಚಾರಿತ್ರಿಕ ಸಂಗತಿಯೊಂದು ಕಲ್ಪನೆಯಲ್ಲಿ; ನಿರೂಪಕನ ನಿಜ ಬದುಕಿನಲ್ಲಿ ಅನುಭವಿಸದೇ ಇದ್ದ ಆಸೆಗಳನ್ನು ಪೂರೈಕೆಯ ಪರಿಣಾಮವಾದ ಎಲ್ಲ ಅಭಿವ್ಯಕ್ತಿಗಳೂ ಕೂಡ ಇದರಲ್ಲಿ ಸೇರಿ ಐತಿಹ್ಯಗಳಾಗಿ ರೂಪಾಂತರವಾಗುವುದನ್ನು ಗಮನಿಸಬಹುದು. ಹೀಗೆ ಮೂಲ ಘಟನೆಯೊಂದರ ಸುತ್ತಲೂ ರಮ್ಯವಾದ, ಕಲ್ಪನಾತೀತವಾದ ವಿವರಣೆಯನ್ನು ಬೆಳೆಸಲಾಗುತ್ತದೆ. ಡಾ.ತಾಳ್ತಜೆ ವಸಂತಕುಮಾರ ಅವರು

ಇದನ್ನು ಸರಿಯಾಗಿಯೇ ಗ್ರಹಿಸಿದ್ದಾರೆ. "ಐತಿಹ್ಯ ಇತಿಹಾಸದಿಂದ ಬಹುದೂರ ಸಾಗಿರುತ್ತದೆ ಅದು ಪೂರ್ತಿ ಕಲ್ಪಿತ ದಂತಕತೆಯೂ ಅಲ್ಲ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳದ ವೈಶಿಷ್ಟ್ಯ ಅಥವಾ ವ್ಯಕ್ತಿಯೊಬ್ಬನ ಸಾಧನೆ, ಆ ಪರಿಸರದ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿರುತ್ತದೆ. ಆ ಪ್ರಭಾವವೇ ಪರಿಣಾಮವಾಗಿ ಅವರಲ್ಲೊಬ್ಬ ಪ್ರತಿಭಾಶಾಲಿ ಅನಿರ್ದಿಷ್ಟ ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿ ಬಿಡುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ". ಜನಪದರ ಮಟ್ಟಿಗೆ ಹೇಳುವುದಾದರೆ ಮೌಖಿಕ ಪರಂಪರೆಯ ಐತಿಹ್ಯಗಳೇ ಚರಿತ್ರೆಗಳಾಗಿರುತ್ತವೆ. ವಾಸ್ತವವಾಗಿ ನಡೆದ ಘಟನೆಯ ನಿರೂಪಣೆ ಎಂಬಂತೆ ಕೆಲವೊಂದು ಅವಶೇಷ, ಪಳೆಯುಳಿಕೆ, ವಸ್ತು, ಸ್ಥಳ, ಬೆಟ್ಟ-ಗುಡ್ಡ, ಕೆರೆ ಮೊದಲಾದವುವನ್ನು ಘಟನೆಯ ಕುರುಹಾಗಿ ತೋರಿಸುವುದನ್ನು ಕಾಣಬಹುದು. ನಿರೂಪಕನಲ್ಲಿ ದೃಢೀಕರಿಸುವಂಥ ಇಂಥ ಭೌಗೋಳಿಕ ದಾಖಲೆಗಳು ಯಾವಾಗಲೂ ತನ್ನ ಐತಿಹ್ಯಕ್ಕೆ ನೆರವಾಗುವಂತೆ ನೋಡಿಕೊಳ್ಳುವ ಜನಪದರ ಜಾಣ್ಮೆ ಮೆಚ್ಚುವಂಥದ್ದು.

ವ್ಯಕ್ತಿಗಳಿಗೆ, ಸ್ಥಳಗಳಿಗೆ, ಘಟನೆಗಳಿಗೆ ಸಂಬಂಧಿಸಿದ ಯಾವುದೋ ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಐತಿಹ್ಯಗಳಲ್ಲಿ ಸ್ಥಳೀಯ ಅಥವಾ ಪ್ರಾದೇಶಿಕ ಐತಿಹ್ಯ ಮತ್ತು ಪ್ರವಾಸಿ ಐತಿಹ್ಯಗಳೆಂದು ವಿಂಗಡಿಸಲಾಗುತ್ತದೆ. ಸ್ಥಳೀಯ ಐತಿಹ್ಯವು ಸ್ವರೂಪದಲ್ಲಿ ಸಣ್ಣದು. ಆಶಯಗಳೂ ಕಡಿಮೆ. ಅವು ನಿರ್ದಿಷ್ಟವಾದ ಒಂದು ಸ್ಥಳಕ್ಕೆ ಸೀಮಿತವಾಗಿರುತ್ತದೆ. ಆ ಸ್ಥಳದ ವೈಶಿಷ್ಟ್ಯವನ್ನು ಆಕರ್ಷವಾಗಿ ಮನ ಮುಟ್ಟುವಂತೆ ವರ್ಣಿಸುವಲ್ಲಿ ಸಫಲತೆಯನ್ನು ಪಡೆದುಕೊಳ್ಳುವುದು. ತಾವು ಹುಟ್ಟಿದ ಸ್ಥಳದ ಅಸಾಧಾರಣ ಲಕ್ಷಣವನ್ನು ವಿವರಿಸುವುದೇ ಅದರ ಮುಖ್ಯ ಗುರಿಯಾಗಿರುವುದರಿಂದ ಅಲ್ಲಿನ ರೀತಿ-ನೀತಿ, ಸಂಪ್ರದಾಯ, ನಂಬಿಕೆ, ಆಚರಣೆ ಹಾಗೂ ಸಂಸ್ಕೃತಿಯ ಎಲ್ಲ ಅಂಶಗಳು ಐತಿಹ್ಯಗಳಲ್ಲಿ ಮನೆ ಮಾಡಿಕೊಂಡಿರುತ್ತವೆ. ಇವು ಆಸುಪಾಸಿನ ಪ್ರದೇಶದಲ್ಲಿ ಪರಂಪರಾಗತವಾಗಿ ಹುಟ್ಟುತ್ತವೆ ಮತ್ತು ಬದುಕುತ್ತವೆ. ಯಾವುದಾದರೂ ಕಾರಣಕ್ಕಾಗಿ ಸ್ಥಳೀಯ ಲಕ್ಷಣಗಳು ಮರೆಯಾದರೆ; ಆ ಐತಿಹ್ಯ ಅಗೋಚರವಾಗುವ ಸಂಭವವಿರುತ್ತದೆ. ಸ್ಥಳೀಯ ಐತಿಹ್ಯಗಳು ಅಲ್ಲಿಯೇ ಉಳಿಯುತ್ತವೆ ಅಥವಾ ಅಳಿಯುತ್ತವೆ. ಅವು ಸಾಮಾನ್ಯವಾಗಿ ತಮ್ಮ ಪ್ರದೇಶದ ಗಡಿಯನ್ನು ದಾಟಿ ಹೋಗುವುದಿಲ್ಲ.

ತಮ್ಮ ಸೀಮೆಯನ್ನು ದಾಟಿ, ಸ್ವದೇಶ, ವಿದೇಶಗಳೆಲ್ಲಲ್ಲ ಹರಡುವ ಕಥೆಗಳನ್ನು ಪ್ರವಾಸಿ ಐತಿಹ್ಯಗಳೆಂದು ಕರೆಯುತ್ತಾರೆ. ಕಾಲ್ಪನಿಕ ಕಥೆಗಿಂತ ಚಿಕ್ಕದಾದ, ಗದ್ಯಾತ್ಮಕವಾದ ಮಿತ ಪಾಠಾಂತರಗಳುಳ್ಳ ಕಥೆಯೇ ಪ್ರವಾಸಿ ಐತಿಹ್ಯ. ಇವುಗಳ ಆಶಯಗಳ ಸಂಖ್ಯೆ ಹೆಚ್ಚು, ಪಾಠಾಂತರಗಳು ಸಹ ಸಾಕಷ್ಟು ಸಂಖ್ಯೆಯಲ್ಲಿರುತ್ತವೆ. ಯಾವುದೇ ಒಂದು ವಾಸ್ತವಿಕ ಘಟನೆ ಇದ್ದರೂ ಅದರ ಸುತ್ತ ಕತೆ ವಿಕಾಸಗೊಳ್ಳುವುದ ರಿಂದ ಬಹುಮೂಲ ಸಿದ್ಧಾಂತಗಳು ಅನ್ವಯವಾಗುವುದರಿಂದ ಇವುಗಳ ಸ್ಥಳದ ನಿರ್ದಿಷ್ಟ ಕಾಲವನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯವಾದುದು. ಯಾವುದೋ ಒಂದು ಆಚರಣೆ ಅಥವಾ ನಂಬಿಕೆ ಅವುಗಳಿಗೆ ಆಧಾರವೆಂದು ಸ್ಪಷ್ಟವಾಗಿ ಹೇಳಲಿಕ್ಕೆಬಾರದು. ಏಕೆಂದರೆ ಪ್ರವಾಸಿ ಐತಿಹ್ಯ ಬೇರೆ ಬೇರೆ ದೇಶದ ಆಚರಣೆಗಳಲ್ಲಿ ಸಾದೃಶ್ಯವಿರಬಹುದು; ಅಥವಾ ಬೇರೊಂದು ಆಚರಣೆ ಆಧಾರವಾಗಬಹುದಾದ ಸಾಧ್ಯತೆ ಇದೆ.

ಸ್ಥಳನಾಮಗಳಿಗೆ ಸಂಬಂಧಿಸಿದಂತೆ ನಾವು ಸ್ಥಳೀಯ ಅಥವಾ ಪ್ರಾದೇಶಿಕ ಐತಿಹ್ಯದ ಮೊರೆ ಹೋಗಬೇಕಾಗುತ್ತದೆ. ನಿರ್ದಿಷ್ಟ ಸ್ಥಳ ಒಂದರ ಸ್ಪಷ್ಟವಾದ ವಿವರಣೆಯನ್ನು ಅದು ಕೊಡುತ್ತಿರುತ್ತದೆಂಬುದನ್ನು ಮರೆಯುವಂತಿಲ್ಲ. "ನಿರ್ದಿಷ್ಟ ಸ್ಥಳಕ್ಕೆ ಸಂಬಂಧಪಟ್ಟ ಐತಿಹ್ಯವು ಸ್ಥಳೈತಿಹ್ಯವೆನಿಸುತ್ತದೆ".[೧೦] ಸ್ಥಳ ಐತಿಹ್ಯವೆಂದ ಮಾತ್ರಕ್ಕೆ ಅವುಗಳೆಲ್ಲ ಸ್ಥಳಕ್ಕೆ ಸೀಮಿತವಾದ ಐತಿಹ್ಯಗಳೇ ಆಗಿರಲು ಸಾಧ್ಯವಿರದೇ ಇರಬಹುದು. ವ್ಯಕ್ತಿ ಕೇಂದ್ರಿತ ಐತಿಹ್ಯಗಳಲ್ಲಿ ಸ್ಥಳ ಸಂಬಂಧಿಯಾದ ಅಂಶಗಳು ಕಾಣಿಸಿಕೊಳ್ಳಬಹುದು. ಇಲ್ಲವೇ ಘಟನಾಪ್ರಧಾನ ಐತಿಹ್ಯಗಳಲ್ಲೂ ಸ್ಥಳ ಸಂಬಂಧಿತ ಅಂಶಗಳು ಬರುವ ಸಾಧ್ಯತೆ ಇದೆ.

ಐತಿಹ್ಯಗಳನ್ನು ಹಲವಾರು ಜಾನಪದ ವಿದ್ವಾಂಸರು ಹಲವು ಬಗೆಗಳಾಗಿ ವಿಂಗಡಿಸಿದ್ದಾರೆ. ಸ್ಥಳನಾಮಗಳಿಗೆ ಸಂಬಂಧಪಟ್ಟಂತೆ ಈ ಐತಿಹ್ಯಗಳ ವರ್ಗೀಕರಣವನ್ನು ಆರೋಪಿಸಿ ನೋಡಿದಾಗ ರಿಚಾರ್ಡ್ ಡಾರ್ಸನ್ನ ಅವರು ೧. ವ್ಯಕ್ತಿ ಐತಿಹ್ಯಗಳು ೨. ಸ್ಥಳ ಐತಿಹ್ಯಗಳು ೩. ಘಟನಾ ಐತಿಹ್ಯಗಳೆಂದು ವರ್ಗೀಕರಿಸಿದ್ದಾರೆ. ವಸಂತ ಕುಮಾರ ತಾಳ್ತಜೆಯವರೂ ಡಾರ್ಸನ್ನರ ವರ್ಗೀಕರಣವನ್ನೇ ಆಶ್ರಯಿಸಿ

೧. ವ್ಯಕ್ತಿಪ್ರಧಾನ ಐತಿಹ್ಯಗಳು

೨. ಸ್ಥಳಪ್ರಧಾನ ಐತಿಹ್ಯಗಳು

೩. ಘಟನಾ ಪ್ರಧಾನ ಐತಿಹ್ಯಗಳು ಎಂದು ವರ್ಗೀಕರಿಸಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ಕಂಡುಬರುವ ಐತಿಹ್ಯಗಳನ್ನು ಈ ಮೇಲಿನ ವರ್ಗೀಕರಣಕ್ಕೆ ಸಮರ್ಪಕವಾಗಿ ಹೊಂದಿಕೊಳ್ಳುವುದು.

ವ್ಯಕ್ತಿ ಪ್ರಧಾನ ಐತಿಹ್ಯಗಳಲ್ಲಿ ಅಸಾಮಾನ್ಯವಾದ ಅಥವಾ ವಿಶಿಷ್ಟವಾದ ವ್ಯಕ್ತಿಯೊಬ್ಬನ ಸಾಧನೆಯ ನಿರೂಪಣೆ ಇರುತ್ತದೆ. ಐತಿಹ್ಯದ ಉಳಿದ ವಿವರಗಳು ಈ ವ್ಯಕ್ತಿಯ ಸಾಧನೆಗೆ ಪೂರಕವಾಗಿ ಬರುತ್ತವೆ. ವ್ಯಕ್ತಿಯು ಒಂದು ನಿರ್ದಿಷ್ಟವಾದ ಸ್ಥಳಕ್ಕೆ ಬದ್ಧನಾಗಿದ್ದರೂ ಕೂಡ ಸ್ಥಳದ ಮಹತ್ವವನ್ನು ಮೀರಿ ಅವನ ವ್ಯಕ್ತಿತ್ವ ಕೆಲಸ ಮಾಡುತ್ತಿರುತ್ತದೆ. ಅಲ್ಲದೇ ವ್ಯಕ್ತಿಯಿಂದಾಗಿಯೇ ಆ ಸ್ಥಳಕ್ಕೆ ಆ ಹೆಸರು ಬಂದಿರುವ ಸಾಧ್ಯತೆ ಇರುತ್ತದೆ. ಉದಾ: ಬ್ರಾಹ್ಮಣಿಪುರ.

ಸ್ಥಳಪ್ರಧಾನ ಐತಿಹ್ಯಗಳಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಸ್ಥಳದ ವೈಶಿಷ್ಟ್ಯತೆಯೇ ಆಗಿರುತ್ತದೆ. ಇಲ್ಲಿ ಪ್ರಧಾನವಾಗಿ ಪ್ರಕೃತಿ ಜನ್ಯವಾದವು. ಇಲ್ಲಿ ವ್ಯಕ್ತಿಗೆ ಸ್ಥಾನವಿದ್ದರೂ ನಗಣ್ಯನಾಗಿ ಸ್ಥಳಕ್ಕೆ ಬಹಳ ಮಹತ್ವವಿರುತ್ತದೆ. ನಿಸರ್ಗದಲ್ಲಿನ ಅನೇಕ ವಸ್ತುವಿಷಯಗಳೇ ಇಲ್ಲಿನ ಐತಿಹ್ಯಕ್ಕೆ ಆಧಾರಗಳಾಗಿರುತ್ತವೆ. ಸ್ಥಳದ ವಿಶಿಷ್ಟತೆ ಅಥವಾ ಅಸಮಾನ್ಯತ್ವವೇ ಈ ಐತಿಹ್ಯಕ್ಕೆ ತಳಹದಿಯಾಗಿ ಕೆಲಸ ನಿರ್ವಹಿಸುತ್ತದೆ. ಒಂದು ಸ್ಥಳಕ್ಕೆ ಇರುವ ಹೆಸರಿನ ವ್ಯುತ್ಪತ್ತಿ ಅಥವಾ ಹಿನ್ನೆಲೆಗೆ ಇಂಥ ಐತಿಹ್ಯಗಳು ರಂಜಕವಾದ ಕತೆಯನ್ನು ಹೊಂದಿರುತ್ತದೆ. ಉದಾ: ಕೂನಗಲ್ಲು

ಘಟನಾ ಪ್ರಧಾನ ಐತಿಹ್ಯಗಳಲ್ಲಿ ಒಂದು ನಿರ್ದಿಷ್ಟವಾದ ಘಟನೆಯೇ (Incident) ಪ್ರಧಾನವಾಗಿರುತ್ತದೆ. ಇಲ್ಲಿ ಸ್ಥಳ ಮತ್ತು ವ್ಯಕ್ತಿಗಳು ನಂತರದ ಸ್ಥಾನದಲ್ಲಿ ಬರುತ್ತಾರೆ. ಎಷ್ಟೋ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಇರುವುದಕ್ಕೆ ಬದಲು; ಜನರ ಗುಂಪು ಅಥವಾ ಜನ ಸಮೂಹವೇ ಇರುತ್ತದೆ.

ನಮ್ಮ ಜನಪದರು ಈ ರೀತಿಯ ಐತಿಹ್ಯಗಳ ಸೃಷ್ಟಿಕರ್ತರು, ಆದರೆ ಐತಿಹ್ಯಗಳ ಹಿಂದೆ ಚಾರಿತ್ರಿಕವಾದ ಸತ್ಯ ಘಟನೆ ಇರುವುದು. ಈ ಘಟನೆಯನ್ನು ನಿರೂಪಿಸುವಾಗ ತನ್ನ ಭಾವದಲ್ಲಿ ಮೂಡಿದ ಕಲ್ಪನೆಗಳಿಗೆ ಮೂರ್ತ ಸ್ವರೂಪವನ್ನು ಕೊಡುತ್ತಾನೆ ಎಂಬುದು ಮಾತ್ರ ಸತ್ಯ. ಆದರೆ ಇವು ಉತ್ಪ್ರೇಕ್ಷೆ ಎನಿಸಿದರೂ ಅದು ಯಾವುದನ್ನೂ ಉದ್ದೇಶಪೂರ್ವಕವಾಗಿ ಸೇರಿಸಿದ್ದಲ್ಲ. ತಾನು ವಾಸಮಾಡುವ ಊರು ಮತ್ತು ಸಂಸ್ಕೃತಿ ಮೇಲಿನ ಅಭಿಮಾನ; ತಿಳುವಳಿಕೆಯೇ ಇದಕ್ಕೆ ಕಾರಣವಾಗಿರಬಹುದು. ಸ್ಥಳನಾಮಗಳಿಗೆ ಸಂಬಂಧಪಟ್ಟ ಐತಿಹ್ಯಗಳು ಮಾತ್ರ ರಾಮನಗರ ಜಿಲ್ಲೆ ಅಥವಾ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಇವು ನಮ್ಮಲ್ಲಿರುವಂತೆ "ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಜಗತ್ತಿನಲ್ಲೆಲ್ಲ ವ್ಯಾಪಕವಾಗಿ ಹರಡಿವೆ. ಅವು ಯತಾರ್ಥವಾಗಿರಬಹುದು ಇಲ್ಲವೇ ಕಾಲ್ಪನಿಕವಾಗಿರಬಹುದು"[10] ಒಟ್ಟಿನಲ್ಲಿ ಸ್ಥಳನಾಮ ಅಧ್ಯಯನದ ಸಂದರ್ಭದಲ್ಲಿ ಐತಿಹಾಸಿಕ ಆಕರಗಳಾಗಿ ಐತಿಹ್ಯಗಳನ್ನು ಪರಿಗಣಿಸಬೇಕಾದ ಅವಶ್ಯಕತೆ ಇದೆ. ವಾಸ್ತವಾಂಶ -ನೈಜಘಟನೆ-ಇತಿಹಾಸದ ಎಳೆ ಇರುವ ಐತಿಹ್ಯಗಳ ಕಲ್ಪನೆಯ ರೆಕ್ಕೆ ಪುಕ್ಕಗಳನ್ನು ಕತ್ತರಿಸಿದರೆ ಖಂಡಿತ ಇವು ಇತಿಹಾಸ ಆಕರ ಗ್ರಂಥವಾಗುವುದರಲ್ಲಿ ಎರಡು ಮಾತಿಲ್ಲ.

ಪವಾಡ, ನಂಬಿಕೆ, ಉತ್ಪ್ರೇಕ್ಷೆ ಮೊದಲಾದ ಜನಪದ ಅಂಶಗಳು ಐತಿಹ್ಯಗಳಲ್ಲಿ ಅಡಗಿರುವುದರಿಂದ ನಿಜ ಸಂಗತಿ ಗುಪ್ತವಾಗಿರಲು ಕಾರಣವಾಗಿರಬಹುದು. ಆದರೆ ಐತಿಹ್ಯಗಳಲ್ಲಿ ಸಾಂಸ್ಕೃತಿಕ ಚರಿತ್ರೆ ಹಾಗೂ ಪ್ರಚಲಿತವಿರುವ ನಂಬಿಕೆ, ಆಚಾರವಿಚಾರ, ಸ್ಥಳ ವಿವರಗಳನ್ನು; ಒಟ್ಟಾರೆ ಸಂಸ್ಕೃತಿಯನ್ನು ತಿಳಿದುಕೊಳ್ಳುವುದಕ್ಕೆ ಐತಿಹ್ಯಗಳು ಬಹು ಮುಖ್ಯ ಆಧಾರವಾಗಬಲ್ಲವು. ಅನೇಕ ಪ್ರಾಕೃತಿಕ ವೈಶಿಷ್ಟ್ಯತೆಗಳು, ಚಾರಿತ್ರಿಕ ಸಂಗತಿಗಳು ಹಾಗೂ ಚಾರಿತ್ರಿಕ ಸ್ಥಳಗಳೂ ಕೂಡ ಜನರ ದೃಷ್ಟಿಯಲ್ಲಿ ಮರೆಯಾಗದಂತೆ ನೋಡಿಕೊಳ್ಳುವ ಸ್ಮೃತಿ ಗುಳಿಗೆಗಳಂತೆ ಐತಿಹ್ಯಗಳು ವಹಿಸುತ್ತಿರುವ ಪಾತ್ರ ತುಂಬಾ ಹಿರಿದಾದದ್ದು ಮತ್ತು ಸಾಂಸ್ಕೃತಿಕ ಅನನ್ಯತೆ ಇರುವ ಈ ನಾಡಿಗೆ ಮುಖ್ಯವಾಗಿ ಬೇಕಾದವುಗಳಾಗಿವೆ.

ರಾಮನಗರ ಜಿಲ್ಲೆಯ ಪರಿಸರದಲ್ಲಿ ಸಿಗುವ ಕೆಲವು ಸ್ಥಳ ಐತಿಹ್ಯಗಳು ಇಂತಿವೆ.

ಕೋಟಹಳ್ಳಿ ಬಳಿಯ ಶಿಲಾಸಮಾಧಿ ಪುರಾಣ (ರಾ)

ಕಲಿಯುಗ ಪ್ರಾರಂಭವಾದಾಗ ಕಲಿಪುರುಷ ಹೆಂಡತಿಯನ್ನು ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ತನ್ನ ತಾಯಿಯ ಮೇಲೆ ಚಪ್ಪಲಿಯನ್ನು ಹೊರೆಸಿಕೊಂಡು ಪೂರ್ವದಿಂದ ಪಶ್ಚಿಮದ ಕಡೆಗೆ ಆಕಾಶಮಾರ್ಗವಾಗಿ ಹೊರಟನಂತೆ. ಆಗ ತ್ರಿಮೂರ್ತಿಗಳು ಕೈಲಾಸದಿಂದ ಇವನನ್ನು ಅಡ್ಡಗಟ್ಟಲು ಬಂದಂರತೆ; ಆಗ ಭೂ ಲೋಕದಲ್ಲಿ ಚೋಳರು ಗುಡಿ ಗುಂಡಾರಗಳನ್ನು ಕಟ್ಟಿಕೊಂಡು ಮುಂದೆ ಸಾಗುತ್ತಿದ್ದಂತೆ. ಇದನ್ನು ಕಂಡ ತ್ರಿಮೂರ್ತಿಗಳು ಇಂದ್ರನಲ್ಲಿಗೆ ಹೋಗಿ ಭೂಲೋಕದಲ್ಲಿ ಜನರು ಹಲವು ಗುಡಿ ಗೋಪುರಗಳನ್ನು ಕಟ್ಟಿಕೊಂಡು ದೇವಲೋಕದ ನಮ್ಮನ್ನು ಮರೆತಿರುವರೆಂದು ಮನವಿ ಮಾಡಿಕೊಂಡನಂತೆ. ಆಗ ದೇವೇಂದ್ರನು ದೇವ ದೇವಲೋಕದಿಂದ ಭೂಲೋಕಕ್ಕೆ ವಿಷದ ಕಜ್ಜಾಯಗಳನ್ನು ಸುರಿಸಿದನಂತೆ. ಹಸಿವಿಂದ ಬಳಲುತ್ತಿದ್ದ ಜನ ವಿಷದ ಕಜ್ಜಾಯಗಳನ್ನು ಆಯ್ದುಕೊಂಡು ಖರ್ಜಿಕಾಯಿ ತಿಂದಂತೆ ತಿಂದರು. ಖಾಯಿಲೆಯಿಂದ ಬಳಲುತ್ತಿದ್ದ

ರೋಗಿಗಳು, ಹೆಳವರು, ಕುಂಟರು, ಕುರುಡರೆಲ್ಲಾ ಚೆನ್ನಾಗಿ ಆರೋಗ್ಯವಾದರಂತೆ. ಇದರಿಂದ ಕೋಪಗೊಂಡ ದೇವೇಂದ್ರನು ಮತ್ತೊಮ್ಮೆ ಬೆಂಕಿ ಮಳೆಯನ್ನು ಸುರಿಸಿದನಂತೆ. ಇದರಿಂದ ರಕ್ಷಣೆ ಪಡೆಯಲು ತಮ್ಮ ಸುತ್ತ ಕಲ್ಲು ಚಪ್ಪಡಿಗಳನ್ನು ಅಡ್ಡಲಾಗಿ ಇಟ್ಟುಕೊಂಡು ತಲೆಯ ಮೇಲೊಂದು ಕಲ್ಲು ಚಪ್ಪಡಿಯನ್ನು ಹೊತ್ತುಕೊಂಡು ರಕ್ಷಣೆ ಪಡೆದರಂತೆ. ಇದನ್ನು ಕಂಡು ಕೋಪೋದ್ರಿಕ್ತನಾದ ದೇವೇಂದ್ರನು ಮೇಲಿಂದ ಮಣ್ಣನ್ನು ಸುರಿಸಿದನಂತೆ. ಆಗ ಅವರೆಲ್ಲರು ಜೀವಂತ ಸಮಾಧಿಯಾದರು. ಅದರ ಕುರುಹುಗಳೇ ಈ ಬೃಹತ್ ಶಿಲಾಸಮಾಧಿಗಳು.[೧೨]

ಅರಳಾಸಂದ್ರ (ಚ)

ಬಹಳ ವರ್ಷಗಳ ಹಿಂದೆ ಅಣ್ಣ ತಮ್ಮಂದಿರು ಎನ್ನಲಾದ ಇಬ್ಬರು ಮುಸಲ್ಮಾನ ಗುರುಗಳು ತಪಸ್ಸನ್ನು ಆಚರಿಸುವ ಸಲುವಾಗಿ ಪ್ರಶಸ್ತವಾದ ಸ್ಥಳವನ್ನು ಹುಡುಕುತ್ತ ಬಂದಾಗ; ಈ ಭಾಗ ಬೇರೆ ಜಾಗಗಳಿಗಿಂತ ಹೆಚ್ಚು ಶ್ರೇಷ್ಠವಾಗಿ ಕಂಡುಬಂದಿತು. ಆದರೂ ದೊಡ್ಡ ಗುರು ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳಿ ಅವರು ನೀರಿರುವ ಜಾಗವನ್ನು ಹುಡುಕಿಕೊಂಡು ಶಿವನ ಸಮುದ್ರದಲ್ಲಿ ನೆಲೆಸಿದರು. ಆದರೆ ಚಿಕ್ಕ ಗುರು ಮಾತ್ರ ಭಗವಂತನ ಮೇಲೆ ಭಕ್ತಿಯಿಟ್ಟು ಶ್ರದ್ಧೆಯಿಂದ ಮರವೊಂದರ ಕೆಳಗೆ ತಪಸ್ಸು ಮಾಡುತ್ತಿದ್ದ ಸಂದರ್ಭದಲ್ಲಿ; ಎಲ್ಲಿಂದಲೋ ಹಾರಿ ಬಂದ ಪಕ್ಷಿಯೊಂದು ಇವರು ನೋಡುತ್ತಿದ್ದಂತೆಯೇ, ಅದು ತನ್ನ ಕಾಲಿನಿಂದ ಸ್ವಲ್ಪ ನೆಲವನ್ನು ಕೆರೆದಾಗ ಚಿಲ್ಲನೆ ನೀರು ಬರಲಾರಂಭಿಸಿತು. ಆಶ್ಚರ್ಯಚಕಿತನಾದ ಸ್ವಾಮಿಗಳು. ಅಲ್ಲಿಗೆ ಹೋಗಿ ತಮ್ಮ ಕೈಯಿಂದ ಸ್ವಲ್ಪ ನೆಲವನ್ನು ಬಗೆದಾಗ ಅಥವಾ ಗುಂಡಿ ತೋಡಿದಾಗ ಮತ್ತಷ್ಟು ನೀರು ಉಕ್ಕಿಬಂತು. ಇದರಿಂದ ಸಂತೋಷಗೊಂಡ ಸ್ವಾಮೀಜಿ ತಮ್ಮ ಅಣ್ಣ ಶಿವನಸಮುದ್ರಕ್ಕೆ ಹೋದುದನ್ನು ನೆನಪಿಸಿಕೊಂಡು ಇದಕ್ಕೆ 'ಅಲ್ಲಾ ಸಮುದ್ರ' ಎಂದು ಹೆಸರಿಟ್ಟರು. ಅದು ಮುಂದೆ ಜನರ ಬಾಯಲ್ಲಿ ಅಲ್ಲಾಸಂದ್ರ, ಅರಳಾಸಂದ್ರವಾಗಿದೆ ಎಂದು ಕತೆ ಹೇಳುತ್ತಾರೆ.

ಊರಿನ ಪಕ್ಕ ಒಂದು ಗುಡಿಯಿದ್ದು, ಇಲ್ಲಿಯವರು ಅದನ್ನು ಬಾಬಯ್ಯನ ಗುಡಿ ಎಂದು ಪ್ರೀತಿಯಿಂದ ಹೇಳಿಕೊಳ್ಳುತ್ತಾರೆ. ಅಲ್ಲಿ ಎರಡು ಹೆಸರುಗಳು ಕಂಡುಬರುತ್ತವೆ. ಅವುಗಳೆಂದರೆ ಹಜರತ್ ಸೈಯದ್ ಷಾ ಮಹಮದ್ ಪ್ರಕುಲ್ಲಾ ಭಾಷಾ ಮತ್ತು ಹಜರತ್ ಅಮ್ಬುದ್ ದಿವಾನ್ ಅಹ್ಲುಲಿಯಾ ಈ ಹೆಸರುಗಳು ಬಹುಶಃ ಅಣ್ಣ ತಮ್ಮಂದಿರಾದ ಆ ಮುಸಲ್ಮಾನ ಗುರುಗಳ ಹೆಸರಿರಬೇಕು.[೧೩]

ಉರಗನದೊಡ್ಡಿ (ಕ)

ಕನಕಪುರ ತಾಲೂಕಿನ ಗಡಿಗ್ರಾಮವಾದ ಈ ದೊಡ್ಡಿಗೆ 'ಉರಗನದೊಡ್ಡಿ' ಎಂದು ಹೆಸರು ಬರಲು ಒಂದು ಐತಿಹ್ಯವಿದೆ.

"ಬಹು ಹಿಂದೆ ಆ ಊರಿನಲ್ಲಿ ವಾಸಿಸುತ್ತಿದ್ದ ಕೊರಮ ಜನಾಂಗವನ್ನು; ಬಹಳವಿದ್ದ ಹಾವುಗಳು ಕಚ್ಚಿ ನಿರ್ನಾಮ ಮಾಡುತ್ತಿದ್ದವಂತೆ. ಮುಂದೆ ಬೇಟೆಗೆ ಬಂದ ಕಾಡು ಪೂಜಾರಿಯೊಬ್ಬ ಈ ಎಲ್ಲಾ ಹಾವುಗಳನ್ನು ಯಾವುದೋ ಗಿಡಮೂಲಿಕೆ ಬೇರು ಮತ್ತು ತನಗೆ ಗೊತ್ತಿದ್ದ ವಶೀಕರಣ ವಿದ್ಯೆಯ ಪ್ರಭಾವದಿಂದ ಸಂಹಾರ

ಮಾಡುತ್ತಿದ್ದನಂತೆ. ಆಗ ಸಾಕ್ಷಾತ್ ಉರಗೇಶ್ವರನೇ ಪ್ರತ್ಯಕ್ಷನಾಗಿ 'ನನ್ನ ಸಂತತಿ ನಾಶ ಮಾಡಬೇಡ, ನಾನು ಇಲ್ಲಿಯೇ ನೆಲೆಸಿ ಯಾರಿಗೂ ತೊಂದರೆ ಕೊಡದಂತೆ ನನ್ನ ಉರಗ ಪರಿವಾರವನ್ನು ನಿಯಂತ್ರಿಸುತ್ತೇನೆ. ನೀವು ನಿಮ್ಮ ಜನ ನಿಶ್ಚಿಂತೆಯಿಂದ ಮನೆಗಳನ್ನು ಕಟ್ಟಿಕೊಂಡು ವಾಸಿಸಿರಿ ಮತ್ತು ವರ್ಷಕ್ಕೊಮ್ಮೆ ಮುಂಗಾರು ಮಳೆ ಬೀಳುವಾಗ ನನ್ನ ಪೂಜೆ ಮಾಡಿ ಅರವಟ್ಟಿಗೆ ನಡೆಸಿ ಎಂದು ಅಲ್ಲಿಯೆ ಪ್ರತಿಷ್ಠಾಪಿತನಾದ. ಈಗಲೂ ಹಾಳಾಗಿರುವ ಉರಗೇಶ್ವರ ದೇವಾಲಯ ಊರ ಹೊರವಲಯದ ಪೂರ್ವದಲ್ಲಿದೆ. ಮುಂಗಾರು ಮಳೆಗಾಲದಲ್ಲಿ ಪರ (ಅರವಟ್ಟಿಗೆ) ಮಾಡುತ್ತಿದ್ದು ಆ ಪರದ ದಿವಸ ಸುತ್ತಮುತ್ತಲ ಎಲ್ಲ ಹಳ್ಳಿಗಳಿಗೂ ಮಳೆಬಿದ್ದರೂ ಉರಗನದೊಡ್ಡಿಗೆ ಪರ ಮುಗಿಯುವವರೆಗೂ ಬೀಳುವುದಿಲ್ಲ. ಮುಗಿದ ನಂತರ ಆನಕಲ್ಲು ಜೇನುಕಲ್ಲು ಮಳೆಬೀಳುತ್ತದೆ ಎಂದು ಆ ಊರ ಜನರ ಬಲವಾದ ನಂಬಿಕೆಯಾಗಿದೆ"[೧೪].

ಕಚುವನಹಳ್ಳಿ (ಕ)

ಕನಕಪುರ ತಾಲೂಕಿನ ಕಚುವನಹಳ್ಳಿಯು 'ಕಚುವ' ಎಂಬ ವ್ಯಕ್ತಿವಾಚಿ ಸ್ಥಳವಾಗಿದೆ. ಆದರೆ ನಮ್ಮ ಗ್ರಾಮೀಣ ಜನಪದರಲ್ಲಿ ಈ ಹಳ್ಳಿಯ ಬಗೆಗೆ ಒಂದು ಐತಿಹ್ಯವಿದೆ. ಅಚ್ಚಲು ಗ್ರಾಮದ ವಧುವಿಗೆ ಮದುವೆಯಾಗಿ ಮದುಮಗನು ಮೊದಲ ಸಾರಿ ಮಾವನ ಮನೆಗೆ ಬಂದಿದ್ದನು. ಅಂದು ರಾತ್ರಿ ವಧು-ವರರಿಬ್ಬರಿಗೂ ಶೋಭನದ ಪ್ರಥಮ ರಾತ್ರಿಯ ಸಂಭ್ರಮದಲ್ಲಿದ್ದರು. ಮಧ್ಯರಾತ್ರಿಯಲ್ಲಿ ವರನು ಬಹಿರ್ದೆಸೆಗಾಗಿ ಮನೆಯ ಹೊರಗೆ ಬಂದಾಗ ಬೆಳದಿಂಗಳ ರಾತ್ರಿಯಲ್ಲಿ ಚಂದ್ರ ಹೊಳೆಯುತ್ತಿದ್ದ. ಆಗ ಬಹಿರ್ದೆಸೆಯ ಕಾರ್ಯ ಮುಗಿಸಿ, ಮನೆಯ ಮುಂದಿನ ನೀರಿನ ತೊಟ್ಟಿಯಲ್ಲಿ ನೀರು ತೆಗೆದುಕೊಳ್ಳಲು ಹೋದನು, ನೀರಿನ ಪ್ರತಿ ಬಿಂಬದಲ್ಲಿ ಗ್ರಾಮದ ಪಕ್ಕದಲ್ಲಿನ ಬೆಟ್ಟವು ಚಲಿಸಿದಂತೆ ಭಾಸವಾಗುತ್ತದೆ. ಅದನ್ನು ನೋಡಿದ ವರನು ಬೆಟ್ಟವು ತನ್ನ ಮೇಲೆ ಬೀಳುವಂತಿದೆ ಎಂದು ತಿಳಿದು; ಶರವೇಗದಲ್ಲಿ ಅಚ್ಚಲು ಗ್ರಾಮವನ್ನು ಬಿಟ್ಟು ಕಚ್ಚೆ (ನಡುವಿಗೆ ಕಟ್ಟಿಕೊಳ್ಳುವ ಪಂಚೆ) ಬೀಳುತ್ತಿದ್ದರೂ ಅದನ್ನು ಹಿಡಿದುಕೊಂಡೇ ಹೆದರಿ ಓಡಿ ಹೋಗುತ್ತಾನೆ. ಓಡೋಡಿ ಬಂದು ಈಗ 'ಕಚುವನಹಳ್ಳಿ' ಇರುವ ಸ್ಥಳಕ್ಕೆ ಬಂದು ಬಿಚ್ಚಿರುವ ಕಚ್ಚೆಯನ್ನು ಕಟ್ಟಿಕೊಂಡಿದ್ದರಿಂದ 'ಕಚ್ಚೆಯವನಹಳ್ಳಿ' ಎಂದೂ ನಂತರ 'ಕಚುವನಹಳ್ಳಿ' ಎಂದು ಹೆಸರಾಯಿತು[೧೫] ತಮ್ಮ ಗ್ರಾಮದ ನಾಮಕರಣದ ಹಿಂದಿನ ತಮಾಷೆಯಾದ ವೃತ್ತಾಂತವನ್ನು ಇಲ್ಲಿನ ಜನ ಹೇಳುತ್ತಾರೆ.

ಕಣಿವೆ ಮಾದಾಪುರ (ಕ)

ಕನಕಪುರ ತಾಲ್ಲೂಕು ಉರುಗನದೊಡ್ಡಿ ವಾಸಿ ಐವತ್ತು ವರ್ಷ ವಯಸ್ಸಿನ ಇರುಳಿಗರ ಹೆಂಗಸು ಮಾರಕ್ಕ ಹೇಳುತ್ತಾರೆ.

ನಮ್ ತಾತ್ನೋರ್ ತಾತ ಬೋಳಪ್ಪನ ಮಗ ಕಾಳಪ್ಪ ಅಂತ. ದಿನಾ ಗೆಡ್ಡೆ ಅಕ್ಕೊಂಡು ತರುಕ್ಕೋಗೋರಂತೆ ಕಾಡ್ಗೆ. ಬೆಳುಗ್ಗೆಯಿಂದ ಸಂದೆಗಂಟ ಒಂದ್ ಚಿಟ್ಟುನ್ ಗಾತ್ರ ಹಂಬಗುದ್ರುನು ಗೆಡ್ಡೇನೆ ಸಿಕ್ತಿರ್‌ಲಿಲ್ವಂತೆ. ಒಂದ್ ಕರೀ ಕಲ್ ಬಂದ್ ಕೂತೀರೋದಂತೆ ಗುಳಿ ಒಳ್ಗೆ. ಇಂಗೆ ಎರುಡ್ ತಿಂಗ್ಳುಕಾಲ ಆಯ್ತು. ಇಂಗೇ ಇರ್‌ಬೇಕಾದ್ರೆ ಇವ್ರೇನ್ ಮಾಡುದ್ರು, ಬಂದು ಅಪ್ಪ ಬೋಳಪ್ಪನ್ಗೆ ಅಪ್ಪಾ ಯಾವಾಂಬಗುದ್ರು

ಗೆಡ್ಡೇನೆ ಸಿಕ್ತಾಯಿಲ್ಲ. ಬರೀ ಒಂದ್ ಕರೀ ಕಲ್ ಬಂದು ಬಂದು ಗುಳಿತುಂಬ ಕೂತಿರ್ತುದೆ; ಅದೇನು ಅಂತಾನೆ ಗೊತ್ತಾಯ್ತಾಯಿಲ್ಲ. ಯಾವ್ ಗುಳಿ ಆಗುದ್ರು ಈ ಪಾಟಿ ಬಂದ್ ಕೂತ್ಕೊಬುಡ್ತುದೆ, ಯಾವಂಬಗುದ್ರು ಅದೇ ಕಾಣ್ತುದೆ-ಅಂದ್ರು".

"ಅದ್ಕೆ ಬೋಳಪ್ಪ ಹೇಳುದ್ರು, 'ಅಪ್ಪ ನೀನೊಂದ್ ಕಲ್ಸಮಾಡು. ತಣ್ಣೀರ್ ತಾನ (ಸ್ನಾನ) ಮಾಡ್ಕೊಂಡು, ಮಡಿ ಬಟ್ಟೆ ಉಟ್ಕೊಂಡು "ನೀನು ದೆವ್ವಾನೋ ದೇವ್ರೋ ಗೊತ್ತಿಲ್ಲ! ದೇವ್ರಾದ್ರೆ ನನ್ನಂಗ ಯ್ಯಾಗ್ ಬಂದ್ ಕೂತ್ಕೊ ಅಂತೇಳಿ ಸಕ್ಲು ಬಕ್ಲೆ (ಚಕ್ಕಲು ಬಕ್ಕಲೆ=ಪದ್ಮಾಸನ) ಆಕ್ಕೊಂಡ್ ಕೂತ್ಕೊ. ಆವಾಗ್ ನೋಡುವ" ಅಂತೇಳ್ಕೊಟ್ರು. ಸರಿ ಮಾರ್ನೆದಿನ ಬೆಳಗ್ಗೇನೆ ಒತ್ನಂಟೆ ತಾನ ಮಾಡಿ ಮಡಿ ಬಟ್ಟೆ ಉಟ್ಕೊಂಡು, ಕುಡ್ಲು, ಅ(ಹಾ)ರೆಕೋಲು, ಚೀಲ ಹೆಗ್ಲುಗಾಕ್ಕೊಂಡು, ಕೊಕ್ಕೆದೊಣೆ ಎತ್ಕೊಂಡು ಮಾಮೂಲಿ ಗೆಡ್ಡೆಗೋದ್ರು. ಯಾವಂಬನ ಅಗೀಲಿ ಕರೀಕಲ್ ಬಂದ್ ಗೆಡ್ಡೆ ಮೇಲೆ ಕೂತ್ಕೊತುದೆ. ಸಂದೆ ಗಂಟ ಅಗುದ್ರ, ಆಮ್ಯಾಲೀವ್ರೇನ್ ಮಾಡುದ್ರು ಅಂದ್ರೆ, 'ನಂಗ್ ದಿನಾ ಇಂಗೆ ಮಾಡ್ತಿ, ದೇವ್ರು ಅನ್ನೋದು ಗೊತ್ತಿಲ್ಲ. ಇಲ್ಲ ದೆವ್ವ ಅನ್ನೋದೂ ಗೊತ್ತಿಲ್ಲ. ನೀನು ಸಾಷ್ಟ್ವಾದ್ (ಶ್ರೇಷ್ಟವಾದ) ದೇವ್ರಾದ್ರೆ ನನ್ನಂಗ್ ಯ್ಯಿಗ್ ಬಂದ್‌ಕೊತ್ಕೊ ಅಂತ. ಸಕುಲಬಕ್ಲೆ ಹಾಕ್ಕೊಂಡ್ ಕೂತ್ಕೊಂಡ್ರಂತೆ, ಚಕ್‌ನೆ ಬಂದುದ್ದೆ ಅಂಗೈಲಿ ಕೂತ್ಕೊತಂತೆ, ಯಾವಾಗ ಅದು ಬಂದಿ ಅಂಗೈಲಿ ಕೂತ್ಕೋತು ಇವುರ್ಗೆ ಗ್ಯಾನಾನೆ ತಪ್ಪೋಯ್ತು. ಬ್ಯಾರೆ ಜನ್ರು ಮ್ಯಾಲೆ ದೃಷ್ಟೀನೆ ಇಲ್ವಂಗಾಗೋಯ್ತು. ಸ್ವಾಮಿ ಇವುರ್‌ಮ್ಯಾಲೇ ಬಂದಂಗಾಗೋಯ್ತು ಸುಮ್ನೆ ಮಂಕುಕವ್ಕೋರಂಗೆ ಕೂತ್ಕೊಬುಟ್ರಂತೆ. ವಸಿ ಹೊತ್ತು ಅಂಗೇ ಕೂತಿದ್ರು. ಅಲ್ಲೊಂದು ಕಣ್ವೆ (ಕಣಿವೆ) ಇತ್ತಂತೆ. ಆ ಕರಿಕಲ್‌ನ ಕಣ್ವೆಗೊತ್ಕೊಂಡೋದ್ರಂತೆ. ಅಲ್ಲಿ ಒಂದ್ ಕೆರೇನೂ ಅದೆ. ಆ ಕೆರೆ ಒಳ್ಗೆ ಈ ಲಿಂಗಾಯಿತ್ರೈಕ್ಳು ಮೀಜ್ (ಈಜು)ತಿದ್ರಂತೆ ಅವುರ್ನೆ ಕೂಗಿ ಅಲ್ಲೆ ಒಂದ್ ಕಲ್ ಗುಡಿ ಕಟ್ರಪ್ಪ ಅಂತೇಳಿ- 'ನೋಡ್ರಪ್ಪ ಲಿಂಗಾಯಿತ್ರು ಪೂಜಾರಪ್ಪುನ್ ಕರ್ಕೊಬಂದು ಅವರ್‌ಕೈಲಿ ಪೂಜೆ ಮಾಡಿಸ್ರಿ. ಬ್ಯಾರೆ ಯಾರೂನೂ ಪೂಜೆ ಮಾಡ್‌ಬ್ಯಾಡ್ರಿ'-ಅಂತ ದೇವ್ರು ಮೈಮ್ಯಾಲ್ ಬಂದಿತ್ತಲ್ಲ ಏಳ್ತಂತೆ.

ಅಂಗಂತ ಹೇಳುದ್ ಮ್ಯಾಲೆ ಆ ಹುಡುಗ್ರು ಅಲ್ಲೇ ಬಿದ್ದಿದ್ ಕಲ್ಲು ಗಿಲ್ಲು ಎಲ್ಲ ಎತ್ತಿ ಗುಡಿತರ ಮಾಡ್ಬುಟ್ಟು ಸೊಪ್ಪು ಸದೆ ಹಾಕಿ ಮಂಟಪುತ್ತರ ಮಾಡುದ್ರು. ಆ ಕರಿಕಲ್‌ನ ಮಂಟ್ಪುದ್ ಗುಡಿವೊಳುಗ್ ಮಡುಗ್ಬುಟ್ಟು ಬಂದ್ಬುಟ್ರು ಕಾಳಪ್ಪ. ಮಾರನೇ ದಿನಾನು ಮಾಮೂಲಿ ಗೆಡ್ಡೆ ಅಗಿಕ್ಕೆ ಅಂತ ಚೀಲ ತಕೊಂಡೋಗಿ ಹಂಬುಡ್ಕಿ ಗುಳಿ ಬಗುದ್ರೆ ತಿರ್ಗ ಬಂದ್ ಕೂತ್ಕೊಂಡಿತ್ತಂತೆ ಆ ಕರಿಕಲ್ಲು! ಆಗೇನ್ ಮಾಡಿದ್ರು ಅಂದ್ರೆ, ಆವತ್ತುನು ಎತ್ಕೊಂಡೋಗಿ ಅದೇ ಗುಡಿಲ್ ಮಡುಗ್ಬುಟ್ಟು, ಅ(ಹಾ)ರೆ ಕೋಲಿತ್ತಲ್ಲ ಅದ್ರೇಣೆಲಿ ಹೊಡುದ್ ಬುಟ್ಟು. ನಿನ್ನ ಬಿನ್ನ ಮಾಡಿದ್ದೀನಿ ಅಂತೇಳಿ ಅದ್ರು ಮ್ಯಾಲೆ ತಿವುದ್ಬುಟ್ಟು ಬಂದ್ರಂತೆ. ಅವತ್ತಾಗಿದ್ ಗುಳಿ ಇನ್ನ ಅಂಗೇ ಅದೆ ಆ ಕಲ್ಲುನ್ ಮ್ಯಾಲೆ, (ಇಂದಿಗೂ ಆ ಶಿವಲಿಂಗದ ಮೇಲಿನ ಚೂರು ಕಲ್ಲು ಕಿತ್ತು ಹೋಗಿರುವುದನ್ನು ಕಾಣಬಹುದು, ಅಂದು ಆರೆ ಕೋಲಿನಿಂದ ತಿವಿದು ಆದ ಗಾಯದ ಗುರುತೇ ಅದೆಂದು ನಂಬಿದ್ದಾರೆ) ನಮ್ ತಾತಯ್ಯನ್ (ಕಾಳಪ್ಪ ತಾತ) ಗೋರೀನು ಅಂಗೇ ಅದೆ. ಆ ಗೋರಿಗೂ ಬೇಕಾದಷ್ಟು

ಜನ ಬಂದು ಪೂಜೆ ಮಾಡಿಸ್ಕೊಂಡು ಕೋಳಿ ಕುರಿ ಎಲ್ಲ ಕುಯ್ದು ಬಲಿ ಕೊಟ್ಟು ಎಡೆ ಹಾಕಿ ಪೂಜೆ ಮಾಡಿಸ್ಕೊಂಡೊಯ್ತಾರೆ. ಆ ಗೋರಿ ಪೂಜೆ ಮಾಡ್ತಾಯಿರೋರು ನಾವೇನೆ. ಮಾದೇಶ್ವರುನ್ ದೇವಸ್ಥಾನ್‌ದೆಲ್ ಮಾತ್ರ ಈ ಲಿಂಗಾಯಿತ್ರು ಪೂಜೆ ಮಾಡ್ಕೊಂಡೋಯ್ತಾ ಅವ್ರೆ. ಕಣಿವೇಲಿ ತಕೊಂಡೋಗ್ ಮಡ್ಗದ್ಕೆ ಆ ದೇವುರ್ಗೆ "ಕಣಿವೆ ಮಾದೇಶ್ವರ" ಅಂತ ಎಸ್ರು ಬಂದಿರೋದು" ಎಂಬ ವಿವರಗಳನ್ನು ನೀಡುತ್ತಾರೆ"[೧೬] ಹಾಗೂ ಈ ಕಣಿವೆ ಮಾದೇಶ್ವರನಿಂದಲೇ ತಮ್ಮ ನೆಲೆಗೆ ಕಣಿವೆ ಮಾದಾಪುರ ಎಂಬ ಹೆಸರು ಬಂದಿತು ಎಂಬುದು ಜನರ ಅಭಿಪ್ರಾವಾಗಿದೆ.

ಕುರುಪೇಟೆ (ಕ)

ಕನಕಪುರ ಪಟ್ಟಣದ ಹೊರ ವಲಯದಲ್ಲಿರುವ ಊರು ಕುರುಪೇಟೆ. ಕುರುಪೇಟೆಯ ಪಕ್ಕದಲ್ಲಿಯೇ ಧರ್ಮರಾಯಸ್ವಾಮಿ ದೇವಾಲಯವಿದೆ. ಆದ್ದರಿಂದ ಕನಕಪುರ ಪಾಂಡವರಿಗೆ ಸೇರಿದ ಪ್ರದೇಶದ ಎಲ್ಲೆ. ಕುರುಪೇಟೆ ಕೌರವರಿಗೆ ಸೇರಿದ ಪ್ರದೇಶದ ಎಲ್ಲೆ ಇರಬಹುದೆನ್ನುವ ಅನುಮಾನಬಾರದೇ ಇರದು. ಆದರೆ ಇದಕ್ಕೆ ಬೇರೆಯದೇ ಆದ ಐತಿಹ್ಯವಿದೆ.

ಊರಿನ ಗ್ರಾಮದೇವತೆಯಾದ ಕೊಲ್ಲಾಪುರದಮ್ಮನು ನೆಲೆಸಿದ್ದರಿಂದ ಈ ಊರಿನಲ್ಲಿ ಸುಖ ಸಮೃದ್ಧಿಗೆ ಕೊರತೆ ಇರಲಿಲ್ಲ. ಅಂಥ ಸಮಯದಲ್ಲಿ ಕೊಲ್ಲಾಪುರದಮ್ಮನು ಒಂದು ಸಾರಿ ದೇಶ ಸಂಚಾರ ಕೈಗೊಳ್ಳಬೇಕೆಂದು ಅರ್ಕಾವತಿ ಹೊಳೆಯಿಂದ ಆಚೆ ಕಡೆಗೆ ಹೋಗಲು ಪ್ರಯತ್ನಿಸುವಾಗ, ಇದನ್ನು ನೋಡಿದ ಒಬ್ಬ ವ್ಯಕ್ತಿ; ದೇವತೆ ಈ ಗ್ರಾಮವನ್ನು ತೊರೆದು ಹೊರಟು ಹೋದರೆ ಗ್ರಾಮದ ಐಶ್ವರ್ಯವೂ ಹೋಗಬಹುದು ಹಾಗೂ ಸುಖಸಂತೋಷದಿಂದ ಇರಲು ಸಾಧ್ಯವಿಲ್ಲವೆಂದು ತಿಳಿದು, ಈ ಗ್ರಾಮ ಬಿಟ್ಟು ದೇವತೆಯು ಹೋಗಬಾರದು ಎಂದು; ಒಂದು ಕುರಿಯನ್ನು ಬಲಿಕೊಟ್ಟು ದಾರಿಗೆ ಅಡ್ಡವಾಗಿ ಬಲಿ ರಕ್ತದ ರೇಖೆಯನ್ನು ಹರಿಸಿ ಅಮ್ಮನು ದಾಟದಂತೆ ಮಾಡುತ್ತಾನೆ. ಆಗ ಕೊಲ್ಲಾಪುರದಮ್ಮ ದೇವತೆಯು ಬಲಿಯ ರಕ್ತವನ್ನು ದಾಟದೇ ಇಲ್ಲಿಯೇ ನೆಲೆಸುತ್ತಾಳೆ. ಆ ಕಾರಣದಿಂದ ಈ ನೆಲೆಗೆ 'ಕುರಿ ಬೇಟೆ ಎಂದು ಹೆಸರಾಯಿತು. ಕಾಲಾನಂತರದಲ್ಲಿ ಜನರು ಬಾಯಿಂದ ಬಾಯಿಗೆ ಕುರಿಬೇಟೆ>ಕುರಿಪೇಟೆ>ಕುರುಪೇಟೆ ಎಂದು ಹೆಸರಾಗಿದೆ.[೧೭]

ಕುರುಪೇಟೆ ಸ್ಥಳ ವೈಜ್ಞಾನಿಕ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸಿದರೆ; ಈ ಕತೆಗೆ ಆಧಾರವಿಲ್ಲವೆಂಬುದು ಗೊತ್ತಾಗುತ್ತದೆ. ಕುರು ಎಂದರೆ ಚಿಕ್ಕ, ಸಣ್ಣ, ಗುರುತು ಎಂಬರ್ಥಗಳಿವೆ. ಪೇಟೆ ಎನ್ನುವುದು ವಾಣಿಜ್ಯ, ವ್ಯವಹಾರ ನಡೆಸುವ ಅಂಗಡಿಯ ಬೀದಿ, ಸ್ಥಳ ಎಂಬುದು ಸ್ಪಷ್ಟ. ಕನಕಪುರವೂ ಕೂಡ ವಾಣಿಜ್ಯ ವ್ಯವಹಾರಗಳಿಗೆ ಹೆಸರಾದ ಊರು. ಕನಕಪುರಕ್ಕೆ ಹೋಲಿಸಿದರೆ ಚಿಕ್ಕದಾದ ಪೇಟೆ ಎನ್ನುವ ಹಿನ್ನೆಲೆಯಲ್ಲಿ ಕರೆದಿರುವುದು ಕಂಡುಬರುತ್ತದೆ.

ಕೂಡ್ಲೂರು (ಚ)

ಐತಿಹ್ಯ ೧

ಗಂಗವಂಶದ ದೊರೆ ಭೂವಿಕ್ರಮ ರಾಜನ ಮಗ ಸಾರಂಗಧರ. ಭೂವಿಕ್ರಮನ ಪತ್ನಿ. ಸಾರಂಗಧರನ

ಮಲತಾಯಿಯಾದ ರತ್ನಾಜಿ ಮೋಹಿಸಿ ಸಾರಂಗಧರನ ಅಂಗಸಂಗಕ್ಕಾಗಿ ಕರೆಯುತ್ತಾಳೆ. ಸಾರಂಗಧರ ಅದನ್ನು ತಿರಸ್ಕರಿಸುತ್ತಾನೆ. ಕುಪಿತಳಾದ ರತ್ನಾಜಿ ದೊರೆ ಭೂವಿಕ್ರಮ ಬಂದ ಮೇಲೆ ಮಲಮಗ ಸಾರಂಗಧರ ನನ್ನನ್ನು ಅತ್ಯಾಚಾರ ಮಾಡಲು ಯತ್ನಿಸಿದನೆಂದು ದೂರು ಕೊಡುತ್ತಾಳೆ. ಆ ಬಗ್ಗೆ ವಿಚಾರಣೆ ಮಾಡದ ದೊರೆ ಸಾರಂಗಧರನನ್ನು ಕೊಲ್ಲುವಂತೆ ರಾಜ ಭಟರಿಗೆ ಆಜ್ಞೆ ಮಾಡುತ್ತಾನೆ.

ಅಬ್ಬೂರಿಗೆ ಗುಡ್ಡೆಯಲ್ಲಿ ಸಾರಂಗಧರನ ಅಂಗಾಂಗಳನ್ನು ಕತ್ತರಿಸಿದ ಕಾವಲು ಭಟರು ಅವನ್ನೆಲ್ಲ ಕಣ್ವ ಹೊಳೆಯಲ್ಲಿ ಹಾಕಿದಾಗ ಹಾಗೆ ಹರಿದು ಬಂದು ಕೂಡ್ಲೂರಿನಲ್ಲಿ ಕೂಡಿ ಕೂಡ್ಲೂರಾಯಿತು ಎನ್ನುತ್ತಾರೆ.[೧೮]

ಐತಿಹ್ಯ ೨

ವಿಜಯನಗರ ಪತನಾನಂತರ ಅಲ್ಲಿಂದ ತಲೆ ತಪ್ಪಿಸಿಕೊಂಡು ಬಂದ ಜನಾಂಗ (ಇಂದು ಕೂಡ್ಲೂರಿನಲ್ಲಿರುವ ಅರಸು ಜನಾಂಗದ ಪೂರ್ವಿಕರು) ವಿಜಯನಗರ ಸಮೀಪವಿದ್ದಂತಾ ಕಮಲಾಪುರ, ಸಮಂದಪುರ ಎಂಬಂತಾ ಗ್ರಾಮಗಳು ಇಲ್ಲೂ ಇದ್ದುದ್ದರಿಂದ ಇಲ್ಲಿ ನೆಲೆ ನಿಂತರು. ಕಮಲಾಪುರ ಸಮಂದಪುರ ಎಂಬ ಎರಡು ಗ್ರಾಮಗಳು ಕೂಡಿ ಕೂಡ್ಲೂರಾಯಿತು ಎಂಬ ಸ್ಥಳ ಐತಿಹ್ಯವಿದೆ[೧೯].

ಕೂನಗಲ್ಲು (ರಾ)

ಐತಿಹ್ಯ-೧: "ಪ್ರಾಯಕ್ಕೆ ಬಂದ ಹುಡುಗಿ ಸ್ನಾನ ಮಾಡುವಾಗ, ಸಂಚಾರಿ ಋಷಿಯ ನೋಟಕ್ಕೆ ಗರ್ಭ ಧರಿಸುತ್ತಾಳೆ. ಸದಾ ಸಂಚಾರಿ ರೇವಣಸಿದ್ಧನ ತಂಗಿಯೇ ಕೂನಮ್ಮ ಎಂಬುದು ಜನರ ನಂಬಿಕೆ. ಅಣ್ಣ ಬಂದಾಗ ತಂಗಿ ವಿಚಾರವನ್ನು ತಿಳಿಸುತ್ತಾಳೆ. ಋಷಿ ವಾಸಿಸುತ್ತಿದ್ದ ಎಪ್ಪತ್ತೇಳು ಕೋಟೆಯ ಬಾಗಿಲುಗಳನ್ನು ಬೇಧಿಸಿಕೊಂಡು ಹೋಗಿ, ಆತನನ್ನು ಕೊಂದು ನೆತ್ತರನ್ನು ತಂದು ತಂಗಿಯ ತಲೆಗೆ ಬಳಿದು ಸ್ನಾನ ಮಾಡಿಸಿದಾಗ ಆಕೆ ಧರಿಸಿದ ಗರ್ಭವಿಳಿದು ಮುಟ್ಟಾಗುತ್ತಾಳೆ. ತಿಂಗಳಿಗೊಮ್ಮೆ ಮೂರು ದಿನಗಳ ಕಾಲ ಈ ಹೆಬ್ಬಂಡೆಯಿಂದ ಒಸರುವ ನೀರು ಕೆಂಪಾಗಿದ್ದು, ಕೂನಮ್ಮಳ ಮುಟ್ಟಿನ ನೀರೆಂಬ ನಂಬಿಕೆಯಿದೆ. ತಿಂಗಳಿಗೊಮ್ಮೆ ಈ ನೀರು ಬಂಡೆಯಿಂದ ಹರಿಯುತ್ತಿದ್ದು, ಎರಡು ಮೂರು ವರ್ಷಗಳಿಂದ ನಿಂತು ಹೋಗಿದೆ. ಇದಕ್ಕೆ ಗ್ರಾಮಸ್ಥರು ಕೊಡುವ ಕಾರಣ ಆಕೆ ವೃದ್ಧೆಯಾಗಿದ್ದಾಳೆ ಎಂಬುದು"[೨೦]

ಐತಿಹ್ಯ ೨: "ಈ ಹಳ್ಳಿಗೆ ಮೂರು ಸಾವಿರ ವರ್ಷಗಳ ಇತಿಹಾಸವಿದೆ. ಇಲ್ಲಿ ಒಬ್ಬ ಪಾಳೆಯಗಾರ ಆಳ್ವಿಕೆ ನಡೆಸುತ್ತಿದ್ದ. ಈಗಲೂ ಬೆಟ್ಟದ ಮೇಲೆ ಕೋಟೆ, ದುರ್ಗದ ಅವಶೇಷಗಳಿವೆ. ಕೋಟೆಯಲ್ಲಿ ಸಂತೆಮಾಳ ಇತ್ತಂತೆ. ಅಲ್ಲಿ ಸಂತೆ ನಡೆಯುವಾಗ ಮತ್ತೊಬ್ಬ ಪಾಳೆಯಗಾರ ಈ ಪಾಳೆಯಗಾರನ ಮೇಲೆ ದಂಡೆತ್ತಿ ಯುದ್ಧಕ್ಕೆ ಬಂದನಂತೆ. ಇಬ್ಬರ ನಡುವೆ ಘನಘೋರ ಯುದ್ಧ ನಡೆದು; ಈ ಊರಿನ ಪಾಳೆಯಗಾರ ಸತ್ತು ಹೋದನಂತೆ. ಆಗ ಈ ಪಾಳೆಯಗಾರನ ತಂಗಿಯಾದ ಕೂನಮ್ಮ ಸುಂದರಳಾಗಿದ್ದರಿಂದ ಹಾಗೂ ನನ್ನ ಅಣ್ಣನ ಸಾವಿನ ಸುದ್ದಿಯಿಂದ ನೊಂದು ದೇವಸ್ಥಾನದ ಪೂಜಾರಿಯ ಆಶ್ರಯವನ್ನು ಬೇಡಿದಳಂತೆ. ಜಯ ಗಳಿಸಿ ಕೂನಮ್ಮನ ಸೌಂದರ್ಯಕ್ಕೆ ಮರುಳಾಗಿ ಹುಡುಕುತ್ತಾ ಬಂದ ಪಾಳೆಯಗಾರ ಕೂನಮ್ಮನನ್ನು ಅತ್ಯಾಚಾರ ಮಾಡಿದನಂತೆ. ಆದರೆ ಪೂಜಾರಿಯು ಆಕೆಯನ್ನು ಕಾಪಾಡಲು ಸಾಧ್ಯವಾಗಲಿಲ್ಲ. ಅತ್ಯಾಚಾರಕ್ಕೆ

ಒಳಗಾದ ಕೂನಮ್ಮ ಅವಮಾನ ಸಹಿಸಲಾರದೆ ಕೂನಮ್ಮನ ಬಂಡೆಯೆಂದು ಕರೆಯುವ ಬಂಡೆಯ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಳಂತೆ. ಅದಕ್ಕೆ ಈ ಗ್ರಾಮಕ್ಕೆ ಕೂನಮ್ಮನ ಹೆಸರಿನಿಂದ ಕೂನಗಲ್ಲು ಎಂದು ಹೆಸರು ಬಂತು.

ಕೂನಮ್ಮನಿಗೆ ಆಶ್ರಯ ನೀಡಿದ್ದರಿಂದ ಪಾಳೆಯಗಾರನಿಗೆ ಹೆದರಿದ ಪೂಜಾರಿಯು ತಾನು ಪೂಜಿಸುತ್ತಿದ್ದ ಶಿವಲಿಂಗವನ್ನು ಎತ್ತಿಕೊಂಡು ಕನಕಪುರದ ಹತ್ತಿರವಿರುವ ಶಿವನಹಳ್ಳಿಗೆ ತಂದು ಅಲ್ಲಿ ಪ್ರತಿಷ್ಠಾಪನೆ ಮಾಡಿದನಂತೆ ಹಾಗಾಗಿ ಆ ಗ್ರಾಮಕ್ಕೆ ಶಿವನಹಳ್ಳಿ ಎಂದು ಹೆಸರು ಬಂದಿದೆ.[೨೧]

ಹೀಗೆ ಕೂನಮ್ಮನಿಂದ ಕೂನಗಲ್ಲು ಎಂಬ ಊರಾಗಿದೆ ಎಂಬ ಐತಿಹ್ಯವಿದೆ. ಕೂನಗಲ್ಲು ಗ್ರಾಮದ ಹಿಂಭಾಗದಲ್ಲಿನ ಬೆಟ್ಟದಲ್ಲಿನ ಒಂದು ಹೆಬ್ಬಂಡೆ ಗೂನಿನಂತೆ ಬಾಗಿರುವುದರಿಂದ ಭೂವೈಶಿಷ್ಟ್ಯತೆಯಿಂದ ಬಂದ ಸ್ಥಳನಾಮವಾಗಿದೆ. ಅದಕ್ಕೆ ಕೂನಮ್ಮನ ಐತಿಹ್ಯವನ್ನು ಅಲ್ಲಿನ ಜನ ಹೆಣೆದುಕೊಂಡಿರುವುದನ್ನು ಕಾಣಬಹುದು.

ಕೆಂಪಸಾಗರ (ಮಾ)

ಕೆಂಪೇಗೌಡ ತನ್ನ ಸಾಮ್ರಾಜ್ಯದ ಪಕ್ಕದಲ್ಲಿ, ತನ್ನ ಹೆಸರಿನ ನೆನಪಿಗಾಗಿ, ಒಂದು ಊರನ್ನು ತನ್ನ ಹೆಸರಿನಲ್ಲಿಯೇ ಕೆಂಪಸಾಗರ ಎಂಬುದಾಗಿ ನಿರ್ಮಿಸಿದ. ಆ ಊರಿನ ಜನರಿಗೆ ಕುಡಿಯಲು ಒಂದು ಕೆರೆಯನ್ನು ಕಟ್ಟಿಸಲು ಆಲೋಚಿಸತೊಡಗಿದ. ಹೀಗೆ ಅವನು ಆಲೋಚಿಸುತ್ತಿರುವಾಗ ಒಂದು ದಿನ ಕೆಂಪೇಗೌಡ ಮಲಗಿದ್ದಾಗ ಅವನ ಕನಸಿನಲ್ಲಿ ದೇವರು ಒಂದು ಸರ್ಪದ ರೂಪದಲ್ಲಿ ಬಂದು "ನೋಡು ಕೆಂಪೇಗೌಡ, ಈ ಊರಿನ ಜನರಿಗೆ ಕುಡಿಯಲು ನೀನು ಕೆರೆಯನ್ನು ಕಟ್ಟಿಸು ಒಳ್ಳೆಯದು. ಆದರೆ ನಾನು ಯಾವ ರೀತಿ ನೆಲದಲ್ಲಿ ಹರಿದಾಡಿಕೊಂಡು ಹೋಗುತ್ತೇನೋ ಅದೇರೀತಿ ಈ ಕೆರೆಯ ಏರಿಯನ್ನು ನಿರ್ಮಿಸಿದರೆ ಮಾತ್ರ ಆ ಕೆರೆಯು ಉಳಿಯಲು ಸಾಧ್ಯ. ಇಲ್ಲವಾದರೆ ಆ ಕೆರೆಯು ಹಾಳಾಗುತ್ತದೆ" ಎಂದು ಹೇಳಿ ಮಾಯವಾಯಿತಂತೆ.

ಅದರಂತೆಯೇ ಕೆಂಪೇಗೌಡ ಆ ಕೆಂಪಸಾಗರದ ಏರಿಯನ್ನು ಹಾವು ನೆಲದಲ್ಲಿ ಯಾವ ರೀತಿ ಹರಿದಾಡಿಕೊಂಡು ಹೋಗುತ್ತದೋ ಅದೇ ರೀತಿಯಲ್ಲಿ ಕೆರೆಯ ಏರಿಯನ್ನು ನಿರ್ಮಿಸಿದನಂತೆ. ಈ ರೀತಿಯ ಕೆರೆಯ ಏರಿಯನ್ನು ಕೆಂಪಸಾಗರ ಎಂಬ ಹೆಸರಿನಲ್ಲಿ ಇಂದಿಗೂ ಕೂಡ ನೋಡಬಹುದಾಗಿದೆ. ಅಲ್ಲಿನ ಜನತೆಯೂ ಕೂಡ ಈ ಕೆರೆಯ ಏರಿಯನ್ನು ಕೆಂಪೇಗೌಡರು ಕಟ್ಟಿಸಿದರು ಎಂದು ಇಂದಿಗೂ ಹೇಳುತ್ತಾರೆ. ಇಂದಿನ ಆಧುನಿಕ ಯುಗದಲ್ಲೂ ಕೂಡ ಮಾಗಡಿ ತಾಲ್ಲೂಕಿನ ಹೆಣ್ಣು ಮಕ್ಕಳು ವರ್ಷಕ್ಕೊಂದು ಸಾರಿ ಕೆಂಪಸಾಗರದ ಕೆರೆಯ ಹತ್ತಿರ ಬಂದು ಗಂಗೆಯನ್ನು ಪೂಜಿಸಿಕೊಂಡು ಹೋಗುತ್ತಾರೆ.[೨೨]

ತಣಿಗೆ ಸೊಣೆ (ರಾ)

ಕಾಡನಕುಪ್ಪೆಯ ಪೂರ್ವಭಾಗಕ್ಕಿರುವ ತೆಂಗಿನಕಲ್ಲು ಬೆಟ್ಟದಲ್ಲಿ ಈ ತಣಿಗೆ ಸೊಣೆ ಇದೆ. ತೆಂಗಿನಕಲ್ಲನ್ನು ಆಳುತ್ತಿದ್ದ ಪಾಳೇಗಾರ ಚಾಮರಾಜನ ಕಾಲದಲ್ಲಿ ಕೋಟೆಯನ್ನು ಕಾಯುತ್ತಿದ್ದ ಸೈನಿಕನಿಗೆ ಆತನ ಹೆಂಡತಿಯು ಊಟವನ್ನು ತೆಗೆದುಕೊಂಡು ಹೋಗಿ ಬಡಿಸಿ ಊಟವಾದ ನಂತರ ಈ ಬೆಟ್ಟದಲ್ಲಿರುವ

ಸೋಣೆಯೊಂದರಲ್ಲಿ ತಣಿಗೆಯನ್ನು (ಕಂಚಿನ ತಟ್ಟೆ) ಬೆಳಗುವಾಗ (ತೊಳೆಯುವಾಗ) ಕೈಜಾರಿ ಸೋಣೆಗೆ ಬಿದ್ದಿತಂತೆ, ಕೈಜಾರಿ ಬಿದ್ದ ತಣಿಗೆಯು ಸೋಣೆಯಲ್ಲಿ ಮುಳುಗುವಾಗ ಅಕ್ಕಪಕ್ಕದ ಕಲ್ಲಿಗೆ ತಾಗುತ್ತಾ, ಧಣಿ, ಧಣಿ ಎನ್ನುತ್ತಾ ಒಂದು ರಾತ್ರಿ, ಒಂದು ಹಗಲು ಹೀಗೆ ಶಬ್ದ ಬರುತ್ತಿದ್ದು, ನಂತರ 'ಶಿವಗಂಗೆಯ ಕುಮದ್ವತಿ ನದಿಯಲ್ಲಿ ಆಚೆ ಬಂತು' ಎಂಬ ಪ್ರತೀತಿ ಇದೆ. ಆ ಸೋಣೆಯ ಆಳವನ್ನು ಕಂಡು ಹಿಡಿದವರೇ ಇಲ್ಲ. ಹಾಗೂ ಈ ಸೋಣೆಗೂ ಶಿವಗಂಗೆಯ ಕುಮದ್ವತಿ ನದಿಗೂ ಸಂಪರ್ಕವಿದೆ ಎನ್ನುತ್ತಾರೆ. ತಣಿಗೆ ಬಿದ್ದ ಈ ಸೋಣೆಯೇ ತಣಿಗೆ ಸೋಣೆ ಎಂದು ಕರೆಯುತ್ತಾರೆ.

ಸೋಣೆಯ ಪೂರ್ವಕ್ಕೆ ತೆಂಗಿನಕಲ್ಲು ದೊರೆಯ ಅರಮನೆಯ ಅವಶೇಷವಿದೆ. ದೊರೆಯು ಚೌರ (ಕ್ಷೌರ) ಮಾಡಿಸಿಕೊಳ್ಳಲು ಕುಳಿತು ಕೊಳ್ಳುವವ. 'ಚೌರ ದೊರೆಗುಂಡು' ಇದೆ. ದಕ್ಷಿಣಕ್ಕೆ ಅಕ್ಕ ತಂಗಿಯರು ತಲೆಬಾಚಿಕೊಳ್ಳುತ್ತಿದ್ದ 'ಅಕ್ಕತಂಗೇರ ಗುಂಡು'. ಪಶ್ಚಿಮಕ್ಕೆ 'ಸಂತೆಬೀದಿ', 'ಒರಳುಗಲ್ಲು', ಗುಂಡಕಲ್ಲು, ಧಾನ್ಯ ತುಂಬಲು ಗುಳಿ ಇವೆ. ಮೆಟ್ಟಿಲಿನ ಪಶ್ಚಿಮಕ್ಕೆ ಆನೆಕಟ್ಟುತ್ತಿದ್ದ ಸಾಲುಗಳಿವೆ. ಬೆಟ್ಟದ ಮೇಲ್ಭಾಗದಲ್ಲಿ ಕೋಟೆಯ ಅವಶೇಷದ ಕುರುಹುಗಳಿವೆ.[39] ಇಲ್ಲಿನ ಪ್ರತಿಯೊಂದು ಕಲ್ಲು ತನ್ನೊಡಲಿನಲ್ಲಿ ಕಥೆಯನ್ನು ಬಚ್ಚಿಟ್ಟುಕೊಂಡಿದೆ. ಇತಿಹಾಸಕಾರರಿಗೆ ಇದೊಂದು ಅತ್ಯುತ್ತಮವಾದ ಸಂಶೋಧನಾ ಕ್ಷೇತ್ರವಾಗಬಲ್ಲದು. ಇಲ್ಲಿರುವ ಸೋಣೆಯು ಪ್ರಕೃತಿ ನಿರ್ಮಿತವಾದದ್ದು. ಕಾಲಾನಂತರದಲ್ಲಿ ಈ ಐತಿಹ್ಯ ಹುಟ್ಟಿರುವ ಸಾಧ್ಯತೆ ಇದೆ.

ತೇರುಬೀದಿ (ಕ)

ಸಾವಿರಾರು ವರ್ಷಗಳ ಹಿಂದೆ ಈ ಪ್ರದೇಶವು ದಟ್ಟವಾದ ಅರಣ್ಯ ಪ್ರದೇಶವಾಗಿದ್ದು; ಎರಡು ಮೂರು ಇಲ್ಲಿಗ (ಇರುಳಿಗ) ಕುಟುಂಬಗಳು ವಾಸವಾಗಿದ್ದುವಂತೆ. ಹೊಟ್ಟೆ ಹೊರೆಯಲು ಗೆಣಸು ಅಗೆದು; ಬಿದಿರಕ್ಕಿ ಗುಡಿಸಿಕೊಂಡು, ಸಣ್ಣಪುಟ್ಟ ಮಿಕ (ಮೃಗ)ಗಳನ್ನು ಕೊಂದು ತಿನ್ನುತ್ತ ಜೀವಿಸುತ್ತಿದ್ದರಂತೆ.

ಒಂದು ಸಾರಿ ಇರುಳಿಗರನೊಬ್ಬ ಗೆಣಸು ಬಗೆಯಲು ಒಂದು ಅಂಬನ್ನು ಹುಡುಕಿ, ಹಾರೆ ಕೋಲಿನಿಂದ ಬೇರಿಗೆ ಹೊಡೆದನಂತೆ ಕೂಡಲೇ ಧಾರಾಕಾರವಾಗಿ ರಕ್ತ ಹರಿಯುತ್ತಿತ್ತಂತೆ. ಏನಿದು ರಕ್ತ! ಎಂದು ಆತ ಯೋಚನೆ ಮಾಡುವಾಗ ಆತನ ಜೊತೆಯಲ್ಲೇ ಇದ್ದ ಅವನ ಏಳು ವರ್ಷದ ಮಗನ ಮೇಲೆ ಶಿವನ ಆವಾಹನೆಯಾಗಿ "ನಾವು ಏಳು ಜನ ಸಹೋದರರು ಹೀಗೆ ಕೊಂಗನಾಡಿನಿಂದ ಸುತ್ತಾಡಿ ನಮ್ಮ ನಮ್ಮ ನೆಲೆಗಳನ್ನು ಹುಡುಕಿಕೊಂಡು ಸಂಚಾರಣೆ ಬರುವಾಗ ನನ್ನ ನೆಲೆಗೆ ಇದು ಪ್ರಶಸ್ತವಾದ ಜಾಗವೆಂದು ಸಹೋದರರನ್ನು ಮುಂದುವರೆಯಿರಿ, ನಿಮಗೆ ಸರಿಯಾದ ನೆಲೆಗಳನ್ನು ಹುಡುಕಿಕೊಳ್ಳಿ ನಾನು ಇಲ್ಲಿಯೇ ನೆಲೆಸಿ ಇಲ್ಲಿನ ಜನರ ಉದ್ಧಾರಕಾರ್ಯವನ್ನು ಮಾಡಬೇಕೆಂದು ಹೇಳಿ; ಇಲ್ಲಿಯೇ ನೆಲೆ ನಿಂತಿದ್ದೇನೆ. ಮುಂದೆ ಹೋದ ಸಹೋದರರು ಅವರಿಗೆ ಇಷ್ಟ ಬಂದಲ್ಲಿ ನೆಲೆ ನಿಲ್ಲುತ್ತಾರೆ. ನನಗೆ ಈ ಜಾಗ ಇಷ್ಟವಾಯಿತು. ಅದಕ್ಕಾಗಿ ನೆಲೆ ನಿಂತಿದ್ದೇನೆ. ನಿನಗೇನು ಬೇಕೋ ತೆಗೆದುಕೊಂಡು ಹೋಗು. ನಾನು ಇಲ್ಲಿರುವ ವಿಚಾರವನ್ನು ಯಾರಿಗೂ ಹೇಳಬೇಡ; ಹಾಗೊಂದು ವೇಳೆ ನನ್ನ ವಿಚಾರವನ್ನು ಪ್ರಚಾರಪಡಿಸಿದ್ದೇ ಆದರೆ; ನೀನು ರಕ್ತಕಾರಿ ಸಾಯುತ್ತಿ ಎಂದನಂತೆ.

ಎಲ್ಲವನ್ನು ಕೇಳಿಸಿಕೊಂಡ ಇರುಳಿಗರವನು; ಈ ವಿಚಾರವನ್ನು ಪ್ರಚಾರಪಡಿಸಿದರೆ ಏನಾಗುತ್ತದೆ ನೋಡಿಯೇ ಬಿಡುವ ಎಂಬ ಹಠದಿಂದ ಪಕ್ಕದಲ್ಲಿಯೇ ಇದ್ದ ಗ್ರಾಮಕ್ಕೆ ಬಂದು ಕಾಡಿನಲ್ಲಿ ತಾನು ಕಂಡ; ಅಲ್ಲಿ ನಡೆದ ವಿಚಾರಗಳನ್ನು ಜನರಿಗೆಲ್ಲ ತಿಳಿಸಿದನಂತೆ. ಹಾಗೆ ತಿಳಿಸಿದ ಕೂಡಲೇ ಆತ; ಶಿವನ ಮಾತಿನಂತೆ ರಕ್ತ ಕಾರಿಕೊಂಡು ಸತ್ತೇಹೋದನಂತೆ. ಊರ ಮುಖ್ಯಸ್ಥ ಬಂದು ಇದರ ಸತ್ಯಾಸತ್ಯತೆಗಳೇನು? ಎಂದು ಪರೀಕ್ಷಿಸುವಲ್ಲಿ ಆ ಇರುಳಿಗರವನು ಹೇಳಿದ್ದು ನಿಜವೇ ಆಗಿತ್ತು. ಮತ್ತೆ ಏಳು ವರ್ಷದ ಬಾಲಕನ ಮೇಲೆ ಆ ದೇವರ ಆವಾಹನೆಯಾಗಿ; ನನಗೆ ಆ ಸುತ್ತಲ ಜಾಗ ಬೇಕೆಂದು ಕಂಚಿನ ತೇರೊಂದನ್ನು ಸೃಷ್ಟಿಸಿ ಅದಕ್ಕೆ ನೂಲಿನ ದಾರವನ್ನು ಕಟ್ಟಿ ಆ ಬಾಲಕನಿಗೆ ಎಳೆದುಕೊಂಡು ಹೋಗುವಂತೆ ಸೂಚಿಸಿ ಸುಮಾರು ಅರವತ್ತೆರಡು ಎಕರೆಗೂ ಹೆಚ್ಚಿನ ಭೂ ಪ್ರದೇಶವನ್ನು ಅಳತೆ ಮಾಡಿ ನನಗೆ ಇಷ್ಟೂ ಜಾಗ ಬೇಕೆಂದು ಕೇಳಿಕೊಂಡನಂತೆ.

ಇಷ್ಟೆಲ್ಲಾ ಭೂಮಿಯನ್ನು ನಿನಗೆ ನೀಡಿದರೆ; ಇಲ್ಲಿರುವ ಜನರ ಪಾಡೇನು? ಎಂದು ಅಪಸ್ವರದ ನುಡಿ ಊರ ಗೌಡನ (ಯಜಮಾನನ) ಬಾಯಿಂದ ಹೊರಬರುತ್ತಿದ್ದಂತೆಯೇ ಪ್ರತ್ಯಕ್ಷವಾಗಿದ್ದ ಕಂಚಿನ ತೇರು ಜನರು ನೋಡ ನೋಡುತ್ತಿದ್ದಂತೆಯೇ ಭೂಮಿಯಲ್ಲಿ ಮುಳುಗಿ ಹೋಯಿತಂತೆ. ಹಾಗೆ ಕಂಚಿನ ತೇರು ಮುಳುಗಿ ಹೋಗಿರುವ ಜಾಗವೆಂದು ಹೇಳುವ ಹೊಲವನ್ನು ತೇರಿನ ಸಾರಿಗೆ (ತೇರಿನ ಪಟ್ಟಿ, ತೇರಿನ ಹೊಲ) ಎಂಬ ಹೆಸರಿನಿಂದಲೇ ಇಂದಿಗೂ ಕರೆಯುತ್ತಿದ್ದಾರೆ. ತೇರು ಓಡಾಡಿದ ಜಾಗದ ಇಕ್ಕೆಲಗಳಲ್ಲಿ ಮನೆಗಳಾಗಿ ಜನವಸತಿ ಆರಂಭವಾದಾಗ 'ತೇರುಬೀದಿ' ಎಂಬ ಹೆಸರು ಬಂದಿತಂತೆ, ಇದೆಲ್ಲವನ್ನು ಕಂಡ ಜನ ಕಲ್ಲು ಮಂಟಪವೊಂದನ್ನು ನಿರ್ಮಾಣ ಮಾಡಿ ಪೂಜೆ ನಡೆಸಿಕೊಂಡು ಬಂದು ಕಾಲಾಂತರದಲ್ಲಿ ಒಬ್ಬ ಪೂಜಾರಿಯನ್ನು ನೇಮಿಸಿ, ಸದಾ ಪೂಜೆ ನಡೆಯುವಂತೆ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ.[೨೨]

ದಾಳಿಂಬ (ಕ)

ಕನಕಪುರ ತಾಲೂಕಿನ 'ದಾಳಿಂಬ', ಸಸ್ಯವಾಚಿಯಾದ ಸ್ಥಳನಾಮ. ದಾಳಿಂಬ ಹಣ್ಣುಗಳನ್ನು ಬೆಳೆಯುವ ಪ್ರದೇಶವಾಗಿದ್ದಿರಬಹುದು. ಈಗ ದಾಳಿಂಬ ಬೆಳೆಯುತ್ತಿಲ್ಲವಾದರೂ ಹಿಂದೆ ದಾಳಿಂಬ ಬೆಳೆಯುವ ಪ್ರದೇಶವೆಂಬ ಪ್ರಸಿದ್ಧತೆಯನ್ನು ಹೊಂದಿರಬಹುದು. ಆದರೂ ಈ ಗ್ರಾಮಕ್ಕೊಂದು ಐತಿಹ್ಯವಿದೆ.

"ಹೈದರಾಲಿಯು ತನ್ನ ಪಾಳೆಗಾರಿಕೆಯಿಂದ ರಾಜ್ಯಾಡಳಿತ ನಡೆಸುತ್ತಿದ್ದ ಕಾಲವದು. ಹೈದರಾಲಿಯ ಸೈನ್ಯದ ದಂಡು ಯುದ್ಧಕ್ಕೆ ಹೊರಡುವ ಸಂದರ್ಭದಲ್ಲಿ ಅವನ ಅಪಾರವಾದ ಸೈನ್ಯವು ಈ ಪ್ರದೇಶದಲ್ಲಿ ಬೀಡು ಬಿಟ್ಟಿತು. ಈ ಪ್ರದೇಶದಲ್ಲಿ ಬಸಪ್ಪ ದೇವರು ಇತ್ತಂತೆ. ಈಗಲೂ ಹಬ್ಬವನ್ನು ಮಾಡುತ್ತಾರೆ. ಹೀಗೆ ಬೀಡು ಬಿಟ್ಟಿದ್ದ ಹೈದರಾಲಿಯ ಅಪಾರ ಸೈನ್ಯ ಮಾಂಸ ಮಡ್ಡಿಯನ್ನು ತಿಂದು ತುಂಬಾ ಲೋಚು (ಗಲೀಜು)ಮಾಡಿತು. ಇದರಿಂದ ಈ ನೆಲೆಯಲ್ಲಿದ್ದ ಬಸಪ್ಪ ದೇವರಿಗೆ ತುಂಬಾ ಕೋಪಬಂದು ಇಡೀ ಸೈನ್ಯಕ್ಕೆ ಕಾಲರಾ ಬರುವಂತೆ ಶಪಿಸಿಬಿಟ್ಟಿತು. ರಾತ್ರಿ ಕಳೆದು ಬೆಳಗು ಆಗುವಷ್ಟರಲ್ಲಿ ಸೈನ್ಯದಲ್ಲಿ ಅಪಾರ ಸಾವು-ನೋವುಗಳು ಉಂಟಾದವು. ಇದಕ್ಕೆ ಕಾರಣವನ್ನು ತಿಳಿದುಕೊಂಡ ಹೈದರಾಲಿಯು ಬಸಪ್ಪನಿಗೆ ತನ್ನ ಸೈನ್ಯಕ್ಕೆ ಬಂದಿರುವ ಕಾಲರಾದಿಂದ ವಿಮುಕ್ತಿಗೊಳಿಸಿದರೆ ಜೋಡಿ ಕೊಂಡ (ಅಗ್ನಿಕುಂಡ) ಮಾಡಿಸುವುದಾಗಿ

ಹರಕೆ ಒಪ್ಪಿಕೊಂಡನು. ಆಗ ಬಸಪ್ಪನು ಶಾಂತನಾಗಿ ಇವರ ಅಕಾರ್ಯವನ್ನು ಮನ್ನಿಸಿ ಕಾಲರಾದ ದಾಳಿಯಿಂದ ಹಿಂದೆ ಸರಿದನು. ಅಂದರೆ ಕಾಲರಾ ದಾಳಿಯಿಂದ ಹಿಂದೆ ಹೋದುದ್ದರಿಂದ 'ದಾಳಿಂಬ' ಎಂದು ಹೆಸರು ಬಂತು ಎಂಬುದು ಜನರ ನಂಬಿಕೆ.

ದಾಳಿಂಬ ಗ್ರಾಮದ ಎರಡು ಕಿ.ಮೀ. ದೂರದಲ್ಲಿ ಕಬ್ಬಾಳು ದುರ್ಗವಿದೆ. ಕಬ್ಬಾಳು ದುರ್ಗವು ಮೈಸೂರು ಅರಸರ, ಹೈದರಾಲಿ, ಟಿಪ್ಪುವಿನ ರಾಜಕೀಯ ಚಟುವಟಿಕೆಯ ಕೇಂದ್ರಬಿಂದುವಾಗಿದ್ದಂಥ ಗಿರಿದುರ್ಗವಾಗಿದೆ. ಈ ಐತಿಹ್ಯಕ್ಕೆ ಹೈದರಾಲಿಯ ಸಂಪರ್ಕ ಇರಬಹುದೇನೋ ಎಂಬ ಊಹೆ ಇರದೇ ಇರಲಾರದು.[೨೫]

ದೇವರಬೆಟ್ಟ ಬೆಟ್ಟ (ಕ)

ಶಿವನಂಕಾರೇಶ್ವರನ ತಮ್ಮನಾದ ವೀರಭದ್ರನು ಅಲ್ಲಿ (ತೇರುಬೀದಿ) ಸುತ್ತಮುತ್ತ ನೆಲೆಸಿದ ಮಸಣಿ ಮಾರಿಯರನ್ನು ಕೊಂದು ರಕ್ತದ ಕಾಲುವೆಯನ್ನೇ ಹರಿಸಿ, ಅಣ್ಣನಿಗೆ ಬೆಂಬಲವಾಗಿ ತನ್ನ ಒಂದು ಅಂಶವನ್ನು ಗುಡಿಯಿರುವುದನ್ನು ಗಮನಿಸಬಹುದಾಗಿದೆ. ವೀರಭದ್ರನು ಕೊಂದಾಗ ಕಾಲುವೆಯಾಗಿ ಹರಿದ ಮಾರಿ ಮಸಣಿಯರ ರಕ್ತವೆಲ್ಲ ಹೆಪ್ಪುಗಟ್ಟಿ ದೊಡ್ಡ ಪರ್ವತವೇ ಆಗಿದೆಯಂತೆ. ಅದನ್ನು ಈಗಲೂ 'ದೇವರಬೆಟ್ಟ'ವೆಂದು ಕರೆಯುತ್ತಾರೆ. ಅಲ್ಲಿರುವ ಮಾರಿ ಮಸಣಿಯರ ರಕ್ತದಿಂದ ಹೆಪ್ಪುಗಟ್ಟಿದೆಂದು ಹೇಳುವ ಆ ಬೆಟ್ಟದ ಕಲ್ಲನ್ನು ಮಚ್ಚಿನಿಂದ ಕೊಚ್ಚಬಹುದು ಎನ್ನುತ್ತಾರೆ. ತೂಕವೇ ಇಲ್ಲದ ಕಲ್ಲು, ಆ ಬೆಟ್ಟ ಬಿಟ್ಟರೆ ಬೇರೆಲ್ಲೂ ಆ ತೆರನಾದ ಕಲ್ಲು ಕಾಣಸಿಗದು, ಅದು ಅಂತಹ ವಿಶಿಷ್ಟವಾದ ಕಲ್ಲು ಎಂದು ತೇರುಬೀದಿ ಊರಿನ ದಕ್ಷಿಣಕ್ಕಿರುವ ಆ ಬೆಟ್ಟವನ್ನು ತೋರಿಸುತ್ತಾರೆ. ಇದರ ಸಂಬಂಧದ ವೈಜ್ಞಾನಿಕ ಪರೀಕ್ಷೆಗಳು ನಡೆಯಬೇಕಾದ ಅವಶ್ಯಕತೆಯಿದೆ.[೨೬]

ಪೋಲೋಹಳ್ಳಿ (ಮಾ)

ಈ ಭೂಮಿ ಮೊದಲು ಋಷಿ-ಮುನಿಗಳು ಆಶ್ರಮವನ್ನು ಕಟ್ಟಿಕೊಂಡು, ಯಜ್ಞ-ಯಾಗ ಮಾಡಿಕೊಂಡು ಇದ್ದ ರುದ್ರಭೂಮಿ ಆಗಿತ್ತು. ಋಷಿಮನಿಗಳ ಕಾಲ ನಂತರದಲ್ಲಿ ಇಲ್ಲಿ ಒಂದು ದೊಡ್ಡ ಊರು ಇತ್ತು. ಅದಕ್ಕೆ ಹೆಸರು ಏನಿತ್ತೋ ಗೊತ್ತಿಲ್ಲ. ಸುಖ ಸಂಪತ್ತಿನಿಂದ ಕೂಡಿದ ಹಾಗೂ ವೈಭವಯುತವಾದ ಜೀವನವನ್ನು ನಡೆಸುತ್ತಿದ್ದರು. ಊರಿನ ಎಲ್ಲ ಜನರೂ ಕೂಡ ಹೆಂಡ ಕುಡಿತದ ಚಟಕ್ಕೆ ಒಳಗಾಗಿ, ಹಂದಿ ಮಾಂಸವನ್ನು ತಿನ್ನದೇ ಬೆಳಗಾಗುತ್ತಿರಲಿಲ್ಲ. ಅಷ್ಟು ಹೊಲಸು ಮಾಡಿದ್ದರಿಂದ ಇದ್ದಕ್ಕಿದ್ದಂತೆ ದನಕರುಗಳು ಸತ್ತು, ಮಳೆ ಬೆಳೆಯಾಗದೆ ಊರು ಏಳ್ಗೆ ಆಗಲಿಲ್ಲ. ಆಗ ಊರನ್ನು ಬಿಟ್ಟು ಅಡಕಮಾರನಹಳ್ಳಿಗೆ ಎರಡು ಕುಳದವರು, ಅಜ್ಜನಹಳ್ಳಿಗೆ ವಲಸೆ ಹೋದರು. ಹೀಗೆ ಊರು ಪಾಳು ಬಿದ್ದಿತು. ಹೀಗೆ ಎರಡು ಸಾರಿ ಊರು ಪಾಳು ಬಿದ್ದಿತು. ನಂತರದಲ್ಲಿ ನಮ್ಮ ತಾತ-ತಂದೆಯವರ ಕಾಲದಲ್ಲಿ ನಮ್ಮ ಗೊಲ್ಲ ಸಮುದಾಯದವರು ಈ ಊರಿಗೆ ಬಂದಾಗ 'ಸೊಂದಲಿಗೆರೆ ಅಯ್ಯನವರು ಎಲ್ಲ ಗೊಲ್ಲರನ್ನು ಕರೆಸಿ ಈ ಊರು ಹಿಂದೆ ಋಷಿಮುನಿಗಳ ತಪೋಭೂಮಿಯಾದ್ದರಿಂದ ಸತ್ಯದಿಂದ ಬದುಕಬೇಕು. ಮಾಂಸ ಮಡ್ಡಿಯ ಹೊಲಸು ಮಾಡಿದರೆ ಊರು

ಉದ್ಧಾರವಾಗುವುದಿಲ್ಲ ಎಂದು ಹೇಳಿ; 'ಹಂದಿ ಮಾಂಸ ಮತ್ತು ಹೆಂಡ ಕುಡಿತವನ್ನು ಮಾಡಬಾರದು' ಎಂದು ಪ್ರಮಾಣ ಮಾಡಿಸಿದರು. ಅಲ್ಲದೇ ಈ ಊರಿಗೆ 'ಲಕ್ಷ್ಮೀಸಾಗರ' ಎಂದು ನಾಮಕರಣ ಮಾಡಿದರು. ಪ್ರಮಾಣ ಮಾಡಿದವರಲ್ಲಿ ಕುಳ್ಳ ಕರಿಯಪ್ಪ ಎಂಬುವವರು ಮಾತ್ರ ಅಯ್ಯನವರು ಪ್ರಮಾಣ ಮಾಡಿಸಿದಂತೆ ಬದುಕಿದರು. ಮಿಕ್ಕವರು ಪ್ರಮಾಣದಂತೆ ನಡೆಯದೆ ಹೆಂಡದ ಕುಡಿತ ಮತ್ತು ಕರಿ ಜಾತಿ (ಹಂದಿ) ಮಾಂಸವನ್ನು ತಿಂದಿದ್ದರಿಂದ ಮಧ್ಯ ವಯಸ್ಸಿನಲ್ಲಿಯೇ ತೀರಿಕೊಂಡರು. ಆದ್ದರಿಂದ ಕುಡಿತ, ಮಾಂಸ ಮಡ್ಡಿ ತಿನ್ನುವ ಹೊಲೆಯ- ಮಾದಿಗರು ಈ ಊರಿಗೆ ಬರುವುದಿಲ್ಲ. ಬಂದರೆ ಕೆಡುಕು ಉಂಟಾಗುತ್ತದೆ ಎಂಬ ನಂಬಿಕೆ ಇದೆ. ಈಗ ವಾಸವಾಗಿರುವ ಸುಮಾರು ೪೫ ಗೊಲ್ಲ ಸಮುದಾಯದವರು ಹಸು-ಹಂದಿಯನ್ನು ಕೊಲ್ಲದೇ, ಹೆಂಡ ಸಾರಾಯಿ ಕುಡಿಯದೇ ಒಳ್ಳೆಯ ಜೀವನ ನಡೆಸುತ್ತಿದ್ದೇವೆ. ಈ ಹಿಂದೆ ಇದ್ದ ಎರಡು ತಲೆಮಾರಿನ ಗ್ರಾಮಸ್ಥರು ಏಳ್ಗೆ ಹೊಂದದೆ ಪಾಳು ಬಿದ್ದಿದ್ದರಿಂದ 'ಪೋಲೋ' ಆದರು ಎನ್ನುತ್ತಿದ್ದರು. ಹಾಗಾಗಿ ಇದನ್ನು ಪೋಲೋಹಳ್ಳಿ ಎಂದು ಕರೆದರು. ಲಕ್ಷ್ಮೀಸಾಗರ ಎಂದು ಹೆಸರಿಟ್ಟರೂ ಕೂಡ ಅದು ನಿಲ್ಲದೇ ಹಳೆಯ ಹೆಸರಾದ ಪೋಲೋಹಳ್ಳಿಯೆಂದೇ ಕರೆಯುತ್ತಾರೆ.[೨೭]

ಬೂದನಕಲ್ಲು (ರಾ)

ಈ ಊರು ರೇವಣ ಸಿದ್ದೇಶ್ವರ ಬೆಟ್ಟದ ಸಾಲಿನಲ್ಲಿರುವ ಬೂದನಕಲ್ಲು ಬೆಟ್ಟದ ಬುಡದಲ್ಲಿದೆ. ಈ ಬೆಟ್ಟವನ್ನು ಮಂಜು ಮೇದರೆ ಮಂಜು ಆವರಿಸಿದರೆ ಮಳೆಯಾಗುತ್ತದೆ ಎಂಬ ನಂಬಿಕೆಯಿದೆ. ಇದಕ್ಕೆ ಒಂದು ಐತಿಹ್ಯವಿದೆ. "ನೆಲಮನೆ ಗ್ರಾಮದ ದಾಸೇಗೌಡರ ಮನೆತನದವರ ಕಾಲದಲ್ಲಿ ಆದ ಸತ್ಯಘಟನೆ. ಈ ಪ್ರದೇಶದಲ್ಲಿ ಸುಮಾರು ವರ್ಷಗಳ ಕಾಲ ಮಳೆಯಾಗದೇ ಇದ್ದುದರಿಂದ ಬರಗಾಲ ಬಂದಿತು. ಬಡ ಬಗ್ಗರಿಗೆ ರಾಗಿ, ಅಕ್ಕಿ, ದವಸ ಧಾನ್ಯ ಅಂತ ಏನೂ ಇರಲಿಲ್ಲ. ಊರಗೌಡ ಎನಿಸಿಕೊಂಡವರು ಸಿರಿವಂತರು ಹೆಚ್ಚು ಭೂಮಿ ಇದ್ದುದರಿಂದ ದವಸ ಧಾನ್ಯ ಬೆಳೆದು ಇಟ್ಟುಕೊಂಡಿದ್ದರು. ಹೀಗೆ ಬರಗಾಲದ ಸಂದರ್ಭದಲ್ಲಿಯೇ ದೀಪಾವಳಿ ಹಬ್ಬ ಬಂತು. ಬಡಜನರಿಗೆ ತಿನ್ನಲು ಏನೂ ಇಲ್ಲದಿದ್ದಾಗ ಊರಿನ ಬಡವರು ಗೌಡನ ಹತ್ತಿರ ರಾಗಿ ಕೇಳಲು ಹೋದರು. ಸ್ವಾಮಿ, ದೀಪಾವಳಿ ಹಬ್ಬ ಮನೇಲಿ ಏನೂ ಗತಿ ಇಲ್ಲ. ರಾಗಿ ಕೊಡಿ ಎಂದು ಕೇಳಿದಾಗ, ಗೌಡನು; ನೋಡಪ್ಪ ರಾಗಿಯನ್ನು ಬರಗಾಲದಲ್ಲಿ ಕೊಡಲು ಆಗುವುದಿಲ್ಲ. ಈ ಬೂದನಕಲ್ಲು ಗುಡ್ಡ ಮಂಜು ಮೇದ ದಿನ ನಾನು ರಾಗಿ ಕೊಡುತ್ತೇನೆ ಎಂದನು. ಆಗ ಊರಿನವರೆಲ್ಲ ರಾತ್ರಿಯೇ ಹೋಗಿ ಸೊಪ್ಪು ಸದೆ ಎಲ್ಲ ತಂದು ಬೆಂಕಿ ಹಚ್ಚಿದರು. ಹೀಗೆ ಬೆಳಗಿನವರೆಗೂ ಬೆಂಕಿ ಹಾಕಿದರು. ಆಗ ಬೆಳಗಿನ ಜಾವದ ಹೊತ್ತಿಗೆ ಗುಡ್ಡದ ಮೇಲೆ ಹೊಗೆಮುಚ್ಚಿಕೊಂಡು ಗುಡ್ಡ ಬೂದುಗಾಯಿತು. ಗುಡ್ಡ ಹೊಗೆಯಿಂದ ಮೋಡಕಟ್ಟಿದ ರೀತಿ ಮುಚ್ಚಿಕೊಂಡಿತು. ಎಲ್ಲರೂ ಗೌಡರ ಮನೆ ಕಡೆಗೆ ಓಡಿದರು. ಗೌಡರ ಹತ್ತಿರ ಬಂದು ನೋಡಿ ಸ್ವಾಮಿ; ಬೂದನಕಲ್ಲು ಗುಡ್ಡದ ಮೇಲೆ ಮಂಜು ಬಿದ್ದಿದೆ ಎಂದು ಗೌಡನಿಗೆ ತೋರಿಸಿದರು. ಅದನ್ನು ನೋಡಿದ ಗೌಡರು ಹೌದು! ಗುಡ್ಡದ ಮೇಲೆ ಮಂಜು ಬಿದ್ದಿದೆ ಎನ್ನುತ್ತಾ ಅಯ್ತು; ಹಾರೆ ಗುದ್ದಲಿ ತೆಗೆದುಕೊಂಡು ಎಲ್ಲಾ ರಾಗಿ ಗುಳಿಗಳನ್ನು ತೆಗೆಯಿರಿ ಎಂದ ಗೌಡ. ರಾಗಿ ಕೇಳಲು ಕೆಲವರು ಗೌಡನ ಹತ್ತಿರ ಬೇಗನೆ ಓಡಿ ಬಂದು ರಾಗಿ ತೆಗೆದುಕೊಳ್ಳುತ್ತಿದ್ದರು. ಇನ್ನು

ಕೆಲವರು ಅರ್ಧದಾರಿಯಲ್ಲೇ ಬರುತ್ತಿದ್ದರು. ಮತ್ತೆ ಕೆಲವರು ಗುಡ್ಡದ ಹತ್ತಿರವೇ ಬರುತ್ತಿದ್ದರು. ಗೌಡ ಬಂದವರಿಗೆ ರಾಗಿ ಹಂಚುತ್ತಿರುವಷ್ಟರಲ್ಲಿಯೇ ಮಳೆ ಗುಡ ಗುಡ ಎಂದು ಬಂದೇ ಬಿಟ್ಟಿತು. ಅದು ಅಂತ ಸತ್ಯದ ಕಾಲವಾಗಿತ್ತು. ಇದು ಲಂಬಾಣಿ ಜನಾಂಗದವರ ಸತ್ಯತೆಯನ್ನು ಹೇಳುತ್ತದೆ. ಹೀಗೆ ಇವರ ಸತ್ಯದ ಭರವಸೆಯಿಂದಾಗಿಯೇ ಮತ್ತು ಬೂದನಕಲ್ಲು ಗುಡ್ಡ ಬುಡದಲ್ಲಿಯೇ ಗ್ರಾಮವಿರುವುದರಿಂದ ಈ ಊರಿಗೆ ಬೂದನಕಲ್ಲು ಎಂಬ ಹೆಸರು ಬಂದಿದೆ.[೨೮]

ಬಂಡೆನಿಂಗಮ್ಮನ ಗವಿ (ಕ)

ಈ ಹೆಸರು ಬರಲು ಒಂದು ಐತಿಹ್ಯ ಇಂತಿದೆ. ಬಂಡೆ ನಿಂಗಮ್ಮನ ಗವಿಯು ಮುರಡಿ ಹೊಸಹಳ್ಳಿ ಪಕ್ಕದಲ್ಲಿದೆ. ಬಂಡೆನಿಂಗಮ್ಮನ ಪೂರ್ವಿಕರು ನಂಜನಗೂಡಿನ ಹತ್ತಿರದ ಕರಳೆಯಿಂದ ಬಂದು; ಮುರಕಣಿ ಅನ್ನುವ ಊರಿನಲ್ಲಿ ವಾಸವಾಗಿದ್ದವರು. ಆ ಸಂದರ್ಭದಲ್ಲಿ ಚನ್ನವೀರಸ್ವಾಮಿ ಎಂಬುವವರು ಈಗ ಬಂಡೆಲಿಂಗಮ್ಮನ ಗವಿ ಎನ್ನುವ ಗವಿಯಲ್ಲಿ ವಾಸವಾಗಿದ್ದರು. ಆ ಗವಿಯು ಬಾಣಂತಮ್ಮನ ಅರಣ್ಯದಲ್ಲಿದೆ. ಈ ಸ್ವಾಮಿಗಳು ತಮ್ಮ ಜಡೆಯನ್ನು ಎಳೆದುಕೊಂಡು ಉದಾರಹಳ್ಳಿಯ ಹತ್ತಿರದ ಸಿದ್ಧರಗವಿಗೆ ಸಂಚಾರ ಹೋಗುತ್ತಿದ್ದರು. ಹೀಗಿರುವಾಗ; ಒಂದು ದಿನ ಒಂಬತ್ತು ವರ್ಷದ ಲಿಂಗಮ್ಮ ಮತ್ತು ಅವಳ ಅಜ್ಜಿ ಬೆರಕೆ ಸೊಪ್ಪು ಕುಯ್ಯಲು ಹೊಲದ ಕಡೆ ಬಂದಿದ್ದಾಗ ಲಿಂಗಮ್ಮ; ಸ್ವಾಮಿ! ಎಂದು ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿದಳು. ಅದನ್ನು ಕಂಡು ಜೊತೆಯಲ್ಲಿದ್ದ ಅಜ್ಜಿಯು; ಯಾರಿಗೆ ಕೈ ಮುಗಿಯುತ್ತಿದ್ದೀಯಾ ಎಂದು ಕೇಳಿದಳು. ಆಗ ಲಿಂಗಮ್ಮನು; ಸ್ವಾಮಿಗಳು ಜಡೆ ಎಳೆದುಕೊಂಡು ಹೋಗ್ತಾ ಇದ್ದಾರೆ ನೋಡಲ್ಲಿ ಎಂದಾಗ, ಅಜ್ಜಿ;

ಏನಪ್ಪಾ ನನಗೆ ದರ್ಶನನೇ ತೋರ್‍ತಾ ಇಲ್ಲ. ನನ್ನ ಮೊಮ್ಮಗಳು ಹೇಳ್ತಾವಳಲ್ಲ ಎಂದಾಗ,

ನಿನಗೆ ದರ್ಶನ ಕೊಡೋದಿಲ್ಲ ಅಜ್ಜಿ; ಈ ಬೆರಕೆ ಸೊಪ್ಪು ಈ ಬೇಸಿಗೆಯಲ್ಲಿ ಯಾಕೆ ಕುಯ್ಯುತ್ತಿದ್ದೀಯಾ ಎಂದು ಅವರು ಅಜ್ಜಿಯನ್ನು ಕೇಳುತ್ತಾರೆ. ಆಗ ಅಜ್ಜಿ; ಸ್ವಾಮಿ ಮಳೆಯಿಲ್ಲ, ಬೆಳೆಯಿಲ್ಲ ಬೇಯಿಸಿ ತಿನ್ನಲು ಕುಯ್ಯುತ್ತಿದ್ದೇನೆ ಎಂದು ಹೇಳುತ್ತಾಳೆ.

ಆಗ ಸ್ವಾಮಿಗಳು; ನಾಳಿದ್ದು ಮಳೆ ಹುಯ್ಯುತ್ತದೆ. ನೀವೆಲ್ಲರೂ ಮನೆಗೆ ಹೋಗಿ ಎಂದು ಹೇಳುತ್ತಾರೆ.

ಆಗ ಅಜ್ಜಿಯು; ನಾವು ಮನೆಗೆ ಹೋದರೆ ನೀವು ಎಲ್ಲಿ ಇರುತ್ತೀರಿ ಸ್ವಾಮಿ ಎಂದಾಗ

ಸ್ವಾಮಿಯು; ನೋಡಿ ನಾನು ಈ ಗವಿಯಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ಆಗ

ಅಜ್ಜಿಯು; ನಾನು ನಾಳಿದ್ದು ನಿಮ್ಮನ್ನ ಕಾಣುತ್ತೇನೆ ಬುದ್ಧಿ ಎಂದು ಹೇಳಿ ಹೊರಟು ಹೋಗುತ್ತಾಳೆ. ಆಗ ಚನ್ನವೀರಸ್ವಾಮಿಗಳು ಸಿದ್ಧರ ಗವಿ ಹತ್ತಿರಕ್ಕೆ ಪ್ರಯಾಣ ಬೆಳೆಸುತ್ತಾರೆ.

ಅಜ್ಜಿ ಊರಿಗೆ ಹೋಗಿ ಎಂಕಟಗಿರಿಗೌಡ್ರು ಅನ್ನುವವರಿಗೆ ಈ ಸ್ವಾಮಿಗಳು ಕಂಡದ್ದನ್ನು ಹೇಳುತ್ತಾಳೆ. ನನ್ನ ಮೊಮ್ಮಗಳಿಗೆ ಒಬ್ಬ ಶರಣರು ಸಿಕ್ಕಿ; ಇನ್ನು ಮೂರು ದಿನಗಳಲ್ಲಿ ಮಳೆಯಾಗುತ್ತದೆ ಎಂದು ಹೇಳಿದರು. ಅಲ್ಲದೇ ಮೂರು ದಿನಗಳಲ್ಲಿ ಮಳೆಯಾದರೆ ಶಾವಿಗೆ ತರುತ್ತೇನೆ ಎಂದು ಹರಕೆ ಮಾಡಿಕೊಂಡು ಬಂದಿದ್ದೇನೆ ಎಂದಾಗ, ಊರಗೌಡರೆಲ್ಲರೂ ಅವಳ ಮಾತನ್ನು ನಂಬುವುದಿಲ್ಲ.

ಮೂರು ದಿನ ಕಳೆದ ನಂತರ ಸ್ವಾಮಿಗಳು ಹೇಳಿದಂತೆ ಮಳೆಯಾಗುತ್ತದೆ. ಆಗ ಊರ ಜನರೆಲ್ಲ ಆ ಹುಡುಗಿ ಮತ್ತು ಅಜ್ಜಿ ಹೇಳಿದ್ದು ಸತ್ಯ. ಸ್ವಾಮಿಗಳು ಹೇಳಿದ ಹಾಗೆ ಮಳೆ ಬಂತು. ಅಂತೇಳಿ ಅವರ ಮಾತನ್ನು ನಂಬಿ; ಊರ ಜನರೆಲ್ಲ ಸೇರಿ ಬಾಲಕಿ ಲಿಂಗಮ್ಮನಿಗೆ ಸಿಂಗಾರ ಮಾಡಿ, ವಾದ್ಯದ ಸಮೇತ ಮೆರವಣಿಗೆಯಲ್ಲಿ ಶಾವಿಗೆಯನ್ನು ತೆಗೆದುಕೊಂಡು ಹರಕೆ ತೀರಿಸಲು ಆ ಗವಿಯ ಹತ್ತಿರಕ್ಕೆ ಊರ ಜನರೆಲ್ಲ ಬರುತ್ತಾರೆ. ಜನರು ತುಂಬಾ ಕಾತರದಿಂದ ಸ್ವಾಮಿಯವರನ್ನು ಮಾತನಾಡಿಸಲು ಸ್ವಾಮಿ! ಸ್ವಾಮಿ! ಎಂದು ಎಲ್ಲರೂ ಕರೆಯುತ್ತಾರೆ. ಆಗ ಗವಿಯಿಂದ ಯಾವ ಮಾತು ಬರಲಿಲ್ಲ. ಆಗ ಇದೆಲ್ಲ ಸುಳ್ಳು ಎಂದು ಆ ಲಿಂಗಮ್ಮನನ್ನು ತಿರಸ್ಕಾರವಾಗಿ ಮಾತನಾಡುತ್ತಾರೆ. ಆ ಸಂದರ್ಭದಲ್ಲಿ ಗವಿಯಿಂದ ಚೆನ್ನವೀರ ಸ್ವಾಮಿಗಳು; ನೀನು ಒಬ್ಬಳು ಬಾರಮ್ಮ ನಿಂಗಮ್ಮ. ನೀನೊಬ್ಬಳಿಗೆ ಮಾತ್ರ ದರ್ಶನ ಕೊಡೋದು, ನೀನು ಒಬ್ಬಳು ಮಾತ್ರ ಬಾ ಅಂತ ಕರೆಯುತ್ತಾರೆ. ಆಗ ಆ ಹುಡುಗಿ ಗವಿಯೊಳಕ್ಕೆ ಹೋಗಿ ಸೇರಿಕೊಂಡಳು. ಗವಿಯ ಹೊರಗಿದ್ದ ಊರ ಜನ ತುಂಬಾ ಹೊತ್ತು ನಿಂಗಮ್ಮನ ಬರುವಿಕೆಗಾಗಿ ಕಾಯುತ್ತಾರೆ. ಆದರೆ; ನಿಂಗಮ್ಮ ಮಾತ್ರ ಹೊರಗೆ ಬರುವುದಿಲ್ಲ. ಆ ಹುಡುಗಿಯ ಮೈ ಮೇಲೆ ಹಾಕಿದ್ದ ಊರ ಜನರ ಒಡವೆಗಳೆಲ್ಲ ಅವಳ ಕಡೇನೆ ಸೇರಿಕೊಳ್ಳುತ್ತದೆ. ಎಲ್ಲರ ಒಡವೆ ಅವಳ ಹತ್ತಿರನೇ ಸೇರಿಕೊಂಡಾಗ ಊರ ಜನರು ಪೂಜೆ ಮಾಡಿಕೊಂಡು ಮರಳಿ ಊರಿಗೆ ಬಂದು ಬಿಡುತ್ತಾರೆ.

ಊರಲ್ಲಿ ಯಾರಿಗಾದರೂ ಮದುವೆ ಮೊದಲಾದ ಶುಭಕಾರ್ಯಗಳು ಇದ್ದರೆ ಅವರು ನಿಂಗಮ್ಮನು ಹೋದ ಗವಿಯ ಹತ್ತಿರಕ್ಕೆ ಬಂದು ತಾಯಿ; ಈಗ ನನ್ನ ಮಗಳಿಗೆ ಮದುವೆ ನಮ್ಮ ಒಡವೆಕೊಡು ಎಂದು ಪೂಜೆ ಮಾಡಿ, ಒಂದು ಬಟ್ಟೆಯನ್ನು ಗವಿಯ ಮುಂದೆ ಹಾಸಿ ಬೇಡಿಕೊಂಡಾಗ, ನಿಂಗಮ್ಮನು ಆ ಕಡೆ ತಿರಿಕೊಪ್ಪ ಎನ್ನುತ್ತಾಳೆ. ಬೇಡಲು ಹೋದ ಹಳ್ಳಿಯವರು ತಿರುಗಿಕೊಂಡಾಗ ಹಾಸಿದ ಬಟ್ಟೆಯಲ್ಲಿ ಒಡವೆಗಳು ಇರುತ್ತಿದ್ದವು. ಮದುವೆ ಮುಗಿದ ನಂತರ ಒಡವೆಗಳನ್ನು ಮತ್ತೆ ಹಿಂದಕ್ಕೆ ತೆಗೆದುಕೊಂಡು ಹೋಗಿ ತಾಯಿ! ಒಡವೆ ತಂದಿದ್ದೀನಿ. ತೆಗೆದುಕೋ ಎಂದು ಅಲ್ಲಿ ಒಡವೆ ಇಟ್ಟು ತಿರುಗಿ ಬಂದು ಬಿಡುತ್ತಿದ್ದರು. ಆಗ ದೇವಿ ಮತ್ತೆ ಆ ಒಡವೆಗಳನ್ನೆಲ್ಲ ತೆಗೆದುಕೊಳ್ಳುತ್ತಿದ್ದಳು. ಹೀಗೆ ಜನರೆಲ್ಲ ಶಾವಿಗೆ ಸೇವೆಯನ್ನು ಪ್ರತಿವರ್ಷ ನಡೆಸಿಕೊಂಡು ಬರುತ್ತಿದ್ದರು.

ಮುರುಕಣಿ ಪಕ್ಕದಲ್ಲೇ ಹೊಲೇರ ಕೊತ್ತನೂರು ಎಂಬ ಊರು. ಆ ಊರನ್ನು ಹೊಲೇರ ಪಾಳೆಯಗಾರ ಆಳುತ್ತಿದ್ದ ಸಮಯ. ಅವನು ಒಂದು ದಿನ ಚೆನ್ನಾಗಿ ಕುಡಿದು ಆ ಒಡವೆಗಳನ್ನು ನಿಂಗಮ್ಮನ ಹತ್ತಿರ ಬಿಡಲು ಆಗುವುದಿಲ್ಲ. ಎಲ್ಲಾ ನಾವೇ ದೋಚಿ ಬಿಡಬೇಕು ಎಂದು ಹೇಳಿ ಆ ಗವಿಯ ಹತ್ತಿರ ಬಂದು ಏ; ಬಂಡೆನಿಂಗಿ ಎಂದು ಕೂಗಿದನಂತೆ, ಆಗ ನಿಂಗಮ; ಓ ಅಂದಳಂತೆ, ಆಗ ಪಾಳೆಯಗಾರ ನಿಂಗಮ್ಮನಿಗೆ; ನಿನ್ನ ಸೊಲ್ಲು ಅಡಗಲಿಲ್ಲವೇನೆ ಎಂದನಂತೆ. ಆಗ ನಿಂಗಮ್ಮನು "ನಿನಗೆ ಸುಳಿ ಇಲ್ಲದಾಗಲಿ, ಹೊಲೇರ ಕೊತ್ತನೂರು ಹಾಳಾಗಲಿ, ಮುರುಕಣಿ ಮುಂದುವರಿಯದೇ ಹೋಗಲಿ" ಎಂದಳಂತೆ. ಆಗ ಹೊರಗಿದ್ದವರ ಎಲ್ಲರ ಶಬ್ದ ನಿಂತು ಹೋಯಿತಂತೆ. ಹೀಗೆ ಮುರಕಣಿಯವರು ತಮ್ಮ ಊರಿನ ಮೇಲಿರುವ ಲಿಂಗಮ್ಮನ ಶಾಪ ಮುಕ್ತತೆಗಾಗಿ ಪ್ರತಿವರ್ಷ ಶಾವಿಗೆ ತಂದು ಸಾವೆ ಮಾಡುತ್ತಾರೆ. ಜೊತೆಗೆ ಒಂದು ಹುಡುಗಿಗೆ ಒಡವೆಯಲ್ಲ ಹಾಕಿ, ಸಿಂಗಾರ

ಮಾಡಿಸಿಕೊಂಡು ಶಾವಿಗೆ ಸಾವೆ ಮಾಡುತ್ತಾರೆ. ಈಗಲೂ ಸಹ ಅದೇ ರೀತಿ ಸಾವೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ನಿಂಗಮ್ಮ ಹೇಳಿದಂತೆ ಈಗಲೂ 'ಮುರಕಣಿ ಮುಂದುವರೆಯಲಿಲ್ಲ. ಕೊತ್ತನೂರಿನಲ್ಲಿ ಹೊಲೆಯರೇ ಇಲ್ಲ. ಪಾಳೆಯಗಾರ ವಂಶ ನಿರ್ವಂಶವಾಯಿತು' ಎನ್ನುತ್ತಾರೆ ಹಿರಿಯ ಗ್ರಾಮಸ್ಥರು. ಹೀಗೆ ಕೂನಮ್ಮನಿಂದ ಈ ಗವಿಗೆ ಕೂನಮ್ಮನಗವಿ ಎಂದು ಹೆಸರು ಬಂದಿದೆ.[೨೯]

ಬ್ರಾಹ್ಮಣಪುರ (ಚ)

ಸುಮಾರು ಏಳುನೂರು ವರ್ಷಗಳ ಹಿಂದೆ ಮಾಧ್ವಮತ ಕೇಂದ್ರವಾದ ಅಬ್ಬೂರಿನಲ್ಲಿ ಪುರುಷೋತ್ತಮ ತೀರ್ಥರ ಶಿಷ್ಯರಾದ ಬ್ರಹ್ಮಣ್ಯತೀರ್ಥರು ವಾಸಿಗಳಾಗಿದ್ದರು. ಅವರು ತಮ್ಮ ಆಶ್ರಮಕ್ಕೆ ತಮ್ಮ ನಂತರ ಸಮರ್ಥ ಉತ್ತರಾಧಿಕಾರಿಗಳಾಗುವವರು ಯಾರೂ ಇಲ್ಲವಲ್ಲ ಎಂಬ ಕೊರಗಿನಲ್ಲಿರುವಾಗ ಅವರಿಗೆ ಸ್ವಪ್ನದಲ್ಲಿ ವಿಷ್ಣು ಕಾಣಿಸಿಕೊಂಡು ಅವರ ಮನಸ್ಸಿನ ಒಳಗಡೆ ಇದ್ದ ಚಿಂತೆಯನ್ನು ನಿವಾರಿಸುವುದಾಗಿ ಆಶ್ವಾಸನೆಯಿತ್ತನು.

ಹೀಗಿರುವ ಸಂದರ್ಭದಲ್ಲಿ; ದೈವಭಕ್ತರಾದ ಬನ್ನೂರು ನಿವಾಸಿಗಳಾದ ಶ್ರೀನಿವಾಸಾಚಾರ್ಯ ವೃದ್ಧ ದಂಪತಿಗಳು ಮಕ್ಕಳಿಲ್ಲದ ಕಾರಣದಿಂದಾಗಿ ಕಾಶೀ ಯಾತ್ರೆಗಾಗಿ ಚನ್ನಪಟ್ಟಣದ ಮಾರ್ಗವಾಗಿ ಹೋಗುತ್ತಿದ್ದರು. ಶ್ರೀನಿವಾಸಚಾರ್ಯರು ನಡಿಗೆಯ ಆಯಾಸದಿಂದ ಬಳಲಿ ಕಣ್ವಾ ನದೀ ತೀರದ ಮಳೂರು ಹತ್ತಿರ ದೈವಾಧೀನರಾದರು. ಆ ವೇಳೆಯಲ್ಲಿ ಗಂಡನ ಮರಣದಿಂದ ಶೋಕತಪ್ತಳಾದ ಶ್ರೀನಿವಾಸಾಚಾರ್ಯರ ಹೆಂಡತಿ ಸಹಗಮನ ಮಾಡಲು ನಿರ್ಧರಿಸಿ ಆಶೀರ್ವಾದಕ್ಕಾಗಿ ಈ ಪ್ರದೇಶದ ಬ್ರಾಹ್ಮಣರನ್ನು ಕೇಳಲು ಹೋದಳು. ಆದರೆ; ಅವರು ಇದೇ ಮಾರ್ಗದಲಿ ಕಣ್ವಾನದೀ ತೀರದಲ್ಲಿ ಬ್ರಹ್ಮಣ್ಯತೀರ್ಥವೆಂಬ ಯತಿಗಳ ಆಶ್ರಮವಿದೆ. ಅಲ್ಲೇ ಹೋಗಿ ಅವರ ಆಶೀರ್ವಾದವನ್ನು ಪಡೆದು ಸಹಗಮನ ಮಾಡಬಹುದು ಎಂದು ಹೇಳುತ್ತಾರೆ. ಅವರ ಮಾತಿನಂತೆ ಆಕೆ ತನ್ನ ಗಂಡನ ಶವವನ್ನು ಅಲ್ಲೇ ಬಿಟ್ಟು ಬ್ರಹ್ಮಣ್ಯತೀರ್ಥರ ಸನ್ನಿಧಿಗೆ ಹೋಗಿ ನಮಸ್ಕಾರ ಮಾಡಿದಾಗ ಯತಿಗಳು ತಕ್ಷಣವೇ 'ದೀರ್ಘ ಸುಮಂಗಲೀ ಭವ' ಅಶೀರ್ವಾದ ಮಾಡಿದರು. ಅದನ್ನು ಕಂಡು ಪಕ್ಕದಲ್ಲಿದ್ದ ಯತಿಗಳ ಶಿಷ್ಯರು ಅವರನ್ನು ಕುರಿತು, ಆಕೆಯ ಗಂಡನು ಮರಣ ಹೊಂದಿರುತ್ತಾನೆ. ಆಕೆ ಸಹಗಮನಕ್ಕಾಗಿ ನಿಮ್ಮನ್ನು ಯಾಚಿಸಲು ಬಂದಿದ್ದಾಳೆ. ಅದನ್ನು ತಿಳಿಯದೆ ನೀವು ಆಕೆಗೆ ದೀರ್ಘ ಸುಮಂಗಲೀ ಭವ ಎಂದು ಹರಸಿಬಿಟ್ಟರಿ ಎಂದು ಹೇಳಿದಾಗ, ನಡೆದುಹೋದ ಅಚಾತುರ್ಯದಿಂದ ಅವರ ಮನಸ್ಸಿಗೆ ನೋವಾದರೂ ಧೈರ್ಯ ತಂದುಕೊಂಡು; ಸ್ವಲ್ಪ ಹೊತ್ತು ಸೂರ್ಯನ ಕಡೆ ದಿವ್ಯದೃಷ್ಟಿಯನ್ನು ಹರಸಿ ತಕ್ಷಣವೇ ತಮ್ಮ ಕಮಂಡಲದಲ್ಲಿದ್ದ ತೀರ್ಥವನ್ನು ಆಕೆಗೆ ಕೊಟ್ಟು ತೆಗೆದುಕೊಂಡು ಹೋಗಿ ನಿನ್ನ ಗಂಡನಿಗೆ ಪ್ರೋಕ್ಷಣೆ ಮಾಡು ಎಂದು ಹೇಳಿದರು. ಆಕೆಯು ಅದೇ ರೀತಿಯಾಗಿ ಗಂಡನ ಶವಕ್ಕೆ ತೀರ್ಥವನ್ನು ಪ್ರೋಕ್ಷಣೆ ಮಾಡಲು ತಕ್ಷಣವೇ ಶ್ರೀನಿವಾಸಚಾರ್ಯರು ಎದ್ದು ಕುಳಿತರು. ಮತ್ತೆ ಜ್ಞಾನವನ್ನು ಪಡೆದುಕೊಂಡ ಶ್ರೀನಿವಾಸಾಚಾರ್ಯರು ಏಕೆ ನನಗೆ ಹೀಗಾಯಿತು? ಎಂದು ಕೇಳಲು ಅವರ ಹೆಂಡತಿ ನಡೆದ ವೃತ್ತಾಂತವೆಲ್ಲವನ್ನೂ ತನ್ನ ಗಂಡನಿಗೆ ತಿಳಿಸಿದಳು. ಕೂಡಲೇ ಆ ದಂಪತಿಗಳು ಬ್ರಹ್ಮಣ್ಯತೀರ್ಥರನ್ನು ಹುಡುಕಿಕೊಂಡು ಹೋಗಿ ಅವರಿಗೆ ನಮಸ್ಕರಿಸಿ ತಾವು ಪುತ್ರ ಸಂತಾನಕ್ಕಾಗಿ ಕಾಶೀಯಾತ್ರೆಗೆ ಹೋಗಿಬರುವುದಾಗಿ ತಿಳಿಸಿದರು. ಆ ಸಮಯದಲ್ಲಿ ಯತಿಗಳು ನೀವು ನಿಮ್ಮ ಸ್ಥಳದಲ್ಲೇ

ಇದ್ದು ವಿಠಲ ಸೇವೆ ಮಾಡಿಕೊಂಡು ಇರಿ. ನಿಮಗೆ ಸಂತಾನ ಪ್ರಾಪ್ತಿಯಾಗುವುದು. ಅದರಲ್ಲಿ ಮೊದಲನೆಯ ಮಗುವನ್ನು ನಮಗೆ ಆಶ್ರಮಕ್ಕಾಗಿ ಕೊಡಬೇಕು, ಎರಡನೇ ಮಗುವನ್ನು ನೀವೇ ಇಟ್ಟುಕೊಳ್ಳಿ ಎಂದು ಹೇಳಿ ಆಶೀರ್ವದಿಸಿ ಕಳುಹಿಸಿದರು. ಜೊತೆಗೆ ಮೊದಲ ಮಗುವಿನ ಜನನ ಕಾಲಕ್ಕೆ ತಮ್ಮ ಆಶ್ರಮಕ್ಕೆ ಬರಬೇಕೆಂದೂ, ಆಶ್ರಮದಲ್ಲಿಯೇ ಮಗುವಿನ ಜನನವಾಗಬೇಕೆಂದೂ ಕೇಳಿಕೊಂಡರು. ಅನಂತರ ಅವರು ಬನ್ನೂರಿಗೆ ಮರಳಿದರು. ಶ್ರೀನಿವಾಸಾಚಾರ್ಯರ ಪತ್ನಿಗೆ ನವಮಾಸಗಳು ತುಂಬಿ ಪ್ರಸವದ ದಿನ ಸಮೀಪವಾಗಲು ಹಬ್ಬೂರಿಗೆ ಬಂದರು. ದೈವೇಚ್ಛೆಯಂತೆ ಮಗು ಹುಟ್ಟಿತು. ಅದನ್ನು ಬಂಗಾರದ ತಟ್ಟೆಯಲ್ಲಿಟ್ಟು ಯತಿಗಳಿಗೆ ಒಪ್ಪಿಸಿದರು. ಯತಿಗಳು ಆ ಮಗುವನ್ನು ಕಣ್ವ ನದಿಯಲ್ಲಿ ತೊಳೆದು, ಪುರುಷೋತ್ತಮರ ಗುಹೆಯಲ್ಲಿ ಬ್ರಹ್ಮಣ್ಯತೀರ್ಥರು ಸಲಹುತ್ತಾ ಬಂದರು. ಗುಹೆಯಲ್ಲಿ ಜೇನು ಕಟ್ಟಿದ್ದು, ಮಗುವಿಗೆ ಹಸಿವಾಗಿ ಅಳುವಾಗ ಸ್ವಲ್ಪ ಸ್ವಲ್ಪ ಜೇನುತುಪ್ಪ ಬೀಳುತ್ತಿತ್ತು. ಅದೂ ಅಲ್ಲದೆ ಯತಿಗಳು ಪೂಜಾ ಕಾಲದಲ್ಲಿ ಸಾಲಿಗ್ರಾಮಕ್ಕೆ ಪೂಜೆ ಮಾಡಿದ ಹಾಲನ್ನು ಮಗುವಿಗೆ ಕುಡಿಸುತ್ತಲಿದ್ದರು. ಆ ನಂತರ ಮಗುವು ಬೆಳೆಯುತ್ತಾ ಬರಲು ಆ ಮಗುವಿಗೆ ವ್ಯಾಸರಾಜ ಎಂದು ನಾಮಕರಣ ಹಾಗೂ ಉಪನಯನವನ್ನು ಮಾಡಿ ತಮ್ಮ ಆಶ್ರಮಕ್ಕೆ ವ್ಯಾಸರಾಜರನ್ನು ಅಧಿಪತಿಯನ್ನಾಗಿ ಮಾಡಿ ಬ್ರಹ್ಮಣ್ಯತೀರ್ಥರು ದೇಶ ಸಂಚಾರಕ್ಕೆ ಹೊರಟರು.

ಇದಾದ ಎಷ್ಟೋ ವರ್ಷಗಳ ನಂತರ ತಿರುಪತಿ ಶ್ರೀನಿವಾಸ ದೇವರ ಪೂಜೆಗೆ ಯಾರೂ ಅರ್ಚಕರಿಲ್ಲದ ಕಾರಣ ವ್ಯಾಸರಾಜರು ತಿರುಪತಿ ಶ್ರೀನಿವಾಸದೇವರ ಪೂಜೆಯನ್ನು ಹನ್ನೆರಡು ವರ್ಷಗಳ ಕಾಲ ಮಾಡಿದರು. ಅದೇ ಸಮಯಕ್ಕೆ ವಿಜಯನಗರ ಸಾಮ್ರಾಜ್ಯದ ದೊರೆಯಾಗಿದ್ದ ಕೃಷ್ಣದೇವರಾಯನಿಗೆ ಕುಹಯೋಗ ಪ್ರಾಪ್ತವಾಯಿತು. ಆಗ ವ್ಯಾಸರಾಯರು ಆ ಕುಹಯೋಗವನ್ನು ಪರಿಹಾರ ಮಾಡಿದರು. ಇದರಿಂದ ಸಂತೃಪ್ತರಾದ ಕೃಷ್ಣದೇವರಾಯನು ವ್ಯಾಸರಾಜರನ್ನು ಕುರಿತು 'ನಿಮಗೆ ಎಷ್ಟು ಭೂಮಿ ಎಲ್ಲಿ ಬೇಕೋ, ಅಷ್ಟು ಭೂಮಿಯನ್ನು ಬರೆದಿಟ್ಟುಕೊಳ್ಳಿ ನಾನು ಅದಕ್ಕೆ ಸಹಿ ಹಾಕುತ್ತೇನೆ' ಎನ್ನಲು ವ್ಯಾಸರಾಜರು ತಮ್ಮ ಪ್ರಿಯ ಗುರುಗಳಿಗಾಗಿ ಪೂರ್ವಕ್ಕೆ ಹೊಸಹಳ್ಳಿ, ಪಶ್ಚಿಮಕ್ಕೆ ಲಾಲಾಘಟ್ಟದ ದೇವಸ್ಥಾನ, ಉತ್ತರಕ್ಕೆ ತಗಚಗೆರೆಯ ಆಂಜನೇಯಸ್ವಾಮಿ ದೇವಸ್ಥಾನ, ದಕ್ಷಿಣಕ್ಕೆ ನೀಲಸಂದ್ರದ ಭೈರವೇಶ್ವರಸ್ವಾಮಿ ದೇವಸ್ಥಾನ ಈ ವ್ಯಾಪ್ತಿಯು ಒಳಗೆ ಬರುವ ಭೂ ಪ್ರದೇಶವನ್ನು ಬರೆದಿಟ್ಟರು. ಆ ನಂತರ ಮಹಾರಾಜ ಕೃಷ್ಣದೇವರಾಯನು ಇದಕ್ಕೆ ಸಹಿ ಹಾಕಿದನು. ದೇಶ ಪರ್ಯಟನೆ ಮಾಡಿಕೊಂಡು ಬಂದ ಬ್ರಹ್ಮಣ್ಯತೀರ್ಥರು ತಮ್ಮ ಕೆಲವು ಶಿಷ್ಯರೊಂದಿಗೆ ಇಲ್ಲಿ ನೆಲೆಸಿದರು. ಅವರಿಗೆ ಅವಸಾನ ಕಾಲ ಸಮೀಪಿಸಿದ ಸಮಯದಲ್ಲಿ ಅವರು ಮತ್ತೆ ಅಬ್ಬೂರಿಗೆ ಮರಳಿ ಅಲ್ಲಿ ಗುಹೆಯೊಂದರಲ್ಲಿ ಐಕ್ಯರಾದರು. ಅನಂತರ ಅವರ ಶಿಷ್ಯರು ತಮ್ಮ ಸ್ಥಳಕ್ಕೆ ಬ್ರಹ್ಮಣ್ಯತೀರ್ಥವೆಂದು ಹೆಸರಿಟ್ಟುಕೊಂಡರು, ಅದು ಕಾಲ ಕ್ರಮದಲ್ಲಿ ಬ್ರಹ್ಮಣಪುರವಾಯಿತು.[೭೦] ಬ್ರಹ್ಮಣಪುರ>ಬ್ರಾಹ್ಮಣಪುರ> ಬ್ರಾಹ್ಮಣಿಪುರವೆಂದು ಜನರ ಬಾಯಲ್ಲಿ ಉಚ್ಚರಿಸಲ್ಪಡುತ್ತಿದೆ.

ಮಳೂರು (ಚ)

ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದ ದೊರೆಗಳಿಗೆ 'ಸಾರಂಗಧರ' ಎಂಬ ಮಗನಿದ್ದನು. ಸಾರಂಗಧರ ಚಿಕ್ಕ ವಯಸ್ಸಿನಲ್ಲಿದ್ದಾಗಲೇ ನತದೃಷ್ಟನಾದ ಆತ ತನ್ನ

ತಾಯಿಯನ್ನು ಕಳೆದುಕೊಂಡನು. ಆ ಕಾರಣದಿಂದ ಸಾರಂಗಧರನ ತಂದೆ; ಸ್ಫುರದ್ರೂಪಿಯೂ, ಸುಂದರಯುವತಿಯೂ ಆಗಿದ್ದ ಸಕಲ ರಾಜ ವಿದ್ಯೆಗಳನ್ನು ಕಲಿತು ಬಹು ಬಲಶಾಲಿಯೂ, ಅತುಳ ಪರಾಕ್ರಮಿಯೂ ಸುಂದರನೂ ಆಗಿದ್ದ ಸಾರಂಗಧರನು ಅರಮನೆಯಲ್ಲಿ ಎಲ್ಲರ ಕಣ್ಮಣಿಯಾಗಿದ್ದನು. ದೊರೆ ತನ್ನ ಇಳಿವಯಸ್ಸಿನಲ್ಲಿ ತುಂಬು ಯೌವನವತಿಯಾದ ಚಿತ್ರಾಗಂದೆಯನ್ನು ಮದುವೆಯಾಗಿದ್ದು; ಆತ ಆಕೆಗೆ ಸಂಪೂರ್ಣವಾಗಿ ದೈಹಿಕ ತೃಪ್ತಿಯನ್ನು ಕೊಡಲು ಅಶಕ್ತನಾಗಿದ್ದ. ಹಾಗಾಗಿ; ಕಾಮಾಂಧಳಾದ ಆಕೆ ತನ್ನ ಮಲಮಗನಾಗಿದ್ದ ಸಾರಂಗದೇವನನ್ನು ಮನಸ್ಸಿನಲ್ಲಿ ಪ್ರೀತಿಸತೊಡಗಿದಳು. ಬಹಳ ಪರಾಕ್ರಮಿಯೂ, ಸುಂದರ ಯುವಕನೂ ಆಗಿದ್ದ ಆತನನ್ನು ಏಕಾಂತದಲ್ಲಿ ಆರಾಧಿಸತೊಡಗಿದಳು. ಆತನನ್ನು ಏನಾದರೂ ಮಾಡಿ ಕೂಡಿಕೊಳ್ಳಬೇಕೆಂಬ ಆಸೆ ಆಕೆಯ ಮನದಲ್ಲಿ ಅಂಕುರಿಸಿ ಆತನನ್ನು ಕೂಡಿಕೊಳ್ಳುವ ನಿರ್ಧಾರಕ್ಕೆ ಬಂದಳು. ಕಡೆಗೆ ಆಕೆ ಸಾರಂಗಧರನನ್ನು ಹಲವು ಬಾರಿ ಏಕಾಂತದಲ್ಲಿ ಸಂಧಿಸಲು ಪ್ರಯತ್ನಿಸಿ ವಿಫಲಳಾದಳು.

ಒಮ್ಮೆ ದೊರೆ ಬೇಟೆಗೆ ಹೋಗಿದ್ದ ದಿನ; ಸಾರಂಗಧರ ಒಬ್ಬನೇ ಅರಮನೆಯಲ್ಲಿರುವುದನ್ನು ಗಮನಿಸಿ ಆತನನ್ನು ಏಕಾಂತದಲ್ಲಿ ಸಂಧಿಸುವಲ್ಲಿ ಯಶಸ್ವಿಯಾದಳು. ಮಗ ಎಂಬ ನಾಚಿಕೆಯನ್ನು ಬಿಟ್ಟು ಆಕೆ ಆತನಲ್ಲಿ ತನ್ನ ಮನದ ಬಯಕೆಯನ್ನು ತಿಳಿಸಿ; ತನ್ನನ್ನು ಪ್ರೀತಿಸಿ ತನ್ನ ಮನಸ್ಸಿನ ಆಸೆಯನ್ನು ಪೂರೈಸಿಕೊಡಬೇಕೆಂದು ಬೇಡಿಕೊಂಡಳು. ಯಾವುದಾದರೂ ಬೇರೆ ರಾಜ್ಯಕ್ಕೆ ಓಡಿಹೋಗುವ ತನ್ನ ಮನದ ಇಂಗಿತವನ್ನು ತಿಳಿಸಿದಳು. ಕನಸು ಮನಸ್ಸಿನಲ್ಲೂ ಈಕೆಯ ನೆನೆಸದ ಸಾರಂಗದೇವ ತನ್ನ ಮಲತಾಯಿಯ ನೀಚತನ ವರ್ತನೆಯನ್ನು ಕಂಡು ದಿಗ್ಭ್ರಾಂತನಾದನು. ತನ್ನ ಮಲತಾಯಿಗೆ ಬುದ್ಧಿವಾದ ಹೇಳಿ; ತಾಯಿ ಮತ್ತು ಮಗನ ಸಂಬಂಧವನ್ನು ಆಕೆಗೆ ಜ್ಞಾಪಿಸಿ, ಆಕೆಯ ಬೇಡಿಕೆಯನ್ನು ತಿರಸ್ಕರಿಸಿದನು. ಚಿತ್ರಾಂಗದೆ ಇಷ್ಟಕ್ಕೂ ಸುಮ್ಮನಾಗದೆ ಪರಿಪರಿಯಾಗಿ ಬೇಡಿಕೊಂಡಳು. ಆತ ಎಲ್ಲಾ ಸಾರಿಯೂ ಆಕೆಯನ್ನು ತಿರಸ್ಕರಿಸಿದಾಗ ಕೋಪದಿಂದ ಕೆಂಡಮಂಡಲವಾದ ಆಕೆ ಗಾಯಗೊಂಡ ಹುಲಿಯಂತಾಗಿ ನಿನಗೆ ಸರಿಯಾದ ಶಿಕ್ಷೆ ಮಾಡಿಸುವುದಾಗಿ ಹೇಳಿ ಆತನ ಕೋಣೆಯಿಂದ ಹೊರನಡೆದಳು.

ಆತನ ಬಗ್ಗೆ ಚಿತ್ರಾಂಗದೆಯ ಮನಸ್ಸಿನಲ್ಲಿ ವಿಪರೀತ ಕೋಪ ಮತ್ತು ದ್ವೇಷ ಹೊತ್ತಿ ಉರಿಯತೊಡಗಿತು. ರಾಜ ಬೇಟೆಯನ್ನು ಮುಗಿಸಿಕೊಂಡು ಬರುವ ಸಮಯಕ್ಕೆ ಆಕೆ ತನ್ನ ತಲೆಗೂದಲನ್ನು ಕೆದರಿಕೊಂಡು; ಮೈ ಕೈ ಪರಚಿಕೊಂಡು, ಆಯಾಸವಾಗಿ ಬಂದ ರಾಜ ವಿಕಾರ ರೂಪಗಳಾಗಿದ್ದ ಈಕೆಯನ್ನು ನೋಡಿ ಆತನಿಗೆ ಕೋಪ ನೆತ್ತಿಗೇರಿತು. ಏಕೆ ಗೋಳಿಡುತ್ತಿರುವುದು? ಏನಾಯಿತು? ಯಾರಿಂದ? ಎಂಬ ಹಲವು ಪ್ರಶ್ನೆಗಳನ್ನು ಆತ ಮಾಡಿದ. ಅಂತಹ ಸಂದರ್ಭದಲ್ಲಿ ಚಿತ್ರಾಂಗದೆ ನೀವು ಇಲ್ಲದ ಸಮಯ ನೋಡಿ ಸಾರಂಗಧರ ನನ್ನ ಶೀಲವನ್ನು ಕೆಡಿಸಲು ಬಂದ. ಆಗ ನಾನು ಅದಕ್ಕೆ ಒಪ್ಪದಿದ್ದಾಗ ನನ್ನ ಬಲತ್ಕರಿಸಿ ಈ ರೀತಿ ಮಾಡಿದ ಎಂದು ತನ್ನ ದೇಹವನ್ನು ಪ್ರದರ್ಶನ ಮಾಡಿದಳು. ಆತ ನನಗೆ ಅಪಮಾನ ಮಾಡಿದ್ದಾನೆ. ಆದ್ದರಿಂದ ಆತನ ಕೈಕಾಲು ಕಡಿಸಿಹಾಕಿದರೆ ಮಾತ್ರ ತಾನು ಅರಮನೆಯಲ್ಲಿ ಇರುವುದಾಗಿಯೂ: ಇಲ್ಲವಾದರೆ ದೇಶಾಂತರ ಹೋಗುವುದಾಗಿಯೂ ಬೇಡಿಕೆ ಹಾಕಿದಳು. ಕೋಪದ ಆವೇಶದಲ್ಲಿದ್ದ ರಾಜ ರಾಣಿಯ ಮಾತಿಗೆ

ಮರುಳಾಗಿ ಸ್ವಲ್ಪವೂ ವಿವೇಚಿಸದೆಯೇ ಮಂತ್ರಿಯನ್ನು ಕರೆದು ಸಾರಂಗಧರನ ಕೈಕಾಲು ಕಡಿಸಿಹಾಕಿ ಆತನ ದೇಹವನ್ನು ಎಸೆಯುವಂತೆ ಆಜ್ಞಾಪಿಸಿದ.

ರಾಜನ ಅಪ್ಪಣೆಯಂತೆ ಮಂತ್ರಿ ಇಬ್ಬರು ಸೈನಿಕರೊಡಗೂಡಿ ಸಾರಂಗದೇವನನ್ನು ಕರೆದುಕೊಂಡು ಪಕ್ಕದಲ್ಲಿದ್ದ ಅಬ್ಬೂರಿನ ಗುಡ್ಡಕ್ಕೆ ಹೋದರು. ಗುಡ್ಡದ ಮೇಲೆ ಸಾರಂಗಧರನ ಕೈಕಾಲನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ದೇಹವನ್ನು ಪಕ್ಕದಲ್ಲಿದ್ದ ಕಣ್ವ ನದಿಗೆ ಎಸೆದರು. ಅನಂತರ ಆತನ ದೇಹ ನದಿಯಲ್ಲಿ ತೇಲಿಕೊಂಡು ಬರುತ್ತಿರುವಾಗ ಒಂದು ಕಡೆ ಜ್ಯೋತಿಯೊಂದು ಆತನಿಗೆ ಕಂಡಿತು. ಆಗ ಆತ ಜ್ಯೋತಿಗೆ ಪ್ರಾರ್ಥನೆ ಮಾಡಿದಾಗ ಆತನಿಗೆ ಮತ್ತೆ ಕೈಕಾಲುಗಳು ಚಿಗುರಿದವು.

ಸಾರಂಗದೇವನಿಗೆ ಜ್ಯೋತಿ ಕಂಡ ಆ ಜಾಗದಲ್ಲಿ ಕೈಕಾಲು ಚಿಗುರಿದುದರಿಂದ (ಮೊಳತುದರಿಂದ) ಮೊಳತೂರು ಎಂಬ ಹೆಸರನ್ನು ಪಡೆಯಿತು. ಅನಂತರ ಕಾಲಕ್ರಮದಲ್ಲಿ 'ಮಳೂರು' ಎಂದಾಯಿತು.[೩೧]

೭.೨. ಪುರಾಣ ಮತ್ತು ಸ್ಥಳನಾಮಗಳು

ಪುರಾಣವು ಪ್ರಾಚೀನ ಅಥವಾ ಹಳೆಯ; ಬಹು ಹಿಂದೆ ನಡೆದಿರಬಹುದಾದ ವಿಶ್ವಸೃಷ್ಟಿಯ ಅನೇಕ ನಿಗೂಢಗಳನ್ನು ವಿವರಿಸುವ ಕಥೆಗಳಾಗಿರುತ್ತವೆ. 'ಪುರಾಣ' ಶಬ್ದವು ಗ್ರೀಕ್ ಭಾಷೆಯಲ್ಲಿ Mytho ಅಂದರೆ ಹೇಳಿದ ಸಂಗತಿ, ಕಥೆ ಎಂಬ ಅರ್ಥವಿದೆ. "ಹಿಂದೆ ನಡೆದವುಗಳೆಂದೇ ಹೇಳಲಾಗುವ ಅತಿಮಾನುಷ ವ್ಯಕ್ತಿಗಳ, ದೈವ-ದೇವರುಗಳ, ಸಾಂಸ್ಕೃತಿಕ ವೀರ ಪುರುಷರ ಸಾಹಸಮಹಿಮೆಪವಾಡಗಳನ್ನು ಪುರಾತನ ಸಂಪ್ರದಾಯ ಹಾಗೂ ಧಾರ್ಮಿಕ ನಂಬಿಕೆಗಳನ್ನು ವಿವರಿಸುವ ಕಥೆಗಳನ್ನು 'ಪುರಾಣ' (Myth) ಎಂದು ಕರೆಯಲಾಗುತ್ತದೆ."[೩೨] ಪುರಾಣವು ಸೃಷ್ಟಿಯ ಉಗಮಕ್ಕೆ ಸಂಬಂಧಿಸಿದ ಕತೆಯಂತೆಯೇ ಭೂಮಿಯ ಮೇಲಿನ ಪ್ರಾಣಿ, ಪಕ್ಷಿ, ಮರ ಗಿಡ, ಬೆಟ್ಟಗುಡ್ಡ, ಸರೋವರ, ಸಾಗರ ಮುಂತಾದವು ಹೇಗೆ ಸೃಷ್ಟಿಯಾದವು ಎಂಬುದನ್ನು ಪುರಾಣ ಕಥೆಗಳು ವಿವರಿಸುತ್ತವೆ. ಹೀಗೆ ವಿವರಿಸುವಾಗ ಸಾಮಾನ್ಯ ವಸ್ತುವಿಗೆ ಪಾವಿತ್ರ್ಯತೆ, ಮಹತ್ವ ಹಾಗೂ ಪ್ರಾಮುಖ್ಯತೆ ತಂದುಕೊಡುವುದು ಪುರಾಣದ ಉದ್ದೇಶವಾಗಿರುತ್ತದೆ. ಈ ಸಂದರ್ಭದಲ್ಲಿಯೇ ದೈವಿಕ ಪುರುಷನೋ, ಸಾಂಸ್ಕೃತಿಕ ವೀರರ, ದೇವರ ಪವಾಡ ಹಾಗೂ ಆದಿ ಮಾನವನ ಧಾರ್ಮಿಕ ನಂಬಿಕೆಗಳನ್ನು ಆ ವಸ್ತುವಿಗೆ ಆರೋಪಿಸಿ ಅದನ್ನು ಅಜರಾಮರಗೊಳಿಸುವುದು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ.

ಪುರಾಣ ಮತ್ತು ಐತಿಹ್ಯಗಳಿಗೆ ಹೊಕ್ಕುಳ ಬಳ್ಳಿಯ ಸಂಬಂಧವಿದೆ. "ಇತಿಹಾಸ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಪುರಾಣಕ್ಕೆ ಮೂಲ"[೩೩] ಪುರಾಣ; ಹಳೆಯದು, ಪ್ರಾಚೀನ ವೃತ್ತಾಂತ ಎಂಬ ಕಲ್ಪನೆಯಿದೆ. ಹಿಂದಿನಿಂದ ಪರಂಪರಾಗತವಾಗಿ ಬಾಯಿಂದ ಬಾಯಿಗೆ ಬಂದದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕೌಟಿಲ್ಯ; ಪುರಾಣಗಳನ್ನು ಇತಿಹಾಸದಲ್ಲಿ ಸೇರಿಸಿದ್ದಾನೆ. ಸರ್ಗ ಪ್ರತಿಸರ್ಗ, ದೇವರಾಕ್ಷಸ, ವಂಶವರ್ಣನೆ, ಮನ್ವಂತರ, ರಾಜಾಧಿರಾಜರ ವಂಶಾನುಚರಿತ ಇವು ಪುರಾಣ ಲಕ್ಷಣಗಳೆಂದು ಅಮರಕೋಶ ತಿಳಿಸುತ್ತದೆ. "ಐತಿಹಾಸಿಕ ಘಟನೆಯೊಂದು ಕಂಠಸ್ಥ ಪರಂಪರೆಯೊಂದರಲ್ಲಿ ಮೊದಲು 'ಕಿವಿಮಾತು' ಆಗಿ,

ಬಳಿಕ 'ವದಂತಿ'ಯಾಗಿ ಅನಂತರ ಐತಿಹ್ಯವಾಗಿ ಕೊನೆಗೆ ಒಂದು 'ಪುರಾಣ' ಆಗಿ ಪರಿವರ್ತನೆಗೊಳ್ಳುತ್ತದೆ"[೩೪] ಹೀಗೆ ಇತಿಹಾಸಐತಿಹ್ಯಕ್ಕೆ ಆಧಾರವಾಗಿ ಕಾಲಾನಂತರದಲ್ಲಿ ಐತಿಹ್ಯವೇ ಪುರಾಣವಾಗಿ ರೂಪಾಂತರವಾಗುತ್ತವೆ ಎಂಬ ವಿವೇಕ ರೈಯವರ ವಿಚಾರ ಒಪ್ಪುವಂಥದ್ದು.

"ಸ್ಥಳಪುರಾಣ ಇಲ್ಲವೇ ಸ್ಥಳ ಮಹಾತ್ಮೆಗಳೆಂದರೆ ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಪಟ್ಟ ಪುರಾಣ"[೩೫] ವಾಗಿರುತ್ತದೆ. ಸ್ಥಳಪುರಾಣಗಳು ದೇವಾಲಯದ ಇಲ್ಲವೇ, ಪೌರಾಣಿಕ ಪುರುಷನೋ ಆ ಪುಣ್ಯ ಕ್ಷೇತ್ರಕ್ಕೆ ಕಾರಣೀಭೂತನಾದ ಪುಣ್ಯಪುರುಷನ ಪವಾಡ ಮೆರೆದಿರುವುದರ ಕಥಾ ರೂಪವಾಗಿರುತ್ತದೆ. ಸ್ಥಳನಾಮಕರಣಕ್ಕೆ ಕಾರಣವಾದ ದೇವಾಲಯ ಅಥವಾ ಸ್ಥಳದ ಹಿನ್ನೆಲೆ ಮಹಿಮೆಗಳು ಹಾಗೂ ಅಲ್ಲಿನ ದೇವರ ಪವಾಡ ಚರಿತ್ರೆಯನ್ನು ಹೊಂದಿರುತ್ತದೆ. ಆ ಕ್ಷೇತ್ರದ ವೈಶಿಷ್ಟ್ಯ, ಹಿರಿಮೆಗರಿಮೆಯನ್ನು ಪ್ರತಿಪಾದಿಸುವಲ್ಲಿ ತನ್ನ ಸುತ್ತಲೂ ನಿರೂಪಕರನ್ನು ಹೊಂದಿರುವುದನ್ನು ಕಾಣಬಹುದು. ಕೆಲವೊಂದು ಸಂದರ್ಭದಲ್ಲಿ ಸ್ಥಳಕ್ಕೆ ಹೆಸರು ಬಂದುದರ ಕಾರ್ಯಕಾರಣ ಸಂಬಂಧದ ಕತೆಯೂ ಅಲ್ಲಿ ಇರುವುದನ್ನು ಕಾಣಬಹುದು. ಈ ಎಲ್ಲ ಅಂಶಗಳೂ ಕೂಡ ಒಂದು ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಪಟ್ಟದುದಾಗಿದ್ದು, ಆ ಸ್ಥಳದ ಅಪೂರ್ವತೆ ಮತ್ತೆಲ್ಲೂ ಇಲ್ಲವೆಂಬಂತೆ ವೈಭವೀಕರಿಸಿ ಹೇಳುವ ಪ್ರವೃತ್ತಿಯೂ ಕಂಡುಬರುತ್ತದೆ. "ಎಷ್ಟೋ ದೇವಾಲಯ ಕ್ಷೇತ್ರಗಳಿಗೆ ಸಂಬಂಧಪಟ್ಟ ಸ್ಥಳ ಪುರಾಣಗಳಲ್ಲಿ ಆ ಸ್ಥಳಗಳಿಗೆ ಆಯಾ ಹೆಸರು ಪ್ರಾಪ್ತವಾದುದರ ವಿವರಣೆಯೂ ಇದೆ. ಅಂತಹ ಐತಿಹ್ಯ (ಸ್ಥಳಪುರಾಣ)ಗಳಲ್ಲಿ ವ್ಯಕ್ತಿಗಳಿಗೂ ಪ್ರಾಧಾನ್ಯವಿದೆ. ಅದರಿಂದಾಗಿಯೇ ಹೆಚ್ಚಿನ ಕ್ಷೇತ್ರಗಳಿಗೆ ಹೆಸರು ಪ್ರಾಪ್ತವಾಗಿದೆ. ಇಲ್ಲಿ ನಂಬಲಾರ್ಹವಾದ ಅಸಂಭಾವ್ಯವೆನಿಸುವ ಪವಾಡಾದಿ ಘಟನೆಗಳಿರುವುದರಿಂದ ಇವು ಸ್ಥಳಕ್ಕೆ ಸಂಬಂಧಪಟ್ಟ ಐತಿಹ್ಯಗಳಾಗುಳಿಯದೆ ಪುರಾಣಗಳಾಗಿ ಬಿಡುತ್ತವೆ. ಆದುದರಿಂದ ಇಂಥವನ್ನು ಸ್ಥಳಪುರಾಣಗಳೆನ್ನುತ್ತಾರೆ".[೩೬] ಸ್ಥಳಪುರಾಣಕ್ಕೂ ಅಲ್ಲಿ ನಡೆದಿರಬಹುದಾದ ಘಟನೆಯ ಸತ್ಯಾಸತ್ಯತೆಗಿಂತಲೂ ಜನಪದರ ನಂಬಿಕೆಯೇ ಪ್ರಮುಖವಾಗಿ ಬೇರೂರಿಸುವುದರಿಂದ ಅದರ ವೈಜ್ಞಾನಿಕ ಪರಾಮರ್ಶೆಗೆ ಜನರು ತಮ್ಮ ಒಲವನ್ನು ತೋರಿಸುವುದಿಲ್ಲ ಎಂಬುದು ಮಾತ್ರ ಸ್ಪಷ್ಟ. ಇದಕ್ಕೆ "ತನ್ನೂರಿಗೆ ಪಾಂಡವರಂತಹ ಮಹಾನುಭಾವರು ಬಂದಿದ್ದರೆನ್ನುವುದರಲ್ಲಿ ನಮ್ಮ ಹಳ್ಳಿಯ ಮುಗ್ಧ ಜನರಿಗೆ ಒಂದು ಬಗೆಯ ಅಭಿಮಾನ ಹೆಮ್ಮೆಯಿದೆ"[೩೭] ಸಂಸ್ಕೃತಿಯ ಆರಾಧಕರಾದ ಹಾಗೂ ಆಸ್ತಿಕ ಮನೋಭಾವವನ್ನು ಉಳ್ಳ ನಮ್ಮ ಜನಪದರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಪುರಾಣಗಳನ್ನು ಸಂಪೂರ್ಣವಾಗಿ ಕಟ್ಟುಕಥೆಗಳೆಂದು ತಿರಸ್ಕರಿಸಲಾಗದು. "ಸ್ಥಳ ಪುರಾಣಗಳು ಎಷ್ಟೋ ಸಂದರ್ಭಗಳಲ್ಲಿ ಈ ನಾಡಿನ ಪೂರ್ವಸಂಸ್ಕೃತಿ, ನಡವಳಿಕೆ, ಆಚಾರವಿಚಾರಗಳ ಬಗೆಗೆ ಬೆಳಕು ಚೆಲ್ಲುತ್ತದೆಂಬುವ ಅಂಶವನ್ನು ನಾವು ಅಲ್ಲಗಳೆಯುವಂತಿಲ್ಲ"[೩೮] ವಾಸ್ತವಿಕವಾಗಿ ನಡೆದ ಘಟನೆಗಳನ್ನು ಆವರಿಸಿಕೊಂಡಿರುವ ಅದ್ಭುತ ಕಲ್ಪನೆಗಳನ್ನು ಬಿಡಿಸಿ ನೋಡಿದಾಗ ಮಾನವನ ಪೂರ್ವದ ಇತಿಹಾಸ; ಅವನ ಪೂರ್ವ ವಿಜ್ಞಾನ, ಅವನ ಸಂಸ್ಕೃತಿಯ ಸ್ವರೂಪದ ಎಳೆಗಳು ಗೋಚರವಾಗುತ್ತವೆ. ಮಾನವ ವಿಕಾಸದ ಪ್ರಾರಂಭದ ಚರಿತ್ರೆಯೇ ಪುರಾಣ ಎಂಬ ಆಂಡ್ರೂಲಾಂಗನ ಅಭಿಪ್ರಾಯ ಅತ್ಯಮೂಲ್ಯವಾದದ್ದು.

ಪುರಾಣದ ಅಧ್ಯಯನದಿಂದ; ಅನೇಕ ಭೌಗೋಳಿಕ ಪ್ರಾಕೃತಿಕ ವಿದ್ಯಮಾನಗಳ ಬಗ್ಗೆ ಮಾನವನ ಪೂರ್ವೇತಿಹಾಸ ಹಾಗೂ ಸಂಸ್ಕೃತಿಯ ವಿಕಾಸ ಬಗ್ಗೆ ಅಪೂರ್ವವಾದ ಮಾಹಿತಿಯ ಕಣಜವಾಗಿ ಪರಿಣಮಿಸುತ್ತವೆ. ಆದ್ದರಿಂದ ರಾಮನಗರ ಜಿಲ್ಲೆಯ ಸ್ಥಳನಾಮಗಳಲ್ಲಿ ರಾಮಾಯಣ, ಮಹಾಭಾರತ ಹಾಗೂ ಇನ್ನಿತರ ಸಾಧು ಸಂತರ, ಋಷಿವರ್ಯರ, ದೈವವಾಚಿಯಾದ ನಾಮಗಳಿದ್ದು ಇವುಗಳು ಸ್ಥಳಪುರಾಣಗಳಿಗೆ ಪ್ರೇರಣೆಯಾಗಿ ಇವು ಸ್ಥಳನಾಮಗಳಿಗೆ ಪೂರಕವಾಗಿರುವುದನ್ನು ಕಾಣಬಹುದು.

ಕೂಟಗಲ್ಲು (ರಾ)

ಕೂಟಗಲ್ಲು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಕೂಟಗಲ್ಲು ತಿಮ್ಮಪ್ಪನ ಬೆಟ್ಟದಲ್ಲಿರುವ ಜೋಡಿಗಲ್ಲಿನಿಂದ ಈ ಊರಿಗೆ 'ಕೂಟಗಲ್ಲು' ಎಂಬ ಹೆಸರು ಬಂದಿರುವಂತಿದೆ. ಆದರೂ ಇದಕ್ಕೊಂದು ಐತಿಹ್ಯವಿದೆ.

'ತಿಮ್ಮಪ್ಪನು ಕಣ್ವ ಮಹರ್ಷಿಗಳ ಆರಾಧ್ಯ ದೈವನಾಗಿದ್ದು; ತಾವು ಬೇರೆ ಬೇರೆ ಪ್ರದೇಶಗಳಿಗೆ ಪ್ರಯಾಣ ಬೆಳೆಸುವಾಗ ತಮ್ಮ ಜೋಳಿಗೆಯ ಒಳಗೆ ಈ ಮೂರ್ತಿಯನ್ನು ಇಟ್ಟುಕೊಂಡು ಹೋಗುತ್ತಿದ್ದರು. ಒಂದು ದಿನ ಈ ಕೂಟಗಲ್ ಬೆಟ್ಟದಲ್ಲಿ ಸೂರ್ಯೋದಯಕ್ಕೆ ಮುಂಚೆ ಪೂಜೆ ಪುನಸ್ಕಾರ ಮುಗಿಸಿ ಹೊರಡುವಾಗ ದೇವರಿಗೆ ಪ್ರಾಣ ಪ್ರತಿಷ್ಠಾಪನೆ ಕೊಟ್ಟು; ತಿಮ್ಮಪ್ಪ ದೇವರೊಂದಿಗೆ ಕಣ್ವ ಋಷಿಗಳು ಮಾತನಾಡುವಾಗ ಆ ದಿನ ಯಾರೋ ನರಮನುಷ್ಯರು ಅಲ್ಲಿ ಬಂದು ಇವರು ಮಾತನಾಡುವುದನ್ನು ನೋಡಿದರಂತೆ. ಆಗ ದೇವರು ನರಮನುಷ್ಯರು ನನ್ನನ್ನು ನೋಡಿದ್ದಾರೆ. ಇಲ್ಲಿಯೇ ನನ್ನನ್ನು ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡು ಎಂದರಂತೆ. ಕಣ್ವ ಋಷಿಗಳು ದೇವರನ್ನು ಪ್ರತಿಷ್ಠಾಪಿಸಲು ಗಂಗೋದಕ ಬೇಕೆಂದು ಕೇಳಿದಾಗ ಪ್ರತಿಷ್ಠಾಪನೆ ಮಾಡುವ ಜಾಗದಲ್ಲಿ, ಪಾದದಿಂದ ನೀರು ಬಂದಿತ್ತಂತೆ. ಆ ನೀರಿನಿಂದ ಪ್ರತಿಷ್ಠಾಪನೆ ಮಾಡಿದರು. ಈಗಲೂ ದೇವರ ಪಾದದಿಂದ ನೀರು ಜಿನುಗುತ್ತದೆ. ಈ ನೀರು ದೇವಸ್ಥಾನದ ಬಲಭಾಗದ ಕಲ್ಲಾಣಿಗೆ ಸೇರುತ್ತದೆ.

ಹೀಗೆ ಕಣ್ವ ಋಷಿಗಳು ತಿಮ್ಮಪ್ಪನನ್ನು ಪ್ರತಿಷ್ಠಾಪಿಸಿ; ಪೂಜಿಸುತ್ತಿರುವಾಗ ವಾಯುವ್ಯ ಮೂಲೆಯಿಂದ ಅಗಸ ಮತ್ತು ಅವನ ಹೆಂಡತಿ ಇಬ್ಬರೂ ತಲೆಯ ಮೇಲೆ ಗಂಟುಮೂಟೆ ಕಟ್ಟಿಕೊಂಡು ಕೈಯಲ್ಲಿ ಒಂದು ಕೋಳಿಯನ್ನು ಕದ್ದುಕೊಂಡು, ದನಕರುಗಳನ್ನು ಹಿಡಿದುಕೊಂಡು; ಬಂದು ಕಣ್ವರನ್ನು ನೋಡಿದರಂತೆ. ಇದರಿಂದ ಕೋಪಗೊಂಡ ಋಷಿಗಳು ಇವರಿಗೆ ಕಲ್ಲಾಗುವಂತೆ ಶಾಪಕೊಟ್ಟರು. ಆಗ ಅಗಸರು ತಮ್ಮ ತಲೆಯ ಮೇಲೆ ಗಂಟುಮೂಟೆ ಹೊತ್ತು ಹಾಗೆಯೇ ಕಲ್ಲಾದರು. ಅವರ ಕೈಯಲ್ಲಿದ್ದ ಕೋಳಿ ಕೆಳಗೆ ಬಿದ್ದು ಅದು ಕಲ್ಲಾಯಿತಂತೆ. ಅದಕ್ಕೆ 'ಕೋಳಿ ಕಲ್ಲು' ಎಂದು ಕರೆಯುತ್ತಾರೆ. ಅವರು ಹೊಡೆದುಕೊಂಡು ಬರುತ್ತಿದ್ದ ದನಕರುಗಳು ಕಲ್ಲಾದವಂತೆ. "ಕಲ್ಲು ಕೋಳಿ ಕೂಗಿದಾಗ, ಗಳಗಲ್ಲು ಸಿಡಿದಾಗ, ಕಲ್ಲಿನ ಬಸವ ಎದ್ದು ಗೊಟರುಕೆ ಹಾಕಿದಾಗ ಪ್ರಪಂಚ ಪ್ರಳಯವಾಗುತ್ತದೆ ಎಂಬ ನಂಬಿಕೆ ಪ್ರಚಲಿತವಾಗಿದೆ"'. ಹೀಗೆ ಬೆಟ್ಟದಲ್ಲಿ ಕೋಳಿಕಲ್ಲು, ಗಳಗಲ್ಲು, ಕೊಡಗಲ್ಲು, ಕ್ಯಾತನಕಲ್ಲು, ಅಗಸನ ಕಲ್ಲು ಎಂದು ಕರೆಯುವ ಕಲ್ಲು ಗುಂಡುಗಳ ಸಮೂಹವೇ ಇರುವುದರಿಂದ ಇದಕ್ಕೆ ಕೂಟಗಲ್ಲು ಎಂದು ಕರೆಯಲಾಗಿದೆ.

ಇದು ಭೌಗೋಳಿಕ ವೈಶಿಷ್ಟ್ಯತೆಯಿಂದ ಕೂಡಿರುವ ಕಲ್ಲು ಬಂಡೆಗಳ ಪ್ರದೇಶವಾದ್ದರಿಂದ ನಿಸರ್ಗವಾಚಿಯಾದ ಸ್ಥಳನಾಮವಾಗಬೇಕಾಗಿದ್ದ ಈ ಊರಿಗೆ ಪ್ರತಿಯೊಂದು ಕಲ್ಲು ಗುಂಡುಗಳಿಗೂ ಒಂದೊಂದು ಐತಿಹ್ಯವನ್ನು ನೀಡಿ 'ಕೂಟಗಲ್ಲು' ಎಂಬ ಹೆಸರು ಪಡೆದಿದೆ.

ಕೂತಗೊಂಡನಹಳ್ಳಿ (ಕ)

ಶಕ್ತಿದೇವತೆ ಎನಿಸಿರುವ ಗಿರಿಜೆ ಭಕ್ತರನ್ನು ಕಾಪಾಡಲು, ರಕ್ಕಸರನ್ನು ಸದೆಬಡಿಯಲು ಹಲವಾರು ರೂಪಗಳನ್ನು ಎತ್ತಿ ಬಂದಿದ್ದಾಳೆ. ಮೂಡಲನಾಡ ದೇಶವನ್ನು ಕೊಂಗನಾಡೆಂದು ಕರೆಯುವರು. ಅಲ್ಲಿ ಕೈಲಾಸಗಿರಿ ಎಂಬ ಪಟ್ಟಣ. ಆ ಪಟ್ಟಣದಲ್ಲಿ ಶಿವನಾಂಕಾರ ರಾಯನೆಂಬ ದೊರೆ. ಮಹಾದೇವಿಯೇ ಆತನ ಪತ್ನಿ; ಮಹಾಮುನಿ ನಾರದರೇ ಮಹಾಮಂತ್ರಿ.

ಬಹುಕಾಲ ಕಳೆದರೂ ಮಕ್ಕಳಾಗದೆ ಪತಿ-ಪತ್ನಿಯರು ಚಿಂತಾಕ್ರಾಂತರಾಗಿ ಕಾಲಕಳೆಯುತ್ತಿದ್ದರು. ಓಂಕಾರ ರೂಪಿ ಶಿವನು ಶಿವನಾಂಕಾರ ರಾಯನ ಕನಸಿನಲ್ಲಿ ಪ್ರತ್ಯಕ್ಷನಾಗಿ ಅನುರೂಪವಾದ ಮಕ್ಕಳನ್ನು ಪಡೆಯುವಿರಿ ಎಂದು ಮಾಯವಾದ. ಮಹಾದೇವಿ ಗರ್ಭವತಿಯಾಗಿ ಗಂಡು ಮಗುವನ್ನು ಪಡೆದಳು. ಆ ಮಗುವಿಗೆ ಮುತ್ತುರಾಯನೆಂದು ಹೆಸರಿನ್ನಿಟ್ಟರು. ಹೀಗೆ ಇರುವಾಗ ಕಾಲಾಂತರದಲ್ಲಿ ಮಹಾದೇವಿ ಮತ್ತೊಂದು ಹೆಣ್ಣುಮಗುವಿಗೆ ಜನ್ಮವಿತ್ತಳು. ಆ ಹೆಣ್ಣು ಶಿಶುವಿಗೆ ಭಾಗೀರತಿ ಎಂದು ನಾಮಕರಣ ಮಾಡಿದರು. ನಂತರ ಹುಟ್ಟಿದ ಮತ್ತೊಂದು ಹೆಣ್ಣುಮಗುವೇ ಚಿಕ್ಕಮ್ಮತಾಯಿ. ಕಾಲ ಉರುಳಿತ್ತು. ಭಾಗೀರತಿ, ಚಿಕ್ಕಮ್ಮತಾಯಿ ಎಂಬ ಆ ಹೆಣ್ಣುಮಕ್ಕಳು ಶಿವನ ಧ್ಯಾನದಲ್ಲಿ ಕಾಲಾಯಾಪನೆ ಮಾಡುತ್ತಿದ್ದರು. ಹತ್ತು-ಹನ್ನೆರಡು ವರ್ಷಗಳು ಹೀಗೆಯೇ ಕಳೆದವು.

ದಕ್ಷಿಣ ನಾಡಿನ ಮುಡುಕುತೊರೆ ಮಲ್ಲರಾಯ, ತಲಕಾಡು ಪಂಚಲಿಂಗಯ್ಯ ಎಂಬ ಅಣ್ಣತಮ್ಮಂದಿರಲ್ಲಿ ಮಲ್ಲಯ್ಯನಿಗೆ ಮದುವೆಯಾಗಿದೆ. ತಮ್ಮನಾದ ಪಂಚಲಿಂಗಯ್ಯನಿಗೆ ಇನ್ನೂ ಮದುವೆಯಾಗಿರಲಿಲ್ಲ. ಮಂತ್ರಿ ಸಿದ್ಧರಾಮನನ್ನು ಕರೆದು ಪಂಚಲಿಂಗಯ್ಯನಿಗೊಂದು ಹೆಣ್ಣು ನೋಡಬೇಕು; ನೀನು ಹೊರಡಲು ಸಿದ್ಧನಾಗು ಎಂದು ಹೇಳುತ್ತಾರೆ. ಸಿದ್ಧರಾಮನು ಆನಂದದಿಂದ ಕಾವೇರಿ ನದಿಗೆ ಹೋಗಿ ಸ್ನಾನಮಾಡಿ ಹೊರಡಲು ಅನುವಾದ.

ಇಬ್ಬರೂ ಹುಲಿಯನ್ನೇರಿ ದೇಶ-ದೇಶವನ್ನೆಲ್ಲಾ ಸುತ್ತಿ ಕೊನೆಗೆ ಕೊಂಗನಾಡು ದೇಶದ ಕೈಲಾಸಗಿರಿ ಪಟ್ಟಣಕ್ಕೆ ಬರುತ್ತಾರೆ. ಗುರುಮಠಕ್ಕೆ ಹೋಗಿ ನೋಡುವಾಗ ಪಂಚಲಿಂಗಯ್ಯನ ಕಣ್ಣಿಗೆ ಭಾಗೀರತಿ, ಗೋಚರಿಸುತ್ತಾಳೆ. ಅವಳ ಮೇಲೆ ಪಂಚಲಿಂಗಯ್ಯನಿಗೆ ಮನಸ್ಸಾಗುತ್ತದೆ. ಶಿವನಾಂಕಾರರಾಯ, ಮಲ್ಲರಾಯ, ಮುತ್ತುರಾಯ ಎಲ್ಲರೂ ಸೇರಿ ಮದುವೆ ಮಾತುಕತೆ ಮುಗಿಸುತ್ತಾರೆ. ಮತ್ತೆ ತನ್ನ ನಾಡಿಗೆ ಹೋಗಿ ಬೇಕಾದವರಿಗೆಲ್ಲ ವಿಷಯ ತಿಳಿಸಿ ಆಕಾಶ ಚಪ್ಪರಮಾಡಿ, ಭೂಲೋಕವನ್ನೇ ಹಸೆಮಾಡಿಕೊಂಡು ಮದುವೆಯಾಗಿ ಮಡದಿಯನ್ನು ತವರಿನಲ್ಲಿಯೇ ಬಿಟ್ಟು ಹುಲಿಯೇರಿ ದಕ್ಷಿಣದ ತಲಕಾಡಿಗೆ ಹಿಂದಿರುಗುತ್ತಾನೆ. ಮದುವೆಯಾಗಿ ಮೂರ್ನಾಲ್ಕು ತಿಂಗಳಾದವು. ಪತ್ನಿಯನ್ನು ಕರೆತರಲೆಂದು ಪಂಚಲಿಂಗಯ್ಯ ಮತ್ತೆ ಹುಲಿಯೇರಿ ಬರುತ್ತಾನೆ.

ಕೊಂಗನಾಡು ದೇಶದ ಕೈಲಾಸಗಿರಿ ಪಟ್ಟಣಕ್ಕೆ ಬಂದ ಪಂಚಲಿಂಗಯ್ಯ ತನ್ನ ಪತ್ನಿ ಭಾಗೀರತಿಯೊಡನೆ ಸುಖದಿಂದ ಇರುವಾಗ ಹತ್ತು-ಹನ್ನೆರಡು ವರ್ಷಗಳೇ ಕಳೆದು ಹೋಗುತ್ತದೆ, ಹೀಗಿರುವಾಗ ಭಾಗೀರತಿ; 'ಸ್ವಾಮಿ ನಮ್ಮ ಮದುವೆಯಾಗಿ ಇಷ್ಟು ವರ್ಷಗಳಾದರೂ ನಮಗೆ ಮಕ್ಕಳ ಭಾಗ್ಯವೇ ಇಲ್ಲವಲ್ಲ' ಎನ್ನುತ್ತಾಳೆ. ಹೀಗೆ ಮಾತನಾಡಿಕೊಂಡು ಮಲಗಿರುವಾಗ ಪರಮೇಶ್ವರರು ಕನಸಿನಲ್ಲಿ ಕಾಣಿಸಿಕೊಂಡು ಅವರಿಗೆ ಮಕ್ಕಳ ಭಾಗ್ಯವನ್ನು ಕರುಣಿಸುತ್ತಾನೆ. ನಿಮಗೆ ಮಕ್ಕಳ ಫಲವುಂಟು. ಅನುರೂಪರಾದ ಮಕ್ಕಳನ್ನು ಪಡೆಯುತ್ತೀರಿ, ನೀವು ಹತ್ತು ಹಳ್ಳಿಗಳಿಗೇ ದೇವರ ಪೂಜಾರರಾಗುವಿರಿ ಎಂದು ಹೇಳಿ ಮಾಯವಾದ. ತಾನು ಕಂಡದ್ದನ್ನು ಪಂಚಲಿಂಗಯ್ಯನಿಗೆ ಭಾಗೀರತಿ ಹೇಳುತ್ತಾಳೆ.

ಕಾಲ ಕಳೆದಿತ್ತು, ಭಾಗೀರತಿಗೆ ಮುಟ್ಟುನಿಂತು ಗರ್ಭವತಿಯಾಗಿ ನಾಲ್ಕು-ಐದು ತಿಂಗಳುಗಳುರುಳಿದವು. ಆ ಸಂದರ್ಭದಲ್ಲಿ ಪಂಚಲಿಂಗಯ್ಯನು ತನ್ನ ನಾಡಿಗೆ ಹೊರಡಬೇಕೆಂದು ಭಾಗೀರತಿಯೊಡನೆ ಹುಲಿಯೇರಿ ದೇಶ-ದೇಶಗಳನ್ನು ನೋಡಿಕೊಂಡು, ಬೆಟ್ಟ, ಪರ್ವತ, ಶಿಖರದ ಸಾಲುಗಳನ್ನು ನೋಡಿಕೊಂಡು ಬರುವಾಗ ಅಡ್ಡ ಸಿಕ್ಕಿದ ಬೆಟ್ಟ (ಇಂದಿನ ಬಾವುಟ ಅಥವಾ ದೇವರಬೆಟ್ಟ)ವನ್ನು ಕಂಡು ಆಕರ್ಷಿತಳಾಗಿ ಅಲ್ಲಿನ ರಮಣೀಯ ಸೌಂದರ್ಯ, ಮಲೆನಾಡಿನ ವಾತಾವರಣವನ್ನು ಕಂಡು ಮನಸೋತು ಈ ಭಾಗವನ್ನು ನಾನು ಮನದಣಿಯ ನೋಡಬೇಕೆಂದು ಭಿನ್ನವಿಸಿಕೊಳ್ಳುತ್ತಾಳೆ. ಹೊಲೆರಾವಣನ ಹಾವಳಿಯಿರುವುದು ಪಂಚಲಿಂಗಯ್ಯನಿಗೆ ತಿಳಿದಿದ್ದರೂ ಬಸುರೀ ಬಯಕೆಯನ್ನು ತೀರಿಸಬೇಕೆಂದು ಒಪ್ಪಿ; ಬೆಟ್ಟದ ನೆತ್ತಿಯ ಸರ್ಪದ ಹೆಡೆಯ ಹಾಗಿರುವ ಸ್ಥಳದಲ್ಲಿ ಇಳಿಯುತ್ತಾರೆ. ಬೆಟ್ಟದ ತಪ್ಪಲಿನ ಸುತ್ತ ಸುಳಿದು ನೋಡುವಾಗ ಅಲ್ಲಿನ ಗುಹೆಗಳಲ್ಲಿ ಗವಿಸಿದ್ದರು. ಜಡೆಮುನಿಗಳು, ರಣೌಗ್ರಹಿಗಳು, ಮರಗಳ ಕೆಳಗೆ ಮುನೀಶ್ವರರು, ಕೆಲದಲ್ಲಿ ರಸಾಸಿದ್ದರು ತಪೋನಿರತರಾಗಿರುತ್ತಾರೆ. ಇದನ್ನು ಕಂಡ ಭಾಗೀರತಿ ಆಹಾ... ಇದೆಂಥಾ ಪುಣ್ಯಭೂಮಿ, ಇಲ್ಲಿ ಮುಂದೆ ಆ ಬೆಟ್ಟದ ಎದುರಿಗೆ ಒಳ್ಳೆಯ ಗುರುಮಠವಾಗುತ್ತದೆ. (ಈಗಿನ ದೇಗುಲಮಠ) ದೇವಾನುದೇವತೆಗಳ ವಾಸಸ್ಥಾನವಾಗುತ್ತದೆ. 'ನಾವೂ ಈ ಬೆಟ್ಟದಲ್ಲಿಯೇ ನೆಲೆಸಿ ಆನಂದದಿಂದ ಕಾಲಕಳೆಯುವ' ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಳ್ಳುತ್ತಾಳೆ.

ಆನಂದದಿಂದ ಕಾಲಕಳೆಯುವಾಗ; ಎಂಟು ತಿಂಗಳ ಬಸುರಿಯಾಗಿರುತ್ತಾಳೆ. ಬಾಣಂತನಕ್ಕೆ ಬೇಕಾದ ಪದಾರ್ಥಗಳನ್ನು ಸಿದ್ಧಮಾಡಿಟ್ಟು, ಭಾಗೀರತಿ ಬಹುದಿನಗಳಾಯ್ತು. ಅಣ್ಣ: ಮಲ್ಲರಾಯನನ್ನು ನೋಡಿ ಬರುತ್ತೇನೆ' ಎಂದು ಸುಟ್ಟಶುಕ್ರವಾರದ ದಿನ ಪಂಚಲಿಂಗಯ್ಯ ಹೀಗೆ ಕಾಲ ಕಳೆಯುವಾಗ ಒಂಭತ್ತು ತಿಂಗಳು ತುಂಬಿದ ಭಾಗೀರತಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸೂಲಗಿತ್ತಿ ಮಡಿವಾಳಮ್ಮರ ಸಹಾಯದಿಂದ ಸುಖಪ್ರಸವವಾಗಿ ಅವಳಿ ಗಂಡುಶಿಶುಗಳಿಗೆ ಜನ್ಮ ನೀಡುತ್ತಾಳೆ. ಒಮ್ಮೆ ಹಸಿ ಬಾಣಂತಿ ಸ್ನಾನ ಮಾಡಿ ಎಳೆಬಿಸಿಲಿನಲ್ಲಿ ತಲೆ ಒಣಗಿಸಿಕೊಳ್ಳಲು ಸರ್ಪದ ಕಲ್ಲಿನ ಬದಿಗೆ ಬಂದು ಮಂಡೆಯನ್ನು ಒದರುತ್ತಿರುತ್ತಾಳೆ. ಕೆಳಗಡೆಯಿದ್ದ ಹೊಲೆರಾವಳ ಅಂತರಿಸಿ ನೋಡಿ ಆಹಾ! ಈ ಬೆಟ್ಟದಲ್ಲಿ ಯಾವ ನರಪ್ರಾಣಿಯೂ ಇರಲಿಲ್ಲ. ಸುಂದರಿಯೊಬ್ಬಳು ತನ್ನ ಬಂಗಾರದ ಕೂದಲಿನ ಮಂಡೆಯನ್ನು ಒದರುತ್ತಿದ್ದಾಳೆ. ಆಕೆಯಾರಿರಬಹುದು?

ಆಕೆಯನ್ನು ನನ್ನ ವಶಮಾಡಿಕೊಳ್ಳಬೇಕೆಂದು ಸುತ್ತ ನೋಡುತ್ತಾನೆ. ಮೇಲೆ ಹತ್ತಿ ಹೋಗಲು ಎಲ್ಲೂ ಸ್ಥಳವಿರುವುದಿಲ್ಲ. ಅಕ್ಕ-ಪಕ್ಕ ಬಿದ್ದಿದ್ದ ದೊಡ್ಡ-ದೊಡ್ಡ ಕಲ್ಲು ಬಂಡೆಗಳನ್ನು ಕಿತ್ತು ಹಂತ ಕಟ್ಟಿಕೊಂಡು ಶಿಖರವನ್ನು ಹತ್ತಲಾರಂಭಿಸಿದ.

ಇದನ್ನು ಕಂಡ ಸೂಲಗಿತ್ತಿಯು ಭಾಗೀರತಿಗೆ ತಿಳಿಸುತ್ತಾಳೆ. ಆಗ ಭಾಗೀರತಿಯು ಶಿವನೇ ನೀನೇ ಗತಿ ಎಂದು ತನ್ನ ಪತಿದೇವರನ್ನು ಮನದಲ್ಲಿ ನೆನೆಯುತ್ತ; ತುಂಬಿಟ್ಟಿದ್ದ ಎಣ್ಣೆಯ ಹಂಡೆಯನ್ನು ಬೆಟ್ಟದ ನೆತ್ತಿಯಿಂದ ಉರುಳಿಸುತ್ತಾಳೆ. ಎಣ್ಣೆಯ ಮಜ್ಜನದಿಂದ ಬೆಟ್ಟವೆಲ್ಲಾ ನುಣ್ಣಗಾಗುತ್ತದೆ. ಎಣ್ಣೆ ಮಜ್ಜನದಿಂದ ನುಣ್ಣಗಾಗಿ ಜಾರುತ್ತಿದ್ದರೂ ಲೆಕ್ಕಿಸದೆ ಕಲ್ಲಿನ ಹಂತವನ್ನು (ಮೆಟ್ಟಿಲು) ಕಟ್ಟಿಕೊಂಡು ಬಾಣಂತಿಯ ಬಳಿಗೆ ಬರುತ್ತಾನೆ. ಬರುತ್ತಿರುವ ಹೊಲೆರಾವಳನನ್ನು ನೋಡಿ ಆರ್ತನಾದ ಮಾಡುತ್ತಿರುತ್ತಾಳೆ. 'ರಾಮ ರಾಮ ಜಯರಾಮ! ಎಲ್ಲಿರುವೆ ಮುಕುಂದ ರಾಮ! ಮೆಲ್ಲಗೆ ಬಾರೋ ಸೀತಾರಾಮ! ಎಲ್ಲರ ಕಾಯೋ ಕೋದಂಡರಾಮ! ಎಂದು ರಾಮನಾಮ ಜಪದಲ್ಲಿದ್ದ ಮುತ್ತುರಾಯನಿಗೆ ತಂಗಿಯ ಗೋಳು ಕೇಳಿಸುತ್ತದೆ. 'ಇದೋ ತಂಗಿ ಬಂದೆ' ಎಂದು ಒಂದೇ ನೆಗೆತಕ್ಕೆ ಬರುತ್ತಾನೆ. ಮುತ್ತುರಾಯ ಬರುವಷ್ಟರಲ್ಲಿ ತನ್ನ ಪತಿಯ ಪಾದಸ್ಮರಣೆ ಮಾಡುತ್ತಾ ನೀನೇ ನನ್ನ ಮಕ್ಕಳನ್ನು ಕಾಪಾಡಬೇಕೆಂದು ಬೆಟ್ಟದಿಂದ ಕೆಳಗೆಸೆಯುತ್ತಾಳೆ. ಮಕ್ಕಳನ್ನು ಬಿಸಾಡಿ ತಾನೂ ಬೆಟ್ಟದಿಂದ ಬೀಳಲು ಉದ್ಯುಕ್ತಳಾಗುತ್ತಾಳೆ. ಮುತ್ತುರಾಯ ಬಂದು ತಡೆಯುತ್ತಾನೆ.

ಬಂದಂಥ ಅಣ್ಣ ಮುತ್ತುರಾಯನಿಗೂ ಹೊಲೆರಾವಳನಿಗೂ ಘನಘೋರ ಯುದ್ಧವಾಗುತ್ತದೆ. ಹೊಲೆರಾವಳ ಸಂಹಾರವಾಗುತ್ತಾನೆ. ಭಯಂಕರ ಯುದ್ಧ ಮತ್ತು ಮಕ್ಕಳನ್ನು ಕಳೆದುಕೊಂಡು ದುಃಖದಿಂದ ಬಾಣಂತಿ ಮೂರ್ಛೆ ಹೋಗುತ್ತಾಳೆ. ಎರಡು ಬೆಟ್ಟಗಳ ಎಡೆಯ ಮಧ್ಯದಲ್ಲಿ ದೋಣಿಯೋಪಾದಿಯ ಗುಂಡಿಯೊಂದನ್ನು ತೆಗೆದು ನೀರು ತಂದು ಚಿಮುಕಿಸಿ ತಂಗಿಯಾದ ಬಾಣಂತಿಗೆ ಹೇಳುತ್ತಾನೆ. ಹೆದರಬೇಡ ತಂಗಿ; ನಾನು ಸದಾ ನಿನ್ನ ಬಲಭಾಗದಲ್ಲಿ ಕಾವಲಿಗೆ ನಿಲ್ಲುತ್ತೇನೆ. ಈ ದೂಪದ ಮರದಡಿಯೇ ನಿನ್ನ ಆವಾಸಸ್ಥಾನ ನೀನಿಲ್ಲಿ ಕುಳಿತುಕೊಂಡಿದ್ದರಿಂದ ಪಕ್ಕದೂರಿಗೆ 'ಕೂತಗೊಂಡನಹಳ್ಳಿ' ಎಂದು ಹೆಸರಾಗುತ್ತದೆ.[೬೦]

ಚೂಡಹಳ್ಳಿ (ಕ)

ಚೂಡಹಳ್ಳಿಯ ಆಂಜನೇಯ ದೇವಾಲಯ ಪುರಾಣಕಾಲದ್ದು ಎಂಬ ನಂಬಿಕೆ ಅಲ್ಲಿನ ಜನರದ್ದು. 'ಚೂಡಹಳ್ಳಿ' ಎಂಬ ಗ್ರಾಮನಾಮಕ್ಕೆ ತ್ರೇತಾಯುಗದ ಘಟನೆಯೊಂದನ್ನು ಜನಪದರು ಹೇಳುತ್ತಾರೆ.

ರಾಮ ಸೀತೆ ಲಕ್ಷ್ಮಣರು ವನವಾಸಕ್ಕೆ ಬಂದ ಸಮಯದಲ್ಲಿ ರಾವಣನು ಸೀತಮ್ಮನನ್ನು ಅಪಹರಿಸಿಕೊಂಡು ಹೊರಟು ಹೋದಾಗ; ಸೀತೆಯನ್ನು ಹುಡುಕಲು ಆಂಜನೇಯನು ಆಕಾಶದಲ್ಲಿ ಹಾರಿಕೊಂಡು ಹೋಗುವಾಗ ಕೆಳಗಡೆ ಬೆಂಕಿ ಉರಿಯುತ್ತಿದ್ದಂತೆ ಬೆಳಕು ಕಾಣುತ್ತದೆ. ಆಗ ಇದೇನಿದು! ಬೆಳಕು ಎಂದು ಆಂಜನೇಯನು ಕೆಳಗೆ ಬಂದು ನೋಡಿದಾಗ ಅಲ್ಲಿ ಒಂದು ಚೂಡಾರತ್ನ ಬಿದ್ದಿರುವುದು ಕಾಣುತ್ತದೆ. ಅದನ್ನು ಕೈಗೆ ಎತ್ತಿಕೊಂಡು; ಹಾಗೆ ಕಿವಿಯ ಹತ್ತಿರಕ್ಕೆ ಹಿಡಿದು ನೋಡಿದಾಗ ಅದು, ರಾಮ-ರಾಮ ಎಂದು ಜಪಿಸುತ್ತಿರುತ್ತದೆ. ಆಗ ಆಂಜನೇಯನು ಇದು ಸೀತಾದೇವಿಯ ಚೂಡರತ್ನ ಎಂದು ಭಾವಿಸಿ;

ಇದನ್ನು ಸೀತಾದೇವಿಗೆ ಹೇಗಾದರೂ ಮಾಡಿ ತಲುಪಿಸಬೇಕು ಎಂದು ಅದನ್ನು ಎತ್ತಿಕೊಂಡು; ಸೀತಾದೇವಿ ಸಿಗುವವರೆಗೂ ನನಗೆ 'ನಿದ್ದೆ ಬಾರದೇ ಇರಲಿ, ಹಸಿವಾಗದೇ ಇರಲಿ' ಎಂದುಕೊಂಡು ಚೂಡಾರತ್ನವನ್ನು ಬಾಯಿಗೆ ಹಾಕಿಕೊಳ್ಳುತ್ತಾನೆ. ಚೂಡಾರತ್ನ ಬಿದ್ದ ಜಾಗದ ಗುರುತಿಗೆ ಒಂದು ಕಲ್ಲು ಇಟ್ಟು ಬರುತ್ತಾನೆ. ಆ ಕಲ್ಲು ಇಟ್ಟ ಜಾಗದಲ್ಲಿ ಒಂದು ಚಿಕ್ಕಗುಡಿ ಕಟ್ಟುತ್ತಾನೆ. ಚೂಡಾರತ್ನ ಸಿಕ್ಕ ಜಾಗವೇ 'ಚೂಡಹಳ್ಳಿ' ಎಂದು ಕರೆಯುತ್ತಾರೆ.

ನಂತರ; ಆಂಜನೇಯನು ಚೂಡಾರತ್ನ ಸಿಕ್ಕ ಜಾಗದಿಂದ (ಚೂಡಹಳ್ಳಿಯಿಂದ) ನೆಗೆದು ಪಾದ್ದರೆಯಲ್ಲಿ ಸೀತೆಯನ್ನು ಹುಡುಕಲು ಇಳಿಯುವಾಗ ಅಲ್ಲೊಂದು ಪಾದವಿಡುತ್ತಾನೆ. ಅದೇ ಪಾದ್ದರೆ, ಅಲ್ಲಿ ಒಬ್ಬ ಮಾದಿಗನೊಬ್ಬ ಒಂದು ಹರಬಿ ಹಾಲನ್ನು ಕರೆದು ಇಟ್ಟು; ಇನ್ನೊಂದು ಹರಬಿಯನ್ನು ಕರೆಯುತ್ತಿರುತ್ತಾನೆ. ಆಂಜನೇಯನಿಗೆ ದಾಹವಾಗಿ ಹಾಲನ್ನು ಕುಡಿಯಲು ಯತ್ನಿಸಿದಾಗ ಮಾದಿಗನು 'ಏ ಕೋತಿ ಬಂತು ಹೊಡಿರೋ ಹೊಡಿರೋ, ಎಂದಾಗ ಆಂಜನೇಯ ಹಾಲಿನ ಹರವಿಯ ಸಮೇತ ಮರಕ್ಕೆ ಹತ್ತಿ ಬಿಡುತ್ತಾನೆ. ಮಾದಿಗ ಆಂಜನೇಯನಿಂದ ಮಡಿಕೆಯನ್ನು ಕಸಿದುಕೊಳ್ಳಲು ಕೋಲಿನಿಂದ ಮಡಿಕೆ ತಿವಿದು ತಿವಿದು ಪಾಠವಾಗುತ್ತದೆ. ಈಗಲೂ ಅಂದರೆ ಪಾದ್ದರೆಯಲ್ಲಿ ಹಾಲವಿಯ ಸೇವೆಯನ್ನು ಈಗಲೂ ಮಾದಿಗರೇ ಮಾಡುತ್ತಾರೆ. ನಂತರ ಅಂಜನೇಯನು ಮುತ್ತತ್ತಿ ಕಾವೇರಿ ಹೊಳೆಯಲ್ಲಿ ನೀರು ಕುಡಿಯಲು ಹೋಗುತ್ತಾನೆ. ಅಲ್ಲಿ ಒಂದು ತಿರುಗಣೆ ಇರುತ್ತದೆ. ಅಂದರೆ ನೀರು ಸುರುಳಿಯಾಗಿ ಸುತ್ತಿಕೊಂಡು ಹೋಗುತ್ತಿರುತ್ತದೆ. ಯಾಕೆ ಹೀಗೆ ನೀರು ಸುತ್ತಿಕೊಂಡು ಹೋಗುತ್ತಿದೆ? ಏನಿರಬಹುದು? ಎಂದು ಆ ಸುರಳಿ ಸುತ್ತುತ್ತಿರುವ ಕಡೆ ತನ್ನ ಬಾಲವನ್ನು ಹಾಕಿ ನೋಡಿದಾಗ ಅಲ್ಲಿ ಒಂದು ಮುತ್ತು (ಮೂಗುತಿ) ಸಿಗುತ್ತದೆ. ಅದನ್ನು ಕೈಗೆತ್ತಿಕೊಂಡು ಕಿವಿಯ ಬಳಿ ಹಿಡಿದಾಗ ಅದೂ ಕೂಡ ರಾಮ ರಾಮ ಎಂದು ಜಪಿಸುತ್ತಿರುತ್ತದೆ. ಆಗ ಓ, ಇದು ಸೀತಾದೇವಿಯ ಮುತ್ತು ಇದನ್ನು ಸೀತೆಗೆ ಹೇಗಾದರೂ ಮಾಡಿ ತಲುಪಿಸಬೇಕು ಎಂದು ಅದನ್ನು ಕೂಡ ತನ್ನ ಬಾಯಿಗೆ ಹಾಕಿಕೊಂಡು ಸೀತಾದೇವಿಯು ನನ್ನ ಕಣ್ಣಿಗೆ ಬೀಳುವವರೆಗೂ 'ನಿದ್ದೆ ಬಾರದೇ ಇರಲಿ ಹಸಿವಾಗದೇ ಇರಲಿ' ಎಂದುಕೊಂಡು ಸಪ್ತ ಸಾಗರದಾಟಿ ಲಂಕೆಗೆ ಹಾರಿ ಹೋಗುತ್ತಾನೆ. ಅಶೋಕ ವನದಲ್ಲಿ ಸೀತಾದೇವಿ ಇರುವುದನ್ನು ಕಂಡು ಚೂಡಾರತ್ನ ಮತ್ತು ಮುತ್ತನ್ನು ತಲುಪಿಸಿದ ಮೇಲೆ ಆಂಜನೇಯನಿಗೆ ಹಸಿವಾಗುತ್ತದೆ.[೪೧]

ಬಟ್ಟಲು ಗುಂಡೇಶ್ವರ (ಕ)

ಕನಕಪುರದಿಂದ ಸಾತನೂರಿಗೆ ಹೋಗುವ ರಸ್ತೆಯಲ್ಲಿ ಸುಮಾರು ೬-೭ಕಿಲೋ ದೂರದಲ್ಲಿ ಬಲಭಾಗದ ಬೆಟ್ಟದ ಮೇಲಿದೆ. ಬಟ್ಟಲು ಗುಂಡೇಶ್ವರ ಹಿಂದೆ ಇದು ದಟ್ಟವಾದ ಅರಣ್ಯ ಪ್ರದೇಶವಾಗಿತ್ತು. ನಾಗಲಿಂಗ ಮಹಾಸ್ವಾಮಿಗಳೆಂಬ ಋಷಿಗಳು ಇಲ್ಲಿ ಸಿಗುವ ಗೆಡ್ಡೆಗೆಣಸು ತಿನ್ನುತ್ತಾ, ಸ್ನಾನ ಸಂಧ್ಯಾವಂದನೆಗಳನ್ನು ಮಾಡುತ್ತಾ ಶಿವಪೂಜೆ ಮಾಡಿಕೊಂಡಿದ್ದರು. ಕ್ರೂರ ಮೃಗಗಳಾದ ಹುಲಿ, ಕರಡಿಯೂ ಕೂಡ ತಮ್ಮ ಕ್ರೂರತನ ಬಿಟ್ಟು ಋಷಿಜೊತೆಗೂಡಿ ಶಿವನ ಪೂಜೆಯಲ್ಲಿ ತೊಡಗುತ್ತಿದ್ದವು. ಋಷಿಗಳು ತಪಸ್ಸು ಮಾಡುತ್ತಿದ್ದ

ಎದುರುಗಡೆಯ ಇನ್ನೊಂದು ಬಂಡೆಯ ಮೇಲೆ ಚಿಕ್ಕದಾಗಿ ಬಟ್ಟಲಿದೆ. ಆ ಬಟ್ಟಲಿಗೆ ಹಸು ಬಂದು ಹಾಲು ಕರೆಯುತ್ತಿತ್ತು. ಆಗ ಬಟ್ಟಲಿನಾಕಾರದ ಕಲ್ಲಿನ ಕುಳಿಯಲ್ಲಿ ಹಾಲು ನಿಲ್ಲುತ್ತಿತ್ತು. ಮಜ್ಜನಕ್ಕಾಗಿ ಬರುತ್ತಿದ್ದ ಋಷಿಗಳು ಅಲ್ಲಿದ್ದ ಹಾಲನ್ನು ಸೇವಿಸಿ; ಗೆಡ್ಡೆ ಗೆಣಸು ತಿಂದು ವಾಸಮಾಡುತ್ತಿದ್ದರು. ಹೀಗೆ ಕಾಲ ಕಳೆಯುತ್ತಿದ್ದಂತೆಯೆ ನಾಗಲಿಂಗ ಮಹಾಸ್ವಾಮಿಗಳು ಅಲ್ಲಿಯೇ ಲಿಂಗೈಕ್ಯರಾಗಿ ಲಿಂಗ ಆಕಾರದಲ್ಲಿ ಅಲ್ಲಿಯೇ ನೆಲೆಸಿದರು. ಅಂದಿನಿಂದ ಲಿಂಗಕ್ಕೆ ಎದುರಾಗಿರುವ ಬಟ್ಟಲಿನಾಕಾರದ ಗುಂಡು ಇರುವುದರಿಂದ ಭಕ್ತರು ಮೊದಲಿಗೆ 'ಬಟ್ಟಲು ಗುಂಡಪ್ಪ' ಎಂದು ಕರೆಯುತ್ತಿದ್ದರು. ಈಗ 'ಬಟ್ಟಲು ಗುಂಡೇಶ್ವರ' ಎಂದು ಕರೆಯುತ್ತಾರೆ. ಈ ಕ್ಷೇತ್ರದ ಮಹಿಮೆಯಂತೆ ಇಷ್ಟು ಎತ್ತರದ ಬೆಟ್ಟದಲ್ಲಿ ಎಂಥ ಬೇಸಿಗೆಯ ಸಂದರ್ಭದಲ್ಲೂ ಕೂಡ ನೀರು ಇರುತ್ತದೆ. ಭಕ್ತರಾದ ಪಕ್ಕದ ಶಿವನಹಳ್ಳಿ ಗ್ರಾಮಸ್ಥರು ತಮ್ಮ ಮನೆಯಲ್ಲಿನ ಹಸು ಕರುವನ್ನು ಹಾಕಿದರೆ ಮೊದಲು ದೇವರಿಗೆ ಹಾಲನ್ನು ತಂದು ಪೂಜೆ ತಳಿಗೆಯನ್ನು ಮಾಡಿಸಿ ಪ್ರಸಾದವನ್ನು ಮನೆಗೆ ತೆಗೆದುಕೊಂಡು ಹೋಗುತ್ತಾರೆ.[೪೨]

ಬಿಲ್ಲಿನ ಸೊಣೆ (ಚ)

ಬಿಲ್ಲಿನ ಸೋಣೆಯು ಸಿಂಗರಾಜಪುರದ ಬಲಗಡೆಗೆ ಕಾಣುವ ಗವಿರಂಗಸ್ವಾಮಿ ಬೆಟ್ಟದಲ್ಲಿದೆ. ತ್ರೇತಾಯುಗದಲ್ಲಿ ರಾಮ, ಲಕ್ಷ್ಮಣ, ಸೀತೆ ವನವಾಸಕ್ಕಾಗಿ ಈ ಪ್ರದೇಶಕ್ಕೆ ಬಂದಾಗ; ಒಂದು ದಿನ ಸೀತೆಯು ರಸಜ್ವಲೆಯಾದಂತ ಸಂದರ್ಭದಲ್ಲಿ ಸ್ನಾನಕ್ಕಾಗಿ ತುರ್ತಾಗಿ ನೀರು ಬೇಕಾದ್ದರಿಂದ ಸುತ್ತಮುತ್ತಲು ಬಂಡೆಯಿಂದ ಕೂಡಿರುವ ಪರ್ವತ ಪ್ರದೇಶವಾದ್ದರಿಂದ ಎಲ್ಲಿಯೂ ನೀರು ದೊರಕಲಿಲ್ಲ. ಆಗ ಸೀತೆಯು ಸ್ನಾನಕ್ಕೆ ನೀರುಬೇಕೆಂದು ರಾಮನಲ್ಲಿ ಕೇಳಿದಾಗ, ಅಣ್ಣನ ಆಜ್ಞೆಯಂತೆ ಲಕ್ಷ್ಮಣನು ತನ್ನ ಬಾಣವನ್ನು ಬಿಲ್ಲಿಗೆ ಹೂಡಿ ಬಂಡೆಗೆ ಒಡೆದಾಗ, ಬಂಡೆಯು ಸೀಳಿ ಬಂಡೆಯಿಂದ ನೀರು ಚಿಮ್ಮಿತಂತೆ. ಆದ್ದರಿಂದ ಇದಕ್ಕೆ ಬಿಲ್ಲುಸೊಣೆ ಎಂಬ ಹೆಸರಿದೆ.[೪೩] ಈ ಬಿಲ್ಲಿನ ಸೊಣೆಯು ವರ್ಷದ ಎಲ್ಲ ದಿನಗಳಲ್ಲಿಯೂ ಕೂಡ ಬತ್ತುವುದಿಲ್ಲ. ಸ್ವಚ್ಛವಾಗಿ ಮತ್ತು ತಂಪಾದ ನೀರು; ಸೊಣೆಯಲ್ಲಿ ಯಾವಾಗಲೂ ಸಿಗುವುದು. ಈ ಸೊಣೆಗೂ ಮುತ್ತತ್ತಿಯ ಕಾವೇರಿನದಿಗೂ ಸಂಬಂಧವಿದ್ದು; ಮುತ್ತತ್ತಿಯ ಹೊಳೆ ಪ್ರವಾಹ ಬಂದು ತುಂಬಿದಾಗ ಆ ಪ್ರವಾಹದ ನೀರು ಇಲ್ಲಿಯೂ ಕಾಣಿಸಿಕೊಳ್ಳುತ್ತದೆ ಎಂಬ ಪ್ರತೀತಿ ಇಲ್ಲಿಯ ಜನಮಾನಸದಲ್ಲಿದೆ. ಇಲ್ಲಿನ ಸೊಣೆಯು ಪ್ರಕೃತಿ ನಿರ್ಮಿತವಾದದ್ದು. ಅದಕ್ಕೆ ಪೌರಾಣಿಕ ಕಥೆಯನ್ನು ಜನಪದರು ಆರೋಪಿಸಿದ್ದಾರೆ.

ಸಿಂಗರಾಜಿಪುರ (ಚ)

ಸಿಂಗರಾಜಪುರ ಹಾಗೂ ಹನಿಯೂರುಗಳೆರಡೂ ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಊರುಗಳು. ಈ ಊರುಗಳಿಗೆ ಹೊಂದಿಕೊಂಡಂತೆ ಇರುವ ದೊಡ್ಡದಾದ ಕಾಡಿನಲ್ಲಿ ವಿಭಾಂಡಕ ಮಹರ್ಷಿಗಳು ಆಶ್ರಮವನ್ನು ಕಟ್ಟಿಕೊಂಡು ವಾಸವಾಗಿದ್ದರು. ವಿಭಾಂಡಕ ಋಷಿಗಳ ಆಶ್ರಮಕ್ಕೆ ಎದುರಿಗಿರುವ ತೈಲೂರು ಗುಡ್ಡೆಯು ಕಶ್ಯಪ ಮುನಿಗಳ ತಪಸ್ಸಿನ ಕ್ಷೇತ್ರವಾಗಿತ್ತು. ಈ ಇಬ್ಬರು ಮಹಾಪುರುಷರ ಆಶ್ರಮಗಳ ಮಧ್ಯೆ ಒಂದು ದೊಡ್ಡ ತೊರೆ ಇದ್ದು; ಕಶ್ಯಪ ಮಹರ್ಷಿಗಳು ದಿನವು ಅಲ್ಲಿಗೆ ಸ್ನಾನ-ವಂದನೆಗಳಿಗೆ ಬರುತ್ತಿದ್ದರು. ಅವರು

ಸಂಧ್ಯಾವಂದನೆಗೆ ಬರುತ್ತಿದ್ದ ಸಮಯದಲ್ಲಿ ಗಂಧರ್ವ ಸ್ತ್ರೀಯರು ಜಲಕ್ರೀಡೆಯಾಡಲು ಬರುತ್ತಿದ್ದರು. ಒಮ್ಮೆ ಅರೆನಗ್ನರಾಗಿ ಜಲಕ್ರೀಡೆಯಾಡುತ್ತಿದ್ದ ಗಂಧರ್ವ ಸ್ತ್ರೀಯರನ್ನು ನೋಡಿ ಮಹರ್ಷಿಗಳಿಗೆ ಕಾಮೋದ್ರೇಕವಾಗಿ ಬಿಂದು ಚಲನೆಯಾಗಿ ನೀರಿಗೆ ಬಿತ್ತು. ಕೆಳಭಾಗದಲ್ಲಿ ಹುಲ್ಲೆಯೊಂದು ಬಾಯಾರಿ ಬಂದು ನೀರು ಕುಡಿಯುತ್ತಿತ್ತು; ಆ ಬಿಂದು ಹುಲಿಯ ಗರ್ಭ ಸೇರಿತು.

ಆ ಹುಲ್ಲೆ ಬೇರೆಲ್ಲಿಯದೂ ಆಗಿರದೇ ವಿಭಾಂಡಕ ಮಹರ್ಷಿಗಳ ಆಶ್ರಮದ ಮುದ್ದಿನ ಪ್ರಾಣಿಯಾಗಿತ್ತು. ಇವರ ಆಶ್ರಮದಲ್ಲೇ ಬೆಳೆಯುತ್ತಿದ್ದ ಅದಕ್ಕೆ ನವಮಾಸಗಳು ತುಂಬಿ ಪ್ರಸವವಾಯಿತು. ಆ ಜಿಂಕೆ ಹಿಂದಿನ ಜನ್ಮದಲ್ಲಿ ಕುಬೇರನ ಶಾಪಕ್ಕೆ ಸಿಕ್ಕಿದ ಗಂಧರ್ವ ಸ್ತ್ರೀ ಆಗಿತ್ತು. ಶಾಪ ವಿಮೋಚನೆಯ ಕಾಲ ಸಮೀಪಿಸಿದ್ದರಿಂದ ಗಂಡು ಮಗುವಿಗೆ ಜನ್ಮ ನೀಡಿದ ನಂತರ ಆ ಮಗುವನ್ನು ವಿಭಾಂಡಕ ಋಷಿಗಳ ಆಶ್ರಯಕ್ಕೆ ಒಪ್ಪಿಸಿ ಕಣ್ಮರೆಯಾಯಿತು. ವಿಭಾಂಡಕರು ತಾಯಿ ಇಲ್ಲದ ಆ ಮಗುವನ್ನು ಚೆನ್ನಾಗಿ ಪೋಷಿಸಿ ಬೆಳೆಸಿ ಪಾರಮಾರ್ಥಿಕ ಹಾಗೂ ಸಕಲವಿದ್ಯಾ ಪಾರಂಗತನನ್ನಾಗಿ ಮಾಡಿದರು. ಈ ಮಗು ಜಿಂಕೆಯ ಗರ್ಭದಲ್ಲಿ ಜನಿಸಿದ್ದರಿಂದ ಅದು ಜನ್ಮ ತಾಳುವಾಗಲೇ ತಲೆಯಲ್ಲಿ ಎರಡು ಕೊಂಬುಗಳನ್ನು (ಕೋಡು) ಹೊತ್ತು ಬಂದಿತ್ತು. ಆ ಕಾರಣದಿಂದಾಗಿ ಆ ಮಗುವಿಗೆ 'ಶೃಂಗರಾಜ' ಎಂಬ ನಾಮಕರಣವನ್ನು ಮಾಡಲಾಯಿತು. ತಾಯಿಯಂತೆಯೇ ತರಗಲೆಗಳನ್ನು ತಿನ್ನುತ್ತಾ ಹದಿನಾರು ವರ್ಷಗಳಾಗುವಷ್ಟರಲ್ಲಿಯೇ ಪಾರಮಾರ್ಥಿಕ ವಿದ್ಯೆಯಲ್ಲಿ ಶ್ರೇಷ್ಠ ಸಾಧನೆಯನ್ನು ಮಾಡಿದರು.

ಅಂತಹ ಸಂದರ್ಭದಲ್ಲಿ ಬದರಿಕಾಶ್ರಮದಿಂದ ವಿಭಾಂಡಕ ಋಷಿಗಳಿಗೆ ಆಹ್ವಾನ ಬಂತು. ಆಹ್ವಾನಪತ್ರವನ್ನು ವಿಭಾಂಡಕರು ಒಪ್ಪಿಕೊಂಡು ತಮ್ಮ ಆಶ್ರಮಕ್ಕೆ ಶೃಂಗರಾಜ ಮಹರ್ಷಿಯನ್ನು ಅಧಿಪತಿಯನ್ನಾಗಿ ಮಾಡಿ; ಅವರು ಬದರಿಕಾಶ್ರಮಕ್ಕೆ ಹೊರಟರು. ವಿಭಾಂಡಕರ ನಂತರ ಶೃಂಗರಾಜ ಮಹರ್ಷಿಗಳು ಆಶ್ರಮವನ್ನು ಸಮರ್ಥವಾಗಿ ನಡೆಸಿಕೊಂಡು, ಕಾಲಕಾಲಕ್ಕೆ ಸುತ್ತಣ ಪ್ರದೇಶದ ಜನಗಳಿಗೆ ಸಮೃದ್ಧವಾಗಿ ಮಳೆ ಬೆಳೆಗಳನ್ನು ನೀಡುತ್ತಾ ಲೋಕ ಪ್ರಸಿದ್ಧರಾಗಿ ಕಾಲ ಕಳೆಯುತ್ತಿದ್ದರು.

ಅಂಗದೇಶವನ್ನು ರೋಮಪಾದ ಎಂಬ ಚಕ್ರವರ್ತಿ ರಾಜ್ಯಭಾರ ಮಾಡುತ್ತಿದ್ದ. ಅಲ್ಲಿ ಹನ್ನೆರಡು ವರ್ಷಗಳ ಕಾಲ ಭೀಕರ ಕ್ಷಾಮ ಬಂದೊದಗಿತು. ಆಗ ರೋಮಪಾದ ಮಹಾರಾಜನು ಅಲ್ಲಿಯ ಜ್ಯೋತಿಷಿಗಳನ್ನು, ವಿದ್ವಾಂಸರನ್ನು ಕರೆದು ಇದಕ್ಕೆ ಶಾಂತಿ ಏನೆಂದು ಕೇಳಿದಾಗ; ಅವರೆಲ್ಲರೂ ಒಕ್ಕೊರಲಿನಿಂದ ಶೃಂಗಬೆಟ್ಟದಲ್ಲಿ ಋಷ್ಯಶೃಂಗರಂತಹ ಮಹಾತ್ಮರಿದ್ದಾರೆ. ಅವರನ್ನು ಕರೆದುಕೊಂಡು ಬಂದು ಅವರ ಪಾದಪೂಜೆಯನ್ನು ಮಾಡಿದರೆ ಕ್ಷಾಮನಿವಾರಣೆ ಆಗುತ್ತದೆಂದು ತಿಳಿಸಿದರು. ಬೆಟ್ಟದಿಂದ ಒಂದು ಕ್ಷಣವೂ ಇಳಿದು ಬಾರದ ಆ ಮಹಾಮುನಿಯನ್ನು ಹೇಗೆ ನನ್ನ ರಾಜ್ಯಕ್ಕೆ ಕರೆತರುವುದು ಎಂದು ಮಹಾರಾಜನಿಗೆ ಯೋಚನೆ ಪ್ರಾರಂಭವಾಯಿತು. ಅಂತಹ ಸಂದರ್ಭದಲ್ಲಿ ಆತ ಸುತ್ತಣ ಊರುಗಳಿಗೆಲ್ಲಾ ಡಂಗುರ ಸಾರಿಸಿ "ಶೃಂಗ ಮಹರ್ಷಿ ಮಹಾಮುನಿಯನ್ನು ಬೆಟ್ಟದಿಂದ ಯಾರಾದರೂ ಕೆಳಗೆ ಇಳಿಸಿಕೊಂಡು ಬಂದರೆ ಅವರಿಗೆ ನನ್ನ ಅರ್ಧರಾಜ್ಯವನ್ನು ಕೊಡುವುದಾಗಿ ಸಾರಿಸಿದ" ಆದರೆ ಪ್ರಜೆಗಳಾರೂ ಈ ಆಹ್ವಾನವನ್ನು ಸ್ವೀಕರಿಸಲು

ಮುಂದೆ ಬರಲಿಲ್ಲವಾದ ಕಾರಣ; ನಿರಾಸೆಯಿಂದ ಚಿಂತೆಯಲ್ಲಿ ರಾಜ ಮುಳುಗಿದ. ಆ ಸಮಯದಲ್ಲಿ ರೂಪಾಂಗನೆಯೆಂಬ ವೇಶ್ಯೆ ಬಂದು ತಾನೂ ಕರೆತರುವುದಾಗಿ ಆಶ್ವಾಸನೆಯಿತ್ತು ರಾಜನಿಂದ ವೀಳ್ಯವನ್ನು ಪಡೆದುಕೊಂಡು ಇಬ್ಬರು ವೇಶ್ಯೆಯರೊಡಗೂಡಿ ಹೊರಟಳು.

ಹೀಗೆ ಹೊರಟ ಅವರು; ಶೃಂಗಬೆಟ್ಟದ ಎದುರಿನ ಬೆಟ್ಟದಲ್ಲಿ ಗವಿಯೊಂದನ್ನು ತಂಗುದಾಣ ಮಾಡಿಕೊಂಡರು. ಅನಂತರ ಶೃಂಗರ ದಿನಚರಿಗಳನ್ನು ಗಮನಿಸಿದ ಅವರು; ಶೃಂಗರ ಇಂದ್ರಿಯಗಳು ಪುಟತ್ವವಾಗಲು ಉಪ್ಪು ಕಾರ ಪದಾರ್ಥಗಳಾದ ನಿಪ್ಪಟ್ಟು, ಕಜ್ಜಾಯ, ಹಪ್ಪಳ ಮುಂತಾದವುಗಳನ್ನು ಪುಡಿಮಾಡಿ ಅವರು ತಿನ್ನುತ್ತಿದ್ದ ಎಲೆಗಳ ಮೇಲೆ ಉದುರಿಸುತ್ತಿದ್ದರು. ಕಾಲಕ್ರಮೇಣ ಅವರು ಆ ಪದಾರ್ಥಗಳನ್ನು ಶೃಂಗರು ತಿನ್ನುತ್ತಿದ್ದ ಎಲೆಗಳ ಕೆಳಗೆ ಇಡಲು ಪ್ರಾರಂಭಿಸಿದರು. ಶೃಂಗರು ಆ ಪದಾರ್ಥಗಳನ್ನು ತಿನ್ನುವುದನ್ನು ಗಮನಿಸಿದ ವೇಶ್ಯೆಯರು ಸಂನ್ಯಾಸಿನಿಯರ ರೀತಿಯಲ್ಲಿ ಬಟ್ಟೆಯನ್ನು ಧರಿಸಿಕೊಂಡು ಶೃಂಗರ ಸುತ್ತ ಓಡಾಡಲು ಪ್ರಾರಂಭಿಸಿದರು. ಇದುವರೆಗೂ ಯಾವ ಸ್ತ್ರೀಯರನ್ನೂ ಸಹ ಕಣ್ಣೆತ್ತಿ ನೋಡದಿದ್ದ ಋಷಿಗಳು ಈಗ ಇವರನ್ನು ನೋಡಿದುದಲ್ಲದೆ, ಅವರ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ; ಅವರ ಕ್ಷೇಮ, ಕುಶಲ ಸಮಾಚಾರಗಳನ್ನು ವಿಚಾರಿಸುತ್ತಿದ್ದರು. ಅಲ್ಲದೆ ಅವರ ದೇಹ ಸ್ಪರ್ಶವನ್ನೂ ಮಾಡತೊಡಗಿದರು. ಕ್ರಮೇಣ ಋಷಿಗಳಿಗೆ ಇವರ ಬಗ್ಗೆ ವ್ಯಾಮೋಹವಾಗಿ ಅವರನ್ನು ಕುರಿತು ನೀವು ಯಾರು? ನಿಮ್ಮ ಸ್ಥಳ ಯಾವುದು? ನಿಮ್ಮ ಸ್ಥಳಕ್ಕೆ ನಾನೂ ಒಮ್ಮೆ ಬರಬಹುದೇ? ಮುಂತಾಗಿ ಕೇಳತೊಡಗಿದರು. ತಾವು ಬಂದಿರುವ ಉದ್ದೇಶ ಫಲಿಸತೊಡಗಿದ ಸೂಚನೆಗಳನ್ನು ಕಂಡು; ತುಂಬಾ ಸಂತೋಷಗೊಂಡ ವೇಶ್ಯೆಯರೂ ಸಹ ತಮ್ಮ ಊರಿಗೆ ಬರುವಂತೆ ಋಷಿಗಳನ್ನು ಒತ್ತಾಯಿಸತೊಡಗಿದರು. ಅವರ ಬೇಡಿಕೆಯಂತೆ ಮತ್ತು ತಮ್ಮ ಮನಸ್ಸಿನ ಹಿಂಗಿತದಂತೆ ಅವರ ಊರಿಗೆ ಶೃಂಗರು ಹೊರಟರು.

ಅಂಗ ದೇಶಕ್ಕೆ ಶೃಂಗ ಮಹರ್ಷಿಗಳು ಹೋಗುತ್ತಿದ್ದಂತೆಯೇ ಅಲ್ಲಿನ ಭೀಕರ ಕ್ಷಾಮ ನಿವಾರಣೆಯಾಯಿತು. ಶೃಂಗರು ಅಲ್ಲಿ ಹಲವು ವರ್ಷಗಳ ಕಾಲ ತಂಗಿದ್ದು; ಅನಂತರ ತನ್ನ ಪೂರ್ವಸ್ಥಳದ ನೆನಪು ಬಲವಾಗಿ ಕಾಡತೊಡಗಿದ ಮೇಲೆ ಪುನಃ ಅವರು ತಮ್ಮ ಮೂಲ ಸ್ಥಳಕ್ಕೆ ಬಂದು ತಮ್ಮ ಪೂರ್ವಾಶ್ರಮದಲ್ಲಿ ನೆಲೆಸಿದರು. ವಯಸ್ಸಾದ ನಂತರ ಅವರು ಇಲ್ಲೇ ಐಕ್ಯವಾದರು. ಶೃಂಗರಾಜರಿಂದ ಕ್ರಮೇಣ ಜನರ ಬಾಯಲ್ಲಿ ಶೃಂಗರಾಜಪುರ>ಸಿಂಗರಾಜಪುರ>ಸಿಂಗರಾಜಿಪುರ ಆಯಿತು.

ಶೃಂಗರಾಜ ವರಗವಿ ರಂಗಧಾಮ ನಗಪೋಸ
ಜಯರಾಮರಾಮ ರಘುರಾಮರಾಮ ನಿನನಾಮ||[೪೪]

೭.೩. ಜನಪದ ಕಥೆ ಮತ್ತು ಸ್ಥಳನಾಮಗಳು

ಕಥನ ಕಲೆಯು ಮಾನವನ ಸಹಜ ಪ್ರವೃತ್ತಿಗಳಲ್ಲಿ ಒಂದು. ಹೇಳುವ ಅಥವಾ ಕೇಳುವ ಕಥೆ ವಾಸ್ತವಿಕ ಘಟನೆಯನ್ನಾಧಾರಿತವಿರಲಿ; ಸುಳ್ಳಿನ ಕಂತೆಯೇ ಆಗಿರಲಿ ಅಥವಾ ಕಟ್ಟುಕತೆಯೇ ಆಗಿರಲಿ ಜನರು ತುಂಬಾ ಆಸಕ್ತಿಯನ್ನು ವಹಿಸುತ್ತಾರೆ. ಕಥೆಯಲ್ಲಿ ಕಲ್ಪನೆಯು ಮಡುಗಟ್ಟಿರುವುದರಿಂದ ಕಲ್ಪನಾ ಲೋಕದ

ವಿಹಾರ ತುಂಬಾ ಹಿತಕಾರಿಯಾಗಿರುತ್ತದೆ. ಅವುಗಳನ್ನು ಕೇಳುವುದರಿಂದ ಮನರಂಜನೆಯ ಜೊತೆಗೆ ಜ್ಞಾನಾರ್ಜನೆಯೂ ಸಾಹಸ ಪ್ರವೃತ್ತಿಯು ಧರ್ಮಬುದ್ಧಿಯೂ ಒದಗಬಹುದು. "ಒಂದು ರೀತಿಯಲ್ಲಿ ಕಥೆ ಪ್ರಾಚೀನ ಮಾನವನ ಜ್ಞಾನ ಸಂಗ್ರಹಾಲಯವೂ ಅಹುದು. ಸಾಂಸ್ಕೃತಿಕ ವಸ್ತು ಸಂಗ್ರಹಾಲಯವೂ ಅಹುದು"[೪೫] ಸಾಂಸ್ಕೃತಿಕ ವಾಹಕಗಳಾದ ಸ್ಥಳನಾಮಗಳು ಕೂಡ ಸಾಂಸ್ಕೃತಿಕ ವಸ್ತು ಸಂಗ್ರಹಾಲಯದಲ್ಲಿರುವ ಒಂದು ವಸ್ತು.

ಜನಪದ ಕಥೆಗಳ ಸಂಖ್ಯೆ ಅಪರಿಮಿತವಾಗಿವೆ. ಅವುಗಳ ರೂಪ ಸ್ವರೂಪದಲ್ಲಿ ಸಾಕಷ್ಟು ವೈವಿಧ್ಯತೆ ಇದೆ. ಹೇಳುಗರ ಹಾಗೂ ಕೇಳುಗರ ಮನೋಧರ್ಮ, ಸಂಸ್ಕೃತಿಗೆ ತಕ್ಕಂತೆ ಅವುಗಳ ರೂಪ ಬದಲಾಗುತ್ತದೆ. ಕೆಲವು ಸಂಸ್ಕೃತಿಗಳಲ್ಲಿ ರಮ್ಯಕಥೆ, ನೀತಿಕಥೆ, ಪ್ರಾಣಿಕಥೆ, ಹಾಸ್ಯಕಥೆ, ಸೂತ್ರಕಥೆ ಮೊದಲಾದ ವೈವಿಧ್ಯತೆ ಕಂಡು ಬಂದರೂ; ಕಥೆ ಹೇಳುವ ಜನರು ಕಥೆಯಲ್ಲಿನ ಘಟನೆಗಳನ್ನು ವಿವರಿಸುತ್ತಾ ಆ ಘಟನೆಗೆ ಪೂರಕವಾಗಿ ತನ್ನ ಸುತ್ತ ಮುತ್ತಲಿನ ಅಥವಾ ತನ್ನ ಪ್ರಜ್ಞಾಪ್ರಪಂಚಕ್ಕೆ ನಿಲುಕುವ ಸ್ಥಳನಾಮಗಳನ್ನು ಹೇಳುತ್ತಾರೆ. ಅವುಗಳು ಸಾಮಾನ್ಯವಾಗಿ ಪ್ರಸಿದ್ಧ ಊರುಗಳೇ ಆಗಿರುವುದರಲ್ಲಿ ಅನುಮಾನವಿಲ್ಲ.

ಕಥೆಗಳು ಪ್ರಾಚೀನ ಕಾಲದ ಉಳಿಕೆಗಳು. ಸಾಂಸ್ಕೃತಿಕ ಚರಿತ್ರೆಯ ಬಹಳ ಕೆಳಗಿನ ಹಂತದಲ್ಲಿದ್ದ ಮಾನವನ ಬದುಕಿನ ನಂಬಿಕೆ, ಆಚರಣೆ, ಪರಿಕಲ್ಪನೆಗಳೆಲ್ಲವೂ ಕಥೆಯಲ್ಲಿ ಉಳಿದುಕೊಂಡು ಬಂದಿದ್ದು; ಪುನರಾವರ್ತನೆಯ ಮೂಲಕ ಪರಂಪರೆಯ ಉಳಿಯುವಿಕೆಗೆ, ನೆನೆಯುವಿಕೆಗೆ ಕಾರಣವಾಗುತ್ತವೆ. ಕಥೆಯ ಆಧಾರದಿಂದಲೂ ಕೆಲವೊಮ್ಮೆ ಸ್ಥಳನಾಮಗಳ ನಿಷ್ಪತ್ತಿಯನ್ನು ವಿವರಿಸಬೇಕಾಗಬಹುದು. ಇದು ಎಲ್ಲಾ ಸಂದರ್ಭಗಳಲ್ಲಿಯೂ ಕರಾರುವಕ್ಕಾಗಿರುತ್ತವೆ ಎಂದು ಹೇಳಲಿಕ್ಕೆ ಬಾರದಿದ್ದರೂ ಅದೂ ಕೂಡ ನಿಷ್ಪತ್ತಿಯ ಕುರಿತಂತೆ ನಡೆದ ಅಧ್ಯಯನವಾಗದೇ ಇರದು.

ನಮ್ಮ ಜನಪದರು ಸ್ಥಳನಾಮಗಳ ಬಗ್ಗೆ ವಿಶೇಷ ಗಮನ ಕೊಟ್ಟಿರುತ್ತಾರೆ. ಸ್ಥಳನಾಮಗಳು ಸಮೂಹಕ್ಕೆ ಸೇರಿದವುದಳಾದರೂ ನಮ್ಮ ಜನಪದರು ಸ್ಥಳನಾಮಗಳ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟಿರುತ್ತಾರೆ. ಕಥೆಯನ್ನು ಹೇಳಲು ಪ್ರಾರಂಭಿಸಿದಾಗ ಒಂದು ಊರಿನಲ್ಲಿ ಒಬ್ಬರಾಜ ಇದ್ದನಂತೆ..... ಅಥವಾ ಒಂದಾನೊಂದು ಕಾಲದಲ್ಲಿ ಒಬ್ಬ ದೊರೆ. ಅವನಿಗೆ ಮಕ್ಕಳಿರಲಿಲ್ಲ.... ಎಂಬ ರೀತಿಯಲ್ಲಿ ಸಾಗಿದರೆ ಮತ್ತೆ ಕೆಲವು ಕಥೆಗಳನ್ನು ವ್ಯಕ್ತಿಗಳ ಮತ್ತು ಸ್ಥಳಗಳ ಹೆಸರಿನಿಂದ ಆರಂಭಗೊಳಿಸುತ್ತಾರೆ. ಉದಾ.ಚಂದ್ರಾವತಿ ಪಟ್ಟಣ, ಚಂದ್ರಶೇಖರಾಯ ದೊರೆ...

"ಸ್ಥಳನಾಮದ ಬಗ್ಗೆ ಆಯಾ ಊರಿನ ಜನ ಅನೇಕ ಕತೆಗಳನ್ನು ಕಟ್ಟಿ ಅದರ ರಹಸ್ಯವನ್ನು ತಾವು ತಿಳಿದಿದ್ದೇವೆ ಎಂದು ಭಾವಿಸುತ್ತಾರೆ. ಈ ಕಟ್ಟು ಕತೆಗಳು ಬಹುತೇಕ ಕಲ್ಪಿತವಾಗಿರುತ್ತವೆಯಾದರೂ ಅವು ಆ ಜನ ತಮ್ಮ ಊರಿನ ಹೆಸರಿನ ಬಗ್ಗೆ ತೋರಿದ ಆಸಕ್ತಿಯ ಸಂಕೇತವಾಗಿರುತ್ತವೆ"[೪೬] ಅಲ್ಲದೇ ಊರುಗಳ ಹೆಸರಿಗೆ ಅನೇಕ ಮಾಂತ್ರಿಕ ಶಕ್ತಿಗಳು ಇರುವುದರಿಂದ ತಮ್ಮ ಊರಿಗೆ ದೆವ್ವ, ಪಿಶಾಚಿ, ಭಯಂಕರ ರೋಗರುಜಿನಿಗಳು ಸಂಭವಿಸಿದಾಗ ಆ ದುಷ್ಟ ಶಕ್ತಿಗಳಿಂದ ಆಶ್ಚರ್ಯಕರ ರೀತಿಯಲ್ಲಿ ನಿವಾರಣೆಯಾದಾಗಿನ

ಘಟನೆಗಳನ್ನು ಬಾಯಿಂದ ಬಾಯಿಗೆ ಹರಡುವುದರ ಮೂಲಕ ಕಥೆಯು ನಿರಂತರವಾಗಿ ಮೌಖಿಕ ಪರಂಪರೆಯಲ್ಲಿ ಉಳಿಯುವಂತೆ ಮಾಡುತ್ತಾರೆ.

ಸಾಮಾನ್ಯವಾಗಿ ಜನಪದ ಕಥೆಗಳನ್ನು ಹೇಳುವವರು ಆರಂಭವನ್ನು ತಮ್ಮ ವೈಯಕ್ತಿಕ ಪರಿಸರಕ್ಕೆ ಹೊಂದಿಸಿಕೊಂಡು ಹೇಳುವುದನ್ನು ನೋಡುತ್ತೇವೆ. ಊರು, ರಾಜ, ರಾಣಿ ಮುಂತಾದ ಹೆಸರುಗಳು ಸಾರ್ವತ್ರಿಕವಾಗಿ ಬಳಕೆಯಾಗುವುದರಿಂದ ಅವುಗಳ ಬದಲು ಕಥಾ ವಕ್ತೃ ತನ್ನ ಸಮಕಾಲೀನರಾದವರನ್ನೋ ಅಥವಾ ತಾನು ವಾಸಿಸುತ್ತಿರುವ ನೆಲೆಯನ್ನೋ ಬಳಸಿಕೊಳ್ಳುವುದು ವಾಡಿಕೆ. ಸ್ಥಳವನ್ನೋ ಅಥವಾ ರಾಜ, ರಾಣಿಯರ ಹೆಸರನ್ನು ಬದಲು ಮಾಡಿ ಬಳಸಿಕೊಂಡರೂ ಕಥೆಯ ಮೂಲ ರಚನೆಗೆ ಯಾವುದೇ ಧಕ್ಕೆಯಾಗುವುದಿಲ್ಲ. ಆ ಮೂಲಕ ಕಥೆಗಳಲ್ಲಿ ಸ್ಥಳನಾಮಗಳು ದಾಖಲುಗೊಳ್ಳುವುದನ್ನು ಗುರುತಿಸಬಹುದು. ಆದರೆ ಅವೆಲ್ಲವೂ ಆ ಭೌಗೋಳಿಕ ಪರಿಸರದ ಪ್ರಾದೇಶಿಕತೆಯನ್ನು ಸೂಚಿಸುವುದನ್ನು ಕಾಣಬಹುದು. ಇದರಿಂದ ಸ್ಥಳನಾಮಗಳ ಮೂಲ ನಿಷ್ಪತ್ತಿಯ ಅಂಶಗಳನ್ನು ಪತ್ತೆ ಹಚ್ಚಲು ಕೂಡ ಇವು ಪ್ರೇರಣೆ ಒದಗಿಸುತ್ತವೆ. ಮತ್ತು ಭಾಷೆಯ ಅಧ್ಯಯನಕ್ಕೂ ಪ್ರೇರೇಪಿಸುವುದನ್ನು ಕಾಣಲು ಸಾಧ್ಯ. ಈ ದೃಷ್ಟಿಯಿಂದ ಸ್ಥಳನಾಮಾಧ್ಯಯನದಲ್ಲಿ ಜನಪದ ಕಥೆಗಳಿಗೆ ತನ್ನದೇ ಆದ ಮಹತ್ವವಿರುವುದನ್ನು ಕಾಣಬಹುದು.

೧. ಹುಡುಗನ ಮದುವೆ[೪೭]

'ಒಂದುಡುಗುನ್ನೆ ಲಗ್ನ ಮಾಡ್ಬೇಕು ಅಂತ ಕೇಳ್ದೆ. ಉಡುಗುನ್ನೆ ಉಡುಗಿ ಇಲ್ವೆ ಎಂಗೆ ಲಗ್ನ ಮಾಡೋದು ಅಂದ್ರು. ಉಡುಗಾ ಉಟ್ಬುದ್ ವಿಚಾರ ಹೇಳ್ತೀನಿ ಕೇಳಿ. ಉಡುಗಾ ಉಟ್ಬುದ್ **ವಡೇಗಾಲ**, ಬೆಳೆದದ್ದು **ಬೆಳಕೋಡಿ**, **ವಡಕೆ ದೊಡ್ಡೀ**ಲಿ ವಡದಾರ ಹಾಕ್ಕೊಂಡು, **ಸೆಟ್ಟಳ್ಳೀ**ಲಿ ಶರಟಾಕ್ಕೊಂಡು, **ತ್ವಾಟಳ್ಳೀ**ಲಿ ಕೋಟಾಕೊಂಡು, **ಕಚ್ಚನಳ್ಳೀ**ಗ್ ಬಂದು ಕಚ್ಚೆ ಹಾಕ್ಕೊಂಡು **ದಾಸನ್ದೊಡ್ಡಿ**ತನಕ ಹೋಗಿ ದ್ವಾಸೆ ಆಕುಸ್ಕೊಂಡು, **ಚೊಟ್ನಳ್ಳೀ**ಲಿ ಚೊಟ್ನೆ ಆಕುಸ್ಕೊಂಡು, **ಬಾಣ ಸಮುದ್ರ**ದ್ ತಾವು ಬಾಯ್ಗಾಕೊಂಡು, **ಕಡುಬೂರ್** ತಾವು ಕೈ ತೊಳಕೊಂಡು, ಬಂದೆನೋಡಿ.

ಅಂಗರಾಪುರುಕ್ಕೋಗಿ ಉಂಗ್ರಾ ಅಕ್ಕೊಂಡು, **ಚತ್ರ**ಕ್ಕೋಗಿ ಚತ್ರಿ ತಕ್ಕೊಂಡು ಒಂಟೇ ನೋಡಿ. **ದೊಡ್ಡಾಬಳ್ಳಾಪುರು**ದ್ಕಡಿಂದ ಒಂದುಡ್ಗಿ ಆದಿ ಕೇಳ್ಕೊಂಡು ಬರ್ತಿತ್ತು. ಪಟ್ಟಂತ ನೋಡ್ದೆ ಚಟ್ಟಂತ್ ನಿಂತ್ಕೊತ್ತು. ನಿನ್ನೆಸ್ರೇನೆ ಉಡ್ಗಿ ಅಂದೆ. ಅಪ್ಪ್ರಲ್ಲಿ ಎಚ್ರುಸ್ಕೊಂಡು ಚಂಗಾಬಿಂಗಿ ಅಂತು. ನಿನ್ನ್ ಎಸ್ರೇನೂ ಉಡ್ಗ ಅಂದ್ಲು. ಅಪ್ಪ್ರಲ್ಲಿ ನಾನೆಚ್ರುಸ್ಕೋಂಡು ಗಂಡಾಗುಂಡಿ ಅಂದಿ. ಗಂಡಾಗುಂಡಿಗು ಚಂಗಾಬಿಂಗಿಗು ಸರೋಯ್ತುದೆ. ಅದ್ಕಂದು **ಸಾತ್ನೂರೋ**ರು ಸಾಸ್ತ್ರಕೋದ್ರು **ಬೊಪ್ಪಣ್ಣಪುರ**ದೋರು ಒಪ್ಪಂದಕ್ಕೋದ್ರು. ಅಪ್ಪಾ್ರಲ್ಲಿ ನಾನು **ಅಕ್ಕೂರ್**ಗ್ಹೋಗಿ ಅಕ್ಕಿ ಮೂಟೆ ಅಕ್ಕೊಂಡು, **ಬ್ಯಾಡ್ರಳ್ಳೀ**ಗೋಗಿ ಬ್ಯಾಳೆಮೂಟೆ ಅಕೊಂಡು, **ಉಣಸೂರ್**ಗ್ಹೋಗಿ ಉಣ್ಣೇ ಹಣ್ಣಾಕ್ಕೊಂಡು, **ಉಪ್ಪ್ವನ್ಗಟ್**ಕ್ಕೋಗಿ ಉಪ್ಪ್ವನ್ಮೂಟೆ ಆಕ್ಕೊಂಡು, **ಸಾನ್ಭೋಗನಹಳ್ಳಿ**ಗೋಗಿ ಮೆಣಸಿನಕಾಯಿನ್ ಪುಡಿ ಆಕ್ಕುಂಡು, ಬಂದೆ ನೋಡಿ.

ಅಪ್ಪ್ರಲ್ಲಿ ಉಡ್ಗಿ **ಸಿವ್ನಳ್ಳಿ**ಗೋಗಿ ಸೀರೆ ಆಕ್ಕಂಡು, **ರಾಂಪುರ್**ಕ್ಕೋಗಿ ರವ್ಕೆ ಅಕ್ಕಂಡು, **ಆಗ್ಲಳ್ಳೀ**ಗೋಗಿ ಅರುಷ್ಣ ಆಕ್ಕೊಂಡು, **ಯಡಮಾರ್ನಳ್ಳೀ**ಲಿ ಯಣ್ಣೆ ಈಸ್ಕೊಂಡು, **ಬಣಚನಳ್ಳೀ**ಲಿ ಬಾಚಣ್ಣೆ ತಕೊಂಡು, **ಕೆರಕೋಡ್** ತಾವು ಕರಾಪ್ ತಕಬತ್ತು ನೋಡಿ.

ಅಷ್ಟ್ರಲ್ಲಿ ಮಂಚನಳ್ಳಿಯೋರು ಮಿಂಚು ಮಾಡ್ಸುದ್ರು. ತಳಕಾಡ್ನೋರು ತಾಳಿ ಮಾಡ್ಸುದ್ರು. ವಡೇರಹಳ್ಳಿಯೋರು ವಾಲೆ ಮಾಡ್ಸೂದ್ರು. ದೊಡ್ಡೇಗೌಡುನ್ದೊಡ್ಡಿಯಿಂದ ಡೋಲ್ನೋರು ಬಂದ್ರು. ಪಾಲಳ್ಳಿಯಿಂದ ಪದ್ದೋರ್ ಬಂದ್ರು. ವಾಚ್‌ಮನ್ ದೊಡ್ಡಿಯಿಂದ ವಾದ್ದೆದೋರ್ ಬಂದ್ರು. ಇಲ್‌ವಾಲ್‌ದೋರ್‌ಗಿಸ್ತ್ರೇಗೇಳಿ ತಗಡೇಗೌಡುನ್ ದೊಡ್ಡಿಯೋರು ತಂದೇಬುಟ್ರು ನೋಡಿ.

ಅಷ್ಟ್ರಲ್ಲಿ ಎಲೇದಳ್ಳಿಯೋರು ಎಲೆ ಆಕಿದ್ರು, ನೀಲಕಂಟನಹಳ್ಳಿಯೋರು ನೀರಾಕುದ್ರು. ಹನ ಕೆರೆಯೋರು ಅನ್ನ ಆಕದ್ರು. ಸಾತ್ನೂರೋರು ಸಾರು ಬುಟ್ರು. ಪಾಳ್ಯೇದೋರ್ ಪಾಯ್ಸಬುಟ್ರು. ಏಳ್ಗಳ್ಳಿಯೋರು ಬಂದು ಏಳ್ಸ್‌ಬುಟ್ರು. ವಳಗಾರಹಳ್ಳಿಯೋರು ಬಂದು ಓಡುಸ್ಬುಟ್ರು. ತಾರೆಪುರದೋರು ಬಂದು ಕಟ್ಟಣ್ಣ ತಾಳಿ ಅಂದ್ರು. ಕಟ್ಬುಟ್ಟೆ ನೋಡಿ.

ಮುಡುಕ್ತೊರೆ ಮೂಗ್ತೂರು ತೇರಾಯ್ತದೆ ಅಂದ್ರು. ಎಣ್ಣು ಗಂಡು ಅಣ್ಣು ಜವ್ನ ಎಸೀಬೇಕು ಅಂದ್ರು. ಎದ್ದೋರೆದ್ದಂಗೆ ಒಂಟೊ ನೋಡಿ. ದೊಡ್ಡಪುರುತ್ತಕೋಗೋತ್ಗೆ ಎಣ್ಣು ದೊಡ್ಡಾಯ್ತು. ಸೋಮ್ನಳ್ಳಿ ತಕೋಗೊತ್ಗೆ ಸೋಬನ್ಕೆ ಸೂರೂ ಮಾಡುದ್ರು. ಜೋಬೇಲಿ ಮೂರ್ಕಾಸಿಲ್ಲ ನೋಡಿ. ಆಲ್ಸೂರೋರು ಆಸೇಮಣೆತಂದ್ರು, ವಸ್ಕೂರೋರು ವಸ್ಕೆ ಆಕ್ಬುಟ್ರು. ಮಳವಳ್ಳೀಲಿ ಮನುಗ್ಬೊ ಸಂತೆ ಗಲಾಟೆ ನಿದ್ದೆ ಬರ್ನಿಲ್ಲ ನೋಡಿ. ಎದ್ದೋರೆದ್ದಂಗೆ. ಒಂಟೊನೋಡಿ, ಮುಟ್ನಳ್ಳಿ ತಕೋಗೊತ್ಗೆ ಮುಟ್ ನಿಂತ್ಕೊತ್ತು. ಬನ್ನೂರ್ತಕೋಗೋತ್ಗೆ ಎಣ್ ಬಿಮನ್ಸೆ ಆಯ್ತು ನೋಡಿ, ವರಂದ್ಯಾಸ್ನಳ್ಳಿ ತಕೋಗುತ್ಗೆ ಎರ್ಗೆ ಆಯ್ತು.

ಎಗ್ನೋಡಿಯೋರು ಎಣ್ಣು ಅಂತ ಗಗ್ನೋಡಿಯೋರು ಗಂಡು ಅಂತ ಮಂಡಿ ಉದ್ದ ನ್ಯಾಯಬಿಳ್ತು ನೋಡಿ. ಪರಿಕ್ಸೆ ಮಾಡ್‌ನೋಡೋದ್ರಲಿ ಗಂಡ್ಮಗ. ಮಗೀಗೆ ನಾಮ್ಕರ್ಣ ಮಾಡ್ಬೇಕೂಂತ ರಾಗಿಪುರದ ರಾಮಯ್ಯನ ಕರಸಿ ಮಗೀಗೆ ನಾಮ್ಕರ್ಣ ಮಾಡ್ಸಿ ಹನಕೆರೆ ಆರುವಯ್ಯನ್ನ ಇಡ್ಸು ಅಂಗಾಮಿ ಜಮೀನು ಆರೆಕ್ರೆ ಬರ್ಸಿ ಪಾಲಳ್ಳಿಯೋರು ಪಟ್ಟೆ ಮಾಡುದ್ರು. ಉಯ್ಯಂಬಳ್ಳಿಯೋರು ಬಂದು ಉತ್ಕೋಉಟ್ರು. ತೆಂಕ್ಲೋರು ತೆವ್ರಿ ಆಕುದ್ರು, ನೆಟ್ಕಲ್ಲೋರು ನೆಟ್ಬುಟ್ರು ಕರ್ಲಳ್ಳಿಯೋರು ಕಳೆ ಕಿತ್ಬುಟ್ರು. ಕೂಡ್ಲೂರೋರು ಬಂದು ಕೂದ್ಬುಟ್ರು. ವರಗಾರಳ್ಳಿಯೋರು ಬಂದು ವರೆ ಕಟ್ಬುಟ್ರು. ಬಡಗ್ಲೋರು ಬಂದು ಬಿಡುದ್ಬುಟ್ರು. ಅಲಸಳ್ಳಿಯೋರು ಅಳುದ್ಬುಟ್ರು. ತಮ್ಮುಕ್ರೋರು ಬಂದು ತುಂಬ್ಕೊಂಡೊಂಟೋದ್ರು. ಕಿರುಗಾಲ್ದೋರು ಕಿತ್ತಾಟುಕ್ಬಂದ್ರು. ಸೂರ್ನಳ್ಳಿಯೋರು ಸುತ್ಕೊಂಡು ಸಂಬೇಗೋಡುನ್ ದೊಡ್ಡಿಯೋರು ಸಮ್ಮಾಸೀಗ್ಬಂದ್ರು ನೋಡಿ.

೨. ಕಬ್ಬಾಳು ಕುಳಿಯಲ್ಲಿ ಹುಲಿ[೪೮]

ಒಂದೂರ್ನೇಲಿ ಒಬ್ಬ ದೊಡ್ ಗೌಡ. ಆ ಗೌಡ್ನಟ್ಟಿವಳ್ಗೆ ನೂರ್ಕಾಲ್ನಡೆ ಆಡವೆ. ಈ ಮುತ್ರಾಯ್ನ್‌ಗೆ ಅಂತೇಳಿ ಒಂದು ವಾತನ್ಬುಟ್ಟಿರು. ಅರ್ಕೆವಾತ. ಆ ವಾತ್ನರ್ಕೆ ಇವ್ರು ಮಾಡ್ನೇ ಇಲ್ಲ. ಒಂದತ್ಸೊರ್ಸ ನಿಂತೋಗ್ಬುಡ್ತು ಈ ವಾತ.

ಒಂದಾನೊಂದಿಸ ಕಾಡ್ಗೆ ಈ ಮುನಿಕಲ್ ಬೆಟ್ಟಂತ ಬೆಟ್ಟುಕ್ಕೆ ಮೆಯ್ಸಾಕೋಗಿದ್ದ ಗೌಡ. ದೊಡ್‌ದಾದ ಮಳೆ ಬಂದ್ಬುಡ್ತು. ಈ ವಾತ ಓದ್‌ಟೇಮ್ಗೆ ಹುಲಿ ಗವೀಲಿರ್ನಿಲ್ಲ, ಎಲ್ಲೋ ಬೇರೆ ಕಡೆ ವಟ್ಟೆ ಪಾಡ್ಗೋಗಿತ್ತು. ಆ ಗೌಡ ಆಡ್ಗೋಳ್ನೆಲ್ಲ ಕಡುಸ್ಕಂಡಿ ಮನೇಗ್ಬಂದ್ಬುಟ್ಟ. ಈ ವಾತ ಗವೀಲೇ ನಿಂತ್ಬುಡ್ತು.

ಆ ಹುಲಿ ಸಾಯಂಕಾಲ ಮನೇಗ್‌ಬತ್ತು. ಈ ವಾತ ಗಲೀಲೆಲ್ಲ ತಿರ್ಗಾಡ್ತಾದೆ. ಆ ವಾತುನ್ ಕಾಲುನ್‌ಸಬ್ಬ ನಟಕ ನಟಕಾ ನಟುಕುನ್ ಸಬ್ಬ ಆಯ್ತಾದೆ. ಈ ಹುಲಿಗೆ ಕೇಳುಸ್ಬುಡ್ತು ಸಬ್ಬ. 'ಎಲ ಎಲಾ ಏನಿವತ್ ನನ್ ಗವಿವಳಗೆ ಯಾರೋ ಬಂದ್ ಸೇರ್ಕಂಬುಟ್ಟುವ್ರಲ್ಲಾ' ಅಂತೇಳಿ ಹುಲಿ ಬಯಿಷ್ಟ್ವಾಗೋಯ್ತು. ಬಯಿಸ್ಟಾಗ್ಬುಟ್ಟು 'ಓಹೋ ನಾನು ಬ್ಯಾರೆಗವಿ ನೋಡ್ಕೋಬೇಕು' ಅಂದ್ಕಂತು. ಅದೇನ್ ವಿಚಾರ್ಸ್‌ಬುಟ್ಟು ಒಂಟೋಗುವ ಅಂದ್ಬುಟ್ಟು ಅಲ್ಲೇ ನಿಂತ್ಕತ್ತು, ಒಂದ್‌ಮಾತ್ ಕೇಳ್ಬುಟ್ಟೊಂಟೋಗುವ ಅಂತ.

'ಯಾರ್ ನನ್ ಗವಿವಳಗೆ' ಅಂತ ಕೇಳ್ತು. ಓಹೋ ಹುಲಿ ಬಂದ್ಬುಡ್ತು ಅಂತ ವಾತಾನ್ಗೂ ಬಯ್ವಾಯ್ತು. 'ನೀನ್ಯಾರು?' ಅಂತು ವಾತ. 'ನಾನೇಳ್ಬೇಕೆ?' 'ಊ' 'ನಾನು ಹುಲ್ರಾಜ' 'ನಾನೇಳ್ಬೇಕೆ?' ಅಂತ ವಾತ ಕೇಳ್ತು. 'ಊ' ಕೆಂಜರ್ಗಣ್ಣ ಕೆನಿಮೀಸ್ರಾಯ ಹುಲಿ ಹುಬ್ ಕಿತ್ತೇನು, ಕರಡಿ ಕಣ್ ಕಿತ್ತೇನು ಕಾಡೆಮ್ಮೆ ಕೊಂಬುನ್ಮೇಲೆ ಉಯ್ಯಾಲೆ ಆಡ್ವಂತ ಡೀಕ್ ಬಸ್ವ' ಅಂತು ವಾತ. ಈ ಮಾತ್ಕೇಳ್ಬುಟ್ಟು ಹುಲಿ 'ಹೀ' ಅಂತ ಹೂಕುರ್ಸ್ ಬುಟ್ಬುದು ದಿಕ್ಕೆಟ್ಟು ಓಡ್ಬುಡ್ತು. ಆ **ಮುನಿಕಲ್ ಬೆಟ್ಟಂ**ತಾ ಮನೇ ಬುಟ್ಬುಟ್ಟು ಈ **ಕಬ್ಬಾಳ್‌ಬೆಟ್ಟ** ನೆಗೆದು **ತೈಲೂರ್‌ಬೆಟ್ಟ** ನೆಗೆದು **ಬಸವುನ್ ಬೆಟ್ಟ**ಕ್ಕೋಗಿ ಸೇರ್ತು.

ಆ **ಬಸವುನ್‌ಬೆಟ್ಟ** ಸೇರಿ ಅಲ್ಲಿ ಉಸುರುಯ್ಕೊಂಡ್ ಕುಂತಿದ್ದಾಗ ಅಲ್ಲಿ ಬಂದ್ ನರಿಬತ್ತು ಅಡ್ಡಾಗಿ 'ಯೋ' ಉಲ್ಬಾವ, ಏನೋ ಈ ಪಾಟಿ ಉಚ್ಕಂಡ್ ಈ ಪಾಟಿ ನಗುರ್ಕಂಡು?' ಅಂತ ನರಿ ಕೇಳ್ತು. 'ಅಷ್ ಏನೋ ನರ್ಬಾವ, ನಾನು ಬದುಕುದ್ದೆಚ್ಚು ಕನೋ' ಅಂತ ಕಷ್ಟ ಹೇಳ್ತದೆ ಹುಲಿ. 'ಏನಯ ಉಲ್ರಾಜ, ನಿನ್ನೋಡೇ ಪರ್ಪಂಚ ಎದುರ್ಕೊತಾ ಕುಂತದೆ, ನೀನ್ಯಾಕಯ್ಯ ಇಷ್ಟ್ ನಡುಗ್ತಾ ಇದ್ದಿ?' ಅಂತ ನರಿ ಹೇಳ್ತದೆ, ಅಂಗಲ್ಲಕನೊ ನರ್ಬಾವ, ನನ್ ಗವಿವಳಗೆ ಯಾರೋ ಬಂದ್ ಸೇರ್ಕಬುಟ್ಟವ್ರೆ, ಯಾರು ಗವಿವಳಗೆ ಅಂತ ಕೇಳುದ್ರೆ ನೀನ್ಯಾರು ಅಂತದೆ. ನಾನು ಉಲ್ರಾಜ ಅಂತೇಳ್ದೆ ಕನೊ. ನಾನೇಳ್ಬೇಕೆ ಅಂತು. ಊ ಅಂದೆ ಅಂಜುರ್ಗಣ್ಣ ಕೆಮ್ಮೀಸ್ರಾಯ ಉಲಿ ಬಟ್ ಕಿತ್ತೇನು ಕರಡಿಕಣ್ ಕಿತ್ತೇನು ಕಾಡೆಮ್ಮೆ ಕೊಂಬುನ್ ಮೇಲೆ ಉಯ್ಯಾಲೆ ಅಡ್ವಂತ ಡೀಕ್ ಬಸವ ಅಂತು ಕನಪ್ಪ. ನನ್ಗೆ ಬಯಕಂರ ಅತ್ಕಂಬುಟ್ಟು ಆ ಬೆಟ್ಟ ಈ ಬೆಟ್ಟ ಬಿಡ್ ಬಂದು ಇಲ್ಲಿ ಸುದ್ರಾಯ್ಸ್‌ಕತಾ ಕೂತಿವ್ನಿಕನೊ ನರ್ಬಾವ' ಅಂತ ಅದ್ರ್ ಕಷ್ಟ ಹೇಳ್ತದೆ. 'ಅಯ್ಯೋ ಹುಚ್ಚಪ್ಪ. ಏನಯಾ ಗವಿವಳಗೆ ಯಾರಿತ್ತು ಏನಿತ್ತು ಅಂತ ನೋಡೂಕಿಲ್ವೆ ಕೇಳೂಕಿಲ್ವೇನಯಾ. ಈ ಪಾಟಿ ಕಾಲೂ ಕೈಗೆಲ್ಲಾ ಉಚ್ಕಂಡು ಬಂದಿದ್ದಿಯಲ್ಲ. ಬಾ ಬಾ ನಾ ಕರ್ಕೊಂಡೊಯ್ತಿನಿ' ಅಂತು. 'ಲೋ ಲೋ ನರ್ಬಾವ ನಾನ್ ಬರೂದಿಲ್ಲಪ್ಪ, ಆ ಮನೆ ಇಲ್ದೆ ಇದ್ರೂ ಹೋಗ್ಲಿ'. ಯೋ ಉಲ್ಬಾವ, ನಿನುಗ್ ಬಯ ಆದ್ರೆ ಈ ಸೂರ್ನಳ್ಳಿ ಹಳ್ಳೇಲಿ ಬೆಳ್ಳುಗ್ಗಿ ಅಂಬವೆ. ಕಿತ್ಕೊಂಬಂದ್ಬುಟ್ಟು ಇಬ್ಬುರ್ ನಡೀಗೂ ಬಿಗ್ಯಾಗ್ ಕಟ್ಬುಡುವ. ಅಲ್ಲಿಗ್ ನಿಮಗ್ ದೈರ್ಯ ಆಯ್ತದೆ. ನಾ ಮಾತಾಡ್ತೀನಿ. 'ಅಂಗಾರ್ ಬತ್ತಿನಿಕನ್ ನಡಿಯೋ ಅಂದ್ಬುಟ್ಟ ಉಲಿ ನರಿ ಜೊತೇಲ್ ಬತ್ತಾದೆ.

ಅದೇ ಅಳ್ಳುಕ್‌ಬಂದ್ರೊ. ನರೀ ನಡೀಗೆ ಹುಲಿ ನಡೀಗೆ ಬಿಮ್ಮುನ್ ಗಂಟಾಕಿ ಕಟ್ಬುಟ್ಬೊ. ನರಿ ಏನ್ ಮಾಡ್ತು. ತಿಕ್ಕೆ ಒಂದ್ ಕಲ್ ಕೊಟ್ಕಂಡು ಕೂತ್ಕಂಡು ಮಾತಾಡುಸ್ತಾದೆ. 'ಯಾರಯ್ಯ ಗವಿಲಿ?' ಅಂತ ಕೇಳ್ತದೆ. 'ನೀನ್ಯಾರು?' ಅಂತ ವಾತ ಗವಿ ವಳುಗ್ ಮಾತಾಡ್ತದೆ. 'ನಾನೇಳ್ಬೇಕೆ?' 'ಊ' 'ಕೆಂಜುರ್‌ಗಣ್ಣ

ಕೆನ್ನೀಸ್ರಾಯ ಹುಲಿ ಹುಬ್ ಕಿತ್ತೇನು ಕರಡಿ ಕಣ್ ಕಿತ್ತೇನು ಕಾಡೆಮ್ಮೆ ಕೊಂಬುನ್ಮೇಲೆ ಉಯ್ಯಾಲೆ ಆಡ್ಪಂತ ಡೀಕ್ ಬಸ್ವ' ವಾತ ಅಷ್ಟಂತು ನೋಡಪ್ಪ, ಹುಲಿ ಬಯಂಕರ ಆಗ್ಬುಟ್ಟು ದಣಾರುನ್ನೆಗ್ಬುದ್ದೆ ಎದ್ಬುಡ್ತು. ಈ ಬೆಟ್ಟ ಆ ಬೆಟ್ಟ ನೆಗೆದು ಬಸ್ವುನ್‌ಕಲ್ ಬೆಟ್ಕೋಗುವತ್ಗೆ ನರಿಕಂತೆ ಪೂರ ಬುಟ್ಬುಟ್ಟದೆ ಆ ಕಲ್ಗೆ ಈ ಕಲ್ಗೆ ತಾಟೊದು.

ಆಗ 'ನರ್ಬಾವ ನೋಡ್ಬೇನೊ ಎಷ್ಟ್ ಗಾಸಿಯಾಯ್ತು' ಅಂತ ಹುಲಿ ಮಾತಾಡ್ತನೆ ಅದೆ. ನರಿ ಸತ್ತೋಗೆಷ್ಟೇ ಹೊತ್ತಾಗದೆ. ಆಗ ನಡಿನಿಂದ ಹಂಬ್ ಬಿಚ್ಚಾಕಿ 'ಅಯ್ಯೋ ಬಡ್ಡೀ ಮಗುನ್ ನರಿಯೆ ಸತ್ತೋಗ್ಬುಟ್ಟ? ಅಂದ್ಬುಟ್ಟು ಹುಲಿ ಒಂದ್ ವರ್ಸ್‌ಕಾಲ ಎಲ್ಲೋ ವಾಸ ಮಾಡ್ಕೊಂಡಿತ್ತು.

ವರ್ಸ ತುಂಬುಸ್ಕಂಡು 'ನೋಡುವ ಈಗ್ಯಾರವ್ರೆ ನನ್ ಗವಿವಳ್ಗೆ' ಅಂತ ನೋಡುವಾಗ್ಗೆ ಗವಿ ವಳಗೆ ಯಾರು ಇಲ್ಲ!

೩. ಒಂದಾಣಿ ಧೀರ[೪೯]

ಒಬ್ಬ ಗೌಡ. ಒಬ್ಬ ಗೌಡ ಆದ್ರೆ ನಾವ್ ಬದ್ಕಿ ಕೆಟ್ಟೋದಂಗೆ ಅವ್ನೂ ಬದುಕ್ತಾ ಇದ್ದು ಕೆಟ್ಟೋಗ್ಬುಟ್ಟ. ಇಂತಾ ದೊಡ್ ಗೌಡ್ನಂತ ದೊಡ್ ಗೌಡುನ್ ಮನೇಲೋಗಿ ಸಂಬ್ಳ ಸೇರ್ಕಂಬುಟ್ಟ. ಅವ್ನುಗೆ ಒಂದ್ ಗಂಡ್ ಮಗ ಆಗಿತ್ತು. ಆ ಮಗ ಹುಟ್ಟ ಮೂರೊರ್ಸ್‌ಕೆ ಎಡ್ತಿ ತೀರೋಗ್ಬುಟ್ಳು. ತಿತೀಗೆ ಅಂತ ಆ ಗೌಡುನ್ತಾವು ಬೇಕಾದಂಗ್ ಸಾಲ ಮಾಡ್ಕಂಬುಟ್ಟ. ಮೂವತ್ತೊರ್ಸ ಸಂಬ್ಳಗೇದ. ಸಾಲ ತೀರ್ಲೇ ಇಲ್ಲ.

ಮಗುನ್ಗೆ ಮದ್ವೆ ಮಾಡೂಕೆ ವೈಸ ಬಂದ್ಬುಡ್ತು. ಅಪ್ಪ ಮಗ ಇಬ್ರೂ ಕುಂತ್ಕೊಂಡ್ರು. 'ಏನಪ್ಪಾ ನಿಂಗೆ ವೈಸ ಬಂದ್ಬುಡ್ತಲ್ಲ. ಮದ್ವೆ ಮಾಡ್ಬೇಕು, ದುಡ್ಡು ಕಾಸ್ಗೆ ಏನ್ ಮಾಡೂದು ಅಂತ ಅಪ್ಪ ಅನ್ನುಸ್ಕೊಂಡೋನು ಕೇಳ್ದ. 'ನನ್ಗೇನಪ್ಪ ಗೊತ್ತಾದದು, ಯಂಗೋ ನಿನ್ ಬುದ್ದಿಕುದ್ದಿ ಮಾಡಪ್ಪ'. ಅಂತ ಮಗ ಹೇಳ್ದ. 'ಮಗಾ ನಿಮ್ಮವ್ವ ಇದ್ದಾಗ ಒಂದಾಣಿ ಗಂಟಾಕ್ ಮಡಗಿದ್ದೆ. ತಕೊ ಈ ಆಣೆಯ ನೀನು ನ್ಯಾಯ್ವಾಗ್ ನನಗುಟ್ಟುದ್ ಮಗ ಆದ್ರೆ ಆ ಒಂದಾಣಿ ತಕ್ಕೊಂಡೋಗಿ ಮದ್ವೆಯಾಗಿ ಎಡ್ತಿ ಕರ್ಕೊಂಡು ಈ ಆಣೇನೂ ಇಂದುಕ್ ತರ್ಬೇಕ್ ಕಣ್ಲ ಮಗ' ಅಂತ ಹೇಳಿ ಆಣೆ ಕೊಟ್ಟ.

ಆ ಒಂದಾಣಿ ತಕೊಂಡು ಇವ್ನ ಒರಟೋದ ಬೇಕಾದಷ್ಟು ದೂರ. ಈ ಗೌರಿ ಹಬ್ಬುದ್ ಕಾಲ ಆ ಊರ್ನೇಲಿ ಒಬ್ಬ ಮಡ್ವಾಳ್‌ಸೆಟ್ಟಿ ಮೈಲ್ಗೆ ಬಟ್ಟೆ ಎಲ್ಲಾ ಎತ್ಕೊಂಡು ಒಗೀತಾ ಅವ್ನೆ ಇಂತಾ ಕೆರೆ ತಾವು. ಆ ಮಡ್ವಾಳೆಸೆಟ್ಟೀ ಎಡ್ತಿ ಬಾಣ್ತಿ. ಹಿಟ್ ತಂಡ್ಕೊಡೂಕಾಯ್ತಿರ್ನಿಲ್ಲ. ಈ ಬಟ್ಟೆ ಬುಟ್ಬುಟ್ಟು ಮನೆಗೋಗಿ ಹಿಟ್ ತಿನ್ಕ ಬರೂವ ಅಂದ್ರೆ ಈ ಬಟ್ಟೆ ಯಾರರ ಒತ್ಕೊರೊ ಒಂಟೋದಾರು ಅಂತ ಹಿಟ್ಟಿಲ್ದೆ ಕೂತವ್ನೆ.

ಆ ಟೇಮ್ಗೆ ಈ ಹುಡುಗ ಏರಿಮ್ಯಾಲೆ ಹೋಯ್ತಾ ಅವ್ನೆ. 'ಏ ಹುಡ್ಗಾ ಯಾವೂರೋ ನೀನು ಬಾಪ್ಪ ಇಲ್ಲಿ' ಅಂತ ಕರ್ದ ಹುಡುಗ ಬಂದ' ಯಾವೂರಯ್ಯ ನೀನು? ಅಂತ ಕೇಳ್ದ ಮಡಿವಾಳ. 'ನಾ ಇತ್ತಾಗ್ ಬೆಂಗ್ಳೂರು ಕನಪ್ಪ 'ಅಂದ ಹುಡುಗ. 'ನಮ್ಮನೇಲಿ ಎಂಗುಸ್ರು ಬಾಣ್ತಿ. ಈ ಬಟ್ಟೆ ಕಾಯ್ಕೊಂಡ್ ಕುಂತ್ಕತಿಯಪ್ಪ ವಸಿ ಇಟ್ಬುಸ್ಕೊ ಬತ್ತಿನಿ ಮನೆಗೋಗಿ?' ಅಂತ ಕೇಳ್ದ ಮಡಿವಾಳ ಸೆಟ್ಟಿ. 'ನೋಡ್ಕೋತೀನಿ ಓಗಯ್ಯ ನಂಗೋಸಿ ಊಟ ತಕಂಬಾ ಬರುವಾಗ' ಅಂದ ಹುಡುಗ. 'ನಿನ್ನೇಸ್ರೇನಪ್ಪ ಮಗ?' ಅಂತ ಕೇಳ್ದ ಅವ್ನ,

'ನನ್ನೆಸ್ರು ನೆನ್ನೆಮೊನೆ ಸಂದೆ ಅಂತ ಕಣಯ' ಅಂದ ಹುಡುಗ 'ಲೋ ಮಗ ನೆನ್ನೆ ಮೊನ್ನೆ ಸಂದೆ, ನಾ ಊಟ ತಂದ್ಬುಡ್ತೀನಿ ನೋಡ್ಕೊ ಇರಪ್ಪ, 'ಅಂದ್ಬುಟ್ಟು ಹೋದ. ಇವ್ನೇನ್ ಮಾಡ್ಬುಟ್ಟ. ಒಂದ್ ಉದ್ದಾದ್ ಬಟ್ಟೆ ಆಸ್ಬುಟ್ಟು, ಒಳ್ಳೊಳ್ಳೆ ಬಟ್ಟೆ ಎಲ್ಲಾನುವೆ ಕಂಟ್‌ಕಟ್ಟಿ ಒತ್ಕೊ ಒಂಟೋದ.

ಆಮ್ಯಾಕಿವ್ನು ಹಿಟ್ ತಕೊಂಬದ್ ನೋಡ್ದ, ಬಟ್ಟೇನೂ ಇಲ್ಲ! ಆಸಾಮೀನು ಇಲ್ಲ, ಆಗ ಬಡ್ಕೋತ್ತಾನೆ 'ನೆನ್ನೆ ಮೊನ್ನೆ ಸಂದೆ ಬಟ್ಟೆ ಎತ್ಕೊ ಒಂಟೋದ್ನಲ್ಲಪ್ಪೋ' ಅಂತ ಊರೋರೆಲ್ಲ ಓಡ್ಬಂದ್ರು. 'ಏನಯ ಮಡ್ವಾಳಪ್ಪ ಏನಯೊ' ಅಂತ ಕೇಳುದ್ರು. 'ನೆನ್ನೆ ಮೊನ್ನೆ ಸಂದೇಲಿ ಬಟ್ಟೆ ಎತ್ಕೊಂಟೋದ ಕಣ್ರಪ್ಪ ಅಂದ ಇವ್ನು. ನೆನ್ನೆ ಮೊನ್ನೆ ಸಂದೇಲಿ ಬಟ್ಟೆ ಎತ್ಕೊ ಓದ್ರೆ ಈವತ್ಯಾಕ್ ಬಡ್ಕೊಂಡೀಯೊ ಬೋಳಿಮಗ್ನೆ' ಅಂತ ನಾಕ್‌ಬುಟ್ರು ಹಿಡ್ಕೊಂಡು. ದಂಡದೋಸ ಕಟ್ಸ್‌ಕಂಡ್ರು ಬಟ್ಟೆಯೋರು.

ಇವ್ನುಒತ್ಕೊ ಓಯ್ತಾವ್ನೆ ಕಾನ್ಕಾನಳ್ಳಿಯಾಚೆ ಗಿಡದಲ್ಲಿ. ಆ ಗಿಡದೊಳುಕ್ ಓಗೂವತ್ಗೆ ಸಾಕಾಗೋಯ್ತು. ಹೊಟ್ಟೆಗೆ ಅನ್ವಿಲ್ಲ. ಮಡಿಕೊಂಡು ಕುತ್ಕೊಂಡ. ಕಾನ್ಕಾನಳ್ಳಿ ಕಡೆಯೋನೊಬ್ಬ ಕ್ಯಾಮ್ಸ್‌ಸೆಟ್ಟಿ ಕುದ್ರೆ ಮ್ಯಾಲೆ ಬಂದ್ ಕಂಡ್ಗ ಅಣ ಅಕ್ಕಂಡು ಗಟ್‌ಕೋಯ್ತಾವ್ನೆ. ಅವನ್ಗೆ ಕಕ್ಸುಕ್ಕೋಗ್ಬೇಕು. ಅಜೆಂಟು, ನೀರಿಲ್ಲ. ಆ ಉಡುಗುನ್ತಕ್ ಬಂದು ಕುದ್ರೆ ಇಳುಗ್ದ. 'ಲೋ ಮಗಾ ಯಾವೂರಪ್ಪ' ಅಂದ 'ನಾ ಇತ್ತಾಗ್ ಮೈಸೂರು ಕನಯ' ಅಂದ ಹುಡುಗ. 'ನಿನ್ನೇಸ್ರೇನಪ್ಪ?' 'ನನ್ನೆಸ್ರು ಅಳೇಸಾಲ ಅಂತ ಕಣಯ' ಅಂದ 'ಲೋ ಮಗಾ ಅಳೇಸಾಲ' ಈ ಕುದ್ರೆ ಇಡ್ಕೊ ಕುಂತ್ಕಂಡಿಯಪ್ಪ ವಸಿ ನೀರ್ತಕೋಗಿದ್ಬತ್ತೀನಿ' ಅಂದ್ಬುಟ್ಟು 'ನೀರೆಲ್ಲಿದ್ದಾವು?' ಅಂತ ಕೇಳ್ದ ಸೆಟ್ಟಿ ನೋಡಯಾ ನೀರ್ ಅಲ್ ಕಾಣು ಬೋಳರೆ ಮ್ಯಾಲವೆ ಅಂತ ಬೆಟ್ ತೋರ್ಸ್ದ. ಇವ್ನ್ ಕೈಲಿ ಕುದ್ರೆ ಕೊಟ್ಬುಟ್ಟು ಬೋಳರೆ ಮ್ಯಾಕ್ಕೋದ ಸೆಟ್ಟಿ.

ಅವ್ನು ಯಾವಾಗ ಬೋಳರೆ ಮ್ಯಾಕ್ಕೋದು, ಇವ್ನು ಮೂಟೇನೂ ಕುದ್ರೆ ಮ್ಯಾಲೆ ಎತ್‌ಮಡಿಕೊಂಡ. ಕುದ್ರೆಮ್ಯಾಕ್ಕೆ ಇವ್ನೂ ಕುಂತ್ಕೊಂಡ, ಲಗಾಮ್‌ಜಡ್ದ. ಒಂಟೋದ ಒಂದಿಪ್ಪತ್ತೈದು ಮೈಲಿ ಪಾರ್ಸು ಇಂದುಕ್ಕೆ ತಿರಿಕಂಡು.

ಆ ಸೆಟ್ಟಿ ಅಲ್ ತಿರ್ಗಿ ಇಲ್‌ತಿರ್ಗಿ ಅವ್ನಿದ್‌ಜಾಕ್ ಬಂದ್ ನೋಡ್ದ. ಕುದ್ರೇನೂ ಇಲ್ಲ ಇವ್ನೂ ಇಲ್ಲ. 'ಅಯ್ಯಯ್ಯಪ್ಪ ಇನ್ನೇನಪ್ಪ ನನ್‌ಗತಿ ಅಳೇಸಾಲ ಬಂದ್ ಕುದ್ರೆವಡ್ಕೊ ಒಂಟೋದ್ನಲಪ್ಪ' ಅಂತೇಳಿ ಲಬ್ಬ ಲಬ್ಬುನ್ ಬಾಯ್‌ಬಡ್ಕೊತಾನೆ. ಅಲ್ ಕಾಡ್ನೇಲಿ ದನಕರ ಮೆಯ್ಸೋರೆಲ್ಲ ಓಡ್ಬಂದ್ರು 'ಏನಯ ಏನಯ' ಅಂತ. 'ಅಯೋ ಅಳೆಸಾಲ ಬಂದ್ ಕುದ್ರೆ ವಡ್ಕೊ ಒಂಟೋದ ಕಣಯಾ ಇನ್ನೇನ್ ಗತಿ ಅಂತಾನೆ. 'ಯೋ ಓಗಯ ಯಾಕ್ ಬಡ್ಕೊಂಡೀಯ. ಅಳೇಸಾಲ ಬಂದ್ ಕುದ್ರೆ ವಡ್ಕೊ ಓದ್ರೆ, ಕೊಟ್ ಸಾಲ ತೀರೊಯ್ತು ಓಗಯ' ಅಂದ್ರು ಅವ್ರು.

ಸರಿ, ಅಲ್ಲಿಂದ್ ಬುಟ್ಬುದ್ದೆ ಕಾನ್ಕಾನಳ್ಳಿ ವಳಿತಿಬ್ಬ ಓಯ್ತಾ ಅವ್ನೆ ಬಟ್ಟೆಗಂಟು ಅಣ ಕುದ್ರೆ ಎಲ್ಲಾ ವಡ್ಕಂಡು ಕಾನ್ಕಾನಳ್ಳಿ ವಳೆತಾವು ನಿಂತ. ವಳೆನೀರ್ ಜಾಸ್ತಿ ಓಗೂಕೆ ಬರೂಕೆ ಆಯ್‌ಗಡ ಇಲ್ಲ. ಅಲ್ಲೊಬ್ ಮುದ್ಕಿ, ಜೊತೇಲಿ ಒಬ್ಳು ಮಗ್ಳು. ಆ ಮುದ್ಕೀನೂ ಅವ್ಳ್ ಮಗಳ್ನೂ ಆಚೇ ಕಡೆ ಬುಟ್ಕೊಡುಕೆ ಒಬ್ರೂ ಇರ್ನಿಲ್ಲ. ಇವ್ನು ಕುದ್ರೆ ವಡ್ಕೊಂಡು ಅಲ್ಲೋದ 'ಅಯೋ ಮಗಾ ಯಾವುರಪ, ನಿನ್ನೇಸ್ರೇನಯ' ಅಂತ

ಕೇಳುದ್ನು ಮುದ್ಕಿ 'ಮೋ ನನ್ನೆಸ್ರು ಮಗುಳ್ಗಂಡ' ಅಂದ. 'ಲೋ ಮಗ ಮಗುಳ್ಗಂಡ, ನನ್‌ಮಗುಳ್ ತಕೋ ಓಗಿ ಆಚೆ ಬುಟ್ಕೊಡು, ಅಂಗೇ ನನ್ನೂ ತಕೋ ಓಗಿ ಬುಟ್ಬುಡಪ್ಪ' ಅಂತ ಕೇಳುದ್ನು ಮುದ್ಕಿ. 'ಮೋ ಮೊದ್ಲು ನಿನ್ ಮಗುಳ್ ಕುಂದುರ್ಸ್ನಿ. ಆಚೆ ಕಡೆ ತಕೊ ಹೋಗಿ ಬುಟ್ಬುಟ್ ಬತ್ತಿನಿ, ಆ ಮೇಲ್ ನಿನ್ ಕರ್‍ಕೊ ಓಯ್ತೀನಿ' ಅಂದ. ಅಂಗೇ ಮಾಡಪ್ಪ ಮಗುಳ್ಗಂಡ' ಅಂತೇಳಿ ಮಗುಳ್ನೆತ್ತಿ ಕುದ್ರೆ ಮೇಲ್ ಕುಂದ್ರುಸ್ಬುಟ್ಟು. ಅವ್ನು ಆ ಮಗುಳ್ ಸಾಗುಸ್ಕಂಡಿ ವಳಿಂದಾಚ್ಕೊಂಟೋದ ಅವ್ನು.

ವಳಿಂದಾಚ್ಕೊಗಿ ಏನ್ ಮಾಡ್ದ. ಕಮ್ಚಿಮೇಲರ್ಡ್ ಒಡ್ದ ಕುದ್ರೇಗೆ. ಅದು ನಾಗಾಲ್ ಮೇಗಾಲ್ ಬಿದ್ಬುಡ್ತು. 'ಅಯ್ಯಯ್ಯೋ ಇನ್ನೇನ್ ಗತಿಯಪ್ಪ ಮಗುಳ್ಗಂಡ ಮಗುಳ್ ಕರ್‍ಕೊ ಒಂಟೋದ್ನಲ್ಲಪ್ಪೊ ಮಗುಳ್‌ಗಂಡ ಮಗುಳ್ ಕರ್‍ಕೊ ಒಂಟೋದ್ಲನ್ನಪ್ಪೊ' ಅಂತ ಬಾಯ್‌ಬಾಯ್ ಬಡ್ಕೋತಾವ್ಳೆ, 'ಯಾಕಮ್ಮ ಮುದ್ಕಮ್ಮ ಅಂತ ಕೇಳ್ತಾರೆ ಜನ. 'ಅಯ್ಯೋ ಮಗುಳ್ಗಂಡ ಮಗುಳ್‌ಕರ್‍ಕೊ ಒಂಟೋದ್ನಲ್ಲಪ್ಪೆ ಇನ್ನೇನು ಗತಿಯಪ್ಪ' ಅಂತ ತಿರ್‍ಗ ಬಂಡ್ಕಂಡ್ಳು. 'ಅಲ್ಲ ಕಣಮ್ಮ ಮಗುಳ್ಗಂಡ ಮಗುಳ್ ಕರ್‍ಕೊ ಓದ್ರೆ ನಿಂಗೇನಮ್ಮ? ಕೊಟ್‌ಮನೇಲ್ ಬಾಳೂಕಿಲ್ವೇನಮ್ಮ ಹೆಣ್ಮಕ್ಳು? ಓಗಮ್ಮ ಓಗಮ್ಮ' ಅಂತ ಮುದ್ಕಿಗೇ ಬೋದ್ರು ಎಲ್ಲಾ.

ಈಗ ಈ ಉಡ್ಗ ಇದ್ದೋನು ಅಪ್ಪ ಇದ್ದೂರ್‍ಗೆ ಕುದ್ರೆ ಬಟ್ಟೆ ಅಣ ಎಲ್ಲಾ ತಕೊಂಡು ಓದ. ಅಪ್ಪುನ್ ಕರ್‍ದು. 'ನೋಡಪ್ಪ ನೀನ್ ಕೊಟ್ಟಿರು ದುಡ್ ತಂದಿವ್ನಿ. ಒಂದ್ಕಂಡ್ಗ ಅಣಾನು ತಂದಿವ್ನಿ. ನಿನ್‌ಗಾಗುವಂತ ಸೊಸೇನೂ ತಂದಿವ್ನಿ. ನೀನ್ ಸಾಯೂಗಂಟ ಆಗೂ ಬಟ್ಟೇನೂ ತಂದಿವ್ನಿ ನೋಡಪ್ಪ, ಅಂತ ಹೇಳ್ದ. ಆ ಅಪ್ಪ ಸಂತೋಸ ಬಿದ್ದು, ಅದೇ ಎಣ್ಣ ತಿರ್‍ಗ ಮದ್ವೆ ಮಾಡಿ, ತನ್ ಕಣ್ಣಾರೆ ಮದ್ವೆ ನೋಡಿ ಎಲ್ಲಾರು ಸ್ವಂತ್ವಾಗಿ ಬುದುಕ್ತಾ ಇದ್ದಾರಂತೆ.

ಕ್ಯಾತನಹಳ್ಳಿ ರಾಮಣ್ಣನವರು ೧೯೭೭ರ ಅಕ್ಟೋಬರ್ ತಿಂಗಳಿನಲ್ಲಿ ಕನಕಪುರ ತಾಲೂಕಿನ ಕಬ್ಬಾಳು ಬಳಿಯ ಸೂರ್‍ನಹಳ್ಳಿ ಅತ್ತಿಳ್ಳಿ, ದೊಡ್ಡಾಲಹಳ್ಳಿ ಗ್ರಾಮದ ಜೊತೆಗೆ 'ಕಬ್ಬಾಳು ಕುಳಿ' ಎಂದು ಗುರುತಿಸಲಾಗುವ ಕಬ್ಬಾಳು, ಕಂಸಾಗರ, ಅತ್ತಿಹಳ್ಳಿ, ಹುಚ್ಚೇಗೌಡನದೊಡ್ಡಿ, ಸೂರ್‍ನಹಳ್ಳಿ, ಕಚುವನಹಳ್ಳಿ, ಅರೆಹೊಸಳ್ಳಿ, ವಡೇರಹಳ್ಳಿ, ಎಲವಳ್ಳಿ, ಗೇರಳ್ಳಿ, ಅರೆಕಟ್ಟೆದೊಡ್ಡಿ, ದಾಳಿಂಬ ಮುಂತಾದ ಈ ಊರುಗಳು ಕುಳಿಯಲ್ಲಿವೆ. ಈ ಕಥಾ ಸಂಗ್ರಹದಲ್ಲಿ "ಅರುವತ್ತೊಂಬತ್ತು ಊರುಗಳ ಹೆಸರುಗಳು ಬರುತ್ತವೆ. ಅವುಗಳಲ್ಲಿ ಎರಡು ಸಲ ಉಚ್ಚರಿಸಲ್ಪಟ್ಟವು ಕೇವಲ ಮೂರು. ತುಮಕೂರು, ಕನಕಪುರ, ಹುಣಸೂರು, ತಿರುಮಕೂಡಲ, ನರಸೀಪುರ, ಶ್ರೀರಂಗಪಟ್ಟಣ ಮುಂತಾದ ತಾಲೂಕುಗಳ ನಡುವೆ ಇಲ್ಲಿನ ಪ್ರಯಾಣ ಸಾಗಿದೆ"[೨೦] ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಜಾನಪದೀಯವಾಗಿ ಒಂದು ಕಾಲಕ್ಕೆ ಮಲವಳ್ಳಿ ತಾಲೂಕಿಗೆ ಸೇರಿದ್ದ ಈ ಕಬ್ಬಾಳುಬೆಟ್ಟ ಅಥವಾ ಕಬ್ಬಾಳುದುರ್ಗ ಇಷ್ಟೆಲ್ಲ ಮಹತ್ವ ಪಡೆದಿರುವುದರಿಂದಲೇ ಆ ಪ್ರದೇಶ ಕಬ್ಬಾಳು ಕುಳಿಯೆಂದು ಪ್ರಸಿದ್ಧವಾಗಿದೆ.

೭.೪. ಗಾದೆ ಮತ್ತು ಸ್ಥಳನಾಮಗಳು

'ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ' ಎಂಬ ಲೋಕೋಕ್ತಿಯನ್ನು ಗಮನಿಸಿದರೆ; ಒಂದು ದೃಷ್ಟಿಯಲ್ಲಿ ವೇದಕ್ಕಿಂತಲೂ ಶ್ರೇಷ್ಠವಾದದು, ಮಿಗಿಲಾದದು ಗಾದೆ ಎಂಬುದು ನಮ್ಮ ಜನಪದರ ಅಭಿಪ್ರಾಯವಾಗಿದೆ.

ವೇದ ಕೆಲವರ ಸ್ವತ್ತಾದರೆ; ಗಾದೆಗಳು ಇಡೀ ಸಮಾಜದವರ ಸ್ವತ್ತು. "ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು ಎಂದು ಬೇಕನ್ ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ"[೫೧] 'ಜನತೆ ಹೇಗೋ ಗಾದೆ ಹಾಗೆ' ಎನ್ನುತ್ತದೆ ಒಂದು ವಿದೇಶಿಗಾದೆ.

ಗಾದೆಗಳು ಹಲವರ ಅನುಭವಗಳು. ಒಂದೊಂದು ಅನುಭವಕ್ಕೆ ಒಂದೊಂದು ಗಾದೆಯಿದೆ. ಹೀಗೆ ಗಾದೆಗಳ ಸಂಗ್ರಹವೊಂದು ಜೀವನದ ಅನುಭವಗಳ ಕೋಶವೇ ಆಗಿರುತ್ತದೆ. ಗಾದೆಗಳು ಮಾನವನ ವೈಚಾರಿಕ, ಭಾವನಾತ್ಮಕ ನೆಲೆಯಲ್ಲಿ ರೂಪುಗೊಂಡು ಜೀವನಾನುಭವದ ಮೂಸೆಯಲ್ಲಿ ಹೊರ ಬಂದ ಗಟ್ಟಿಗಳಾಗಿವೆ. ಒಂದೊಂದು ಗಾದೆಯೂ ಒಂದೊಂದು ವಿಶಿಷ್ಟವಾದ ಅನುಭವ ಮತ್ತು ಸನ್ನಿವೇಶದ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ. ಗಾದೆಗಳು ವ್ಯಷ್ಟಿ ಸೃಷ್ಟಿಗಳಾದರೂ ಹಲವರ ಅನುಭವ ಮತ್ತು ಬಳಕೆಯ ದೃಷ್ಟಿಯಲ್ಲಿ ಸಮಷ್ಟಿಯಾಗಿವೆ. ಆದ್ದರಿಂದ ಪ್ರತಿಯೊಬ್ಬ ಜನಸಾಮಾನ್ಯರು ತನ್ನದೆಂಬಂತೆ ಗಾದೆಯನ್ನು ಬಳಸುತ್ತಿದ್ದಾರೆ. ಅದಕ್ಕಾಗಿ ಗಾದೆ ಹಲವರ ಸೊತ್ತು ಎನಿಸುತ್ತದೆ. ಗಾದೆಗಳ ರಚನೆಯ ಹಿಂದೆ ಒಂದು ಅನುಭವ ಇದ್ದೇ ಇರುತ್ತದೆ. ಈ ಅನುಭವವು ಜನ ಸಾಮಾನ್ಯರ ಪ್ರಸ್ತುತ ಜೀವನಕ್ಕೆ ಸಂಬಂಧಿಸಿದ ವಸ್ತುವಾಗುಳ್ಳವುಗಳಾಗಿರಬಹುದು; ಬದುಕಿನಲ್ಲಿ ಅಳವಡಿಸಿಕೊಂಡ ರೂಢಿ, ಸಂಪ್ರದಾಯ, ಆಚರಣೆ, ನಂಬಿಕೆ, ಆಚಾರವಿಚಾರ, ವಿಧಿನಿಷೇಧ ಮುಂತಾದವುಗಳು ಗಾದೆಗಳಾಗಿ ರೂಪವನ್ನು ಪಡೆಯುತ್ತವೆ. ಅಲ್ಲದೇ ಇತಿಹಾಸ, ಪುರಾಣ, ಐತಿಹ್ಯ ಮುಂತಾದವುಗಳಲ್ಲಿ ಕಾಣುವ ಒಂದು ದೃಷ್ಟಾಂತ ಘಟನೆಯಾಗಿರಬಹುದು. ನಿದರ್ಶನಕ್ಕಾಗಿ ಎಲ್ಲಿಂದಲಾದರೂ ನೆರವು ಪಡೆದಿರಲಿ ಅದನ್ನು ಸಂಕೇತಿಸಿಕೊಂಡು; ಪರಿವರ್ತಿಸಿಕೊಂಡು ಅದರಲ್ಲಿ ಜೀವನಾನುಭವವನ್ನು ಬೆರೆಸಿ; ಧ್ವನಿಸುವ ವಿಶಿಷ್ಟ ಪ್ರಕಾರವಾಗಿ ಗಾದೆಯು ಏರ್ಪಡುವದು. ಗಾದೆಯು ನಿಜಕ್ಕೂ ಒಂದು ಅದ್ಭುತ ಶಬ್ದ ಚಮತ್ಕಾರವಾಗಿ ಮನುಷ್ಯನ ಮೇಲೆ ಪರಿಣಾಮ ಬೀರುವುದು. ಆಡು ಮುಟ್ಟದ ಸೊಪ್ಪಿಲ್ಲ; ಗಾದೆ ಮುಟ್ಟದ ವಸ್ತುವಿಲ್ಲ ಎಂಬಂತೆ ಗಾದೆಯ ವಸ್ತು ಮತ್ತು ವಿಷಯ ವ್ಯಾಪಕತೆ ಬಹು ಹಿರಿದಾದದ್ದು. ಮಾನವನ ಗತಕಾಲದ ಜೀವನವನ್ನು ತಿಳಿಸುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ವೃತ್ತಿ ಸಂಬಂಧಿ, ಐತಿಹಾಸಿಕ, ಪೌರಾಣಿಕ, ಭೌಗೋಳಿಕ ಹಾಗೂ ಸ್ಥಳ ಸಂಬಂಧಿಯಾದ ಅನೇಕ ಸಾಮಾಗ್ರಿಯನ್ನು ಬಳಸಿಕೊಂಡಿದೆ.

ಗಾದೆಯು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಪೀಳಿಗೆಯಿಂದ ಪೀಳಿಗೆಗೆ ಬದುಕಿನ ರೀತಿ ನೀತಿ ಬದಲಾದಂತೆ, ತಲೆಮಾರುಗಳು ಉರುಳಿದಂತೆ, ನಾಗರೀಕತೆ ಬೆಳೆದಂತೆ, ನಮ್ಮ ಜೀವನ ಸಂಪರ್ಕ ಕಳೆದುಕೊಂಡು; ಸವಕಲು ನಾಣ್ಯಗಳಂತೆ ಚಲಾವಣೆಯಲ್ಲಿ ತಪ್ಪಿಹೋದರೂ ಅನೇಕ ರೂಪಾಂತರಗಳನ್ನು ಪಡೆದು; ಬದಲಾದ ಹೊಸ ಜೀವನಕ್ಕೆ ಹೊಂದಿಕೊಂಡು; ಪ್ರತಿನಿಧಿಸುವ ಗಾದೆಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಗಾದೆಗಳು ಬದಲಾವಣೆಗೊಳಗಾಗುವ ಎಲ್ಲ ಪರಿಸ್ಥಿತಿಗೂ ಹೊಂದಿಕೊಂಡು ಆಯಾಯ ಕಾಲದ ಜೀವಂತ ಅನುಭವವನ್ನು ವಸ್ತುವನ್ನಾಗಿಸಿಕೊಂಡು ಚಿರಂಜೀವಿಯಾಗಿ ನಿರಂತರವಾಗಿರುತ್ತವೆ. ಹೀಗಾಗಿ ಸಮಕಾಲೀನ ಪ್ರಜ್ಞೆಯು ಗಾದೆಯಲ್ಲಿ ಯಾವಾಗಲೂ ಮಿಡಿಯುತ್ತಿರುತ್ತದೆ.

ಸಮಕಾಲೀನ ಸಂದರ್ಭದ ಜೀವನಾನುಭವವನ್ನು ಹೊಂದಿರುವ ಗಾದೆಗಳ ಮೂಲ ಸಾಮಾಗ್ರಿಗಳನ್ನು ಶೋಧಿಸಲು ಹೊರಟರೆ ಹಲವಾರು ಮಹತ್ವದ ಸಂಗತಿಗಳು ಗೋಚರಿಸುತ್ತವೆ. "ಒಂದು ಜನಾಂಗದ ರೀತಿ-

ನೀತಿ ಆಚಾರ ವ್ಯವಹಾರಗಳು ಗಾದೆಗಳಲ್ಲಿ ಅಭಿವ್ಯಕ್ತವಾಗಿರುತ್ತವೆ; ಅವು ಬಾಳಿನ ಮೌಲ್ಯಗಳ ದಾಖಲೆಗಳು. ವಿವೇಕ, ಸಾಹಿತ್ಯ ಮತ್ತು ಸಂಸ್ಕೃತಿ ಇವು ಗಾದೆಯ ತ್ರಿಕೋನಗಳೆನ್ನಬಹುದು. ಎಲ್ಲ ಶಾಸ್ತ್ರಗಳಿಗೆ ಸಮೃದ್ಧ ಸಾಮಾಗ್ರಿಯನ್ನೊದಗಿಸಬಲ್ಲ ಆಕರಗಳು ಗಾದೆಗಳು"[೫೨] ಎಂದಾಗ ಸ್ಥಳನಾಮ ವಿಜ್ಞಾನಕ್ಕೂ ಮಹತ್ತರವಾದ ಸಾಮಾಗ್ರಿಗಳನ್ನೊದಗಿಸುವುದರಲ್ಲಿ ಸಂಶಯವಿಲ್ಲ.

ನಾಡಿನಲ್ಲಿ ಪ್ರಚಲಿತವಿರುವ ಗಾದೆಗಳಲ್ಲಿ ಅನೇಕ ಸ್ಥಳನಾಮಗಳು ಹಾಗೂ ಸ್ಥಳನಾಮಗಳ ವಾರ್ಗಿಕಗಳ ಬಳಕೆಯಾಗಿರುವುದನ್ನು ಕಾಣಬಹುದು. ಗ್ರಾಮದ ಹೆಸರನ್ನು ಗಾದೆಯಲ್ಲಿ ತರುವ ಮೂಲಕ ಗ್ರಾಮದ ಪ್ರಾಚೀನತೆ, ವಸ್ತು ವೈವಿಧ್ಯತೆ, ವಿಶಿಷ್ಟತೆಯನ್ನು ಪ್ರತಿಬಿಂಬಿಸುತ್ತಿರುತ್ತವೆ. ಗ್ರಾಮದ ಮಹತ್ವದ ಜೊತೆಗೆ ಗ್ರಾಮದಲ್ಲಿನ ವಸ್ತು ವೈವಿಧ್ಯತೆ; ಗ್ರಾಮಸ್ಥರ ಗುಣ ವಿಶೇಷತೆಗಳನ್ನು ತನ್ನೊಡಲಿನಲ್ಲಿ ಇಟ್ಟುಕೊಂಡಿರುತ್ತವೆ. ಹೀಗಾಗಿ ಗಾದೆಗಳಲ್ಲಿರುವ ಸ್ಥಳನಾಮಗಳ ಅಧ್ಯಯನವು ಮುಖ್ಯವೆನಿಸುತ್ತದೆ.

ಬಹುತೇಕ ಗಾದೆಗಳು ಸ್ಥಳನಾಮಗಳ ವಾರ್ಗಿಕವಾಗುಳ್ಳವುಗಳನ್ನು ಒಳಗುಮಾಡಿಕೊಂಡಿವೆ.

೧. ಊರೊಲ್ಲ ಸೂರೆಗೊಂಡ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ

ಊರಿನ ಮೇಲೆ ಕಳ್ಳಕಾಕರು ದಾಳಿಮಾಡಿ ಸಂಪತ್ತೆಲ್ಲ ದೋಚಿಕೊಂಡ ಹೋದನಂತರ ಏನು ಪ್ರಯೋಜನವಿಲ್ಲ. ಕಳ್ಳಕಾಕರ ದಾಳಿಗೂ ಮೊದಲೇ ಊರಿನ ರಕ್ಷಣೆ ಮಾಡಬೇಕು. ಊರಿನ ರಕ್ಷಣೆಗಿರುವ ಬಾಗಿಲನ್ನು ಜವಾಬ್ದಾರಿಯುತವಾಗಿ ಕಾಯಬೇಕು. ಮತ್ತು ಅದರ ಬಾಗಿಲನ್ನು ಬಿಗಿಯಾಗಿ ಭದ್ರಪಡಿಸಬೇಕು.

೨. ಊರಿದ್ದಲ್ಲಿ ಹೊಲಗೇರಿ

ಒಂದು ಊರು ಇದ್ದಾಗ ಹೊಲಗೇರಿ ಇರುತ್ತಿದ್ದ ಸಾಮಾಜಿಕ ಸಂಗತಿಯನ್ನು ಕೊಡುತ್ತದೆ.

೩. ಒಳ್ಳೆಯವರ ಮಾನ ಹಳ್ಳೀಲಿ ಹೋಯ್ತು.

೪. ಊರ ಸುಟ್ರು ಹನುಮಪ್ಪ ಹೊರಗೆ

ಹನುಮಂತನಗುಡಿ ಊರ ಹೊರಗಿದ್ದುದ್ದನ್ನು ತಿಳಿಸುತ್ತದೆ.

೫. ಊರ ಮೂರ ಸುತ್ತ ಸುತ್ತಿದುರ್‍ೂ ಊರ ಬಾಗ್ಲೆಗೆ ಹೋಗಬೇಕು.

ಊರ ಸುತ್ತಲು ರಕ್ಷಣೆಗಾಗಿ ಕೋಟೆ ಇದ್ದು, ಊರನ್ನು ಪ್ರವೇಶಿಸಲು ಒಂದೇ ಬಾಗಿಲು ಇರುತ್ತಿದ್ದ ಚಾರಿತ್ರಿಕ ಸಂಗತಿಯನ್ನು ತಿಳಿಸುತ್ತಿದೆ.

೬. ಹಾಳೂರಿಗೆ ಉಳಿದವ್ನೆ ಗೌಡ.

ಅರಸ ಅಥವಾ ಊರಿನ ಯಜಮಾನನಾದ ಗೌಡ ಬಿಟ್ಟುಹೋದ ನಂತರ ಅಂದರೆ ಅನ್ಯ ಆಕ್ರಮಣಕಾರರಿಗೆ ಊರು ತುತ್ತಾಗಿ, ಯಜಮಾನನಿಲ್ಲದೆ ಹಾಳಾದ ಊರಿಗೆ ಉಳಿದವನೇ ರಾಜ ಅಥವಾ ಗೌಡ ಎಂಬ ಹೇಳಿಕೆಯಲ್ಲಿನ ಯುದ್ಧದ ಭಯಾನಕ ಚಿತ್ರಣವಿದೆ.

೭. ಊರ್‍ೂ ಸಾಕಾಯ್ತು, ಗೌಡ್ನೂ ಬ್ಯಾಡಂದ

ಸಾಮಾನ್ಯನೊಬ್ಬನಿಗೆ ಗೌಡಕಿತನ ದೊರೆತರೆ, ಅಧಿಕಾರದರ್ಪದಿಂದ ಜನರ ಕ್ಷೇಮವನ್ನು ಅಲಕ್ಷವಾಗಿ ಕಂಡು, ಊರಿನವರ ಇಚ್ಛೆಗನುಗುಣವಾಗಿ ಆಡಳಿತ ನಡೆಸದೇ ಇದ್ದ ಸಂದರ್ಭವನ್ನು ತಿಳಿಸುತ್ತದೆ.

೮. ಊರಿಗೆ ಹಂದಿ ಬೇಕು ನೆರೆಗೆ ನಿಂದಕಬೇಕು

ನಿಂದಕರಿದ್ದರೆ ನಾವು ಸದಾ ಕರ್ತವ್ಯಪಾಲನೆಯಲ್ಲಿ ಎಚ್ಚರವಾಗಿರುತ್ತೇವೆ. ನಮ್ಮ ನಡೆನುಡಿಗಳಲ್ಲಿ, ಓರೆಕೋರೆಗಳು ಕಾಣಿಸದಂತೆ, ಬಾಳು ಹಸನಾಗುವಂತೆ ವರ್ತಿಸುತ್ತೇವೆ. ನಿಂದಕರು ಇಲ್ಲದಿದ್ದರೆ ನಾವು ಎಚ್ಚರ ತಪ್ಪಿ, ದಿಕ್ಕುಗೆಟ್ಟು, ಬಾಳನ್ನು ಹಾಳುಮಾಡಿಕೊಳ್ಳಬಹುದು. ಗ್ರಾಮದ ನೈರ್ಮಲ್ಯಗೊಳಿಸಲು ಊರುಗಳಲ್ಲಿ ಹಂದಿ ಸಾಕುತ್ತಿದ್ದರು. ನಗರ ಶುದ್ಧೀಕರಣಕ್ಕೆ ಹಂದಿ ಹೇಗೆ ಅವಶ್ಯಕತೆಯೋ ಜೀವನ ಶುದ್ಧೀಕರಣಕ್ಕೆ ನಿಂದಕರು ಬೇಕು.

೯. ಕೊಕ್ಕರೆಗೆ ಒಂದು ಕೆರೆಯಲ್ಲ, ಗೊಲ್ಲರಿಗೆ ಒಂದು ಊರಲ್ಲ

೧೦. ಕುರುಬನಿಗೊಂದು ಊರೇ ಕೊರಮನಿಗೊಂದು ಕೆರೆಯೇ

ಪಶುಪಾಲಕ ಸಂಸ್ಕೃತಿಯ ಸಮುದಾಯದವರು ತಮ್ಮ ಕುರಿ ಮತ್ತು ಪಶುಗಳಿಗೆ ಮೇವು ಮೆಯ್ಯಿಸಲು ಅಲೆಮಾರಿಗಳಾಗಿ ತಿರುಗುತ್ತಿದ್ದ ವಿಚಾರವನ್ನು ತಿಳಿಸುತ್ತದೆ.

ಎಂಬ ಗಾದೆಗಳಲ್ಲಿ ಊರು, ಕೇರಿ, ಬಾಗಿಲು, ಹಳ್ಳಿ, ಕೆರೆ ಹೀಗೆ ಅನೇಕ ಸ್ಥಳನಾಮ ವಾರ್ಗಿಕಗಳು ದೊರೆಯುತ್ತವೆ. ಇದರಿಂದ ಗಾದೆಗಳ ಪ್ರಾಚೀನತೆಯು ಮಾನವನ ಅಲೆಮಾರಿ ಜೀವನವನ್ನು ತಿಳಿಸುವುದಲ್ಲದೇ, ಸಾಮಾಜಿಕ, ಐತಿಹಾಸಿಕ, ಆಡಳಿತಾತ್ಮಕ ವಿವರಗಳನ್ನು, ಧಾರ್ಮಿಕ ಸಂಗತಿಗಳನ್ನು ತಮ್ಮಲ್ಲಿ ಹುದುಗಿಸಿಕೊಂಡಿವೆ.

ಗಾದೆಗಳು ಕೇವಲ ಸ್ಥಳನಾಮ ವಾರ್ಗಿಕಗಳನ್ನಲ್ಲದೇ ಹಲವಾರು ವಸತಿ ಮತ್ತು ನಿರ್ವಸತಿ ಗ್ರಾಮನಾಮಗಳನ್ನು ನಿರೂಪಿಸುತ್ತವೆ. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ದೊರೆಯುವ ಸ್ಥಳನಾಮಗಳನ್ನು ಒಳಗೊಂಡ ಗಾದೆಗಳು ಆಯಾಯ ಸ್ಥಳಗಳ ಮಹತ್ವವನ್ನು, ಸಂಸ್ಕೃತಿಯನ್ನು, ಜನರ ಆಚಾರವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಚಿತ್ರಣಗಳನ್ನು ಹೊರಹೊಮ್ಮಿಸುತ್ತವೆ. ಇದರಿಂದ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಗಾದೆಗಳ ಮೂಲಕ ತಿಳಿದುಕೊಳ್ಳಬಹುದು.

ಅಜ್ಜನಹಳ್ಳಿಯೋರ ಮನೇಲಿ
ಏನ್ಕೆಲ್ಸ ಅಂದ್ರೆ
ಉಜ್ಜುದು;
ಉಂಡೆ ಕಟ್ಟುದು
ತಿನ್ನುದು!-(೧೩-೨)*

ಅಡ್ಗನಳ್ಳಿ ಕಬ್ಬು ಹಿಡಿಗೇಳಗಿಣ್ಣು
ಅಡ್ಗನಳ್ಳಿ ಹುಡ್ಗೀರು ಗುಡ್ ಗುಡ್ಗನಾರ್‍ತಾರೆ(೩೬-೫)*
ಅಂಕ್ನಳ್ಳೀಲಿ ಸಾಲ
ಹರುಕ್ನಳ್ಳೀಲಿ ಸಾಲ

ಮಾಡುದ್‌ರಾಗಿ ಸಾಲ
ಮನ್‌ಮನ್ನು ಸಾಲ
ಯಾರುಗ್ ಕೊಡ್ಬೇಕು
ಬಾರ್ಲ ನನ್ನಾಟೆ (೭೨-೯)*

ಅಂಗ್ರಳ್ಳಿ ನಿಂಗೇಗೌಡನ ಮಗಳು
ತಂಗ್ನಿಟ್ಟಕ್ಕಿ
ಸಂಗಡಕೆ ನಗ್ನ ಕರುದ್ನು (೭೬-೧೦)*

ಅಬ್ಬೂರೇಲಿ ಆರಂಬ
ಚಿಕ್ಕೇನಳ್ಳೀಲಿ ಮಿಂಡಗಾರ್ಕೆ (೧೦೭-೧೪)*

ಅಸಮಾನ್‌ಗಾರ ಹೆಣ್ಣು
ಬಸವಾಪುರದ ಗಂಡು
ಉಳುದ್ ಬುಟ್ಟುಟ್ಟು
ನನ್ನ ಕುಳುಗ್ಬಾ ಅಂದ್ನು (೧೩೭-೧೭)*

ಆರುಕೆರೆ ಅಕ್ಕಳಿಗಿ
ಮೂರುಕೆರೆ ಮುಕ್ಕಳಿಸಿ
ನನ್ನ ಹರೂರಕ್ಕ ಬಂದ್ಬೋರತು
ನನ್ನೊಟ್ಟೆ ಮೇಲಾಗುವುದಿಲ್ಲ-ಅಂದ್ನು
ಮಳೂರಕ್ಕ (೧೯೩-೨೩)*

ಆರೂವಳ್ಳಿ ಅಕ್ಕ
ಹರಕಲು ಸೀರೆ ಅಕ್ಕ ಬಂದ್ರೆ
ಆಡ್ಕೊಳ್ಳೂರು ಗಡವಿಲ್ಲ
ಮದ್ದೂರಕ್ಕ
ಗೆಜ್ಜೆ ಕಾಲಿನಕ್ಕ ಬಂದ್ರೆ
ತೆಬ್ಬಿಕೊಳ್ಳೂರು ಗಡವಿಲ್ಲ (೧೯೮-೨೪)*

ಕೂಡ್ಲೂರ್ಕೆರೆ ತಾವು
ಕುಡ್ಲು ಕಿತ್ಕೊಳುವೊತ್ಗೆ
ದೇಶಳ್ಳಿ ಕೆರೆತಾವ್ಹೋಗಿ
ಮೀಸೆ ತಿರುಗ್ಸ (೫೨೨-೬೦)*

ಚಿಕ್ಕೇನಹಳ್ಳಿ ತಾವು
ಚೀಲ ಬಿಚ್ಚಿದೋನ್ ಕೆಟ್ಟ

ಗಂಗೋಡಿ ತಾವು

ಹೇತೋನ್ ಕೆಟ್ಟ-೬ (೧೮-೭೧)*

ಡಬ್ಗೆ ಅಬ್ಬೂರೋರು

ಹಬ್ಬಮಾಡಿ

ಇಬ್ರು ಗೊಂದ್ಮುದ್ಲೆ

ಮುರ್ರಿಕ್ಕುದ್ರು (೬೩೭-೭೩)*

ಡಟ್‌ಗೆ ಮೂರು ಬ್ಯಾಳೆ ಕಾಳ್ಹಾಕಿ

ಅಬ್ಬೂರ್ ಗುಡ್‌ಗೋದ್ಲು

ಅಗ್ರಾಣಿ ಕಲ್ ತರೊಕೆ (೬೩೮-೭೩)*

ತೀಟೆಗೆ ತಿಟ್ಟಮಾರನಹಳ್ಳಿ

ಮಾತ್‌ಗೆ ಮಂಗಳಾರಪೇಟೆ (೬೮೯-೭೯)*

ನಾಗವಾರ್ದ ನಂಟು ನಂಟಲ್ಲ

ನಳ್ಳಿಬಾಡು ಬಾಡಲ್ಲ (೭೭೭-೮೮)*

ಪಟ್ಲಿ ಪಾಳು

ಹರೂರು ಹಾಳು

ಪಡೆದೋರೆ ಇಲ್ಲ

ಇನ್ನು ಕೊಡದೋರು ಆದಾರೆ? (೮೨೧-೯೩)*

ಪಿಳ್ಳುಟ್ಟು ಪೀಕಲಾಟ

ಅಂಕನಹಳ್ಳೀಲಿ ದೊಂಕಲಾಟ (೮೩೦-೯೩)*

ಮಾತುನ ಮರವೇಲಿ

ಮಳೂರ್‍ಹ್ಯದ ಕೂಡ್ಲೂರ್‍ಗ್ಲೋದ (೧೦೨೩-೧೧೩)*

ಊರ್ ದನ ಕಾದಿ

ದೊಡ್ಡ ಬೋರೇಗೌಡ ಅನ್ನಿಸ್ಕೊಂಡ (೨೮೧-೩೩)*

ಊರಿಗೆ ಅರಸನಾದರೂ

ತಾಯಿಗೆ ಮಗ (೨೮೩-೩೩)*

ಊರುಗ್ ಬರುವಾಗ ಒಬ್ ನಂಟ್ರು

ಊರುಗ್ ಬಂದಮ್ಯಾಲೆ ಎಲ್ಲಾ ನಂಟು (೨೮೫-೩೩)*

ಊರುಗ್ ಮಾಡ್ದ ಉಪಕಾರ

ಹೆಣ್ಣೀಗ್ ಮಾಡ್ದ ಸುಂಗಾರ

ಎರಡೂ ಒಂದೆ (೨೮೬-೩೪)*

ಊರುಗ್ ಬಂದೋಳು

ನೀರಿಗೆ ಬರೊಲ್ಲೆ! (೨೮೭-೩೪)*

ಊರು ಹೋಗು ಅಂತದೆ

ಕಾಡು ಬಾ ಅಂತದೆ (೨೯೦-೩೪)*

ಊರ್ಗೆ ಕುಳ ಅಲ್ಲ

ಸ್ಮಶಾನ್ಕೆ ಹೆಣ ಅಲ್ಲ (೩೦೦-೩೫)*

ಹಾಗಲಳ್ಳಿ ಗುಡಾರ

ಅಣ್ಣೆ ಸೊಪ್ಪು ಬಡಾರ (೧೨೬೬-೧೩೯)*

*ಕಾಳೇಗೌಡ ನಾಗವಾರ (ಸಂ), ಅವರ ಬೀದಿ ಮಕ್ಕಳು ಬೆಳೆದೊ ಕೃತಿಯ ಪದ್ಯ ಸಂಖ್ಯೆ ಮತ್ತು ಪುಟ ಸಂಖ್ಯೆಯನ್ನು ಸೂಚಿಸುತ್ತದೆ.

೧. ಕೂಡ್ಲೂರೋರ್ಗೆ ಕುಲ ಇಲ್ಲ, ಚಕ್ಕೆರೆಯವರಿಗೆ ಛಲ ಇಲ್ಲ.

೨. ಕೂಡ್ಲೂರು ಕಿತ್ತು ಹೊಸೂರು ತಿಟ್ಟು ಕಟ್ಟು.

೩. ಕೊಂತಿನ ಬಾಯಿಗೆ ಹಿಟ್ಟಾಕಿ ಬಿಟ್ಟು ಕೂಡ್ಲೂರು ಸಂತೆಗೆ ಎಣ್ಣೆಗೆ ಹೋದ್ಲಂತೆ.

೪. ಕೂಡ್ಲೂರು ಸಂಪಿಗೆ ಮಾಳೂರು ಮಲ್ಲಿಗೆ

೫. ಕೂಡ್ಲೂರು ಕಾಮನಿಗೂ ಕಾನಕಾನಹಳ್ಳಿ ರಥಿಗೂ ಚೆಂದ.

೬. ಕೂಡ್ಲೂರ್ ತಾವು ಕುಡ್ಲು ಬಿಟ್ಟುಟ್ಟಾ ದೇಶಳ್ಳಿ ತಾವು ಮೀಸೆ ತಿರುಗುತ್ತಿದ್ದರಂತೆ.

೭. ಮೈಸೂರು ಮಹಾರಾಜರ ಹೆಂಡ್ತಿ ಕೂಡ್ಲೂರ ಕೆರೆ ಮಣ್ಣು ಬಯಸಿ ಕೊಂಡ್ಲಂತೆ.[೫೩]

೭.೫. ಒಗಟು ಮತ್ತು ಸ್ಥಳನಾಮಗಳು

ಒಗಟುಗಳು ಗ್ರಾಮೀಣ ಜನತೆಯ ಸೃಷ್ಟಿ. ಇದು ಹಳ್ಳಿಯ ಬದುಕಿನಲ್ಲಿ ಸಾರಿಗೆ ಹಾಕಿದ ಒಗ್ಗರಣೆ. ಒಗಟು ಜೀವನದ ಅನುಭವ ವಲಯವನ್ನೇ ವಸ್ತುವಾಗಿಸಿಕೊಳ್ಳುತ್ತದೆ. ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರ ಇವೆರಡರ ಸಮ್ಮಿಲನದಿಂದ ಒಗಟು ರೂಪುಗೊಳ್ಳುತ್ತದೆ. ಒಗಟಿನ ಭಾಷೆ ಸಾಂಕೇತಿಕ ಮತ್ತು ರಹಸ್ಯಾತ್ಮಕವಾದದ್ದು. ಒಗಟುಗಳೆಲ್ಲ ಸವಾಲಿನ ಮತ್ತು ಪ್ರಶ್ನೆಯ ರೂಪದಲ್ಲಿರುತ್ತವೆ. ಪ್ರಶ್ನೆ ಸ್ಪಷ್ಟವಾಗಿರಬಹುದು ಇಲ್ಲವೇ ಗೂಢವಾಗಿರಬಹುದು. ಒಂದು ವಸ್ತುವಿನ ವರ್ಣನೆ, ಹೆಚ್ಚಳ, ಗುಣಗಾನ; ಬೇರೊಂದರ ಹೋಲಿಕೆ ಕೊಟ್ಟು ಹೇಳುವುದು ಒಗಟುಗಳಲ್ಲಿ ಕಂಡು ಬರುವ ಸಾಮಾನ್ಯ ಗುಣಗಳಾಗಿವೆ.

ಒಗಟುಗಳು ಜನಾಂಗ ಒಂದರ ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯಗಳ ಸಂಗಮವಾಗಿದೆ. ಸಾಮಾನ್ಯ ಜನತೆಯ ಬುದ್ಧಿ ವೈಭವ ಹಾಸ್ಯಪ್ರಿಯತೆ, ಚತುರೋಕ್ತಿ ವಿಡಂಬನಾ ಸ್ವರೂಪ, ಬೋಧನಾ ಮನೋಧರ್ಮ ಹಾಗೂ ರಚನಾ ಸಾಮಾರ್ಥ್ಯವನ್ನು ಅತ್ಯಂತ ವರ್ಣರಂಜಿತವಾಗಿ ಚಿತ್ರಿಸಲು ಯತ್ನಿಸುತ್ತವೆ. ಜನಪದರು ಮುಗ್ಧರಿರಬಹುದು ಆದರೆ ಲೋಕಾನುಭವದ ಸಾರವನ್ನು ಹೀರಿ ಕೌಶಲ್ಯವನ್ನು ರೂಢಿಸಿಕೊಂಡವರು. ಉತ್ತಮ ಚಾತುರ್ಯ, ಬೌದ್ಧಿಕ ಪ್ರಜ್ಞೆ, ಆಲೋಚನಾಶಕ್ತಿ, ತರ್ಕ ಸಾಮರ್ಥ್ಯ ಅವರಲ್ಲಿ ಅಧಿಕವಾಗಿದೆ ಎಂಬುದಕ್ಕೆ

ಒಗಟುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಜನಪದರು ಮುಗ್ಧರೆಂದಾಕ್ಷಣ ಖಂಡಿತವಾಗಿಯೂ ಮಂದಬುದ್ಧಿಯವರಲ್ಲ. ಅಕ್ಷರಜ್ಞಾನ ಬಾರದಿರಬಹುದು ನಿಜ; ಆದರೆ ಅನುಭವ ತಜ್ಞರು. ಬದುಕಿನ ಜ್ಞಾನವನ್ನು ಗಳಿಸಿಕೊಂಡ ವಿದ್ಯಾವಂತರು. ಕವಿರಾಜಮಾರ್ಗಕಾರ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಿಮತಿಗಳ್' ಎಂದು ಹೇಳಿರುವುದನ್ನು ಹೀಗೆ ವ್ಯಾಖ್ಯಾನಿಸಬಹುದೇನೊ. ಕುರಿತೋದದರಿಂದಲೇ ಅವರ ಬುದ್ಧಿ ಗ್ರಹಿಕೆಯಲ್ಲಿ ನಾವಿನ್ಯ, ಸ್ವಪ್ರಕಾಶ, ಸ್ವಂತಿಕೆಯಲ್ಲಿ ಜೀವಂತಿಕೆ ಉಳಿಸಲು ಸಾಧ್ಯವಾಗಿದೆ. ಜನಪದರ ಬೌದ್ಧಿಕ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿ ಒಗಟುಗಳಿವೆ.

ಒಗಟುಗಳ ರಚನೆಯಲ್ಲಿ ಜನಪದರ ಸಾದೃಶ್ಯ ದೃಷ್ಟಿಯನ್ನು ಕಾಣಲು ಸಾಧ್ಯ. ಇಲ್ಲಿ ಬಳಕೆಯಾಗುವ ಸಾದೃಶ್ಯ ಕಲ್ಪನೆಗಳೆಲ್ಲವೂ ಪ್ರಕೃತಿಯಲ್ಲಿರುವ ಮೂರ್ತರೂಪಗಳೇ ಆಗಿರುತ್ತವೆ. ಅಂದರೆ ಒಂದು ವಸ್ತು, ವಿಷಯ, ಸ್ಥಳ ಅಥವಾ ಜೀವಿಯ ವಿಶೇಷವಾದ ಬಾಹ್ಯರೂಪ ಲಕ್ಷಣಗಳೆಲ್ಲ ಒಗಟುಗಳ ರಚನೆಯಲ್ಲಿ ಕಾಣಲು ಸಾಧ್ಯ. ಈ ವಿಶಿಷ್ಟ ರೂಪಲಕ್ಷಣಗಳೆಲ್ಲ ಜನಪದರು ತಮ್ಮ ದಿನನಿತ್ಯದ ಬದುಕಿನಲ್ಲಿ ಬಂದಿರುವ ಅನುಭವ ಸಾಮಾಗ್ರಿಗಳಾಗಿರುತ್ತವೆ.

ಒಗಟುಗಳು ಮನುಷ್ಯನ ಸುತ್ತಮುತ್ತಲಿನ ಭೌತಿಕ ಜಗತ್ತಿನ ವಸ್ತುಗಳಿಗೆ ಸಂಬಂಧಿಸಿರುತ್ತವೆ. ಪ್ರಾಕೃತಿಕ ಪರಿಸರದ ನದಿ, ನೀರು, ಬೆಟ್ಟ, ಗುಡ್ಡ, ಪ್ರಾಣಿ, ಸಸ್ಯ ಮೊದಲಾದವುಗಳ ಜೊತೆಗೆ ಜನರು ನೆಲೆಸುವ ನೆಲೆಗಳು; ಆಚಾರವಿಚಾರ, ಕಲೆ, ಸಾಹಿತ್ಯ, ಉಡುಗೆತೊಡುಗೆ, ಊಟೋಪಚಾರ, ತಾವು ಬಳಸುವ ದಿನನಿತ್ಯದ ಪ್ರತಿಯೊಂದು ವಸ್ತುಗಳು ಕೂಡ ಒಗಟುಗಳಲ್ಲಿ ಸ್ಥಾನಪಡೆದುಕೊಂಡಿವೆ. ಅಂತೆಯೇ ವಿವಿಧ ವಸ್ತು ವೈವಿಧ್ಯತೆಯ ಆಗರವಾದ ಒಗಟುಗಳಲ್ಲಿ ಸ್ಥಳನಾಮ ವಾರ್ಗಿಕಗಳು ಮತ್ತು ಸ್ಥಳನಾಮಗಳೂ ಕೂಡ ಸ್ಥಾನ ಪಡೆದುಕೊಂಡಿವೆ. ಸ್ಥಳನಾಮ ವಾರ್ಗಿಕಗಳನ್ನೊಳಗೊಂಡ ಒಗಟುಗಳು ಇಂತಿವೆ.

ಊರಿಗೆಲ್ಲ ಒಂದೆ ಬಾವಿ - ಬಾಯಿ

ಕೆರೆತುಂಬಾ ಕುರಿಹೆಜ್ಜೆ - ಚುಕ್ಕಿ (ನಕ್ಷತ್ರ)

ಊರೆಲ್ಲ ಸುತ್ರೂ ಮನೆಗೆ ಮಾತ್ರ ಬರಲ್ಲ - **ಚಪ್ಪಲಿ**

ಬಾವೀಲಿ ಬಟ್ಲು - ಚಂದ್ರ

ಕೆರೆಯೊಳಗೊಂದು ಮರಹುಟ್ಟಿ

ನೀರ್ನು ಕುಡೀತದೆ ಬೇರ್ನು ತಿಂತದೆ - ದೀಪ[೫೪]

ಅಕ್ಕ ಅಕ್ಕ ಬಾವಿನೋಡು

ಬಾವಿಯೊಳಗೆ ನೀರು ನೋಡು

ನೀರಿನೊಳಗೆ ಹಗ್ಗ ನೋಡು

ಹಗ್ಗದೊಳಗೆ ಬೆಳ್ಕು ನೋಡು - ದೀಪ

ಒಂದು ಗುಂಡಾಕಾರದ ಪಟ್ಟಣ

ಪಟ್ಟಣಕ್ಕೆ ನೂರು ಬಾಗಿಲು

ನೂರು ಬಾಗಿಲಿಗೂ ಕದ ಮಾಡಿಲ್ಲ

ಹಾಗಾದರೆ ಆ **ಪಟ್ಟಣ** ಯಾವುದು? - **ಜೇನು ಹುಟ್ಟಿ**[೫೫]

ಒಗಟುಗಳ ರಚನೆಯಲ್ಲಿ ಬಾವಿ, ಕೆರೆ, ಊರು, ಪಟ್ಟಣ ಮೊದಲಾದ ಸ್ಥಳನಾಮ ವಾರ್ಗಿಕಗಳು ಬಂದಿವೆ.

೭.೬. ಜನಪದ ಗೀತೆ ಮತ್ತು ಸ್ಥಳನಾಮಗಳು

ಜಾನಪದದ ಇತರ ಪ್ರಕಾರಗಳಂತೆ ಜನಪದ ಗೀತೆಯೂ ಕೂಡ ಮೌಖಿಕ ಪರಂಪರೆಯ ಮೂಲಕ ತಲೆ ಮಾರಿನಿಂದ ತಲೆಮಾರಿಗೆ ಸಾಗಿ ಬಂದಿದೆ. ಕಂಠಸ್ಥ ಪರಂಪರೆಯೇ ಇದರ ಮುಖ್ಯವಾಹಿನಿಯಾಗಿದೆ. ಜನಪದ ಗೀತೆಗಳು; ಜನಪದ ಸಂಸ್ಕೃತಿಯ ಒಂದು ಅಂಗವಾಗಿದೆ. ಜನಪದ ಗೀತ ಪ್ರಕಾರದಲ್ಲಿ ತ್ರಿಪದಿ, ಕೋಲಾಟದ ಪದಗಳು, ಗರತಿಯ ಹಾಳು, ಸೋಬಾನೆ ಪದಗಳು, ಮಂಗಳಾರತಿಯ ಪದಗಳು, ಲಾವಣಿ, ಹಂತಿಯ ಹಾಡುಗಳು, ದೇವರ ಕುರಿತಾದ ಹಾಡು ಮೊದಲಾದವುಗಳು ಅನಾದಿಕಾಲದಿಂದಲೂ ಉಳಿದು ಬಂದಿವೆ. ಕೆಲವೊಂದು ಹಾಡುಗಳಲ್ಲಿ ಸ್ಥಳನಾಮಗಳ ಐತಿಹ್ಯವೂ, ಆ ಸ್ಥಳದ ವಿಶೇಷತೆಯನ್ನು ತಿಳಿಸುವ ಚಿತ್ರಣವೂ ಬಂದಿರುವುದನ್ನು ಕಾಣಬಹುದು.

ಸಾರ್ವತ್ರಿಕತೆ ಜನಪದ ಗೀತೆಯ ಪ್ರಮುಖ ಲಕ್ಷಣ, ನಾದಮಯತೆ, ಲಯಗಾರಿಕೆ, ಜನಪದಗೀತೆಗಳ ಆಕರ್ಷಣೆಗೆ ಕಾರಣವಾಗಿರುವ ಅಂಶಗಳಾಗಿವೆ. ಜನಪದರ ಲೋಕಾನುಭವ ಅಥವಾ ವಿಚಾರಶಕ್ತಿ ಪರಿಮಿತವಾದುದಾದರೂ ಅವರ ಅನುಭಾವ ಮಹತ್ವಪೂರ್ಣವಾದುದು."ಜನಪದ ಕವಿಗಳ ಕಾವ್ಯ ಪ್ರತಿಭೆಗೆ ಅವರ ಜೀವನಾನುಭವವೇ ಸ್ಫೂರ್ತಿಚಿಲುಮೆ. ಅವರು ನೋಡಿಲ್ಲದ, ಕೇಳಿಲ್ಲದ ಅನುಭವಿಸಿಲ್ಲದ ಯಾವುದನ್ನೂ ಕುರಿತು ಹಾಡುವವರಲ್ಲ. ಕೃತಕತೆ ಅವರಿಗೆ ಹೊರಗು. ಅವರ ಪ್ರತಿಯೊಂದು ಮಾತು ಅವರದೇ ಹೃದಯದ ಜೀವಂತ ಮಿಡಿತವಾಗಿದೆ.... ಜನಪದ ಕವಿಗಳು ಸ್ವಯಂಪ್ರಭೆ, ಪ್ರತಿಭೆಯುಳ್ಳವರು, ಜನಪದ ಕಾವ್ಯಗಳಲ್ಲಿ ಜನಪದ ಜೀವನವನ್ನೂ, ಸಾಂಸ್ಕೃತಿಕ ವೈಭವವನ್ನೂ ಕಾವ್ಯದ ಸಹಜ ಪ್ರತಿಭಾ ಪ್ರಖರತೆಯನ್ನೂ ಕಾಣಬಹುದು....."[೫೬] ಹೀಗೆ ತಮ್ಮ ಜೀವನದ ಉದಾತ್ತತೆಗಳನ್ನು ಪ್ರತಿಪಾದಿಸುವಾಗ ಅವರ ಜೀವನದೊಳಗೆ ಹಾಸುಹೊಕ್ಕಾಗಿರುವ ತಮ್ಮ ನೆಲೆ ಹಾಗೂ ತನ್ನ ತವರು ಮನೆಯ; ಊರಿನ ನೆನಪು ಕಾಡದೆ ಇರದು. ತನ್ನ ಸ್ಥಳದ ಮಹತ್ವವನ್ನು ಅದರ ವಿಶೇಷತೆಗಳನ್ನು ತಮ್ಮ ಹಾಡುಗಳಲ್ಲಿ ಅಲ್ಲಲ್ಲಿ ತರುವುದುಂಟು. ಅಲ್ಲದೆ ಗ್ರಾಮ ದೇವತೆಗಳ ಮೇಲಿನ ಹಾಡುಗಳಂತೂ ಗ್ರಾಮಕ್ಕೂ ದೈವಕ್ಕಿರುವ ಅನ್ಯೋನ್ಯತೆಯನ್ನು, ಊರಿನ ಅಂದ ಚೆಂದವನ್ನು, ಪೂಜೆಗೆ ಬೇಕಾದ ವಸ್ತುಗಳು ಯಾವ ಯಾವ ಸ್ಥಳಗಳಿಂದ ತಂದರೆ ದೇವತೆಯನ್ನು ಸಂಪ್ರೀತಿಗೊಳಿಸಲು ಸಾಧ್ಯವೆಂಬ ವಿವರಗಳೆಲ್ಲವೂ ಸಿಗುತ್ತವೆ. ಆ ಮೂಲಕ ಸ್ಥಳನಾಮಗಳ ಜೊತೆಯಲ್ಲಿ ಸ್ಥಳದಲ್ಲಿ ದೊರೆಯಬಹುದಾದ ವಸ್ತು ಸಂಸ್ಕೃತಿಯನ್ನು ಕಣ್ಣು ಮುಂದೆ ತೆರೆಯುವಂತೆ ಮಾಡುತ್ತದೆ. ಆ ಮೂಲಕ ಆಯಾ ಭೌಗೋಳಿಕ ಪ್ರದೇಶಗಳಲ್ಲಿ ನಡೆಯುವ ಸಾಂಸ್ಕತಿಕ ಚಿತ್ರಣದ ಜೊತೆಗೆ ಸ್ಥಳವಿಶೇಷವನ್ನು ಹೇಳುವ ಪರಿ ಬೆರಗು ಹುಟ್ಟಿಸುತ್ತದೆ.

ಬೆಂಗಳೂರು ಬಿಳಿಯೆಲೆ ಮೈಸೂರು ಕಳಿಯಡಕೆ
ಚನ್ನಪಟ್ಟಣದ ಕೆನೆಸುಣ್ಣ | ತಂದಿವ್ನಿ
ಚಿಂತೆ ಬಿಟ್ಟೆಲೆಯ ಮಡಿಸೆಣ್ಣೆ

ಚನ್ನಪಟ್ಟಣದ ಚಿನ್ನದೇರಿಮ್ಯಾಲೆ
ಚಂದಕೆ ನನ್ನಣ್ಣ ಪಗಡೇಯ| ಆಡುಕೋಗಿ
ಸುಣ್ಣಕ್ಕೆ ನೂರಾಳ ಕಳುಗಾನೆ

ಅಣ್ಣನ್ಗೆ ಅರಮನೆ ತಮ್ಮನ್ಗೆ ಕಿರುಮನೆ
ಬೆಡಗಿನ ತಮ್ಮಯ್ಗೆ ಬಿಡದೀಯ | ಕೊಟ್ಟೋರ್‍ಯಾರೆ
ಚನ್ನಪಟ್ಟಣದ ದೊರೆಗಳು

ಹತ್ತುಗಾವಿಂದ ಹಟ್ಟಿಕಾಣದೆ ಬಂದ
ಹಟ್ಟಿ ಮುಂದಿಳಿದ ಕುದುರೇಯ | ಚನ್ನಪಟ್ಟಣದ
ಲಾಯದಲೊಡೆದ ಮರಿಗುದುರೆ

ಕೊಂಬು ಹಿತ್ತಾಳೆ ಚೆಂಬು ಮಾಟದ ಹೆಣ್ಣೆ
ನಾರೀ ನೀನೆಲ್ಲಿ ದೊರಕೀದೆ | ಚನ್ನಪಟ್ಟಣದ
ಬಾಳೇ ತೋಟದ ಅರಗಿಣಿಯೆ

ತಾಮ್ರ ಹಿತ್ತಾಳೆ ಚದರ ಮಾಟದ ಹೆಣ್ಣೆ
ನಾರೀ ನೀನೆಲ್ಲಿ ದೊರಕಿದೆ | ಚನ್ನಪಟ್ಟಣ
ಬಾಳೆ ತೋಟದರಗಿಣಿಯೆ

ಹೂವಿಲ್ಲೆಂದರೆ ಹೂಲ್ಲಿ ದೊರೆತಾವು
ಹೂವ ಬೆಳೆವೋರು ಚನ್ನಪಟ್ಟಣದ | ದೊರೆಗಳು
ಹೂವಿನ ರಥವ ಕಳುಗುವರೆ

ಮಾಲೆ ಕಳುಗವರೆ ಮಾಗಡಿ ಓಷ್ಮಮರು
ಮಾಲೆ ನಮ್ಮಗಡಗೀಗಮರಾವು | ಚನ್ನಪಟ್ಟಣದ
ಗಂಧ ಹೊಂಬಾಳೆ ಬರಬೇಕು

ಹಣವೀಗೆ ಹತ್ತಲೆ ಹೊನ್ನೀಗೆ ನೂರೆಲೆ
ಚನ್ನಪಟ್ಟಣದ ಮಳಗೇಲಿ | ಮಾರೋ ಎಲೆ
ಅಣಿಗೊಂದೊಂದೆ ಬೆಲೆಯಾದೋ

ಮಳೂರು ತೋಟದಲ್ಲಿ ಮಲ್ಲಿಗೆ ಗಿಡಹುಟ್ಟಿ
ಮೆಲುಮೆಲುಗೆ ಬೇರು | ಹರಿದಾವೋ

ಕೂಡ್ಲೂರೆಲೋಗಿ ಕುಡಿ ಒಡೆದೋ
ಅಬ್ಬೂರೆಲೋಗಿ ಹಬ್ಬಿಕೊಂಡೋ
ಬೆಂಗಳೂರಲ್ಲಿ ಬೆಲೆಯಾದೋ ಮಲ್ಲಿಗೆ
ಚನ್ನಪಟ್ಟಣದಲ್ಲಿ ಇಳಿದಾವೋ
ಚನ್ನಪಟ್ಟಣದಲ್ಲಿ ಇಳಿದಂತಾ ಮಲ್ಲಿಗೆ
ಒಂದಾಣಿಗೊಂದು ಬೆಲೆಯಾದೋ.
ಕೂಡ್ಲೂರು ಚೆಲ್ಲಮ್ಮ ಏನಂತ ಹೇಳುತಾಳೆ
ಹಬ್ಬಾವ ಅವಳು ಪಡವೋಕೆ | ಬಂದವ್ಳೆ
ಹಬ್ಬಾವ ನೀನು ಮಾಡಿಸಬೇಕು
ಆ ಊರು ಈ ಊರು ದೇವಲೋಕದ ಊರು
ದೇವೇಂದ್ರನಂತಾ ಕೂಡಲೂರು | ರಾಜಬೀದೀಲಿ
ತಾಯಿ ಚೆಲ್ಲವ್ವ ಮೆರೆದಾಳೆ.
ಹೊನ್ನುವರವಾದೋ ತುಪ್ಪದ ದೀವಿಗೆಯಾದೋ
ಪಟ್ಟಣನ್ನೋದು ಕೂಡಲೂರು | ರಾಜಬೀದೀಲಿ
ಗೊಂಬೆ ಚಿತ್ತಾರದ ಮಡೆಕಡೆದೋ
ಬಗ್ಗಿಗಿಂಡಿಯ ಮೊಗೆದಾಳೆ ಚೆಲ್ಲವ್ವ
ಎದ್ದಿನೋಡಾಳೆ ಕೂಡಲೂರು | ರಾಜ ಬೀದೀವಿ
ಮೊಗ್ಗಿನಾರುತಿ ಬರುವೋದ
ಆ ಚಂದ ಕೂಡಲೂರು ನೀರು ಚಂದ ಚಿಕ್ಕತೊರೆ
ದೇವರು ಚಂದ ಕರಿಯಮ್ಮ | ಮಂಡೆಮ್ಯಾಲೆ
ಹೂ ಚಂದ ಸಣ್ಣ ಗಣಗಲೆ.
ಚಲ್ಲಮ್ಮ ಉಟ್ಟಾಳೆ ಎಳ್ಳುಹೂವಿನ ಬಣ್ಣ
ದಂಡಮ್ಮ ಉಟ್ಟಾಳೆ ದಣಮೇಯ | ಕೋಡಂಬಳ್ಳಿ
ಬಿಸಿಲಮ್ಮ ಉಟ್ಟಾಳೆ ದಸರೇಯ
ಇಪ್ಪತ್ತು ಗಾವುದಕೆ ನೆಪ್ಪು ನನ ಚಿಕ್ಕಿರೆ
ಇಪ್ಪೇಯ ತೋಪು ಹೊಳೆಸಾಲು | ಒಳ್ಳೇದೆಂದು
ತಾಯಿ ಚೌಡವ್ವ ನೆಲೆಗೊಂಡ್ಲು
ಉದ್ದೀನ ಕಾಯ್ನಂಗೆ ಎದ್ದಲ್ಲೆ ನಾಗವಾರ
ಒಡದಿ ನಿಲಸವ್ರೆ ಕಲಕಂಬ ಊರ ಮುಂದೆ
ಒಡದಿ ಮೂಡವ್ನೆ ಗುಡಿ ತುಂಬ

ನಾಗವಾರ್ದ ನರಸಯ್ಯ ಭೋಗ ನೋಡುವ ಬನ್ನಿ
ಬಾಗಲೇಲ್‌ತುಂಬ ಗುಡಿತುಂಬು | ನರಸಯ್ಯ
ನಿನ ಭೋಗ ನೋಡೋರು ಗಡುವಿಲ್ಲ

ಕಾಳೆ (ಕಹಳೆ) ಹಿಡಿದಾರೆ ಕಲಿಯಲ್ಲೆ ನಾಗವಾರ
ಆಳುಂಟರಡಿಕೆ ದಸಿಯಂಗೆ | ನರಸಯ್ಯ
ನೀ ಹೊಂಟ್ರೆ ಬಾಳೆ ದಸಿಯಂಗೆ

ನಾಗವಾರನ್ನೋದು ನಾಕು ಸುತ್ತಿನ ಕೋಟೆ
ನಡುವೆ ನರಸಯ್ನ ಅರಮನೆ | ಅಂಗಡಿ ಬೀದಿ
ಸಾರಿ ಮಾರಾವೆ ಸಿರಿಗಂಧ

ಸ್ವಾತಿ ಮಳೆ ಹೂದಿ ನಾಗ್ವಾರದ ಕೆರೆ ತುಂಬಿ
ಜಾತಿಗೊಂದು ಗಿಡ ವಡಿಯಾಲೋ | ನಮ್ಮೂರ
ಜಾತ್ರೆ ಹೊತ್ತಿಗೆ ಹೊಸಮೊಗ್ಗು

ನಮ್ಮೂರ ನರಸಯ್ಯ ತೋಪೇಲಿ ನೋಡುವ ಬನ್ನಿ
ಧೂಪಾದ ಮರ ಕಿರುನೆಲ್ಲಿ | ನಾಗವಾರ್ದ
ತೋಪು ಹಬ್ಬಾವೆ ಗಗನಾಕೆ

ಉತ್ತು ಬಂದ ಎತ್ತುಹುಳ್ಳಿ ಹೊಲಕೆ ಬಿಟ್ಟು
ನ್ಯಾಯಕೆ ಹೋಗವ್ನೆ ಕುಣಗೆರೆಗೆ | ಅಣ್ಣನ ತಾಕೆ
ಇವ್ನ ಹೋದಲ್ಲೇ ನ್ಯಾಯ ಹರಿಯಾದು

ಇಂಚೆ ಹಣ್ಣುಕೊಟ್ಕೊಂಡ್ರು ವಂಬೈನೂರಳ್ಳೀಯ
ಹೊಂಬಾಳೆ, ಕೊಂಡ್ರು ಮಳೂರು | ನರಸಯ್ಯ
ತುಂಬಿ ಹೂವ್ಗೆ ಕೊಂಡ್ರು ತೊರೆಸಾಲು

ಕುಕ್ಕೂರು ಕುಣಗೆರ ಹೊತ್ತೇಲೆ ಗೋವಿಂದಳ್ಳಿ
ನೆತ್ತಿಮ್ಯಾಲವ್ನೆ ನರಸಯ್ಯ | ಮಳೂರು
ಹೊಂಬಾಳೆಲವ್ನೆ (ಅಂದಾನಿ) ಅಪ್ರಮೇಯ

ಮಾಲೆ ಕೊಡುಬಾರೋ ಮಳೂರು ಓಷ್ಮಮಯ್ಯ
ಮಾಲೆ ಕೊರಳೀಗೆ ವಲ್ಲವಲ್ಲೋ | ಮೈಸೂರ |
ರಾಜಮಲ್ಲಿಗೆಯ ಕಳಗವ್ರೆ |

ಚಿಕ್ಕತಮ್ಮಂಗೆ ಯಾವೂರ ಹೆಣ್ಣಮ್ಮ
ಗಂಧ ಮಾರುವ ಗೌಡಗೆರೆ | ಗೌಡನ ಮಗಳು
ಒಪ್ಪೇನೋ ತಮ್ಮ ಮನಸೀಗೆ

ಕೋಲ ಊರಿಕೊಂಡು **ಕೋಲೂರಿಗೋಗೋಳೆ**
ಕೋಲೂರ ನಾಯಿ ಬೊಗಳಾವೆ | ಹೆಣ್ಣೋರವ್ವ
ಕೋಲು ಮಡುಗಿಲಿ ಶರಣೆನ್ನಿ
ಪುಟ್ಟಿಹೊತ್ಕೊಂಡು **ನಿಟ್ಟೂರಿಗೋಗೋಳೆ**
ನಿಟ್ಟೂರನಾಯಿ ಬೊಗಳಾವೆ | ಹೆಣ್ಣೋರವ್ವ
ಪುಟ್ಟೀಯ ಮಡಗಿ ಶರಣೆನ್ನಿ[೫೭]

ಮಾಳೂರು ತೋಟದಲ್ಲಿ ಮಲ್ಲಿಗೆ ಗಿಡಹುಟ್ಟಿ
ಮೇಲು ಮೆಲುಗೆ ಬೇರು ಹರಿದಾವೋ
ಸೋಬನ್ನಿರೇ ಸೋಬಾನ ಎನ್ನೀರೆ ||
ಮೇಲು ಮೆಲುಗೆ ಬೇರು ಹರಿದೋಗಿ
ಕೂಡ್ಲೂರೆಲೋಗಿ ಕುಡಿ ನೆಡೆದೋ || ಸೋಬನ್ನಿರೇ ||

ಕೂಡ್ಲೂರೆಲೋಗಿ ಕುಡಿ ನೆಡೆದು ಮಲ್ಲಿಗೆ
ಹಬ್ಬೂರೆಲೋಗಿ ಹಬ್ಬಿಕೊಂಡು ||ಸೋ||

ಕೊಂಗನಾಡ ಸೀಮಿಂದ ಬಂದಳಲ್ಲೆ ಚೆಲ್ಲವ್ವ
ಕೊಂಗಾರು ಕೊಟ್ಟ ಕುದುರೇಯ || ಏರಿಕೊಂಡು ||

ಬಂದಾಳು **ಕೂಡಲೂರು** ರಾಜ ಬೀದಿಗೆ
ಕೂಡ್ಲೂರು ಚಲ್ಲಮ್ಮ ಏನಂತ ಹೇಳುತಾಳೆ
ಹಬ್ಬಾವ ಅವಳು ಪಡೆವಕೆ || ಬಂದವ್ಳೆ ಕಾಣಪ್ಪ ||

ಹಬ್ಬಾವ ನೀನು ಮಾಡಿಸಬೇಕು
ಪಟ್ಟಸೀಮಿಂದ ಏನೇನು ತಂದಾಳೆ
ಕಂಚಿನ ಹೆಬ್ಬಾರೆ ಕೈಕುಡ ||ತಕ್ಕಂಡು||

ಬಂದಾಳೆ **ಕೂಡ್ಲೂರು** ರಾಜಬೀದಿಗೆ
ಅವರ ತಂಗೇರು ಒನಗೂಡಿ
ಅಕ್ಕ ತಂಗೇರ ಒನಗೂಡಿ ||ಚಲ್ಲವ್ವ||

ಬಂದಾಳು **ಕೂಡಲೂರ** | ರಾಜಬೀದಿಗೆ
ಆ ಊರು ಈ ಊರು ದೇವಲೋಕದ ಊರು
ದೇವೇಂದ್ರನಂತಾ **ಕೂಡಲೂರು** || ರಾಜಬೀದೀಲಿ ||

ತಾಯಿ ಚೆಲ್ಲವ್ವಮೆರೆದಾಳೆ
ಹೊನ್ನು ಪರವಾದೋ ತುಪ್ಪದ ದೀವಿಗೆಯದೋ
ಪಟ್ಟಣನ್ನೋದು **ಕೂಡಲೂರು** ರಾಜಬೀದೀಲಿ ||

ಗೊಂಬೆ ಚಿತ್ತಾರದ ಮಡೆ ಕಡೆದೋ
ಬಗ್ಗಿ ಗಿಂಡಿಯ ಮೊಗೆದಾಳೆ ಚೆಲ್ಲವ್ವ
ಎದ್ದಿ ನೋಡಾಳೆ **ಕೂಡಲೂರ** ||ರಾಜಬೀದೀಲಿ||ಜಿ

ಮೊಗ್ಗಿನಾರತಿ ಬರುವೋದ
ಆ ಚಂದ **ಕೂಡ್ಲೂರು** ನೀರು ಚೆಂದ ಚಿಕ್ಕತೊರೆ
ದೇವರು ಚೆಂದ ಕರಿಯಮ್ಮ ||ಮಂಡೆ ಮ್ಯಾಲೆ||

ಹೂ ಚಂದ ಸಣ್ಣಗಣಿಗಲೆ
ಆ ಊರು ಈ ಊರು ದೇವಲೋಕದ ಊರು
ದೇವೇಂದ್ರನಂತಾ **ಕೂಡಲೂರು** ರಾಜಬೀದೀಲಿ ||

ಚಲ್ಲವ್ವ ಹಬ್ಬ ಐಭೋಗ
ಅಕ್ಕ **ಕೂಡ್ಲೂರು** ಚೆಲ್ಲಿ ತಂಗಿ **ಮಳೂರು** ಚೆಲ್ಲಿ
ತೆಂಗಿನ ಹಣ್ಣು ಒಲೆ ಹೂಡಿ || ಅಡಿಗೆ ಮಾಡಿ ||

ಅಣ್ಣ ಅಪ್ರಮೇಯನ ಮದುವೇಗೆ
ಹಾದಿ **ಮಳೂರು** ಬೀದಿಯಲ್ಲ ವಾಲೆ ತೋಪು
ಚಂದಕೆ ಕಟ್ಟಿಸವ್ರೆ **ಕೂಡಲೂರ** || ರಾಜಬೀದೀಲಿ ||

ತಾಯಿ ಚೆಲ್ಲವ್ವ ಮೆರೆದಾಳೆ
ಕನ್ನೆ ಚಲ್ಲವ್ವ ಬೆನ್ನಲ್ಲಿ ಜಿಗಣಿಯು ತೆಗೆದು
ಬಿನ್ನಾಣ ನಾ ಪಗಡೆ **ಕೂಡಲೂರು** ||

ಸಣ್ಣ ರಾಜಣದ ಬಯಲಲ್ಲಿ.
ಗುಂಡಿನ ಪೂಜೆ ಉದ್ವವಾದವೆಂದು
ಎದ್ದು ನೋಡಾರೆ ಶರಣಾರು **ಕೂಡಲೂರ** ||

ಉದ್ವವಾಗುವುದ ಪೂಜೆಯನ್ನು
ಕೋಟಿ ಸುಂಗಾರ ಕೊನೆ ಮುತ್ತು ಬಂಗಾರ
ತೇರು ಸುಂಗಾರ **ಕೂಡಲೂರು** ||ಬೀದೀಲಿ||

ರಾಮರು ಸುಂಗಾರ ಗುಡಿಯಲ್ಲಿ
ಮಲ್ಲಿಗೆ ಮಳೂರು ಸಂಪಿಗೆ ವಾಲೆ ತೋಪು
ಡೆಂಕಣಿ ಕೋಟಿ **ಕೂಡಲೂರು** ||ರಾಜಬೀದೀಲಿ||

ಹಯವಾದಿ ರಾಮರು ಹರಿವಾರು.
ಕೋಟೆಯಲಿ ಬೆಳಕು ಹಗಲಾದೊ ರಾಮದೇವರೆ

ಹಗ್ಗಿನಲಿ ಆದೆ **ಕೂಡಲೂರು** ||ರಾಮದೇವರ್‍ಗೆ||
ತಗ್ಗಿನಲಿ ತೇರು ಹರಿದಾವೋ

ಗ್ರಾಮ ದೇವತೆ ಬಿದರ ಚೆಲ್ಲಮ್ಮನ ಹಾಡಿನಲ್ಲಿ
ಕೂಡ್ಲೂರ ಕೆರೆಯಲ್ಲಿ ಗುಡಗಾಡೋಳಿವಳ್ಯಾರೆ
ಗುರುಗಂಜಿ ಸೀರೆ ನೆರೆಯೋಳು ದೊಡ್ಡಮ್ಮ ||

ಗುಡುಗನಾಡಿ ಗುಡಿಗೆ ಹೊರಟಾಳೆ
ಕೂಡೇವಕ್ಕ ನಾವು **ಕೂಡ್ಲೂರ** ಕೆರೆಯಾಗೆ
ಕೂಯ್ಯು ಕೇದಿಗೆಯ ಮುಡಿದೇವು ಅಕ್ಕ ನಾವು
ಕೂಡೇವಕ್ಕ ತೌರ ಮನೆಯಾಗೆ ||[೫೯]

ಅಕ್ಕ ತಂಗೇರು ಬನಗೂಡಿ ಚಲ್ಲವ್ವ
ಬಂದಾಳು **ಕೂಡಲೂರ** ರಾಜಬೀದಿಗೆ ರಾಜಬೀದಿಗೆ ||ಅಕ್ಕ||

ಆ ಊರಿವೂರು ದೇವಲೋಕದ ಊರು
ದೇವೇಂದ್ರನಂತಾ **ಕೂಡಲೂರು** ರಾಜಬೀದೀಲಿ
ತಾಯಿ ಚಲ್ಲವ್ವ ಮೆರೆದಾಳೆ ಮೆರೆದಾಳೆ ||ದೇವೇಂದ್ರ||

ಹೊನ್ನು ವರವಾದೋ ತುಪ್ಪದ ದೀವಿಗೆಯಾದೋ
ಪಟ್ಟಣನ್ನೋದು **ಕೂಡಲೂರು** ರಾಜಬೀದೀಲಿ
ಗೊಂಬೆ ಚಿತ್ತಾರದ ಮಡೆ ಕಡೆದೋ ಕಡೆದೋ ||ಪಟ್ಟಣ||[೬೦]

ಅಚ್ಚಂದ **ಕೂಡಲೂರು** ನೀರು ಚಂದ ಚಿಕ್ಕತೊರೆ
ದೇವರು ಚಂದ ಕರಿಯಮ್ಮ ಕರಿಯಮ್ಮ ||ಅಚ್ಚಂದ||[೬೧]

ಮಾತಿನಲೋಗಿ ಗೆದ್ದಾಳೆ **ಮೈಸೂರ** ಮನೆಯ
ಕೂತು ಗೆದ್ದಾಳೆ ಕುದುರೇಯ ಕುದುರೇಯ ||ಮಾತಿ||

ಕೂತುಗೆದ್ದಾಳೆ ಕುದುರೇಯ **ಚನ್ನಪಟ್ಟಣದ**
ಮಾತಿನಲಿ ಗೆದ್ದವಳೆ ಮಲತೇಯ ಮಲಕೇಯ ||ಕೂತು||[೬೨]

ಆವೂರು ಈವೂರು ದೇವಲೋಕದ ಊರು
ದೇವೇಂದ್ರನಂತಾ ಕೂಡಲೂರು **ಕೂಡಲೂರು** ||ಆವೂರು||

ಅಕ್ಕ **ಕೂಡಲೂರು** ಚೆಲ್ಲಿ ತಂಗಿ ಮಳೂರು ಚೆಲ್ಲಿ
ತೆಂಗಿನ ಹಣ್ಣು ಒಲೆ ಹೂಡಿ ಒಲೆ ಹೂಡಿ ||ಅಕ್ಕ||

ತೆಂಗಿನ ಹಣ್ಣು ಒಲೆ ಹೂಡಿ ಅಡಿಗೇ ಮಾಡಿ
ಅಣ್ಣ ಅಪ್ರಮೇಯನ ಮದುವೇಗೆ ಮದುವೇಗೆ ||ತೆಂಗಿನ||

ಹಾದಿ **ಮಳೂರು** ಬೀದಿಯೆಲ್ಲ ವಾಲೆತೋಪು
ಚಂದಾಕೆ ಕಟ್ಟಿಸವ್ರೆ **ಕೂಡಲೂರು** ಕೂಡಲೂರು ||ಹಾದಿ||

ಚಂದಾಕೆ ಕಟ್ಟಿಸವ್ರೆ **ಕೂಡಲೂರು** ರಾಜಬೀದೀಲಿ
ತಾಯಿ ಚಲ್ಲವ್ವ ಮೆರೆದಾಳೆ ಮೆರೆದಾಳೆ ||ಚಂದಾಕೆ||

ಗಂಗವಾಡಿಲವ್ವೆ ಲಿಂಗವಂತೆ ಚಲ್ಲವ್ವ
ಗಂಧಾದ ವಾರ ಹೊಡಕೊಂಡು | ದೊಡ್ಡಮ್ಮ
ರಂಗಾದೊತ್ತಿಗೆ ಬರಬೇಕು[೬೩]

ಕೂಡ್ಲೂರು ಕೆರೆಯಲ್ಲಿ ಗುಡುಗಾಡೋಳು ಇವಳ್ಯಾರೆ
ಗುರುಗಂಜಿ ಸೀರೆ ನೆರಿಯೋಳೆ ದೊಡ್ಡಮ್ಮ
ಗುಡನಾಡಿ ಗುಡಿಗೆ ಹೊರಟಾಳೆ
ಹಾದಿ **ಮಳೂರು** ಬೀದಿಯೆಲ್ಲ ವಾಲೆ ತೋಪು
ಚಂದಕೆ ಕಟ್ಟಿಸವ್ರೆ **ಕೂಡಲೂರ** ರಾಜಬೀದೀಲಿ
ತಾಯಿ ದೊಡ್ಡಮ್ಮ ಮೆರೆದಾಳೆ

ಐದು ಶೂಲಬಂದೋ ನಾಕುಹೆಬ್ಬಾರೆ ಬಂದೋ
ರಂಗಕ್ಕೆ ಬಂದೋ ಕೂಡಲೂರ | ರಾಜಬೀದೀಲಿ
ತಾಯಿ ದೊಡ್ಡಮ್ಮ ಮೆರೆದಾಳೆ[೬೪]

"**ಹೊಸೂರಿಂದ** ಬತ್ತ ತಂದೆ ಕುಟ್ಟೋಳು ಬಡ್ಡಿ
ಕುಟ್‌ನಾರೆ ಕಾಣ್‌ದಮ್ಮಯ್ಯ ಸಳಿ ಬಂದದೆ[೬೫]

ಬಾನಂದೂರಿಂದ ಬಳೆಬಂದೊ ಅಣ್ಣಯ್ಯ
ನನಗೆರಡು ತೊಡಿಸೊ ಹೊಸ ಬಳೆಯ[೬೬]

ಬೇಗನೂರೋಳೆ ಬ್ಯಾಗನೆ ರಾಶಿಮಾಡೆ
ಕೊರಗೆ ನಿಂತಾವೆ ಹೊಲದಲ್ಲಿ | ಅಕ್ಕಮ್ಮ
ನಮ್ಮಣ್ಣಯ್ಯ ನಿಂತವ್ನೆ ಬಿಸಿಲಲ್ಲಿ[೬೭]

ಕಬ್ಬಾಳ ಕಣಿವೇರಿ ಒಬ್ಬಳೇ ಬರುವಾಳೆ
ಹೆಬ್ಬುಲಿ ಕರಡಿ ಇದಿರಾದೋ | ತಂಗ್ಯಮ್ಮ
ಅಬ್ಬರಿಸಿ ಅವ್ಳು ಬರುತಾಳೆ

ಕಬ್ಬಾಳ ಕಣಿವೇಲಿ ಒಬ್ಬಳೇ ಬರುತ್ತಿದ್ದೆ
ಹೆಬ್ಬುಲಿ ಕರಡಿ ಇದಿರಾದೊ | ಅಣ್ಣಯ್ಯ
ಅಬ್ಬರಿಸಿ ನಾನು ಬರುತ್ತಿದ್ದೆ | ಅಣ್ಣಯ್ಯ
ಒಬ್ಬಳೆ ನಾನು ಬರಲಾರೆ[೬೮]

'ಅಡವೀಲಿ ಆಲದ ಗಿಡದೇಲಿ ಗೊಲ್ಲರದೊಡ್ಡಿ
ಬೆಡಗೀಯ ಹಾಲ ಕರೆಯೋಳ | ದೊದಂಮ್ಮ.
ಬೆಡಗು ಬೇಲೂರು ಬೆಲೆಂಗೂದೋ'

ಕೊಂಡ ಪುರದ್ಗಂಟ ಕೊಂಡಳ್ಳಿ ಮರಕಂಟ
ದುಂಡಿ ಬಿಸಿಲವ್ನ ಗುಡಿಗಂಟ ಬಾಕಲಮುಂದೆ
ದುಂಡೀರಾರುತಿ ಬೆಳಗಾರೋ'

ಎಲಿಕಲ್ಲ್ರಿ ತಿಮ್ಮಯ್ಯ ಈ ಮಾತ ನೀನೀಗ
ಬುಟ್‌ಬುಡೋ ನಿನ್ನ ಬುಗುಡಿ ಮಾತು || ನೀನೀಗ
ಯಾಲಕ್ಕಿ ಎಲೆ ಬಲು ಸಣ.

ಸೋಲೂರ್ ಹುಡುಗೀಹೊ ನಡುಸಣ್ಣ ತಿಮ್ಮಯ್ಯ
ಆ ಪೆಣ್ಣೆ ನನಗೆ ಕೊಡಿಸಣ್ಣ | ನೋಡಣ.
ಅವಾಗ ಸೋಲೂರ್ ಹುಡುಗೀರ್ನ

ತಿರುಗಿ ನೋಡಣ್ಣ ಸೋಲೂರ್ ಹುಡುಗೀರ್ನ
ಕೊರ ಮಂಜಿಗೂಡ ಕೊರೆದಂಗೆ | ತುರುಬು
ಜಗಜಗ ಆವೂನು ಹೊಳೆದಾವೊ'

"ಎತ್ತೆತ್ತ ನೋಡಿದರೂ ತತ್ತೈಸಿ ನಿಂತಾವೆ
ಸುತ್ತ ಮಾಗಡಿ ತಿರುಮಾಳಿ ತ್ವಾಟದಲಿ
ತತ್ತೈಸಿ ನಿಂತಾವೆ ಬಿಳಿಯೆಲೆ
ಎಲ್ಲೆಲ್ಲಿ ನೋಡಿದರೂ ಪಲ್ಲೇಸಿ ನಿಂತಾವೆ
ಅಲ್ಲಿ ಮಾಗಡಿ ತಿರುಮಾಳಿ ತ್ವಾಟದಲಿ
ಪಲ್ಲೇಸಿ ನಿಂತಾವೆ ಚಿಗುರೆಲೆ"

ಮಾಗ್ಡಿಕೆಂಪೇಗೌಡ ಮಾತ್ನಲ್ಲಿ ಸಮರಂತ
ಮಾತ್ನಲ್ಲಿ ಗೆದ್ದ ಮಾಗುಡೀಯ |
ಮಾತ್ನೆಲ್ಲಿ ಗೆದ್ದ ಮಾಗುಡೀಯ ಕೆಂಪೇಗೌಡ
ಮಾಗುಡಿ ಪ್ಯಾಟೆ ನಡುವಲ್ ಕೆಂಪೇಗೌಡ
ಸುತ್ತಿ ಬರ್ತಾನೆ ಪವುಳೀಯ |

ಮಾಗುಡಿ ಎಂಬೋದು ಏಳುಸುತ್ತಿನ ಕೋಟೆ
ರಾಯ ಮಂಡಲಿ ಬರುವೋನೆ |

ರಾಯ ಮಂಡಲಿ ಬರುವೋನ್ ಕೆಂಪಣ್ಣಗೌಡ
ಸುತ್ತೇಳು ಕೋಟೆ ಗೆಲುವಾನೆ |

ಮಾಗುಡಿ ರಂಗಧಾಮ ಮನೆದೇವ್ರು ರಂಗಧಾಮ
ಏಳು ಕೊಪ್ರಿ ದ್ರವಿಯ ಕೊಟ್ಟಾಗ ಕೆಂಪೇಗೌಡ
ಏಳು ಸುತ್ತಿನ ಕ್ವಾಟೆ ಕಟ್ಟ |[೨೩]

ಮಾಗ್ಡಿ ಕೆಂಪಣ್ಣಗೌಡ ಮಾತ್ನಲ್ಲಿ ಬಹುಶೂರ
ಮಾತ್ನಲ್ಲಿ ಗೆದ್ದ ಮಾಗುಡಿಯ ಕೋಲನ್ನ ಕೋಲೆ
ಮಾತಿನಲ್ಲಿ ಗೆದ್ದ ಮಾಗುಡಿಯ[೨೪]

ಮಾತಲ್ಲಿ ಗೆದ್ದ ಮಾಗಡಿ ಕೆಂಪೇಗೌಡ
ರೀತೀಲಿ ಗೆದ್ದ ಬೆಂಗಳೂರ ಕೋಲಣ್ಣ ಕೋಲೆ ||ಪ||

ರೀತೀಲಿ ಗೆದ್ದ ಬೆಂಗಳೂರ ಕೆಂಪೇಗೌಡ
ಜಾತ್ರೇಲಿ ಗೆದ್ದ ಜವನಾದ ಕೋಲಣ್ಣ ಕೋಲೆ ||ಪ||[೨೫]

ಬೇಗದಿ ಕಟ್ಟಿರಿ ಗೋಪುರವ
ಮಾಗಡಿ ಭೂಪನ ಗೋಪುರವ ||ಪಲ್ಲವಿ||

ಕಟ್ಟಿದ ಬೆಂಗಾಳು ಪಟ್ಟಣವ
ಕಟ್ಟಿದ ಕೆಂಪಾಂಬುಧೀ ಕೆರೆಯ
ಕಟ್ಟಿದ ದಿಕ್ಕಿನ, ಗೋಪುರಗಳನು
ಕಟ್ಟಿದ ಕೋಟೆಯ ಶ್ರೀಕೆಂಪಭೂಪ

ಗವಿಯ ಗಂಗಾಧರನ ದೇಗುಲವ
ಜವದಿ ಕಟ್ಟಿಸಿ ಛತ್ರಚಾಮರವ
ಶಿವಲಿಂಗವೆತ್ತಿದ ಹಲಸೂರಿನಲ್ಲಿ
ಅವನು ಸೋಮೇಶ್ವರ ದೇಗುಲದಲ್ಲಿ

ಕಟ್ಟಿದ ದಕ್ಷಿಣ ಕಾಶಿಯೊಳು
ಬೆಟ್ಟದ ಗಂಗಾಧರೇಶ್ವರನ
ಕಟ್ಟಿದ ಬಸವನ ತಿದ್ದಿದ ಕಲ್ಯಾಣಿ
ಇಟ್ಟನು ಭಾರೀಯ ಗಂಟೆಯ ಭೂಪ

ಆತನು ಕಟ್ಟಿದ ಹಳ್ಳಿಗಳ
ಆತನು ಮಾಡಿದ ದಾನಗಳ
ಪ್ರಿತಿಸಿ ನಿಲಿಸಿದ ಕೋರಮಂಗಲದಿ
ಆತನ ಸೊಸೆಯ ಲಕ್ಷ್ಮಿಯ ಭೂಪ

ಶಿವಗಂಗೆಯೆಂಬುವದೊಂದೂರು
ಅವನದ ಮಾಗಡಿಯೊಂದೂರು

ಇವನೆಲ್ಲ ಕಟ್ಟಿಸಿ ಸಾವನದುರ್ಗ
ಕವನು ಬಂದನು ನೆಲಪಟ್ಟಣಕಾಗಿ
ಮಾಗಡಿ ಶಿವದೇವಾಲಯವು
ಹೋಗುತಲಿದೆ ಕಾವರಿಲ್ಲದಲೆ
ಹೋಗುವ ಬನ್ನಿರಿ ಒಕ್ಕಲ ಮಕ್ಕಳೆ
ಬೇಗನೆ ಕಟ್ಟಲು ದೇವರ ಮನೆಯ[21]

೭.೭. ಜನಪದ ಕಥನ ಕಾವ್ಯ ಮತ್ತು ಸ್ಥಳನಾಮಗಳು

ಜನಪದ ಗೀತೆಗಳಲ್ಲಿ ಜನಪದ ಕಥನ ಕಾವ್ಯ ಬಹಳ ಮುಖ್ಯವಾದದ್ದು. ಇದನ್ನು ಜನಪದ ಕಥನಗೀತೆ, ಪದ್ಯಕಥೆ, ಖಂಡಕಾವ್ಯ, ಲಾವಣಿ ಎಂಬ ಹೆಸರುಗಳನ್ನು ಬಳಸುವುದು ರೂಢಿಯಾಗಿದೆ. ಗದ್ಯದಲ್ಲಿ ಕಥೆಗಳಿರುವಂತೆ ಪದ್ಯದಲ್ಲಿ ಕಥನ ಕಾವ್ಯಗಳಿವೆ. ಕನ್ನಡದಲ್ಲಿ ಸಾಮಾಜಿಕ, ಚಾರಿತ್ರಿಕ, ಪೌರಾಣಿಕ, ಐತಿಹ್ಯಾತ್ಮಕ ಮೊದಲಾದ ಪ್ರಕಾರದ ಕಥನ ಕಾವ್ಯಗಳಿವೆ. ಜನಪದ ಸಂಸ್ಕೃತಿಯಿಂದ ಆರಿಸಿದ ವಸ್ತುವನ್ನು ಕಥೆಯು ಒಳಗೊಂಡಿರುತ್ತದೆ.

ಕಥನಕಾವ್ಯದಲ್ಲಿ ಕಥೆಯೇ ಜೀವಾಳ, ಪಾತ್ರ ರಚನೆ ಮತ್ತು ಕ್ರಿಯೆಗಳೇ ಇಲ್ಲಿ ಪ್ರಮುಖ ಸ್ಥಾನಪಡೆದಿದೆ. ವರ್ಣನೆಗಳಿರುವುದಿಲ್ಲ. ಘಟನೆಯಿಂದ ಘಟನೆಗೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ಕತೆ ಸುಲಭವಾಗಿ ವೇಗವಾಗಿ ಹರಿಯುತ್ತಿರುತ್ತದೆ. ಯಾವುದೋ ಒಂದು ಘಟನೆ, ಒಂದು ಸನ್ನಿವೇಶ ಕೇಂದ್ರವಾಗಿದ್ದು ನಡುನಡುವೆ ಸ್ಥಳನಾಮಗಳೂ ಬರುವ ಸಂಭವ ಉಂಟು. ಇವು ಸಾಮಾನ್ಯವಾಗಿ ಚಾರಿತ್ರಿಕ ಮತ್ತು ಐತಿಹ್ಯಾತ್ಮಕ, ಪೌರಾಣಿಕ ಮೊದಲಾದ ಕಥನಕಾವ್ಯಗಳಲ್ಲಿ ಸಾಂದರ್ಭಿಕವಾಗಿ ಸ್ಥಳನಾಮಗಳು ಬರುವುದು. ಜನಪದ ಕಥನ ಕಾವ್ಯಗಳಲ್ಲಿ ಬರುವ ಸ್ಥಳನಾಮಗಳು ಸಾಮಾನ್ಯವಾಗಿ ಕಥಾನಾಯಕನ ಊರಾಗಿರಬಹುದು. ಕಥಾನಾಯಕ ಅಥವಾ ಕಥೆಯ ಇನ್ನಿತರ ಪಾತ್ರಗಳು, ಓಡಾಡುವಂಥ ಪ್ರದೇಶದ ನೆಲೆಗಳು, ಊರುಗಳು, ಉಕ್ತಗೊಂಡಿರುತ್ತವೆ. ಇಲ್ಲವೇ ಯುದ್ಧಮಾಡಿ ಜಯಿಸಿದ ಸ್ಥಳಗಳ ವಿವರಗಳು ಸಿಗುತ್ತವೆ. ಅಲ್ಲದೇ ಆ ಸ್ಥಳದಲ್ಲಿನ ವಿಶಿಷ್ಟವಾದ ಅಂಶಗಳು ದೊರೆಯುತ್ತವೆ. ಕಥನ ಕಾವ್ಯಗಳಲ್ಲಿ ದೊರೆಯುವ ಸ್ಥಳನಾಮಗಳಲ್ಲಿ ಪ್ರಾದೇಶಿಕ ಭಾಷೆಯ ವೈಶಿಷ್ಟ್ಯತೆಯನ್ನು ಹಾಗೂ ಜನಪದರ ಭಾಷೆಯಲ್ಲಿನ ಕೆಲವೊಂದು ನಿಖರವಾದ ಸ್ಥಳಗಳು ಲಭ್ಯವಾಗುವುದರಿಂದ ಇವುಗಳ ಮೂಲಕ ಆ ಪ್ರದೇಶದ ಸಂಸ್ಕೃತಿ, ಆಚಾರವಿಚಾರ, ಸಂಪ್ರದಾಯಗಳು, ಸ್ಥಳಮಹತ್ವದ ವಿವರಗಳು ಸಿಗುತ್ತವೆ.

ಹೋಗಬೇಕು ಇನ್ನು ಈಗ
ಮಾಗಡಿ ಸೀಮೆಗ್ಹೋಗ
ಮಾಗಡಿ ಸೀಮೇಲಿ
ಕಾಸಿಗೆ ಸೇರು ರಾಗಿಯಂತೆ
ಆಗ ಮಾಗಡಿ ರಂಗಧಾಮ
ಏನು ಯೋಚನೆ ಮಾಡುತಾನೆ

ಶಿವಗಂಗೆ ಊರಲ್ಲಿ ಕಟ್ಟುಸ್ಯಾನು
ಅಲ್ಲಿ ಕೆಂಪೇಗೌಡ್ನ ಪ್ರತಿರೂಪ ತಿದ್ದಿಸ್ಯಾನು

ಕುಂತು ಕುಣಿಗಲು ಗೆದ್ದ
ನಿಂತು ಮಾಗಡಿ ಗೆದ್ದ
ಮಾತಲ್ಲಿ ಗೆದ್ದ ಮಧುರೆಯ

ಅಪ್ಪ-ಮಾಗ್ಡಿ ಪಟ್ಣಾದಲ್ಲಿ ಅಗ್ಗುಲಾರ್ಪ ಬೀದಿಯಲ್ಲಿ
ಅಗ್ಗುರಾರ್ಪ ಬೀದಿಯಲ್ಲಿ ಸಾವ್ರ ಕಂಬುದರಮಾನೆ
ಒಂದು ಸಾವ್ರ ಕಂಬದರುಮನೆ ಕಟ್ಟಿಸಪ್ಪ ಕೆಂಪೇಗೌಡ
ಒಂದು ಆನೆ ಮೆಟ್ಟನಜಾರ ಕಟ್ಟಿಸಪ್ಪ ಕೆಂಪೇಗೌಡ
ಆಗ-ಮಾಗುಡಿ ಪಟ್ಟಣದ ತಿರುಮಲೆ ಪ್ಯಾಟೆವೊಳುಗೆ
ತಿರುಮಲೆ ಪ್ಯಾಟೆವೊಳುಗೆ ಜಾರೂಕಲ್ಲಿನ ಮ್ಯಾಲೆ

ನನ್ನದೊಂದು ದೇವ್ರುಸ್ತಾನ ಚಂದದಿಂದ ಕಟ್ಟಿಸಪ್ಪ
ಅಯ್ಯ-ಮಾಗುಡಿ ಪಟ್ಟಣಕೆ ಕರುಕೊಂಡು ಬರುತಾರೆ
ಚಿನ್ನಾದ ಕತ್ತಿಯು ಕೆಂಪೆಗೌಡ್ಗೆ ಕೊಟ್ಟವುರೆ
ಮಾಗಡಿ ಪಟ್ಟಣದ ತಿರುಮಲೆ ಪ್ಯಾಟೆವೊಳುಗೆ
ತಿರುಮಲೆ ಪ್ಯಾಟೆಯ ಜಾರೂಕದಲ್ಲಿನ ಮ್ಯಾಲೆ
ರಂಗಧಾಮ್ನ ಗುಡಿಯನ್ನು ಚಂದದಿಂದ ಕಟ್ಟಿಸವ್ನೆ
ಮೂವತ್ರಂಕ್ಲದ ಗುಡಿಯ ಮುದ್ದಾಗಿ ಕಟ್ಟುಸಂತ್ನಿ

ಅಯ್ಯ-ಉತ್ತುರ ಹುಲಿಯೂರು ದುರ್ಗ-ಹುಲಿಯ ಮಾಗಡಿ ಕೋಟೆ ತಂದಾನಾನೆತಾನೆ
ಅಂತ-ಹುಲಿಯ ಮಾಗಡಿ ಕೋಟೆ ಕೊನೆಯ ಗೊಂಬಿನ ಮ್ಯಾಲೆ
ಮಾಗಡಿ ಪಟ್ಟಣದಲ್ಲಿ ಗಜಮುತ್ತಿನರಮನೆ
ಗಜಮುತ್ತಿನರಮಲ್ಲಿ ಗಾಜೀನ ಕಲುಕಂಬ
ಗಾಜೀನ ಕಲುಕಂಬ ರಾಜುಣ ಕೆಂಪೇಗೌಡ
ರಾಜುಣ ಕೆಂಪೇಗೌಡ ದೆರೆಯಾಪ್ತಿ ಮಾಡುತಾನೆ
ಮೊಸರು ಒಕ್ಕಲುಮಗ ಮಾಗುಡಿಯ ಕೆಂಪೇಗೌಡ

ಅಯ್ಯ-ಮೊಸರು ಒಕ್ಕಲ ಮಗ ಮಾಗಡೀಯ ಕೆಂಪೇಗೌಡ
ಆಗ-ಇಪ್ಪತ್ತು ನಾಕೊರುಸ ರಾಜ್ಯಭಾರನಾಳುತಾನೆ

ತಾಯಿ-ನಾನು ಸಾಲ ಇರುದಿಲ್ಲ ಮಾಗಡಿ ಪಟ್ಟಣದಲ್ಲಿ
ಅಮ್ಮ-ನಾನು ಸಾಲ ಹೋಗುತೀನಿ ಮೈಸೂರ ಸೇರುತೀನಿ

ಅಮ್ಮ-ನಾನು ಹೋದಮೂರು ದಿನ್ಕೆ ನೋಡಿಕೊಳ್ಳೆ ಮಾಗಡೀಯ
ನಿಮ್ಮ-ಮಾಗಡಿ ಪಟ್ಟಣದಲ್ಲಿ ಹೆಣ್ಣುಗಳು ಗಂಡುಗಳು
ತಾಯಿ-ರಗುತಕೋಡಿಗಳರೀತಾವೆ ರಣದ್ದುಗಳಾಡುತಾವೆ[೮೩]

ಅಯ್ಯ-ಎಂತೆಂತೆ ಬ್ಯಾಡರುಡುಗ ಕುಣುಗ್ಲೂರು ತಿಮ್ಮನಾಯ್ಕ
ಗುಬ್ಬಿ ಹೊನ್ನಪ್ಪನಾಯ್ಕನ ಬ್ಯಾಗದಲ್ಲಿ ಕರಸಿದರು
ರಾಮಗಿರಿ ನಾಯ್ಕನು ರತ್ನಗಿರಿ ನಾಯ್ಕನು
ಹಾಗಲ್ವಾಡಿ ಮುದಿನಾಯ್ಕನ ಬ್ಯಾಗದಲ್ಲಿ ಕರಸಿದರು
ಅಯ್ಯ-ರಂಗಧಾಮ್ನ ಬಿಟ್ಟು ಬಿಟ್ಟು ನಿನ್ನನ್ನೆ ನಂಬಿಬಂದೆ
ಅವ್ನು ಕೊಟ್ಟಂಥ ಪ್ರಾಸೋದ ಕೈಗೆ ತಕ್ಕೊಂಡನಲ್ಲೊ
ಆಗ ಕಣ್ಣೀಗೆ ಒತ್ತಿಕೊಂಡು ಕಣ್ಣುತುಂಬ ನೋಡುತಾನೆ
ಆಗ-ಸೋಮಿಲಿಂಗ್ನ ಕೀಳಿಸೀದ ಪಾಲಕೀಲಿ ಮಡಗಿಸಿನದ
ಅಂಥ-ಬೆಂಗಳೂರು ಪ್ಯಾಟೆಯಲ್ಲಿ ಮೆರವಣಿಗೆ ಮಾಡಿಸಿದ
ಹಲಸೂರು ಬೀದಿಯಲ್ಲಿ ಮೆರವಣಿಗೆ ಮಾಡಿಸಿದ
ಆಗ-ಅಲ್ಲಿಂದ ಮಾಗಡೀಗೆ ತಂದರಪ್ಪ ಸೋಮಿಲಿಂಗ್ನ
ಆಗ-ಮಾಗಡಿ ಪಟ್ಣದೊಳಗೆ ಮೆರವಣಿಗೆ ಮಾಡಿಸಿದ
ಸ್ವಾಮಿ-ರಂಗಾನ ಗುಡಿಮುಂದೆ ಮೆರವಣಿಗೆ ಮಾಡಿಸಿದ[೮೪]

ಅಂಥ-ಮೈಸೂರು ಸೀಮೆಯಾದ್ರೆ ಹೆಣ್ಣು ರಾಜ್ಯ ಕಾಣಮ್ಮ
ನನ್ನ-ಮಾಗಡಿ ಸೀಮೆ ಅಂದ್ರೆ ಗಂಡು ರಾಜ್ಯ ಕಾಣಮ್ಮ[೮೫]

ಆಗ-ರಂಗನಾಥ್ನ ಗುಡಿಯೆದುರು ಸೋಮಿಲಿಂಗ್ನ ದೇವುಸ್ತಾನ
ಅಂಥ ಸೋಮಿ ಲಿಂಗನ ದೇವುಸ್ಥಾನಕ್ಕೆ ತಳಪಾಯ ಮಾಡಿಸೀದ
ಅಂಥ-ಕೈಲಂಚಿ ಹೊಳೆವೊಳುಗೆ ಕಲ್ಲುಗಳನೆ ಕೀಳಿಸೀದ
ಆಹಾ-ಕಂಬಸಿಂಬಿಗಳಿಗೆಲ್ಲ ಚಿತ್ತಾರ ಕಡಿಸೀದ
ಸ್ವಾಮಿರಂಗಾನ ಗುಡಿಯೆದುರು ದೇವುಸ್ತಾನ ಕಟ್ಟಿಸಿದ[೮೬]

ಅಂಥ-ಶಾವಂದಿ ದುರ್ಗದ್ಮೇಲೆ ಬಂದುನಿಂತ ರಂಗಧಾಮ
ಅಯ್ಯ-ಮಾಗಡಿ ಇತ್ತಾರನೆಲ್ಲಿ ಕಣ್ಣು ತುಂಬ ನೋಡಿದಾನು
ನಾನು ಮುತ್ತಿನಂಥ ಸೀಮೆಬಿಟ್ಟು ಎಲ್ಲೀಗೆ ಹೋಗಲಯ್ಯ
ಇಂಥ-ಹಾಲುನಂಥ ಸೀಮೆಬಿಟ್ಟು ಎಲ್ಲೀಗೆ ನಾನೋಗಲಪ್ಪ[೮೭]
ಸ್ವಾಮಿ-ನಮ್ಮ ಮೈಸೂರು ಹೆಣ್ಣು ಭೂಮಿ ಕಾಣಪ್ಪ

ಸ್ವಾಮಿ-ಮಾಗಡಿ ಪಟ್ಟಣಾವು ಗಂಡು ಭೂಮಿಯ ತಾಣಪ್ಪ[೮೮]
ಆಗ-ಮೈಸೂರು ಬೀಗ ತಂದು ಮಾಗಡೀಗೆ ಹಾಕಿದಾರು

ಅಪ್ಪ-ಮಾಗಡಿ ಪಟ್ಣವೆಲ್ಲ ಮೈಸೂರ್ ಪಾಲಾಯಿತಲ್ಲ
ಅಂಥ-ಒಂಟುಕೊಂಬಿನ ಬಿಳಿಯಾನೆ ಮೈಸೂರ್ ಪಾಲಾಯಿತಲ್ಲ[೯]
ಕೈಲಂಚಿ ಹೊಳೆಯಲ್ಲಿ
ಅಯ್ಯ ಕೈಲಂಚಿ ಹೊಳೆಯಲ್ಲಿ
ಸ್ನಾನವನ್ನೆ ಮಾಡುವಾಗ್[೧೦]
ಅಯ್ಯ ಚನ್ನಾಗಿ ರಾಜ್ಯವ
ಆಳುತಾನೆ ಕೆಂಪೇಗೌಡ
ಅಯ್ಯ ಮೂವತ್ತು ಮೂರುವರ್ಷ
ಮಾಗುಡಿಯ ಆಳಿದನು[೧೧]
ಮೈಸೂರು ದಳವಾಯಿಯೆ
ದಳವಾಯಿ ದೊಡ್ಡಯ್ಯ ನೀನು
ಅಯ್ಯ ಮಾಗುಡಿಯ ಪಟ್ಟಣಕ್ಕೆ
ದಂಡನ್ನಾದರೆ ಕಳಿಸಬೇಕು
ಮಾಗಡಿಯ ಪಟ್ಟಣವನ್ನು
ನಿನ್ನವಶ ಮಾಡುತೀನಿ[೧೨]
ಕೆಂಪಸಾಗರ ಕೆರೆಯನ್ನು
ನಿಲ್ಲಿಸವನೆ ಕೆಂಪೇಗೌಡ
ಕೋಲು ಕೋಲೆ ||ಪ||[೧೩]

ಅಡಿ ಟಿಪ್ಪಣಿಗಳು

೧. ದೇ.ಜವರೇಗೌಡ, ಜಾನಪದ ಅಧ್ಯಯನ, ಪುಟ.೪, ೧೯೯೧

೨. ಅದೇ ಪುಟ.೨೦-೨೧

೩. ಸಂ.ಪ್ರೊ.ಡಿ.ಲಿಂಗಯ್ಯ, ಡಾ.ಕೆ.ಆರ್.ಸಂಧ್ಯಾರೆಡ್ಡಿ, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ.೩, ೨೦೦೬

೪. ದೇ.ಜವರೇಗೌಡ, ಸ್ಥಳನಾಮ ವ್ಯಾಸಂಗ, ಪುಟ.೯೩, ೧೯೯೦

೫. ಅದೇ ಪುಟ.೧೧೧

೬. ದೇ.ಜವರೇಗೌಡ, ಜಾನಪದ ಅಧ್ಯಯನ, ಪುಟ.೧೯೨, ೧೯೯೧

೭. ಡಾ.ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪುಟ.೧೦, ೧೯೯೪

೮. ಅದೇ ಪುಟ.೧೦

೯. ಸಂ.ಡಾ.ವೀರಣ್ಣ ದಂಡೆ, ಡಾ.ಶ್ರೀಪಾದಶೆಟ್ಟಿ, ಸುವರ್ಣ ಜಾನಪದ ಲೇಖನಗಳು, ಉಧೃತ ಪುಟ.೪೯ ೨೦೦೬

೧೦. ಡಾ.ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ರೈ, ಪುಟ.೩೨, ೧೯೯೪

೧೧. ದೇ. ಜವರೇಗೌಡ, ಸ್ಥಳನಾಮ ವ್ಯಾಸಂಗ, ಪು.೧೧೧-೧೧೨, ೧೯೯೦

೧೨. ಡಾ.ಅಂಕನಹಳ್ಳಿ ಪಾರ್ಥ, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ.೩೪-೩೫, ೨೦೦೮

೧೩. ಬೊಮ್ಮೇಗೌಡ, 'ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳ ಅಧ್ಯಯನ, ಪುಟ. ೩೫-೩೬, ೧೯೯೮

೧೪. ಸಂ.ಪ್ರೊ.ಡಿ.ಲಿಂಗಯ್ಯ, ಡಾ.ಚಕ್ಕರೆ ಶಿವಶಂಕರ್, ಸ್ಥಳನಾಮಗಳ ಅಧ್ಯಯನ, ಪುಟ.೯೦-೯೧, ೨೦೦೮

೧೫. ಯಶೋದಮ್ಮ, ಕಚುವನಹಳ್ಳಿ ಸಂದರ್ಶನ, ದಿ.೧೨.೮.೨೦೧೦.

೧೬. ಸಂ.ಎಂ.ಬೈರೇಗೌಡ, ತಾ.ಸಿ.ತಿಮ್ಮಯ್ಯ, ಅರ್ಕಾವತಿ, ಪುಟ.೧೬೨-೧೬೩, ೧೯೯೯

೧೭. ಹನುಮಂತಪ್ಪ, ಕುರುಪೇಟೆ, ಸಂದರ್ಶನ ದಿ.೧೯.೩.೨೦೧೦

೧೮. ಡಾ.ಕೂಡ್ಲೂರು ವೆಂಕಟಪ್ಪ, ಗೊಂಬೆಚಿತ್ತಾರ ಮಡೆಕಡೆದೊ, ಪುಟ.೧೬, ೨೦೦೯

೧೯. ಅದೇ ಪುಟ.೧೭

೨೦. ಡಾ.ಅಂಕನಹಳ್ಳಿ ಪಾರ್ಥ, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ.೯೫೬, ೨೦೦೮

೨೧. ಕೆ.ಸಿ.ರಾಮಲಿಂಗಯ್ಯ, ಕೂನಗಲ್ಲು, ಸಂದರ್ಶನ ದಿ.೧೭.೭.೨೦೧೧

೨೨. ಸಂ.ಸಂ.ಪ್ರೊ.ಡಿ.ಲಿಂಗಯ್ಯ, ಯಲಹಂಕ ನಾಡ ಪ್ರಭುಗಳ ಜಾನಪದ ಸಂಪುಟ, ಪುಟ.೪೮೮, ೨೦೦೬

೨೩. ಎಂ.ಸಿದ್ದಪ್ಪ, ನೆಲಮನೆ, ಸಂದರ್ಶನ ದಿ.೧೬.೬.೨೦೧೦

೨೪. ಶಿವಪ್ಪ, ತೇರು ಬೀದಿ, ಸಂದರ್ಶನ ದಿ.೧೪.೫.೨೦೧೦

೨೫. ಕೆಂಪೇಗೌಡ ಎಸ್, ದಾಳಿಂಬ, ಸಂದರ್ಶನ ದಿ.೧೦.೬.೨೦೧೦

೨೬. ಡಾ.ಎಂ.ಭೈರೇಗೌಡ, ತಾ.ಸಿ.ತಿಮ್ಮಯ್ಯ (ಸಂ), ಅರ್ಕಾವತಿ, ಪುಟ.೧೬೫, ೧೯೯೯

೨೭. ಕರಿಯಪ್ಪ, ಪೋಲೋಹಳ್ಳಿ, ಸಂದರ್ಶನ ದಿ.೧೭.೨.೨೦೧೦

೨೮. ಸೂರ್ಯನಾಯಕ, ಬೂದನಕಲ್ಲು, ಸಂದರ್ಶನ ದಿ.೧೨.೧೧.೨೦೧೦

೨೯. ಮುನಿವೆಂಕಟೇಗೌಡ ಮತ್ತು ಕೃಷೇಗೌಡ, ಕುರುಬರಹಳ್ಳಿ, ಸಂದರ್ಶನ ದಿ.೧೫.೩.೨೦೧೦

೩೦. ಬೊಮ್ಮೇಗೌಡ, ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳ ಅಧ್ಯಯನ, ಪುಟ. ೪೦-೪೩, ೧೯೯೮

೩೧. ಅದೇ ಪುಟ.೩೩-೩೪

೩೨. ಡಾ.ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಉಧೃತ. ಪುಟ.೨೭, ೧೯೯೪

೩೩. ದೇ.ಜವರೇಗೌಡ, ಜಾನಪದ ಅಧ್ಯಯನ, ಪುಟ.೨೦೬, ೧೯೯೧

೩೪. ಡಾ.ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪುಟ.೨೮, ಉಧೃತ, ೧೯೯೪

೩೫. ಅದೇ ಪುಟ. ೩೨

೩೬. ಅದೇ ಪುಟ. ೪೮

೩೭. ಅದೇ ಪುಟ. ೫೩

೩೮. ಅದೇ ಪುಟ. ೪೯

೩೯. ಡಾ.ಅಂಕನಹಳ್ಳಿ ಪಾರ್ಥ, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ.೮೬-೮೭, ೨೦೦೮

೪೦. ಡಾ.ಎಂ.ಬೈರೇಗೌಡ, ಹೋಗುವಾ.... ನಮ್ಮ ದೇಸಕೆ, ಪುಟ. ೪೯-೫೧, ೨೦೦೪

೪೧. ಕೃಷೇಗೌಡ, ಕುರುಬರಹಳ್ಳಿ, ಸಂದರ್ಶನ, ೧೫.೩.೨೦೧೦

೪೨. ನಂಜುಂಡಪ್ಪ, ತೆಂಗಿನಮರದದೊಡ್ಡಿ, ಸಂದರ್ಶನ, ೧೯.೭.೨೦೧೦

೪೩. ಜವರೇಗೌಡ, ಸಿಂಗರಾಜಪುರ, ಸಂದರ್ಶನ, ೩.೧೨.೨೦೦೯

೪೪. ಈರೇಗೌಡ, ಸಿಂಗರಾಜಪುರ, ಸಂದರ್ಶನ, ೩.೧೨.೨೦೦೯

೪೫. ದೇ.ಜವರೇಗೌಡ, ಜಾನಪದ ಅಧ್ಯಯನ, ಪುಟ. ೬೫, ೧೯೬೧

೪೬. ಡಾ.ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂಪುಟ.೨, ಪುಟ.೧, ೨೦೦೨

೪೭. ಕ್ಯಾತನಹಳ್ಳಿ ರಾಮಣ್ಣ (ಸಂ) ಕಬ್ಬಾಳು ಕುಳಿಯಲ್ಲಿ ಹುಲಿ ಪುಟ. ೧೫-೧೬, ೧೯೮೦

೪೮. ಅದೇ ಪುಟ. ೬೭-೬೯

೪೯. ಅದೇ ಪುಟ. ೧೦೬-೧೦೮

೫೦. ಅದೇ ಪುಟ. ೮

೫೧. ದೇ.ಜವರೇಗೌಡ, ಜಾನಪದ ಅಧ್ಯಯನ, ಪುಟ.೨೫೬, ೧೯೬೧,

೫೨. ಸಿ.ಪಿ.ಕೆ., ಜನಪದ ತತ್ವ ಮತ್ತು ಸತ್ವ, ಪುಟ.೩೯, ೨೦೦೪

೫೩. ಡಾ.ಕೂಡ್ಲೂರು ವೆಂಕಟಪ್ಪ, ಗೊಂಬೆ ಚಿತ್ತಾರದ ಮಡೆ ಕಡೆದೊ, ಪುಟ.೧೪೮, ೨೦೦೯

೫೪. ಮುನಿರತ್ನಮ್ಮ, ಕೋಡಿಹಳ್ಳಿ, ಸಂದರ್ಶನ, ೧೩.೬.೨೦೧೦

೫೫. ಲಿಂಗಯ್ಯ ಡಿ, ಸಂಧ್ಯಾರೆಡ್ಡಿ ಕೆ.ಆರ್., (ಸಂ). ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪುಟ.೭೨, ೨೦೦೬

೫೬. ಅದೇ ಪುಟ. ೪೪

೫೭. ಡಾ.ಕೂಡ್ಲೂರು ವೆಂಕಟಪ್ಪ, ಸ್ಥಳನಾಮ ವೀರರು, ಪುಟ.೮೩-೯೩, ೨೦೦೨

೫೮. ಡಾ.ಕೂಡ್ಲೂರು ವೆಂಕಟಪ್ಪ, ಗೊಂಬೆ ಚಿತ್ತಾರದ ಮಡೆ ಕಡೆದೂ, ಪುಟ.೧೪೬-೧೪೭, ೨೦೦೯

೫೯. ಅದೇ ಪುಟ. ೧೪೭-೧೪೮

೬೦. ಅದೇ ಪುಟ. ೨೭೨

೬೧. ಅದೇ ಪುಟ. ೨೭೮

೬೨. ಅದೇ ಪುಟ. ೨೮೧

೬೩. ಅದೇ ಪುಟ. ೨೮೪

೬೪. ಅದೇ ಪು. ೨೯೦-೨೯೧

೬೫. ಅಬ್ದುಲ್ ಬಷೀರ್ ಜಿ, (ಸಂ), ಸೆರಗು ಕಣ್ಣೊತ್ತಿ ಅಳುತಾಳೆ, ಪುಟ. ೨೩, ೧೯೬೮.

೬೬. ಅದೇ ಪುಟ. ೨೭

೬೭. ಅದೇ ಪುಟ. ೫೮

೬೮. ಅದೇ. ಪುಟ. ೪೩

೬೯. ಅದೇ ಪುಟ. ೪೯

೭೦. ಅದೇ ಪುಟ. ೫೦

೭೧. ಅದೇ ಪುಟ. ೫೭

೭೨. ಡಾ.ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ, ಸಂಸ್ಕೃತಿ, ಪುಟ.೧೨೧, ೨೦೦೫

೭೩. ಡಿ.ಲಿಂಗಯ್ಯ, (ಸಂ), ಯಲಹಂಕ ನಾಡಪ್ರಭುಗಳ ಜಾನಪದ ಸಂಪುಟ, ಪು.೩೮೧, ೨೦೦೬

೭೪. ಅದೇ. ಪುಟ. ೩೮೩

೭೫. ಅದೇ ಪುಟ. ೩೯೬

೭೬. ಅದೇ ಪುಟ.೩೯೦-೩೯೧

೭೭. ಅದೇ ಪುಟ. ೧೯೦

೭೮. ಅದೇ ಪುಟ. ೩೩

೭೯. ಅದೇ ಪುಟ. ೧೧೯

೮೦. ಅದೇ ಪುಟ. ೧೨೨

೮೧. ಅದೇ ಪುಟ.೧೨೪

೮೨. ಅದೇ ಪುಟ. ೧೩೧

೮೩. ಅದೇ ಪುಟ. ೧೩೪

೮೪. ಅದೇ ಪುಟ. ೧೩೭

೮೫. ಅದೇ ಪುಟ. ೧೩೬

೮೬. ಅದೇ ಪುಟ. ೧೩೭-೧೩೮

೮೭. ಅದೇ ಪುಟ. ೧೩೯

೮೮. ಅದೇ ಪುಟ. ೧೪೩

೮೯. ಅದೇ ಪುಟ.೧೫೩

೯೦. ಅದೇ ಪುಟ. ೧೭೪

೯೧. ಅದೇ ಪುಟ. ೧೯೫

೯೨. ಅದೇ ಪುಟ. ೨೧೮-೨೧೯

೯೩. ಅದೇ ಪುಟ. ಪು.೩೮೦

ಅಧ್ಯಾಯ - ೮

ಸಮಾರೋಪ

ಅಧ್ಯಾಯ ೮

ಸಮಾರೋಪ

ಸೂಕ್ಷ್ಮ ಹಾಗೂ ತರ್ಕಬದ್ಧವಾದ ವೈಜ್ಞಾನಿಕ ದೃಷ್ಟಿಕೋನದಿಂದ ನಡೆಸಬೇಕಾದ ಅಧ್ಯಯನ ವಿಷಯಗಳಲ್ಲಿ ಸ್ಥಳನಾಮವೂ ಸಹ ಒಂದಾಗಿದೆ. ಸ್ಥಳನಾಮ ಅಧ್ಯಯನವು ಅಪಾರ ಸಾಧ್ಯತೆಯುಳ್ಳ ಬಹುಶಿಸ್ತೀಯ ಅಧ್ಯಯನವನ್ನು ಅಪೇಕ್ಷಿಸುವ ಮತ್ತು ಹಲವು ಜ್ಞಾನ ಶಿಸ್ತುಗಳಿಗೆ ಪೂರಕವಾದ ಮಾಹಿತಿಯನ್ನು ನೀಡುವ ಅಪೂರ್ವ ಕ್ಷೇತ್ರಗಳಲ್ಲಿ ಒಂದೆಂದು ಪರಿಗಣಿತವಾಗಿದೆ.

ಪಶು-ಪಕ್ಷಿಗಳಂತೆಯೇ ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಆದಿ ಮಾನವನಿಗೆ ಆಹಾರಗಳಿಸುವುದೇ ತನ್ನ ದಿನ ನಿತ್ಯದ ಕಾರ್ಯವಾಗಿತ್ತು. ಯಾವಾಗ ಸಂಘಜೀವಿಯಾಗಿ, ವ್ಯವಸಾಯವನ್ನು ಕಲಿತು ಒಂದೆಡೆ ಸ್ಥಿರವಾಗಿ ನೆಲೆ ನಿಂತು ಬದುಕಲು ಆರಂಭಿಸಿದಾಗ ಅವರ ವಸತಿಗೊಂದು, ಅದರ ಗುರುತಿಗಾಗಿ ಹೆಸರಿಡುವ ಪ್ರಯತ್ನ ಮಾಡಿದರು. ಹೀಗೆ ಸಾಮೂಹಿಕವಾಗಿ ಕಾಲೂರಿದ ಸ್ಥಳಗಳಿಗೆ ಬೆಟ್ಟ, ಗುಡ್ಡ, ನದಿ ಮೊದಲಾದ ಪ್ರಾಕೃತಿಕ ಪರಿಸರದ ಹೆಸರುಗಳನ್ನು ನಾಮನಿರ್ದೇಶನಕ್ಕೆ ಬಳಕೆ ಮಾಡಿಕೊಂಡರು.

'ನಾಮೋಲ್ಲೇಖ ವಸ್ತು ವ್ಯವಹಾರ ಹೇತು' ಹೆಸರಿನ ಉಲ್ಲೇಖವೇ ಎಲ್ಲ ವ್ಯವಹಾರಗಳಿಗೂ ಮೂಲ ಕಾರಣವೆಂದು ಬೃಹಸ್ಪತಿ ಹೇಳುತ್ತಾನೆ. ಆದಿ ಮಾನವನಿಂದ ಹಿಡಿದು ಇಲ್ಲಿಯವರೆಗೂ ಹೆಸರುಗಳ ಪ್ರಾಮುಖ್ಯತೆಯನ್ನು ಮನಗಂಡೇ ಮಾನವ; ವ್ಯವಹಾರದ ಅನುಕೂಲತೆಗಾಗಿ ತನ್ನ ಸಂತಾನಕ್ಕೆ ಹೆಸರಿಟ್ಟಂತೆ ತಾನು ತಳವೂರಿದ ಸ್ಥಳಕ್ಕೂ ಹೆಸರಿಟ್ಟನು. ಮೊದಲು ಗ್ರಾಮಗಳಿಗೆ ಪ್ರಾಕೃತಿಕ ಮೂಲದಿಂದ ಬಂದ ಬೆಟ್ಟ-ಗುಡ್ಡ-ಕಲ್ಲು-ಮಣ್ಣು, ಮರ-ಗಿಡ, ನದಿ, ಪ್ರಾಣಿ-ಪಕ್ಷಿಯಂಥ ಪ್ರಕೃತಿನಿಷ್ಠವಾದವುಗಳು ಬಂದರೆ; ನಂತರದಲ್ಲಿ ಸಮುದಾಯ, ವ್ಯಕ್ತಿ, ಐತಿಹ್ಯ ಮತ್ತು ಚಾರಿತ್ರಿಕ ಮೊದಲಾದ ಸಾಂಸ್ಕೃತಿಕನಿಷ್ಠ ಘಟನೆಗಳು ಪ್ರೇರಣೆ ನೀಡಿದವು.

ಮೊದಮೊದಲಿಗೆ ಸಾಂಕೇತಿಕವಾಗಿದ್ದ ಹೆಸರುಗಳು ಬರುಬರುತ್ತಾ ಅರ್ಥಗರ್ಭಿತವಾದವು. ಒಂದು ಪ್ರದೇಶದ ಭಾಷಿಕ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಭೌಗೋಳಿಕ ಹಾಗೂ ಚಾರಿತ್ರಿಕ ಸ್ಥಿತಿಗತಿ ಮೊದಲಾದವುಗಳನ್ನು ಪುನರ್ರಚನೆಗೆ ಸಾಧ್ಯವಾದ ಸರಕನ್ನು ಒದಗಿಸುವ ಮಟ್ಟಕ್ಕೆ ಸ್ಥಳನಾಮಗಳು ಇಂದು ಬೆಳೆದು ನಿಂತಿವೆ.

ಹಲವಾರು ವೈವಿಧ್ಯತೆಯಿಂದ ಕೂಡಿದ ರಾಮನಗರ ಜಿಲ್ಲೆಯು ಬಯಲು ಸೀಮೆಯಲ್ಲಿದ್ದ ಬೆಟ್ಟ, ಗುಡ್ಡ, ಅರಣ್ಯ ಪ್ರದೇಶವನ್ನು ಹೊಂದಿರುವ, ಹಲವಾರು ಧರ್ಮಗಳು, ಸಮುದಾಯಗಳ, ವಿವಿಧ ವೃತ್ತಿಗಳನ್ನು ಆಶ್ರಯಿಸಿರುವ ಹಾಗೂ ಪ್ರಾಚೀನ ಕಾಲದಿಂದಲೂ ಗಂಗ, ಚೋಳ, ಹೊಯ್ಸಳ ಮೊದಲಾದ ಐತಿಹಾಸಿಕ ಪ್ರಸಿದ್ಧ ರಾಜಮನೆತನಗಳ ಆಳ್ವಿಕೆಗೆ ಸೇರಿದ ಪ್ರದೇಶವಾಗಿದೆ. ಹೀಗೆ ಈ ಪ್ರದೇಶದಲ್ಲಿ ಮಾತನಾಡುತ್ತಿದ್ದ ಭಾಷೆ, ಬದುಕಿದ್ದ ವ್ಯಕ್ತಿ, ಪೂಜಿಸುತ್ತಿದ್ದ ದೈವ, ಮಾಡುತ್ತಿದ್ದ ವೃತ್ತಿ, ಇದ್ದ ಜಾತಿ, ನೆಲೆಸಿದ್ದ ಗ್ರಾಮ ಅಥವಾ ಪಟ್ಟಣ, ಕಟ್ಟಲ್ಪಟ್ಟ ದೇವಾಲಯ ಹಾಗೂ ಪರಿಸರದಲ್ಲಿದ್ದ ಪ್ರತಿಯೊಂದು ವಸ್ತು ವೈವಿಧ್ಯತೆಯ ಎಲ್ಲ ವಿವರಗಳೂ ಸ್ಥಳನಾಮಗಳಲ್ಲಿ ಉಕ್ತಗೊಂಡಿರುವುದರಿಂದ ಪ್ರಸ್ತುತ ಅಧ್ಯಯನ ಮುಖ್ಯವೆಂದೇ ಭಾವಿಸಬಹುದು. ಸ್ಥಳನಾಮ ಸೃಷ್ಟಿ-ರಚನೆಯ ಅಂಶಗಳನ್ನು ಗಮನಿಸಿದಾಗ ಆರಂಭದಲ್ಲಿ ಪ್ರಾಕೃತಿಕ ಮತ್ತು ಭೌಗೋಳಿಕ ಅಂಶಗಳು ಪ್ರತಿನಿಧಿಸುತ್ತವೆ. ಬೆಟ್ಟ-ಗುಡ್ಡ, ಮರ-ಗಿಡ, ನದಿ-ಹಳ್ಳ, ನೀರು, ಕಲ್ಲು, ಮಣ್ಣು ಮೊದಲಾದ ಪ್ರಾಕೃತಿಕ, ಭೌಗೋಳಿಕ ಲಕ್ಷಣಗಳೇ ವಿಶಿಷ್ಟ ಮತ್ತು ವಾರ್ಗಿಕಗಳಲ್ಲಿ ಬಳಕೆಗೊಂಡಿವೆ. ಸ್ಥಳನಾಮಕರಣವನ್ನು ಸ್ಥಳೀಯರೇ ಮಾಡುವುದರಿಂದ ಗ್ರಾಮೀಣ ಪರಿಸರದ ಆಡುಮಾತಿನ ಪದಗಳೇ ಅಂದರೆ ಆ ಪರಿಸರದ ಭಾಷೆಯೇ ಬಳಕೆಗೊಂಡಿರುತ್ತದೆ.

ಪ್ರಾಗೈತಿಹಾಸಿಕ ಕಾಲದಿಂದಲೂ ಪ್ರಾಚೀನ ಮಾನವರು ಈ ಪ್ರದೇಶದಲ್ಲಿ ಬದುಕುತ್ತಿದ್ದರೆಂಬುದಕ್ಕೆ ಜಿಲ್ಲೆಯಾದ್ಯಂತ ಕಂಡು ಬರುವ ಬೃಹತ್ ಶಿಲಾಗೋರಿಗಳೇ ಸಾಕ್ಷಿಯಾಗಿವೆ. ಅಂಥ ಸಂದರ್ಭದಲ್ಲಿ ಜೀವನ ನಡೆಸಿದ್ದ ಮಾನವ ತಾನು ವಾಸಿಸುವ ನೆಲೆಗೊಂದು ಗುರುತು ಅಥವಾ ಹೆಸರಿಟ್ಟಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ವಿಶೇಷವಾದ ನಡೆನುಡಿಯಿಂದ, ದಾನ ಧರ್ಮದ ಮೂಲಕ ಊರಿನವರ ಪ್ರೀತಿ ವಿಶ್ವಾಸಗಳಿಸಿರುವ ಅಥವಾ ಊರಿಗಾಗಿ ಹೋರಾಡಿದ ವೀರ, ಸಮಾಜದ ಕಲ್ಯಾಣಕ್ಕಾಗಿ ದುಡಿದ ವ್ಯಕ್ತಿಯ ಹೆಸರುಗಳನ್ನು ಸ್ಥಳನಾಮಗಳಿಗೆ ನಿರ್ದೇಶನಗೊಂಡಿವೆ. ಇಂಥ ವ್ಯಕ್ತಿತ್ವವನ್ನು ಹೊಂದಿದವರ ಹೆಸರುಗಳನ್ನು ಸ್ಥಳಗಳಿಗೆ ನಿರ್ದೇಶನಗೊಳಿಸಿದರೆ ಊರಿಗೆ ಬಂದಿರುವ ಆಪತ್ತು ಕಳೆಯುತ್ತದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಆ ವ್ಯಕ್ತಿಯ ಹೆಸರನ್ನು ನೆಲೆಗಳಿಗೆ ಇಟ್ಟಿರುವುದು ತಿಳಿದುಬರುತ್ತದೆ. ಗ್ರಾಮೀಣರಲ್ಲಿ ದೇವರು, ಧರ್ಮವನ್ನು ತಮ್ಮ ಜೀವನದ ಅವಿಭಾಜ್ಯಅಂಗವೆಂದು ನಂಬಿದ್ದಾರೆ. ದೇವರು, ಧರ್ಮದ ಮೇಲಿನ ಭಕ್ತಿ ಮತ್ತು ಭಯದ ಪರಿಣಾಮವಾಗಿ ತಮ್ಮ ವಾಸದ ನೆಲೆಗಳಿಗೆ ಆರೋಪಿಸಿ ದೈವದ ಹೆಸರನ್ನು ಕರೆದುಕೊಂಡರು. ಇದರಿಂದ ಸಮಾಜದಲ್ಲಿ; ಗ್ರಾಮದಲ್ಲಿ ಸುಖ, ಸಮೃದ್ಧಿ, ಶುಭವಾಗುತ್ತದೆಂಬ ನಂಬಿಕೆ ಇರುವುದು ಕಂಡುಬರುತ್ತದೆ.

ಪ್ರಾದೇಶಿಕವಾರು ದೈವಸಂಬಂಧಿ ಸ್ಥಳನಾಮಗಳು ವೈವಿಧ್ಯಮಯವಾಗಿರುವುದರಿಂದ; ಆ ಪ್ರದೇಶದಲ್ಲಿರುವ ಧರ್ಮ, ಸಂಸ್ಕೃತಿಯ ವಿಭಿನ್ನಮುಖಗಳನ್ನು ಸ್ಥಳನಾಮಗಳ ಮೂಲಕ ಅಧ್ಯಯನ ಮಾಡಬಹುದು. ಉದಾ. ಸುಗತನಹಳ್ಳಿ>ಸುಗ್ಗನಹಳ್ಳಿಯಿಂದ ಭಾರತದ ಪ್ರಾಚೀನ ಧರ್ಮವಾದ ಬೌದ್ಧ ಧರ್ಮದ ಕುರುಹನ್ನು ಗುರುತಿಸಲಾಗಿದೆ.

ಮಾನವರು ಕೃಷಿಯ ಮೂಲಕ ಸಂಘಟಿತರಾಗಿ, ಸ್ಥಿರವಾಸಿಗಳಾಗಿ ಮಾರ್ಪಾಟಾದ ನಂತರದ ಕಾಲಾವಧಿಯಲ್ಲಿ ಜೀವನೋಪಾಯಕ್ಕಾಗಿ ಹಲವು ಬೇರೆ ಬೇರೆ ವೃತ್ತಿಗಳನ್ನು ಆಶ್ರಯಿಸಿದರು. ಹೀಗೆ ಭಿನ್ನ

ವೃತ್ತಿಗಳನ್ನು ಅನುಸರಿಸುತ್ತಿದ್ದ ಸಮುದಾಯಗಳನ್ನು ಆಯಾಯ ವೃತ್ತಿನಾಮಗಳ ಮೂಲಕ ಗುರುತಿಸಲಾಯಿತು. ವೃತ್ತಿಯಾಧಾರಿತ ಇಂಥ ಸಮುದಾಯಗಳು ತಮ್ಮದೇ ಆದ ನಿರ್ದಿಷ್ಟ ಭೌಗೋಳಿಕ ಪರಿಸರದಲ್ಲಿ ನೆಲೆಯಾದವು. ತಾವು ನಿರ್ವಹಿಸುತ್ತಿದ್ದ ವೃತ್ತಿಗಳಿಂದಲೇ ಆ ಪ್ರದೇಶವನ್ನು ಹೆಸರಿಸಲಾಯಿತು. ಉದಾ. ಕಂಚುಗಾರನಹಳ್ಳಿ.

ವರ್ಣಾಶ್ರಮ ಪದ್ಧತಿಯ ನಂತರ ವೃತ್ತಿಹಿನ್ನೆಲೆಯಲ್ಲಿ ಜಾತಿಪದ್ಧತಿ ಹುಟ್ಟಿಕೊಂಡಿತು. ಜೀವನ ನಿರ್ವಹಣೆಗಾಗಿ ಕೈಗೊಂಡಿದ್ದ ವೃತ್ತಿಗಳು ಜಾತಿಗಳಾಗಿ ಮಾರ್ಪಟ್ಟವು. ಅವರದೇ ಆದ ಜೀವನಶೈಲಿ, ಆಚಾರ-ವಿಚಾರ, ರೂಢಿ-ಸಂಪ್ರದಾಯ, ನಂಬಿಕೆ, ಆರಾಧನಾ ದೈವಗಳನ್ನು ರೂಢಿಸಿಕೊಂಡರು. ಇದರಿಂದಾಗಿ ಗೊಲ್ಲ, ಕುರುಬ, ಮಾದರ, ಬೇಡ, ಬ್ರಾಹ್ಮಣ ಮೊದಲಾದ ಸಮುದಾಯಗಳು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೆಚ್ಚು ಭಿನ್ನವಾದವು. ಇದರಿಂದ ತಮ್ಮ ಸಮುದಾಯದ ಅಭಿಮಾನದ ಪೂರಕವಾಗಿ ಗ್ರಾಮನಾಮಗಳು ಹುಟ್ಟಿಕೊಂಡವು. ಉದಾ. ಕುರುಬರಹಳ್ಳಿ.

ಕೋಲ, ಮುಂಡ, ಮುರ ಮೊದಲಾದ ಪ್ರಾಚೀನ ಜನಾಂಗಗಳ ಚಲನವಲನವನ್ನು ಗ್ರಾಮನಾಮಗಳ ಮೂಲಕ ಅರಿಯಬಹುದಾಗಿದ್ದು; ಈ ಪ್ರದೇಶದಲ್ಲಿ ಅವರ ನೆಲೆಸುವಿಕೆ ಅಥವಾ ವಲಸೆಯನ್ನು ಗುರುತಿಸಲಾಗಿದೆ. ಇದರಿಂದ ನಮ್ಮ ನಾಡಿನ ಪ್ರಾಚೀನ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತದೆ.

'ಚರಿತ್ರೆ ನಿರುತ್ತರವಾಗುವಲ್ಲಿ ಸ್ಥಳನಾಮ ಉಸುರುತ್ತದೆ' ಎಂಬ ಹೇಳಿಕೆ ಇದೆ. ಒಂದು ಸಾಮ್ರಾಜ್ಯದ ಅಂತಿಮ ಘಟಕ ಗ್ರಾಮ. ರಾಜ್ಯವನ್ನು ನಾಡು, ವಿಷಯ, ಗ್ರಾಮ, ಪಟ್ಟಣವೆಂದು ವಿಭಾಗಿಸಿ ರಾಜನ ಸಾಮಂತರು, ಪಾಳೆಯಗಾರರು, ನಾಡಗೌಡರು ಆಳ್ವಿಕೆ ನಡೆಸುತ್ತಿದ್ದರು. ಯುದ್ಧವಿಜಯದ ನೆನಪಿಗಾಗಿ, ಹೊಸ ಗ್ರಾಮವನ್ನು ನಿರ್ಮಿಸಿದ ಉದಾಹರಣೆಗಳಿವೆ. ಇವುಗಳಿಗೆ ತಮ್ಮ ಅಥವಾ ತಮ್ಮ ರಾಜ ಪರಿವಾರದ ಹೆಸರನ್ನು ನೀಡುತ್ತಿದ್ದರು. ಅನೇಕ ಗ್ರಾಮಗಳಿಗೆ ದಾನ-ದತ್ತಿ ನೀಡುವಾಗ ಮೊದಲಿದ್ದ ಗ್ರಾಮನಾಮವನ್ನು ಅಳಿಸಿ; ಪ್ರತಿನಾಮಕರಣ ಮಾಡುತ್ತಿದ್ದ ಸಂದರ್ಭಗಳು ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ. ಅಲ್ಲದೇ ನಾಡಿಗಾಗಿ ಪ್ರಾಣಾರ್ಪಣೆ ಮಾಡಿದ ವೀರರ ಹಾಗೂ ವೀರನೊಂದಿಗೆ ಸತಿ ಹೋಗುತ್ತಿದ್ದ ಸ್ತ್ರೀಯರ ನೆನಪನ್ನು ಚಿರಸ್ಥಾಯಿಯಾಗಿಟ್ಟ ಗ್ರಾಮನಾಮಗಳು ನಾಡಿನಾದ್ಯಂತ ದೊರೆಯುತ್ತವೆ. ಇವುಗಳ ಚಾರಿತ್ರಿಕ ಅಧ್ಯಯನವನ್ನು ಮಾಡಬಹುದು.

ಶಾಸನಗಳಲ್ಲಿ ದೊರೆಯುವ ಸ್ಥಳನಾಮಗಳಿಂದ ಪ್ರಾಚೀನ ಕರ್ನಾಟಕದ ಐತಿಹಾಸಿಕ ಕೋಶ ಮತ್ತು ಪ್ರಾದೇಶಿಕ ಚರಿತ್ರೆಯನ್ನು ರಚಿಸಲು ಮೂಲಾಧಾರಗಳಾಗಿವೆ. ಶಾಸನೋಲ್ಲೇಖಿತ ಸ್ಥಳನಾಮಗಳ ಅಧ್ಯಯನದಿಂದ ಅಂದಿನ ಭಾಷೆಯ ಅವಸ್ಥೆಯನ್ನು, ಭಾಷಿಕ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಗ್ರಾಮ ಸಮಾಜದಲ್ಲಿ ಬದುಕುವ ಜನಪದರು ನಮ್ಮ ನೆಲಸಮುದಾಯದ, ಸಂಸ್ಕೃತಿಯ ವಕ್ತಾರರು. ಮೌಖಿಕ ಪರಂಪರೆಯ ಕಥೆ, ಗಾದೆ, ಒಗಟು, ಐತಿಹ್ಯ, ಪುರಾಣ ಮೊದಲಾದವುಗಳಲ್ಲಿ ಸಾಂದರ್ಭಿಕವಾಗಿ ಬರುವ ಗ್ರಾಮನಾಮಗಳು ಅಲ್ಲಿಯ ಮಣ್ಣಿನ ಸಂಸ್ಕೃತಿಯ ಪ್ರತಿಬಿಂಬಗಳಂತೆ ಕಂಡುಬರುತ್ತವೆ. ಚರಿತ್ರೆಯ ಪುಟಗಳಲ್ಲಿ ದಾಖಲಾಗದ ಅದೆಷ್ಟೋ ಸಂಗತಿಗಳು ಮೌಖಿಕ ಚರಿತ್ರೆಯಲ್ಲಿ ಸ್ಥಾನಪಡೆದು ಚಿರಂಜೀವಿತ್ವವನ್ನು

ಪಡೆದಿರುತ್ತವೆ. ಈ ಎಲ್ಲ ಅಂಶಗಳು ಕೂಡ ಜನಪದರ ಮೌಖಿಕ ಸಾಹಿತ್ಯ, ಆಚರಣೆ, ನಂಬಿಕೆಗಳಲ್ಲಿ ಹುದುಗಿರುತ್ತವೆ. ಆದ್ದರಿಂದ ಸ್ಥಳನಾಮ ಜಾನಪದ ಅಧ್ಯಯನ ಬಹುಮುಖ್ಯವೆನಿಸುತ್ತದೆ.

೮.೧. ಅಧ್ಯಯನದ ಫಲಿತಗಳು

೧. ರಾಮನಗರ ಜಿಲ್ಲೆಯ ಭೌಗೋಳಿಕ, ಪ್ರಾಕೃತಿಕ, ಭಾಷಿಕ, ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಜಾನಪದೀಯ ಮೊದಲಾದ ಅಂಶಗಳನ್ನು ಸ್ಥಳನಾಮಗಳ ಮೂಲಕ ಅರಿಯುವ ಪ್ರಯತ್ನವನ್ನು ಮಾಡಲಾಗಿದೆ. ಸ್ಥಳನಾಮಗಳ ನಿಜ ನಿಷ್ಪತ್ತಿಯ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದುವರೆಗೂ ಕನ್ನಡದಲ್ಲಿ ನಡೆದ ಸ್ಥಳನಾಮ ಅಧ್ಯಯನಗಳ ಉಪಲಬ್ಧ ಕೃತಿಗಳನ್ನು, ಶಾಸನಗಳನ್ನು, ಮೌಖಿಕ ಆಕರಗಳನ್ನು ಇಟ್ಟುಕೊಂಡು ಪ್ರಸ್ತುತ ನಿಬಂಧವನ್ನು ಸಿದ್ಧಪಡಿಸಲಾಗಿದೆ. ಹಿಂದೆ ನಡೆದಿರುವ ಬಹುತೇಕ ಅಧ್ಯಯನ ಮಾದರಿಗಳು ಭಾಷಾಶಾಸ್ತ್ರದ ನೆಲೆಯಲ್ಲಿ, ವರ್ಣನಾತ್ಮಕ ಮಾದರಿಯಲ್ಲಿ ಸಿದ್ಧಗೊಂಡವುಗಳಾಗಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಜಾನಪದೀಯ ಮೊದಲಾದ ವಿವಿಧ ಅಂಶಗಳನ್ನು ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೨. ಜಿಲ್ಲೆಯ ಒಟ್ಟು ಸ್ಥಳನಾಮಗಳ ರಾಚನಿಕ ಸ್ವರೂಪವನ್ನು ಅಧ್ಯಯನಕ್ಕೊಳಪಡಿಸಲಾಗಿ ಕೆಲವೊಂದು ವಿಶೇಷತೆಗಳಿರುವುದು ಕಂಡುಬರುತ್ತದೆ. ಸ್ಥಳನಾಮಗಳಲ್ಲಿರುವ ಘಟಕಗಳ ಸಂಖ್ಯೆ ಒಂದರಿಂದ ಐದು ಘಟಕಗಳವರೆಗೆ ಇರುವುದನ್ನು ಗುರುತಿಸಲಾಗಿದೆ.

ಏಕ ಘಟಕಾಧಾರಿತ ಸ್ಥಳನಾಮಗಳು ಸಂಖ್ಯೆಯಲ್ಲಿ ಕಡಿಮೆ ಇರುವುದನ್ನು ಗುರುತಿಸಲಾಗಿದೆ. ಏಕ ಘಟಕಾಧಾರಿತ ಸ್ಥಳನಾಮಗಳಲ್ಲಿ ವಾರ್ಗಿಕ ಆಕೃತಿಮಾಗಳೇ ಸ್ವತಂತ್ರ ಸ್ಥಳವಾಚಕವಾಗಿ ಬಂದಿರುವುದನ್ನು ಗುರುತಿಸಸಲಾಗಿದೆ. ಉದಾ. ಪುರ.

ವಾರ್ಗಿಕವಾಗಿ (Generics) ಬಳಕೆಯಾಗುವ ಆಕೃತಿಗಳು ಕೆಲವೊಮ್ಮೆ ನಿರ್ದಿಷ್ಟಗಳಾಗಿ (Specif-ics) ಬಳಕೆಯಾಗಬಹುದು. ಉದಾ. ಕುಪ್ಪೆಪಾಳ್ಯ, ಕೋಟೆಕೊಪ್ಪ.

ದ್ವಿ ಘಟಕಾಧಾರಿತ ಸ್ಥಳನಾಮಗಳಲ್ಲಿ ವಿಶಿಷ್ಟ ವಾರ್ಗಿಕಗಳಿರುವುದು ಸಾಮಾನ್ಯ ಸಂಗತಿ. ಆದರೆ ಎರಡೂ ವಿಶಿಷ್ಟಗಳಿರುವ ಉದಾ. ಮಲ್ಲಿಗೆ ಮೆಟ್ಟಿಲು (ಮಲ್ಲಿಗೆ+ಮೆಟ್ಟಿಲು) ಎರಡೂ ವಾರ್ಗಿಕಗಳೇ ಸೇರಿ ಒಂದು ಸ್ಥಳನಾಮವಾಗಿರುವುದನ್ನು ಸಹ ಗುರುತಿಸಲಾಗಿದೆ. ಉದಾ. ಕೋಟೆಕೊಪ್ಪ (ಕೋಟೆ+ಕೊಪ್ಪ) ಕುಪ್ಪೆ ಪಾಳ್ಯ (ಕುಪ್ಪೆ+ಪಾಳ್ಯ)

ಜಿಲ್ಲೆಯ ಸ್ಥಳನಾಮಗಳನ್ನು ವರ್ಗೀಕರಿಸಲಾಗಿ ಜಲವಾಚಿ, ಶಿಲಾವಾಚಿ, ಸಸ್ಯವಾಚಿ, ಪ್ರಾಣಿವಾಚಿ, ಪಕ್ಷಿವಾಚಿ ಮೊದಲಾದ ಪ್ರಾಕೃತಿಕ ಮೂಲದ ಸ್ಥಳನಾಮಗಳೊಂದಿಗೆ ಸಮುದಾಯ, ಧರ್ಮಾಧಾರಿತ, ವೃತ್ತಿ, ವ್ಯಕ್ತಿವಾಚಿ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ಹೊಂದಿರುವ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಭೌಗೋಳಿಕ, ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಚಹರೆಯನ್ನು ಪ್ರತಿನಿಧಿಸುವ ಸ್ಥಳನಾಮಗಳಲ್ಲಿ ಸ್ಥಳೀಯವಾದ ಭಾಷೆಯೇ ಮಡುಗಟ್ಟಿರುವುದನ್ನು ಗುರುತಿಸಲಾಗಿದೆ.

ಅಧ್ಯಯನ ವ್ಯಾಪ್ತಿಯ ಪ್ರದೇಶ; ಬೆಟ್ಟ, ಗುಡ್ಡ, ಬಂಡೆ ಹಾಗೂ ಕೆಂಪು ಮಣ್ಣಿನ ರಚನೆಯನ್ನು ಹೊಂದಿರುವ ಬಯಲು ಪ್ರದೇಶವಾಗಿದೆ. ನೈಸರ್ಗಿಕವಾಗಿ ಕೆಂಪು ಮಣ್ಣಿನ ಒಣ ಭೂಮಿಯಾದರೂ ಕೆರೆ, ಕಟ್ಟೆ, ಸಮುದ್ರ (ಸಂದ್ರ), ಕೆರೆ, ಕೋಡಿ, ಕುಂಟೆ, ಸಾಗರ ಎಂಬ ಜಲವಾಚಿ ವಾರ್ಗಿಕವನ್ನೊಳಗೊಂಡ ಸ್ಥಳನಾಮಗಳಿರುವುದು ವಿಶೇಷ ಸಂಗತಿ. ವಿಶಿಷ್ಟ ಅಥವಾ ವಾರ್ಗಿಕವನ್ನೊಳಗೊಂಡ ಜಲವಾಚಿ ಹೊಂದಿರುವ ಗ್ರಾಮ ಅಥವಾ ಅದರ ಸುತ್ತಮುತ್ತಲು ನೀರಿನ ಸಲೆ ಇರುವುದನ್ನು ಗುರುತಿಸಲಾಗಿದೆ.

ಸ್ಥಳನಾಮಗಳಲ್ಲಿ ಶಿಲವಾಚಿಯಾದ ಅಂಶಗಳು ಕಂಡುಬಂದಿದ್ದು; ಇದು ಸ್ಥಳನಾಮದ ನಿರ್ದಿಷ್ಟ ಆಕೃತಿಮ ಮತ್ತು ವಾರ್ಗಿಕ ಆಕೃತಿಮಗಳಲ್ಲೂ ಕಂಡುಬಂದಿರುವುದನ್ನು ಗುರುತಿಸಲಾಗಿದೆ. ಇದರಿಂದ ಜಿಲ್ಲೆಯ ಭೌಗೋಳಿಕ ಚಹರೆಯು ನೇರವಾಗಿ ಸ್ಥಳನಾಮಗಳಲ್ಲಿ ಬಳಕೆಯಾಗಿರುವುದನ್ನು ಗುರುತಿಸಲಾಗಿದೆ.

ಸ್ಥಳನಾಮಗಳಲ್ಲಿ ಕಂಡುಬರುವ ಗಿಡಮರಗಳ ಹೆಸರನ್ನು ಸೂಚಿಸುವ ಅಂಶಗಳು ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲೂ ಕಂಡು ಬಂದಿರುವುದನ್ನು ಗುರುತಿಸಲಾಗಿದೆ. ಆದಿಮಾನವನ ಕಾಲದಿಂದಲೂ ಗಿಡ-ಮರಗಳಿಗೆ ನೀಡುತ್ತಿದ್ದ ಪ್ರಾಶಸ್ತ್ಯ ಸ್ಥಳನಾಮಗಳಲ್ಲಿ ವ್ಯಕ್ತಗೊಂಡಿದೆ. ಹಿಂದೆ ಊರಿಗೆ ಹೆಸರು ಬಂದಾಗ ಆ ಪರಿಸರದಲ್ಲಿದ್ದ ಗಿಡ-ಮರಗಳನ್ನು ಸೂಚಿಸಿರಬಹುದು. ಈಗ ಅವು ಮಾಯವಾಗಿದ್ದರೂ ಊರ ಹೆಸರುಗಳಲ್ಲಿ ಭದ್ರವಾಗಿರುವುದನ್ನು ಗುರುತಿಸಲಾಗಿದೆ.

ಕೆಲವೊಂದು ಪ್ರಾಣಿ ಪಕ್ಷಿಗಳನ್ನು ಮನುಷ್ಯ ತನ್ನ ಆಹಾರಕ್ಕಾಗಿ ಉಪಯೋಗಿಸಿದರೆ ಮತ್ತೆ ಕೆಲವುಗಳಿಗೆ ದೈವತ್ವದ ಸಂಕೇತಗಳನ್ನು ಕೊಟ್ಟು; ಸಾಂಸ್ಕೃತಿಕವಾಗಿ ಕಂಡಿರುವ ವಿಚಾರಗಳೆಲ್ಲವನ್ನು ಸ್ಥಳನಾಮಗಳಲ್ಲಿ ಕಾಣಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

೩. ಈ ಪ್ರದೇಶದಲ್ಲಿನ ಧರ್ಮ, ಜಾತಿ, ವೃತ್ತಿ ಸೂಚಿತ ಸಾಮಾಜಿಕ ಅಂಶಗಳೆಲ್ಲವನ್ನು ಸ್ಥಳನಾಮಗಳ ಸಾಮಾಜಿಕ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಸಮಾಜದಲ್ಲಿ ವಿವಿಧ ಧರ್ಮದವರು ತಮ್ಮದೇ ಆದ ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ರೂಢಿಸಿಕೊಂಡು ಬದುಕನ್ನು ನಡೆಸುತ್ತಿದ್ದಾರೆ. ಆತ್ಮ ಸಾಕ್ಷಾತ್ಕಾರಕ್ಕಾಗಿ ಪ್ರತಿಯೊಬ್ಬರು ಒಂದೊಂದು ಧರ್ಮ-ದೈವದ ಮೊರೆ ಹೋಗಿರುವುದನ್ನು ಗುರುಸಬಹುದು. ಧರ್ಮವನ್ನು ಬಿಟ್ಟು ದೈವವಿಲ್ಲ; ದೈವವನ್ನು ಬಿಟ್ಟು ಧರ್ಮವಿಲ್ಲ. ಆದ್ದರಿಂದ ವ್ಯಕ್ತಿಗೆ ಧರ್ಮ-ದೈವದ ಹಿನ್ನೆಲೆಯ ಹೆಸರಿಟ್ಟಿರುವುದು ಕಂಡುಬರುತ್ತದೆ. ಅದೇ ರೀತಿ ದೇವರ, ವ್ಯಕ್ತಿಯ ಹೆಸರುಗಳು ಸ್ಥಳನಾಮಗಳ ವಿಶಿಷ್ಟ ಭಾಗದಲ್ಲಿ ಬಂದಿರುವುದನ್ನು ಗುರುತಿಸಬಹುದು. ಹಿಂದೂ ಧರ್ಮದಲ್ಲಿನ ವೈಷ್ಣವ-ಶೈವ-ವೀರಶೈವ ಮತಗಳನ್ನು, ಇಸ್ಲಾಂ, ಬೌದ್ಧಧರ್ಮಗಳ ದೈವ ಹಾಗೂ ಧರ್ಮೀಯರ ಹೆಸರುಗಳನ್ನು ಸ್ಥಳನಾಮದ ವಿಶಿಷ್ಟ ಭಾಗಗಳಲ್ಲಿ ಬಂದಿರುವುದನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ವೃತ್ತಿಗಳಿಂದಲೇ ಜಾತಿಗಳಾಗಿ ಮಾರ್ಪಟ್ಟಿರುವುದರಿಂದ ವೃತ್ತಿ-ಜಾತಿಗಳೆರಡೂ ಒಂದನ್ನು ಬಿಟ್ಟು ಮತ್ತೊಂದಿರಲಾರದು. ಆದರೂ ಪ್ರತ್ಯೇಕವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೆಲವೊಂದು ವೃತ್ತಿವಾಚಿಗಳು

ಜಾತಿಯನ್ನು ಸೂಚಿಸುವುದಿಲ್ಲ. ಇದರಿಂದ ವೃತ್ತಿ, ಜಾತಿ ಸೂಚಿತ ಸ್ಥಳನಾಮಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಕುಲಕಸುಬು ಅವನತಿಯ ಹಂತದಲ್ಲಿರುವ ಸಂದರ್ಭದಲ್ಲಿ ಪ್ರಾಚೀನ ಕಾಲದಲ್ಲಿದ್ದ ಕೆಲವೊಂದು ಕುಲಕಸುಬು, ವೃತ್ತಿಗಳು ಸ್ಥಳನಾಮಗಳ ಮೂಲಕ ದೊರೆತು ಅಧ್ಯಯನ ಯೋಗ್ಯವಾಗಿರುವುದನ್ನು ಗುರುತಿಸಲಾಗಿದೆ. ಉದಾ. ಗಜಗಾರಕುಪ್ಪೆ, ಕೋಟಗಾರನಹಳ್ಳಿ, ಬಂಟರಕುಪ್ಪೆ ಈ ವೃತ್ತಿಗಳು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಮಹತ್ವವಾದ್ದರಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕೆಲವು ಪ್ರಾಚೀನ ಮೂಲ ಜನಾಂಗಗಳ ನೆಲೆ ಅಥವಾ ಆ ಜನಾಂಗಗಳ ವಲಸೆಯು ಜಿಲ್ಲೆಯಲ್ಲಿ ನಡೆದಿರಬಹುದಾದ ಸಂಗತಿಗಳು ಸ್ಥಳನಾಮಗಳಲ್ಲಿ ಉಕ್ತಗೊಂಡಿರುವುದನ್ನು ಸಹ ಗುರುತಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ. ಪ್ರಸ್ತುತವಿರುವ ಹಲವು ಸಮುದಾಯಗಳು ಕೂಡ ಸ್ಥಳನಾಮಗಳಲ್ಲಿ ಕಂಡುಬಂದಿದ್ದು ಅವುಗಳನ್ನು ಸಹ ಗುರುತಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಶಾಸನೋಲ್ಲೇಖಿತ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜಿಲ್ಲೆಯಲ್ಲಿ ದೊರಕಿರುವ ಶಾಸನಗಳು ಕ್ರಿ.ಶ. ೮೯೯ ರಿಂದ ಕ್ರಿ.ಶ.೧೭೪೯ರ ನಡುವಿನ ಸುಮಾರು ೯೦೦ ವರ್ಷಗಳ ಕಾಲದ ಶಾಸನಗಳನ್ನು ಗುರುತಿಸಲಾಗಿದೆ.

ವ್ಯಾಪ್ತಿಯ ಶಾಸನೋಲ್ಲೇಖಿತ ಸ್ಥಳನಾಮಗಳ ವಾರ್ಗಿಕಗಳ ಆವರ್ತನವನ್ನು ಗುರುತಿಸಲಾಗಿ, ಕನ್ನಡ ವಾರ್ಗಿಕವಾದ 'ಹಳ್ಳಿ' ಅಗ್ರಸ್ಥಾನದಲ್ಲಿರುವುದರಿಂದ ಈ ಪ್ರದೇಶವು ಅಚ್ಚಗನ್ನಡ ಪ್ರದೇಶಕ್ಕೆ ಸೇರಿದೆಂಬುದು ತಿಳಿದು ಬರುತ್ತದೆ. ಸಮುದ್ರ ಎಂಬ ವಾರ್ಗಿಕವು 'ಸಂದ್ರ'ವಾಗಿ ಪರಿವರ್ತಿತವಾಗಿದೆ. ಈ ವ್ಯತ್ಯಾಸವು ೧೪-೧೫ನೇ ಶತಮಾನಗಳಿಂದ ಹಿಂದಿನದಲ್ಲವೆಂಬುದಕ್ಕೆ ಶಾಸನಧಾರಗಳಿವೆ.

ಇಲ್ಲಿನ ಶಾಸನೋಕ್ತ ಸ್ಥಳನಾಮಗಳಲ್ಲಿ ಅನುನಾಸಿಕ 'ಙ' ಕಂಡುಬಂದಿದ್ದು, ಬಿಂದುವಿಗೆ ಬದಲಾಗಿ ಅನುನಾಸಿಕಗಳ ಬಳಕೆಯಾಗಿರುವುದು ಕೂಡ ಗುರುತಿಸಲಾಗಿದೆ. ಉದಾ. ಗಂಗವಾಡಿ-ಗಙ್ಗವಾಡಿ. ಅನುಸ್ವಾರ ಲೋಪವಾಗಿ ದ್ವಿತ್ವಾಗಮನ ಬಂದಿರುವುದನ್ನು ಸಹ ಗುರುತಿಸಲಾಗಿದೆ. ಉದಾ. ಕಂನಮಂಗಲ>ಕನ್ನಮಂಗಲ ಚಂನಪಟ್ಟಣ> ಚನ್ನಪಟ್ಟಣ.

ಶಾಸನೋಲ್ಲೇಖಿತ ಸ್ಥಳನಾಮಗಳ ಪಟ್ಟಿಯನ್ನು ಮಾಡಿ; ಭಾಷಾ ವೈಜ್ಞಾನಿಕ ಅಧ್ಯಯನಕ್ಕೊಳ ಪಡಿಸಲಾಗಿದೆ. ಶಾಸನ ರಚಿತವಾದ ಕಾಲದ ಭಾಷಾ ಸ್ಥಿತಿಯನ್ನು, ಭಾಷಾ ಬೆಳವಣಿಗೆಯನ್ನು ದಾಖಲಿಸು ವುದಲ್ಲದೇ ಭಾಷೆಯಲ್ಲಿ ಸಂಭವಿಸುವ ವಿವಿಧ ಬಗೆಯ ಧ್ವನಿ ವ್ಯತ್ಯಾಸಗಳು ಕಂಡುಬಂದರೂ ಅವುಗಳನ್ನು ಸಾಮಾನ್ಯ ಸೂತ್ರ; ಚೌಕಟ್ಟಿಗೆ ಒಳಪಡಿಸುವುದು ಕಷ್ಟಸಾಧ್ಯ ಎಂಬುದನ್ನು ಗುರುತಿಸಲಾಗಿದೆ.

೫. ಇತಿಹಾಸ ರಚನೆಗೆ ಲಿಖಿತ ಆಧಾರವೇ ಮುಖ್ಯ ಪ್ರಮಾಣ. ಲಿಖಿತ ಆಧಾರಗಳಿಲ್ಲದ ಸಂದರ್ಭದಲ್ಲಿ ಸ್ಥಳನಾಮ ಅಧ್ಯಯನ ತುಂಬಾ ಅವಶ್ಯಕವಾದುದೆಂಬುದನ್ನು ಶಂ.ಬಾ.ಜೋಷಿಯವರು 'ಎಡೆಗಳು ಹೇಳುವ ಕಂನಾಡ ಕತೆ'ಯಲ್ಲಿ ಎಡೆಗಳ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸಲು ಹೊರಟಿರುವ ಸಂಗತಿ ಇದಕ್ಕೆ ಪುಷ್ಟಿ ನೀಡುತ್ತದೆ.

ಸಾಮ್ರಾಜ್ಯದಿಂದ ಹಿಡಿದು ಗ್ರಾಮಮಟ್ಟದ ಉಪ ಪ್ರಾದೇಶಿಕ ವಿಭಾಗಗಳೆಲ್ಲವನ್ನು ತಿಳಿಯಬೇಕಾದರೆ ಐತಿಹಾಸಿಕ ಸ್ಥಳನಾಮಗಳ ಅಧ್ಯಯನ ಅತಿಅವಶ್ಯಕವಾದದ್ದು. ಇದರಿಂದ ಪ್ರಾದೇಶಿಕ ಚರಿತ್ರೆ ಕಟ್ಟಿಕೊಡಲು ಸಾಧ್ಯವಾಗುತ್ತದೆ. ಈ ಪ್ರದೇಶವನ್ನು ಆಳ್ವಿಕೆಮಾಡಿದ ಗಂಗ, ಚೋಳ, ಹೊಯ್ಸಳ, ವಿಜಯನಗರ ಅರಸರು, ಮೈಸೂರಿನ ಒಡೆಯರು ಮೊದಲಾದ ರಾಜವಂಶಸ್ಥರು ಕೆರೆ, ಕಟ್ಟೆ, ಅಗ್ರಹಾರ ಮೊದಲಾದವನ್ನು ನಿರ್ಮಾಣಮಾಡಿ ಬ್ರಾಹ್ಮಣರಿಗೆ ಕೊಡುವಾಗ ಇಲ್ಲವೇ ದೇವರಿಗೆ ದಾನದತ್ತಿ ನೀಡುವಾಗ ದಾನಿಯು; ಆ ಊರ ಹೆಸರನ್ನು ತೆಗೆದುಹಾಕಿ ತನ್ನ ಇಲ್ಲವೇ ತನ್ನ ಸಂಬಂಧಿಕರ; ದೇವರ ಹೆಸರಿನ್ನಿಡುತ್ತಿದ್ದರು. ಈ ಎಲ್ಲ ಚಾರಿತ್ರಿಕ ಸಂಗತಿಗಳಿಂದ ಹೆಸರುಗಳ ವಿವಿಧ ಆಯಾಮಗಳನ್ನು ತಿಳಿದುಕೊಳ್ಳಬಹುದು. ರಾಜರ ದಾನ ಮತ್ತು ಯುದ್ಧವಿಜಯದ ಸ್ಮರಣೆಗಾಗಿ ಕೆಲವು ದೇಶೀಯ ಭಾಷೆಯಲ್ಲಿದ್ದ ಗ್ರಾಮಗಳಿಗೆ ಪ್ರತಿನಾಮಕರಣಮಾಡಿ ತನ್ನ ರಾಜ ಪರಿವಾರದವರ ಹೆಸರನ್ನು ಇಡುತ್ತಿದ್ದರು. ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಭಾಷಿಕ ಹಾಗೂ ನಿರ್ದಿಷ್ಟ ಘಟನೆಯನ್ನಾಧರಿಸಿ ಪ್ರತಿನಾಮಕರಣಕ್ಕೆ ಕಾರಣವಾಗಿರುವುದನ್ನು ಸಹ ಗುರುತಿಸಲಾಗಿದೆ. ಪ್ರತಿನಾಮಕರಣಕ್ಕೊಳಗಾದ ಅಗ್ರಹಾರಗಳು ಸಂಸ್ಕೃತ ಭಾಷೆಯಲ್ಲಿರುವುದನ್ನು ಸಹ ಗುರುತಿಸಲಾಗಿದೆ. 'ಮಂಗಲ'ದಿಂದ ಕೊನೆಗೊಳ್ಳುವ ಹಲವು ಗ್ರಾಮಗಳಿದ್ದು; ಇವು ಕರ್ನಾಟಕದಲ್ಲಿ ಚೋಳರು ಮತ್ತು ಅವರನ್ನು ಅನುಸರಿಸಿದ ಹೊಯ್ಸಳರು ತಾವು ಏರ್ಪಡಿಸಿದ ಅಗ್ರಹಾರಗಳಿಗೆ ದಾನ ಕೊಟ್ಟವರ ಹೆಸರನ್ನು ಹೊಂದಿದ ಹೆಸರನ್ನು ಕೊಡುತ್ತಿದ್ದರು. ಆದ್ದರಿಂದ ಚೋಳರ ಪ್ರದೇಶಗಳನ್ನು ಈ 'ಮಂಗಲ'ಗಳ ಮೂಲಕ ಅರಿಯಬಹುದಾಗಿದೆ.

ಚಾರಿತ್ರಿಕ ಸ್ಥಳನಾಮಗಳ ಮೂಲಕ ಸಂಸ್ಕೃತಿ, ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಸಹ ಗುರುತಿಸಲಾಗಿದೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವಪಡೆದ ಸ್ಥಳನಾಮಗಳನ್ನು ಗುರುತಿಸುವ ಮೂಲಕ ಗ್ರಾಮದಲ್ಲಿನ ಜನರಿಗೆ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸಲು ಸಾಧ್ಯವಾಗುತ್ತದೆ.

೬. ಜಾನಪದ ಅಂಶಗಳಾದ ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಕಥನ ಗೀತೆಗಳಲ್ಲಿ ಉಕ್ತಗೊಂಡಿರುವ ಸ್ಥಳನಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಿಂದ ಜನಪದರ ಆಡುಭಾಷೆಯ ಚಹರೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಸ್ಥಳಪುರಾಣ ಮತ್ತು ಸ್ಥಳೈತಿಹ್ಯಕ್ಕೆ ಭೌಗೋಳಿಕ, ಪ್ರಾಕೃತಿಕ ವೈಲಕ್ಷಣಗಳೇ ಕಾರಣವಾಗಿದ್ದರೂ ಇವುಗಳ ನಿಷ್ಪತ್ತಿಗೆ ಜನಪದರು ದೈವ, ಪೌರಾಣಿಕ ವ್ಯಕ್ತಿ ಅಥವಾ ರಾಜಕೀಯ ವ್ಯಕ್ತಿಗೆ ಸಂಬಂಧಿಸಿದ್ದ ಅತಿಮಾನುಷ ಪವಾಡಗಳನ್ನು ಆರೋಪಿಸಿ ಕಥೆಯನ್ನು ಕಟ್ಟುವುದರಲ್ಲಿ ನಿಸ್ಸೀಮರೆಂಬುದನ್ನು ಗುರುತಿಸಲಾಗಿದೆ. ಇವು ಅಸಂಭಾವ್ಯ ಘಟನೆಯಾದರೂ ಜನಪದರು ವಿಶ್ಲೇಷಣೆಗೆ ಒಳಪಡಿಸದಿರುವುದಕ್ಕೆ ಜನರಿಗಿರುವ ಪಾರಂಪರಿಕ ನಂಬಿಕೆಯೇ ಮುಖ್ಯ ಕಾರಣವಾಗಿರುವುದನ್ನು ಸಹ ಗುರುತಿಸಲಾಗಿದೆ.

ಕಥೆ, ಗಾದೆ, ಒಗಟು, ಕಥನ ಗೀತೆಗಳಲ್ಲಿ ಬಂದಿರುವ ಸ್ಥಳನಾಮಗಳಲ್ಲಿ; ಆ ಸ್ಥಳದಲ್ಲಿನ ವಸ್ತು ವೈವಿಧ್ಯತೆಯನ್ನು, ಜನರ ಆಚಾರ-ವಿಚಾರ, ಸಾಹಸಪ್ರಿಯತೆ, ಸಂಪ್ರದಾಯ, ನಂಬಿಕೆ- ಮೊದಲಾದ ಜಾನಪದೀಯ ಮತ್ತು ಸಾಂಸ್ಕೃತಿಕ ಕೋಶವಾಗಿರುವುದನ್ನು ಸಹ ಗುರುತಿಸಲಾಗಿದೆ.

೭. ಸಂಕೀರ್ಣ ಸ್ಥಳನಾಮಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಪ್ರತಿಕರಣ, ಸಾಪೇಕ್ಷ, ವಿಶೇಷಣಯುಕ್ತ, ವರ್ಣ ಸೂಚಕ ಸ್ಥಳನಾಮಗಳನ್ನು ಗುರುತಿಸಲಾಗಿದೆ.

ಅಧ್ಯಯನದಲ್ಲಿ ಒಂದೇ ಹೆಸರಿನ ಸ್ಥಳನಾಮಗಳು ನಾಲ್ಕು ತಾಲೂಕಿನಲ್ಲಿ ಕಂಡು ಬಂದಿರುವುದನ್ನು ಸಹ ಗುರುತಿಸಲಾಗಿದೆ. ಸಮುದಾಯವಾಚಿ, ವೃತ್ತಿವಾಚಿ, ವ್ಯಕ್ತಿವಾಚಿ, ಜಲಸಂಬಂಧಿವಾಚಿ, ಸಸ್ಯವಾಚಿ, ನಿಸರ್ಗವಾಚಿ ಮೊದಲಾದ ಅಂಶಗಳು ಪ್ರತಿಕರಣ ಸ್ಥಳನಾಮಗಳಲ್ಲಿ ಕಂಡು ಬಂದಿವೆ.

ಸಾಪೇಕ್ಷ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಚಿಕ್ಕ, ದೊಡ್ಡ, ಹೊಸ, ಕಿರಿಯ ಮೊದಲಾದ ಸಾಪೇಕ್ಷ ವಿಶೇಷಣಗಳನ್ನು ಒಳಗೊಂಡ ಸ್ಥಳನಾಮಗಳು ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬಳಕೆಗೊಂಡಿವೆ.

ವಿಶೇಷಣಯುಕ್ತ ಸ್ಥಳನಾಮಗಳನ್ನು ಗುರುತಿಸಿ, ವಿಶ್ಲೇಷಣೆಗೆ ಒಳಪಡಿಸಿದಾಗ, ಭೂ ವಿವರಣೆ, ವಸ್ತು, ಜಾತಿ, ವೃತ್ತಿ, ವ್ಯಕ್ತಿಯ ಗುಣ, ಗಾತ್ರ, ಬಣ್ಣ, ಪ್ರಾಣಿ, ಪಕ್ಷಿ, ದೈವ ಮೊದಲಾದ ವಿಶೇಷಣಗಳು ಕಾಣಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

ವರ್ಣ ಸೂಚಕ ಸ್ಥಳನಾಮಗಳಲ್ಲಿ ಕಪ್ಪು, ಬಿಳಿ, ಕೆಂಪು ಬಣ್ಣಗಳು ಬಂದಿದ್ದು. ಇವು ಮಣ್ಣು, ಕಲ್ಲು, ಸಸ್ಯ ಮೊದಲಾದ ವಸ್ತುವಿನ ಜೊತೆಗೆ ಬಂದಿರುವುದನ್ನು ಗುರುತಿಸಲಾಗಿದೆ.

೮.೨. ಅಧ್ಯಯನದ ಸಫಲತೆ ಮತ್ತು ಮಿತಿಗಳು

೧. 'ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಕನಕಪುರ, ಚನ್ನಪಟ್ಟಣ, ಮಾಗಡಿ, ರಾಮನಗರ ತಾಲೂಕುಗಳನ್ನು ಸಾಧ್ಯವಾದಷ್ಟು ಉಪಲಬ್ಧ ಗ್ರಂಥಾಧಾರ, ಮೌಖಿಕಾಧಾರ, ಶಾಸನಾಧಾರಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ. ಇದು ಸಮಗ್ರವಾದ, ಪರಿಪೂರ್ಣತೆಯ ಅಧ್ಯಯನವಲ್ಲ ಎಂಬುದು ಗೊತ್ತು. ಕನಕಪುರ ತಾಲ್ಲೂಕಿನ ಗಡಿಭಾಗದಲ್ಲಿ ತಮಿಳು ಭಾಷೆಯ ಪ್ರಭಾವವನ್ನು ಗುರುತಿಸಬಹುದು. ಜಿಲ್ಲೆಯ ಗಡಿಪ್ರದೇಶದ ಸ್ಥಳನಾಮಗಳಲ್ಲಿರುವ ಭಾಷಿಕ ಅಧ್ಯಯನವನ್ನು ಕೈಗೊಳ್ಳಬಹುದು.

೨. ಜಿಲ್ಲೆಯ ಎಲ್ಲ ವಸತಿ ಸ್ಥಳಗಳನ್ನು; ಕೆಲವೊಂದು ನಿರ್ವಸತಿ ಸ್ಥಳಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆದರೆ ಇತ್ತೀಚಿಗೆ ಹೊಸದಾಗಿ ರಚನೆಯಾದ ಗ್ರಾಮಗಳನ್ನು ಅಧ್ಯಯನದ ವ್ಯಾಪ್ತಿಗೆ ತಂದಿಲ್ಲ.

೩. ಪ್ರಸ್ತುತ ನಿಬಂಧದಲ್ಲಿ ಸ್ಥಳನಾಮಗಳನ್ನು ನಿರ್ದಿಷ್ಟಕ್ಕನುಗುಣವಾಗಿ, ವಾರ್ಗಿಕ್ಕನುಗುಣವಾಗಿ ಮತ್ತು ಸಂಕೀರ್ಣ ಎಂಬುದಾಗಿ ವರ್ಗೀಕರಣವನ್ನು ಮಾಡಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಆದರೆ ಇದೇ ಅಂತಿಮ ವರ್ಗೀಕರಣದ ಮಾದರಿಯಲ್ಲ ಎಂಬ ಮನವರಿಕೆಯೂ ಇದೆ. ವರ್ಗೀಕರಣ ವ್ಯಾಪ್ತಿಯನ್ನು ಹಿಗ್ಗಿಸುವ ಮತ್ತು ಕುಗ್ಗಿಸಲು ಅವಕಾಶವಿದೆ.

೪. ರಾಮನಗರ ಜಿಲ್ಲೆಯು ಜಾನಪದದ ಅಕ್ಷಯಪಾತ್ರೆಯಿದ್ದಂತೆ; ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಗಾದೆ, ಒಗಟು, ಗೀತೆ ಮೊದಲಾದವನ್ನು ಸಾಧ್ಯವಾದಷ್ಟು ಮಾತ್ರ ಅಧ್ಯಯನದಲ್ಲಿ ಅಳವಡಿಸಿ

ಕೊಳ್ಳಲಾಗಿದೆ. ಹಬ್ಬ, ಜಾತ್ರೆ, ಆಚರಣೆಯನ್ನು ಸ್ವಲ್ಪ ಪ್ರಮಾಣದಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಇನ್ನೂ ಲಭ್ಯವಾಗುವ ಎಲ್ಲ ಮೌಖಿಕ ಪರಂಪರೆಯ ಸ್ಥಳನಾಮ ಆಕರಗಳನ್ನು ಹಾಗೆ; ಸಮಗ್ರವಾಗಿ ಹಬ್ಬ, ಜಾತ್ರೆ, ಆಚರಣೆಗಳನ್ನು ಬಳಸಿಕೊಂಡು ವಿಸ್ತೃತವಾದ ಚರ್ಚೆ ನಡೆಸಲು ಸಾಧ್ಯವಿದೆ.

೫. ಸಾಮಾಜಿಕ ಅಧ್ಯಯನದಲ್ಲಿ 'ಪ್ರಾಚೀನ ಜನಾಂಗಗಳ ಮುಕ್ತ ಸಂಚಾರ ಮತ್ತು ವಾಸ್ತವ್ಯವನ್ನು ದಾಖಲಿಸುವಂತೆ ಸಂಕ್ಷಿಪ್ತ ಚರ್ಚೆ ಮಾಡಿದ್ದೇನೆ. ಹೀಗೆ ಕರ್ನಾಟಕದಾದ್ಯಂತ ಸಿಗುವ ಇಂಥ ಪ್ರಾಚೀನ ಜನಾಂಗಗಳ ವಲಸೆ ಮತ್ತು ವಾಸ್ತವ್ಯಗಳನ್ನು ಸ್ಥಳನಾಮಗಳ ಮೂಲಕ ಗುರುತಿಸುವ ಕಾರ್ಯ ಮಾಡಬಹುದು.

ಸ್ಥಳನಾಮಗಳಲ್ಲಿನ ವಿಶಿಷ್ಟ ಮತ್ತು ವಾರ್ಗಿಕಗಳ ಮೂಲಕ ಸಾಮಾಜಿಕ ಸಂಗತಿಯನ್ನು ಪ್ರತಿಬಿಂಬಿಸುವ ಸಮುದಾಯ, ವೃತ್ತಿ, ವ್ಯಕ್ತಿನಾಮಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ಅಧ್ಯಯನವನ್ನು ಕರ್ನಾಟಕಕ್ಕೂ ವಿಸ್ತೃತಗೊಳಿಸಿದ್ದಲ್ಲಿ ಇನ್ನೂ ಹಲವಾರು ಸಮುದಾಯ, ವೃತ್ತಿ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ವ್ಯಕ್ತಿನಾಮಗಳ ವಿಸ್ತೃತವಾದ ಅಧ್ಯಯನಕ್ಕೆ ಎಡೆಮಾಡಿಕೊಡಬಲ್ಲದು.

೬. ಸ್ಥಳನಾಮ ಮತ್ತು ಚರಿತ್ರೆಯನ್ನಿಟ್ಟುಕೊಂಡು ಚರ್ಚೆ ಮಾಡುವಾಗ ಪ್ರಾದೇಶಿಕ ಆಡಳಿತ ವಿಭಾಗಗಳು, ರಾಜಕೀಯ, ಇತಿಹಾಸ, ಐತಿಹಾಸಿಕ ಘಟನೆಗಳ ಹಾಗೂ ಸಾಂಸ್ಕೃತಿಕ ಅಂಶಗಳ ಅಧ್ಯಯನ ಮಾಡಲಾಗಿದೆ. ಅದಕ್ಕಿಂತ ಮುಖ್ಯವಾಗಿ ಆ ಕಾಲಮಾನದಲ್ಲಿ ಬದುಕಿದ್ದ ಜನಸಾಮಾನ್ಯರ ಜೀವನ, ಇತಿಹಾಸ, ಸಾಂಸ್ಕೃತಿಕ ಮಹಾಪುರುಷರ ನಿಖರವಾದ ಚರಿತ್ರೆಯನ್ನು ಕಟ್ಟಲು ಸಾಧ್ಯವಾಗಿಲ್ಲ.

೭. ಶಾಸನೋಕ್ತ ಸ್ಥಳನಾಮಗಳನ್ನು ಅಧ್ಯಯನ ಮಾಡಲಾಗಿ ಶಾಸನ ಕಾಲದಲ್ಲಿನ ಭಾಷೆಯ ಅವಸ್ಥೆ, ಸ್ವರೂಪವನ್ನು ಗುರುತಿಸಲು ಸಾಧ್ಯವಾಗಿದೆ. ಆದರೆ ಭಾಷೆಯ ವಿಸ್ತೃತವಾದ ಚರ್ಚೆಯನ್ನು ನಡೆಸಿಲ್ಲ.

೮. ಸಾಂದರ್ಭಿಕವಾಗಿ ಮಾತ್ರ ಸ್ಥಳನಾಮಗಳ ನಿಷ್ಪತ್ತಿಯನ್ನು ಗುರುತಿಸಲಾಗಿದೆ. ಆದರೆ ಅಧ್ಯಯನ ವ್ಯಾಪ್ತಿಗೆ ಬರುವ ಎಲ್ಲಾ ಸ್ಥಳನಾಮಗಳ ನಿಷ್ಪತ್ತಿಯನ್ನು ಗಮನಿಸಿಲ್ಲ ಹಾಗೂ ಜಿಲ್ಲೆಯ ನಿಷ್ಪತ್ತಿ ಕೋಶವನ್ನು ಕೊಡಲಾಗಿಲ್ಲ.

೯. ಸ್ಥಳನಾಮ ಅಧ್ಯಯನವು ಭಾಷಾಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಭೌಗೋಳಿಕ, ಐತಿಹಾಸಿಕ, ಜಾನಪದ ಮೊದಲಾದ ಅನ್ಯಜ್ಞಾನ ಶಿಸ್ತುಗಳನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಆದರೆ ಸಂಪೂರ್ಣವಾಗಿ, ಸಮಗ್ರವಾಗಿ ಅನ್ಯಜ್ಞಾನ ಶಿಸ್ತುಗಳನ್ನು ಅಳವಡಿಸಿಕೊಂಡಿದ್ದೇ ಆದಲ್ಲಿ ಹೊಸ ಹೊಸ ಹೊಳಹುಗಳಿಗೆ ದಾರಿ ಮಾಡಿಕೊಡಬಲ್ಲದು.

೧೦. ಪ್ರಸ್ತುತ ನಿಬಂಧ ವಿಷಯದ ಅಧ್ಯಯನ ಸಮಯದ ಮಿತಿಯೊಳಗೆ ಸ್ಥಳನಾಮಗಳ ಮಾಹಿತಿಯನ್ನು ಸಂಗ್ರಹಣೆ ಮಾಡಿ, ಲಭ್ಯವಾದ ಮಾಹಿತಿಗಳನ್ನು ಅನುಸರಿಸಿ ವಿಶ್ಲೇಷಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ವ್ಯಾಪಕವಾದ ಚರ್ಚೆ ಮಾಡಲು ಪ್ರಯತ್ನಿಸಿರುವುದು ಮಾತ್ರ ಸತ್ಯ ಸಂಗತಿ. ಆದರೆ ಈ ಚರ್ಚೆ ಸಮಗ್ರವಲ್ಲ ಎಂಬ ವಿನಮ್ರತೆಯನ್ನು ವ್ಯಕ್ತಪಡಿಸುತ್ತೇನೆ.

೮.೩. ಮುಂದಿನ ಅಧ್ಯಯನದ ಸಾಧ್ಯತೆಗಳು

೧. ರಾಮನಗರ ಜಿಲ್ಲೆಯಲ್ಲಿ ಬರುವ ತಾಲೂಕುವಾರು ಸ್ಥಳನಾಮಗಳ ಕುರಿತು ಪ್ರತ್ಯೇಕವಾದ ಅಧ್ಯಯನ ಮಾಡಲು ಅವಕಾಶವಿದೆ.

೨. ತಮಿಳುನಾಡು-ಕರ್ನಾಟಕ ಗಡಿಭಾಗದ ಸ್ಥಳನಾಮಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡುವ ಅಗತ್ಯತೆ ಇದೆ. ಇದರಿಂದ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳ ಮೇಲೆ ತಮಿಳುಭಾಷೆ, ಸಂಸ್ಕೃತಿಯ ಪ್ರಭಾವವನ್ನು ಹಾಗೆ ತಮಿಳುನಾಡು ಗಡಿಪ್ರದೇಶದ ಸ್ಥಳನಾಮಗಳ ಮೇಲೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಭಾವವನ್ನು ಗುರುತಿಸಲು ಸಾಧ್ಯವಾಗುವುದು.

೩. ರಾಮನಗರ ಜಿಲ್ಲೆಯು ಸಾಂಸ್ಕೃತಿಕವಾಗಿ ಶ್ರೀಮಂತವಾದ ಜಿಲ್ಲೆಯಾದ್ದರಿಂದ 'ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ'ವೆಂದು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಅವಕಾಶವಿದೆ.

೪. ರಾಮನಗರ ಜಿಲ್ಲೆಯು ಬೆಟ್ಟ-ಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು ಅಲ್ಲಿನ ಜನಪದರು ಪ್ರತಿಯೊಂದು ಕಲ್ಲು ಬಂಡೆಯನ್ನು ತೋರಿಸಿ ಅದಕ್ಕೊಂದು ಕಥೆಯನ್ನು ಹೇಳುತ್ತಾರೆ. ಆದ್ದರಿಂದ 'ಕಲ್ಲುಗಳು ಹೇಳುವ ಕಥೆಗಳು' ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಮಾಡಲು ಅವಕಾಶವಿದೆ.

೫. 'ಗ್ರಾಮನಾಮ ಜಾನಪದ' ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆ ಅಥವಾ ಇಡೀ ಕರ್ನಾಟಕವನ್ನು ಅನುಲಕ್ಷಿಸಿ ಮೌಖಿಕ ಪರಂಪರೆಯ ಪುರಾಣ, ಐತಿಹ್ಯ, ಕಥೆ, ಜನಪದ ಗೀತೆ, ಕಥನಗೀತೆ, ಗಾದೆ, ಒಗಟು, ಒಡಪು ಹಾಗೂ ಜನಪದ ಹೇಳಿಕೆಗಳ ಹಿನ್ನೆಲೆಯಲ್ಲಿ ಸ್ಥಳನಾಮಗಳ ಪ್ರತ್ಯೇಕ ಅಧ್ಯಯನ ಮಾಡಲು ಸಾಧ್ಯವಿದೆ.

೬. ಶಾಸನ ಮತ್ತು ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಭಾಷೆಯ ಚಾರಿತ್ರಿಕ ಬೆಳವಣಿಗೆ, ಭಾಷೆಯ ಅವಸ್ಥೆ ಮತ್ತು ಬದಲಾವಣೆ, ಪ್ರತಿನಾಮಕರಣ ಹಾಗೂ ಐತಿಹಾಸಿಕ ಸಂಗತಿಗಳ ಜೊತೆಗೆ ಸ್ಥಳನಾಮಗಳ ಜೊತೆಯಲ್ಲಿ ಬಂದಿರುವ ವೀರರ, ತ್ಯಾಗಿಗಳ, ಧರ್ಮವಂತರ ಹಾಗೂ ಪ್ರಾದೇಶಿಕ ವಿಭಾಗಗಳ, ಮಾಸ್ತಿ, ವೀರಗಲ್ಲು ಮೊದಲಾದ ಅಂಶಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಬಹುದು.

೭. "ಪ್ರವಾಸೋದ್ಯಮ ಮತ್ತು ಸ್ಥಳನಾಮಗಳ ಅಧ್ಯಯನ" ಎಂಬ ವಿಷಯದಡಿಯಲ್ಲಿ ಪ್ರತಿಯೊಂದು ಜಿಲ್ಲೆಯನ್ನು ಅನುಲಕ್ಷಿಸಿ ಅಧ್ಯಯನ ಮಾಡಬಹುದು. ಇದರಿಂದ ಜಿಲ್ಲೆಯ ಐತಿಹಾಸಿಕ, ಧಾರ್ಮಿಕ ಸ್ಥಳ, ಬೆಟ್ಟ-ಗುಡ್ಡಗಳು, ನದಿ-ಕಣಿವೆಗಳು, ನಿಸರ್ಗರಮ್ಯ ಸ್ಥಳಗಳು ಮೊದಲಾದ ಸ್ಥಳಗಳ ಸಂಶೋಧನೆ ಕೈಗೊಂಡು ಅಲ್ಲಿರುವ ವಿಶೇಷತೆಗಳನ್ನು ತಿಳಿಸಿಕೊಡುವುದರಿಂದ ಐತಿಹಾಸಿಕ ಅಧ್ಯಯನಾಸಕ್ತರಿಗೆ, ಆಸ್ತಿಕ ಮನೋಗುಣದವರಿಗೆ, ಚಾರಣ ಮಾಡುವ ಸಾಹಸ ಪ್ರಿಯರಿಗೆ, ನಿಸರ್ಗ ಪ್ರೇಮಿ ಮೊದಲಾದ ಮನೋಗುಣದವರನ್ನು ಆಕರ್ಷಿಸುವ ಮೂಲಕ ಪ್ರವಾಸೋದ್ಯಮ ಇಲಾಖೆಗೆ ಉತ್ತೇಜನಕೊಟ್ಟಂತೆ ಹಾಗೂ ಆಯಾಯ ಸ್ಥಳನಾಮ ಹೊಂದಿದ ಪ್ರದೇಶಗಳ ಅಭಿವೃದ್ಧಿಗೂ ಪೂರಕವಾಗಿರುತ್ತದೆ.

ಅನುಬಂಧಗಳು

೧. ಪ್ರಶ್ನಾವಳಿ

೧. ಊರಿನ ಹೆಸರು

೨. ತಾಲ್ಲೂಕು

೩. ಜಿಲ್ಲೆ

೪. ಊರಿನ ಅಧಿಕೃತ ಹೆಸರು (ಬರವಣಿಗೆ ರೂಪ)

೫. ವಿಚಾರಣೆಯಲ್ಲಿರುವ ಇತರ ರೂಪಗಳು

೬. ಹಳೆಯ ಹೆಸರುಗಳು

೭. ಊರಿನ ಅಧಿದೇವತೆ (ದೇವಸ್ಥಾನಗಳು)

೮. ಪ್ರಾಕೃತಿಕ ಪರಿಸರ (ನದಿ, ಕೆರೆ, ಕಣಿವೆ, ಬೆಟ್ಟ, ಗುಡ್ಡ, ಮುಖ್ಯಬೆಳೆ)

೯. ಊರಿನಲ್ಲಿರುವ ಸಮುದಾಯಗಳು ಮತ್ತು ಪ್ರಮುಖ ವೃತ್ತಿಗಳು

೧೦. ಊರಿನ ಪ್ರಮುಖ ಹಬ್ಬಗಳು

೧೧. ಊರಿನ ಹೆಸರಿನೊಡನೆ ಬೆರೆತ ಗಾದೆ, ಒಗಟು, ನಾಣ್ನುಡಿ, ಲಾವಣಿಗಳಿದ್ದಲ್ಲಿ ಅವುಗಳ ವಿವರ

೧೨. ಊರಿಗೆ ಸಂಬಂಧಿಸಿದ ಇತಿಹಾಸ (ಶಾಸನಗಳು, ಕೋಟೆಯ ಅವಶೇಷಗಳು)

೧೩. ಊರಿಗೆ ಹೆಸರು ಬಂದದ್ದುಕ್ಕೆ ಇರುವ ಕಥೆಗಳು (ಪುರಾಣ, ಐತಿಹ್ಯ, ಕಥೆ, ಗೀತೆ)

೨. ರಾಮನಗರ ಜಿಲ್ಲೆಯ ತಾಲ್ಲೂಕುವಾರು ಸ್ಥಳನಾಮಗಳ ಅಕಾರಾದಿ ಪಟ್ಟಿ

ಕನಕಪುರ ತಾಲ್ಲೂಕು

೧. ಅಗರ

೨. ಅಗ್ರಹಾರ ೦೨೨೭೧೫೦೦

೩. ಅಚ್ಚಲು ೦೨೨೭೭೭೦೦

೪. ಅಜ್ಜಬಸವನಹಳ್ಳಿ

೫. ಅಜ್ಜೆಗೌಡನವಲಸೆ

೬. ಅತ್ತಿಗುಪ್ಪೆ ೦೨೨೬೭೬೦೦

೭. ಅತ್ತಿಹಳ್ಳಿ ೦೨೨೭೫೯೦೦

೮. ಅನಮನಹಳ್ಳಿ ೦೨೨೭೮೦೦

೯. ಅನುಮನಹಳ್ಳಿ (ಸಾ.ಹೊ)

೧೦. ಅಲ್ಲಿಸಾಬರದೊಡ್ಡಿ

೧೧. ಅರ್ಜುನಹಳ್ಳಿ ತಾಂಡ್ಯ

೧೨. ಅರಕೆರೆ

೧೩. ಅರಗಡಕಲು

೧೪. ಅರಟಬೆಲೆ

೧೫. ಅರನಕುಪ್ಪೆ

೧೬. ಅರಳಾಳು ೦೨೨೭೨೬೦೦

೧೭. ಅರಳಾಳುಸಂದ್ರ ೦೨೨೭೧೬೦೦

೧೮. ಅರಳೀಮರದದೊಡ್ಡಿ

೧೯. ಅರೆಕೊಪ್ಪ

೨೦. ಅರೆಹೊಸಹಳ್ಳಿ

೨೧. ಅವರೆಮಾಳ

೨೨. ಅಳ್ಳಿಮಾರನಹಳ್ಳಿ

೨೩. ಅನಜವಾಡಿ

೨೪. ಅಂಗರಹಳ್ಳಿ

೨೫. ಅಂಜನಾಪುರ

೨೬. ಆನೆಹೊಸಹಳ್ಳಿ

೨೭. ಆಲಕುಳಿ

೨೮. ಆಲನತ್ತ

೨೯. ಆಲಹಳ್ಳಿ

೩೦. ಆಲೂರು ೦೨೨೭೪೭೦೦

೩೧. ಇರಲ್‌ಪೋಡು

೩೨. ಉದಾರಹಳ್ಳಿ

೩೩. ಉಯ್ಯಂಬಳ್ಳಿ

೩೪. ಉರಗನದೊಡ್ಡಿ

೩೫. ಏಳಗಳ್ಳಿ

೩೬. ಕಗ್ಗಲಹಳ್ಳಿ

೩೭. ಕಚುವನಹಳ್ಳಿ

೩೮. ಕಣಿವೆಕಟ್ಟೆ

೩೯. ಕಣಿವೆಮಾದಪುರ

೪೦. ಕತ್ತರಿನತ್ತ

೪೧. ಕನಕಪುರ

೪೨. ಕಬ್ಬಾಳು

೪೩. ಕರಡಿದೊಡ್ಡಿ

೪೪. ಕರಿಕಲ್‌ದೊಡ್ಡಿ

೪೫. ಕಲ್ಲಹಳ್ಳಿ

೪೬. ಕಲ್ಲನಕುಪ್ಪೆ

೪೭. ಕಂಚನಹಳ್ಳಿ ೦೨೨೭೪೫೦೦

೪೮. ಕಂಸಾಗರ
೪೯. ಕಡಸಿಕೊಪ್ಪ
೫೦. ಕಾಡಹಳ್ಳಿ
೫೧. ಕಾಡುಜಕ್ಕಸಂದ್ರ
೫೨. ಕೀರಣಗೆರೆ
೫೩. ಕುರುಬರಹಳ್ಳಿ ೦೨೨೬೩೩೦೦
೫೪. ಕೂತಗಳೆ
೫೫. ಕೂತಗೊಂಡನಹಳ್ಳಿ
೫೬. ಕೂನೂರು
೫೭. ಕೆ. ಗೊಲ್ಲಹಳ್ಳಿ
೫೮. ಕೆಬ್ಬೆಹಳ್ಳಿ
೫೯. ಕೆಬ್ಬರೆ
೬೦. ಕೆಮ್ಮಾಳೆ
೬೧. ಕೆರಳಾಳುಸಂದ್ರ
೬೨. ಕೆಂಕೆರೆಪಾಳ್ಯ
೬೩. ಕೆಂಗಲುನತ್ತಹಳ್ಳಿ
೬೪. ಕೆಂಪಲನತ್ತ
೬೫. ಕೊಕ್ಕರೆಹೊಸಹಳ್ಳಿ
೬೬. ಕೊಳ್ಳಿಗನಹಳ್ಳಿ
೬೭. ಕೊಳಲುಗುಂಡಿ
೬೮. ಕೊಟ್ಟಗಾಳು
೬೯. ಕೋಟೆಕೊಪ್ಪ
೭೦. ಕೋಣನಗುಂಡಿ
೭೧. ಕೋಡಿಪುರ
೭೨. ಕೋಡಿಹಳ್ಳಿ
೭೩. ಕೋಣಸಂದ್ರ
೭೪. ಕೊಳಗೊಂಡನಹಳ್ಳಿ
೭೫. ಗಂಗನಹಳ್ಳಿ
೭೬. ಗಟ್ಟಿಗುಂದ
೭೭. ಗಣಗನಹಳ್ಳಿ
೭೮. ಗಾಣಾಳು
೭೯. ಗಾದಾರನಹಳ್ಳಿ
೮೦. ಗಬ್ಬಾಡಿ
೮೧. ಗಬ್ಬಾಡಿಕಾವಲು
೮೨. ಗರಳಾಪುರ
೮೩. ಗುಡ್ಡೇವೀರನಹೊಸಹಳ್ಳಿ
೮೪. ಗುತ್ತಲಹುಣಸೆ
೮೫. ಗುಳ್ಳಹಟ್ಟಿಕಾವಲು
೮೬. ಗುಂಡಿನಗೊಲ್ಲಹಳ್ಳಿ
೮೭. ಗೂಗರೇದೊಡ್ಡಿ
೮೮. ಗೋದೂರು
೮೯. ಗೇರಹಳ್ಳಿ
೯೦. ಗೊಟ್ಟಿಗೆಹಳ್ಳಿ
೯೧. ಗೋಪಸಂದ್ರ
೯೨. ಗೊಲ್ಲಹಳ್ಳಿ (ಉ.ಹೋ) ೦೨೨೬೧೩೦೦
೯೩. ಗೊಲ್ಲಹಳ್ಳಿ (ಹಾ.ಹೋ) ೦೨೨೮೧೬೦೦
೯೪. ಗೊರವನಪುರ
೯೫. ಚನ್ನಸಂದ್ರ
೯೬. ಚಾಕನಹಳ್ಳಿ
೯೭. ಚಿಕ್ಕಕಬ್ಬಹಳ್ಳಿ
೯೮. ಚಿಕ್ಕಕಲ್‌ಬಾಳು
೯೯. ಚಿಕ್ಕದೇವರಹಳ್ಳಿ
೧೦೦. ಚಿಕ್ಕಬೆಟ್ಟಹಳ್ಳಿ
೧೦೧. ಚಿಕ್ಕಮರಳವಾಡಿ
೧೦೨. ಚಿಕ್ಕಮಾದುಡೆ
೧೦೩. ಚಿಕ್ಕಮುಕ್ಕೊಡ್ಲು
೧೦೪. ಚಿಕ್ಕಮುದವಾಡಿ
೧೦೫. ಚಿಕ್ಕಸಾದೇನಹಳ್ಳಿ

೧೦೬. ಚಿಕ್ಕಾಲಹಳ್ಳಿ

೧೦೭. ಚಿಕ್ಕೊಪ್ಪ

೧೦೮. ಚಿಕ್ಕಬೆಜ್ಜಲಹಟ್ಟಿ

೧೦೯. ಚೀರಣಕುಪ್ಪೆ

೧೧೦. ಚೀಲಂದವಾಡಿ

೧೧೧. ಚೀಲಂದವಾಡಿ ಅರಣ್ಯ

೧೧೨. ಚೀಲೂರು ೦೨೨೬೫೦೦೦

೧೧೩. ಚುಳಕನಕೆರೆ ಕಾವಲು

೧೧೪. ಚೂಡಹಳ್ಳಿ

೧೧೫. ಚೌಕಸಂದ್ರ

೧೧೬. ಜಕ್ಕಸಂದ್ರ

೧೧೭. ಜಕ್ಕಸಂದ್ರ ಅರಣ್ಯ

೧೧೮. ತಟ್ಟಿಗುಪ್ಪೆ

೧೧೯. ತಟ್ಟೆಕೆರೆ (ಕೋ.ಹೋ) ೦೨೨೬೭೯೦೦

೧೨೦. ತಟ್ಟೇಕೆರೆ (ಮ.ಹೋ) ೦೨೨೮೬೫೦೦

೧೨೧. ತಾಮಸಂದ್ರ

೧೨೨. ತೈಲೂರು ಅರಣ್ಯ

೧೨೩. ತಿಗಳರಹಳ್ಳಿ

೧೨೪. ತಿಗಳರಹೊಸಹಳ್ಳಿ

೧೨೫.ತಿಟ್ಟಮೇಲಿನಗೊಲ್ಲಹಳ್ಳಿ

೧೨೬. ತಿಪ್ಪೂರು

೧೨೭. ತುರುಕರ ಹೊಸಹಳ್ಳಿ

೧೨೮. ತುಂಗಣಿ

೧೨೯. ತೆಂಗನಾಯಕನಹಳ್ಳಿ

೧೩೦. ತೇರುಬೀದಿ

೧೩೧. ತೊಪ್ಪಗನಹಳ್ಳಿ

೧೩೨. ತೊರಬೇಕುಪ್ಪೆ

೧೩೩. ತೋಕಸಂದ್ರ

೧೩೪. ತೋಟಹಳ್ಳಿ

೧೩೫. ದಾಳಿಂಬ

೧೩೬. ದ್ಯಾವಸಂದ್ರ

೧೩೭. ದಿಂಬದಹಳ್ಳಿ

೧೩೮. ದುನ್ನಸಂದ್ರ

೧೩೯. ದೂಂತೂರು

೧೪೦. ದೇವರಹಳ್ಳಿ

೧೪೧. ದೇವರಕಗ್ಗಲಹಳ್ಳಿ

೧೪೨. ದೇಶವಳ್ಳಿ

೧೪೩. ದೊಡ್ಡಕಬ್ಬಹಳ್ಳಿ

೧೪೪. ದೊಡ್ಡಕಲ್‌ಬಾಳು

೧೪೫. ದೊಡ್ಡಕೊಪ್ಪ

೧೪೬. ದೊಡ್ಡಗುಳಿ

೧೪೭. ದೊಡ್ಡಬೆಜ್ಜಲಹಟ್ಟಿ

೧೪೮. ದೊಡ್ಡಮರಳವಾಡಿ

೧೪೯. ದೊಡ್ಡಮುದುವಾಡಿ

೧೫೦. ದೊಡ್ಡಸಾದೇನಹಳ್ಳಿ

೧೫೧. ದೊಲ್ಲಹಳ್ಳಿ

೧೫೨. ದೊಂಬರದೊಡ್ಡಿ

೧೫೩. ನರಿಪುರ

೧೫೪. ನಲ್ಲಹಳ್ಳಿ

೧೫೫. ನಾಗರಸನಕೋಟೆ

೧೫೬. ನಾಯಕನಹಳ್ಳಿ

೧೫೭. ನಾಯ್ಕರತಾಂಡ್ಯ

೧೫೮. ನಾರಾಯಣಪುರ

೧೫೯. ನಿಡಗಲ್ಲು

೧೬೦. ನಿಡಗಲ್ ಅರಳಾಳುಸಂದ್ರ

೧೬೧. ಪಡುವಣಗೆರೆ

೧೬೨. ಪಿಚ್ಚನಕೆರೆ

೧೬೩. ಪುರದದೊಡ್ಡಿ

೧೬೪. ಪುರುಷಗೊಂಡನಹಳ್ಳಿ

೧೬೫. ಬಡೆಸಾಬರದೊಡ್ಡಿ

೧೬೬. ಬಣ್ಣಾನೆ

೧೬೭. ಬನವಾಸಿ

೧೬೮. ಬನ್ನಿಕುಪ್ಪೆ ೦೨೨೬೪೩೦೦

೧೬೯. ಬನ್ನಿಮುಕ್ಕೊಡ್ಲು

೧೭೦. ಬರಡನಹಳ್ಳಿ

೧೭೧. ಬಸವನಹಳ್ಳಿ

೧೭೨. ಬಸವಾಪಟ್ಟಣ ವೀರಸಂದ್ರ

೧೭೩. ಬಸವನಪುರ

೧೭೪. ಬಳ್ಳಗೆರೆ

೧೭೫. ಬಳೆಚನ್ನವಲಸೆ

೧೭೬. ಬಾಚಹಳ್ಳಿ

೧೭೭. ಬನಂತಮರಿ

೧೭೮. ಬಂಡಿಗನಹಳ್ಳಿ

೧೭೯. ಬಾಳೆಪುರ

೧೮೦. ಬಾಲಗೌಡನಹಳ್ಳಿ

೧೮೧. ಬ್ಯಾಲಾಳು

೧೮೨. ಬಿಜ್ಜಹಳ್ಳಿ

೧೮೩. ಬಿಳ್ಳಿಗನಕುಪ್ಪೆ

೧೮೪. ಬಿಳಿಕಲ್ ಅರಣ್ಯ

೧೮೫. ಬಿಳಿದಾಳೆ

೧೮೬. ಬೆಟ್ಟಹಳ್ಳಿಕಾವಲು

೧೮೭. ಬೆಣಚಕಲ್‌ದೊಡ್ಡಿ

೧೮೮. ಬೆಣ್ಣೆಗೋಡು

೧೮೯. ಬೆಳಗುಲಿ

೧೯೦. ಬೇಕುಪ್ಪೆ

೧೯೧. ಬೀರನಕುಪ್ಪೆ

೧೯೨. ಬೂದಿಗುಪ್ಪೆ

೧೯೩. ಬೇಲಿಕೊತ್ತನೂರು

೧೯೪. ಬೇಲೂರು

೧೯೫. ಬೊಮ್ಮನಹಳ್ಳಿ

೧೯೬. ಬೊಮ್ಮಸಂದ್ರ ೦೨೨೮೪೬೦೦

೧೯೭. ಭಂಟಗಾಳು

೧೯೮. ಭೀಮಸಂದ್ರ (ಮ.ಹೋ) ೦೨೨೬೯೦೦೦

೧೯೯. ಭೀಮಸಂದ್ರ (ಹಾ.ಹೋ) ೦೨೨೬೪೭೦೦

೨೦೦. ಭೂಹಳ್ಳಿ

೨೦೧. ಮಕಲಂದ

೨೦೨. ಮತ್ತಿಕುಂಟೆ

೨೦೩. ಮಣಿಯಂಬಾಳು

೨೦೪. ಮಣಿಯಂಬಾಳು ಬಿ.

೨೦೫. ಮರಸರಹಳ್ಳಿ

೨೦೬. ಮರಳಗೆರೆ

೨೦೭. ಮರಳೇಬೇಕುಪ್ಪೆ

೨೦೮. ಮಲ್ಲಪ್ಪನಹೊಸಹಳ್ಳಿ

೨೦೯. ಮಲ್ಲಾಪುರ (ಕೋ.ಹೋ)

೨೧೦. ಮಲ್ಲಾಪುರ (ಸಾ.ಹೋ)

೨೧೧. ಮಲ್ಲಿಗೆಮೆಟ್ಟಲು

೨೧೨. ಮಹಿಮನಹಳ್ಳಿ

೨೧೩. ಮಂಜುನಾಥ

೨೧೪.ಮಾರ್ಗಯ್ಯನಗುಂದಿ

೨೧೫. ಮಾದನಹಳ್ಳಿ

೨೧೬. ಮಾದರಹಳ್ಳಿ

೨೧೭. ಮಾರದೇವನಹಳ್ಳಿ

೨೧೮. ಮಾರಸಂದ್ರ (ಮಾ.ಹೋ) ೦೨೨೬೩೦೦

೨೧೯. ಮಾರಸಂದ್ರ (ಹಾ.ಹೋ)

೨೨೦. ಮಾವತ್ತೂರು

೨೨೧. ಮಾಹಳ್ಳಿ

೨೨೨. ಮುಗ್ಗೂರು
೨೨೩. ಮುಗ್ಗೂರು ಅರಣ್ಯ
೨೨೪. ಮುಡೇನಹಳ್ಳಿ
೨೨೫. ಮುನಿನಗರ
೨೨೬.ಮುರಡಿಹೊಸಹಳ್ಳಿ
೨೨೭. ಮುರಕಣಿ
೨೨೮. ಮುಳ್ಳಹಳ್ಳಿ
೨೨೯. ಮೂಡಲಸ್ವಾಮಿಕುಪ್ಪೆ
೨೩೦. ಮೇಡಮಾರನಹಳ್ಳಿ
೨೩೧. ಮೇದರದೊಡ್ಡಿ
೨೩೨. ಯಕ್ಕುಳಿ
೨೩೩. ಯಡಮಡು
೨೩೪. ಯಡಮಾರನಹಳ್ಳಿ
೨೩೫. ಯರಹಳ್ಳಿ
೨೩೬. ಯರಂಗೆರೆ
೨೩೭. ಯಲಚವಾಡಿ
೨೩೮. ಯಲಚಹಳ್ಳಿ
೨೩೯. ಯಡುಗೊಂಡನಹಳ್ಳಿ
೨೪೦. ಯಡೆಹಳ್ಳಿ
೨೪೧. ರಾಗಿಹಳ್ಳಿ (ರಾಜ್ಯ ಅರಣ್ಯ)
೨೪೨. ರಾಮನಹಳ್ಳಿ ೦೨೨೭೯೦೦
೨೪೩. ರಾಮಪುರ ೦೨೨೭೧೧೦೦
೨೪೪. ರಾಮಪುರ ಕರುವಿನಹಟ್ಟಿಕಾವಲ್
೨೪೫. ರಾಯಸಂದ್ರ
೨೪೬. ಲಿಂಗನಪುರ
೨೪೭. ಲೋಕನಾಯ್ಕನತಾಂಡ್ಯ
೨೪೮. ವಡಕೆಕಟ್ಟೆ
೨೪೯. ವಡ್ಡರಕುಪ್ಪೆ ತಾಂಡ
೨೫೦. ವಡೇರಹಳ್ಳಿ ೦೨೨೬೨೩೦೦

೨೫೧. ವರಗೇರಹಳ್ಳಿ
೨೫೨. ವಾಡೆದೊಡ್ಡಿ
೨೫೩. ವಿರುಪಸಂದ್ರ (ಸಾ.ಹೋ) ೦೨೨೭೨೨೦೦
೨೫೪. ವಿರುಪಸಂದ್ರ (ಸಾ.ಹೋ) ೦೨೨೭೫೩೦೦
೨೫೫. ವೀರಸಂದ್ರ
೨೫೬. ಶಿವನಹಳ್ಳಿ ೦೨೨೭೨೭೦೦
೨೫೭. ಶೀತಲವಾಡಿ
೨೫೮. ಸಾತನೂರು
೨೫೯. ಸಾಬರದೊಡ್ಡಿ
೨೬೦. ಸಾಲಬನ್ನಿ
೨೬೧. ಸಾಸಲಾಪುರ
೨೬೨. ಸಾಂಬಪುರ
೨೬೩. ಸಿಂಗಸಂದ್ರ ೦೨೨೬೩೬೦೦
೨೬೪. ಸೀಗೇಕೋಟೆ
೨೬೫. ಸುಂಡಘಟ್ಟ
೨೬೬. ಸೂರನಹಳ್ಳಿ
೨೬೬. ಸೋಮನಾಥಪುರ
೨೬೭. ಸೋಮೇದ್ಯಾಪನಹಳ್ಳಿ
೨೬೮. ಸೋಲಿಗ್ಗೆರೆ
೨೬೯. ಹಣಕಡಬೂರು
೨೭೦. ಹನುಮನಹಳ್ಳಿ
೨೭೧. ಹರವತಿಪಾಳ್ಯ
೨೭೨. ಹರಿಹರ
೨೭೩. ಹಲಸಿನಮರದಹಳ್ಳಿ
೨೭೪. ಹಲಸೂರು (ಸಾ.ಹೋ) ೦೨೨೭೮೦೦
೨೭೫. ಹಲಸೂರು ಜೋಡಿ
೨೭೬. ಹಂಚುಗುಳಿ
೨೭೭. ಹಾರೋಶಿವನಹಳ್ಳಿ
೨೭೮. ಹಾರೋಹಳ್ಳಿ ೦೨೨೬೩೧೦೦

೨೭೯. ಹುಣಸನಕೋಡಿಹಳ್ಳಿ
೨೮೦. ಹುಣಸನಹಳ್ಳಿ
೨೮೧. ಹುಣಸಲನತ್ತ
೨೮೨. ಹುಯಲಪ್ಪನಹಳ್ಳಿ
೨೮೩. ಹುಲಗೊಂಡನಹಳ್ಳಿ
೨೮೪. ಹೂಕುಂದ
೨೮೫. ಹೂಳ್ಯ
೨೮೬. ಹೆಗ್ಗನೂರು
೨೮೭. ಹೇರಂದ್ಯಾಪನಹಳ್ಳಿ
೨೮೮. ಹೊನ್ನಹಳ್ಳಿ
೨೮೯. ಹೊನ್ನಿಗನಹಳ್ಳಿ
೨೯೦. ಹೊನ್ನಿಗನಹಳ್ಳಿ
೨೯೧. ಹೊರಳಗಲ್ಲು
೨೯೨. ಹೊಸಕೋಟೆ
೨೯೩. ಹೊಸದುರ್ಗ
೨೯೪. ಹೊಸದೊಡ್ಡಿ
೨೯೫. ಹೊಸಹಳ್ಳಿ (ಮ.ಹೋ) ೦೨೨೬೬೮೦೦
೨೯೬. ಹೊಸಹಳ್ಳಿ (ಸಾ.ಹೋ) ೦೨೨೭೫೮೦೦

ಚನ್ನಪಟ್ಟಣ ತಾಲ್ಲೂಕು

೧. ಅರ್ಕಾಪುರ
೨. ಅಕ್ಕೂರು
೩. ಅಗ್ರಹಾರ ವಳಗೆರೆಹಳಿ
೪. ಅಜ್ಜನಹಳ್ಳಿ
೫. ಅಣ್ಣೆಗೆರೆ
೬. ಅತ್ತಿಗುಪ್ಪೆ ೦೨೨೫೪೮೦೦
೭. ಅಬ್ಬೂರು
೮. ಅಮ್ಮಲ್ಲಿದೊಡ್ಡಿ
೯. ಅವ್ವೇರಹಳ್ಳಿ, ೦೨೨೫೫೫೦೦
೧೦. ಅರಳಾಪುರ
೧೧. ಅರಳಾಸಂದ್ರ (ಮಾಜ್ರಖೇತದ ವಡೇರಹಳ್ಳಿ)
೧೨. ಅರಳಾಳಸಂದ್ರ ೦೨೨೫೬೫೦೦
೧೩. ಅಂಕುಶನಹಳ್ಳಿ
೧೪. ಅಂಬಾಡಹಳ್ಳಿ
೧೫. ಇಗ್ಗಲೂರು
೧೬. ಉಜ್ಜನಹಳ್ಳಿ
೧೭. ಎಲೆತೋಟದಹಳ್ಳಿ
೧೮. ಎಲೆಹೊಸಹಳ್ಳಿ
೧೯. ಕದರಮಂಗಲ
೨೦. ಕನ್ನಮಂಗಲ
೨೧. ಕನ್ನಸಂದ್ರ ೦೨೨೪೮೨೦೦
೨೨. ಕಲ್ಲಾಪುರ
೨೩. ಕೃಷ್ಣಾಪುರ
೨೪. ಕಾಡುಕೊತ್ತನಹಳ್ಳಿ
೨೫. ಕಾರೇಕೊಪ್ಪ
೨೬. ಕುಕ್ಕೂರು
೨೭. ಕೂಡ್ಲೂರು
೨೮. ಕೂರ್ಣಗೆರೆ
೨೯. ಕೂರ್ಣಗೆರೆ ತೋಟ
೩೦. ಕೆಳಗೆರೆ
೩೧. ಕೊಂಡಾಪುರ
೩೨. ಕೋಡಂಬಳ್ಳಿ
೩೩. ಕೋಡಿಪುರ ೦೨೨೫೪೬೦೦
೩೪. ಕೋಡಿಹಳ್ಳಿ
೩೫. ಕೋಡಿಹೊಸಹಳ್ಳಿ
೩೬. ಕೋತನಹಳ್ಳಿ
೩೭. ಕೋಮನಹಳ್ಳಿ
೩೮. ಕೋಳೂರು
೩೯. ಗರಕಹಳ್ಳಿ
೪೦. ಗುಡ್ಡೆಹೊಸೂರು

೪೧. ಗೆಂಡೇಮಡು

೪೨. ಗೋವಿಂದನಹಳ್ಳಿ

೪೩. ಗೌಡಗೆರೆ

೪೪. ಚಕ್ಕಲೂರು

೪೫. ಚಕ್ಕರೆ

೪೬. ಚಗರಿದೊಡ್ಡಿ

೪೭. ಚನ್ನಪಟ್ಟಣ

೪೮. ಚಿಕ್ಕೇನಹಳ್ಳಿ ೦೨೨೫೧೫೫೦೦

೪೯. ಚಿಕ್ಕಮಣ್ಣುಗುಡ್ಡೆ ರಾಜ್ಯ ಅರಣ್ಯ

೫೦. ಚಿಕ್ಕಮಳೂರು

೫೧. ಚೋಳಮಾರನಹಳ್ಳಿ

೫೨. ಜಗದಾಪುರ

೫೩. ಜಹಗೀರುದೊಡ್ಡಿ

೫೪. ಝುತ್ತೆಕೆರೆ

೫೫. ತಗಚಗೆರೆ

೫೬. ತಟ್ಟೇಕೆರೆ ೦೨೨೫೩೪೦೦

೫೭. ತವಾತನಹಳ್ಳಿ

೫೮. ತವಾತನಹಳ್ಳಿ ದೊಡ್ಡಿ

೫೯. ಗುಮ್ಮಸಂದ್ರ (ಕ.ಹೋ) ೦೨೨೪೮೦೦

೬೦. ಗುಮ್ಮಸಂದ್ರ (ಮಾ.ಹೋ) ೦೨೨೫೩೩೦೦

೬೧. ತೂಬಿನಕೆರೆ

೬೨. ತೆಂಕನಹಳ್ಳಿ

೬೩. ತೊರೆಹೊಸೂರು

೬೪. ದಾಬನಗುಂಡು

೬೫. ದಾಸವಾ

೬೬. ದಾಸವಾರ

೬೭. ದ್ಯಾವಪಟ್ಣ

೬೮. ದೇವರಹಳ್ಳಿ

೬೯. ದೇವರಹೊಸಹಳ್ಳಿ

೭೦. ದೊಡ್ಡನಹಳ್ಳಿ

೭೧. ದೊಡ್ಡಮಾಳೂರು

೭೨. ನಾಗಪುರ

೭೩. ನಾಗಾವರ

೭೪. ನಾಗಲಾಪುರ

೭೫. ನಾಯಿದೊಳ್ಳೆ

೭೬. ನೀಲಕಂಠನಹಳ್ಳಿ

೭೭. ನೀಲಸಂದ್ರ

೭೮. ನುಣ್ಣೂರು

೭೯. ನೆರಳೂರು

೮೦. ನೆಲಮಾಕನಹಳ್ಳಿ

೮೧. ಪಟ್ಲು

೮೨. ಬನಂತನಹಳ್ಳಿ

೮೩. ಬಳ್ಳಾಪಟ್ಟಣ

೮೪. ಬಂದೂರು ವಳಗೆರೆಹಳ್ಳಿ

೮೫. ಬಾಚಹಳ್ಳಿ

೮೬. ಬಾಣಗಹಳ್ಳಿ

೮೭. ಬ್ಯಾಡರಹಳ್ಳಿ (ಮಾ.ಹೊ) ೦೨೨೪೮೫೦೦

೮೮. ಬ್ಯಾಡರಹಳ್ಳಿ (ವಿ.ಹ) ೦೨೨೯೪೦೦

೮೯. ಬ್ರಾಹ್ಮಣಿಪುರ

೯೦. ಬುಕ್ಕಸಾಗರ

೯೧. ಭೂಹಳ್ಳಿ

೯೨. ಬೆಳಕೆರೆ

೯೩. ಬೇವೂರು

೯೪. ಬೈಚಾಪುರ

೯೫. ಬೊಮ್ಮನಹಳ್ಳಿ ೦೨೨೫೩೧೦೦

೯೬. ಭೈರನಾಯಕನಹಳ್ಳಿ

೯೭. ಭೈರಸೆಟ್ಟಿಹಳ್ಳಿ

೯೮. ಮತ್ತಿಕೆರೆ

೯೯. ಮಳಗಾಳು

೧೦೦. ಮಲ್ಲಂಗೆರೆ

೧೦೧. ಮಾಳೂರು ಪಟ್ಟಣ

೧೦೨. ಮಂಕುಂದ

೧೦೩. ಮಂಗಳವಾರಪೇಟೆ

೧೦೪. ಮಂಗಾಡಹಳ್ಳಿ

೧೦೫. ಮಂಡ್ಯಬೊಮ್ಮನಹಳ್ಳಿ

೧೦೬. ಮಾಕಳಿ

೧೦೭. ಮಾಕಳಿ ರಾಜ್ಯ ಅರಣ್ಯ

೧೦೮. ಮಾರ್ಚನಹಳ್ಳಿ

೧೦೯. ಮಾದಾಪುರ

೧೧೦. ಮುದಿಗೆರೆ

೧೧೧. ಮುದಿಗೆರೆ ತೋಟ

೧೧೨. ಮೆಣಸಿಗನಹಳ್ಳಿ

೧೧೩. ಮೈಲನಾಥಪುರ

೧೧೪. ಮೈಲನಾಯಕನಹಳ್ಳಿ

೧೧೫. ಮೋಗೇನಹಳ್ಳಿ

೧೧೬. ಯಲಿಯೂರು

೧೧೭. ರಾಮನರಸಿಂಹಪುರ

೧೧೮. ರಾಮಪುರ

೧೧೯. ಲಾಲಘಟ್ಟ

೧೨೦. ವಡ್ಡರಗುಪ್ಪೆ

೧೨೧. ವಡೇರಹಳ್ಳಿ ೦೨೨೯೮೦೦

೧೨೨. ವಂದರಗುಪ್ಪೆ

೧೨೩. ವಿಟಲೇಶಹಳ್ಳಿ

೧೨೪. ವಿರುಪಸಂದ್ರ

೧೨೫. ವಿರೂಪಾಕ್ಷಿಪುರ

೧೨೬. ಶಾನುಭೋಗನಹಳ್ಳಿ ೦೨೨೬೦೨೦೦

೧೨೭. ಶುಕ್ರವಾರಪೇಟೆ

೧೨೮. ಸಣಬನಹಳ್ಳಿ

೧೨೯. ಸರಗೂರು

೧೩೦. ಸಂಕಲಗೆರೆ

೧೩೧. ಸಂತೇಮೋಗೇನಹಳ್ಳಿ

೧೩೨. ಸಾದಹಳ್ಳಿ

೧೩೩. ಸಿದ್ದನಹಳ್ಳಿ

೧೩೪. ಸಿದ್ಧಾಪುರ ೦೨೨೯೧೦೦

೧೩೫. ಸಿಂಗರಾಜಪುರ

೧೩೬. ಸೀಬನಹಳ್ಳಿ

೧೩೭. ಸುಣ್ಣಘಟ್ಟ

೧೩೮. ಸುಳ್ಳೇರಿ

೧೩೯. ಸೆಟ್ಟಿಹಳ್ಳಿ

೧೪೦. ಸೋಗಾಲ

೧೪೧. ಸೋಮನಾಥಪುರ

೧೪೨. ಸೌದಹಳ್ಳಿ

೧೪೩. ಹನಿಯೂರು

೧೪೪. ಹಳೇಹಳ್ಳಿ

೧೪೫. ಹಾರೋಕೊಪ್ಪ

೧೪೬. ಹಾರೋಹಳ್ಳಿದೊಡ್ಡಿ

೧೪೭. ಹುಣಸನಹಳ್ಳಿ ೦೨೨೫೭೨೦೦

೧೪೮. ಹುಲವಾಡಿ

೧೪೯. ಹೊಟ್ಟಿಗನಹೊಸಹಳ್ಳಿ

೧೫೦. ಹೊನ್ನನಾಯಕನಹಳ್ಳಿ

೧೫೧. ಹೊನ್ನಿಗನಹಳ್ಳಿ ೦೨೨೯೨೦೦

೧೫೨. ಹೊನ್ನಿಗನಹಳ್ಳಿ ೦೨೨೯೯೦೦

೧೫೩. ಹೊಸಹಳ್ಳಿ

೧೫೪. ಹೊಂಗನೂರು

ರಾಮನಗರ ತಾಲ್ಲೂಕು

೧. ಅಕ್ಕೂರು

೨. ಅರ್ಚಕರಹಳ್ಳಿ ೦೨೨೩೭೨೦೦

೩. ಅಣ್ಣಹಳ್ಳಿ

೪. ಅನುಮನಹಳ್ಳಿ, ೦೨೨೩೫೨೦೦

೫. ಅಬ್ಬನಕುಪ್ಪೆ

೬. ಅಮ್ಮನಹಳ್ಳಿ

೭. ಅಮ್ಮನಪುರದೊಡ್ಡಿ

೮. ಅರೇಹಳ್ಳಿ, ೦೨೨೩೫೭೦೦

೯. ಅಳ್ಳಾಳಸಂದ್ರ ೦೨೨೪೩೦೦

೧೦. ಅಂಕನಹಳ್ಳಿ (ಕೈ.ಹೋ.) ೦೨೨೪೫೦೦೦

೧೧. ಅಂಕನಹಳ್ಳಿ (ಕು.ಹೋ) ೦೨೨೩೯೦೦

೧೨. ಅಚ್ಚಲು ೦೨೨೪೪೧೦೦

೧೩. ಅಚ್ಚಲು ರಾಜ್ಯ ಅರಣ್ಯ

೧೪. ಅವರಗೆರೆ

೧೫. ಅಂಚಿಪುರ

೧೬. ಇಟ್ಟಮಡು

೧೭. ಇಬ್ಬಾಲಕನಹಳ್ಳಿ

೧೮. ಐವಾಗಿಲು

೧೯. ಉರಗಹಳ್ಳಿ

೨೦. ಕಲ್ಲುಗೋಪಹಳ್ಳಿ

೨೧. ಕವಣಾಪುರ

೨೨. ಕಂಚಗಾರನಹಳ್ಳಿ, ೦೨೨೪೨೭೦೦

೨೩. ಕಂಚುಗಾರನಹಳ್ಳಿ, ಕಾವಲು

೨೪. ಕಾಕಾರಾಮನಹಳ್ಳಿ

೨೫. ಕಾಯಕನಪುರ

೨೬. ಕ್ಯಾಸಾಪುರ

೨೭. ಕುತರಬಾವಿ

೨೮. ಕುರುಬರ ಕರೇನಹಳ್ಳಿ

೨೯. ಕುರುಬರಹಳ್ಳಿ ೦೨೨೪೫೯೦೦

೩೦. ಕುಂಬಲಗೂಡು ರಾಜ್ಯ ಅರಣ್ಯ

೩೧. ಕುಂಬಾಪುರ

೩೨. ಕೂಟಗಲ್ಲು

೩೩. ಕೂನಗಲ್ಲು

೩೪. ಕೆಂಚನಕುಪ್ಪೆ

೩೫. ಕೆಂಜೀಗರಹಳ್ಳಿ

೩೬. ಕೆಂಪದ್ಯಾಪನಹಳ್ಳಿ

೩೭. ಕೆಂಪನಹಳ್ಳಿ

೩೮. ಕೆಂಪಯ್ಯನಪಾಳ್ಯ

೩೯. ಕೆಂಪವಡೇರಹಳ್ಳಿ

೪೦. ಕೆ.ಜಿ.ಗೊಲ್ಲರಪಾಳ್ಯ

೪೧. ಕೆ.ಜಿ.ಹೊಸಹಳ್ಳಿ

೪೨. ಕೇತಿಗನಹಳ್ಳಿ

೪೩. ಕೇತೋಹಳ್ಳಿ

೪೪. ಕೇತಹಳ್ಳಿ, ಕಂಚಗಾರನಹಳ್ಳಿ

೪೫. ಕೇಶವಪುರ

೪೬. ಕೈಲಂಚ

೪೭. ಕೋಡಿಯಾಲ ಕರೇನಹಳ್ಳಿ

೪೮. ಕೋಟಹಳ್ಳಿ

೪೯. ಕೊತ್ತಿಪುರ

೫೦. ಕೊತ್ತಿಪುರದ ಅಮಾನಿಕೆರೆ

೫೧. ಕೋಲಮಾರನಕುಪ್ಪೆ

೫೨. ಗಾಣಕಲ್ಲು ೦೨೨೩೮೩೦೦

೫೩. ಗೊಲ್ಲರದೊಡ್ಡಿ

೫೪. ಗೊಲ್ಲರಪಾಳ್ಯ

೫೫. ಗೋಪಹಳ್ಳಿ

೫೬. ಚನ್ನಮಾನಹಳ್ಳಿ

೫೭. ಚಾಮನಹಳ್ಳಿ

೫೮. ಚಿಕ್ಕಕುಂಟನಹಳ್ಳಿ
೫೯. ಚಿಕ್ಕಗಂಗವಾಡಿ
೬೦. ಚಿಕ್ಕಮಣ್ಣುಗುಡ್ಡೆ
೬೧. ಚಿಕ್ಕೇನಹಳ್ಳಿ
೬೨. ಚಿಕ್ಕಸೂಲಿಕೆರೆ
೬೩. ಚೌಡೇಶ್ವರಿಹಳ್ಳಿ
೬೪. ಜಕ್ಕನಹಳ್ಳಿ
೬೫. ಜಡೇನಹಳ್ಳಿ
೬೬. ಜಯಪುರ
೬೭. ಜಾಲಮಂಗಲ
೬೮. ಜೀಗನಹಳ್ಳಿ
೬೯. ತಡಿಕವಾಗಿಲು
೭೦. ತಮ್ಮನಾಯಕನಹಳ್ಳಿ
೭೧. ತಾಳಕುಪ್ಪೆ
೭೨. ತಾಳವಾಡಿ
೭೩. ತೆಂಗಿನಕಲ್ಲು
೭೪. ಡಣಾಯಕನಪುರ
೭೫. ದಾಸರಹಳ್ಳಿ
೭೬. ದೊಡ್ಡಗಂಗವಾಡಿ
೭೭. ದೊಡ್ಡಮಣ್ಣಗುಡ್ಡೆ ರಾಜ್ಯ ಅರಣ್ಯ
೭೮. ದೊಡ್ಡಸೂಲಿಕೆರೆ
೭೯. ಧಾರಾಪುರ
೮೦. ನಾಗೇನಹಳ್ಳಿ
೮೧. ನೆಲಮಲೆ
೮೨. ಬನ್ನಿಕುಪ್ಪೆ (ಕೃ.ಹೋ) ೦೨೨೩೮೬೦೦
೮೩. ಬನ್ನಿಕುಪ್ಪೆ (ಬ.ಹೋ) ೦೨೨೪೫೧೦೦
೮೪. ಬನ್ನಿಗಿರಿ
೮೫. ಬಸವನಪುರ ೦೨೨೩೭೫೦೦
೮೬. ಬಸವಯ್ಯನದೊಡ್ಡಿ
೮೭. ಬಳೇವೀರನಹಳ್ಳಿ
೮೮. ಬಾನಂದೂರು
೮೯. ಬಾಲಗುಳಿಮಜ್ರೆ
೯೦. ಬಿಡದಿ
೯೧. ಬಿಲ್ಲಕೆಂಪನಹಳ್ಳಿ
೯೨. ಬಿಳಗುಂಬ
೯೩. ಬೆತ್ತಿಂಗೆರೆ
೯೪. ಬೆನ್ನಹಳ್ಳಿ
೯೫. ಬೈಚೋಹಳ್ಳಿ
೯೬. ಬೈರಮಂಗಲ
೯೭. ಬೊಮ್ಮಚಾನಹಳ್ಳಿ
೯೮. ಬೋರೆಹಳ್ಳಿ
೯೯. ಬೋಳಪ್ಪನಹಳ್ಳಿ
೧೦೦. ಭೀಮೇನಹಳ್ಳಿ
೧೦೧. ಮಂಚನಾಯಕನಹಳ್ಳಿ
೧೦೨. ಮಂಚೇಗೌಡನಪಾಳ್ಯ
೧೦೩. ಮಂಡಲಹಳ್ಳಿ
೧೦೪. ಮಾದಪುರ ೦೨೨೩೭೮೦೦
೧೦೫. ಮಾಯಗಾನಹಳ್ಳಿ
೧೦೬. ಮಾದಿಗನಹಳ್ಳಿ
೧೦೭. ಮುದ್ದಾಪುರ ಕರೇನಹಳ್ಳಿ
೧೦೮. ಮೆಳೆಹಳ್ಳಿ
೧೦೯. ಯರೇಪಾಳ್ಯ
೧೧೦. ರಾಮನಗರ
೧೧೧. ರಾಮನಹಳ್ಳಿ
೧೧೨. ಲಕ್ಕಪ್ಪನಹಳ್ಳಿ
೧೧೩. ಲಕ್ಕಸಂದ್ರ
೧೧೪. ಲಕ್ಷ್ಮೀಪುರ
೧೧೫. ಲಕ್ಷ್ಮೀಸಾಗರ

೧೧೬. ಲಕ್ಕೋಜನಹಳ್ಳಿ

೧೧೭. ವಡೇರಹಳ್ಳಿ ೦೨೨೩೭೪೦೦

೧೧೮. ವಾಜರಹಳ್ಳಿ

೧೧೯. ವಿಭೂತಿಕೆರೆ

೧೨೦. ವಿರೂಪಸಂದ್ರ

೧೨೧. ಶಾನಭೋಗನಹಳ್ಳಿ

೧೨೨. ಶಾನುಮಂಗಲ

೧೨೩. ಶಿವನಹಳ್ಳಿ

೧೨೪. ಶೇಷಗಿರಿಹಳ್ಳಿ

೧೨೫. ಸಬ್ಬಕೆರೆ

೧೨೬. ಸೂಬಕೆರೆ

೧೨೭. ಸಿಡ್ಡಡಲಕಲ್ಲು

೧೨೮. ಸುಗ್ಗನಹಳ್ಳಿ

೧೨೯. ಹರಿಸಂದ್ರ

೧೩೦. ಹಳ್ಳಿಮಾಳ

೧೩೧. ಹಾಗಲಹಳ್ಳಿ

೧೩೨. ಹಿರೇಹಳ್ಳಿ

೧೩೩. ಹುಣಸನಹಳ್ಳಿ ೦೨೨೪೩೨೦೦

೧೩೪. ಹುಲತೂರು ಹೊಸದೊಡ್ಡಿ

೧೩೫. ಹುಲತೂರು ರಾಜ್ಯ ಅರಣ್ಯ

೧೩೬. ಹುಲಿಕಾಡು ರಾಜ್ಯ ಅರಣ್ಯ

೧೩೭. ಹುಲಿಕೆರೆ ಗುನ್ನೂರು

೧೩೮. ಹಂದಿಗುಂದಿ ರಾಜ್ಯ ಅರಣ್ಯ

೧೩೯. ಹೆಗ್ಗಡಗೆರೆ

೧೪೦. ಹೆಜ್ಜಾಲ

೧೪೧. ಹೆಬ್ಬಕೋಡಿ

೧೪೨. ಹೊಸದೊಡ್ಡಿ ೦೨೨೪೫೬೦೦

೧೪೩. ಹೊಸೂರು

ಮಾಗಡಿ ತಾಲ್ಲೂಕು

೧. ಅಜ್ಜನಹಳ್ಳಿ (ಕು.ಹೋ) ೦೨೨೧೧೦೦೦

೨. ಅಜ್ಜನಹಳ್ಳಿ (ತ.ಹೋ)

೩. ಅಜ್ಜನಹಳ್ಳಿ (ಮ.ಹೋ)

೪. ಅಡಕಮಾರನಹಳ್ಳಿ

೫. ಅಣ್ಣಯ್ಯಶಾಸ್ತ್ರಿಪಾಳ್ಯ

೬. ಅಣ್ಣೆಕಾರನಹಳ್ಳಿ

೭. ಅತ್ತಿಂಗೆರೆ

೮. ಅದರಂಗಿ

೯. ಅಯ್ಯಂದಹಳ್ಳಿ

೧೦. ಅರಸಿನಕುಂಟೆ

೧೧. ಅವ್ವೇರಹಳ್ಳಿ ೦೨೨೩೩೦೦

೧೨. ಅಳಲಕುಪ್ಪೆ

೧೩. ಅಂಗಜನಹಳ್ಳಿ

೧೪. ಅಗಲಕೋಟೆ

೧೫. ಆಲದ ಕಟ್ಟೆ

೧೬. ಆಲದಕಟ್ಟೆ ಪಾಳ್ಯ

೧೭. ಆಲಸೆಟ್ಟಿಹಳ್ಳಿ

೧೮. ಆಲೂರು ೦೨೨೧೪೨೦೦

೧೯. ಉಡುವೇಗೆರೆ

೨೦. ಉದಕುಂಟೆ

೨೧. ಉದ್ಬಂಡಹಳ್ಳಿ

೨೨. ಉಪ್ಪಾರತಿ

೨೩. ಉಂಬತನಕುಂಟೆ

೨೪. ಕಣ್ಣನೂರು

೨೫. ಕದುರಮನಹಳ್ಳಿ

೨೬. ಕನಕೇನಹಳ್ಳಿ

೨೭. ಕನ್ನಸಂದ್ರ (ಸೋ.ಹೋ) ೦೨೨೧೨೬೦೦

೨೮. ಕನ್ನಸಂದ್ರ (ಕು.ಹೋ) ೦೨೨೧೭೮೦೦

೨೯. ಕಮ್ಮಸಾಗರ

೩೦. ಕರಿಗಿರಿಪುರ

೩೧. ಕರಿಯಹಳ್ಳಿ

೩೨. ಕಲ್ಲುದೇವನಹಳ್ಳಿ

೩೩. ಕಲ್ಲುಹಟ್ಟಿಪಾಳ್ಯ

೩೪. ಕರ್ಲಮಂಗಲ

೩೫. ಕಲ್ಯಾಣ ವಡೇರಹಳ್ಳಿ

೩೬. ಕಲ್ಯಾಣ ದೇವರಮಠ

೩೭. ಕಲ್ಯಾಣಪುರ

೩೮. ಕಲ್ಯಾಣಿ ಕಾವಲು

೩೯. ಕಲ್ಲೂರು

೪೦. ಕರ್ಲಹಳ್ಳಿ

೪೧. ಕಲ್ಕೆರೆ

೪೨. ಕಂಚುಗಾರನಹಳ್ಳಿ ೦೨೨೨೧೯೦೦

೪೩. ಕಾಗಿಮಡು

೪೪. ಕಾಡುರಾಮನಹಳ್ಳಿ

೪೫. ಕಾಮಸಾಗರ

೪೬. ಕಲ್ಯ

೪೭. ಕಳಾರಿ

೪೮. ಕಳಾರಿ ಕಾವಲು

೪೯. ಕುಟ್ಟನಗೆರೆ

೫೦. ಕುಪ್ಪೇಮಾಳ

೫೧. ಕುರುಬರ ಪಾಳ್ಯ

೫೨. ಕೂಟ್ಲು

೫೩. ಕೂಡೂರು

೫೪. ಕೂಡ್ಲೂರು

೫೫. ಕೃಷ್ಣಾಪುರ

೫೬. ಕೆಂಕೆರೆ

೫೭. ಕೆಂಗೊಂಡನಹಳ್ಳಿ

೫೮. ಕೆಂಚನಹಳ್ಳಿ ೦೨೨೦೦೮೦೦

೫೯. ಕೆಂಚನಪುರ

೬೦. ಕೆಂಪಾಪುರ (ಕು.ಹೋ.) ೦೨೨೦೭೯೦೦

೬೧. ಕೆಂಪಾಪುರ (ತಿ.ಹೋ) ೦೨೨೧೦೬೦೦

೬೨. ಕೆಂಪಾಪುರ (ಗೋ.ಹೋ) ೦೨೨೧೫೩೦೦

೬೩. ಕೆಂಪಸಾಗರ

೬೪. ಕೆಂಪನಹಳ್ಳಿ

೬೫. ಕೆಂಪುಗೊಂಡನಹಳ್ಳಿ

೬೬. ಕೇತೋಹಳ್ಳಿ

೬೭. ಕೇತೋಹಳ್ಳಿ, ನರಸಿಂಹಪುರ

೬೮. ಕೇತೋಹಳ್ಳಿ, ರಾಮಪುರ

೬೯. ಕೊತ್ತಗೊಂಡನಹಳ್ಳಿ

೭೦. ಕೊಂಡಹಳ್ಳಿ

೭೧. ಕೋಟಗಾರಹಳ್ಳಿ

೭೨. ಕೋಡಿಹಳ್ಳಿ (ಕು.ಹೋ) ೦೨೨೧೧೭೦೦

೭೩. ಕೋಡಿಹಳ್ಳಿ (ಸೋ ಹೋ) ೦೨೨೧೯೬೦೦

೭೪. ಕೋರಮಂಗಲ ೦೨೨೧೮೧೦೦

೭೫. ಕೋರಮಂಗಲ (ಮ.ಹೋ) ೦೨೨೩೦೧೦೦

೭೬. ಕೋಳೂರು

೭೭. ಕೋಳೂರು ಗುರುರಾಯನಪುರ

೭೮. ಕೋಳೂರು ನಂಜುಂಡಪುರ

೭೯. ಗರಗೇಶ್ವರ

೮೦. ಗಟ್ಟೀಪುರ

೮೧. ಗಣಪತಿಹಳ್ಳಿ

೮೨. ಗಂಗಪ್ಪನಹಳ್ಳಿ

೮೩. ಗಂಗೇನಹಳ್ಳಿ

೮೪. ಗಂಗೇನಪುರ

೮೫. ಗಂಗೋನಹಳ್ಳಿ ೦೨೨೦೫೩೦೦

೮೬. ಗಾಣಕಲ್ಲು

೮೭. ಗುಡ್ಡಲಹಳ್ಳಿ
೮೮. ಗುಡೆಮಾರನಹಳ್ಳಿ
೮೯. ಗುಡೆಪಾಳ್ಯ
೯೦. ಗುಮ್ಮಸಂದ್ರ
೯೧. ಗುಂಡಿಗೆರೆ
೯೨. ಗೋರೂರು
೯೩. ಗೆಜ್ಜೆಗಾರಕುಪ್ಪೆ
೯೪. ಗೇರಹಳ್ಳಿ ೦೨೨೩೧೧೦೦
೯೫. ಗೊಲ್ಲರಪಾಳ್ಯ
೯೬. ಗೊಲ್ಲಹಳ್ಳಿ (ಕೂ.ಹೋ) ೦೨೨೧೧೮೦೦
೯೭. ಗೊಲ್ಲಹಳ್ಳಿ (ಸೋ.ಹೋ)
೯೮. ಗೋಳೂರು
೯೯. ಗೌರಪುರ
೧೦೦. ಚಕ್ರಬಾವಿ
೧೦೧. ಚನ್ನೋಹಳ್ಳಿ ೦೨೨೧೭೦೦೦
೧೦೨. ಚನ್ನಾಪುರ
೧೦೩. ಚನ್ನೇನಹಳ್ಳಿ
೧೦೪. ಚಂದುರಾಯನಹಳ್ಳಿ
೧೦೫. ಚಿಕ್ಕೇನಹಳ್ಳಿ (ತಾ.ಹೋ) ೦೨೨೧೫೯೦೦
೧೦೬. ಚಿಕ್ಕೇನಹಳ್ಳಿ (ತೋ.ಹೋ)
೧೦೭. ಚಿಕ್ಕಕಲ್ಯ
೧೦೮. ಚಿಕ್ಕತೊರೆಪಾಳ್ಯ
೧೦೯. ಚಿಕ್ಕಮಸಕಲ್ಲು (ಕು.ಹೋ) ೦೨೨೩೨೯೦೦
೧೧೦. ಚಿಕ್ಕಮಸಕಲ್ಲು (ಮಾ.ಹೋ)
೧೧೧. ಚಿಕ್ಕಮುದಿಗೆರೆ
೧೧೨. ಚಿಕ್ಕಸೋಲೂರು
೧೧೩. ಚಿಕ್ಕಹಳ್ಳಿ
೧೧೪. ಚಿಕ್ಕೆಳ್ಳೂರು
೧೧೫. ಚಿಕ್ಕೇಳ್ಳೂರು ರಾಮಪುರ
೧೧೬. ಚಿಕ್ಕೆಳ್ಳೂರು ವೆಂಕಟಪುರ
೧೧೭. ಚೀಲೂರು ೦೨೨೧೩೮೦೦
೧೧೮. ಚುಂಚನಕುಪ್ಪೆ
೧೧೯. ಚೋಳನಾಯಕನಹಳ್ಳಿ
೧೨೦. ಚೌಡಿಬೇಗೂರು
೧೨೧. ಜಾನಿಗೆರೆ
೧೨೨. ಜುಟ್ಟನಹಳ್ಳಿ
೧೨೩. ಜೋಗೇರಹಳ್ಳಿ
೧೨೪. ಡೊಳ್ಳೇನಹಳ್ಳಿ
೧೨೫. ತಗಚಗುಪ್ಪೆ
೧೨೬. ತಗ್ಗಿಕುಪ್ಪೆ
೧೨೭. ತಟ್ಟೇಕೆರೆ ೦೨೨೧೬೯೦೦
೧೨೮. ತಮ್ಮೇನಹಳ್ಳಿ
೧೨೯. ತವಕದಹಳ್ಳಿ
೧೩೦. ತಟವಾಳು
೧೩೧. ತಾವರಕೆರೆ (ತಿ.ಹೋ) ೦೨೨೦೫೬೦೦
೧೩೨. ತಾವರಕೆರೆ (ಮಾ.ಹೋ)
೧೩೩. ತಾಳೇಕೆರೆ
೧೩೪. ತ್ಯಾಗದೆರೆಪಾಳ್ಯ
೧೩೫. ತಿಪ್ಪಗೊಂಡನಹಳ್ಳಿ
೧೩೬. ತಿಪ್ಪಸಂದ್ರ ೦೨೨೦೭೦೦೦
೧೩೭. ತಿಮ್ಮಸಂದ್ರ (ಕಾ.ಹೋ) ೦೨೨೧೭೧೦೦
೧೩೮. ತಿಮ್ಮಸಂದ್ರ (ಸೋ.ಹೋ) ೦೨೨೨೪೫೦೦
೧೩೯. ತಿರುಮಲಾಪುರ
೧೪೦. ತಿರುಮಲೆ
೧೪೧. ತ್ರಿಪುರಾಂತಕ ಚನ್ನಾಪುರ
೧೪೨. ತೂಬರಪಾಳ್ಯ
೧೪೩. ತೂಬಿನಕೆರೆ
೧೪೪. ತೊರೆಚೆನ್ನೋಹಳ್ಳಿ

೧೪೫. ತೊರೆರಾಮನಹಳ್ಳಿ

೧೪೬. ದಬ್ಬಗುಳಿ

೧೪೭. ದಂಡಿಗೆಪುರ

೧೪೮. ದಂಡೇನಹಳ್ಳಿ

೧೪೯. ದುಬ್ಬಗೊಟ್ಟಿಗೆ

೧೫೦. ದೇವಮಾಚೋಹಳ್ಳಿ, ನಾರಾಯಣಪುರ

೧೫೧. ದೊಡ್ಡಮಾರನಹಳ್ಳಿ

೧೫೨. ದೊಡ್ಡ ಮುದಿಗೆರೆ

೧೫೩. ದೊಡ್ಡ ಮಸ್ಕಲ್ಲು

೧೫೪. ದೊಡ್ಡ ಸೋಮನಹಳ್ಳಿ

೧೫೫. ದೊಡ್ಡೇರಿ

೧೫೬. ದೊಡ್ಡಹಳ್ಳಿ

೧೫೭. ದೊಳ್ಳೇನಹಳ್ಳಿ

೧೫೮. ದೊನಕುಪ್ಪೆ

೧೫೯. ದೊಮ್ಮನಕಟ್ಟೆ

೧೬೦. ದೊಮ್ಮನಕುಪ್ಪೆ

೧೬೧. ನರಸಂದ್ರ

೧೬೨. ನರಸಾಪುರ

೧೬೩. ನಸರುಮಾವಿನಕಟ್ಟೆ

೧೬೪. ನಾಗನಹಳ್ಳಿ (ಕು.ಹೋ) ೦೨೨೧೯೬೦೦

೧೬೫. ನಾಗಹನಳ್ಳಿ (ತಾ.ಹೋ) ೦೦೨೨೧೯೭೦೦

೧೬೬. ನಾಗನಹಳ್ಳಿ (ಸು.ಹೋ)

೧೬೭. ನಾಗಮಂಗಲ

೧೬೮. ನಾಗಶೆಟ್ಟಿಹಳ್ಳಿ

೧೬೯. ನಾಯಕನಪಾಳ್ಯ

೧೭೦. ನಾರಾಯಣಪುರ ೦೨೨೦೬೬೦೦

೧೭೧. ನೇತೇನಹಳ್ಳಿ

೧೭೨. ನೇರಳವಾಡಿ

೧೭೩. ನೇರಳೆಕೆರೆ

೧೭೪. ನೆಲಪಟ್ಟಣ

೧೭೫. ಪನಕನಕಲ್ಲು

೧೭೬. ಪಾಪಶಾಸ್ತ್ರೀಪಾಳ್ಯ

೧೭೭. ಪಾಲನಹಳ್ಳಿ

೧೭೮. ಪರ್ವತಪುರ

೧೭೯. ಪರ್ವತಪಾಳ್ಯ

೧೮೦. ಪಾಳ್ಯದಹಳ್ಳಿ

೧೮೧. ಪುನಗುಮಾರನಹಳ್ಳಿ

೧೮೨. ಪುರ

೧೮೩. ಪುರದದೊಡ್ಡಿ

೧೮೪. ಪೆದ್ದನಪಾಳ್ಯ

೧೮೫. ಪೋಲೋಹಳ್ಳಿ

೧೮೬. ಬಗನಿಗೆರೆ

೧೮೭. ಬಗನಿಗೆರೆ

೧೮೮. ಬಸವನಪಾಳ್ಯ

೧೮೯. ಬಸವಾಪಟ್ಟಣ

೧೯೦. ಬಸವೇನಹಳ್ಳಿ (ಸೋ.ಹೋ) ೦೨೨೧೯೪೦೦

೧೯೧. ಬಸವೇನಹಳ್ಳಿ (ಮಾ.ಹೋ.) ೦೨೨೨೮೨೦೦

೧೯೨. ಬಂಟರಕುಪ್ಪೆ

೧೯೩. ಬಾಚೇನಹಳ್ಳಿ

೧೯೪. ಬಾನವಾಡಿ

೧೯೫. ಬಾಳೆಕಟ್ಟೆ

೧೯೬. ಬೋಳೇನಹಳ್ಳಿ

೧೯೭. ಬ್ಯಾಡರಹಳ್ಳಿ (ಕ.ಹೋ) ೦೨೨೨೪೩೦೦

೧೯೮. ಬ್ಯಾಡರಹಳ್ಳಿ (ಸೊ.ಹೋ) ೦೨೨೧೮೮೦೦

೧೯೯. ಬೈರಾಪುರ

೨೦೦. ಬ್ಯಾಲದಕೆರೆ

೨೦೧. ಬ್ಯಾಲಾಳು

೨೦೨. ಬಿಟ್ಟಸಂದ್ರ

೨೦೩. ಬಿಸ್ಕೂರು
೨೦೪. ಬಿಸಲಹಳ್ಳಿ
೨೦೫. ಬೀಚನಹಳ್ಳಿ ೦೨೨೦೫೮೦೦
೨೦೬. ಬೀಚನಹಳ್ಳಿ
೨೦೭. ಬೀರಾವರ
೨೦೮. ಬೆಟ್ಟದಾಸೀಪಾಳ್ಯ
೨೦೯. ಬೆಟ್ಟಹಳ್ಳಿ ೦೨೨೧೦೭೦೦
೨೧೦. ಬೆಳಗವಾಡಿ
೨೧೧. ಬೆಳಗುಂಬ
೨೧೨. ಬೈಚಕುಪ್ಪೆ
೨೧೩. ಬೈಚಾಪುರ
೨೧೪. ಬೈರಸಂದ್ರ
೨೧೫. ಬೈರಾಪುರ
೨೧೬. ಬೊಮ್ಮನಹಳ್ಳಿ ೦೨೨೨೦೪೦೦
೨೧೭. ಬಾಳೇನಹಳ್ಳಿ
೨೧೮. ಮತ್ತ
೨೧೯. ಮತ್ತಸಾಗರ
೨೨೦. ಮತ್ತಿಕೆರೆ
೨೨೧. ಮಾಡಬಾಳು
೨೨೨. ಮಾದಿಗೊಂಡನಹಳ್ಳಿ
೨೨೩. ಮರೂರು
೨೨೪. ಮರಳುದೇವನಕಟ್ಟೆ
೨೨೫. ಮಲ್ಲಪ್ಪನಹಳ್ಳಿ
೨೨೬. ಮಲ್ಲಸಂದ್ರ ೦೨೨೯೦೦೦
೨೨೭. ಮಲ್ಲಾಪುರ ೦೨೨೧೪೪೦೦
೨೨೮. ಮಲ್ಲಿಕಾರ್ಜುನಪಾಳ್ಯ
೨೨೯. ಮಲ್ಲಿಕುಂಟೆ
೨೩೦. ಮಲ್ಲೂರು
೨೩೧. ಮಲ್ಲೇನಹಳ್ಳಿ
೨೩೨. ಮಂಚನಬೆಲೆ
೨೩೩. ಮಾಗಡಿ
೨೩೪. ಮಾಚೋಹಳ್ಳಿ ೦೨೨೦೭೮೦೦
೨೩೫. ಮಣ್ಣಿಗನಹಳ್ಳಿ
೨೩೬. ಮಾದಾಪುರ
೨೩೭. ಮಾನಗಲ್ಲು
೨೩೮. ಮಾಯನಾಯಕನಹಳ್ಳಿ
೨೩೯. ಮಾಯಸಂದ್ರ
೨೪೦. ಮಾರದೇವನಹಳ್ಳಿ
೨೪೧. ಮಾರಯ್ಯನಹಳ್ಳಿ
೨೪೨. ಮಾರಲಗೊಂಡ್ಲು
೨೪೩. ಮಾರಸಂದ್ರ ೦೨೨೧೦೩೦೦
೨೪೪. ಮರಿಸೋಮನಹಳ್ಳಿ
೨೪೫. ಮಾರಿಕುಪ್ಪೆ
೨೪೬. ಮಾರೇನಹಳ್ಳಿ ೦೨೨೨೦೨೦೦
೨೪೭. ಮಾರೇನಹಳ್ಳಿ
೨೪೮. ಮುತ್ತಸಾಗರ
೨೪೯. ಮುತ್ತುಗದಹಳ್ಳಿ
೨೫೦. ಮುದ್ದಯ್ಯನಪಾಳ್ಯ
೨೫೧. ಮುಪ್ಪೇನಹಳ್ಳಿ ೦೨೨೧೫೨೦೦
೨೫೨. ಮುಮ್ಮೇನಹಳ್ಳಿ
೨೫೩. ಮೂಗನಹಳ್ಳಿ
೨೫೪. ಮೇಲನಹಳ್ಳಿ
೨೫೫. ಮೈಲನಹಳ್ಳಿ
೨೫೬. ಮೋಟಗೊಂಡನಹಳ್ಳಿ
೨೫೭. ಯೆಣ್ಣೆಗೆರೆ
೨೫೮. ಯಲಗದಹಳ್ಳಿ
೨೫೯. ಯಲಚಕುಪ್ಪೆ
೨೬೦. ಯಲಚಕುಪ್ಪೆ ರಾಮಪುರ

೨೬೧. ಯಲ್ಲಾಪುರ
೨೬೨. ರಘುನಾಥಪುರ
೨೬೩. ರಘುವನಹಳ್ಳಿ
೨೬೪. ರಾಮನಹಳ್ಳಿ
೨೬೫. ರಂಗನಬೆಟ್ಟ
೨೬೬. ರಂಗಚಾರಿಪಾಳ್ಯ
೨೬೭. ರಂಗೇನಹಳ್ಳಿ (ಕ.ಹೋ.) ೦೨೨೧೫೬೦೦
೨೬೮. ರಂಗೇನಹಳ್ಳಿ (ಸೆ.ಹೋ) ೦೨೨೨೧೬೦೦
೨೬೯. ರಾಮನಹಳ್ಳಿ (ಕು.ಹೋ) ೦೨೨೧೬೭೦೦
೨೭೦. ಲಕ್ಕಸಂದ್ರ
೨೭೧. ಲಕ್ಕೇನಹಳ್ಳಿ (ಕು.ಹೋ.) ೦೨೨೧೧೬೦೦
೨೭೨. ಲಕ್ಕೇನಹಳ್ಳಿ (ಗೊ.ಹೋ.) ೦೨೨೧೭೯೦೦
೨೭೩. ಲಕ್ಷ್ಮಿಪುರ
೨೭೪. ಲಿಂಗೇನಹಳ್ಳಿ
೨೭೫. ವಡ್ಡರಪಾಳ್ಯ
೨೭೬. ವರ್ತೂರು
೨೭೭. ವರದೇನಹಳ್ಳಿ
೨೭೮. ವರದೋಹಳ್ಳಿ
೨೭೯. ವಂಬತನಕುಂಟೆ
೨೮೦. ವಾಜರಹಳ್ಳಿ
೨೮೧. ವಾಡಹಳ್ಳಿ
೨೮೨. ವಾರ್ತೇನಹಳ್ಳಿ
೨೮೩. ವಿಠಲಪುರ
೨೮೪. ವಿರುಪಾಪುರ ೦೨೨೦೪೯೦೦
೨೮೫. ವಿಶ್ವನಾಥಪುರ
೨೮೬. ವೀರಾಪುರ (ಮ.ಹೋ.) ೦೨೨೧೮೯೦೦
೨೮೭. ವೀರಾಪುರ (ಕು.ಹೋ.) ೦೨೨೩೨೭೦೦
೨೮೮. ವೀರಸಾಗರ
೨೮೯. ವೀರೇಗೌಡನದೊಡ್ಡಿ
೨೯೦. ವೆಂಗಳಪ್ಪನಹಳ್ಳಿ
೨೯೧. ಶಂಕನಕಲ್ಲು
೨೯೨. ಶಂಭುದೇವನಹಳ್ಳಿ
೨೯೩. ಶಾನುಭೋಗನಹಳ್ಳಿ ೦೨೨೨೭೨೦೦
೨೯೪. ಶಾಂತಾಪುರ
೨೯೫. ಶಿರಗನಹಳ್ಳಿ
೨೯೬. ಶಿವನಸಂದ್ರ
೨೯೭. ಸಿಂಗದಾಸನಹಳಿ
೨೯೮. ಸಿಂಗ್ರಿಪಾಳ್ಯ
೨೯೯. ಶ್ರೀಗಿರಿಪುರ
೩೦೦. ಶ್ರೀನಿವಾಸಪುರ ೦೨೨೦೮೯೦೦
೩೦೧. ಶ್ರೀಪತಿಹಳ್ಳಿ
೩೦೨ ಶೆಟ್ಟರಹಳ್ಳಿ
೩೦೩. ಶೇಷಗಿರಿಪುರ
೩೦೪. ಸಂಕೀಘಟ್ಟ
೩೦೫. ಸಂಕೇಘಟ್ಟಕಾವಲು
೩೦೬. ಸಾತನೂರು ೦೨೨೫೧೦೦
೩೦೭. ಸಾದಮಾರನಹಳ್ಳಿ
೩೦೮. ಸಾವನದುರ್ಗ
೩೦೯. ಸಿಡಗನಹಳ್ಳಿ
೩೧೦. ಸಿದ್ಧಾಪುರ
೩೧೧. ಸಿದ್ಧದೇವರಬೆಟ್ಟ
೩೧೨. ಸೀಗೆಕುಪ್ಪೆ
೩೧೩. ಸುಗ್ಗನಹಳ್ಳಿ ೦೨೨೦೯೨೦೦
೩೧೪. ಸುಬ್ಬಾಶಾಸ್ತ್ರೀಪಾಳ್ಯ
೩೧೫. ಸುಬ್ರಾಯಬ್ಯಾಡರಹಳ್ಳಿ
೩೧೬. ಸೂರಪ್ಪನಹಳ್ಳಿ
೩೧೭. ಸೂಲಿವಾರ
೩೧೮. ಸೂಲಿವಾರ ರಾಮಪುರ

೩೧೯. ಸೊಣ್ಣೇನಹಳ್ಳಿ ೦೨೨೦೫೫೦೦

೩೨೦. ಸೊಣ್ಣೇನಹಳ್ಳಿ ೦೨೨೮೬೦೦

೩೨೧. ಸೋಮಕ್ಕನಮುತ್ತ

೩೨೨. ಸೋಮದೇವನಹಳ್ಳಿ

೩೨೩. ಸೋಲೂರು

೩೨೪. ಹಕ್ಕೆನಾಳು

೩೨೫. ಹರ್ತಿ

೩೨೬. ಹನುಮಾಪುರ

೩೨೭. ಹಸಲಬೆಲೆ

೩೨೮. ಹಲಿಗೇನಹಳ್ಳಿ

೩೨೯. ಹಾಲಸಿಂಗನಹಳ್ಳಿ

೩೩೦. ಭೂಮಿಹಾಲಶೆಟ್ಟಿಹಳ್ಳಿ

೩೩೧. ಹಳ್ಳೂರು

೩೩೨. ಹಂಚಿಕುಪ್ಪೆ

೩೩೩. ಹಂಚೀಬಸವನಪಾಳ್ಯ

೩೩೪. ಹಾರೋಹಳ್ಳಿ ೦೨೨೨೩೨೦೦

೩೩೫. ಹ್ಯಾಗನಹಳ್ಳಿ

೩೩೬. ಹುಲಿಕಟ್ಟೆ

೩೩೭. ಹುಲಿಕಲ್ಲು

೩೩೮. ಹುಲುವೇನಹಳ್ಳಿ (ತಾ.ಹೋ.)

೩೩೯. ಹುಲುವೇನಹಳ್ಳಿ (ಮಾ.ಹೋ)

೩೪೦. ಹುಲ್ಲೇನಹಳ್ಳಿ ೦೨೨೦೫೯೦೦

೩೪೧. ಹೂಜಿಗಲ್ಲು

೩೪೨. ಹೆಬ್ಬಲಾಳು

೩೪೩. ಹೇಮಾಪುರ

೩೪೪. ಹೇಳಿಗೆಹಳ್ಳಿ

೩೪೫. ಹೊನ್ನಾಪುರ

೩೪೬. ಹೊನ್ನಿಗನಹಳ್ಳಿ

೩೪೭. ಹೊಸಹಳ್ಳಿ (ಕ.ಹೋ.) ೦೨೨೦೯೯೦೦

೩೪೮. ಹೊಸಹಳ್ಳಿ ಕ.ಹೋ. ೦೨೨೧೮೦೦

೩೪೯. ಹೊಸಹಳ್ಳಿ (ಸೊ.ಹೋ) ೦೨೨೨೩೬೦೦

೩೫೦. ಹೊಂಗೇಕಾವಲು

೩. ವಕ್ತೃಗಳ ಅಕಾರಾದಿ ಪಟ್ಟಿ

ಕ್ರ.ಸಂ.	ಹೆಸರು	ವಯಸ್ಸು	ಊರು	ವೃತ್ತಿ	ಜಾತಿ	ವಿದ್ಯಾಭ್ಯಾಸ	ಸಂದರ್ಶನ ದಿನಾಂಕ
೦೧.	ಈರೇಗೌಡ	೧೦೦	ಸಿಂಗರಾಜಪುರ	ವ್ಯವಸಾಯ	ಒಕ್ಕಲಿಗ	ಅವಿದ್ಯಾವಂತ	೩.೧೨.೨೦೦೯
೦೨.	ಕರಿಯಪ್ಪ	೬೦	ಪೋಲೋಹಳ್ಳಿ	ವ್ಯವಸಾಯ	ಗೊಲ್ಲ	ಅವಿದ್ಯಾವಂತ	೧೭.೦೨.೨೦೧೦
೦೩.	ಕೃಷ್ಣೇಗೌಡ	೭೦	ಕುರುಬರಹಳ್ಳಿ	ವ್ಯವಸಾಯ	ಒಕ್ಕಲಿಗ	ಅವಿದ್ಯಾವಂತ	೧೫.೦೩.೨೦೧೦
೦೪.	ಕೆಂಪೇಗೌಡ ಎಸ್.	೫೪	ದಾಳಿಂಬ	ವ್ಯವಸಾಯ	ಒಕ್ಕಲಿಗ	ಎಸ್.ಎಸ್.ಎಲ್.ಸಿ.	೧೦.೦೬.೨೦೧೦
೦೫.	ಜವರೇಗೌಡ	೮೬	ಸಿಂಗರಾಜಪುರ	ವ್ಯವಸಾಯ	ಒಕ್ಕಲಿಗ	೪ನೇ ತರಗತಿ	೩.೧೨.೨೦೦೯
೦೬.	ಜಂಪಯ್ಯ	೪೬	ಪೋಲೋಹಳ್ಳಿ	ವ್ಯವಸಾಯ	ಗೊಲ್ಲ	ಅವಿದ್ಯಾವಂತ	೧೭.೦೨.೨೦೧೦
೦೭.	ನಂಜುಂಡಪ್ಪ	೬೩	ತೆಂಗಿನಮರದದೊಡ್ಡಿ	ಅರ್ಚಕ	ಲಿಂಗಾಯತ	ಅವಿದ್ಯಾವಂತ	೧೯.೦೭.೨೦೧೦
೦೮.	ಮುನಿವೆಂಕಟೇಗೌಡ	೮೦	ಕುರುಬರಹಳ್ಳಿ	ವ್ಯವಸಾಯ	ಒಕ್ಕಲಿಗ	ಎಸ್.ಎಸ್.ಎಲ್.ಸಿ.	೧೫.೦೩.೨೦೧೦
೦೯.	ಮುನಿರತ್ನಮ್ಮ	೩೦	ಕೋಡಿಹಳ್ಳಿ	ಗೃಹಿಣಿ	ಹೊಲೆಯ	ಪಿ.ಯು.ಸಿ.	೧೩.೦೬.೨೦೧೦
೧೦.	ಯಶೋದಮ್ಮ	೫೦	ಕಚುವನಹಳ್ಳಿ	ಗೃಹಿಣಿ	ಒಕ್ಕಲಿಗ	ಎಸ್.ಎಸ್.ಎಲ್.ಸಿ	೧೨.೦೮.೨೦೧೦
೧೧.	ರಾಮಲಿಂಗಯ್ಯ ಕೆ.ಸಿ.	೭೭	ಕೂನಗಲ್ಲು	ನಿವೃತ್ತ ಪಟೇಲ	ಒಕ್ಕಲಿಗ	ಎಸ್.ಎಸ್.ಎಲ್.ಸಿ.	೧೭.೭.೨೦೧೦
೧೨.	ಶಿವರುದ್ರಪ್ಪ	೩೭	ಕೂತಗೊಂಡನಹಳ್ಳಿ	ಅರ್ಚಕರು	ಇರುಳಿಗ	೩ನೇ ತರಗತಿ	೧೯.೯.೨೦೧೦
೧೩.	ಸಿದ್ದಪ್ಪ ಎಂ.	೬೩	ನೆಲಮಲೆ	ವ್ಯವಸಾಯ	ಒಕ್ಕಲಿಗ	ಎಸ್.ಎಸ್.ಎಲ್.ಸಿ.	೧೬.೬.೨೦೧೦

೧೪.	ಸೂರ್ಯನಾಯಕ	೧೦೦	ಬೂದನಕಲ್ಲು	ವ್ಯವಸಾಯ	ಲಂಬಾಣಿ	ಅವಿದ್ಯಾವಂತ	೧೨.೧೧.೨೦೧೦
೧೫.	ಹನುಮಂತಪ್ಪ	೫೫	ಕುರುಪೇಟೆ	ವ್ಯಾಪಾರ	ಗಂಗಮತಸ್ಥ	ಅವಿದ್ಯಾವಂತ	೧೯.೩.೨೦೧೦
೧೬.	ಶಿವಪ್ಪ	೪೮	ತೇರುಬೀದಿ	ಅರ್ಚಕ	ಇರುಳಿಗ	ಅವಿದ್ಯಾವಂತ	೧೪.೫.೨೦೧೦

೪. ಆಧಾರ ಗ್ರಂಥಗಳು

೧. ಅಂಕನಹಳ್ಳಿ ಪಾರ್ಥ, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ಬನ್ನಿಕುಪ್ಪೆ, ೨೦೦೮.

೨. ಅಬ್ಬುಲ್ ಬಷೀರ್ ಜಿ., ಸೆರಗು ಕಣ್ಣೊತ್ತಿ ಅಳುತ್ತಾಳೆ, ಸನಾ ಪ್ರಕಾಶನ. ಬೆಂಗಳೂರು, ೧೯೯೮.

೩. ಅರವಿಂದ ಮಾಲಗತ್ತಿ ಪ್ರ.ಸಂ. ಕನ್ನಡ ವಿಶ್ವಕೋಶ, ಸಂ.೧, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೨೦೦೫.

೪. ಆರ್ಕೆ ಮಣಿಪಾಲ, ಹೆಸರಿನಲ್ಲೇನಿದೆ? ನ್ಯೂಸ್ಟಾರ್ ಪಬ್ಲಿಕೇಷನ್ಸ್, ಬೆಂಗಳೂರು, ೧೯೮೯

೫. ಆಸಿಫ್ ಷರೀಫ್, ರೇಷ್ಮೆನಗರ, ಅಂಕನಹಳ್ಳಿ ಪ್ರಕಾಶನ, ೨೦೦೬.

೬. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ ೧ ರಿಂದ ೬, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮

೭. ಕಲಬುರ್ಗಿ ಎಂ.ಎಂ, (ಸಂ) ಕನ್ನಡ ನಾಮ ವಿಜ್ಞಾನ, ಸೌಜನ್ಯ, ಕಲ್ಯಾಣನಗರ, ಧಾರವಾಡ, ೧೯೯೫.

೮. ಕಲಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯.

೯. ಕಲಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೧೦. ಕರಿಬಸಪ್ಪ ಎ, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪಿಎಚ್.ಡಿ. (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೧. ಕಾಳೇಗೌಡ ನಾಗವಾರ (ಸಂ)., ಬೀದಿ ಮಕ್ಕಳು ಬೆಳೆದೊ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೭.

೧೨. ಕ್ಯಾತನಹಳ್ಳಿ ರಾಮಣ್ಣ, (ಸಂ) ಕಬ್ಬಾಳು ಕುಳಿಯಲ್ಲಿ ಹುಲಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೦.

೧೩. ಕುಮಾರಸ್ವಾಮಿ ಕೆ.ಎಸ್, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೧೪. ಕೂಡ್ಲೂರು ವೆಂಕಟಪ್ಪ, ಗೊಂಬೆ ಚಿತ್ತಾರದ ಮಡೆಕಡೆದೊ..., ಧಾತ್ರಿಪುಸ್ತಕ-೨೭, ಬೆಂಗಳೂರು, ೨೦೦೯.

೧೫. ಕೂಡ್ಲೂರು ವೆಂಕಟಪ್ಪ, ಸ್ಥಳನಾಮವೀರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨.

೧೬. ಕೃಷ್ಣರಾವ್ ಎಂ.ಬಿ. ಬೆಂಗಳೂರು ಕೆಂಪೇಗೌಡ, ಕಾರ್ಪೋರೇಷನ್ ಪ್ರಕಾಶನ, ಬೆಂಗಳೂರು, ೧೯೬೪.

೧೭. ಕೃಷ್ಣಭಟ್ಟ ಸೇಡಿಯಾಪು, ಕೆಲವು ದೇಶನಾಮಗಳು, ಸಾಹಿತ್ಯ ಸಂಘ, ಮಣಿಪಾಲ, ೧೯೭೫.

೧೮. ಖಂಡೋಬಾ ಪಿ.ಕೆ, ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ, ೧೯೯೧.

೧೯. ಗಂಗಾಧರಯ್ಯ ಎಸ್.ಎಂ, ಶಂಬಾ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಪಿಎಚ್.ಡಿ. (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೦. ಗುರುಮೂರ್ತಿ ಪೆಂಡಕೂರು, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೨೧. ಗೋಪಾಲ ಹೆಚ್.ಎಸ್. (ಪ್ರ.ಸಂ), ನಾಗಾಭಿನಂದನ, ಎಂ.ಜಿ.ನಾಗರಾಜ್ ಅಭಿನಂದನಾ ಗ್ರಂಥ, ಬೆಂಗಳೂರು, ೧೯೯೪.

೨೨. ಗೋಪಾಲಕೃಷ್ಣ ವಿ., ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ. (ಅಪ್ರಕಟಿತ) ಬೆಂಗಳೂರು ವಿಶ್ವವಿದ್ಯಾಲಯ, ೧೯೮೯.

೨೩. ಗೋಪಾಲರಾವ್ ಎಚ್.ಎಸ್., ಅಬ್ದುಲ್ ಬಷೀರ್ (ಸಂ), ಕನಕಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೨೪. ಗೋಲಾಪಕೃಷ್ಣ ವಿ, ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ದಾರಿನಾಯಕನಪಾಳ್ಯ, ೧೯೮೭.

೨೫. ಚಂದ್ರಶೇಖರ್ ಟಿ.ಎಸ್., ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೨೬. ಚಿದಾನಂದಮೂರ್ತಿ ಎಂ, ಚಿದಾನಂದ ಸಮಗ್ರ ಸಂಪುಟ ೧ ರಿಂದ ೬ ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೨.

೨೭. ಚಿದಾನಂದಮೂರ್ತಿ ಎಂ., ವಾಗಾರ್ಥ, ಬಾಪ್ಕೊ ಪ್ರಕಾಶನ, ಬೆಂಗಳೂರು, ೧೯೮೧.

೨೮. ಚಿದಾನಂದಮೂರ್ತಿ ಎಂ., ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩.

೨೯. ಚಿದಾನಂದಮೂರ್ತಿ ಎಂ, ಸಂಶೋಧನೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೨೦೦೨.

೩೦. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

೩೧. ಚೆನ್ನಬಸಯ್ಯಹಿರೇಮಠ, ಕುರುಗೋಡಿನ ಸಿಂಧರು ಒಂದು ಅಧ್ಯಯನ, ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ೧೯೯೫.

೩೨. ಜಗದೀಶ ಮಠದ, ಕೈಫಿಯತ್ತುಗಳಲ್ಲಿ ನಿರೂಪಿತ ಸ್ಥಳನಾಮಗಳು, ಎಂ.ಫಿಲ್ (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

೩೩. ಜವರೇಗೌಡ ದೇ. ಬೆರಕೆ ಸೊಪ್ಪು, ಸುರುಚಿ ಪ್ರಕಾಶನ, ಮೈಸೂರು, ೧೯೭೧.

೩೪. ಜವರೇಗೌಡ ದೇ, ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೦.

೩೫. ಜವರೇಗೌಡ ದೇ, ಜಾನಪದ ಅಧ್ಯಯನ, ಚೇತನ ಬುಕ್‌ಹೌಸ್, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು, ೧೯೯೧.

೩೬. ಜವರೇಗೌಡ. ದೇ, ಬೆಂಗಳೂರು ಕೆಂಪೇಗೌಡ, ಬೆಂಗಳೂರು, ೧೯೫೦-೫೧

೩೭. ಜಾಜಿ ದೇವೇಂದ್ರಪ್ಪ, ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪.

೩೮. ಜಾರ್ಜ್ ಕೆ.ಎಂ, ಬೀದರ್ ಜಿಲ್ಲೆಯ ಸ್ಥಳನಾಮಗಳು, ಪಿಎಚ್.ಡಿ. (ಅಪ್ರಕಟಿತ) ಗುಲಬರ್ಗಾ ವಿಶ್ವವಿದ್ಯಾನಿಲಯ.

೩೯. ಜೀರಿಗೆ ಕಟ್ಟೆ ಬಸವಪ್ಪ, ಕರ್ನಾಟಕ ಯಾತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫.

೪೦. ಡಿ.ವಿ.ಜಿ., ಕನ್ನಡ ಐತಿಹ್ಯಗಳು, ತೇಜಸ್ವಿನಿ ಪ್ರಕಾಶನ, ಮಡಿಕೇರಿ, ೧೯೭೮.

೪೧. ತಿಪ್ಪೇಸ್ವಾಮಿ ಜಿ.ಆರ್. ರಂಗಾರೆಡ್ಡಿ ಕೋಡಿರಾಂಪುರ (ಸಂ), ಜಾನಪದ ಅನ್ವಯಿಕತೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು, ೨೦೦೩.

೪೨. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೯೨.

೪೩. ತಿರುಮಲೆ ತಾತಾಚಾರ್ಯಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೪. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ, ಭಾನುಪ್ರಕಾಶನ, ೨೦೦೪.

೪೫. ದೇವೇಂದ್ರಕುಮಾರ ಹಕಾರಿ, ಕೆ.ಎಲ್.ಸಂಧ್ಯಾರೆಡ್ಡಿ(ಸಂ)., ಗ್ರಾಮೀಣ ವೃತ್ತಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೪೬. ದೇಶಪಾಂಡೆ ಎಸ್.ಎಲ್, ಕರ್ನಾಟಕ ಸ್ಥಳನಾಮಗಳು ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

೪೭. ನಂಜಯ್ಯ ಎಂ., ಚಾಮರಾಜ ತಾಲ್ಲೂಕಿನ ಸ್ಥಳನಾಮಗಳು, ಪಿಎಚ್.ಡಿ. (ಅಪ್ರಕಟಿತ) ಮೈಸೂರು, ವಿಶ್ವವಿದ್ಯಾಲಯ, ೨೦೦೦.

೪೮. ನಟರಾಜ್ ಡಿ.ಕೆ, ಬೆಂಗಳೂರು, ಗ್ರಾಮಾಂತರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ, ಪಿಎಚ್.ಡಿ. ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪೯. ನರಸಿಂಹಮೂರ್ತಿ ಎ.ವಿ., ಇತಿಹಾಸ ಮತ್ತು ಸಂಸ್ಕೃತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮

೫೦. ನಾಗರಾಜಯ್ಯ ಹಂಪ, ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೫೧. ನಾಯಕ ಹಾ.ಮಾ., (ಪ್ರ.ಸಂ.) ಕನ್ನಡ ವಿಷಯ ವಿಶ್ವಕೋಶ, ಸಂ.೨, ಮೈಸೂರು ವಿಶ್ವವಿದ್ಯಾನಿಲಯ, ೨೦೦೭

೫೨. ನಾರಾಯಣ ಕೆ.ವಿ. (ಸಂ), ಸ್ಥಳನಾಮಗಳು: ಪರಿವರ್ತನೆ ಮತ್ತು ಪ್ರಭಾವ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೩. ನಾರಾಯಣ ಕೆ.ವಿ. (ಸಂ)., ಭಾಷೆ ವಿಶ್ವಕೋಶ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೫೪. ನೇಗಿನಹಾಳ ಎಂ.ಬಿ., ನೇಗಿನಹಾಳರ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೫. ಪುಟ್ಟಸ್ವಾಮಿ ಬಿ.ಎಸ್., ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರದದೊಡ್ಡಿ, ಬೆಂಗಳೂರು, ೨೦೦೭.

೫೬. ಪುರುಷೋತ್ತಮ ಬಿಳಮಲೆ (ಸಂ), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭.

೫೭. ಪ್ರಶಾಂತ ಹೆಚ್.ಡಿ. (ಸಂ), ಕರ್ನಾಟಕ ರಾಜ್ಯ ಕೋಶ, ಜನಸಮುದಾಯ, ಸಂ.೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫೮. ಬಸವರಾಜ ಸೋ.ಗೊರವರ, ಕನ್ನಡ: ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ, ಲಡಾಯಿ ಪ್ರಕಾಶನ, ಗದಗ, ೨೦೦೮.

೫೯. ಬಸವರಾಜ ನೆಲ್ಲಿಸರ (ಸಂ), ಜಾನಪದ ಮತ್ತು ಪೂರಕ ಕ್ಷೇತ್ರಗಳು, ಕನ್ನಡ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ೧೯೯೧.

೬೦. ಬೈರೇಗೌಡ ಎಂ. ತಿಮ್ಮಯ್ಯ.ತಾ.ಸಿ (ಸಂ), ಅರ್ಕಾವತಿ, ಅಖಿಲ ಭಾರತ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೬೧. ಬೈರೇಗೌಡ ಎಂ., ಹೋಗುವಾ.... ನಮ್ಮ ದೇಸಕೆ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೪.

೬೨. ಬೊಮ್ಮೇಗೌಡ, ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳು, ಎಂ.ಫಿಲ್ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ೧೯೯೮.

೬೩. ಮಂಜುನಾಥ ಎಂ.ಜಿ. (ಸಂ), ಬೆಂಗಳೂರಿನ ಬಖೈರುಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬.

೬೪. ಮಲ್ಲೇಪುರಂ ಜಿ.ವೆಂಕಟೇಶ (ಸಂ), ಶಂಬಾ ಕೃತಿ ಸಮೀಕ್ಷೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨.

೬೫. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜನತೆಯ ಸಂಸ್ಕೃತಿ, ಜೀವನ ಕಾರ್ಯಾಲಯ, ಬೆಂಗಳೂರು, ೧೯೫೭.

೬೬. ಮುನಿರಾಜಪ್ಪ, ಹರಿಣಾಟವಿ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ೨೦೧೦.

೬೭. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ೨೦೦೫.

೬೮. ರಘುಪತಿಭಟ್ಟ ಕೆಮ್ತೂರು, ತುಳುನಾಡಿನ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

೬೯. ರಮೇಶ ಬೇ.ಗೊ, ಜನಪ್ರಿಯ ಮುನ್ನೂರು ಸ್ಥಳನಾಮಗಳು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, ೧೯೯೫.

೭೦. ರಾಜಶೇಖರ ಬಡಿಗೇರ, ವೃತ್ತಿನಾಮ ಮತ್ತು ಗ್ರಾಮನಾಮ, ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ, ೨೦೦೩.

೭೧. ರಾಜೇಗೌಡ ಹ.ಕ., ಬೆಂಗಳೂರು ಕೆಂಪೇಗೌಡ ಮತ್ತು ಅವನ ವಂಶಸ್ಥರು, ಕೆಂಪೇಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೫.

೭೨. ರಾಮಚಂದ್ರೇಗೌಡ ಹಿ.ಶಿ., ನಮ್ಮನೆ ನೆನಕೊ, ರೂಪ ಪ್ರಕಾಶನ, ಮೈಸೂರು, ೨೦೦೫.

೭೩. ಲಕ್ಕಪ್ಪಗೌಡ ಎಚ್.ಜೆ. (ಪ್ರ.ಸಂ), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭.

೭೪. ಲಕ್ಷ್ಮಣ ತೆಲಗಾವಿ, ಎಂ.ವಿ.ಶ್ರೀನಿವಾಸ (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಲೇಖನಗಳು, ಹುಲ್ಲೂರು ಶ್ರೀನಿವಾಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೭೬.

೭೫. ಲಕ್ಷ್ಮಣ ತೆಲಗಾವಿ (ಸಂ)., ಹರತಿ ಸಿರಿ, ಹೆಚ್.ವಿ. ವೀರನಾಯಕ ನೆನಪಿನ ಸಂಪುಟ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೭೬. ಲಲಿತ ಎ.ಸಿ., ಕಾಡು ಕುರುಬರು ಮತ್ತು ಜೇನು ಕುರುಬರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೭೭. ಲಿಂಗಯ್ಯ.ಡಿ. ಸಂಧ್ಯಾರೆಡ್ಡಿ (ಸಂ), ಕೆ.ಆರ್, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿ,ತ್ತು, ಬೆಂಗಳೂರು, ೨೦೦೬.

೭೮. ಲಿಂಗಯ್ಯ ಡಿ., ಚಕ್ಕರೆ ಶಿವಶಂಕರ (ಸಂ), ಸ್ಥಳನಾಮಗಳ ಅಧ್ಯಯನ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮.

೭೯. ಲಿಂಗಯ್ಯ ಡಿ. (ಸಂ), ಯಲಹಂಕ ನಾಡಪ್ರಭುಗಳ ಜಾನಪದ ಸಂಪುಟ, ಪ್ರಸಾರಾಂಗ, ಬೆಂಗಳೂರು, ವಿಶ್ವವಿದ್ಯಾಲಯ, ೨೦೦೬.

೮೦. ವಿಲ್ಯಂಮಾಡ್ತ, ಕನ್ನಡ ಭಾಷೆಯ ರೂಪುರೇಷೆಗಳು, ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೮೧. ವಿಶ್ವನಾಥ, ಸಕಲೇಶಪುರ ಪರಿಸರದ ಸ್ಥಳನಾಮಗಳು, ದೇವಿ ಪ್ರಕಾಶನ, ಮೈಸೂರು, ೧೯೯೬.

೮೨. ವಿಶ್ವನಾಥ. ಸ್ಥಳನಾಮಗಳು, ಸಂವಹನ ಪ್ರಕಾಶನ, ಮೈಸೂರು, ೧೯೯೬.

೮೩. ವಿಶ್ವನಾಥ, ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ, ದೇವಿ ಪ್ರಕಾಶನ, ಮೈಸೂರು, ೨೦೦೦.

೮೪. ವಿಶ್ವನಾಥಯ್ಯ ಸಿ.ಎಂ., ಕಡೂರು ತಾಲೂಕಿನ ಸ್ಥಳನಾಮಗಳು, ಜ್ಞಾನಭಾರತಿ ಪ್ರಕಾಶನ, ಕಡೂರು, ೨೦೦೬.

೮೫. ವೀರಣ್ಣದಂಡೆ, ಶ್ರೀಪಾದಶೆಟ್ಟಿ (ಸಂ), ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೮೬. ವೀರಭದ್ರಶರ್ಮ ಕೆ.ಎಂ, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು, ಪಿಎಚ್.ಡಿ. (ಅಪ್ರಕಟಿತ) ಗುಲಬರ್ಗಾ ವಿಶ್ವವಿದ್ಯಾಲಯ, ೧೯೯೬.

೮೭. ವೈಜನಾಥ ಭಂಡೆ, ಬೀದರ್ ಜಿಲ್ಲೆಯ ಸ್ಥಳನಾಮಗಳು, ಪಿಎಚ್.ಡಿ. (ಅಪ್ರಕಟಿತ) ಗುಲಬರ್ಗಾ ವಿಶ್ವವಿದ್ಯಾಲಯ, ೧೯೯೦.

೮೮. ವೆಂಕಟಾಚಲಶಾಸ್ತ್ರಿ ಟಿ.ವಿ., ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ, ಪುಸ್ತಕಶಕ್ತಿ ಪ್ರಕಾಶನ, ಬೆಂಗಳೂರು, ೨೦೦೭.

೮೯. ಶಂಬಾ ಜೋಷಿ, ಎಡೆಗಳು ಹೇಳುವ ಕಂನಾಡ ಕಥೆ, ಶಂಬಾ ವಿಚಾರವೇದಿಕೆ, ಬೆಂಗಳೂರು, ೨೦೦೫.

೯೦. ಶರ್ಮ ತಿ.ತಾ.(ಸಂ), ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೦.

೯೧. ಶಿವಶಂಕರ್ ಚಕ್ಕರೆ, ಗೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೯೨. ಶಿವರಾಮ ಕಾರಂತ, ಸಿರಿಗನ್ನಡ ಅರ್ಥಕೋಶ, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೯.

೯೩. ಶ್ರೀನಿವಾಸರಿತ್ತಿ (ಸಂ), ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೯೪. ಶ್ರೀಧರ ಅಡಿಗ, ಕರ್ನಾಟಕ ಪ್ರೇಕ್ಷಣೀಯ ಸ್ಥಳಗಳು, ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬.

೯೫. ಶೇಷಶಾಸ್ತ್ರಿ ಆರ್, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

೯೬. ಸಂಗಮೇಶ ಸವದತ್ತಿಮಠ, ದ್ರಾವಿಡ ಭಾಷಾ ವಿಜ್ಞಾನ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, ೧೯೯೦.

೯೭. ಸಂಗಮೇಶ ಸವದತ್ತಿಮಠ, ಕನ್ನಡ ಮತ್ತು ಭಾಷಾ ವ್ಯಾಸಂಗ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, ೧೯೯೩.

೯೮. ಸಿ.ಪಿ.ಕೆ., ಜಾನಪದತತ್ವ ಮತ್ತು ಸತ್ವ, ತುಳುಕಿನ ವೆಂಕಣ್ಣಯ್ಯ ಸ್ಮಾರಕ, ಗ್ರಂಥಮಾಲೆ, ೨೦೦೪.

೯೯. ಸುಬ್ಬಣ್ಣ ರೈ. ಎ., ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಮುಂಬಯಿ ವಿಶ್ವವಿದ್ಯಾಲಯ, ೧೯೯೪.

೧೦೦. ಸೋಮಶೇಖರ ಇಮ್ರಾಪುರ, ಜನಪದ ಒಗಟುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯.

೫. ನಿಘಂಟುಗಳು

೧. ಇಗೋ ಕನ್ನಡ ಭಾಗ-೧ ಮತ್ತು ೨, ವೆಂಕಟಸುಬ್ಬಯ್ಯ.ಜಿ, ಕನ್ನಡ-ಕನ್ನಡ ಕೋಶ:

೨. ಕನ್ನಡ ಕನ್ನಡ ಇಂಗ್ಲೀಷ್ ನಿಘಂಟು, ಐಬಿಹೆಚ್ ಪ್ರಕಾಶನ.

೩. ಕನ್ನಡ ನಿಘಂಟುಗಳು-ಎಂಟು ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪. ಕನ್ನಡ ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫. ಸಂಕ್ಷಿಪ್ತ ಕನ್ನಡ ನಿಘಂಟು

೬. ಸಟೀಕಿನ ಶಬ್ದಮಂಜರಿ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೭. ಹಳಗನ್ನಡ ಶಬ್ದಾರ್ಥ ಕೋಶ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೮. Dravition etymological Dictionary.

೬. ಶಾಸನ ಸಂಪುಟಗಳು

೧. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಮಂಜುನಾಥ ಎಂ.ಜಿ. (ಸಂ), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೬.

೨. Epigraphia carnatica ಎಲ್ಲ ಸಂಪುಟಗಳು

೭. ಪತ್ರಿಕೆಗಳು

೧. ಇತಿಹಾಸ ದರ್ಶನ, ವಾರ್ಷಿಕ

೨. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು

೩. ಕರ್ನಾಟಕ ಭಾರತಿ, ಕನ್ನಡ ತ್ರೈಮಾಸಿಕ, ಧಾರವಾಡ

೪. ಕಲಾದರ್ಶನ, ಮಾಸಿಕ, ಬೆಂಗಳೂರು.

೫. ಕಲಾಗಂಗ, ಗುಲಬರ್ಗಾ

೬. ಜಾನಪದ ಜಗತ್ತು

೭. ಜೀವನ

೮. ನಮ್ಮ ಕನ್ನಡ, ಹಂಪೆ

೯. ಪ್ರಭಾತ

೧೦. ಬಸವಪಥ

೧೧. ಮಾನವಿಕ ಕರ್ನಾಟಕ, ಮಾಸಿಕ, ಧಾರವಾಡ

೧೨. ಯುಗಪುರುಷ,ಮಾಸಿಕ, ಮಂಗಳೂರು.

೧೩. ರುಜುವಾತು, ಮಾಸಿಕ, ಬೆಂಗಳೂರು.

೧೪. ಶೂದ್ರ, ಮಾಸಿಕ, ಬೆಂಗಳೂರು

೧೫. ಸತ್ಯಶುದ್ಧನಾಯಕ

೧೬. ಸ್ವದೇಶಾಭಿಮಾನಿ

೧೭. ಸಾಕ್ಷಿ, ಮಾಸಿಕ, ಬೆಂಗಳೂರು

೧೮. ಸಾಧನೆ, ಕನ್ನಡ ತ್ರೈಮಾಸಿಕ, ಬೆಂಗಳೂರು.

೧೯. Studies in Indian Place names, Mysore

ಇಂಗ್ಲೀಷ್

೧. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು, ೧೯೮೯, ಪ್ರಧಾನ ಸಂಪಾದಕರು ಸೂರ್ಯನಾಥ ಕಾಮತ್

೨. ಕರ್ನಾಟಕ ಗೆಜೆಟಿಯರ್, ಬೆಂಗಳೂರು, ೧೯೮೪.

೩. ತುಮಕೂರು ಜಿಲ್ಲಾ ಗೆಜೆಟಿಯರ್, ಬೆಂಗಳೂರು, ೧೯೬೮, ಸಂಪಾದಕರು ಅಭಿಶಂಕರ್ ಕೆ.

೮. ಛಾಯಾಚಿತ್ರಗಳು

೫-ಛಾಯಾಚಿತ್ರಗಳು



ಕಲ್ಲೇಶ್ವರ ಬೆಟ್ಟ, ಕಲ್ಯ , ಮಾಗಡಿ ತಾಲ್ಲೂಕು.




ಕಲ್ಯ ನಗರದ ಅವನತಿಗೆ ಕಾರಣಳು ಎನ್ನಲಾದ ಕುಂಬಳಕಾಯಜ್ಜಿಯ ಶಿಲ್ಪ, ಕಲ್ಯ



ಋಷಿಗಳ ಶಾಪಕ್ಕೆ ಗುರಿಯಾಗಿ ಕಲ್ಲಾದ ಅಗಸ ಮತ್ತು ಅಗಸಗಿತ್ತಿ , ಕೂಟಗಲ್ಲು ರಾಮನಗರ ತಾಲ್ಲೂಕು.



ಬಾಣಂತಿ ಭಾಗೀರತಿ ಕುಳಿತುಕೊಂಡಳೆನ್ನಲಾದ ಬಾಣಂತಿ ಮಾರಮ್ಮನ ದೇವಸ್ಥಾನ ಕೂತಗೊಂಡನಹಳ್ಳಿ ಕನಕಪುರ ತಾಲ್ಲೂಕು.



ಕೂನಮ್ಮನು ಆತ್ಮಾರ್ಪಣೆ ಮಾಡಿಕೊಂಡಳು ಎನ್ನಲಾದ ಬಂಡೆ ಕೂನಗಲ್ಲು ರಾಮನಗರ ತಾಲ್ಲೂಕು.



ಗಜಗಾರ ವೃತ್ತಿ ಮಾಡುತ್ತಿದ್ದ ವಿದ್ಯಾರಾಜ ಭಟನ ಶಿಲಾ ಶಾಸನ ಗೆಜ್ಜೆಗಾರಕುಪ್ಪೆ ರಾಮನಗರ ತಾಲ್ಲೂಕು.



ಆಂಜನೇಯನಿಗೆ ಚೂಡರತ್ನ ಸಿಕ್ಕ ಸ್ಥಳ, ಚೂಡಹಳ್ಳಿ, ಕನಕಪುರ ತಾಲ್ಲೂಕು.



ಬಟ್ಟಲಿನಾಕಾರದ ಗುಂಡು ಇರುವ ಬಟ್ಟಲುಗುಂಡೇಶ್ವರ, ಕನಕಪುರ ತಾಲ್ಲೂಕು.



ಶೃಂಗರಾಜ ಮಹರ್ಷಿ ಅಥವಾ ಗವಿರಂಗನಾಥನ ಮೂರ್ತಿ, ಸಿಂಗರಾಜಿಪುರ, ಚನ್ನಪಟ್ಟಣ ತಾಲ್ಲೂಕು.



ಶೃಂಗರಾಜಿರಿದ್ದರೆನ್ನಲಾದ ಗವಿ ಇರುವ ಬೆಟ್ಟ, ಸಿಂಗರಾಜಿಪುರ, ಚನ್ನಪಟ್ಟಣ ತಾಲ್ಲೂಕು.



ಸಾವನ ದುರ್ಗದ ಮನೋಹರ ದೃಶ್ಯ, ಸಾವನದುರ್ಗ, ಮಾಗಡಿ ತಾಲ್ಲೂಕು.



ತಣಿಗೆ ಬಿದ್ದಿತು ಎನ್ನಲಾದ ತಣಿಗೆ ಸೊಣೆ, ರಾಮನಗರ ತಾಲ್ಲೂಕು.



ನಿಂಗಮ್ಮನು ಒಳಗೆ ಹೋದಳೆನ್ನಲಾದ ಗವಿ ಬಂಡೆ, ಬಂಡೆನಿಂಗಮ್ಮನ ಗವಿ, ಕನಕಪುರ ತಾಲ್ಲೂಕು.



ಲಕ್ಷ್ಮಣನ ಬಾಣದಿಂದ ನಿರ್ಮಿತವಾದಲೆನ್ನಲಾದ ಬಿಲ್ಲಿನ ಸೊಣೆ, ಚನ್ನಪಟ್ಟಣ ತಾಲ್ಲೂಕು.